
ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೫

ಸೃಜನ ಸಾಹಿತ್ಯ



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೫ : ಸೃಜನ ಸಾಹಿತ್ಯ

❖

- [illegible]
- [illegible]
- [illegible]

❖

ಪ್ರಧಾನ ಸಂಪಾದಕರು
ಡಾ. ವೀರಣ್ಣ ರಾಜೂರ
ಧಾರವಾಡ

ಸಂಪಾದಕರು
ಡಾ. ಗುರುಪಾದ ಮರಿಗುದ್ದಿ
ಸಂಕೇಶ್ವರ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಯಪುರ
೨೦೧೮



ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೫ : ಸೃಜನ ಸಾಹಿತ್ಯ

❖

- ನೀರು ನೀರಡಿಸಿತ್ತು (ಕವನ) • ನೀರಾಗ ನಿಂತೀನಿ ನೀರಡಿಸಿ (ಕವನ)
- ಕೆಟ್ಟಿತ್ತು ಕಲ್ಯಾಣ (ನಾಟಕ) • ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
- ಖರೇ ಖರೇ ಕಿತ್ತೂರ ಬಂಡಾಯ (ನಾಟಕ)

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಗುರುಪಾದ ಮರಿಗುದ್ದಿ

ಸಂಕೇಶ್ವರ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 5 : SRUJANA SAHITY

Edited by : **Dr. Gurupad Mariguddi,** Sankeshawer

Published by : **Dr. P.G. Halakatti Research Centre**
B.L.D.E. Association, Vijayapura, Karnatak

First Edition : 2019
Pages : xlviii + 324=372
Copies : 1000
Price : Rs: 180/-

❖❖

Cover page design : **K.K. Makali,** Hampi.
Tyapset : Dr. Hanumanth Melinamani, Dr. Sarswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bengaluru-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೫ – ಸೃಜನ ಸಾಹಿತ್ಯ

ಸಂಪಾದಕರು : **ಡಾ. ಗುರುಪಾದ ಮರಿಗುದ್ದಿ,** ಸಂಕೇಶ್ವರ
ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ : ೨೦೧೯
ಪುಟಗಳು : xlviii + ೩೨೪=೩೭೨
ಪ್ರತಿಗಳು : ೧೦೦೦
ಬೆಲೆ : ರೂ. ೧೮೦/-

❖❖

ಮುಖಪುಟ ವಿನ್ಯಾಸ: **ಕೆ. ಕೆ. ಮಕಾಳಿ,** ಹಂಪಿ
ಅಕ್ಷರ ಸಂಯೋಜನೆ: **ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ,** ಧಾರವಾಡ
ಮುದ್ರಣ : **ಪ್ರಿಂಟ್ ಪಾಯಿಂಟ್,** ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ
ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪.
ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ.ಎಂ.ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ (ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ.ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ.ಎಂ.ಎಂ.ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ,

೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದು ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪಾ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಡಾ. ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ-೧ –ಸಂ. ಡಾ. ಪಂಡಿತ ರಾಠೋಡ
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ- ೨ –ಸಂ. ಡಾ. ಪಂಡಿತ ರಾಠೋಡ
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧

ಸಂಪುಟ : ೯ ವಚನ ಸಾಹಿತ್ಯ : ಭಾಗ-೧ –ಸಂ. ಡಾ. ವೀರಣ್ಣ ರಾಜೂರ
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ-೨ –ಸಂ. ಡಾ. ಗುರುಲಿಂಗ ಕಾಪಸೆ
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ-೩ –ಸಂ. ಡಾ. ವೀರಣ್ಣ ರಾಜೂರ
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ-೪ –ಸಂ. ಡಾ. ವೀರಣ್ಣ ರಾಜೂರ
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ-೫ –ಸಂ. ಡಾ. ವೀರಣ್ಣ ರಾಜೂರ
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ-೬ –ಸಂ. ಡಾ. ವೀರಣ್ಣ ರಾಜೂರ
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ-೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ-೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ-೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ-೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ-೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ-೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ-೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ-೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ-೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು-ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು,

ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು

ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಡಾ. ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಡಾ. ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಮತ್ತು ಈ ಯೋಜನೆಯ ಕಾರ್ಯದರ್ಶಿಗಳೂ ಆದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಬಿ.ಸಿ. ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

❖ ಅವರು ನುಡಿದ ಮಾತುಗಳು (ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.

❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ. ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಗುರುಪಾದ ಮರಿಗುದ್ದಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಗುರುಪಾದ ಮರಿಗುದ್ದಿ

೧

ಆಧುನಿಕ ಕನ್ನಡ ಸಾಹಿತ್ಯವು ವಸಾಹತು ಕಾಲದ ಅನುಭವಗಳ ನಡುವೆ, ಹಲವು ಪ್ರಭಾವಗಳನ್ನು ಜೀರ್ಣಿಸಿಕೊಂಡು ತನ್ನತನವನ್ನು ಕಂಡುಕೊಂಡ ಬಗೆಯನ್ನು, ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ನಡೆದ ಹಲವು ವಿದ್ಯಮಾನಗಳಿಂದ ಅರಿಯಬಹುದಾಗಿದೆ. ಒಂದು ಸಾವಿರ ವರ್ಷಕ್ಕೂ ಮಿಕ್ಕಿದ ಕನ್ನಡ ಭಾಷೆಗಳಲ್ಲಿ ಕಾವ್ಯ, ಮಹಾಕಾವ್ಯ, ಕತೆ ಮತ್ತು ಇತರ ಸಾಹಿತ್ಯ ಪ್ರಕಾರಗಳ ಅಖಂಡ ಪರಂಪರೆಯೊಂದು ಹಿಂದೆ ಇತ್ತು ಎಂಬುದು ನಿಜ; ಆ ಪರಂಪರೆಯ ನೆಲೆಗಟ್ಟಿನ ಮೇಲೆ ಆಧುನಿಕ ಸಾಹಿತ್ಯ ವಿಭಿನ್ನವಾಗಿ ಹಲವು ಪ್ರಕಾರಗಳಲ್ಲಿ ಮೈದೋರಿತು. ಹಳಗನ್ನಡ, ನಡುಗನ್ನಡಗಳ ವಿವಿಧ ಛಂದೋರೂಪಗಳಲ್ಲಿ ಈ ಹಿಂದೆ ಬೆಳೆದು ಬಂದಿದ್ದ ಕಾವ್ಯ, ಹೊಸ ಕಾಲದಲ್ಲಿ ತನ್ನ ಪದ್ಯಮಯ ಶರೀರದಲ್ಲಿಯೂ, ಶಾರೀರದಲ್ಲಿಯೂ ತುಂಬ ಬದಲಾವಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಪ್ರಾಪ್ತವಾಯಿತು. ಚಂಪೂ, ತ್ರಿಪದಿ, ರಗಳೆ, ಷಟ್ಪದಿ, ವಚನ, ಕಂದ, ಸಾಂಗತ್ಯಗಳ ಛಂದೋರೂಪಗಳು ಹಿಂದೆ ಸರಿದು ಹೊಸದಾದ ಛಂದೋರೂಪಗಳು ಮತ್ತು ಕೆಲವು ಛಂದೋರಹಿತ ರೂಪಗಳು ಪ್ರಯೋಗದಲ್ಲಿ ಬಂದವು. ಆಧುನಿಕ ಶಿಕ್ಷಣ ಮತ್ತು ಚಿಂತನೆಗಳು ಹೊಸ ದಾರಿಯಲ್ಲಿ ಸಾಗಲು ಒತ್ತಾಯಿಸುತ್ತಿದ್ದರೂ, ಆಕರ್ಷಿಸುತ್ತಿದ್ದರೂ ಈ ಕಾಲದ ಕವಿ, ಲೇಖಕರು ತುಂಬ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಹೆಜ್ಜೆ ಹಾಕಬೇಕಾಗಿತ್ತು. ಹೊಸ ಮಾದರಿಗಳ ಜೊತೆಗಿನ ಸ್ನೇಹವನ್ನು ಹಳೆ ಅನುಭವಗಳ ಮೂಲಕ ಪಡೆಯಬೇಕಾಗಿತ್ತು. ಇದರಿಂದಾಗಿ ಕನ್ನಡ ಆಧುನಿಕ ಕಾವ್ಯ ತನ್ನತನದ ಹುಡುಕಾಟದಲ್ಲಿ, ಪರಂಪರೆಯ ಸತ್ವವನ್ನು ಸಮಕಾಲೀನ ಪ್ರಯೋಗಶೀಲತೆಯನ್ನು ಒಂದಾಗಿಸಿ ಮುನ್ನಡೆಯಿತು. ಹಾಗಾಗಿ ಇದು ಸಾಂಸ್ಕೃತಿಕ ಪುನರುಜ್ಜೀವನದ ಒಂದು ಭಾಗವಾಗಿ ನಡೆಯಿತು ಎಂದು ಭಾವಿಸಿದರೆ, ಅದು ಕೇವಲ ಸಾಹಿತ್ಯ ಕ್ಷೇತ್ರದ ವ್ಯವಹಾರವಾಗಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಪಂಜೆಯವರು, ಗೋವಿಂದ ಪೈ, ಬಿ. ಎಂ. ಶ್ರೀ, ಮಾಸ್ತಿ, ಕುವೆಂಪು ಅವರ ಕಾವ್ಯ ಪ್ರಯೋಗಗಳಿಗೆ ಇಂತಹ ಹಿನ್ನೆಲೆ ಇರುವುದನ್ನು ಗಮನಿಸಬೇಕು. ನವೋದಯ ಎನ್ನುವುದು ಎಲ್ಲ ರಂಗಗಳಲ್ಲಿ ಆಗುತ್ತಿದ್ದ ಬದಲಾವಣೆ, ಕಾಲಿಡುತ್ತಿದ್ದ ಹೊಸತನಗಳಿಗೆ ಅನ್ವಯವಾಗುತ್ತದೆ.

ಕಾವ್ಯವನ್ನು ಕೇಂದ್ರವಾಗಿಟ್ಟುಕೊಂಡೇ ನವೋದಯ ಸಾಹಿತ್ಯವನ್ನು ಗುರುತಿಸಲಾಗುತ್ತದೆ. ಅಂದಿನ ಮಹತ್ವದ ಲೇಖಕರೆಲ್ಲ ಕಾವ್ಯ ಪ್ರಯೋಗದ ಮೂಲಕ ಸಾಹಿತ್ಯದ ಇತರೆಲ್ಲ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಇತಿಹಾಸ, ಶಾಸನ, ಪ್ರಾಕ್ತನಶಾಸ್ತ್ರ, ಭಾಷಾಶಾಸ್ತ್ರ, ವ್ಯಾಕರಣ; ಹಸ್ತಪ್ರತಿ,

ಗ್ರಂಥಸಂಪಾದನೆಗಳಲ್ಲಿ ಅದ್ಭುತವಾಗಿ ಕೆಲಸ ಮಾಡಿದ ವಿದ್ವಾಂಸರು ಕೂಡ ಕಾವ್ಯರಚನೆಯನ್ನು ಬಿಟ್ಟುಕೊಡಲಿಲ್ಲ. ಹರ್ಡೇಕರ ಮಂಜಪ್ಪ, ಫ.ಗು.ಹಳಕಟ್ಟಿ, ಜೀರಿಗೆಕಟ್ಟಿ ಬಸವಪ್ಪನಂತಹ ಬರಹಗಾರರು, ಮತ್ತು ಸಾಮಾಜಿಕ ಬದಲಾವಣೆಗೆ, ರಾಷ್ಟ್ರೀಯ ಪುನರ್‌ನಿರ್ಮಾಣಕ್ಕೆ ದುಡಿಯುತ್ತಿದ್ದ ಕೆಲವರು ಆಧುನಿಕ ವಚನಗಳನ್ನು ರಚಿಸಿದರು. ನಾಟಕ ರಂಗದ ಶಾಂತಕವಿಗಳಿಂದ ಹಿಡಿದು, ವಿದ್ವಾಂಸರಾಗಿದ್ದ ಜಿ.ಪಿ. ರಾಜರತ್ನಂ ಅಂಥವರು ಹಳಗನ್ನಡ ಮಾದರಿಯಲ್ಲಿ ಕಾವ್ಯ ಪ್ರಯೋಗ ಮಾಡಿದರು. ಸಂಶೋಧನೆ, ವಿಮರ್ಶೆಗಳಲ್ಲಿ ತೊಡಗಿದ್ದ ಗೋವಿಂದ ಪೈಗಳು ಪ್ರಾಸ ತೆಗೆದು ಹಾಕಿ ಕಾವ್ಯರಚನೆಗೆ ಯತ್ನಿಸಿದರು. ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಆರ್.ಸಿ. ಹಿರೇಮಠ, ಡಿ.ವ್ಹಿ.ಜಿ, ಶಿವರಾಮ ಕಾರಂತ ಮುಂತಾದವರು ಆರಂಭಿಕ ಬರಹದ ಕಾಲದಲ್ಲಿ ಕಾವ್ಯದೊಂದಿಗೆ ಪ್ರಯೋಗನಿರತರಾಗಿದ್ದರು. ವಿದ್ವತ್ತಿನ ಕ್ಷೇತ್ರದಲ್ಲಿ ಹೆಸರುವಾಸಿಯಾದ ಡಾ. ಎಲ್. ಬಸವರಾಜು, ಸಿ.ಪಿ.ಕೆ, ದೇಜಗೌ, ಬೆಟಗೇರಿ ಕೃಷ್ಣಶರ್ಮ, ಹಂಪ. ನಾಗರಾಜಯ್ಯ..... ಹೀಗೆ ಹಲವರು ಕಾವ್ಯದೊಂದಿಗೆ ಅನುಸಂಧಾನ ಮಾಡಿದ್ದಾರೆ. ಈ ಸಾಲಿಗೆ ಸೇರುವ ಕರ್ನಾಟಕದ ಮಹತ್ವದ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ಕವಿಯೂ ಆಗಿದ್ದರೆಂಬುದು ತುಂಬ ಕುತೂಹಲದ ವಿಚಾರವಾಗಿದೆ. ಸಾಹಿತ್ಯ, ಸಂಶೋಧನೆ, ಶಾಸನ ಶಾಸ್ತ್ರ, ಹಸ್ತಪ್ರತಿಶಾಸ್ತ್ರ, ನಾಮವಿಜ್ಞಾನ, ಜಾನಪದ, ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು, ವಿಮರ್ಶೆ, ಸಂಪಾದನೆ, ಜೀವನಚರಿತ್ರೆ, ಇತಿಹಾಸ ಅಧ್ಯಯನಗಳಲ್ಲಿ ಅಮೂಲ್ಯವಾದ ಕೃತಿಗಳನ್ನು, ಲೇಖನಗಳನ್ನು ನೀಡಿರುವ ಅವರು ಆಧುನಿಕ ಕಾವ್ಯಕ್ಕೆ ತಮ್ಮದೇ ತೆರನಲ್ಲಿ ಕೊಡುಗೆ ಸಲ್ಲಿಸಿರುವುದನ್ನು ಕೂಡ ಇಂದು ಗುರುತಿಸಬೇಕಾಗಿದೆ.

ಡಾ. ಎಂ. ಎಂ. ಕಲಬುರ್ಗಿ ಅವರು ಬಹುಶಿಸ್ತೀಯ, ಬಹುತೆರನಾದ ಅದ್ಭುತ ಪ್ರತಿಭೆ ಹೊಂದಿದ್ದ ಅಪರೂಪದ ಸಂಶೋಧಕರು. ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಕನ್ನಡ ಕಾವ್ಯ ಪರಂಪರೆಯನ್ನು ಹೃದ್ಗತ ಮಾಡಿಕೊಂಡವರು. ಬಿ.ಎ., ಮತ್ತು ಎಂ. ಎ., ತರಗತಿಗಳಲ್ಲಿ ಇರುವಾಗ ಹಳಗನ್ನಡ, ನಡುಗನ್ನಡದ ಛಂದೋರೂಪಗಳನ್ನು ಅನುಸರಿಸಿ ಕಾವ್ಯ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದರು. ಚಂಪುವಿನ ವಿವಿಧ ವೃತ್ತಗಳಲ್ಲಿ, ಷಟ್ಪದಿ, ಕಂದ, ಸಾಂಗತ್ಯ, ರಗಳೆಗಳಲ್ಲಿ ಆಗಾಗ್ಗೆ ಕಾವ್ಯ ರಚನೆಗೆ ತೊಡಗುತ್ತಿದ್ದರು. ಅಧ್ಯಾಪಕರಾದ ಹೊಸದರಲ್ಲಿ ಆಧುನಿಕ ಸ್ವರೂಪದ ಭಾವಗೀತೆಗಳನ್ನು ಬರೆದರಲ್ಲದೆ, ಕೆಲವು ಕವಿ ಸಮ್ಮೇಲನಗಳಲ್ಲಿ ಭಾಗಿಯಾಗಿ ಅವುಗಳನ್ನು ಪ್ರಸ್ತುತಪಡಿಸುತ್ತಿದ್ದರು. ಮುಂದೆ ಅವರು ಸಂಶೋಧನೆ, ಅಧ್ಯಯನ, ಅಧ್ಯಾಪನಗಳಲ್ಲಿ ಗಾಢವಾಗಿ ತೊಡಗಿಸಿಕೊಂಡ ಕಾರಣದಿಂದ, ಬರುಬರುತ್ತ ಕಾವ್ಯರಚನೆ ಕಡಿಮೆಯಾಗುತ್ತ ಬಂದಿತು. ಅವರು ತರುಣರಾಗಿದ್ದಾಗ ಬರೆದ ಕವಿತೆಗಳು ಈಗ ಎರಡು ಸಂಕಲನಗಳಲ್ಲಿ ಪ್ರಕಟಗೊಂಡಿವೆ. ಅವು ಇಂತಿವೆ: ೧. ನೀರು ನೀರಡಿಸಿತ್ತು, ೨. ನೀರಾಗ ನಿಂತೀನಿ ನೀರಡಸಿ.

೧೯೬೭ ರಲ್ಲಿ ಮೊದಲ ಸಲ ಪ್ರಕಟಗೊಂಡ "ನೀರು ನೀರಡಿಸಿತ್ತು' ಎಂಬ ಕವನ ಸಂಕಲನವು, ೨೦೧೨ ರಲ್ಲಿ ಮರುಮುದ್ರಣಗೊಂಡಿದೆ. ಇದರಲ್ಲಿ ಆರಂಭದ 'ಗೆಳೆಯರೇ' ಕವಿತೆಯಿಂದ ಹಿಡಿದು, 'ಸರಳ ರೇಖೆ'ಯವರೆಗೆ ಒಟ್ಟು ನಾಲ್ವತ್ತಾರು ಕವಿತೆಗಳು ಸಂಕಲಿತಗೊಂಡಿವೆ. ಇಲ್ಲಿಯ ಕವಿತೆಗಳ ವಸ್ತು ಮತ್ತು ಸ್ವರೂಪವನ್ನು ಗಮನಿಸಿದರೆ ಮೂರು ಬಗೆಯ ಕವಿತೆಗಳು ಅಲ್ಲಿ ಕಾಣಿಸಿಕೊಳ್ಳುವುದನ್ನು ಸ್ಥೂಲವಾಗಿ ಗುರುತಿಸಬಹುದು. ಸ್ವಕೇಂದ್ರಿತವಾದ, ಸ್ವಂತ ಅನುಭವ, ಅನಿಸಿಕೆಗಳಿರುವ ಹಲವು ಕವಿತೆಗಳು ಒಂದು ತೆರನ ರಚನೆಗಳಾಗಿವೆ. ಗೌರವ, ಕೃತಜ್ಞತೆಗಳಿಂದ ವ್ಯಕ್ತಿ ಚಿತ್ರವೆಂಬಂತೆ ಬರುವ ಕೆಲವು ಕವಿತೆಗಳು ಇನ್ನೊಂದು ಬಗೆಯವು. ಇವೆರಡರಿಂದಲೂ ಭಿನ್ನವಾದ ಜಿಜ್ಞಾಸೆಯ, ತಾತ್ವಿಕ ಚಿಂತನೆಯ ಕೆಲವು ಕವಿತೆಗಳನ್ನು ಕೂಡ ಇಲ್ಲಿ ಗಮನಿಸಬಹುದು.

ಗೆಳೆಯರೇ, ಬೂದಿಯಾಗುತ್ತೀರಿ–ಬೆಳಕಾಗುತ್ತೇನೆ, ನಾಯಿ ಸಾಕಿದ್ದೇನೆ. ಹಾವು ಮತ್ತು ಹುತ್ತ– ಈ ಬಗೆಯ ಕವಿತೆಗಳು ಕವಿಯ ಸ್ವಕೇಂದ್ರದ ಅಭಿವ್ಯಕ್ತಿಗಳಾಗಿ ನಿಲ್ಲುತ್ತವೆ. ಕ್ರಿಯಾಶೀಲರಾದ, ಹೊಸ ಸಾಮಾಜಿಕ ವ್ಯವಸ್ಥೆಯ ಬದಲಾವಣೆಯ ಕನಸುಗಾರರಾದ ವ್ಯಕ್ತಿಗಳಿಗೆ, ಸಾಮಾಜಿಕ ಪರಿಸರ ಎಂದಿಗೂ ಪ್ರೋತ್ಸಾಹದಾಯಕವಾಗಿರುವುದಿಲ್ಲ. ನಿರಂತರವಾಗಿ ಕೆಲಸ ಮಾಡುವ ಉತ್ಸಾಹೀ ಆದರ್ಶ ಅಧ್ಯಾಪಕರಿಗಾಗಲಿ, ಬರಹಗಾರರಿಗಾಗಲಿ ಅವರ ಸುತ್ತಮುತ್ತಲಿನವರು ಸರ್ವ ಸಹಾಯ, ಸಹಕಾರ ನೀಡುತ್ತಾರೆಂಬ ಯಾವ ಭರವಸೆಯೂ ಇಲ್ಲ ಬದಲಾಗಿ ಹಲವರು ಅಸೂಯೆ, ಅಸಮಾಧಾನದಿಂದ ಕುದಿಯುತ್ತಾರೆ. ಇದನ್ನು ಸ್ವತಃ ಕವಿ ಮತ್ತೆ ಮತ್ತೆ ಅನುಭವಿಸಿ, ವಿಷಾದ, ನೋವುಗಳಿಂದ ತುಸು ವ್ಯಂಗ್ಯ, ವಿಡಂಬನೆ, ಸಿಟ್ಟಿನಿಂದ ನೀಡಿದ ಪ್ರತಿಕ್ರಿಯೆಯಂತೆ ಈ ಕವಿತೆಗಳು ಹೊರಬಂದಿವೆ. ತಮ್ಮ ಪ್ರಗತಿಗೆ, ಕೆಲಸ ಕಾರ್ಯಗಳಿಗೆ, ಕನಸು ಆದರ್ಶಗಳಿಗೆ ಅಡ್ಡಿ ಆತಂಕ ನಿರ್ಮಿಸುವ ಅಲ್ಪಮತಿಗಳಿಗೆ, ಅಸೂಯಾಪರರಿಗೆ ಕವಿ ಇಲ್ಲಿ ಎಚ್ಚರಿಸುತ್ತ, ತನ್ನ ಸಾಧನೆಯ ದಾರಿಯಲ್ಲಿ ಮುನ್ನುಗ್ಗುವ ಛಲ ಬಲ ತೋರುತ್ತಾನೆ. "ಕತ್ತಲೆಯ ಕಲ್ಲುಗಳ/ಎಡವಿ ಬಂದವ ನಾನು/ನಡೆಯ ಬಯಸಿದ್ದೇನೆ/ಬೆಳಕಿನೆಡೆಗೆ/ಬೆಂಕಿ 'ಸತ್ಯ'ದಡಿಗೆ" ಎಂದು ಒಂದು ಘೋಷಣೆಯ ಹಾಗೆ ಮೊದಲ ಕವಿತೆ, ಗೆಳೆಯರೇ ಆರಂಭವಾಗುತ್ತದೆ. ಸತ್ಯವೆಂಬುದು ಬೆಳಕು ಮತ್ತು ಬೆಂಕಿ ಎರಡೂ ಆಗಿದ್ದು, ಆ ದಾರಿಯಲ್ಲಿ ನಡೆಯಬಯಸುವ ನಿರೂಪಕನು, ತನ್ನ ದಾರಿಗೆ ಅಡೆ–ತಡೆ ನಿರ್ಮಿಸುವವರಿಗೆ ಎಚ್ಚರಿಸಿ, ಅವರು ನಾಶವಾಗುವುದಾಗಿ ತಿಳಿಸುತ್ತಾನೆ. ಆದರೆ ಟೀಕಾಕಾರರಿಗೆ, ಅಲ್ಪಮತಿಗಳಿಗೆ 'ನಿಮ್ಮ ಬಾಯಿಯ ಮೇಲೆ ಚಪ್ಪಲು ಅನಿವಾರ್ಯವಾಗಿಸಬೇಡಿ' ಎಂದಿರುವುದು ಕಾವ್ಯಶಿಲ್ಪದಲ್ಲಿ ಶಿಥಿಲತೆಯನ್ನು, ವಾಚ್ಯತೆಯನ್ನು ತರುತ್ತದೆ.

ಇಂತಹ ಹೋರಾಟ, ಸಂಘರ್ಷಗಳ ಕಥಾನಕವನ್ನು ಆವೇಗದಿಂದ ಬಿಂಬಿಸಲು ಕೆಲವು ಕವಿತೆಗಳು ಪ್ರಯತ್ನಿಸಿವೆ. 'ನಾಯಿ ಸಾಕಿದ್ದೇನೆ' ಕವಿತೆಯಲ್ಲಿ ನಿರೂಪಕ ತಾನು ಎದುರಿನ ಧೂರ್ತ ಪ್ರತಿನಾಯಕನನ್ನು ಆರೋಪಿಸಿಕೊಂಡು ಹೇಳುವ ವ್ಯಂಗ್ಯದ ಮಾತುಗಳಿವೆ. ಪ್ರಾಮಾಣಿಕರು, ಸತ್ಯವಂತರು ಅಧಿಕಾರಸ್ಥರಿಗೆ ಪ್ರಿಯರಾಗದೆ, ಬೇಡದವರಾಗಿರುತ್ತಾರೆ. ಅವರನ್ನು ದೂರಕ್ಕಿರಿಸಲು, ನಿರಾಕರಿಸಲು, ಅಪ್ರಸ್ತುತವಾಗಿಸಲು ತಮ್ಮ ಸುತ್ತ ಭಟ್ಟಂಗಿಗಳನ್ನು, ಬಾಲಬಡುಕರನ್ನು, ತಾಳಕ್ಕೆ ಕುಣಿಯುವವರನ್ನು ಇಟ್ಟುಕೊಂಡಿರುವುದರ ವಿಡಂಬನೆ ಪ್ರಖರವಾಗಿದೆ. ಪ್ರತಿಭೆ, ಚೈತನ್ಯ ಇರುವವರನ್ನು, ಅಸಾಧ್ಯವಾದುದನ್ನು ಸಾಧಿಸಲು ಹೆಣಗುವವರನ್ನು ಅವರ ಸುತ್ತಲಿನ ರೋಗಗ್ರಸ್ತ ಮನಸ್ಸಿನ, ಬೆನ್ನೆಲಬು ಇಲ್ಲದ ಜನರು ಹೇಗಾದರೂ ಭಂಗಿಸಲು, ತುಳಿಯಲು ಯತ್ನಿಸುವುದನ್ನು 'ಅ–ಮರ' ಕವಿತೆ ಚಿತ್ರಿಸುತ್ತದೆ. 'ನಾನು ಸಾಯುವುದಿಲ್ಲ,' 'ಚಕ್ರವರ್ತಿಯಾಗುತ್ತೇನೆ' ಕವಿತೆಗಳಲ್ಲಿ ಇದೇ ಭಾವ ಪುನರಾವರ್ತನೆಯಾಗುತ್ತದೆ. ಈ ಮಾದರಿಯಲ್ಲಿರುವ 'ಹಾವು ಮತ್ತು ಹುತ್ತ'ದಲ್ಲಿ ನಯವಂಚಕರ ಸ್ವಭಾವ, ವರ್ತನಾದಿಗಳನ್ನು ವಿಡಂಬಿಸಲು ಹಾವು, ಹುತ್ತಗಳನ್ನು ಸಾಂಕೇತಿಕವಾಗಿ ತರಲಾಗಿದೆ. ಇದಕ್ಕೆ ವಚನದ ಇಂತಹ ವಸ್ತುವಿರುವ ಬಣ್ಣನೆಯು ಪ್ರೇರಣೆ ನೀಡಿದ ಹಾಗಿದೆ. 'ಬೇಕಿಲ್ಲ ನನಗೆ ಏಣಿ/ಏರಲು/ಸೂರ್ಯಮಂಡಲ ಸೇರಲು' ಎಂಬ 'ಏಣಿ' ಕವನದ ಆಶಯವೂ ಇದೇ ತೆರನಲ್ಲಿದೆ. ಸ್ವಕೇಂದ್ರದಲ್ಲಿ ಬೆಳೆಯುವ ಇಂತಹ ಕವಿತೆಗಳು ಕವಿಯ ಆದರ್ಶಗಳನ್ನು, ಹೋರಾಟ ಸಂಘರ್ಷಗಳನ್ನು ಅರಿಯಲು ಸಹಾಯಕವಾಗಿವೆ.

ಈ ಸಂಕಲನದಲ್ಲಿ ಅಂದಿನ ಸಾಂಸ್ಕೃತಿಕ, ಸಾಹಿತ್ಯಿಕ ಲೋಕದ ಗಣ್ಯರನ್ನು, ಗುರುಹಿರಿಯರನ್ನು ಕೃತಜ್ಞತೆಯಿಂದ ನೆನೆದು, ಅವರ ವ್ಯಕ್ತಿತ್ವ ಚಿತ್ರಿಸುವ ಎರಡು ಕವಿತೆಗಳಿರುವುದು

ಗಮನಾರ್ಹ. ಕನ್ನಡ ನವೋದಯ ಕಾವ್ಯದ ಮಹತ್ವದ ಕವಿಗಳಾದ ಕುವೆಂಪು, ಬೇಂದ್ರೆ, ಶಿವರುದ್ರಪ್ಪ, ಕಣವಿಯವರ ಕಾವ್ಯದಲ್ಲಿ ಇಂತಹ ಹಲವು ಕವಿತೆಗಳಿದ್ದು, ಅದು ಮುಂದಿನ ಕವಿಗಳಲ್ಲಿಯೂ ಮುಂದುವರೆದುಕೊಂಡು ಬಂದಿದೆ. ಇಲ್ಲಿ ಕವಿ ಬಸವನಾಳರಿಗೆ, ಡೆಪ್ಯೂಟಿ ಚೆನ್ನಬಸಪ್ಪ ಎಂಬ ಎರಡು ವ್ಯಕ್ತಿ ಚಿತ್ರಣಗಳನ್ನು ನೀಡಿದ್ದಾನೆ. ಶಿಕ್ಷಣ ರಂಗದಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ ಈ ಇಬ್ಬರ ಬಗೆಗೆ ಕವಿಗೆ ಅಪಾರ ಗೌರವವಿರುವುದು, ಕೃತಜ್ಞತೆಯಿರುವುದು ಸ್ಪಷ್ಟವಾಗಿ ವಿದಿತವಾಗುತ್ತದೆ. ಬಸವನಾಳರನ್ನು ಕವಿ ನಿರ್ದೇಶಿಸುವುದು ಇಂತು;

ಕಾಳಕತ್ತಲೆಯೊಡನೆ
ಕಾಳಗವ ಮಾಡಿದಿರಿ
ಜಯಘೋಷ! ಬೆಳಕಿನ
ಕದ ತೆರೆದಿರಿ.
ಒಳಗಿದ್ದ ಶಿಕ್ಷಣದ ಶಿವಲಿಂಗ
ನಿಮ್ಮಿಂದ
ನಮ್ಮ ಅಂಗೈಯಲ್ಲಿ ಚುಳುಕಾಯಿತು
ಮೂರು ಕಾಯಗಳಲ್ಲು ಬೆಳಕಾಯಿತು

ಬಸವನಾಳರ ಸಾಧನೆಗಳಿಗೆ ಕವಿತೆಯೊಂದು ಜಯಘೋಷವಾಗುತ್ತದೆ. ಶಿಕ್ಷಣದ ಪೂಜೆಯಲ್ಲಿ ಸಾರ್ಥಕತೆ ಕಂಡ ಅವರ ಬಗ್ಗೆ ಸಹೃದಯರಲ್ಲಿ ಒಂದು ಗೌರವವನ್ನು ಕವಿತೆ ಹುಟ್ಟುಹಾಕುತ್ತದೆ. ಅದರಂತೆ ಶಿಕ್ಷಣ, ಕನ್ನಡತನ, ಪತ್ರಿಕೆ, ಆಡಳಿತಗಳಲ್ಲಿ ವಿಶಿಷ್ಟವಾದ ಕೊಡುಗೆ ನೀಡಿದ ಚೆನ್ನಬಸಪ್ಪ ಅವರ ಸಾಧನೆಗಳನ್ನು ನೆನೆಯುತ್ತ ಕವಿ 'ನೆಲ ಹೋಗಿ ಹೋಗಿ ಹೊಲ ಮಾಡಿದಿ, ಕನ್ನಡ ದೀಪ ಕೈಯಾಗ ಹಿಡಿದಿ' ಎಂದು ನಮನ ಸಲ್ಲಿಸುತ್ತಾರೆ. ಈ ಎರಡು ಕವಿತೆಗಳು ಪರಂಪರೆಯ ಜೊತೆಗೆ ಕವಿಯನ್ನು ಬೆಸೆಯುತ್ತವೆ; ಸತ್ವಯುತರನ್ನು ನೆನೆವುದು ಮುಂದಿನವರ ಕರ್ತವ್ಯ ಎಂಬ ಭಾವ ಬಿಂಬಿಸುತ್ತವೆ.

ಇದಕ್ಕೆ ಸಂವಾದಿಯಾಗಿ, ಪೂರಕವಾಗಿ ಕವಿ ಅವ್ವ, ಅಪ್ಪ, ಹೆಂಡತಿ–ಮೂರು ಆಪ್ತವಾದ ವ್ಯಕ್ತಿಚಿತ್ರಣಗಳನ್ನು ಭಾವಪೂರ್ಣವಾಗಿ ನೀಡಿರುವರು. ಅವ್ವ, ತಾಯಿ ಹೆಸರಿನ ಅನೇಕ ಕವಿತೆಗಳು ಆಧುನಿಕ ಕನ್ನಡ ಕಾವ್ಯದಲ್ಲಿ ರಚನೆಗೊಂಡಿವೆ. ಮಾತೃತ್ವ ಎನ್ನುವ ಶಕ್ತಿಯನ್ನು ವಿವಿಧ ರೂಪ, ರೀತಿಗಳಲ್ಲಿ ಕವಿಗಳು ಬಣ್ಣಿಸಿದ್ದಾರೆ. ಇಲ್ಲಿ ಕವಿ ಅವ್ವ ಎಂಬ ದೇಸಿಯ ಸಂಬೋಧನೆಯಲ್ಲಿ ಸ್ಮರಣೆ, ಗೌರವ, ವಿಷಾದ, ಆಪ್ತತೆಗಳನ್ನು ತುಂಬಿದ್ದಾರೆ. ಮಾ, ಮಾತೆ, ಮದರ್ ಎಂದು ಕರೆಯಲು ಒಪ್ಪದ ಕವಿ 'ಅವ್ವ' ಎಂದು ಅರ್ಥಪೂರ್ಣವಾಗಿ ಕರೆದು, ಎದೆಹಾಲು, ತೊಟ್ಟಿಲುಗಳ ಮೂಲಕ ನೆನಪಿಸುತ್ತ, ತನ್ನ ಒಳಗೆ ಕರಗಿ ಹೋಗಿರುವ ಆಕೆಯನ್ನು ಎಲ್ಲೆಡೆ ಕಾಣಿಸುವುದಿದೆ. ಅದರಂತೆ 'ಅಪ್ಪ'ದಲ್ಲಿ ತಂದೆಯ ಪ್ರೀತಿ, ಕೋಪಗಳೆರಡರ ನೆನಪು ಒಸರುತ್ತವೆ. ಅಪ್ಪ ಬಿಸಿಲಿನಂತೆ, ಬೆಳದಿಂಗಳಂತೆ ಎರಡು ತೆರನಲ್ಲಿ ವರ್ತಿಸಿದ್ದು ಕವಿ ಸ್ವತಃ ತಾನು ತಂದೆಯಾದಾಗ ಅರ್ಥವಾಯಿತು ಎಂಬುದು ಹೆಚ್ಚು ನಿಜವೆನಿಸುತ್ತದೆ; ಧ್ವನಿಪೂರ್ಣವೆನಿಸುತ್ತದೆ.

ಹೀಗೆ
ಹಗಲು ಬಿಸಿಲಾಗುತ್ತಿದ್ದವನು
ರಾತ್ರಿ ಬೆಳದಿಂಗಳಾಗುತ್ತಿದ್ದವನು

ನೀನೇ
ಎಂಬುದು ನನಗೆ ತಿಳಿದದ್ದು
ನಾನು ಅಪ್ಪನಾದಾಗ
ಅಪ್ಪಾ
ನಾನು ಅಪ್ಪನಾದಾಗ

ಹಳ್ಳಿಗಳಿಂದ ಬಂದವರಿಗೆ ಅವ್ವ, ಅಪ್ಪ ಸಂಬಂಧಗಳು, ಅವರ ಬಗೆಗಿನ ನೆನಪುಗಳು ಮುಖ್ಯವೆಂಬುದನ್ನು ಈ ಸಂಕಲನವು ಸ್ಪಷ್ಟವಾಗಿಸುತ್ತದೆ. ಇಂತಹ ಸಂಬಂಧಗಳ ಚಿತ್ರಣದ ಕವಿತೆಗಳಲ್ಲಿ ತುಂಬ ಕಲಾತ್ಮಕವಾದ ಅರ್ಥಗರ್ಭಿತ ಕವನವೆಂದರೆ 'ಹೆಂಡತಿ'. ಕಾವ್ಯ, ವ್ಯಾಕರಣ, ಛಂದಸ್ಸು, ಗ್ರಂಥಗಳ ಹೋಲಿಕೆಗಳಲ್ಲಿ ಹೆಂಡತಿಯನ್ನು ವರ್ಣಿಸುವ ಬಗೆ ವಿನೂತನವಾಗಿದೆ.

ನವನವೋನ್ಮೇಷಶಾಲಿನಿ
ಈಕೆ.
ತನ್ನ ಪದ್ಯಲಯಕೆ
ನನ್ನ ಗದ್ಯಲಯವ ಬಳಸಿಕೊಂಡು
ಚಂಪುವಾದಾಕೆ
ಹೆಣ್ಣು-ಹೆಂಡತಿ
ತತ್ವ ಸಮೀಕೃತಿ
ಲೌಕಿಕ-ಧಾರ್ಮಿಕ ಸಮಸ್ತ ಸಂಸ್ಕೃತಿ

ಎನ್ನುವಲ್ಲಿ ದಾಂಪತ್ಯದ ಸರಸ ಚಿತ್ರಣವೂ ಹಿನ್ನೆಲೆಯಾಗಿ ಬಂದಿದೆ.

ಸಾಮಾಜಿಕ ವಿಡಂಬನೆ, ಗಾಢ ಚಿಂತನೆಗಳಿರುವ ಕೆಲವು ಕವಿತೆಗಳು ವಿಚಾರಾರ್ಹವಾಗಿವೆ; ಸಾಮಾಜಿಕ ಬದ್ಧತೆ, ಜವಾಬ್ದಾರಿಗಳು ಅಲ್ಲಲ್ಲಿ ನಿಹಿತವಾಗಿವೆ. ಸಂಸ್ಥೆಯೊಳಗೊಂದು ಮನೆಯಮಾಡಿ, ಸಂಸ್ಥೆ, ಸುದ್ದಿ ಪತ್ರಿಕೆ, ಹೇಗೆ ಸಾಧ್ಯ ಹೇಗೆ ಅಸಾಧ್ಯ?- ಈ ಕವಿತೆಗಳು ವ್ಯಂಗ್ಯ, ವಿಡಂಬನೆಯಿಂದ ತುಂಬಿಕೊಂಡಿದ್ದರೆ, ಜಗದ್ಗುರುಗಳು, ಮಠ, ಧಾರವಾಡದ ನಿವೃತ್ತರು ಕವಿತೆಗಳಲ್ಲಿ ಅದು ಹೆಚ್ಚು ಮೊನಚಾಗಿದೆ. ಕೆಲವು ಸ್ವಾಮಿಗಳು, ನಿವೃತ್ತರು ಸಮಾಜ ವಿರೋಧಿ, ಧರ್ಮವಿರೋಧಿ ಕಾರ್ಯಗಳಲ್ಲಿ ತೊಡಗಿರುವ ಬಗ್ಗೆ ಕವಿಗೆ ವಿಷಾದವೂ ಇದೆ; ಸಾತ್ವಿಕ ಕೋಪವೂ ಇದೆ. ಆದರೆ ಈ ವಿಷಾದ, ಕೋಪಗಳು ಕಾವ್ಯ ರೂಪದಲ್ಲಿ ಬಹುಜನರ ಅನುಭವದಲ್ಲಿ ಅರಳುವ ಶಕ್ತಿ ಹೊಂದದೆ ಸಾತ್ವಿಕ ವ್ಯಕ್ತಿಯ ಅಭಿಮತವೆನಿಸುತ್ತವೆ. ಆದರೆ ಆ ಮರ, ನಾನು ಸಾಯುವುದಿಲ್ಲ-ಕವಿತೆಗಳು ಧ್ವನಿಶಕ್ತಿಯಲ್ಲಿ ಬೆಳೆಯುತ್ತವೆ. ಗಂಟೆ, ಮುಗಿಲು, ಸುಡುಗಾಡು, ನೆಲಮುಗಿಲ ಅಂತರವು ಹೆಚ್ಚುತ್ತಿದೆ. -ನಾಲ್ಕು ಕವಿತೆಗಳು ಕಾಲ, ಬದುಕು, ಸಾವುಗಳ ಚಿಂತನೆಯಲ್ಲಿ ತಾತ್ವಿಕವಾದ ಆಕೃತಿ ಪಡೆಯುತ್ತವೆ. ಕೊನೆ-ಮೊದಲಿಲ್ಲದ ಮುಗಿಲು ಕವಿಗೆ ಬೆರಗಿನ ಅನಂತವಾಗಿಯೂ, ವಿಸ್ತಾರದ ನೀಲಿಮ ಸೆರಗಾಗಿ, ಪ್ರಶ್ನೆಗಳಿಗೆ ದಿಗಿಲಾಗಿ ಕಾಣಿಸುತ್ತದೆ. 'ಚಿತ್ರ-ವಿಚಿತ್ರದ ಮುಗಿಲು/ದಶಪರ್ವದ ಭಾರತಕೂ ಮಿಗಿಲು' ಎಂದು ವಿಸ್ತರಿಸುತ್ತದೆ. ಸಾವಿನ ಅನಿವಾರ್ಯತೆ ಮತ್ತು ವಾಸ್ತವಿಕತೆಯ ಬಗ್ಗೆ ಕವಿಯ ಚಿಂತನೆಯು ನೈಜವಾಗಿದೆ. 'ಎಲ್ಲ ನದಿಗಳೂ ಸಾಗರ ಕಡೆಗೆ, ನಾವೆಲ್ಲ ನಿನ್ನೆಡೆಗೆ' ಎಂಬ ಸತ್ಯವು ವ್ಯಕ್ತವಾಗಿ, ಸಾವಿಗಿಲ್ಲ ಭೇದ-ಭಾವ ಎಂದು ಸಾರುವಂತಿದೆ.ಇದರ ಮುಂದುವರಿದ ಚಿಂತನೆ 'ಮರಣಸುಖ' ಕವಿತೆಯಲ್ಲಿದೆ. 'ನೀರು ನೀರಡಿಸಿತ್ತು' ಸಂಕಲನದ ಕವಿತೆಗಳು ನವ್ಯ ಕಾವ್ಯದ ಭರಾಟೆಯ ಸಂದರ್ಭದಲ್ಲಿ

ರಚನೆಗೊಂಡಿದ್ದು, ಅಭಿವ್ಯಕ್ತಿಯಲ್ಲಿ, ಶಿಲ್ಪದಲ್ಲಿ ಅದರ ಪ್ರಭಾವವನ್ನು ಚೆನ್ನಾಗಿ ಗುರುತಿಸಬಹುದು. ಕಾವ್ಯರಂಗಕ್ಕೆ ಉತ್ಸಾಹಾವೇಗಗಳಿಂದ ಅಡಿಯಿಟ್ಟ ಕವಿಯ ವ್ಯಕ್ತಿಗತ ತುಡಿತಗಳು, ಬೇಕು ಬೇಡಗಳು ಇಲ್ಲಿ ರೂಪದಾಳಿವೆ. 'ಅರಿಕೆ' ಯಲ್ಲಿ ಕವಿ ಹೇಳಿರುವಂತೆ ಇಲ್ಲಿಯ ಕವಿತೆಗಳೂ 'ಸತ್ಯದ ಶಾಬ್ದಿಕ ರೂಪ'ವಾಗಿರುವ ಕಾರಣಕ್ಕೆ ಅನುಭವವು ವ್ಯಕ್ತಿಕೇಂದ್ರದಲ್ಲಿ ಹೊರ ಬಂದಿದೆ. 'ಇಲ್ಲಿಯ ಕವನಗಳೆಲ್ಲ ಸಾಮಾನ್ಯವಾಗಿ ನಾನು ಬದುಕಿದ ಭಾವನೆಗಳ ಭಾಷಾಶಿಲ್ಪವೆನಿಸಿವೆ' ಎಂಬ ಉಕ್ತಿಯನ್ನು ಗಮನಿಸಬೇಕು.

"ಕವಿಗೆ ಸಂಬಂಧಿಸಿದಂತೆ ಆತ್ಮಮುಖಿ, ಮನಮುಖಿ; ವಸ್ತುವಿಗೆ ಸಂಬಂಧಿಸಿದಂತೆ ಮಾನವಮುಖಿ, ಸಮಾಜಮುಖಿ ಎಂದು ಸಾಹಿತ್ಯಕ್ಕೆ ನಾಲ್ಕು ಮುಖಗಳುಂಟು. ಇವುಗಳನ್ನು ಸ್ವತಂತ್ರವಾಗಿಯೂ, ಮಿಶ್ರಣವಾಗಿಯೂ ಕವಿತೆ ಕಟ್ಟುತ್ತಾನೆ, ಕವಿ. ಈ ಮುಖಗಳ ನೆಲೆಯಿಂದ ಭಾಷೆಯ ಮೂಲಕ ಕವನವನ್ನು ಕಲಾತ್ಮಕವಾಗಿ ಬೆಳೆಸಬೇಕಾಗುತ್ತದೆ." ಎಂದು ಡಾ. ಎಂ. ಎಂ. ಕಲಬುರ್ಗಿ ಅವರು 'ನೀರಾಗ ನಿಂತೀನಿ ನೀರಡಿಸಿ' ಕವನ ಸಂಕಲನದ 'ನನ್ನ ಮಾತು'ಗಳಲ್ಲಿ ಅಭಿಪ್ರಾಯಪಡುತ್ತಾರೆ. ೨೦೧೬ ರಲ್ಲಿ ಪ್ರಕಟವಾಗಿರುವ ಈ ಸಂಕಲನದಲ್ಲಿ ನಾಲ್ವತ್ತೆರಡು ಕವಿತೆಗಳಿವೆ. ಕವಿ ಸ್ವಕೇಂದ್ರಿತವಾಗಿ ಚಿಂತಿಸುವ ಜಗತ್ತು ಇದರಲ್ಲಿಯೂ ಬಂದಿದ್ದು, ವೃತ್ತಿಬದುಕು, ಪ್ರವೃತ್ತಿಗಳ ಬದುಕಿನಲ್ಲಿ ಎದುರಾದ ಸಮಸ್ಯೆ ಸವಾಲುಗಳಿಗೆ ಪ್ರತಿಕ್ರಿಯೆ ಎಂಬ ಹಾಗೆ ಅವು ಬಿತ್ತರಗೊಂಡಿವೆ. ಈ ಬಗೆಯ ಕವಿತೆಗಳಿಗೆಲ್ಲ ಪ್ರತಿನಿಧಿಯಾಗಿ, ಧ್ವನಿಯಾಗಿ ಬರುವ 'ದ್ವೀಪ'ವು ಕವಿಯ ಸತ್ಯನಿಷ್ಠೆಗೆ ಕೂಡ ಪ್ರತಿಮೆ ಎನಿಸುತ್ತದೆ.

ದ್ವೀಪವಾಗಿರುವ ನನ್ನನ್ನು
ದ್ವೇಷದಿಂದ ತಳ್ಳುತ್ತೀರಿ
ಕತ್ತಲೆಗೆ
ನಿಮಗೇನು ಗೊತ್ತು?
ಆಗ
ಹೋಗುತ್ತೇನೆ
ನಿಮಗೆ ಕತ್ತಲೆಯ ಬಿಟ್ಟು
ಬೆಳಕು ಹೊತ್ತು

ಸ್ವಾಗತ, ದಾರಿ ಬಿಡಿ, ದಾರಿ ಸತ್ಯ–ಕವಿತೆಗಳು ಇದಕ್ಕೆ ಪೂರಕವಾದ ಭಾವತಾಳಿ ಕವಿಯ ಹೋರಾಟದ ಬದುಕಿಗೆ ಕಿಟಕಿಗಳಾಗುತ್ತವೆ; ನಿದರ್ಶನಗಳಾಗುತ್ತವೆ. ಸತ್ಯವನ್ನು ಹಿಡಿದುಕೊಂಡು, ನೇರವಾದ ದಾರಿಯಲ್ಲಿ ಹೊರಟ ಕವಿಗೆ ಆ ಸತ್ಯದಲ್ಲಿ, ದಾರಿಯಲ್ಲಿ ನಂಬಿಕೆಯೂ ಇದೆ; ವಿಶ್ವಾಸವೂ ಇದೆ. 'ಸತ್ಯ; ದಾರಿ ನೇರ/ಲೋಕದ ಡೊಂಕು ಇದಕೆ ವೈರ.... ನಾವೆಲ್ಲ ಡೊಂಕು/ನೀನೇಕೆ ನೇರ/ ಇದು ಲೋಕದ ತಕರಾರ.' ಅದೇ ಭಾವವನ್ನು ಧ್ವನಿಯಾಗಿ ಬಿಂಬಿಸುತ್ತದೆ. ಒಡೆಯಂಗೆ ಬೊಗಳಿತ್ತು, ಪುಣ್ಯಕೋಟಿ ಕವಿತೆಗಳು ಇದೇ ಭಾವವನ್ನು ಸಂಕೇತಿಕವಾಗಿ, ವಿಡಂಬನಾತ್ಮಕವಾಗಿ ನೀಡುತ್ತವೆ. ಹೆಜ್ಜೆ ಹೆಜ್ಜೆಗೆ ಕಿರುಕಳ ನೀಡಿ, ಅಡ್ಡಿ ಆಪತ್ತು ತರುವ ಅಸೂಯಾಪರರಿಗೆ, ನೀಚರಿಗೆ ಕವಿ ತನ್ನ ಎದುರಿಗಿನ ಬೆಳಕು ಮುಖ್ಯವೆಂದೇ ಸೂಚಿಸುತ್ತಾನೆ. ಹರಟೆ ಹೊಡೆದು ಸಂಬಳ ನುಂಗುವವರನ್ನು, ಒಳಗೊಳಗೆ ದ್ವೇಷ ದಳ್ಳುರಿ ಹರಡುವವರನ್ನು, ದುಡಿಯದೆ ಫಲ ಬಯಸುವವರನ್ನು, ಅಸತ್ಯದ ದಾರಿಯಲ್ಲಿ ಅಡ್ಡ ತಿಡ್ಡ ನುಗ್ಗುವವರನ್ನು ಕವಿತೆಗಳಲ್ಲಿ ವಿಡಂಬಿಸಲಾಗಿದೆ. ಸಾಮಾಜಿಕ ಕ್ಷೇಮ

ಚಿಂತನೆಯಲ್ಲಿರುವ ಸತ್ಯವನ್ನು ನೆಚ್ಚಿಕೊಂಡ, ಆದರ್ಶ ಹೋರಾಟಗಾರನ ಅಂತರಂಗದ ಅಭಿವ್ಯಕ್ತಿಗಳಾಗಿ ಇವು ಕಾಣಿಸುತ್ತವೆ. ಕೆಡಕಿನೊಂದಿಗಿನ ಹೋರಾಟದ ಕಥನವಿಲ್ಲಿ ಮರುಕಳಿಸುತ್ತದೆ.

ಇದೇ ವಿಡಂಬನೆ, ವ್ಯಂಗ್ಯ ಸಾಮಾಜಿಕ ಒಳಿತಿಗಾಗಿಯೂ ಕೆಲವು ಕವಿತೆಗಳಲ್ಲಿ ಕಾಣಿಸಿದ್ದು, ಅಲ್ಲಿ ಕವಿಯ ಸಮಷ್ಟಿ ಪ್ರಜ್ಞೆಯ ಸ್ವರೂಪವನ್ನು ಗುರುತಿಸಬಹುದು. ಗೋಮುಖ ಭಕ್ತರು, ಆನೆ ಬೊಗಳುತ್ತದೆ, ಮೂರ್ತಿಭಂಜನೆ, ಅಭಯಾರಣ್ಯ ಕವಿತೆಗಳು ಇದಕ್ಕೆ ನಿದರ್ಶನವಾಗಿವೆ. ಗೋಪೂಜೆ ಮಾಡುವ ನೆಪದಲ್ಲಿ ಸಾಮಾಜಿಕ ನೆಮ್ಮದಿಯನ್ನು ನಾಶಪಡಿಸುವುದಮನ್ನು, ಉನ್ನತ ಸ್ಥಾನದಲ್ಲಿರುವವರು ಶ್ವಾನಬುದ್ಧಿ ಪ್ರದರ್ಶಿಸುವುದನ್ನು, ಕಲಿತವರು ವಿವೇಕ ಪಡೆಯದಿರುವದನ್ನು ಕವಿ ವಿಡಂಬಿಸುತ್ತಾನೆ. ದೊಡ್ಡವರು ದೊಡ್ಡತನದಿಂದ ನಡೆಯುತ್ತಿಲ್ಲ ಎಂಬುದು, 'ಬೊಗಳಿದರೆ ಸಾಕು ಶ್ವಾನಗಳು/ತಿರುಗಿ ಬೊಗಳುತ್ತವೆ, ಈ ಆನೆಗಳು/ಕೆಲವೊಮ್ಮೆ/ಶ್ವಾನ ಹೋದರೆ ಸಾಕು, ಈ ಆನೆಗಳೇ ಬೊಗಳುತ್ತವೆ' ಎನ್ನುವಲ್ಲಿ ಬಿಂಬಿತವಾಗಿದೆ. ಭಾವ, ಆಶಯಗಳು ಇನ್ನೂ ಮೂರ್ತವಾಗಬೇಕಾದ ಅಗತ್ಯವಿದ್ದರೂ, ಪರಿಣಾಮಕ್ಕೆ ಬಾಧೆಯಿಲ್ಲದಂತೆ ಅಲ್ಲಿ ಪದ್ಯಶಿಲ್ಪ ರೂಪಿತವಾಗಿದೆ. ಕೆಲವು ಸಂಸ್ಥೆಗಳ ಅಧಃಪತನವಂತೂ ಕವಿಯ ಸಹನೆಯನ್ನು ಕೆಣಕಿದ್ದು, ವಿಶ್ವವಿದ್ಯಾಲಯಗಳು 'ಹಳ್ಳಿಯ ದನಗಳಿಗೂ/ಶಿಕ್ಷಕ ಜನಗಳಿಗೂ/ ಇದು ಹುಲ್ಲುಗಾವಲು' ಎನಿಸಿವೆ. ಗುರುಕರುಣೆ, ತಪ್ಪು ಹೆಜ್ಜೆ, ಮಧ್ಯಬಿಂದು ಸಾಮ್ರಾಜ್ಯದಂತಹ ಮೂರು ನಾಲ್ಕು ಕವಿತೆಗಳು ಬದುಕಿನ ಯಥಾರ್ಥತೆ, ಕಾಲಗಳ ಬಗೆಗೆ ಆಳವಾಗಿ ಚಿಂತಿಸಲು ಕರೆ ನೀಡುತ್ತವೆ. ಅಲ್ಲಿ ಕವಿತೆಗಳು ಲಘು ವಿಡಂಬನೆಯಿಂದ, ವ್ಯಕ್ತಿಕೇಂದ್ರ ಆಲೋಚನೆಯಿಂದ ಪಾರಾಗಿ ಜಿಜ್ಞಾಸೆಗೆ ಸಾಗುತ್ತವೆ.

ಈ ಸಂಕಲನದಲ್ಲಿ ಭಾವಪುಷ್ಟಿ ಮತ್ತು ಕಲಾತ್ಮಕತೆಗಳಿಂದ ಗಮನ ಸೆಳೆಯುವ ಕವಿತೆಗಳೆಂದರೆ, ನೆಲಮುಗಿಲು, ಕೂಸು, ಮಹಾಶ್ವೇತೆ ಕವನಗಳು. ಭಾವಗೀತೆಯ ನಿರ್ಭರತೆ, ಅಭಿವ್ಯಕ್ತಿ, ಅಂತರ್ ಲಯಗಳಿಂದ 'ನೆಲಮುಗಿಲು' ಅರ್ಥಪೂರ್ಣವಾಗಿದೆ.

ಮೈಚಾಚಿದೆ ನಸುನಾಚಿದೆ
ಈ ಪಾರ್ವತಿ ನೆಲವು
ಕೈ ಬಾಚಿದೆ, ಎದೆಗವಚಿದೆ
ಆ ಪರಶಿವ ನಭವು
ಆಕಾಶದ ಆಲಿಂಗನದಲಿ
ಮಲಗಿದೆ, ಈ ನೆಲವು
ಭೋಗವಲ್ಲವಿದು, ಯೋಗದ ನಿಲುವು
ನಾವೆಲ್ಲ ಈ ದಾಂಪತ್ಯದ ಫಲವು.

ಪ್ರಕೃತಿ ತತ್ವದ ರಹಸ್ಯ ಹುಡುಕುತ್ತ, ನಿಸರ್ಗ ಮತ್ತು ಮನುಕುಲದ ಸಂಬಂಧ ಬಿಚ್ಚಿಡುವ ರೀತಿ ಗಮನಿಸುವ ಹಾಗಿದೆ. 'ಮಹಾಶ್ವೇತೆ' ಕವಿತೆ ಕನ್ನಡದ ದಾಂಪತ್ಯ ಪ್ರಣಯ ಗೀತೆಗಳ ಸಾಲಿನಲ್ಲಿ ನಿಲ್ಲುವ ರಚನೆಯಾಗಿದ್ದು, ಸಖೀಗೀತೆಯ ಕಥನ ಮಧುರ ಮೋಹಕವಾಗಿದೆ. ಕವಿತೆಯ ಕೊನೆಯಲ್ಲಿ ಬರುವ 'ಸೌಂದರ್ಯ ಸಾಕಾರ!/ ಆನಂದ ಅವತಾರ!/ಹಾಲಿನಂತನ ಹೆಣ್ಣು/ಹಾಲುಂಡು ಮೇಲುಂಬರೆ?/' ಯು ಹಲವು ಅರ್ಥಸ್ತರಗಳಲ್ಲಿ ವಿಸ್ತಾರವಾಗುತ್ತದೆ. ಇಲ್ಲಿಯ ಕವಿತೆಗಳು ಸ್ವಕಥನದಲ್ಲಿ ಹೆಚ್ಚು ರೂಪಗೊಂಡಿದ್ದು, ಸಾಮಾಜಿಕ ಚಿಂತನೆಯ ಕೆಲವು ಕವಿತೆಗಳಿಂದ ಸಹೃದಯರನ್ನ ಸೆಳೆಯುತ್ತವೆ.

ಕುವೆಂಪು, ಬೇಂದ್ರೆ, ಕಣವಿ ಮುಂತಾದ ಕವಿಗಳ ಪ್ರಭಾವ, ಪ್ರೇರಣೆಗಳನ್ನು ಅಲ್ಲಲ್ಲಿ ಗುರುತಿಸಲು ಸಾಧ್ಯವಿದ್ದರೂ, ಎಲ್ಲಿಯೂ ಅದು ಅನುಕರಣೆ ಆಗುವುದಿಲ್ಲ.

ಡಾ. ಎಂ. ಎಂ. ಕಲಬುರ್ಗಿಯವರ ಸೃಜನ ಪ್ರತಿಭೆಯ ಒಂದು ಮುಖ ಈ ಎರಡೂ ಕವನ ಸಂಕಲನಗಳಿಂದ ತಿಳಿದು ಬರುವುದರಿಂದ, ಸಂಶೋಧಕರು ವಿಚಾರವಾದಿಗಳು ಎಂದು ಪ್ರಸಿದ್ಧರಾದ ಅವರನ್ನು ಇನ್ನೊಂದು ತೆರನಲ್ಲಿ ಕಾಣಬಹುದಾದ ಸಾಧ್ಯತೆಯಿದೆ. ಈ ಕವನಗಳ ವಸ್ತು, ನಿತ್ಯದ ವೃತ್ತಿ ಬದುಕಿನ ಸಿಹಿ ಕಹಿಗೆ ಸಂಬಂಧಪಡುತ್ತವೆ; ಕೆಲವು ಸಾಮಾಜಿಕ ಚಿಂತನೆಗೆ ವ್ಯಾಪಿಸಿವೆ. ವಿಶೇಷ ಎಂದರೆ ಎರಡೂ ಸಂಕಲನಗಳ ಶೀರ್ಷಿಕೆಯಲ್ಲಿ, ಕವನಗಳ ಶಬ್ದಶಿಲ್ಪ, ಭಾವಶಿಲ್ಪಗಳಲ್ಲಿ ಶರಣರ ವಚನಗಳ ಪ್ರಭಾವ ಗಾಢವಾಗಿವೆ. ಸತ್ಯದ ಹುಡುಕಾಟ, ಅದರಲ್ಲಿ ನಿಷ್ಠೆ, ಆದರ್ಶಕ್ಕೆ ಸಮರ್ಪಿತವಾದುದು, ಬೆಳಕಿನತ್ತ ಪಯಣಗಳ ಆಶಯದಲ್ಲಿ ಕವಿತೆಗಳು ಬೆಳೆಯುತ್ತವೆ. ನೈತಿಕ ಮತ್ತು ಆದರ್ಶಮಯ ನೆಲೆಗಟ್ಟಿನ ಮೇಲೆ ನಿಂತು ಕವಿ ಕೆಡಕುಗಳನ್ನು ತೆರೆದಿಡುತ್ತಾನೆ. ಸಾಮಾಜಿಕ ಕ್ಷೇಮವೆಂಬುದು ವ್ಯಕ್ತಿ ಕ್ಷೇಮದಿಂದ ರೂಪಿತವಾಗುವುದರಿಂದ, ಸಜ್ಜನರು ನಿರಾತಂಕವಾಗಿ ಬದುಕುವ ವಾತಾವರಣ ಅಗತ್ಯವೆಂಬ ಧ್ವನಿಯು ಇಲ್ಲಿ ಅಂತರ್ಗತವಾಗಿದೆ. ಡಾ. ಕಲಬುರ್ಗಿ ಅವರ ಧ್ಯೇಯ, ಆದರ್ಶ, ಆಸೆ, ನಿರಾಸೆ, ಹೋರಾಟ, ಸಂಘರ್ಷ, ಕನಸುಗಳನ್ನು ಅರಿಯುವಲ್ಲಿ ಈ ಕವಿತೆಗಳು ಮಹತ್ವದ ಆಕರಗಳಾಗುತ್ತವೆ.

೨

ಡಾ. ಎಂ. ಎಂ. ಕಲಬುರ್ಗಿಯವರು ಕನ್ನಡದ ಪ್ರಮುಖ ಸಂಶೋಧಕರಾಗಿ ಗುರುತಿಸಿಕೊಂಡ ಮೇಲೆ, ಅಚ್ಚರಿ ಎನ್ನುವಂತೆ ಮೂರು ನಾಟಕಗಳನ್ನು ರಚಿಸಿದ್ದಾರೆ. ಸಾಮಾಜಿಕ, ಐತಿಹಾಸಿಕ ವೈರುಧ್ಯಗಳನ್ನು, ಅರ್ಥೈಸುವಿಕೆಯನ್ನು ಅವರು ತಮ್ಮದೇ ತೆರನಲ್ಲಿ ಗ್ರಹಿಸುವ ಫಲವಾಗಿ ಈ ಕೃತಿಗಳು ಹೊರಬಂದಿವೆ. ಅವು;

೧. ಕೆಟ್ಟಿತ್ತು ಕಲ್ಯಾಣ

೨. ಖರೇ ಖರೇ ಸಂಗ್ಯಾ ಬಾಳ್ಯಾ

೩. ಖರೇ ಖರೇ ಕಿತ್ತೂರು ಬಂಡಾಯ

ಕನ್ನಡದ ಆಧುನಿಕ ನಾಟಕಗಳು, ಸಾಮಾಜಿಕ ವಿಷಮತೆಯನ್ನು ವಿಭಿನ್ನ ಪ್ರಯೋಗಶೀಲತೆಯ ಸಾಧ್ಯತೆಗಳಲ್ಲಿ ಅಭಿವ್ಯಕ್ತಿಸುತ್ತಿರುವಾಗ, ರಂಗಚಟುವಟಿಕೆಗಳು ಜಾಗತಿಕ ಪ್ರಭಾವ, ಪ್ರೇರಣೆಗಳಲ್ಲಿ ಹೆಚ್ಚು ಸೂಕ್ಷ್ಮತೆ, ಧ್ವನಿಪೂರ್ಣತೆ ಪಡೆಯುತ್ತಿರುವಾಗ ಈ ನಾಟಕಗಳು ಹೊರಬಂದಿವೆ. ಆದರೆ ತಂತ್ರ, ರಂಗಪರಿಕರ, ನಾಟಕದ ಅಭಿನಯ ವಿಚಾರಗಳಿಗೆ ಹೆಚ್ಚು ಆದ್ಯತೆ ನೀಡದೆ, ಸಂಶೋಧನೆಯ ಒಂದು ಹಂತದಲ್ಲಿ ಹೊಳೆದ, ತೋರಿಬಂದ 'ನಿಜ ಇತಿಹಾಸ'ವನ್ನು ಬಯಲಿಗೆ ತರುವ ಉತ್ಸಾಹ, ಕಳಕಳಿಯಲ್ಲಿ ಇಲ್ಲಿಯ ಮೂರೂ ನಾಟಕಗಳು ರೂಪ ಪಡೆದಿವೆ.

ವಚನ ಸಾಹಿತ್ಯ ಮತ್ತು ವಚನಕಾರರನ್ನು ದೀರ್ಘಕಾಲದಿಂದ ಅಧ್ಯಯನ-ಸಂಶೋಧನೆಗೆ ಒಳಪಡಿಸಿದ್ದ ಡಾ. ಕಲಬುರ್ಗಿಯವರು, ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಏಕಮೇವಾದ್ವಿತೀಯ ಕ್ರಾಂತಿಯನ್ನು ಆಧರಿಸಿ 'ಕೆಟ್ಟಿತ್ತು ಕಲ್ಯಾಣ' ಹೊರತಂದಿದ್ದಾರೆ. ೧೯೮೫ ರಲ್ಲಿ ಮೊದಲ ಸಲ ಪ್ರಕಟವಾದ ಈ ನಾಟಕ ನಾಲ್ವತ್ತು ದೃಶ್ಯಗಳಲ್ಲಿ ತುಂಬ ಚುರುಕಾಗಿ ಬಿತ್ತರವಾಗಿದೆ.

"ಬಸವಣ್ಣನವರ ಆತ್ಮತತ್ವಜ್ಞಾನವನ್ನು ಬಿಡದೆ, ಸಮಾಜ ತತ್ವಜ್ಞಾನವನ್ನು ಆಧರಿಸಿ ಬರೆದ ನಾಟಕವಿದು. ಅವರ ಸಮಗ್ರ ವ್ಯಕ್ತಿತ್ವಕ್ಕೆ ಬಿಡಿಸಿದ ದೃಶ್ಯರೂಪದ ವ್ಯಾಖ್ಯಾನವಿದು. ಸ್ಥಾವರ ಪರಿಸರ, ಅದಕ್ಕೆ ಬಸವಣ್ಣ ತೋರಿದ ಪ್ರತಿಕ್ರಿಯೆ; ಅದರಿಂದ ಆಕಾರಗೊಂಡ ಜಂಗಮ ಪರಿಸರ, ಇದನ್ನು ಸ್ಥಾವರ ಪರಿಸರ ನಾಶಮಾಡಿದ ರೀತಿ–ಇಷ್ಟು ಈ ನಾಟಕದ ಮೈ, ಮನಸ್ಸು." ಎಂದು ಅರಿಕೆಯಲ್ಲಿ ನಾಟಕಕಾರರು ಹೇಳಿರುವುದರಿಂದ, ಅವರ ಆಶಯ ಸ್ಪಷ್ಟವಾಗುತ್ತದೆ. ಬಾಗೇವಾಡಿಯಲ್ಲಿ ಬಸವಣ್ಣ ಅಸಮಾನತೆಯ, ಲಿಂಗಭೇದವಿರುವ, ಶಾಸ್ತ್ರಮೂಢ ಜನ್ನಿವಾರವನ್ನು ಕಿತ್ತೆಸೆದು, ಸಂಪ್ರದಾಯದ ಹೊಸ್ತಿಲು ದಾಟಿ, ಸತ್ಯವನ್ನು ಬದುಕಿಸಲು ಮನೆಯವರನ್ನು, ಮತದವರನ್ನು ವಿರೋಧಿಸಿ ಹೊರಬರುವ ದೃಶ್ಯದಿಂದ ನಾಟಕ ಆರಂಭವಾಗುತ್ತದೆ. ಬಸವಣ್ಣನ ಈ ವರ್ತನೆಗೆ ಕುಪಿತರಾದ ಅಗ್ರಹಾರದ ಪುರೋಹಿತರು ವಿಚಾರಣೆ ನಡೆಸುವುದು. ಮನೆಯವರಿಗೆ ಬಹಿಷ್ಕಾರ ಹಾಕುವುದು ಸಹಜವೆಂಬಂತೆ ಬಂದಿದೆ.

ಅಗ್ರಹಾರ ಸಂಸ್ಕೃತಿಯಲ್ಲಿ ಜೀವವಿರೋಧಿ, ಮನುಷ್ಯ ವಿರೋಧಿ ಗುಣಗಳಿರುವುದರಿಂದ ಅದನ್ನು ತಿರಸ್ಕರಿಸಿ, ತುಸು ಉದಾರವಾದ ದೇವಾಲಯ ಸಂಸ್ಕೃತಿಯ ಕೂಡಲಸಂಗಮಕ್ಕೆ ಬರುವ ಬಸವಣ್ಣ, ಅಲ್ಲಿರುವ ಯಜ್ಞ–ಯಾಗ–ಬಲಿಗಳನ್ನು, ಸ್ಥಾವರ ಪೂಜಾದಿಗಳನ್ನು ಕಂಡು 'ಅಲ್ಲಿಯ ಬ್ರಾಹ್ಮಣರಂತೆ ಇಲ್ಲಿಯ ಶೈವರ ಬುದ್ಧಿಯೂ ಕಪ್ಪಾಗಿದೆ' ಎಂದು ಅಳಲುತ್ತಾನೆ. ಹರಕೆಗಾಗಿ ತಂದಿದ್ದ ಬಲಿಪ್ರಾಣಿಯನ್ನು, ಬ್ರಾಹ್ಮಣರ ವಿರೋಧದ ನಡುವೆ ಉಳಿಸಿದ್ದು, ಪ್ರತಿಯಾಗಿ ಅವರಿಂದ ಏಟು ತಿಂದದ್ದು, ಸ್ಥಾವರ ಲಿಂಗದ ಎದುರು ಇಷ್ಟಲಿಂಗ ಪೂಜಿಸಿದ್ದು, ಹಿಂಸಾಮತಿಗಳಾದವರಿಂದ ಹಲ್ಲೆಗೆ ಒಳಗಾದದ್ದು, ಸ್ಥಾನಾಚಾರ್ಯರ ಅವ್ಯವಹಾರಗಳಿಂದ ಬಸವಣ್ಣ ರೋಸಿ ಹೋದುದು, ಇಲ್ಲಿಯ ವಸ್ತುವಿನ ಬೆಳವಣಿಗೆಯಲ್ಲಿ ಮುಖ್ಯವಾಗುತ್ತದೆ. ಸಾರ್ವಜನಿಕರ ಹಣದಿಂದ ಬೆಂಬಲದಿಂದ ನಡೆಯುವ ಕಾಳಾಮುಖರ, ಶೈವರ ಮಠಗಳು ಕುಟುಂಬದ ಸುಖ, ಸ್ವಾರ್ಥಗಳಿಗೆ ಬಲಿಯಾಗಿ ಒಂದು ಮನೆತನದವರ ಆಸ್ತಿಯಾದುದನ್ನು, ಧರ್ಮದ ಹೆಸರಲ್ಲಿ ಸಮಾಜದ ಶೋಷಣೆಯಾದುದನ್ನು ಪ್ರತಿಭಟಿಸಿ, ಬಸವಣ್ಣ ಕೂಡಲಸಂಗಮ ತೊರೆದು, ಈಶಾನ್ಯ ಗುರುವಿನ ಸಲಹೆಯಂತೆ ಬಿಜ್ಜಳನಲ್ಲಿಗೆ ತೆರಳುವುದು, ಎರಡನೆಯ ಹಂತವೆಂದು ಬಸವಣ್ಣನವರ ಬದುಕಿನಲ್ಲಿ ಗುರುತಿಸಲಾಗಿದೆ.

ಬಿಜ್ಜಳನಲ್ಲಿ ಮಹಾಗಣಾಧಿಕಾರಿಯಾಗಿ ಕೆಲಸ ಆರಂಭಿಸಿದ ಬಸವಣ್ಣ ಸತ್ಯನಿಷ್ಠೆ, ಪ್ರಾಮಾಣಿಕತೆಗಳಿಂದ ಭಂಡಾರವನ್ನು, ಆಡಳಿತವನ್ನು ಸರಿದಾರಿಗೆ ತರುವ ಚಿತ್ರಣ ಒಂದೆರಡು ದೃಶ್ಯಗಳಲ್ಲಿದ್ದು, ಮುಂದೆ ಆತ ತನ್ನಯ ವ್ಯಕ್ತಿತ್ವ, ತತ್ವಾದರ್ಶಗಳಿಂದ ಕಲ್ಯಾಣವನ್ನು ಆತ್ಮಕಲ್ಯಾಣದತ್ತ ಮುನ್ನಡೆಸುತ್ತಾನೆ. ಜನರ ಅಭಿವೃದ್ಧಿಗಾಗಿ, ರಾಜ ಭಂಡಾರವನ್ನು ವಿನಿಯೋಗಿಸುವಾಗ ಆತ ಹೇಳುವುದಿಂತು;"ರಾಜ್ಯ ಭಂಡಾರ ರಾಜನದಲ್ಲ, ಪ್ರಜೆಗಳಾದ ನಿಮ್ಮದು. ನಿಮಗರಿಯದಂತೆ ನೀವದನ್ನು ಬೆಳೆಸದ್ದೀರಿ. ಹೀಗಾಗಿ ನಾಳೆ ಬಂದು ಮನೆಯ ನಿವೇಶನ, ಹೊಲ ಪಡೆಯಿರಿ, ವೃತ್ತಿ ಉಪಕರಣಗಳನ್ನು ಒಯ್ಯಿರಿ." ಇದು ಜನಪರವಾದ ನಿಲುವಾಗಿ ಮಹತ್ವವಾಗಿದೆ. ಪಶುರಕ್ಷಣೆಗಾಗಿ ಪ್ರಾಣ ನೀಡಬೇಕೆಂಬ ನಂಬಿಕೆಯನ್ನು ಪ್ರಶ್ನಿಸುವುದು, ಜಂಗಮ ತತ್ವ ಅಧಿಕವೆನ್ನುವುದು, ದುಡಿಮೆಯಲ್ಲಿ ಮೇಲು ಕೀಳು ಇಲ್ಲವೆನ್ನುವುದು, ಎಲ್ಲರನ್ನು ಸಮಾನವಾಗಿ ಕಾಣುವುದು, ಹೀಗೆ ಬಸವಣ್ಣನು ತತ್ವಗಳನ್ನು ಸರಳವಾಗಿ ಜನಮನದಲ್ಲಿ ಬಿಂಬಿಸುವ ಕೆಲವು ದೃಶ್ಯಗಳಿವೆ. ಜನಪರವಾಗಿ ಕೆಲಸ ಮಾಡುವ, ಆಡಳಿತವನ್ನು ದಕ್ಷವಾಗಿಸುವ, ಅನ್ಯಾಯ ಶೋಷಣೆಗಳನ್ನು ಮಟ್ಟಹಾಕುವ ಬಸವಣ್ಣನ ನಿಲುವುಗಳು ಪಟ್ಟಭದ್ರರಲ್ಲಿ, ಪುರೋಹಿತರಲ್ಲಿ, ಕಂದಾಚಾರದ ಮೂಢರಲ್ಲಿ ಹೇಗೆ ಅಸಹನೆ ಹುಟ್ಟುಹಾಕಿದವು ಮತ್ತು ಅವರೆಲ್ಲ

ಹೇಗೆ ಅದರ ವಿರೋಧವಾಗಿ ಸಂಚು ರೂಪಿಸಿದರು ಎಂಬುದನ್ನು ನಾಟಕ ಎಳೆ ಎಳೆಯಾಗಿ ಚಿತ್ರಿಸುತ್ತದೆ. ಘಟ್ಟಿವಾಳಯ್ಯನನ್ನು ಜಾತಿ ಜಂಗಮರು ಅವಮಾನಿಸಿ ಹಲ್ಲೆ ಮಾಡುವುದು, ವೇಳೆವಾಳಿಯನ್ನು ನಿವಾರಿಸಿ, ಪ್ರತ್ಯೇಕ ಜಾತಿಯಾಧಾರಿತ ಬಾವಿಗಳನ್ನು ಬಸವಣ್ಣ ಮುಕ್ತಗೊಳಿಸಿದಾಗ, ಸಂಬೋಳಿ ಪದ್ಧತಿ ವಿರೋಧಿಸಿದಾಗ ಕೇಶವಭಟ್ಟ, ನಾರಣಭಟ್ಟರು ರಾಜನಲ್ಲಿ ದೂರು ನೀಡುವುದು ಆ ಸಂಚಿನ ಭಾಗವಾಗಿವೆ. ಸಂಘರ್ಷ ಇದರಿಂದ ನಾಟಕದಲ್ಲಿ ತೀವ್ರಗೊಳ್ಳುತ್ತದೆ. ಕಾಯಕ, ದಾಸೋಹ ತತ್ವಗಳ ಅನುಷ್ಠಾನ ಮತ್ತು ಜಾತಿ, ವರ್ಗ, ಲಿಂಗ ತಾರತಮ್ಯ ನಿವಾರಣೆಗೆ ಬಸವಣ್ಣ ನಡೆಸಿದ ಪ್ರಯತ್ನಗಳು ನಿದರ್ಶನಪೂರ್ವಕ ಇಲ್ಲಿ ಚಿತ್ರಣವಾಗಿವೆ. ಮಧುವರಸ ಹರಳಯ್ಯನವರ ಮಕ್ಕಳ ವಿವಾಹ ಕಾರಣವಾಗಿ, ಪಟ್ಟಭದ್ರರು, ಪುರೋಹಿತರು ಪ್ರಭುತ್ವವನ್ನು ದುರುಪಯೋಗಪಡಿಸಿಕೊಂಡು ಬಸವಣ್ಣನ ಕನಸು, ಆದರ್ಶಗಳನ್ನು ಮಣ್ಣುಪಾಲು ಮಾಡಿದ ಬಗೆ, ವಚನ ಸಾಹಿತ್ಯಕ್ಕೆ ಅನುಭವ ಮಂಟಪಕ್ಕೆ ದುರ್ಗತಿ ಬಂದ ಬಗೆಗಳು ಇಲ್ಲಿ ಸ್ಫುಟವಾಗಿ ಚಿತ್ರಣಗೊಂಡಿವೆ. ಬಸವಣ್ಣನ ದೇಶ ಬಹಿಷ್ಕಾರ, ಬಿಜ್ಜಳನ ಕೊಲೆಯಲ್ಲಿ ನಾಟಕವು ದುರಂತವಾಗಿ ಮುಕ್ತಾಯವಾಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ಈ ನಾಟಕದಲ್ಲಿ ಬಸವಣ್ಣನನ್ನು ಕೇಂದ್ರವಾಗಿಸಿದ್ದರೂ, ಇಡೀ ನಾಟಕದಲ್ಲಿ ಬಸವತತ್ವಗಳ ಪೋಷಣೆ, ಅವುಗಳ ನೂತನತೆ, ಅವುಗಳಿಂದಾದ ಪ್ರಭಾವ, ಪರಿಣಾಮಗಳನ್ನು ಚಿತ್ರಿಸುವಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಮೊದಲಿನ ಹತ್ತು ದೃಶ್ಯಗಳಲ್ಲಿ ಬಸವಣ್ಣನ ವ್ಯಕ್ತಿತ್ವದ ಚಿತ್ರಣಕ್ಕೆ ಇರುವ ಆದ್ಯತೆ ಅದರಿಂದಾಗಿ ಮುಂದೆ ಬದಲಾಗುತ್ತದೆ. ನಾಟಕದ ಉದ್ದಕ್ಕೂ ಹಿನ್ನೆಲೆಯಲ್ಲಿ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ತತ್ವ ಹಲವು ಬಾರಿ ಕೇಳಿಸುತ್ತದೆ. 'ಜಂಗಮ' ಬಹುದೊಡ್ಡ ತತ್ವ, ಅದರಿಂದ ವ್ಯಕ್ತಿ, ಸಮಾಜಗಳು ಎಲ್ಲ ಬಗೆಯಲ್ಲಿ ಎತ್ತರಕ್ಕೇರಬಹುದು, ಏನೆಲ್ಲ ಸಾಧಿಸಬಹುದು ಎಂಬ ಧ್ವನಿ ನಾಟಕದಲ್ಲಿದೆ. ತಲೆಮಾರುಗಳಿಂದ ಬೆಳೆದು ಬಂದ ವಿಧಿಕ್ರಿಯೆ. ನಂಬುಗೆ, ಆಚರಣೆಗಳು ಅರ್ಥ ಕಳೆದುಕೊಂಡಾಗ ಜೀವವಿರೋಧಿ ಆಗಿ ಬಿಡುವುದನ್ನು, ಅವುಗಳಿಂದ ಪುರೋಹಿತರು ಜನರನ್ನು ಸುಲಭದಲ್ಲಿ ವಂಚಿಸುವುದನ್ನು ನಾಟಕ ಎತ್ತಿ ತೋರುತ್ತದೆ. ಸಮಾಜದಲ್ಲಿ ಕಾಯಕ ದಾಸೋಹಗಳು ಹೊಸ ಶಕ್ತಿ, ಹೊಸ ಚೈತನ್ಯ ತರುವುದನ್ನು, ವೃತ್ತಿಗಳೆಲ್ಲ ಸಮಾನ ಗೌರವಕ್ಕೆ ಪಾತ್ರ ಎಂಬುದನ್ನು, ರಾಜ, ಅಧಿಕಾರ, ಬೊಕ್ಕಸಗಳು ಜನರ ಹಿತರಕ್ಷಣೆಗೆ ಇರುವುದೇ ಕ್ರಮ ಎಂಬುದನ್ನು ಎತ್ತಿ ತೋರಲಾಗಿದೆ. ವ್ಯಕ್ತಿ, ಸಮುದಾಯಗಳನ್ನು ಪುನರ್ ನಿರ್ಮಿಸುವ, ಆ ಮೂಲಕ ನಿಜವಾದ ಜಂಗಮ ಕಲ್ಯಾಣ ಕಟ್ಟಬೇಕೆಂಬ ಬಸವಣ್ಣನ ಮಹತ್ವಾಕಾಂಕ್ಷೆ, ಸ್ವಾರ್ಥಿಗಳ ಅಲ್ಪಮತಿಗಳ, ಚಲನಶೀಲತೆಯಲ್ಲಿ ನಂಬುಗೆ ಇಲ್ಲದವರ ಅಜ್ಞಾನದಿಂದಾಗಿ ವಿಫಲವಾಗಿ ಕಲ್ಯಾಣಕ್ಕೆ ಕೆಡಕಾಗುತ್ತದೆ; ಸ್ಥಾವರ ತಾತ್ಕಾಲಿಕವಾಗಿ ವಿಜಯದ ಭ್ರಮೆಯಲ್ಲಿ ತೇಲುತ್ತದೆ.

ನಾಟಕದ ದೃಶ್ಯಗಳ ಜೋಡಣೆ, ಕಥನದ ಪೋಷಣೆಯಲ್ಲಿ ಸಾಂಗತ್ಯವಿದೆ; ಸಾತತ್ಯವಿದೆ. ಸಂಭಾಷಣೆಗಳು ತ್ವರಿತಗತಿಯಲ್ಲಿ, ಕಿರಿದಾಗಿ ಬಂದಿದ್ದು, ಅವುಗಳಲ್ಲಿ ಸಾರವಿದೆ. ಸತ್ವವಿದೆ. ಬಿಜ್ಜಳ–ಬಸವಣ್ಣ, ಬಸವಣ್ಣ ದಲಿತರ ನಡುವಿನ ಸಂವಾದದಲ್ಲಿ ಅವರವರ ವ್ಯಕ್ತಿತ್ವ–ಸ್ವಭಾವಾದಿಗಳು ಚೆನ್ನಾಗಿ ನಿರೂಪಿತವಾಗಿವೆ. ವರ್ಣನಾಶದ ಬಗ್ಗೆ ಆತುರ ಸಲ್ಲದು ಎಂದು ಗಂಗಾಂಬಿಕೆ ಹೇಳಿದಾಗ ಬಸವಣ್ಣ "ಬ್ರಾಹ್ಮಣರು ಶ್ರೇಷ್ಠರಲ್ಲ, ಶೂದ್ರರು ಕನಿಷ್ಠರಲ್ಲ, ಇವೆರಡೂ ಕೃತಕ ವಿಚಾರಗಳು. ಇವೆರಡನ್ನೂ ಏಕಕಾಲಕ್ಕೆ ನಾಶ ಮಾಡಿದಾಗಲೆ ಸಮಾಜದಲ್ಲಿ ಸಮಾನತೆ ಬರುವುದು; ಶೋಷಣೆ ತಪ್ಪುವುದು" ಎಂದಿರುವುದು ವಾಸ್ತವವಾಗಿದೆ. ಇದೇ ವಿಚಾರವಾಗಿ ನಾಗಿಮಯ್ಯನ ಮುಂದೆ ಹೇಳುವಾಗ "ಕಲ್ಯಾಣದ ನಕ್ಷೆಯಿಂದ, ಕುಂತಳ ರಾಜ್ಯದ ನಕ್ಷೆಯಿಂದ ಹೊಲಗೇರಿ ಎಂಬ ರೇಖೆಯನ್ನೇ

ಅಳಸಿಹಾಕಬೇಕಾಗಿದೆ." ಎನ್ನುವನು. ಬಸವಣ್ಣನನ್ನು ವಿವಾಹವಾಗಲು ಬಯಸಿದ ನೀಲಾಂಬಿಕೆ, ಅದನ್ನು ಪ್ರಶ್ನಿಸುವ ಬಿಜ್ಜಳನಿಗೆ ತಾರ್ಕಿಕವಾದ ಉತ್ತರ ನೀಡುವಲ್ಲಿ, ಈಶಾನ್ಯ ಗುರುಗಳು ಬಸವಣ್ಣನನ್ನು ಪಶುಪತಿ, ಮಾರ್ಜಾಲಪ್ಪನ ಎದುರು ಸಮರ್ಥಿಸುವಲ್ಲಿ, ಬ್ರಾಹ್ಮಣಶ್ರೇಷ್ಠರು ಬಿಜ್ಜಳನಿಗೆ ಚಾಡಿ ಹೇಳುವಲ್ಲಿ, ಬಸವಣ್ಣ ಸ್ಥಾನಾಚಾರ್ಯರ ವಾದ-ವಿವಾದದಲ್ಲಿ ಸಂಭಾಷಣೆ ಬಿಗಿಯಾಗಿ, ಭಾವದುಂಬಿ ಬಂದಿದೆ. ಅದರಂತೆ ಪಾತ್ರಪೋಷಣೆ, ಸನ್ನಿವೇಶ ನಿರ್ಮಾಣ, ಪಾರಿಸರಿಕ ವಿವರಗಳು ನಾಟಕವನ್ನು ಜೀವಂತವಾಗಿಸುತ್ತವೆ. ಬಸವಣ್ಣನ ಕನಸು, ಶಕ್ತಿಗಳು ಗೊತ್ತಿದ್ದ ಈಶಾನ್ಯರು, ಬಿಜ್ಜಳ ಇಬ್ಬರೂ ಇತ್ತಂಡದಲ್ಲಿ ಬೀಳುವುದು, ಬಿಜ್ಜಳನು ಪುರೋಹಿತರಿಗೆ ಹೆದರುವುದು, ಸತ್ಯವೇನೆಂದು ಗೊತ್ತಿದ್ದರೂ ಅದರ ಪಕ್ಷದಲ್ಲಿ ನಿಲ್ಲಲಾರದೆ ಹೋದುದು, ದ್ವಂದ್ವಗಳನ್ನು ಚೆನ್ನಾಗಿ ಚಿತ್ರಿಸುತ್ತವೆ. ಬಸವಣ್ಣ ಲಿಂಗಸಮಾನತೆ, ವರ್ಗ ಸಮಾನತೆ ಹೋರಾಡಿದಾಗ ಅಸಮಾಧಾನ ತೋರಿದ ಪುರೋಹಿತರು, ಮೇಲುವರ್ಗದವರು ವರ್ಣಸಮಾನತೆಗೆ ಮುಂದಾದಾಗ ಮಾತ್ರ ಬಸವಣ್ಣನನ್ನು ಕ್ಷಮಿಸಲಿಲ್ಲ. ಕುದಿದು ಆಸ್ಫೋಟಿಸಿದು, ಅದೇ ಕಲ್ಯಾಣದ ನಾಶಕ್ಕೆ ಕಾರಣ ಎಂಬುದನ್ನು ಈ ನಾಟಕ ಚೆನ್ನಾಗಿ ಬಿಂಬಿಸುತ್ತದೆ. ಸಮಾನತೆ, ಸರ್ವರ ಹಿತಗಳನ್ನು ಒಂದು ಹಂತದವರೆಗೆ ಎಂದರೆ ಆಂಶಿಕವಾಗಿ ಪುರೋಹಿತಶಾಹಿ, ಪ್ರಭುತ್ವಗಳು ಒಪ್ಪಬಹುದು; ಹೊರತಾಗಿ ಪೂರ್ಣಪ್ರಮಾಣದಲ್ಲಿ, ಇಡಿಯಾಗಿ ಎಂದಿಗೂ ಒಪ್ಪಲಾರವು ಎಂಬ ಸತ್ಯ ಇಲ್ಲಿ ಬಿಂಬಿತವಾಗಿದೆ. ಇದು ಸ್ಥಾವರವಾದಿಗಳ, ಜಂಗಮವಾದಿಗಳ ನಡುವಿನ ಹೋರಾಟವಾಗಿ 'ಕೆಟ್ಟಿತ್ತು ಕಲ್ಯಾಣ'ದಲ್ಲಿ ಪರಿಣಾಮಕಾರಿಯಾಗಿ ಬಂದಿದೆ. ಡಾ. ಕಲಬುರ್ಗಿ ಅವರು ದೀರ್ಘಕಾಲದಿಂದ ಬಸವಣ್ಣನವರ ಬಗೆಗೆ, ವಚನಕಾರರ ಬಗೆಗೆ ಸಂಶೋಧನೆ ಕೈಕೊಂಡು, ಹೊಸ ಸಂಗತಿಗಳನ್ನು ಬಯಲಿಗೆ ತಂದಿದ್ದಾರೆ. ಅವುಗಳ ಫಲಿತಗಳು ನಾಟಕವನ್ನೂ ಪ್ರಭಾವಿಸಿವೆ. ಅಕ್ಕನಾಗಮ್ಮ ಬಸವಣ್ಣನವರ ತಂಗಿಯಾಗಿದ್ದಳು. ಬಿಜ್ಜಳ ಶೈವನಾಗಿದ್ದ, ನೀಲಾಂಬಿಕೆ ಬಿಜ್ಜಳನ ತಂಗಿಯಾಗಿದ್ದಳು, ಶೈವ ಸ್ಥಾನಾಚಾರ್ಯರು ಬಸವಣ್ಣನ ಕ್ರಾಂತಿಕಾರಕ ಬದಲಾವಣೆಗಳಿಗೆ ಪ್ರತಿರೋಧ ತೋರಿದರು, ಬಿಜ್ಜಳನನ್ನು ಜಗದೇವ, ಮಲ್ಲಿಬೊಮ್ಮಣ್ಣರು ಕೊಲೆ ಮಾಡುತ್ತಾರೆ, ಇದರಲ್ಲಿ ಬಸವಣ್ಣನವರ ಪಾತ್ರವಿರಲಿಲ್ಲ... ಇತ್ಯಾದಿ ಐತಿಹಾಸಿಕ ಅಂಶಗಳು ನಾಟಕದಲ್ಲಿ ಕಾಣಿಸುತ್ತವೆ. ಅನಕೃ, ಲಂಕೇಶ, ಕಾರ್ನಾಡರ ಬಸವಣ್ಣನವರ ನಾಟಕಗಳಿಗಿಂತ ಇಲ್ಲಿ ಭಿನ್ನವಾದ ನಿರೂಪಣೆ, ಆಶಯವಿರುವುದನ್ನು ಕಾಣಬಹುದು. ಇತಿಹಾಸದ ಕಥನವು ವರ್ತಮಾನವನ್ನು ತಟ್ಟುವಂತೆ, ಮುಟ್ಟುವಂತೆ ಮೂಡಿ ಬಂದಿದೆ.

೨೦೦೫ ರಲ್ಲಿ ಪ್ರಕಟವಾದ 'ಖರೇ ಖರೇ ಸಂಗ್ಯಾ-ಬಾಳ್ಯಾ' ನಾಟಕವು, ಇತಿಹಾಸವನ್ನು ಡಾ. ಎಂ. ಎಂ. ಕಲಬುರ್ಗಿಯವರು ಗ್ರಹಿಸುವ ರೀತಿಗೆ, ಇತಿಹಾಸದ ಅಪಚಾರಗಳನ್ನು ಅವರು ಸರಿಪಡಿಸುವ ಬಗೆಗೆ ಕನ್ನಡಿ ಹಿಡಿಯುತ್ತದೆ. ಹತ್ತು ದೃಶ್ಯಗಳ ಈ ನಾಟಕವು ಉತ್ತರಕರ್ನಾಟಕದ ಜನಪದ ರಂಗಭೂಮಿಯಲ್ಲಿ ತುಂಬ ಪ್ರಚುರಗೊಂಡಿರುವ ಪತ್ತಾರ ಮಾಸ್ತರರ 'ಸಂಗ್ಯಾ ಬಾಳ್ಯಾ' ಸಣ್ಣಾಟಕ್ಕೆ ಉಗ್ರ ಪ್ರತಿಕ್ರಿಯೆಯಾಗಿ ಬಂದಿದೆ. ನಾಟಕಕಾರರು ಅರಿಕೆಯಲ್ಲಿ ಹೇಳಿರುವುದನ್ನು ಇದಕ್ಕೆ ಪೂರಕವಾಗಿ ಕಾಣಬಹುದು. "ಸಜ್ಜನರ ಮೇಲೆಯೂ ಸುಳ್ಳು ಶಾಬ್ದಿಕ ಹಲ್ಲೆ ವಿಜ್ರಂಭಿಸುತ್ತಿರುವ ಕಾಲವಿದು. ನೂರು ವರ್ಷಗಳ ಹಿಂದೆ ನಿರಪರಾಧಿ ಗಂಗಿಯ ವಿಷಯದಲ್ಲಿ ಸೃಷ್ಟಿಯಾದ ಇಂಥ ಒಂದು ಹಲ್ಲೆಗೆ ಅಕ್ಷರರೂಪ ಕೊಡಲು ಮಾಡಿದ ಪ್ರಯತ್ನ ಈ ಸಣ್ಣಾಟ." ಬೆಳಗಾವಿ ಜಿಲ್ಲೆಯ ಗ್ರಾಮೀಣರು ಪ್ರಧಾನವಾಗಿ, ವಿಜಯಪುರ ಬಾಗಲಕೋಟ ಧಾರವಾಡ ಗದಗ, ಹಾವೇರಿ ಭಾಗಗಳಲ್ಲಿ ಆಗೀಗ ಸಂಗ್ಯಾ-ಬಾಳ್ಯಾ-ಸಣ್ಣಾಟದ ಪ್ರದರ್ಶನವು ಇಂದಿಗೂ ನಡೆದುಕೊಂಡು ಬರುತ್ತಿದೆ. ಅದೊಂದು

ಶೃಂಗಾರ, ಪ್ರಣಯಗಳ ಕಥಾನಕ. ತರುಣಿ ಪತ್ನಿಯನ್ನು ಬಿಟ್ಟು ಪತಿ ವ್ಯಾಪಾರಕ್ಕಾಗಿ ದೀರ್ಘಕಾಲ ದೂರಕ್ಕೆ ಹೊಗುತ್ತಾನೆ. ಆ ಊರಿನ ತರುಣ ಸಂಗ್ಯಾ ಹಲವು ತಂತ್ರಗಳಿಂದ ಗಂಗಿಯನ್ನು ಒಲಿಸಿಕೊಂಡು ಬಿಡುತ್ತಾನೆ. ಮರಳಿ ಬಂದ ಗಂಡನಿಗೆ ಇದು ತಿಳಿದು ಸೋದರರ ಸಹಾಯದಿಂದ ಸಂಗ್ಯಾನನ್ನು ಕೊಂದು ಜೈಲು ಸೇರುವನು. ಇದು ಮೂಲ ಕಥಾನಕ. ಪ್ರದರ್ಶನದಲ್ಲಿ ಸಂಗ್ಯಾ-ಗಂಗಿಯರ ಪ್ರಣಯ, ಸಲ್ಲಾಪ, ಒಲುಮೆ ಶೃಂಗಾರಗಳು ವಿಸ್ತಾರವಾಗಿ ಬರುತ್ತವೆ.

ಈ ಸಣ್ಣಾಟವನ್ನು ಡಾ. ಎಂ. ಎಂ. ಕಲಬುರ್ಗಿಯವರು ಕ್ಷೇತ್ರಕಾರ್ಯ ಸಂಶೋಧನೆ ಆಧರಿಸಿ ಪರಿಶೀಲಿಸಿದಾಗ, ಅವರಿಗೆ ಕೆಲವು ಹೊಸ ವಿಚಾರಗಳು ತಿಳಿದು ಬರುತ್ತವೆಯಂತೆ. ಈ ನಾಟಕವನ್ನು ಬರೆದ ಪತ್ತಾರ ಮಾಸ್ತರರು, ಅಂದು ಸುಂದರಿಯೂ ಅಪ್ಪಟ ಪತಿವ್ರತೆಯೂ ಆಗಿದ್ದ ಗಂಗೆಗೆ ಮನಸೋತು, ಅವಳನ್ನು ಪಡೆಯಲು ಇನ್ನಿಲ್ಲದ ಪ್ರಯತ್ನ ಮಾಡಿ, ವಿಫಲನಾದನಂತೆ. ಅದರಿಂದ ಅವನು ಸೇಡು ತೀರಿಸಿಕೊಳ್ಳಲು ಕಲ್ಪನೆಯಿಂದ ಸಂಗ್ಯಾ-ಗಂಗಿಯರ ಅನೈತಿಕ ಸಂಬಂಧದ ಕತೆ ಕಟ್ಟಿ ಸಣ್ಣಾಟ ಬರೆದನೆಂದು ಡಾ. ಎಂ. ಎಂ. ಕಲಬುರ್ಗಿ ಪ್ರತಿಪಾದಿಸುತ್ತಾರೆ. "ಗಂಗೆಯನ್ನ ಮೋಹಿಸಿ, ಪ್ರಣಯ ಭಂಗಿತನಾದ ಪತ್ತಾರ ಮಾಸ್ತರ ಸೇಡಿನ ಭಾವನೆಯಿಂದ ಇದನ್ನು ಬರೆದ ಬಗ್ಗೆ ಆ ಪ್ರದೇಶದಲ್ಲಿ ಅಸ್ಪಷ್ಟ ಹೇಳಿಕೆ ಇದೆ. ಅದನ್ನಾಧರಿಸಿ ತಾವು ನಾಟಕ ಬರೆದುದಾಗಿ ಅವರು ಹೇಳಿಕೊಂಡಿದ್ದಾರೆ. ಆದರೆ ಇದಕ್ಕೆ ಯಾವ ಗಟ್ಟಿಯಾದ ಆಧಾರ, ದಾಖಲೆಗಳಿಲ್ಲವೆಂದು ಕೆಲವು ವಿದ್ವಾಂಸರು ಈ ನಾಟಕ ಹೊರಬಂದಾಗ ವಾದಿಸಿರುವುದೂ ಉಂಟು. ಅಸ್ಪಷ್ಟ ಹೇಳಿಕೆ ಆಧರಿಸಿ ಹೀಗೆ ಬರೆಯಬಹುದೆ ಎಂದವರೂ ಉಂಟು. ಡಾ. ಕಲಬುರ್ಗಿಯವರು ಮಾತ್ರ ಸತ್ಯ ಶೋಧನೆ, ಸತ್ಯ ಪ್ರತಿಷ್ಠಾಪನೆಯ ತಮ್ಮ ಪ್ರಯತ್ನವಿದು ಎಂದು ಮುಂದುವರೆಯುತ್ತಾರೆ.

'ಖರೇ ಖರೇ ಸಂಗ್ಯಾ-ಬಾಳ್ಯಾ'ದಲ್ಲಿ ಹತ್ತೊಂಬತ್ತು ದೃಶ್ಯಗಳಿದ್ದು, ಆರಂಭದಲ್ಲಿ ಪ್ರೇಕ್ಷಕರ ಮಧ್ಯದಿಂದ ಎದ್ದುಬರುವ ಮುದುಕನೊಬ್ಬ ಈಗಿರುವ ಸಣ್ಣಾಟ ಸುಳ್ಳಿನ ಕಂತೆಯಾಗಿದ್ದು, ನಿಜವಾದ ಕತೆಯನ್ನು ತಾನು ನಿರೂಪಿಸುವುದಾಗಿ ಹೇಳಿ "ಈಗ ಈ ಸುಳ್ಳಸುಳ್ಳ ಸಂಗ್ಯಾ-ಬಾಳ್ಯಾ ಬಂದ ಮಾಡ್ರಿ, ಇನ್ ಮ್ಯಾಲ ಖರೇ ಖರೇ ಸಂಗ್ಯಾ-ಬಾಳ್ಯಾ ಸುರುಮಾಡ್ರಿ" ಎನ್ನುವ ತಂತ್ರದಿಂದ ನಾಟಕ ಬಿತ್ತರವಾಗಿದೆ. ತುಂಬ ಅನ್ಯೋನ್ಯವಾದ ದಾಂಪತ್ಯ, ಸುಖ ಸಮೃದ್ಧಿ, ಸಂಪತ್ತು ತುಂಬಿರುವ ಕೃಷಿ ಕುಟುಂಬದ ಆರಂಭಿಕ ಪರಿಸರದ ಹಿತಕರವಾದ ಚಿತ್ರಣವು, ಪತ್ತಾರ ಮಾಸ್ತರರ ಪ್ರವೇಶದೊಂದಿಗೆ ವಿಷಾದದತ್ತ ಮುಖಮಾಡುತ್ತದೆ. ಆಭರಣ ಮಾಡಿಸಲು ಪರವ್ವಳೊಡನೆ ಪತ್ತಾರ ರಾಯಪ್ಪನಲ್ಲಿಗೆ ಬರುವ ಗಂಗಾ ನಯನಾಜೂಕು, ಗುಣ ಗಂಭೀರತೆಗಳ ಗೌರವದ ಮಹಿಳೆ ಆಗಿದ್ದಾಳೆ. ಆ ಗರತಿಯನ್ನು ಕಂಡೊಡನೆ ಪತ್ತಾರ ಮಾಸ್ತರ ಕಾಮಪರವಶನಾಗಿ 'ಇವಳ ಭೋಗ ಮಾಡಿದವನ ಜೀವನ ಸಾರ್ಥಕ' ಎಂದು ಭ್ರಮೆಯಲ್ಲಿ ತೇಲುತ್ತಾನೆ. ಏಕಮುಖ ಪ್ರಣಯದಲ್ಲಿ ಮುಂದುವರೆಯುತ್ತಾನೆ. ಆಭರಣಕ್ಕೆ ಅಳತೆ ತೆಗೆದುಕೊಳ್ಳುವ ನೆಪದಲ್ಲಿ, ಗಂಗಾ ಏಕಾಂಗಿಯಾಗಿರುವ ಸಂದರ್ಭದಲ್ಲಿ ಹೇಗಾದರೂ ಮಾಡಿ ಆಕೆಯೊಂದಿಗೆ ಸ್ನೇಹ-ಸಂಪರ್ಕಕ್ಕಾಗಿ ಆತ ಇನ್ನಿಲ್ಲದಂತೆ ಪ್ರಯತ್ನಿಸಿದರೂ, ಅವಳ ಪತಿನಿಷ್ಠೆ, ಸದ್ಗುಣ, ಸದಾಚಾರದ ಎದುರು ಆತ ಭಂಗಿತನಾಗುವನು. 'ನಿನ್ನ ರೂಪಕ ಮಳ್ಳ ಆಗೀನಿ, ನನಗ ಪ್ರೀತಿ ಮಾಡು' ಎಂಬ ಯಾಚನೆಯ ದನಿಯಲ್ಲಿ, 'ನನ್ನ ಒಪ್ಪು, ಇಲ್ಲವಾದರೆ ಜೀವನ ನರಕ ಮಾಡುವೆ' ಎಂಬ ಭಯ, ಭೀತಿಯನ್ನು ಬಿತ್ತುವ ದನಿಯಲ್ಲಿ ಆತ ನೇರವಾಗಿ ಗಂಗಾಳಿಗೆ ಪ್ರೇಮ ಬಿನ್ನಹ ಮಾಡಿದರೂ ಆಕೆ ಅಪಮಾರ್ಗವನ್ನು ತಿರಸ್ಕರಿಸುವಳು. ಮಾನ ಮರ್ಯಾದೆ ಎಲ್ಲಕ್ಕೂ ಮಿಗಿಲು ಎನ್ನುತ್ತಾಳೆ.

ಗಂಗಾಳನ್ನು ಹೇಗಾದರೂ ವಶಪಡಿಸಿಕೊಳ್ಳಲು ಹರಪ್ರಯತ್ನ ಮಾಡುವ ಮಾಸ್ತರನು, ಇದರ ಭಾಗವಾಗಿ ಗಂಗಾಳಿಗೆ ಆಪ್ತಳಾದ ಪರವ್ವಳನ್ನು ಬಂಗಾರದ ಆಮಿಷ ತೋರಿ ತನ್ನತ್ತ ಸೆಳೆದುಕೊಳ್ಳುವನು. ಗಂಗಾ ಮನೆಯಲ್ಲಿ ಏಕಾಂಗಿ ಇರುವಾಗ ಹೋಗಿ ಆಕೆಗೂ ಇಲ್ಲಸಲ್ಲದ ಆಮಿಷ ತೋರಿ, ಅಪವಾದ ಭಯಬಿತ್ತಿ ಪ್ರೀತಿಸಲು ಕೇಳುವನು; ಆಕೆ ಮತ್ತೆ ನಿರಾಕರಿಸುವಳು. ಆಗ ಮಾಸ್ತರ ಹೇಳುವುದು ಹೀಗೆ, "ವಶ ಆಗದಿದ್ದರ ಎಲ್ಲರೂ ನಂಬು ಹಂಗ ಹಾದರ ಅಪವಾದ ಹೊರಸತೀನಿ.... ಕಡಿ ಮಾತ ಹೇಳತೀನಿ. ನೋಡು ಈ ಲೆಕ್ಕಣಿಕೆ, ಒಪ್ಪದಿದ್ದರ ನಿನ್ನ ಮ್ಯಾಲ ಸುಳ್ಳ ಹಾದರ ಹೊರಿಸಿ,ಆಟ ಬರೀತೀನಿ, ನೀ ಸತ್ತರೂ ಜನ ನಿನ್ನ ಮ್ಯಾಲ ಉಗಳೂ ಹಾಂಗ ಮಾಡುತೀನಿ" ಇದರಲ್ಲಿ ಅವನ ಪ್ರೇಮಭಂಗ, ನಿರಾಶೆಗಳೂ ವ್ಯಕ್ತವಾದಂತೆ, ಬರಹವನ್ನು ಭಯೋತ್ಪಾದನೆ, ಅಸತ್ಯ ಚರಿತ್ರೆ, ನಿರ್ಮಾಣಕ್ಕೆ ಬಳಸುವ ಧೂರ್ತತನ ಹುನ್ನಾರಗಳೂ ತಿಳಿಯುತ್ತವೆ. ನಾಟಕದಲ್ಲಿ ಇದು ನಿಜವೂ ಆಗುತ್ತದೆ. ಹಲವು ಪ್ರಯತ್ನಗಳಿಂದ ಗಂಗಾಳನ್ನು ಒಲಿಸಲು ಹೋಗಿ ವಿಫಲನಾದ ಅವನು ಎರಡು ಬಗೆಯಲ್ಲಿ ಸೇಡು ತೀರಿಸಿಕೊಂಡಂತೆ ಇಲ್ಲಿ ಚಿತ್ರಿಸಲಾಗಿದೆ. ಅಣ್ಣ-ತಂಗಿಯಂತಿದ್ದ ಸಂಗ್ಯಾ-ಗಂಗಿಯರ ನಡುವೆ ಅನೈತಿಕ ಸಂಬಂಧದ ಗಾಳಿ ಸುದ್ದಿ ಹರಡಿ, ಕೊಲೆ, ಮನೆತನ ನಾಶ ಮಾನ ಮರ್ಯಾದೆಗಳ ನಾಶಕ್ಕೆ ಅಂದು ಕಾರಣನಾದುದು ಅವನ ಒಂದು ಸಾಧನೆ ಎನಿಸಿದೆ. ಇದು ತಕ್ಷಣದ ಸೇಡಿನ ಕ್ರಮವಾದರೆ, ದೂರಗಾಮಿ ಪರಿಣಾಮವಾಗುವಂತಹ ಇನ್ನೊಂದು ತೆರನಾದ ಕಾರ್ಯವನ್ನಾತ ಮಾಡುತ್ತಾನೆ. ಗಂಗಾಳ ಪವಿತ್ರ ಚರಿತೆಯನ್ನು ಬದಲಾಯಿಸಿ, ಹಾದರದ ಕತೆಯಾಗಿಸಿ ಸಣ್ಣಾಟ ಬರೆದುದು. ಇದಕ್ಕೆ ಪೂರಕವಾದ ದೃಶ್ಯ ನಿರ್ಮಾಣ, ಸಂವಾದಗಳಿಂದ ಕತೆಯನ್ನು ಇಲ್ಲಿ ಬಿಂಬಿಸಲಾಗಿದೆ. ಲೇಖಕರು, ಬರಹಗಾರರು ಅಕ್ಷರಲೋಕವನ್ನು ದುರುಪಯೋಗ ಪಡಿಸಿಕೊಂಡು, ಸುಳ್ಳು ಇತಿಹಾಸ ಸೃಷ್ಟಿಸುವುದನ್ನು ಡಾ. ಕಲಬುರ್ಗಿ ಅವರು ಪ್ರಶ್ನಿಸುವರು.

ಕೆಡಿಸಬ್ಯಾಡರಿ ಕಾಗದ ಗರತಿಯ
ಮಿಂಡ ಮಸಿಯ ಕೆಳಗ।
ತೊಳಿಯಬ್ಯಾಡರಿ ವಿಷದ ಲೇಖನಿ
ಕುಡಿವ ನೀರಿನೊಳಗ॥

ಎಂಬ ಹಿರಿಯ ಆಶಯ ನಾಟಕದಲ್ಲಿದೆ. ಹಾಗಾಗಿ ಜನಪದ ರಂಗಭೂಮಿಯಲ್ಲಿ ಜನಪ್ರಿಯವಾಗಿರುವ ಸಣ್ಣಾಟ 'ಸಂಗ್ಯಾಬಾಳ್ಯಾ' ಅವರಿಗೆ ಒಪ್ಪಿತವಿಲ್ಲ.

ಸಣ್ಣಾಟದ ಕತೆಗೂ, ಈ ನಾಟಕದ ಕತೆಗೂ ಹಲವು ಸಮಾನ ಅಂಶಗಳಿವೆ; ಕೆಲವು ಭಿನ್ನ ವೈಷಮ್ಯಗಳಿವೆ. ಪತ್ತಾರ ಮಾಸ್ತರ ಸಣ್ಣಾಟ ಬರೆದುದನ್ನು, ಅಲ್ಲಿಯ ಎಲ್ಲ ಪಾತ್ರಗಳು ಐತಿಹಾಸಿಕವೆಂಬುದನ್ನು ಸಂಗ್ಯಾನ ಕೊಲೆ, ಈರಪ್ಪನ ಗಲ್ಲು, ಬಸವಂತ, ಇರಪಕ್ಷಿ, ಬಸವಂತರ ಕ್ರೈಸ್ತಧರ್ಮ ಸ್ವೀಕಾರ, ಸಂಗ್ಯಾಬಾಳ್ಯಾರ ಗೆಳೆತನ, ಪರವ್ವನ ದ್ರೋಹಗಳು ಎರಡೂ ಕಡೆಗೆ ಸಮಾನವಾಗಿವೆ. ಸಣ್ಣಾಟ ಸಂಗ್ಯಾ-ಗಂಗಿಯ ವಿಷಮ ಪ್ರಣಯದ ದುರಂತ ಕಥನವಾದರೆ, ಡಾ. ಕಲಬುರ್ಗಿಯವರ ನಾಟಕವು ಪತ್ತಾರ ಮಾಸ್ತರನ ಏಕಮುಖ ಪ್ರಣಯದ (ಕಾಮುಕತೆಯ)ವಿಫಲ ದುರಂತಕಥನವಾಗಿದೆ. ನಾಟಕದ ಮೂಲಕ ಡಾ. ಕಲಬುರ್ಗಿಯವರು ಇತಿಹಾಸವನ್ನು ತಿರುಚಿರುವುದನ್ನು ಪ್ರಶ್ನಿಸಿದ್ದಾರೆ; ಬರಹಗಾರರಿಗೆ ಜವಾಬ್ದಾರಿಯನ್ನು ನಿರ್ದೇಶಿಸುತ್ತಾರೆ. ಇದರಲ್ಲಿಯ ಕೆಲವು ಹಾಡುಗಳನ್ನು ಮೂಲ ಸಣ್ಣಾಟದಿಂದ ಎತ್ತಿಕೊಂಡಿರುವ ನಾಟಕಕಾರರು, ಮತ್ತೆ ಕೆಲವು ಆ ಮಾದರಿಯ ಹಾಡುಗಳನ್ನು

ತಾವೇ ರಚಿಸಿ ಸೇರಿಸಿದ್ದಾರೆ. ಈ ನಾಟಕವನ್ನು ೨೦೦೫ ರ ಮೇ ೧೪ ರಂದು ಮೊದಲ ಸಲ ರಂಗದ ಮೇಲೆ ಪ್ರದರ್ಶಿಸಲಾಯಿತು. ನಂತರ ಇದು ಹಲವು ಪ್ರಯೋಗಗಳನ್ನು ಕಂಡಿದೆ.

ಇದೇ ಬಗೆಯಲ್ಲಿ ಅವರು ಇತಿಹಾಸದ ಅಪಚಾರವನ್ನು ಪ್ರಶ್ನಿಸುವ, ಸರಿಪಡಿಸುವ 'ಖರೇ ಖರೇ ಕಿತ್ತೂರ ಬಂಡಾಯ' ನಾಟಕವನ್ನು ರಚಿಸಿದ್ದು, ಅವರ ಮರಣಾನಂತರ ಅದು ೨೦೧೬ ರಲ್ಲಿ ಪ್ರಕಟಗೊಂಡಿದೆ. ಕಿತ್ತೂರು ಬಂಡಾಯದ ಬಗೆಗೆ ಈವರೆಗೆ ಹಲವು ನಾಟಕಗಳು, ಕಾದಂಬರಿಗಳು, ಸಂಶೋಧನಾ ಕೃತಿಗಳು ಪ್ರಕಟವಾಗಿವೆ. ಸ್ವತಃ ಡಾ. ಎಂ. ಎಂ. ಕಲಬುರ್ಗಿಯವರು ಕಿತ್ತೂರು ಸಂಸ್ಥಾನದ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಮಾಡಿದ್ದಾರೆ. ಈ ಎಲ್ಲ ಸಾಮಗ್ರಿಯಲ್ಲಿ ಕುನ್ನೂರು ಮಲ್ಲಪ್ಪಸೆಟ್ಟಿ ಪಿತೂರಿಗಾರನೂ, ಕಿತ್ತೂರು ಹೋರಾಟಕ್ಕೆ ದ್ರೋಹ ಬಗೆದವನೂ ಎಂದು ಬಿಂಬಿತವಾಗಿರುವುದು ಅವರಿಗೆ ಸಮ್ಮತವಿಲ್ಲ. ಕಿತ್ತೂರ ಬಂಡಾಯದ ನಿಜವಾದ ಪಿತೂರಿಗಾರ ಅವರಾದಿ ವೀರಪ್ಪನೆಂಬುದನ್ನು, ಥ್ಯಾಕರೆ ಕೈಕೆಳಗಿನ ಅಧಿಕಾರಿಯಾಗಿದ್ದ ಸರ್ ವಾಲ್ಟೇರ್ ಎಲಿಯಟ್‌ನು ಬರೆದ 'The insurrection of kittur-1824' ಕೃತಿಯಾಧರಿಸಿ ಈ ನಾಟಕದಲ್ಲಿ ಬಿಂಬಿಸಲಾಗಿದೆ. ಹಲವು ವರ್ಷಗಳಿಂದ ಕಿತ್ತೂರು ಇತಿಹಾಸದ ಬಗೆಗೆ ಇತಿಹಾಸಕಾರರಲ್ಲಿ, ಜನರಲ್ಲಿ ಇದ್ದ ಗ್ರಹಿಕೆಯನ್ನು ನಿವಾರಿಸಲು ಅಂದು ನಡೆದ ನಿಜವಾದ ವಿದ್ಯಮಾನಗಳನ್ನು ಈ ನಾಟಕದಿಂದ ನೀಡುತ್ತಿರುವುದಾಗಿ ಲೇಖಕರು ಆತ್ಮವಿಶ್ವಾಸದಿಂದ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ.

ಕನ್ನಡಿಗರಲ್ಲಿ ಇತಿಹಾಸ ಪ್ರಜ್ಞೆಗಿಂತ ಪುರಾಣ ಪ್ರಜ್ಞೆ ಅಧಿಕ ಮತ್ತು ಇಲ್ಲಿಯ ಇತಿಹಾಸಕಾರರು ಆಕರಗಳನ್ನು ಭಾಗಶಃ ಬಳಸಿಕೊಂಡರು ಎನ್ನುವ ಡಾ. ಕಲಬುರ್ಗಿಯವರು ವಾಲ್ಟರ್ ಎಲಿಯಟ್‌ನನ್ನು ನಂಬಲರ್ಹ ಅಧಿಕಾರಿ, ವಿದ್ವಾಂಸ ಎಂದು ಭಾವಿಸುತ್ತಾರೆ. "ಸರ್ ವಾಲ್ಟರ್ ಎಲಿಯಟ್ ಯುದ್ಧಪೂರ್ವ ಕಾಲದಿಂದಲೂ ಕಿತ್ತೂರು ಸಂಸ್ಥಾನದ ಸಂಪರ್ಕ ಹೊಂದಿದ್ದನು. ಶಿವಲಿಂಗ ರುದ್ರಸರ್ಜನ ಮರಣದ ಬಳಿಕ ಕಿತ್ತೂರು ಗ್ರಾಮದಲ್ಲಿಯೇ ಉಳಿದು ಈ ಸಂಸ್ಥಾನದ ಆಡಳಿತವನ್ನು ನಿರ್ವಹಿಸಿದವನಾಗಿದ್ದನು. ಆಮೇಲೆ ಜರುಗಿದ ಕಿತ್ತೂರಿನ ಮೊದಲ ಯುದ್ಧದಲ್ಲಿ ಸೆರೆಸಿಕ್ಕು, ಎರಡನೆಯ ಯುದ್ಧದವರೆಗೆ ಸುಮಾರು ಒಂದೂವರೆ ತಿಂಗಳು ಕಿತ್ತೂರಿನಲ್ಲಿಯೇ 'ನಗರಬಂದಿ'ಯಾಗಿದ್ದನು. ಹೀಗಾಗಿ ಇವನಿಗೆ ಕಿತ್ತೂರು ಸಂಸ್ಥಾನದ ಕಿತ್ತೂರು ಯುದ್ಧಗಳ ಒಳಹೊರಗುಗಳು ಚೆನ್ನಾಗಿ ಗೊತ್ತಿದ್ದವು."(ಅರಿಕೆ) ಈ ಕಾರಣಗಳಿಂದ ಎಲಿಯಟ್ ಬರವಣಿಗೆಯನ್ನು ಆಧಾರಭೂತವಾಗಿ ಹಿಡಿದು ಅವರಾದಿ ವೀರಪ್ಪ ಪಿತೂರಿಗಾರನೇ ಹೊರತು, ಕುನ್ನೂರು ಮಲ್ಲಪ್ಪನಲ್ಲವೆಂದು ತೀರ್ಮಾನಿಸಿ, ಅದನ್ನು ಬಿಂಬಿಸುವ ನಾಟಕ ರೂಪಿಸುವರು.

ಶಿವಲಿಂಗ ರುದ್ರಸರ್ಜ ಕಾಯಿಲೆ ಮಲಗಿರುವಲ್ಲಿ, ಚೆನ್ನಮ್ಮ ಚಿಂತಾಕ್ರಾಂತಳಾಗಿರುವಲ್ಲಿ ನಾಟಕ ಆರಂಭವಾಗುತ್ತದೆ. ಮಲ್ಲಪ್ಪನವರು, ಗುರುಸಿದ್ಧಪ್ಪನವರು ಸಂಸ್ಥಾನಕ್ಕೆ ನಿಷ್ಠರಾಗಿದ್ದು, ಶಿವಲಿಂಗರುದ್ರಸರ್ಜರ ಉಸಿರುಗಿಂತ ಕ್ಷಣದಲ್ಲಿ ದತ್ತಕ ಏರ್ಪಾಡು ಮಾಡುವರು. ಅವರಾದಿ ವೀರಪ್ಪ ಸೈನಿಕರ ಹಣವನ್ನು ಸೈನಿಕರಿಗೆ ಹಂಚದೆ ಲಪಟಾಯಿಸುತ್ತ, ಸಂಸ್ಥಾನಕ್ಕೆ ಕಷ್ಟಕಾಲದಲ್ಲಿ ಬೆಂಬಲಕ್ಕೆ ನಿಲ್ಲದೆ ಇದ್ದ ಕಾರಣ, ಅವನ ಅಧಿಕಾರ ಮೊಟಕು ಮಾಡಿದ್ದ ಕ್ರಮದಿಂದ ಸೇಡಿಗಾಗಿ ಕಾಯುತ್ತಿದ್ದನು. ದತ್ತಕದ ವಿಚಾರದಲ್ಲಿ ಅವನು ಥ್ಯಾಕರೆಯನ್ನು ಕಂಡು, ಶಿವಲಿಂಗರುದ್ರಸರ್ಜ ದತ್ತಕಪತ್ರಕ್ಕೆ ಸಹಿ ಮಾಡಿಲ್ಲ ಬದಲಾಗಿ ರಾಜನ ಸಾವಿನ ನಂತರ ಮಲ್ಲಪ್ಪ ನಕಲಿ ಸಹಿ ಮಾಡಿದ್ದಾನೆ ಎಂಬ ರಹಸ್ಯ ವಿಚಾರ ತಿಳಿಸಿ, ಉನ್ನತ ಹುದ್ದೆ ನೀಡುವಂತೆ ಕೋರುತ್ತಾನೆ. ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡ ಥ್ಯಾಕರೆ, ಕಿತ್ತೂರಿಗೆ ಬಂದು ಖಜಾನೆಯನ್ನು ಸುಪರ್ದಿಗೆ ಪಡೆದು,

ಮಲ್ಲಪ್ಪನನ್ನು ದಿವಾನ ಹುದ್ದೆಯಿಂದ ತೆಗೆದು ಬಿಡುವನು. ಅದೇ ಹೊತ್ತಿಗೆ ಗ್ರಾಮೀಣ ಸೈನ್ಯದ ಅಧಿಕಾರಿ ಎಂದು ವೀರಪ್ಪನನ್ನು ನಿಯಮಿಸುತ್ತಾನೆ. ಚೆನ್ನಮ್ಮನ ಹತ್ತಿರ ವಿಶ್ವಾಸದಿಂದ ವರ್ತಿಸುವ ವೀರಪ್ಪ ಆಡಳಿತದಲ್ಲಿ, ಸೈನ್ಯದಲ್ಲಿ ಬಿರುಕು ಮೂಡಿಸುವನು. ಅವನು ಒಂದೆಡೆಗೆ ಸ್ವಗತವಾಗಿ ಹೇಳುವ ಮಾತು; "ನಾನು ಪಿತೂರಿಗಾರರನ್ನು ಹುಡುಕಬೇಕಂತೆ, ಕಳ್ಳನನ್ನು ಹುಡುಕಲು ಕಳ್ಳನನ್ನೇ ನೇಮಿಸಿದಂತಾಯಿತು. ದಿವಾನ ಮಲ್ಲಪ್ಪನವರೇ ನನ್ನನ್ನು ಪದಚ್ಯುತಗೊಳಿಸಿದ ಪ್ರತಿಫಲ ಅನುಭವಿಸಿರಿ. ನೀವು ಕೈ ತಪ್ಪಿಸಿದ್ದ ನನ್ನ ಹಳೆಯ ಹುದ್ದೆಯನ್ನು ಮತ್ತೆ ಗಳಿಸಿಕೊಂಡೆ. ಇನ್ನೂ ನೋಡಿರಿ, ನೀವೇ ಪಿತೂರಿಗಾರರೆಂದು ಬ್ರಿಟಿಷರು ನಿರ್ಣಯಿಸಿ, ನಿಮ್ಮನ್ನು ಈಗ ಪದಚ್ಯುತಗೊಳಿಸಿದರೆಂದು ಪ್ರಚಾರ ಮಾಡುತ್ತೇನೆ. ಸಮಯ ನೋಡಿ ನಿಮ್ಮನ್ನು ಸಾರ್ವಜನಿಕವಾಗಿ ಕೊಲ್ಲಿಸುತ್ತೇನೆ" ನಾಟಕದಲ್ಲಿ ಇದು ಎಲ್ಲ ಜರಗುತ್ತದೆ.

ದತ್ತಕದ ವಿಚಾರದಲ್ಲಿ ಕಿತ್ತೂರ ಸಂಸ್ಥಾನದ ನಂಬಿಗಸ್ಥ ಅಧಿಕಾರಿಗಳು ರಾಣಿ ಚೆನ್ನಮ್ಮಳಿಗೆ ನಿಷ್ಠರಾಗಿ ಸಂಸ್ಥಾನದ ಅಧಿಕಾರ, ಸ್ಥಾನಮಾನಗಳು ಅಬಾಧಿತವಾಗಿರಲು ಬಯಸುತ್ತಾರೆ. ವೆಂಕಟರಾವರಂತಹ ಬ್ರಿಟಿಷ್‌ರ ಪ್ರತಿನಿಧಿಗಳು ಇದಕ್ಕೆ ಒಳಗೊಳಗೆ ಅಡೆತಡೆ ಉಂಟು ಮಾಡುತ್ತಾರೆ. ಅವರಾದಿ ವೀರಪ್ಪ ಬ್ರಿಟಿಷರಿಗೆ ಪಿತೂರಿಯಾಗಿ ಅಧಿಕಾರ, ಸಂಪತ್ತಿಗಾಗಿ ಹಪಹಪಿಸುತ್ತಾನೆ. ಇವೆಲ್ಲ ಒಡಕುಗಳ ಲಾಭವನ್ನು ಬ್ರಿಟಿಷರು ಪಡೆಯುತ್ತಾರೆ. ಇದು ನಾಟಕದಲ್ಲಿ ಕ್ರಮವತ್ತಾಗಿ ಬೆಳೆಯುತ್ತ ಹೋಗುತ್ತದೆ. ನಾಟಕದಲ್ಲಿ ರಾಣಿ ಚೆನ್ನಮ್ಮಳ ಪಾತ್ರ ಗೌರವಪೂರ್ವಕವಾಗಿ, ಘನತೆ, ಗಂಭೀರತೆಗಳಿಂದ ಚಿತ್ರಿತವಾಗಿದ್ದರೂ, ನಾಟಕದಲ್ಲಿ ಆ ಪಾತ್ರವು ಕೇಂದ್ರವಾಗಿ ಬರುವುದಿಲ್ಲ. ಕಿತ್ತೂರಿನ ಎರಡು ಯುದ್ಧಗಳು, ಬಂಡಾಯ ವಿಫಲವಾದುದು ಪ್ರಧಾನವಾಗಿ ಚಿತ್ರಿತವಾಗಿದೆ. ಕುನ್ನೂರ ಮಲ್ಲಪ್ಪನವರ ಪಾತ್ರವು ಆದರ್ಶದಲ್ಲಿ ಮೂರ್ತಗೊಂಡಿದೆ. ಅಧಿಕಾರವಿರಲಿ, ಇಲ್ಲದಿರಲಿ ಕಿತ್ತೂರು ಸಂಸ್ಥಾನಕ್ಕೆ ನಿಷ್ಠರಾಗಿ, ರಾಣಿಯ ಮತ್ತು ಪ್ರಜೆಗಳ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸಿ, ಹೊಟ್ಟೆಕಿಚ್ಚು, ಸೇಡು, ಅಪಪ್ರಚಾರಕ್ಕೆ ಬಲಿಯಾಗಿ ಹೊಗುವುದನ್ನು, ದುರಂತ ನಾಯಕನೆಂಬಂತೆ ಚಿತ್ರಿಸಲಾಗಿದೆ. ಚೆನ್ನಮ್ಮ ಒಂದು ಸಲ ಮಲ್ಲಪ್ಪನವರನ್ನು ಕರೆಸಿ, 'ಬ್ರಿಟಿಷ್‌ರಿಂದ ನಿನಗೆ ಅನ್ಯಾಯವಾಗಿ ಅಧಿಕಾರ ಹೋಯ್ತಲ್ಲ' ಎಂದು ಸಂತೈಸುತ್ತಾಳೆ. ಆಗ ಮಲ್ಲಪ್ಪ ಹೇಳುವ ಮಾತು ಅರ್ಥಪೂರ್ಣವಾಗಿದೆ. "ತಾಯಿ ಕೆಲವೊಮ್ಮೆ ಒಬ್ಬನ ನಿಜವ್ಯಕ್ತಿತ್ವಕ್ಕೆ ಸುದ್ದಿ ವ್ಯಕ್ತಿತ್ವವೆಂಬ ಇನ್ನೊಂದು ಮುಖ ಸೃಷ್ಟಿಯಾಗುತ್ತದೆ. ಸಜ್ಜನರು ದುರ್ಜನರೆಂದು, ದುರ್ಜನರು ಸಜ್ಜನರೆಂದು ಮುಂದಿನ ಜನಾಂಗ ನಂಬುವಂತಾಗುತ್ತದೆ. ಈಗ ನಿರಪರಾಧಿಯಾದ ನಾನು ಸ್ಥಾನಚ್ಯುತನಾಗಿದ್ದೆನೆ. ಆದರೆ ಈ ಸ್ಥಾನಚ್ಯುತಿಗೆ ಭವಿಷ್ಯದಲ್ಲಿ ಏನೇನು ಅರ್ಥ-ಅಪಾರ್ಥ ಹಚ್ಚುತ್ತಾರೋ ದೇವರೇ ಬಲ್ಲ". ಇದು ನಾಟಕದಲ್ಲಿರುವ ಬಿಕ್ಕಟ್ಟನ್ನು ತಿಳಿಸುವಂತೆ, ಸಾಮಾಜಿಕ ಸಂದರ್ಭಗಳನ್ನೂ ವಿಶ್ಲೇಷಿಸುತ್ತದೆ. ನಿಷ್ಠೆ, ದ್ರೋಹಗಳು ಪ್ರಚಾರ, ಅಪಪ್ರಚಾರಗಳಿಂದಾಗಿ ಕಾಲಾಂತರದಲ್ಲಿ ಹೇಗೆ ರೆಕ್ಕೆ, ಪುಕ್ಕ ಪಡೆಯುತ್ತೇವೆ ಎನ್ನುವುದು ತಿಳಿಯದು. ಅದಕ್ಕೆ ಮಲ್ಲಪ್ಪ ಬಲಿಯಾದ ತ್ಯಾಗಜೀವಿ ಎಂದು ನಾಟಕ ಬಿಂಬಿಸುತ್ತದೆ.

ಸಂಶೋಧಕರೆಂದೇ ತುಂಬ ಪ್ರಸಿದ್ಧರಾದ ಡಾ. ಎಂ. ಎಂ. ಕಲಬುರ್ಗಿ ಅವರು ಕವಿತೆಗಳನ್ನು ನಾಟಕಗಳನ್ನು ಬರೆದು ಸೃಜನ ಸಾಹಿತ್ಯದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಕವಿತೆಗಳು ಅವರ ಹೋರಾಟದ, ಸಾಧನೆಯ ಬದುಕಿನ ಕಥನವನ್ನು, ಅವರ ವೈಚಾರಿಕ ಸ್ವರೂಪವನ್ನು ತಿಳಿಸುವಂತಿವೆ. ಮೂರು ನಾಟಕಗಳು ಇತಿಹಾಸದಲ್ಲಿ ನಡೆದ ವಾಸ್ತವ ಇತಿವೃತ್ತಿಗಳನ್ನು ಬಯಲಿಗೆ ತರುತ್ತವೆ. ಸತ್ಯನಿಷ್ಠೆ ಮತ್ತು ಸತ್ಯದೊಂದಿಗೆ ಅನುಸಂಧಾನ ಕಾವ್ಯ, ನಾಟಕಗಳಲ್ಲಿ ಸ್ಪಷ್ಟವಾಗಿದ್ದು, ಅವರೇ ಆಗಾಗ ಹೇಳುತ್ತಿದ್ದ 'ಕಾಲ ಕೆಳಗಿನ ಬೆಂಕಿಗಿಂತ ಕಣ್ಣು

ಮುಂದಿನ ಬೆಳಕು ಮುಖ್ಯ' ಎಂಬ ತತ್ವಕ್ಕೆ ಇವು ಸಾಕ್ಷಿಯಾಗಿವೆ. ಹೊಸ ಚಿಂತನೆಗಳು, ಪ್ರತಿಭಟನೆ, ಸಮಾನತೆ, ಬಸವ ತತ್ವ, ಕೆಡುಕಿನ ಎದುರು ಹೋರಾಟ, ಪಟ್ಟಭದ್ರರನ್ನು ಪ್ರಶ್ನಿಸುವುದು, ಸಾಮಾಜಿಕ ಬದಲಾವಣೆಗೆ ಒತ್ತು ಮುಂತಾದ ಗುಣಲಕ್ಷಣಗಳಿಂದ ಅವರ ಈ ಕೃತಿಗಳು ಅತ್ಯಂತ ಪ್ರಮುಖವಾಗಿವೆ; ಪ್ರಸ್ತುತವಾಗಿವೆ.

ಡಾ. ಎಂ. ಎಂ. ಕಲಬುರ್ಗಿ ಅವರ ಕಾವ್ಯ ಕೃತಿಗಳನ್ನು ನಾಟಕಗಳನ್ನು ಈ ಸಂಪುಟದಲ್ಲಿ ಒಂದೆಡೆಗೆ ತರಲಾಗಿದೆ. ಸಂಪಾದನೆಯ ಕಾರ್ಯದಲ್ಲಿ ಸಹಕರಿಸಿ, ಮಾರ್ಗದರ್ಶನ ನೀಡಿದ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ, ಈ ಮಹತ್ವದ ಯೋಜನೆಗೆ ಅನುದಾನ ನೀಡಿ ಪ್ರಕಟಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಸಂಸ್ಕೃತಿ ಇಲಾಖೆಗೆ, ಪೂರಕ ಸಾಹಿತ್ಯ ಒದಗಿಸಿದ ಬಿ. ಎಲ್.ಡಿ. ಇ. ಶಿಕ್ಷಣ ಸಂಸ್ಥೆಯ ಫ.ಗು. ಹಳಕಟ್ಟಿ ಕೇಂದ್ರದ ನಿರ್ದೇಶಕರಾದ ಡಾ. ಎಂ. ಎಸ್. ಮದಭಾವಿಯವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

ನೀರು ನೀರಡಿಸಿತ್ತು

[ಕವನ ಸಂಕಲನ]

ಡಾ. ಎಂ. ಎಂ. ಕಲಬುರ್ಗಿ

೧೯೯೭

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೇ ಹಂತ, ಮೈಸೂರು–೨

ಉಡುಗೊರೆ

ಆತ್ಮ ಸಂಗಾತಿ

ಉಮಾ

*

ನವನವೋನ್ಮೇಷಶಾಲಿನಿ
ಈಕೆ,
ತನ್ನ ಪದ್ಯಲಯಕೆ
ನನ್ನ ಗದ್ಯಲಯವ ಬಳಸಿಕೊಂಡು
ಚಂಪುವಾದಾಕೆ

*

ಅರಿಕೆ

'ನೀರಡಿಕೆ'ಯನ್ನು ನೀಗಿಸುವುದು ನೀರಿನ ಗುಣಧರ್ಮ. ವ್ಯತಿರಿಕ್ತ ಪರಿಸರದಲ್ಲಿ ಬಾಳಬೇಕಾಗಿ ಬಂದಾಗ, ಆ ನೀರೂ ನೀರಡಿಕೆಯಿಂದ ಬಳಲಬಹುದು. ನಾನು ಉದ್ದಕ್ಕೂ ಹಾಗೆ ಬಳಲಿದವನು, ಬಾಳಿದವನು. ಇಂಥ 'ದಾಹ' ನನ್ನಿಂದ ಇಲ್ಲಿಯ ಬಹಳಷ್ಟು ಕವನಗಳನ್ನು ಬರೆಯಿಸಿದೆ. ಆದುದರಿಂದ 'ನೀರು ನೀರಡಿಸಿತ್ತು' ಎಂಬ ಅಲ್ಲಮನ ಮಾತನ್ನು ಈ ಸಂಕಲನಕ್ಕೆ ಹೆಸರಾಗಿ ಬಳಸಿದ್ದೇನೆ.

ಕವಿಯಾದವನು ಭಾವನೆಗಳನ್ನು ಕಲ್ಪಿಸಿಕೊಂಡು ಬರೆಯುವುದು ಬೇರೆ, ಬದುಕಿ ಬರೆಯುವುದು ಬೇರೆ. ಇಲ್ಲಿಯ ಕವನಗಳೆಲ್ಲ ಸಾಮಾನ್ಯವಾಗಿ ನಾನು ಬದುಕಿದ ಭಾವನೆಗಳ ಭಾಷಾಶಿಲ್ಪವೆನಿಸಿವೆ. ಪರಿಸರ ನಮ್ಮನ್ನು ಬೆಳೆಸುತ್ತದೆ ಎಂಬುದು ಎಷ್ಟು ಸತ್ಯವೋ, ಬೆಳೆಯಗೊಡುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಈ ಸತ್ಯದ ಶಾಬ್ದಿಕ ಕಲೆಯೆನಿಸಿದ ಇಲ್ಲಿಯ ಬಹುಪಾಲು ಕವನಗಳಲ್ಲಿ ಮತ್ತೆ ಮತ್ತೆ ಮರುಕ, ಸಿಟ್ಟು, ನೋವು, ಜಿಗುಪ್ಸೆ, ಹತಾಶೆ–ಇತ್ಯಾದಿ ಭಾವಗಳನ್ನು ಕಾಣುವುದು ಸಹಜ.

ಈ ಮೊದಲು ಅನೇಕ ಸಂದರ್ಭಗಳಲ್ಲಿ ಹೇಳಿಕೊಂಡಂತೆ, ನನ್ನದು ಮೂಲತಃ ಸೃಜನಶೀಲ ಮನೋಧರ್ಮ. ಆದರೆ ಅಂದಿನ ಧಾರವಾಡದ ವಾತಾವರಣ ನನ್ನನ್ನು ಕವಿಯಾಗಿ ಬೆಳೆಯಗೊಡುವುದಿಲ್ಲವೆಂಬ ವಾಸ್ತವ ಅನುಭವಕ್ಕೆ ಬರುತ್ತಲೇ ಬಹುಜನರು ಸಮೀಪ ಸುಳಿಯದ, ಪ್ರಚಾರ–ಪ್ರಸಿದ್ಧಿಗಳಿಂದ ದೂರವಾಗಿರುವ 'ಸಂಶೋಧನೆ'ಯನ್ನು ನಾನು ಆಯ್ದುಕೊಳ್ಳಬೇಕಾಯಿತು.'ಆದದ್ದೆಲ್ಲ ಒಳಿತೇ ಆಯಿತು.'

ಹೀಗೆ ಹೊರಗೆ ದೂಡಿದರೂ, ನನ್ನ ಒಳಗೆ ಒಂದೆರಡು ಕವನ ಬೀಜಗಳು ಉಳಿದುಕೊಂಡವೆಂದು ಕಾಣುತ್ತದೆ. ಕಷ್ಟಕಾಲದಲ್ಲಿ ಅವು ನನ್ನ ಸಹಾಯಕ್ಕೆ ಬಂದವು. ತಮ್ಮನ್ನು ಬರೆಯಿಸಿಕೊಳ್ಳುವ ಮೂಲಕ ನನ್ನನ್ನು ಬದುಕಿಸಿದ ಈ ಕವನಗಳಿಗೆ ಕೃತಜ್ಞನಾಗಿದ್ದೇನೆ.

ನೀರಡಿಕೆ ಅಂದರೆ ಭಾವತೃಷೆ–ಮನುಷ್ಯನ ಸಹಜಗುಣ ಅದನ್ನು 'ಮರೆಯಬೇಕು' ಇಲ್ಲವೆ 'ಹಿಂಗಿಸಿಕೊಳ್ಳಬೇಕು'. ಈವರೆಗಿನ ನನ್ನ ಸಂಶೋಧನವು ನೀರಡಿಕೆಯನ್ನು ಮರೆಯಲು ಮಾಡಿದ ಪ್ರಯತ್ನವಾದರೆ, ಈಗಿನ ಸೃಜನವು ನೀರಡಿಕೆಯನ್ನು ಹಿಂಗಿಸಿಕೊಳ್ಳಲು ಮಾಡಿದ

ಪ್ರಯತ್ನವೆನಿಸಿದೆ. ಆದುದರಿಂದ ಹೊರಗಿನ ಶೋಧವೆನಿಸಿದ 'ವಸ್ತುನಿಷ್ಠ' ಸಂಶೋಧನೆಯ ಜೊತೆ, ಒಳಗಿನ ಶೋಧವೆನಿಸಿದ 'ವ್ಯಕ್ತಿನಿಷ್ಠ' ಸೃಜನವೂ ನನ್ನಿಂದ ಆಗಾಗ ಶಾಬ್ದಿಕ ಆಕಾರ ಪಡೆದಿದೆ. ಇದರ ಫಲ, ಈ ಹಿಂದೆ ಪ್ರಕಟಿಸಿರುವ 'ಕೆಟ್ಟಿತ್ತು ಕಲ್ಯಾಣ' ನಾಟಕ; ಈಗ ಪ್ರಕಟಿಸುತ್ತಲಿರುವ 'ನೀರು ನೀರಡಿಸಿತ್ತು' ಕವನ ಸಂಕಲನ.

ಯಾವುದೇ ಕಲೆ ನಿರಂತರ ವ್ಯಾಸಂಗ, ವ್ಯವಸಾಯಗಳಿಂದ ಪರಿಪೂರ್ಣವಾಗುತ್ತ ಹೋಗುತ್ತದೆ. ನಾನು ಈ ಕ್ಷೇತ್ರದಲ್ಲಿ ನಿರಂತರ ತೊಡಗಿಕೊಂಡವನಲ್ಲ; ಆದರೆ ಇಲ್ಲಿಯ ಒಂದೊಂದೂ ಕವನವನ್ನು ಕಂಡರಿಸುವಲ್ಲಿ ನಿರಂತರ ಎಚ್ಚರವಹಿಸಿದವನು-ಎಂದು ಮಾತ್ರ ಹೇಳಬಯಸುತ್ತೇನೆ.

ಈ ಸಂಕಲನದಲ್ಲಿರುವ ಕೆಲವು ಕವನಗಳನ್ನು ಪ್ರಕಟಿಸಿದ 'ಸಂಕ್ರಮಣ' ಮತ್ತು 'ತರಂಗ' ಸಂಪಾದಕರಿಗೆ ಕೃತಜ್ಞತೆಗಳು.

ತಳುಕಿನ ವೆಂಕಣ್ಣಯ್ಯನವರು ಕನ್ನಡ ದೇವರು. ಅವರ ಪುಣ್ಯನಾಮ ಹೊತ್ತ ಪ್ರಕಾಶನ ಸಂಸ್ಥೆಯ ಆಶ್ರಯದಲ್ಲಿ ಈ ಸಂಕಲನ ಹೊರಬರುತ್ತಿರುವುದು ನನಗೆ ಗೌರವದ ವಿಷಯ. ಇದನ್ನು ಸನ್ನದಾಗಿಸಿದ ಶ್ರೀ ಛಾಯಾಪತಿ ಅವರಿಗೆ ವಂದನೆಗಳು. ಅಚ್ಚಿನ ಕಾರ್ಯದಲ್ಲಿ ನೆರವಾದ ಆತ್ಮೀಯ ಅಂಬಳಿಕೆ ಹಿರಿಯಣ್ಣ ಅವರಿಗೆ ಕೃತಜ್ಞತೆಗಳು.

ಧಾರವಾಡ
೧೯೯೭

–ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

■■

೧

ಗೆಳೆಯರೇ

ಕತ್ತಲೆಯ ಕಲ್ಲುಗಳ
ಎಡವಿ ಬಂದವ ನಾನು–
ನಡೆಯ ಬಯಸಿದ್ದೇನೆ
ಬೆಳಕಿನೆಡೆಗೆ,
ಬೆಂಕಿ "ಸತ್ಯ"ದಡಿಗೆ.

ಮುಳ್ಳುಗಳೇ,
ನನ್ನ ಚರಣಗಳಿಗೆ
ಅಂತಃಕರಣಗಳಿಗೆ
ಚೂಪಾಗಿ ಚುಚ್ಚಬೇಡಿ.
ನನ್ನ ಕಾಲಿನ ಕೆಳಗೆ
ಅಂದರೆ ನಿಮ್ಮ ಬಾಯಿಯ ಮೇಲೆ
ಚಪ್ಪಲು ಅನಿವಾರ್ಯವಾಗಿಸಬೇಡಿ.

ನಿಮಗೆ ನೋವಾದೀತೆಂದು
ಮೆಲ್ಲನೆ ನಡೆಯುತ್ತೇನೆ.
ಜೊಳ್ಳುಗಳೇ
ಏಣು ಮುರಿಸಿಕೊಂಡ ಮುಳ್ಳುಗಳೇ
ಸಿಟ್ಟಾಗಬೇಡಿ.
ಮತ್ತೆ
ಚಪ್ಪಲಿಗೆ ಕೆಸರಾಗಿ ಮೆತ್ತಬೇಡಿ.
ನನ್ನ ನಡಿಗೆ ನಿಧಾನಿಸಬೇಡಿ.

ಎಷ್ಟು ದಿನ ಹಸಿಯಾಗಿ
ಮೆತ್ತಿಕೊಳ್ಳುತ್ತೀರಿ, ಹೀಗೆ
ಚಪ್ಪಲಿಗೆ.
ಬೇಸಗೆ ಬರುತ್ತದೆ
ಒಣಗುತ್ತೀರಿ,
ಉದುರುತ್ತೀರಿ,
ಮಣ್ಣಾಗಿ ಹೋಗುತ್ತೀರಿ,
ಮುಳ್ಳುಗಳೇ
ಮಣ್ಣಾಗಿ ಹೋಗುತ್ತೀರಿ.
■■

೨
ಚಕ್ರವ್ಯೂಹ

ಹೊಕ್ಕಿದ್ದೇನೆ, ಚಕ್ರವ್ಯೂಹ.
ವಕ್ರೋಪವಕ್ರ ಚಕ್ರಕೋಟಿಗಳ
ಕೋಟೆಯನು ದಾಟಿದ್ದೇನೆ.
ನೂರು ಕೌರವರ ನುಚ್ಚು-
ನೂರು ಮಾಡಲು ಹೆಜ್ಜೆ ಇಟ್ಟಿದ್ದೇನೆ:
ಈ ಚಕ್ರದೊಳಗೆ, ಆ ಚಕ್ರದೊಳಗೆ
ಚಕ್ರೋಪಚಕ್ರದೊಳಗೆ.

ಮುಕ್ಕಿದ್ದೇನೆ
ಕರಿ-ಸೂಕರಿಗಳ,
ಒಕ್ಕಿದ್ದೇನೆ
ನರಿ-ನಾಯಿಗಳ,
ತೋಳ ಹಿಂಡನ್ನೆಲ್ಲ
ಹಿಂಡಿ ಹಿಪ್ಪಿಯ ಮಾಡಿ,
ಎಸೆದಿದ್ದೇನೆ
ಕಸದ ತಿಪ್ಪೆಯೊಳಗೆ.
ತೇರು ಎಳೆಯಲು ದಾರಿ
ನೂರು ಮಾಡಿದ್ದೇನೆ:

ತಗ್ಗು-ದಿನ್ನೆಯ ನಡುವೆ
ಒಳಗೆ-ಹೊರಗೆ.

ಕಟ್ಟಿದ್ದಾರೆ ಚಕ್ರವ್ಯೂಹ,
ಅತ್ತ-ಇತ್ತ, ನನ್ನ ಸುತ್ತ-
ಸುಳಿದು
ಒಳಗೆ ನುಗ್ಗಿದ್ದೇನೆ
ಖಡ್ಗ ತುಳಿದು.

ಗೆಲುವು: ದೀವಳಿಗೆ
ಸೋಲು : ಶಿವರಾತ್ರಿ
ಮರಣ: ಮಹಾನವಮಿ
-ಇದು ನನ್ನ ಧ್ಯೇಯಧ್ವಜ, ಎತ್ತಿ
ಮೂಲೆ ಮೂಲೆಯ ಸುತ್ತಿ
ಹೊಕ್ಕು ಹೊರಬಂದಿದ್ದೇನೆ,
ಚಕ್ರವ್ಯೂಹ.
■■

೩

ಬೂದಿಯಾಗುತ್ತೀರಿ-ಬೆಳಕಾಗುತ್ತೇನೆ

ನೀವು
ನನಗಾಗಿ ದಿನವೂ ಕಾಯುತ್ತೀರಿ,
ಕಾಯ್ದು ಕಿಡಿ ಕಿಡಿ ಕೆಂಡವಾಗುತ್ತೀರಿ.
ತೀರಿ, ತೀರಿ, ತೀರಿ
ಕೊನೆಗೆ ಬೂದಿಯಾಗುತ್ತೀರಿ,
ಗಾಳಿಗೆ
ಹಾರಿಹೋಗುತ್ತೀರಿ.

ನಾನು
ನಿಮ್ಮ ಕೆಂಡದಿಂದ
ಕೊರಗುತ್ತೇನೆ,
ಸೊರಗುತ್ತೇನೆ,

ನಿಮಗಾಗಿ ಮರುಗುತ್ತೇನೆ.
ನಿಮ್ಮ ಬೆಂಕಿಯನ್ನುಂಡು
ನಿಮಗೇ
ಬೆಳಕಾಗುತ್ತೇನೆ.
■■

೪
ಬಸವನಾಳರಿಗೆ

ಚಂದ್ರ ಮುಳುಗಿದ್ದರೂ
ಸೂರ್ಯ ಮೂಡಿರಲಿಲ್ಲ;
ಮೂಡಿ ಬಂದಿರಿ
ಇಳೆಗೆ,
ನಮ್ಮ ಬಳಿಗೆ.

ಕಾಳಕತ್ತಲೆಯೊಡನೆ
ಕಾಳಗವ ಮಾಡಿದಿರಿ
ಜಯಘೋಷ! ಬೆಳಕಿನ
ಕದ ತೆರೆದಿರಿ.

ಒಳಗಿದ್ದ ಶಿಕ್ಷಣದ ಶಿವಲಿಂಗ
ನಿಮ್ಮಿಂದ
ನಮ್ಮ ಅಂಗೈಯಲ್ಲಿ ಚುಳುಕಾಯಿತು,
ಮೂರು ಕಾಯಗಳಲ್ಲು ಬೆಳಕಾಯಿತು.

ಶಿಕ್ಷಣದ ಶಿವಪೂಜೆ
ಎಲ್ಲೆಲ್ಲು,
ಮೃದುವಚನ-ಸದುವಿನಯ
ಮುಗಿದ ಕೈಯಿಂದ ನಡೆದಿರಿ ಮುಂದೆ,
ನಡೆ ಮುಂದೆ, ನಡೆ ಮುಂದೆ
ನಡೆ ಮುಂದೆ-ಎಂದು.

ಉರದುದ್ದ, ಶಿರದುದ್ದ
ಶಿಕ್ಷಣದ ಸೋಪಾನ-
ಹತ್ತಿದಿರಿ, ಹತ್ತಿದಿರಿ, ಹತ್ತಿದಿರಿ.
ಮುಗಿಲುದ್ದ
ನಿಮ್ಮಿಂದ
ಪಾವಟೆಗಿರಿ.

■■

೫

ಸುಮ್ಮನಾಗುತ್ತೇನೆ

ಉಡುಪಿಯ ಪರ್ಯಾಯ ಪೀಠಕ್ಕೆ ಬಂದು
ಹೋಗುವ ಸ್ವಾಮಿಗಳಂತೆ,
ಮೂರು ವರ್ಷಕ್ಕೊಮ್ಮೆ ಕುಲಪತಿಗಳು
ಬರುತ್ತಾರೆ, ಹೋಗುತ್ತಾರೆ.

ಕುಲಪತಿಗಳು ಅಂದ ಮೇಲೆ
ನಮ್ಮ ವಿಭಾಗದ ಮುಖ್ಯಸ್ಥರು
ಸಭೆಗೆ ಅಧ್ಯಕ್ಷರೆಂದು ಆಹ್ವಾನಿಸುತ್ತಾರೆ,
ಮೂವತ್ತೆರಡು ಹಲ್ಲುಗಳ ತೋರಿಸಿ
ಕೆಂಪು ಕಾರ್ಪೆಟ್ಟು ಹಾಸಿ.

ಕುಲಪತಿಗಳು,
ಮುಖ್ಯಸ್ಥರೇ ಬರೆದುಕೊಟ್ಟ
ಭಾಷಣವನ್ನು ತಪ್ಪುತಪ್ಪಾಗಿ ಓದಿ
ಅಧ್ಯಕ್ಷತೆಯ ಶಾಸ್ತ್ರ ಮುಗಿಸುತ್ತಾರೆ.
ಕರ್ಣಪಟಲ ಕತ್ತರಿಸಿ ಹೋಗುವ ಕರತಾಡನ,
ಒಬ್ಬೊಬ್ಬರ ತುಟಿ ಮೇಲೆ ಸ್ತುತಿ ಲೇಪನ.

ನಿನ್ನೆ ಮುಷ್ಕರದಲ್ಲಿ
"ಜನವಿರೋಧಿ ಕುಲಪತಿಗೆ ಧಿಕ್ಕಾರ"
ಎಂದು ಕೂಗಿದ್ದ
ನಮ್ಮ ಮುಖ್ಯಸ್ಥ
ಇಂದು ಹಾಕುತ್ತ ಹಾರ,

ಮನ್ನಿಸುತ್ತ ಆಭಾರ
“ಜನಪ್ರಿಯ ಕುಲಪತಿಗಳೇ.......”
ಎಂದು ಪೀಠಿಕೆ ಹಾಕುತ್ತಲೇ
ಬೆಂಕಿಯಾಗಿ ಬೆವರುತ್ತೇನೆ.
“ಮುಖ್ಯಸ್ಥರಿಗೆ ಧಿಕ್ಕಾರ” ಕೂಗಬೇಕೆನಿಸುತ್ತದೆ,
ಉಸಿರು ಕಟ್ಟುತ್ತದೆ
ಸುಮ್ಮನಾಗುತ್ತೇನೆ.

ಮುಂದುವರಿದು
ಜನಪ್ರಿಯ ಕುಲಪತಿಗಳ ಭಾಷಣ “ಅದ್ಭುತ”
ವಾಗಿತ್ತೆಂದು ವ್ಯಾಖ್ಯಾನಿಸತೊಡಗುತ್ತಾರೆ,
ಮುಖ್ಯಸ್ಥರು.

ಅಷ್ಟರಲ್ಲಿ ಎದ್ದು ನಿಂತು
“ಇದು ಅದ್ಭುತ ಭಾಷಣವಲ್ಲ”
ಎಂದು ಮುಖದ ಮೇಲೆ ಉಗುಳಿದಂತೆ
ಹೇಳಬೇಕೆನಿಸುತ್ತದೆ,
ನಾಲಗೆ ಸೋಲುತ್ತದೆ,
ಸುಮ್ಮನಾಗುತ್ತೇನೆ,
ಸುಮ್ಮನಾಗುತ್ತೇನೆ,
ಸು ಮ್ಮ ನಾ ಗು ತ್ತೇ ನೆ.

■■

೭

ಸಂಸ್ಥೆಯೊಳೊಂದು ಮನೆಯ ಮಾಡಿ

ಸಂಸ್ಥೆಯೊಳೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ?

ಸಂಸ್ಥೆಯೆಂದರೆ
ಸಂತೆಯ ಸುಧಾರಿಸಿದ ಆವೃತ್ತಿ.

ಇಲ್ಲಿ
ಎಲ್ಲವೂ ನೀರವ, ಮೌನ ಹೊರಗೆ,

ನೇಯುತ್ತೇವೆ ಒಳಗೆ
ಜೇಡಜಾಲ,
ಕುತ್ತಿಗೆಯ ಸುತ್ತ ಕೂದಲೆಳೆ ನೂಲ,
ಇಲ್ಲಿ ಒಮ್ಮೊಮ್ಮೆ ಬೊಗಳುತ್ತವೆ
ಅಂದಣವನೇರಿರುವ
ಶ್ವಾನಗಳ ಹಿಂಡು,
ಸಂದಿಗೊಂದಿಗಳಲ್ಲಿ ನಿಂದು, ನಿಂದು.
"ಆನೆಯೋ-ಅದ್ರಿಯೋ"
ಭದ್ರಗಜ ಗಂಭೀರ!
ನಡೆದು ಹೋಗುತ್ತಲಿದೆ,
ಮುಂದು ಮುಂದು.

■■

೭
ಅಧಿಕಾರ

ಯಮ
ಇರಬಹದು ನೀನು
ದೇವರು,
ನೀನು ಏರಿರುವ ಕೋಣ
ದನ.

ಯಮ
ಇರಬಹುದು ನಿನ್ನ ಕೋಣ
ಐರಾವತ-ಮೈರಾವಣ,
ಅದಕೆ ಬಾಗಿ ನಡೆವವರು
ಧೂರ್ತ ಜನ.

ಮೈ ಮರೆತರೆ
ನಿನ್ನ ಮೇಲೆ
ಆ
ದನ,

ಅದರ ಮೇಲೆ
ಈ
ಜನ.

■■

೮

ನಾಯಿ ಸಾಕಿದ್ದೇನೆ

ನಾನು, ನಾಯಿ
ಸಾಕಿದ್ದೇನೆ,
ನೀವೂ ಸಾಕಿರಬಹುದು.

ಸಾಕಲು,
ಇರಬಹುದು ನಿಮಗೆ
ಭಿಕ್ಷುಕರ ಭಯ,
ವಂಚಕರ ಸಂಚಾರ ಭಯ.
ನನಗೋ
ಸತ್ಯವಂತರ ಭಯ,
ಸತ್ವವಂತರ ಭಯ.
ಅದಕ್ಕೇ ಸಾಕಿದ್ದೇನೆ, ನಾ ನಾಯಿ.

ಆಗೊಮ್ಮೆ ಈಗೊಮ್ಮೆ
ಇರಬಹುದು
ನಿಮಗೆ ಕಳ್ಳಕಾಕರ ಭಯ,
ನನಗೆ ಪ್ರಾಮಾಣಿಕರ ಭಯ.
ಅದಕ್ಕೇ ಸಾಕಿದ್ದೇನೆ ನಾ ನಾಯಿ.
ಇವರು
ಅಂದರೆ ಈ ಪ್ರಾಮಾಣಿಕರು
ನನ್ನ
ಅಂದರೆ ನನ್ನ ಖುರ್ಚಿಯ
ಹತ್ತಿರ ಬರಬಾರದೆಂದು
ನಾ

ಈ
ನಾಯಿ ಸಾಕಿದ್ದೇನೆ.
ನಾಯಿ
ಗಳ ಸಾಕಿದ್ದೇನೆ.
■■

೬

ಸುದ್ದಿ ಪತ್ರಿಕೆ–ರದ್ದಿ ಪತ್ರಿಕೆ

ಸತ್ತಿದ್ದಾನೆ,
ಸತ್ತಿದ್ದಾನೆ,
ಸತ್ತಿದ್ದಾನೆ,
–ಎಂದು ಮೂರು ಸಲ
ಪತ್ರಿಕೆ ಬರೆದರೆ ಸಾಕು,
ಬದುಕಿದ್ದವನು ಸತ್ತಿರುವನೆಂದು
ನಂಬುತ್ತಾರೆ, ಜನ.

ಬದುಕಿದ್ದಾನೆ,
ಬದುಕಿದ್ದಾನೆ,
ಬದುಕಿದ್ದಾನೆ,
–ಎಂದು ಮೂರು ಸಲ
ಪತ್ರಿಕೆ ಬರೆದರೆ ಸಾಕು,
ಸತ್ತಿದ್ದವನು ಬದುಕಿರುವನೆಂದು
ನಂಬುತ್ತಾರೆ, ಜನ.

ಹೀಗೆ
ಸುಳ್ಳು ಬರೆಯುವ ಸಣ್ಣ ಪತ್ರಿಕೆಗಳಲ್ಲಿ
ಸತ್ಯ(?) ಬರೆಯುವ ದೊಡ್ಡ ಪತ್ರಿಕೆಗಳಲ್ಲಿ
ಬದುಕಿದ್ದವರು ಸಾಯುತ್ತಾರೆ,
ಸತ್ತಿದ್ದವರು ಬದುಕುತ್ತಾರೆ–
"ಪತ್ರಿಕಾ ಪತಿವ್ರತೆ"ಯರ
ಸುದ್ದಿ ಪತ್ರಿಕೆಯಲ್ಲಿ
ರದ್ದಿ ಪತ್ರಿಕೆಯಲ್ಲಿ.
■■

೧೦
ಸಂಸ್ಥೆ

ಮಕ್ಕಳೇ,
ನಿಮಗಾಗಿ ಕಟ್ಟಿದ
ಈ ಸಂಸ್ಥೆ
ಸಂತೆಯಾಗಿ ರೂಪಗೊಳ್ಳುತ್ತಲಿದೆ.

ಸಂತೆ ಸೇರುವ ಮೊದಲೇ
ಗಂಟಿಚೌಡಿಯರು ಬಂದು
ಮುಖ್ಯಸ್ಥ-
ಳದಲ್ಲಿ
ತಳವೂರಿದ್ದಾರೆ.

ರೋಮನಗರ ಉರಿಯುತ್ತಲಿದೆ,
ನೀರೋಗಳು
ಸ್ವಯಂಘೋಷಿತ ಹೀರೋಗಳು
ಬಾರಿಸುತ್ತಲಿದ್ದಾರೆ ಪಿಟಿಲು,
ಉನ್-ಮತ್ತರು, ಒತ್ತಿ ನಿರಿನಿಟಿಲು.

ಇತ್ತೀಚೆ
ನನ್ನ ಕೈಯ ಪುಸ್ತಕ
ಕುರುಡನ ಕೈಯ ಕನ್ನಡಿಯಾಗುತ್ತಲಿದೆ.
ಮಂತ್ರವಾಗುತ್ತಲಿದ್ದ ಮಾತು
ಮಾತೂ ಆಗುತ್ತಿಲ್ಲ.
ಕೃತಿ
ಏನು ಮಾಡಿದರೂ
ಆಕೃತಿ ಪಡೆಯುತ್ತಿಲ್ಲ.
ಅತ್ತ
ಗೋಡೆ ಗಡಿಯಾರ
ಗಸ್ತಿ ಮುಗಿಸಿ,
ಅಪಾಯದ ಗಂಟೆ ಬಾರಿಸಿದೆ,
ಒಂದು..........., ಎರಡು..........

ಮೂರನೆಯ
ಗಂಟೆ ಸದ್ದು
ಊಹಿಸಿಕೊಳ್ಳಲೂ
ಭಯವೆನಿಸುತ್ತದೆ,
ಮಕ್ಕಳೇ
ಭಯವೆನಿಸುತ್ತದೆ.

■■

೧೧
ಅ–ಮರ

ನಾನೊಂದು ಮರ, ಮಾಮರ.
ಬೀಜವಾಗಿದ್ದವನು
ಬೀದಿಪಾಲಾಗಬಾರದೆಂದು
ಮಣ್ಣ ತಾಯಿಯ ಮಡಿಲ ಸೇರಿಕೊಂಡೆ,
ಛಲದಿಂದ ನೆಲದಲ್ಲಿ ಊರಿಕೊಂಡೆ.
ಮಣ್ಣ ಸೇರಿದವನು
ಮಣ್ಣಾಗಿಯೇ ಹೋಗಲೆಂದು
ಗೊಬ್ಬರಕೆ ಬದಲು,
ಅಬ್ಬರಿಸಿ ತುಳಿದರು
ನೆತ್ತಿಯನು
ನೇರವಾಗಿ.

ಮಳೆಗಾಲದಲ್ಲಿಯೂ ಮಾಡಿದರು
ನೀರಡಿಕೆ ದಾಹ,
ಇದು ಇವರ ವ್ಯೂಹ.

ನನ್ನ ಬಲ, ನನ್ನ ಛಲ
ನೀರು ಗೊಬ್ಬರ ನನಗೆ.
ಒಡಲನ್ನು ಒಡಮುರಿದು ಒಡೆದುಕೊಂಡೆ,
ಬೇರಿನಲಿ ಬೀಜವನು ಕಳೆದುಕೊಂಡೆ,
ಚಿಗುರು ಹೂ ಬಾಸಿಂಗ ಮುಡಿದುಕೊಂಡೆ.

ತುಳಿದವರು, ಮತ್ತೆ ಹಳಿದವರು,
ಬಂದು ಇಳಿದರು ಇಂದು ನೆರಳಿನಲ್ಲಿ.
ತಿಂದರು ಹಣ್ಣನ್ನು, ಮುಡಿದರು ಹೂವನ್ನು
ಹಿಗ್ಗಿದರು, ನಾ ಹಿಗ್ಗಿದೆ.

ಈಗ ಮತ್ತೆ
ನನ್ನ ರೆಂಬೆಯನ್ನೇ ಕಾವು ಮಾಡಿ
ಕಡಿಯುತ್ತಲಿದ್ದಾರೆ,
ಹಲ್ಲು ಕಡಿಯುತ್ತಲಿದ್ದಾರೆ.

ಅವರಿಗೇನು ಗೊತ್ತು?
ಈ ಮರ
ಅಮರವೆಂಬ ಮಾತು.
■■

೧೨
ಹೇಗೇ ಸಾಧ್ಯ? ಹೇಗೆ ಅಸಾಧ್ಯ?

ಅಧ್ಯಕ್ಷರೇ
ಈಗ ನಾನು ಮಾಡುವುದು
ನಿಮ್ಮ ಪರಿಚಯ ಭಾಷಣವಲ್ಲ, ವ್ಯಾಖ್ಯಾನ-
ನಿಮ್ಮ ವ್ಯಾಖ್ಯಾನ.

ಬದುಕು-ಬರಹಗಳ
ಬಿರುಕಿನಲ್ಲಿ
ನಿಮ್ಮನ್ನು ನೀವು ಹೂಳಿಕೊಳ್ಳುತ್ತಲಿದ್ದೀರಿ
ದಿನವೂ ಅಡಿ, ಅಡಿ.
ಆಗುತ್ತಲಿದ್ದೀರಿ
ನಿಮ್ಮ ಖರ್ಚಿಯ
ಕೆಳಗಿರುವ
ಮಣ್ಣಿನ ಪುಡಿ.

ಕನ್ನಡವ ಗುಡುಗಿ ಗದ್ದರಿಸಿ
ಗದ್ದುಗೆ ಹಿಡಿದುಕೊಂಡಿರಿ.
ಅದು ಮುರಿಯುವಷ್ಟು ದಿನ
ಮಾಡಿದಿರಿ ಸವಾರಿ,
ಓಡಾಡಿದಿರಿ
ಕಾವೇರಿಯಿಂದ ಗೋದಾವರಿ.
ಈ, ಇದೆಲ್ಲವನು
ಇಂದಿನವರು, ನಾವು
ಹೇಳವುದು ಹೇಗೆ ಸಾಧ್ಯ?
ನಾಳೆಯವರು, ಅವರು
ಹೇಳದೇ ಇರುವುದು ಹೇಗೆ ಅಸಾಧ್ಯ?
ಹೇಗೆ ಅಸಾಧ್ಯ?
■■

೧೩
ಗಂಟೆ

ಗಂಟೆ,
ಈ ಗಂಟೆಯನ್ನು ಕುರಿತು
ಗಂಟೆಗಟ್ಟಲೆ ಮಾತಾಡಬಹುದು.
ಇದರ ಮೇಲೆ,
ಅಂದರೆ
ಇದರ ಮೇಲೆಯೇ
ಬರೆಯಬಹುದು, ದೊಡ್ಡ ಪುರಾಣ
ಅಷ್ಟು ದೊಡ್ಡ ಗಂಟೆ.

ಅಜ್ಜನ ಆರು ತಲೆಮಾರಿನಿಂದ
ಅಂಗಳದಲ್ಲಿ ತೂಗುತ್ತಿದೆ, ಈ ಸಣ್ಣ ಮುಗಿಲು.
ಅಂದು
ಅವರು, ಆ ನಮ್ಮ ಹಿರಿಯರು
ಇದರ "ಎಚ್ಚರ"ದಲಿ ಮಾಡಿದ ಬದುಕೆಲ್ಲ
ಸ್ವರ್ಗಕ್ಕೆ ಮಿಗಿಲು.

ಇಂದು
ಗಂಟೆಯ ನೆರಳಿನಲ್ಲಿ, ಮಕ್ಕಳು-ಮೊಮ್ಮಕ್ಕಳು
ಕೂಡುತ್ತಾರೆ, ಕೂತು
ಆಡುತ್ತಾರೆ, ಮಾತು.
ಮಾಡುತ್ತಾರೆ ನಿದ್ದೆ, ಬಿದ್ದು ಅಂಗಾತು.

"ಗಂಟೆಗೊಮ್ಮ ಗಂಟೆ ಸದ್ದು!
ಎಚ್ಚರಲ್ಲ ಕಿರಿಕಿರಿ,
ಬಿಚ್ಚಿ ಇದನು ಒಗೆಯಿರಿ"
ಮಾಡುತ್ತಾರೆ ಠರಾವು,
ಸಂಜೆ ಮತ್ತೆ ಮುಂಜಾವು.

ಮುಗಿಲು ಬಿಚ್ಚುವುದು ಮುಗಿಯದ ಮಾತು,
ಸೂರ್ಯನ ಬಿಚ್ಚುವುದೆ ಸೂಕ್ತವೆನಿಸಿತು.
ಗಂಟೆಯ ತಂಟೆ ಬಿಟ್ಟುಕೊಟ್ಟರು,
ನಾಲಗೆಯನ್ನು ಬಿಚ್ಚಿಬಿಟ್ಟರು,
ಕೇಕೆ ಹಾಕಿ ಖುಷಿಪಟ್ಟರು.

ಈಗ
"ಎಚ್ಚರ" ಇಲ್ಲದ ಮನೆಯ ಒಳಗ
ಯಾವಾಗಂದರ ಆವಾಗ,
ಮಕ್ಕಳು ಮರಿ ಸೇರತಾರ
ಗದ್ದಲ-ಗಪ್ಪ ಹೊಡಿತಾರ
ಮಾತ ಮಾತ ಆಡತಾರ
'ಗಂಟೆ' ಅಂತ ಕರೀತಾರ,
ಗಂಟೆಗಟ್ಟಲೆ ಮಲಗತಾರ.

■■

೧೪
ನಾನು ಸಾಯುವುದಿಲ್ಲ

ನಾನು ಸಾಯುವುದಿಲ್ಲ
ನನ್ನಲ್ಲಿ ಸತ್ಯ ಜೀವಂತವಾಗಿರುವ ವರೆಗೆ.

ಈ ಮಾತು ನನ್ನ
ಶ್ವಾಸ, ಆತ್ಮ ವಿ-
ಶ್ವಾಸ.

ನನ್ನನ್ನು ನೀವು
ಕೊಲ್ಲಬಯಸಿದ್ದೀರಿ
ಭೀತಿಯಿಂದ,
ನಿಮ್ಮನ್ನು ನಾನು
ಗೆಲ್ಲಬಯಸಿದ್ದೇನೆ
ಪ್ರೀತಿಯಿಂದ.

ಕೊನೆಗೂ
ಹೇಳುತ್ತೇನೆ, ಕೇಳಿ:
ನಿಮ್ಮ ಭೀತಿ ವಿಷ ಕುಡಿದೂ
ಸಬಲ, ನಾನು ಸಾಯುವುದಿಲ್ಲ,
ನನ್ನ ಪ್ರೀತಿ ಅಮೃತ ಕುಡಿದೂ
ದುರ್ಬಲ, ನೀವು ಬದುಕುವುದಿಲ್ಲ.
ಇದು ನನ್ನ
ಶ್ವಾಸ, ಆತ್ಮ ವಿ-
ಶ್ವಾಸ.
▪▪

೧೫
ಜಗದ್ಗುರುಗಳು

ಕುಳಿತಿದ್ದಾರೆ,
ಜಂಗಮಪೀಠದ ಮೇಲೆ
ಸ್ಥಾವರ ಜಗದ್ಗುರುಗಳು,
ಪ್ರಶ್ನಾತೀತ ಪ್ರಭುಗಳು.

ಹಗಲು
ಏಳುತ್ತಲೇ "ಸುದ್ದಿ ಪತ್ರಿಕೆ"ಯ ಸ್ತುತಿ ಉಗುಳಿನಲಿ

ಮುಖ ತೊಳೆಯುತ್ತಾರೆ.
ರಾತ್ರಿ
ಮಲಗುತ್ತಲೇ 'ಯೋಗನಿದ್ರೆ'ಯಲಿ ಕೊಳೆಯುತ್ತಾರೆ.

ಹೆಸರೆಂಬ
ಕೆಸರಿನ ಕೆಳಗೆ,
ಹಣವೆಂಬ ಹೇಲಾಹೇಲಿನ ಒಳಗೆ,
ಹೂತು ಹೋಗಿದ್ದಾರೆ–
ಪಾತಾಳದಿಂದತ್ತತ್ತ.

ಕೇಳಯ್ಯಾ ಬಸವಣ್ಣ,
ಕುಳಿತಿದ್ದಾರೆ
ಕಾವಿ ಧರಿಸಿಕೊಂಡು
ಬಿಜ್ಜಳ, ಕೊಂಡಿ ಮಂಚಣ್ಣ.

ಹೇಳಯ್ಯಾ
ಇವರ ಮಠದಲ್ಲಿ ಬಂದಿಯಾಗಿರುವ ಬಸವಣ್ಣ:
ಹಿಂದೆ
ಬ್ರಾಹ್ಮಣ್ಯದಿಂದ ಲಿಂಗಾಯತಕ್ಕೆ ಬಂದೆ,
ಹೋಗುವುದು ಎಲ್ಲಿಗೆ
ಇನ್ನು ಮುಂದೆ?
■■

೧೬
ಚಕ್ರವರ್ತಿಯಾಗುತ್ತೇನೆ

ನಾನು ಹುಟ್ಟಿದ್ದು ಸಾಯಲಿಕ್ಕೆ ಅಲ್ಲ,
ಸೂರ್ಯ–ಚಂದ್ರರ ಕೂಡ ಬದುಕಲಿಕ್ಕೆ.

ಹಿಮದಂತೆ ಹೆಪ್ಪುಗಟ್ಟದೆ
ಇಳಿಯುತ್ತೇನೆ, ದುರ್ಜನರ ಎದೆಯಲ್ಲಿ
ದೊಡ್ಡ ದಾಳಿಯಾಗಿ.
ಸುಳಿಯುತ್ತೇನೆ, ಸಜ್ಜನರ ಪ್ರಾಣದಲ್ಲಿ

ಪ್ರಾಣವಾಯುವಾಗಿ.
ಇವರಿಬ್ಬರೊಳಗೆ
ಹನಿ-ಹನಿಯಾಗಿ ಹಂಚಿಹೋಗುತ್ತೇನೆ.
ಇವರೊಳಗೆ ಒಳಗೆ
ಹನಿ-ವಾಹಿನಿಯಾಗಿ ಹರಿಯುತ್ತಲೇ ಇರುತ್ತೇನೆ.

ಇವರ ವಂಶವಾಹಿನಿಯಲ್ಲಿ ತಂದೆಯಾಗಿ ಸತ್ತರೇನಂತೆ?
ಮಗನಾಗಿ ಮತ್ತೆ ಹುಟ್ಟುತ್ತೇನೆ.
ಇವರನ್ನು ಆಚಂದ್ರಾರ್ಕ ಆಳುತ್ತೇನೆ.
ಸೆಲೆಯಲ್ಲಿ ಹನಿಯೊಡೆದು
ಕಳೆದುಕೊಳ್ಳುತ್ತೇನೆ, ಹಳ್ಳದಲ್ಲಿ.
ಕೊಚ್ಚಿಹೋದರೇನು? ಹೊಳೆಯಲ್ಲಿ,
ಬಿಚ್ಚಿಕೊಳ್ಳುತ್ತೇನೆ, ಕಡಲಿನಲ್ಲಿ.
ಅವಕಾಶ ಹುಡುಕಿ
ಆಕಾಶದಲ್ಲಿ ಘನವಾಗಿ ನಿಲ್ಲುತ್ತೇನೆ.
ಮತ್ತೆ
ಮಳೆಯಾಗಿ ಇಳಿದು,
ಒರತೆಯಾಗಿ ಒಸರುತ್ತೇನೆ-
ಇಳೆಯ ಗರ್ಭದಲ್ಲಿ ಸುಳಿದು.

ಹೀಗೆ
ಇವರ ವಂಶಚಕ್ರದಲ್ಲಿ
ಚ-ಕ್ರ-ವ-ರ್ತಿ-ಆಗುತ್ತೇನೆ
ಚಕ್ರ-ವರ್ತಿಯಾಗುತ್ತೇನೆ,
ಚಕ್ರವರ್ತಿಯಾಗುತ್ತೇನೆ.
■■

೧೭
ಸ್ವಭಾವೋಕ್ತಿ

ಈಕೆ
ನೆನಪಾಗುತ್ತಲೇ
ನೆನಪಾಗುತ್ತದೆ, ಸ್ವಭಾವೋಕ್ತಿ.

ಅಲ್ಲ ಚಿತ್ರಕವಿತ್ವ,
ಶಬ್ದಾಲಂಕಾರಗಳ ಒಯ್ಯಾರ?
ಬಹಳ ದೂರ.
ಈಕೆ, ಶುದ್ಧ ಅರ್ಥಾಂಲಕಾರ.

ಉತ್ಪ್ರೇಕ್ಷೆಯೇ ಇವಳು?
ಅಲ್ಲ,
ಅತಿಶಯೋಕ್ತಿಯೆ? ಹೇಳು
ಅಲ್ಲವೇ ಅಲ್ಲ.
ಅಲಂಕಾರದ ರಾಣಿ ಉಪಮೆಯೇ
ಈ ಮನೋರಮೆ?
ಇರಬಹುದು. ಇರಲಿಕ್ಕಿಲ್ಲ.

ನಾನೇ ಹೇಳುತ್ತೇನೆ ಕೇಳಿ:
ಈ ಮಹಾಶ್ವೇತೆ,
ಸರಳ; ನೀರನಿರಾಳ.
ಸ್ವಭಾವೋಕ್ತಿ:
ಅಲಂಕಾರಗಳ ಮಾತೃಶಕ್ತಿ.
■■

೧೮
ಹಾವು ಮತ್ತು ಹುತ್ತು

ಹಾವು ಹರಿದಾಡತಾವ
ಅತ್ತ ಇತ್ತ
ನನ್ನ ಸುತ್ತಮುತ್ತ.

ಹರಿದಾಡಿದರೆ ಬಯಲಿನಲ್ಲಿ
ಕಂಡು,
ಕಂಡವರು ಕೊಚ್ಚಿಹಾಕುವರೆಂದು
ಹುಡುಕುತ್ತವೆ
ಸುರಕ್ಷಿತ ಹುತ್ತು,

ನನ್ನ ಸುತ್ತು
ಇದು ಹಾವುಗಳ ಗತ್ತು.

ಹೊಂಚು ಹಾಕಿ
ಹೊರಬಂದು,
ಮೊಂಡ ಹಲ್ಲುಗಳ ಮಸೆದು
ಕಚ್ಚಿ
ಮತ್ತೆ ಹುತ್ತಿಗೇ ನುಗ್ಗುತ್ತವೆ.
ಸುರಕ್ಷಿತ
ಸಂದಿ ಗೊಂದಿಗಳಲ್ಲಿ ಸೇರಿಕೊಳ್ಳುತ್ತವೆ.
ಮುಸು ಮುಸು ನಗುತ್ತವೆ
ಗುಸು ಗುಸು ದನಿಮಾಡುತ್ತವೆ–
ಹುತ್ತು
ಒಂಬತ್ತೂ ತೂತುಗಳಿಂದ
ಬುಸುಗುಡುತ್ತದೆಂಬಂತೆ.

ಕಂಡು, ಜನರ ಹಿಂಡು
ಹಿಡಿದು, ಕಲ್ಲು ಬಡಿಗೆ
ಬಡಿಯುತ್ತಾರೆ, ಹುತ್ತ
ಎತ್ತಬೇಕಾದತ್ತ.

ಬಡಿಸಿಕೊಂಡ ಹುತ್ತ
ಹಾಳಾಗುತ್ತದೆ,
ಒಳಗಿರುವ ಹಾವುಗಳು ಮಾತ್ರ
ಮರೆಯಲ್ಲಿ ಹರಿದಾಡುತ್ತಲೇ ಇರುತ್ತವೆ.
ಇಲ್ಲವೆ
ಹುಡುಕುತ್ತವೆ ಹೊಸ ಹುತ್ತು,
ಇದು, ಹಾವುಗಳ ಗತ್ತು.
■■

೧೯
ಕಾವ್ಯ–ಗೀತೆ

ಸಿಕ್ಕ 'ವಸ್ತು'
ಸಿಕ್ಕುಸಿಕ್ಕು.
ಕವಿಯ ಒಳಗೆ ವಸ್ತು ಹೊಕ್ಕು
ವಸ್ತು ಒಳಗೆ ಕವಿಯು ಸಿಕ್ಕು.

ಪ್ರಜ್ಞೆ–ಪ್ರತಿಭೆ ಭೋಗದಲ್ಲಿ
ಮುಗ್ಧಭ್ರೂಣ, ದಗ್ಧಸ್ಫೋಟ.
ಅರ್ಥ ಹೊಳೆದು, ಅಳೆದು ಕಳೆದು
ಸ್ವಾರ್ಥ ತಳೆದು–
ಶಬ್ದ ಸೇರಿ, ಶಬ್ದ ಮೀರಿ
ದನಿಯು ಧ್ವನಿಯಾಗುವಲ್ಲಿ
ವಾಕ್ಯ "ಕಾವ್ಯ"ವಾಯಿತು.

ಬಂಧ–ಮುಕ್ತ ರೇಷೆಯಲ್ಲಿ
ಜೋಲಿ ಹೊಡೆದು–ಜೋಲಿ ಹಿಡಿದು
ಶಬ್ದ–ಅರ್ಥ ರಮಿಸಿ–ಶ್ರಮಿಸಿ
ಲಯ ಪ್ರಾಸ ಯತಿ ದ್ರವಿಸಿ
ಕರ್ಣ ಕರಣ ಸಾಕ್ಷಿಯಲ್ಲಿ
ಪಂಚಕರಣ ಪೃಥ್ವಿಯಲ್ಲಿ
ಮಾತು "ಗೀತ"ವಾಯಿತು.

■■

೨೦
ನಿರ್ಗಮಿಸಿರಿ

ಕತ್ತಲೆಯ ಕುಡಿದು
ತಲೆ ಕೆಳಗಾಗಿ ತೂಗುತ್ತಲಿರುವ
ಉನ್ಮತ್ತ ಬಾವುಲಿಗಳೇ,
ಬರುತ್ತಲಿದೆ ಬೆಳಕು, ಭರ್ಚಿಯಂತೆ
ನಿರ್ಗಮಿಸಿರಿ, ನಿರ್ಗಮಿಸಿರಿ, ನಿರ್ಗಮಿಸಿರಿ.

ಹಾಲು ಬೆಳುದಿಂಗಳನು
ಹೆಂಡವಾಗಿಸಿ ಹೀರಿ
ಘೂಕ್ ಎನ್ನುವ ಗೂಗೆಗಳೇ,
ಬರುತ್ತಲಿದೆ ಬಿಸಿಲು, ಬಾಣದಂತೆ
ನಿರ್ಗಮಿಸಿರಿ, ನಿರ್ಗಮಿಸಿರಿ, ನಿರ್ಗಮಿಸಿರಿ.

ಬೆಳಕನ್ನು ಬಯ್ಯುತ್ತ
ಕತ್ತಲಲಿ ಬತ್ತಲೆಯಾಗುತ್ತಲಿರುವ ಪಿಶಾಚಿಗಳೇ,
ಬರುತ್ತಲಿದೆ ಬೆಂಕಿ, ಬಂದೂಕಿನಂತೆ
ನಿರ್ಗಮಿಸಿರಿ, ನಿರ್ಗಮಿಸಿರಿ, ನಿರ್ಗಮಿಸಿರಿ.

ಬೆಳಕು ಭರ್ಚಿಗಳು,
ಬಿಸಿಲು ಬಾಣಗಳು,
ಬೆಂಕಿ ಬಂದೂಕುಗಳು,
ಬರುತ್ತಲಿವೆ, ಬರುತ್ತಲಿವೆ, ಬರುತ್ತಲಿವೆ.
ನಿರ್ಗಮಿಸಿರಿ
ಬಾವುಲಿಗಳೇ, ಗೂಗೆಗಳೇ, ಪಿಶಾಚಿಗಳೇ
ನಿರ್ಗಮಿಸಿರಿ.

■■

೨೧

ಮತ

ಈ ಮತ ಆ ಮತ, ಊ ಮತ
ಸತ್ಯಗೋರಿ ಗುಮ್ಮಟ.
ಕ್ರಿಸ್ತಶಿಲುಬೆ ಗೊಲ್ಗೊಥ,
'ಧರ್ಮ' ಕೊಂದ 'ಕರ್ಮ'ಠ.

ದೇವರೆಂಬ ಒಲೆಯ ಒಳಗೆ
ಭಕ್ತರನ್ನು ಬೂದಿಮಾಡಿ,
ಭಸ್ಮವೆಂದು ಮಾರುತಿರುವ
"ಮ.ನಿ.ಪ್ರಸ್ವ ಅಂಗಡಿ"
ಈ ಮತ, ಈ ಮತ.

ಹೊರಗೆ ಗುರು ಅತಿಗುರು,
ಒಳಗೆ ಲಘು ಅತಿಲಘು,
ಕಿರೀಟಕ್ಕೆ ಶಿರಸ್ಸುಂಟು, ಪ್ರಣಾಮಕ್ಕೆ ಪಾದವುಂಟು,
ಕಾವಿ-ಕವಚ, ಬೆತ್ತ-ಶಸ್ತ್ರ
ಹೃದಯ-ಅದಯ,
ಆ ಮಠ, ಆ ಮಠ.

ಸಾವಿರ ಸಾವಿರ ಸಾವಿರ ಭಕ್ತರ
ಸಮಾಧಿಸ್ಮಾರಕ ಇದುವೆ ದಿಟ.
ಹರಿಯುವ ತೊರೆಯಲಿ ನಿಂತ ಮಠ
ಮಣ್ಣಿನ ಭಕ್ತರ ಕಲ್ಲುಮಠ,
ಊ ಮಠ, ಊ ಮಠ

■■

೨೨
ಹುಲ್ಲುಗದ್ದೆ-ಹುಲಿಯ ಗವಿ

ದಾರಿ ಹಿಡಿದಿದ್ದಾರೆ,
ಊರು ಗೊತ್ತಿಲ್ಲದೆ
ದೊಡ್ಡ ದೊಡ್ಡ ಗುರುಗಳು.

ಹಿಂದೆ ನಡೆದಿದ್ದಾರೆ,
ದಾರಿ ಗೊತ್ತಿಲ್ಲದೆ
ಸಣ್ಣ ಸಣ್ಣ ಶಿಷ್ಯರು.

"ಊರಿಗೊಂದು ದಾರಿ ಇದೆ
ದಾರಿಗೊಂದು ಊರು ಇದೆ"
ಇದು ಇವರ ನಂಬಿಕೆ.

ದಾರಿ ಹಿಡಿದರೆ ಸಾಕು
ಊರು ಬರುತ್ತದೆ,
ಅದು ಅಲ್ಲ ಇದು, ಇದು ಅಲ್ಲ ಅದು.

ಇದು ಗುರುಗಳಭಿಮತ, ಇದಕೆ ಶಿಷ್ಯರನುಮತ.
ಕುರುಡ ಮುಂದೆ
ಕರುಡ ಹಿಂದೆ
ಕುರಿಯ ಹಿಂದೆ ಕುರಿಗಳು.
ಬ್ಯಾ ಬ್ಯಾ ಹೊರಟಿವೆ
ಹುಲ್ಲುಗದ್ದೆ ಹುಡುಕಲು?
ಹುಲಿಯ ಗವಿಯ ಸೇರಲು!

■■

೨೩

ಹಸಿವು

ಹಸಿದ ಪಶುಗಳು ನಾವು
ತಿನ್ನುತ್ತಲಿದ್ದೇವೆ–ಮನಸ್ಸಿನಲಿ ಮಂಡಿಗೆಯ.

ಕವನ ಕಲ್ಪಿಸಿದರೇನು ಬಂತು?
ಕಾಗದದಲಿ ಮೂಡದನ್ನಕ್ಕ.

ಮನದಲ್ಲಿ ಮಲಗಿದರೇನು ಬಂತು?
ಮೈಗೆ ಮೈ ತಾಗದನ್ನಕ್ಕ.

ಭಾವಯಿತ್ರೀಕೂಟಕ್ಕೇನು ಅರ್ಥ?
ಕಾರಯಿತ್ರೀ ಆಗದನ್ನಕ್ಕ.

ಗೆಳತೀ,
ಬೆಚ್ಚನೆಯ ನೆನಪು ನೀಡೀತು ಖುಷಿಯ.
ಆದರೇನಂತೆ?
ಬೆನ್ನೀರು ಕೊಟ್ಟೀತೆ
ಬೆಂಕಿ ಬಿಸಿಯ!

■■

೨೪
ಧಾರವಾಡ ನಿವೃತ್ತರು

ಇದು ನಿವೃತ್ತರ ಸ್ವರ್ಗ.
ಈ ಮುದುಕರಿಗೆ
ಇವರ, ಒಮ್ಮೊಮ್ಮೆ ಅವರ
ಮುದುಕಿಯರೇ ರಂಭೆವರ್ಗ.

ಅಲ್ಲಿ ಇಲ್ಲಿ 'ವಿಷವೃತ್ತ' ಕಟ್ಟಿಕೊಂಡ
ಕೆಲಸಗೇಡಿಗಳು. ಕೆಲಸ
ಕೇಡಿಗಳು.

ಎದ್ದರೋ ಮುಂಜಾನೆ
ಚಹಾಪಾನ, ಸ್ನಾನ,
ದೇವರ ಬಕಧ್ಯಾನ.
ಮುಗಿಯಿತೋ
ಮೂಗಿನ ಮೇಲಿಟ್ಟು ಕನ್ನಡಕ,
ಹುಡುಕುತ್ತಾರೆ
ನಗರ ನೆತ್ತಿಯಲ್ಲಿ ಹೇನ.
ಅದನ್ನು ಕುರಿತು
ದಿನವಿಡೀ ಮಾಡುತ್ತಾರೆ ವ್ಯಾಖ್ಯಾನ.
ಎಲ್ಲಿಯೋ ಕುಳಿತು, ಎಳೆದು
ರೇಶಿಮೆ ಎಳೆಯ,
ಕಟ್ಟುತ್ತಾರೆ ಕೈಯ, ಜೇಡ ಬಲೆಯ ಜಾಣರು.
ಛಿದ್ರ ಹುಡುಕುತ್ತಾರೆ, ಭದ್ರವ್ಯಕ್ತಿಗಳಲ್ಲಿ
ಮುದಿಯ ಹೆಗ್ಗಣೆಲಿಗಳು.

ನೌಕರಿಯಲ್ಲಿ ಹೆತ್ತ-ಹೊತ್ತ
ಅರುವತ್ತು ಭ್ರಷ್ಟಾಚಾರ
ಅರಚುತ್ತಲಿವೆ, ಇವರ ಸುತ್ತಮುತ್ತ.
ಕೇಳದಿರಲೆಂದು ಈ ಅಪಸ್ವರ
'ಸಮಾಜ ಕಲ್ಯಾಣ' ನಮಾಜ ಕೂಗುತ್ತಾರೆ,
ತೆಗೆದು ಇನ್ನೂ ದೊಡ್ಡ ಸ್ವರ.

ತಮ್ಮಾ,
ಕೆಲಸವಿಲ್ಲದ ಈ ಬಡಿಗರಿಗೆ
ಶಾಂತಿಯಿಲ್ಲ,
ಇವರಿರುವ ತನಕ
ಧಾರವಾಡ ಶಾಂತವಾಗಿರುವುದಿಲ್ಲ.
■■

೨೫
ಗುಂಪು ಕಟ್ಟುತ್ತಾರೆ

ಗುಂಪು ಕಟ್ಟಿದವರೆಲ್ಲ, ಮೂಲೆ–
ಗುಂಪಾಗಿ ಹೋದರು,
ಒಬ್ಬರು,
ಇನ್ನೊಬ್ಬರು.
ಆದರೂ ಕಟ್ಟುತ್ತಾರೆ, ಗುಂಪು
ಮತ್ತೊಬ್ಬರು.

ಹುಲಿ, ವನರಾಜ
ಕಟ್ಟುವುದಿಲ್ಲ ಗುಂಪು.
ಹುಲ್ಲೆ, ಹುಲು ಮನುಜರು
ಇವರು
ಕಟ್ಟುತ್ತಾರೆ, ಗುಂಪು.

ಕಟ್ಟಿ
ಸಭೆ ಅಲ್ಲ, ಸಂತೆ ಸೇರುತ್ತಾರೆ.
ಗುಂಪಿನಲಿ 'ಗೋವಿಂದಾ' ಎಂದು ಕೂಗಿ
ಖುಷಿಪಡುತ್ತಾರೆ–
ಧ್ವನಿ ಇಲ್ಲದ ಆ ಅವರು, ಈ ಇವರು.
ಕೇಳಿರಿ ಗೆಳೆಯರೇ:
ಹುಲ್ಲೆಗಳ ನೂರು ಕೂಗು
ಆಗುವುದಿಲ್ಲ, ಹುಲಿಯ ಒಂದು ಗುಡುಗು.
■■

೨೬
ಮುಗಿಲು

ಮುಗಿಲು:
ತುದಿಯಿಲ್ಲವು ಆ ಕಡೆ
ಮೊದಲಿಲ್ಲವು ಈ ಕಡೆ
ಕಾವಿಲ್ಲದ ಕೊಡೆ, ಈ ಮುಗಿಲು.
ಇದರ ಪೂರ್ವೋತ್ತರವೇನು?
ಈ ಪ್ರಶ್ನೆಯೆ ಒಂದು ದಿಗಿಲು, ಮುಗಿಲು.

ದಿವಿಜರ ದೃಷ್ಟಿಯ ನಂಜು
ತಾಗೀತೆಂದು
ಮರ್ತ್ಯದ ಮಕ್ಕಳ ಮೇಲೆ
ಹೊಚ್ಚಿದ ಭೂಮಾತೆಯ ಬಣ್ಣದ ಸೆರಗು
ಇದರ ಒಂದೊಂದು ಎಳೆ ಬೆರಗು!

ರವಿ–ಶಶಿ ಗ್ರಹ–ನಕ್ಷತ್ರ
ಕೆತ್ತಿಸಿ ಎತ್ತಿದ ಛತ್ರ.
ಹಗಲೂ–ಇರುಳೂ ಕವಿದ ನೆರಳೂ
ನಸುಕೂ ಮೋಡದ ಮುಸುಕೂ
ಸೂರ್ಯ ಚಂದ್ರ ಸಾಂದ್ರ
ರಾಹು–ಕೇತು ಗಡಣ
ಒಂದೊಂದು ಆಭರಣ.

ಸಾಗಿದ ಮೋಡದ ಬಗೆಬಗೆ ಚಿತ್ರ
ಇದು
ಬಣ್ಣಬಣ್ಣದ ಭಾರತ ಪಾತ್ರ:
ಕೌರವ ಪಾಂಡವ ದ್ಯೂತ, ಧರ್ಮಜ ಸೋತ.
ದ್ರುಪದ ತನೂಜೆಗೆ ಕೀಚಕ ಕಾಟ
ಅಕ್ಷೋಹಿಣಿ ಮೇಲಾಟ.
ಮೂದಲೆ ಮಿಂಚು, ಯುದ್ಧದ ಗುಡುಗು
ಶಸ್ತ್ರ–ಶಸ್ತ್ರ ಸಿಡಿಲು.

ಚಿತ್ರ–ವಿಚಿತ್ರದ ಮುಗಿಲು
ದಶಪರ್ವದ ಭಾರತಕೂ ಮಿಗಿಲು.

■■

೨೭
ಮಾಮರವ ಕಾಡದಿರು ಕೋಗಿಲೆ

ಬೆಲ್ಲ ಕೊಬ್ಬರಿಯಂಥ
ಗಲ್ಲ ಎಂಜಲಿಸೆಂದು
ಕಾಡಬೇಡೆಲೆ ಹುಡುಗಿ, ಬೇಡ!
ಹುಡುಗಿ.

ಜೋಲಿ ಹಿಡಿದರು ಮನಸು,
ಜೋಲಿ ಹೊಡೆದೂ ನಿನ್ನ
ಮಾತು–ಕೃತಿ–ಆಕೃತಿಗೆ ಸೋಲುತ್ತಿದೆ.

ಮಸೆ ಮಸೆದು ಮೊಳೆಯನ್ನು
ಎಸೆ ಎಸೆಯದಿರು, ನನ್ನ
ಕಲ್ಲು ಎದೆ ಕಟ್ಟಿಗೆ ಆಗುತ್ತಿದೆ.

ಭೀಮ ಬಲೆಗಳ ಹರಿದು
ಹೊರಬಂದ ಹುಲಿ ಏಕೋ,
ಜೇಡ ಬಲೆಯಲಿ ಸಿಕ್ಕು ನರಳುತ್ತಿದೆ.
ಹಗಲ ಮರುಗಿಸಬೇಡ
ಇರುಳ ಹುಡುಗಿ, ನಿನ್ನ
ನೆನಪುಗಳ ನೇಣು ಬಿಗಿಯಾಗುತ್ತಿದೆ.

ಚೈತ್ರ ವೈಭವ ಉರುಳಿ
ಮರಳಿ ಬಂದಿದೆ ಗ್ರೀಷ್ಮ.
ಕೂಗಬೇಡಲೆ ಬೇಡ
ಕೋಗಿಲೆSS,
ಕಾಡದಿರು ಮಾಮರವ
ಹೋಗೆಲೇSS.

■■

೨೮
ಕೆಟ್ಟ ನೆನಪುಗಳು

ಆ ತೇಲಿತು
ಈ ಮುಳಿಗಿತು ಮೋಡ,
ಹನಿ ಒಡೆದೂ
ಹನಿ ಒಡೆಯದು ನೋಡ.

ಜಿಟಿ ಜಿಟಿ ಮಳೆ, ಬಲು,
ಕಿಟಿ ಕಿಟಿ ಮಳೆ.
ಹೂಹೂ ಮಳೆ
ಹಾ! ಹಾ! ಮೊಳೆ.

ಗಾಳಿಯ ಗೂಳಿಯ ಬೆನ್ನೇರಿತು
ಹೋ! ಹೊಂಚಿತು,
ಗುಡುಗುಡುಗುತ
ಇಳೆಗಿಳಿಯಿತು, ಮಳೆ.
ಕೊಡೆ ತಡೆಯಿತು,
ಹಿಡಿ ಮುರಿಯಿತು, ಧೋಧೋ ಮಳೆ.
ಹಸಿಯಾಯಿತು ನೆಲ,
ಕಸವೆದ್ದಿತು ಹೊಲ, ಈ ಮಳೆಗೆ.
ಕುಸಿ ಬಿದ್ದಿತು, ಮನೆ
ಹಾ! ಹಾ! ಇಳೆಗೆ.

■■

೨೯
ಅವ್ವ

ನೀನು
ಮಾ–ಅಲ್ಲ
ಮಾತೆಯೂ–ಅಲ್ಲ
ಮದರ್–ಅಲ್ಲ, ಅಲ್ಲ.
ಅವ್ವ, ಕೇವಲ ಅವ್ವ,

ರೊಟ್ಟಿ ತಿನ್ನುವಾಗ
ಎದೆ ಹಾಲು ಆಗುತ್ತೀ,
ಅವ್ವಾss
ಬೇಸತ್ತು ಮಲಗುವಾಗ
ತೋಳ ತೊಟ್ಟಿಲಾಗುತ್ತೀ,
ದುಃಖ ಅಪ್ಪಳಿಸಿದಾಗ
ಅಪ್ಪನ ಜೊತೆ ಕರೆಯದೇ ಬಂದು
ಮನದಲ್ಲಿ ಮೂಡುತ್ತೀ,
ಅವನಿಗಿಂತ ನಾಲ್ಕು ಬೆರಳು
ಎತ್ತರ ಕಾಣುತ್ತೀ.
ನನ್ನ ಮೈಯ್ಯಲಿ,
ಒಳಗಿನ ಮನದಲ್ಲಿ,
ಇನ್ನೂ ಒಳಗಿನ ಮೌನದಲ್ಲಿ,
ಅವ್ವಾ
ನೀನಿದ್ದರೂ ಹುಡುಕುವುದು ಕಷ್ಟ, ಬಲು ಕಷ್ಟ.
ಹೀಗಿದ್ದೂ
"ಅವ್ವಾss"
ಎಂದರೆ ಸಾಕು,
ತುಟಿಯ ತುದಿಗೇ ಬಂದು ನಿಲ್ಲುತ್ತೀ,
ಅವ್ವಾ ತುಟಿಯ ತುದಿಗೇ ಬಂದು ನಿಲ್ಲುತ್ತೀ.
■■

೩೦
ಅಪ್ಪ

ಅಪ್ಪಾ
ನೀನು ಹೊಡೆದದ್ದು, ಬಡಿದದ್ದು,
ಬಿಡಿಸಿಕೊಳ್ಳಲು ಬಂದ
ಅವ್ವನಿಗೂ ಎರಡು ಏಟು ಬಿದ್ದದ್ದು,
ನನಗೆ ನೆನಪಿದೆ.

ನಿನ್ನ
ಪಂಚಕರಣದಲ್ಲಿ
ನನ್ನನ್ನು ಕಬ್ಬಾಗಿ ಬೆಳೆಸಿದ್ದು,
ಅಂತಃಕರಣದಲ್ಲಿ
ಸಕ್ಕರೆಯಂತೆ ಕರಗಿಸಿಕೊಂಡದ್ದು,
ನನಗೆ ನೆನಪಿದೆ.

ಹೀಗೆ
ಹಗಲು ಬಿಸಿಲಾಗುತ್ತಿದ್ದವನು
ರಾತ್ರಿ ಬೆಳದಿಂಗಳಾಗುತ್ತಿದ್ದವನು
ನೀನೇ
ಎಂಬುದು ನನಗೆ ತಿಳಿದದ್ದು
ನಾನು ಅಪ್ಪನಾದಾಗ,
ಅಪ್ಪಾ
ನಾನು ಅಪ್ಪನಾದಾಗ.
■■

೩೧
ಮನೆ

ಕಲ್ಲು ನಾನಾಗಿ,
ಮಡದಿ ಮಣ್ಣಾಗಿ,
ಚಿಕ್ಕಮಕ್ಕಳು ಆಗಿ ಚಿಪ್ಪುಕಲ್ಲು,
ನಿಲ್ಲಿಸಿದ್ದೇನೆ, ನಿರಾಕಾರದಲಿ ಆಕಾರ.

"ಮನೆಯಲ್ಲಿ ಮನೆಯೊಡಯನಿದ್ದಾನೋ
ಇಲ್ಲವೋ..........?"
ಕೇಳದಿರು ಬಸವಣ್ಣಾ,
ಹಸನು ಮಾಡುವುದೇ, ಹಗಲಿರುಳು ಚಿಂತೆ
ಈ ಮನೆಯನ್ನು ನನ್ನ ಮನದಂತೆ.

"ಸಂತೆಯೊಳೊಂದು ಮನೆಯ ಮಾಡಿ....."
ಆದರ್ಶ, ನನಗೆ ಅಕ್ಕನ ಈ ಮಾತು.

ಅದಕ್ಕೆಂದೇ ಕಿಡಿಕಿ–ಬಾಗಿಲು ತೆರೆದೇ
ಬದುಕು ಮಾಡುತ್ತಲಿದ್ದೇನೆ,
ವಾಸ್ತವದಲ್ಲಿ ಕುಳಿತು.
"ಬಯಲು ಆಲಯದೊಳಗೊ?
ಆಲಯವು ಬಯಲೊಳಗೊ?
ಹಾಕಿದರು ಈ ಪ್ರಶ್ನೆ ಹರಿಭಕ್ತರು,
ಮನೆ ತೊರೆದು ಬಯಲನ್ನೆ ಬದುಕಿದವರು.
"ನಾನು ಮನೆಯೊಳಗೆ
ಮನೆಯು ನನ್ನೊಳಗೆ"
ಈ ಉತ್ತರ ಅವರಿಗೆ.

ಹೀಗಿದ್ದೂ
ನಾನು
"ಇಲ್ಲಿ ಇರುವುದು ಸುಮ್ಮನೆ,
ಅಲ್ಲಿ ಇರುವುದು ನಮ್ಮನೆ."
■■

೩೨
ಸುಡುಗಾಡು

ಎಲ್ಲ ನದಿಗಳೂ ಸಾಗರ ಕಡೆಗೆ
ನಾವೆಲ್ಲ ನಿನ್ನೆಡೆಗೆ.

ಹಕ್ಕಿ ಪಕ್ಕಿಗಳು ಹಾರಿದರೇನು?
ದಿಗ್‌ದಿಗಂತಕೆ ಎಲ್ಲೆಡೆಗೆ,
ಮತ್ತೆ ಬರುವುದು ಗೂಡಿಗೇ,
ಎಲ್ಲ ರಸ್ತೆಗಳು ರೋಮ್‌ದ ಕಡೆಗೇ.

ಪುಣ್ಯದ ಪ್ರಾಣ–
ಪಾಪದ ಭ್ರೂಣ,
ರಾಮ–ರಾವಣ
ಸೀತೆ: ಜಗಳಕೆ ಕಾರಣ
ಇವರೆಲ್ಲ ನಿನ್ನೆಡೆಗೆ.

ಗದ್ದಲ ಗಡಿಬಿಡಿ
ಸಂಕಟ ಕಟ-ಕಟ:
ಜೀವನ ಕಡೆಗೋಲಿನ ಕಡಲು,
ಶಾಂತಿಯ ನೆಲೆ ನಿನ್ನೊಡಲು.
ಅರಸರು-ತಿರುಕರು
ಸ್ಪೃಶ್ಯಾಸ್ಪೃಶ್ಯರು ಜೊತೆ-ಜೊತೆ ನಿದ್ರೆ.
ಮುದುಕರು-ಮಕ್ಕಳು
ಹೆಣ್ಣು-ಗಂಡು ಅಭೇದ ಮುದ್ರೆ.

'ಸಮತಾವಾದ'ದ ದೇಶ
ನಿನ್ನದು ಮೌನಾದೇಶ.

■■

೩೩

ಅಗಸರ ನಾಯಿ

ಇವನು ಇರುತ್ತಾನೆ, ಅಲ್ಲಿ
ಮತ್ತೆ ಬರುತ್ತಾನೆ, ಇಲ್ಲಿ.

ಮನೆಯನ್ನೂ ಕಾಯುತ್ತಿಲ್ಲ,
ಹಳ್ಳವನ್ನೂ ಕಾಯುತ್ತಿಲ್ಲ.
ಆದರೂ ಹೋಗುತ್ತಾನೆ ಅಲ್ಲಿ,
ಮರಳಿ ಬರುತ್ತಾನೆ, ಇಲ್ಲಿ.

ಮನೆ ಆದರೇನು ಮಸಣ?
ಹಳ್ಳ ಆದರೇನು ಕೆಸರ?
ಸಿಕ್ಕರೆ ಇವನಿಗೆ ಸಾಕು, ಮೊಸರ.

ಹೋಗುತ್ತಾನೆ ಹಳ್ಳಕ್ಕೆ
ಬರುತ್ತಾನೆ ಮನೆಗೆ.
ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ,
ದಿಲ್ಲಿಯಿಂದ ದೌಲತಾಬಾದಕ್ಕೆ.

■■

೩೪

ಹೆಂಡತಿ

ನವನವೋನ್ಮೇಷಶಾಲಿನಿ
ಈಕೆ.
ತನ್ನ ಪದ್ಯಲಯಕೆ
ನನ್ನ ಗದ್ಯಲಯವ ಬಳಸಿಕೊಂಡು
ಚಂಪುವಾದಾಕೆ.

ಹೆಣ್ಣು–ಹೆಂಡತಿ
ತತ್ತ್ವ ಸಮೀಕೃತಿ,
ಲೌಕಿಕ–ಧಾರ್ಮಿಕ ಸಮಸ್ತ ಸಂಸ್ಕೃತಿ.

ಸುಳಿದರೆ ಸಾಕು ಈಕೆ,
ಪಂಪಭಾರತ ಏಕೆ?
ತೀರ್ಥಂಕರ ಗೀತೆ
ಕಣ್ಣಿಗೆ ಕಹಿ ಎನಿಸಿ,
ಈ ಗ್ರಂಥಗೌರಿಯನ್ನು
ಎದೆಗವಚಿ ಸವಿಯುತ್ತೇನೆ, ಭಾವರತಿಯ.
ಇಕ್ಕಿ ಮೆಟ್ಟುತ್ತಾಳೆ
ಕಾವ್ಯಸತಿಯ.
ಇವಳ ಅಂತರಂಗದರಮನೆಯಲ್ಲಿ
ಅಮೃತಾನ್ನವನುಂಡು,
ಶೃಂಗಾರ ವೀಳ್ಯವ ಸವಿಯುತ್ತ,
ನಾ ಕೇಳಿದ
ಇವಳ ಒಂದೊಂದು
ಒಳಮಾತು ವಚನ,
ಕಿವಿಮಾತು ಕೀರ್ತನ,
ಬದುಕಿದಳೊ ಕುಸುಮಾಜಿ ನೈಜಕಥನ.

ತಾಳಿ
ಇನ್ನಷ್ಟು ಕೇಳಿ:

ಇವಳು ಇಡಿಯಾಗಿ ರಮ್ಯ,
ಬಿಡಿ, ಬಿಡಿ, ಬಿಡಿಯಾಗಿ ನವ್ಯ,
ಒಮ್ಮೊಮ್ಮೆ ಬಂಡಾಯ, ಮೌನಕಾವ್ಯ.

ಕ್ಷಮಿಸಿ,
ಈ ಮೌನಕಾವ್ಯದ ಬಗ್ಗೆ
ನಾನು
ಇಷ್ಟೆಲ್ಲ ಬರೆದದ್ದು ನೀರಸ ವ್ಯಾಖ್ಯಾನ,
ಅಥವಾ
ಒಂದು ಸಾಮಾನ್ಯ ಕವನ.
■■

೩೫
ಕೋಗಿಲೆ

ಕಾಗಿ ಕಾಡುವುದೆಂದು
ಗೂಗಿ ಕಾಡುವುದೆಂದು
ಕೂಗದಿದ್ದರೆ ಹೇಗೆ? ಕೋಗಿಲೇ, ಕೂಹು ಕೋಗಿಲೇ...

ಕೂಗದಿದ್ದರೆ ನೀನು
ಕಾಡ ಚಿಗುರುವುದೆಂತು?
ಮೋಡ ಉದುರುವುದೆಂತು? ಕೂಗೆಲೇ,
ಕೂಹು ಕೋಗಿಲೇ...

"ಮಾಘ ಮಾಸವು ಹೋಗಿ
ಮೇಗೆ ಚೈತ್ರವು ಬಂತು"
ಹೋದಿತು ಋತು ವ್ಯರ್ಥ, ಕೂಗೆಲೇ,
ಕೂಹು ಕೋಗಿಲೆ...

ಕಲ್ಲಾಗಿ ಬಿದ್ದಾರ
ಕಾಮಣ್ಣ ರತಿದೇವಿ
ಎದ್ದು ಮುದ್ದಾಡಲಿ, ಕೂಗೆಲೆ,ಕೂಹು ಕೋಗಿಲೇ...

ಉರುಳಿ ಹೋದ ಕಾವ್ಯ
ಮರಳಿ ಬರಲಿ ಬೇಗ,
ಬಿಚ್ಚಿ ಬಾಯಿಯ ಬೀಗ, ಕೂಗೆಲೇ,
ಕೂಹು ಕೋಗಿಲೇ...

ಕೂಹು ಕೂಹು ಕೂಗು
ಕೂಹು ಕೂಹು ಕೂಗು
ಅಂಬಿಕಾತನಯನ
ಕಾವ್ಯಕೊಳಲ 'ಧ್ವನಿ' ಬಾಗಿಲೇ, ಕೂಹು ಕೂಗೆಲೇ
ಕೂಹು ಕೋಗಿಲೇ.

■■

೩೬
ಮಾರ್ಚ್ ೧೫ – ಜೂನ್ ೧೫

ಮಾರ್ಚ್ ೧೫
ನಿಮ್ಮ ಡಿಪಾರ್ಟ್‌ಮೆಂಟ್
ಕ್ಲೋಸ್ ಆಯಿತೇ?
ಹೀಗೆ ಕೇಳುತ್ತಾರೆ, ಪ್ರಶ್ನೆ.
ಜೂನ್ ೧೫
ನಿಮ್ಮ ಡಿಪಾರ್ಟ್‌ಮೆಂಟ್
ಓಪನ್ ಆಯಿತೇ?
ಹೀಗೂ ಕೇಳುತ್ತಾರೆ, ಪ್ರಶ್ನೆ.

ಕ್ಲೋಸ್ ಓಪನ್‌ಗಳಿಗೆ
ಅರ್ಥವೇ ಇಲ್ಲದಾಗ,
ಈ ಪ್ರಶ್ನೆಗಳು
ವ್ಯರ್ಥವಲ್ಲವೆ? ಹೇಳಿ.

ಹೀಗೇಕೆ?
ಎಂದು ಕೇಳಬೇಡಿ, ಮತ್ತೆ.
ನಾವಿರುವುದೇ ಹೀಗೆ,
ನಮ್ಮ ಕುಲಪತಿಗಳ ಹಾಗೆ.

■■

೩೭
ಹಗಲು ಗರತಿ

ಪರೀಕ್ಷೆಯ ಹಾದರದಲ್ಲಿ ಹುಟ್ಟಿ,
ನೌಕರಿಯ ವ್ಯಭಿಚಾರದಲ್ಲಿ
ಬೆಳೆದಿದ್ದಾಳೆ, ಬೆಳಯುತ್ತಲಿದ್ದಾಳೆ.

ಆರು ಹಡೆದವಳ ಮುಂದೆ
ಮೂರು ಹಡೆದವಳು,
ಅಲ್ಲ, ಹಡೆಯದವಳು.
ಆದರೂ, ಈ ಇವಳು
ಪ್ರಸೂತಿಯ ಕಥೋಪಕಥೆಗಳನು
ಕಥಿಸುತ್ತ ತಿರುಗುತ್ತಲಿದ್ದಾಳೆ,
ಬಂಜೆ,
ಹಗಲು ಹೆಸರಿನ ಸಂಜೆ.

ಹಣೆ ತುಂಬ ಕುಂಕುಮ
ತಲೆ ತುಂಬ ದಂಡೆ–
ಮುಡಿದ ಹೆಂಡಿರ ನಡುವೆ
ಬಡಿವಾರ ಮಾಡುತ್ತಲಿದ್ದಾಳೆ,
ಕೊರಳ ತಾಳಿಯ ರಂಡೆ.

ಹೆಸರೋ ಅಮೃತಮತಿ
ರಾತ್ರಿ ಹಾದರಗಿತ್ತಿ, ಹಗಲು ಗರತಿ.
■■

೩೮
ನೆಲ–ಮುಗಿಲ ಅಂತರವು ಹೆಚ್ಚುತ್ತಿದೆ

ಕಾಲವಾಹಿನಿ ಜೊತೆಗೆ ನಾವು ಚಲಿಸಲು ನೀವು
ಕಟ್ಟಿಕೊಂಡಿರಿ ಕನಸ ಕಣ್ಣತುಂಬ,
ಕಣ್ಣ ಕನಸನು ಮಣ್ಣಿನಲ್ಲಿ ಮೂರ್ತೀಕರಿಸಿ
ನಿಲ್ಲಿಸಲು ಹೊತ್ತ ಹೊಣೆ ಮೈಯ ತುಂಬ.

ಬೆಳ್ಳಿ ಬಾಚಿಯ ಹಿಡಿದು, ಬಂಗಾರ ಉಳಿ ಹಚ್ಚಿ
ನಮಗಾಗಿ ಕೆತ್ತಿದ್ದು, ಜ್ಞಾನರಥವು.
ಗೋಪುರದ ಮೇಲೆ ಗೋಪುರ ಕಟ್ಟಿ ಮೇಲಿಟ್ಟ
ಗಡಿಯಾರ ಕಾಲಗತಿ ಸಂಕೇತವು.

ದಿವಸಗಳು ಮಾಸದಲಿ, ಮಾಸಗಳು ವರ್ಷದಲಿ
ಕಳೆದು ಹೋದವು, ಈಗ ಜ್ಞಾನಮೇರು
ಕಳೆದುಕೊಳ್ಳುತ್ತಲಿದೆ ಕಾಲುಗಳ ಕಸುವನ್ನು
ಹೂತಿರುವ ಗಾಲಿಗಳ ಹಂಪಿತೇರು.
ಮೇಲಿರುವ ಗಡಿಯಾರ ಸರಿಯಾಗಿ ಚಲಿಸುತಿದೆ,
ಕೆಳಗಿರುವ ರಥ ಚಲನೆ ಕಳಕೊಂಡಿದೆ.
ಕಾಲಗತಿ-ರಥಪ್ರಗತಿ ಬೆಸುಗೆ ಬಿಚ್ಚುತ್ತಲಿದೆ,
ನೆಲ-ಮುಗಿಲ ಅಂತರವು ಹೆಚ್ಚುತ್ತಿದೆ.
■■

೩೯
ಕಾರು ತೆರಳಿತು-ನಾಯಿ ಬೊಗಳಿತು

ಕಾರು ತೆರೆಳಿತು
ನಾಯಿ ಬೊಗಳಿತು
ಧೂಳು ತುಂಬಿತು ಬಾಯಿಗೆ,
ಕಾರು ಸಪ್ಪಳಿನಲ್ಲಿ
ಬೊಗಳಿಕೆ
ಕೇಳಲಿಲ್ಲವು ಯಾರಿಗೆ!

ನಾಯಿ ತಿಳಿಯಿತು,
ತನ್ನ ಬೊಗಳಿಕೆ-
ಗಂಜಿತೀ ಮೋಟಾರವು.
ಎಲ್ಲ ದಿಕ್ಕಿಗು
ಹಬ್ಬಿ ಹರಡಲಿ
ತನ್ನ ಬೊಗಳಿಕೆ ಸಾರವು-
ಎಂದು ಭಾವಿಸಿ

ನಾಯಿ ಕರೆಯಿತು,
ತನ್ನ ಓಣಿಯ ನಾಯಿಗೆ.
ಸಭೆಯ ಕೂಡಿಸಿ
ಸುದ್ದಿ ಪ್ರಕಟಿಸಿ
ಹೋಯ್ತು ಹುಡುಕಲು ಹೇಸಿಗೆ.

■■

೪೦
ಮರಣ ಸುಖ

ಓಡಿದೆನು, ಓಡಿದೆನು
ನೆತ್ತರವು ನೀರಾಯ್ತು,
ನಡೆಯುವುದೆ ಸುಖವೆಂದು
ನಡೆದಾಯಿತು.

ದಾರಿ ದಣಿಯುವ ತನಕ
ನಡೆದೆ ನಡೆದೇ ನಡೆದೆ,
ನಿಲ್ಲುವುದೆ ಸುಖವೆಂದು
ನಿಂತಾಯಿತು.

ಕೀಲುಗಳ ಬಿಗಿತಪ್ಪಿ
ಕಾಲು ಸೋಲುತ್ತಲಿರೆ
ಕುಳಿತುಕೊಳ್ಳುವುದೆ ಸುಖ
ಕುಳಿತಾಯಿತು.

ಕುಳಿತು ಕುಳಿತೂ ಕುಳಿತು
ಬೆನ್ನು ಬಿಲ್ಲಾಗುತಿರೆ,
ಮಲಗುವುದೆ ಸುಖವು
ಮಲಗಿದ್ದಾಯಿತು.

ಮಲಗುವುದು ಎಷ್ಟು ದಿನ?
ಜೀವಂತ ಹೆಣದಂತೆ,

"ಮರಣವೇ ಸುಖ" ಮನವು
ಹಂಬಲಿಸಿತು.

■■

೪೧
ಡೆಪ್ಯುಟಿ ಚೆನ್ನಬಸಪ್ಪ

ನೆಲ ಅಂದರ ಹೊಲ ಅಲ್ಲ,
ಇಷ್ಟೂ ನಮಗ ತಿಳಿದಿರಲಿಲ್ಲ.
ಬ್ಯಾಳಿ ಬಿತ್ತಿದರ ಬೆಳೆಯೋದಿಲ್ಲ
ಅಂಬೊ ಮಾತು ಗೊತ್ತಿರಲಿಲ್ಲ.

ರೈತ–ರಂಟಿ–ಎತ್ತು ಆದಿ
ರಾತ್ರಿ ಹರಗಿ ಹಗಲ ಮಾಡಿದಿ.
"ನಮ್ಮದs ಎರಿ, ನಾವs ಧೊರಿ"
ಹೇಳಿ ನಮಗೆ ಎಚ್ಚರ ನೀಡಿದಿ.

ಬ್ಯಾಳಿ ಬಿಟ್ಟು ಕಾಳ ಬಿತ್ತಿ
ಜ್ವಾಳಾ–ಗೋದಿ–ಹತ್ತಿ–ಬೆಳೆದಿ
ನೆಲ ಹೋಗಿ ಹೊಲ ಮಾಡಿದಿ.

ಹಾಡ ಹಗಲೆ ಹೊತ್ತು ಮುಳುಗಿ
ಕತ್ತಲಾದ ಖಬರಿರಲಿಲ್ಲ.
ಕನ್ನಡ ದೀಪ ಕೈಯ್ಯಾಗ ಹಿಡಿದಿ.
ಪಟಪಟ ರೆಕ್ಕಿ
ಬಾವಲಿ ಹಕ್ಕಿ, ತೆಕ್ಕಿಮುಕ್ಕಿ,
ಎಡವಿ ಬಿದ್ದಿ, ಎತ್ತಿ ಹಿಡಿದಿ.
ಕಾಗಿ ಗೂಗಿ ದೂರ ಅಟ್ಟಿ
ಕತ್ತಲೆ ಕೊಂದು, ಬೆಳಕ ಮಾಡಿದಿ.

■■

೪೨
ಪಕ್ವವಾಗದ ಫಲಗಳು

ಮರ, ಮರ, ಮಾಮರ
ವರುವರುಷವು ಅಮರ.

ವಸಂತ ಬಂದಿತೊ, ಸಫಲ!
ಗಿಡಕೆ ಗಿಣಿ ಮುತ್ತಿದ ಹಾಗೆ
ಮೈಯ್ಯೆಲ್ಲವು ಸುಫಲ.

ತುಂತುಂ ತುಂಬಿದ ಹಣ್ಣು,
ಒಂದೊಂದು
ಹದಿನಾರರ ಹೆಣ್ಣು,
ಇದು ಸಾರ್ಥಕ ಫಲಸಾಮ್ರಾಜ್ಯ.

ಅಯ್ಯೋ!
ಅಲ್ಲೊಂದು ಇಲ್ಲೊಂದು
ಹಣ್ಣಾಗಲು ಒಲ್ಲದ ಹಣ್ಣು,
ಮಾಮರದ ಮೊಲೆ ಹೀರುತ್ತ
ಮಧುರಕೆ ಸೋತು,
ಬಿದ್ದಿವೆ ಜೋತು.
ಹಣ್ಣಾದರೆ ಬಿಡುಗಡೆ ಭಯ, ಇವಕೆ,
ಹಣ್ಣಾಗದೆ ಹತ್ತಿವೆ ಮರಕೆ.
ಹಾಳಾಗುತ್ತಿವೆ ಇವು
ಅರುವತ್ತರ ದಿನಕೆ.

■■

೪೩
ಏಣಿ

ಬೇಕಿಲ್ಲ ನನಗೆ ಏಣಿ,
ಏರಲು
ಸೂರ್ಯಮಂಡಲ ಸೇರಲು,

ಆಳವಾಗಿ
ನೆಲದೊಳಗೆ
ಇ
ಳಿ
ಯು
ತ್ತೇ
ನೆ.
ಹತ್ತೂ ಕಡೆಗೆ ಬೇರು ಚಾಚಿ
ಮಣ್ಣ ಕಸುವನು ಬಾಚಿ
ಬೆ
ಳೆ
ಯು
ತ್ತೇ
ನೆ.
ಕಾಂಡವಾಗಿ ಏಳುತ್ತೇನೆ.
ಶಾಖೋಪಶಾಖೆಯಾಗಿ
ಪಚ್ಚೆಕೊಡೆ ಬಿಚ್ಚಿಕೊಳ್ಳುತ್ತೇನೆ.
ಚಿಗುರಲೆ, ಹೂ ಹಣ್ಣಾಗಿ
ಹರಡಿಕೊಳ್ಳುತ್ತೇನೆ
ಮುಗಿಲ ತುಂಬ.

ಹೀಗೆ, ಆಗುತ್ತೇನೆ–
ಏಣಿಯೂ ನಾನೇ,
ಏರುವವನೂ ನಾನೇ.

■■

೪೪
ಗುರುಗಳು ಸರ್ ಗುರುಗಳು

ಗುರುಗಳು ಸರ್ –ನಾವ್ ಗುರುಗಳು,
ಗೊತ್ತು ನಮ್ಮ ಗುರಿಗಳು:
ಪಠ್ಯಗ್ರಂಥ ನಮ್ಮ ವೇದ

ಇಲ್ಲ ಇದರ ಆಚೆ ಓದ.
ವರ್ಗಕೋಣೆ ವರ್ತುಳದಲಿ
ಎಳ್ಳಿಲ್ಲದೆ ಗಾಣ ಎಳೆವ
ಎತ್ತು ಸಽರ್, ಗುರುಗಳು.

ಗಂಟೆ ದನಿಗೆ ಗಂಟು ಬಿದ್ದು,
ಹೊರಗೆ ಬರಲು ಒಳಗೆ ಹೋಗಿ,
ನಾವು ಗಂಟೆ, ಉಲಿಯಬೇಕೆ?
ಇಲ್ಲ ನಮಗೆ ನಾಲಗೆ,
ವಿದ್ಯೆ ನೀರ ಪಾಲಿಗೆ.

ಬೆಳಕು ಕಿತ್ತಿ, ರಾತ್ರಿ ಬಿತ್ತಿ,
ಕತ್ತಲೆಯಲು ಕಣ್ಣು ಮುಚ್ಚಿ,
ಸಂಬಳಕ್ಕೆ ಹಸ್ತ ಚಾಚಿ,
ದಿನವ ಕಳೆವ ಗುರುಗಳು
ಏಕೆ ನಮಗೆ ಗುರಿಗಳು?
ವರುಷಕೊಂದು
ಸಾರಿ ಬರುವ
ಶಿಕ್ಷೆ ಹೋ!
ಪರೀಕ್ಷೆಯಲ್ಲಿ
ಹಾಗು-ಹೀಗು ಹಣೆಯ ಬರೆಹ
ಬರೆವ ಗುರುಬ್ರಹ್ಮರು.

ಗುರುರ್ ಬ್ರಹ್ಮಃ ಗುರುರ್ ವಿಷ್ಣು
ಗುರುರ್ ದೇವೋ ಮಹೇಶ್ವರಃ
ಗುರುರ್ ಸಾಕ್ಷಾತ್ ಪರಬ್ರಹ್ಮಃ
ತಸ್ಮೈ ಶ್ರೀ ಗುರವೇ ನಮಃ
■■

೪೫
ಖುರ್ಚಿ

ಎರಡು ಕಾಲುಗಳ ಮನುಷ್ಯ
ಕಲ್ಪಿಸಿದ್ದಾನೆ, ನನಗೆ

ನಾಲ್ಕು ಕಾಲು.
ಅವನಿಗಾಗಿ ನಾನು ಇರಲೆಂದು
ನಾಲ್ಕು ಕಾಲೂ.

ಇಡುತ್ತಾನೆ, ನನ್ನನ್ನು ಭೂಮಿಯ ಮೇಲೆ.
ಕುಳಿತನೋ ನನ್ನ ಮೇಲೆ
ಇವನ ತಲೆ ಮುಗಿಲ ಮೇಲೆ,
ಎಷ್ಟೆಂದು ಕೇಳಬೇಡಿ, ಅದರ ಬೆಲೆ.

ಎಳೆದಾಡುತ್ತಾನೆ, ನನ್ನನ್ನು
ಅಲ್ಲಿಂದ ಇಲ್ಲಿಗೆ,
ಇಲ್ಲಿಂದ ಅಲ್ಲಿಗೆ.
ಬಗೆಹರಿಯದಿದ್ದರೆ ಸಮಸ್ಯೆ
ಎತ್ತಿ ಒಗೆಯುತ್ತಾನೆ
ಹಳ್ಳಿಯಿಂದ ದಿಳ್ಳಿಗೆ.
ನನಗಾಗಿ
ಹೊಡೆದಾಡುತ್ತಾನೆ,
ಸುಂದನೊಂದಿಗೆ
ಈ ಉಪಸುಂದ, ಹಗಲಿರುಳು.
ಮುರಿದು ನನ್ನ ಕೈಕಾಲು
ಒಬ್ಬ ಒಂದು,
ಮತ್ತೊಬ್ಬ ಇನ್ನೊಂದು.

ಹಿಡಿದನೋ ಒಮ್ಮೆ
ಬಿಟ್ಟಾನು ಪ್ರಾಣ, ಬಿಡನು ನನ್ನ.
ತಂದೆ
ತಪ್ಪಿದರೆ ಮಗ;
ಮಾವ ತಪ್ಪಿದರೆ ಅಳಿಯ;
ಕೊನೆಗೆ ಅವನ ಗೆಳೆಯ.

■■

೪೬

ಸರಳರೇಖೆ

ಈ
ರೇಖೆ ಸರಳ,
ಇದಕೆ ಹೋಲಿಕೆ ವಿರಳ.

ದಕ್ಷಿಣ ಧ್ರುವದಿಂ ಉತ್ತರ ಧ್ರುವಕು
ನೇರ ಚಲನ,
ಉತ್ತರೋತ್ತರ ಗಮನ.

ನೆಲ ಕಂಡರೆ ಇದು ನಡೆದು,
ಜಲ ಕಂಡರೆ ಈಸುತ್ತದೆ, ಸೆಡೆದು.
ಬಂದಿತೊ ಬೆಂಕಿ ಎದುರು
ಆಗುತ್ತದೆ ನೀರು.
ದಾಟುತ್ತದೆ ಏರ
ನಡೆಯುತ್ತದೆ ನೇರ,

ಬಂದರೆ ಗುಡ್ಡ ಅಡ್ಡ
ಕೊರೆಯುತ್ತದೆ ಸೀಳಿ
ಸಾಗುತ್ತದೆ ಧೈರ್ಯವ ತಾಳಿ,
ಎದುರಾಯಿತೊ ಕಂದರ
ಹಂದರ ಸೇತುವೆಯಾಗಿ
ನಡೆಯುತ್ತದೆ ನೇರ, ಉತ್ತರಧ್ರುವಕಾಗಿ.

ಎಡ–ಬಲ, ಬಲ–ಎಡ
ವಕ್ರರೇಖೆಗಳು ನೂರು,
ಬದುಕಲು ಬರುತ್ತಿವೆ ಹತ್ತಿರ
ಹೋಗುತ್ತಿವೆ ಬದುಕಲು ದೂರ,
ಸ್ನೇಹ–ವೈರ.

■■

ನೀರಾಗ ನಿಂತೀನಿ ನೀರಡಿಸಿ

[ಕವನ ಸಂಕಲನ]

ಡಾ. ಎಂ. ಎಂ. ಕಲಬುರ್ಗಿ

೨೦೧೬

೧೨/ಎ. ಈವ್ನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು-೫೭೦೦೦೧

*

ನನ್ನ ಮಾತು

ಡಾ. ಎಂ. ಎಂ. ಕಲಬುರ್ಗಿ

'ನೀರು ನೀರಡಿಸಿತ್ತು' ಕವನ ಸಂಕಲನದ ಬಳಿಕ ನಾನು 'ನೀರಾಗ ನಿಂತೀನಿ ನೀರಡಿಸಿ' ಈಗ ಪ್ರಕಟಿಸುತ್ತಿದ್ದೇನೆ. ಸಾಮಾಜಿಕ ನೀತಿ ರೇಖೆಯಿಂದಾಗಿ ಎಲ್ಲ ಇದ್ದೂ ಉಪಭೋಗಿಸದ ಬದುಕಿನ ಅಸಹಾಯಕತೆಯನ್ನು ಈ ಶೀರ್ಷಿಕೆ ಸೂಚಿಸುತ್ತದೆ. ಇದನ್ನು ಕುರಿತ ಒಂದು ಕವನ ಇಲ್ಲಿದ್ದು ಇಡೀ ಸಂಕಲನಕ್ಕೆ ಇದನ್ನೇ ಬಳಸಿದ್ದೇನೆ. ಇದು ನನ್ನ ಮೊದಲ ಸಂಕಲನದ ಶೀರ್ಷಿಕೆಗೆ ಹೊಂದಿಕೊಳ್ಳುತ್ತದೆ. ಮಿಕ್ಕಂತೆ ಎಲ್ಲ ಕವನಗಳು ನನ್ನ ಬೇರೆ ಬೇರೆ ಭಾವಗಳ ತೃಪ್ತಿ-ಅತೃಪ್ತಿಗಳ ಸೃಷ್ಟಿಯಾಗಿವೆ; ಕಲ್ಪಿತ ಭಾವಗಳು ಇಲ್ಲಿವೆ.

ಪ್ರಾಚೀನ ಭಾರತೀಯ ಕಾವ್ಯಮೀಮಾಂಸಕರು ಭಾವವನ್ನು ಸ್ಥಾಯೀ ಸಂಚಾರಿಯೆಂದು ವರ್ಗೀಕರಿಸಿದ್ದಾರೆ. ಕವನಗಳ ವಿಷಯದಲ್ಲಿ ಇದು ಪ್ರಶ್ನಾರ್ಹವೆನಿಸುತ್ತದೆ. ಏಕೆಂದರೆ ಇಡೀ ಕವನ ಸಂದರ್ಭದಲ್ಲಿ ಎಲ್ಲವೂ ಇಲ್ಲಿ ಸ್ಥಾಯೀಗಳೇ. ಹೀಗಾಗಿ ಒಂದು ಸ್ಥಾಯೀ ಅಭಾವ ಭಾಷಾ ಮಾಧ್ಯಮದಲ್ಲಿ ಕಲಾತ್ಮಕವಾಗಿ ಬೆಳೆಯುವದೇ ಕವನಗಳ ಲಕ್ಷಣ. ಈ ಬೆಳಸುವಿಕೆಯನ್ನು ಕುಶಲಕರ್ಮಿಯಂತೆ ಕವಿ ಕೆಲಸ ಮಾಡಬೇಕಾಗುತ್ತದೆ. ನನ್ನ ಮಿತಿಯಲ್ಲಿ ಇದನ್ನು ಇಲ್ಲಿ ಪೂರೈಸಿದ್ದೇನೆ.

ಕವಿಗೆ ಸಂಬಂಧಿಸಿದಂತೆ ಆತ್ಮಮುಖಿ, ಮನಮುಖಿ; ವಸ್ತುವಿಗೆ ಸಂಬಂಧಿಸಿದಂತೆ ಮಾನವಮುಖಿ, ಸಮಾಜಮುಖಿ ಎಂದು ಸಾಹಿತ್ಯಕ್ಕೆ ನಾಲ್ಕು ಮುಖಗಳುಂಟು. ಇವುಗಳನ್ನು ಸ್ವತಂತ್ರವಾಗಿಯೂ, ಮಿಶ್ರಣವಾಗಿಯೂ ಕವಿತೆ ಕಟ್ಟುತ್ತಾನೆ, ಕವಿ. ಈ ಮುಖಗಳ ನೆಲೆಯಿಂದ ಭಾಷೆಯ ಮೂಲಕ ಕವನವನ್ನು ಕಲಾತ್ಮಕವಾಗಿ ಬೆಳೆಸಬೇಕಾಗುತ್ತದೆ.

ಈ ಎಲ್ಲ ತಿಳಿವಳಿಕೆ ಹಿನ್ನೆಲೆಯಲ್ಲಿ ಈ ಕವನಗಳನ್ನು ಕಟ್ಟಲಾಗಿದೆ. ಇಲ್ಲಿಯ ಅರ್ಧದಷ್ಟು ಕವನಗಳು ನಾನು ಯುವಕನಾಗಿರುವಾಗ ಬರೆದವುಗಳು. ಅಂದಿನ ನನ್ನ ಮನಸ್ಸಿನ ಪರಿಗಳನ್ನು ಓದುಗರು ತಿಳಿಯಲೆಂದು ಅವುಗಳನ್ನೂ ಇಲ್ಲಿ ಸಂಗ್ರಹಿಸಿದ್ದೇನೆ.

– ಡಾ. ಎಂ. ಎಂ. ಕಲಬುರ್ಗಿ

❖❖

ಈ ಕವನ ಸಂಕಲನವನ್ನು ಓದಿ ಕವಿತೆಗಳ ಕರಡು ತಿದ್ದುವಲ್ಲಿ ಸಹಾಯ ನೀಡಿದ ನಾಡೋಜ ಚೆನ್ನವೀರ ಕಣವಿ ಮತ್ತು ಪ್ರೊ. ಸುಕನ್ಯಾ ಅವರಿಗೂ ವಂದನೆಗಳು.

ಈ ಪುಸ್ತಕವನ್ನು ಪ್ರಕಟಿಸಿದ ಡಿ. ಎನ್. ಲೋಕಪ್ಪ ಅವರಿಗೆ, ಅಂದವಾಗಿ ಮುಖಪುಟ ವಿನ್ಯಾಸಗೊಳಿಸಿದ ಭಾರತಿ ಅವರಿಗೆ, ಅಕ್ಷರ ಜೋಡಣೆ ಮಾಡಿದ ಎಚ್.ಎಸ್. ಮೇಲಿನಮನಿ ಅವರಿಗೂ ವಂದನೆಗಳು.

ಶ್ರೀಮತಿ ಉಮಾದೇವಿ ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

೧

ನೀರಾಗ ನಿಂತೀನಿ ನೀರಡಿಸಿ

ಮೋಡಗಳೆ ಮುಸುಗುಡುತ
ಓಡುವಿರಿ ಮುಗಿಲಲ್ಲಿ
ಕಡಲಿಗೆ ಕೊಡವ ಹೊತ್ತು,
ಹನಿಸಿರೇ ಹನಿ ಎರಡು
ಹಸಿದಿರುವ ನೆಲ ನಾನು
ಕುಡಿದು ಕುಡಿಯೊಡೆವೆ ಸುತ್ತು

ಹಳ್ಳ ಹೊಳೆಗಳ ಕೊಳ್ಳ
ಕಣಿವೆಯಲಿ ಧುಮುಕುವಿರಿ
ತುಂಬುವಿರಿ ತುಂಬು ತೊರೆಯ,
ಬತ್ತಿರುವ ಕೆರೆ ನಾನು
ಒತ್ತಿ ಹರಿಯಿರಿ ಇತ್ತ
ತುಳುಕಿಸಿರಿ ನನ್ನ ಹರೆಯ

ಕೆರೆಯಲ್ಲಿ ನಿಂತಿರುವ
ಅಗಸಗಿತ್ತಿಯು ನಾನು
ಮೊಳಕಾಲತನಕ ನೀರ,
ಹೇಗೆ ಕುಡಿಯಲಿ ಹೇಳಿ?
ಅಣ್ಣಗಳೆ, ಸುತ್ತಲೂ
ಈ ಕೆರೆಗೆ ನೀವೆ ತೀರ.

■■

೨

ಸ್ವಾಗತ

ಕಷ್ಟಗಳೆ-ನಷ್ಟಗಳೆ ದುಃಖ-ದುಮ್ಮಾನಗಳೆ
ಬನ್ನಿ ಸ್ವಾಗತವು ನಿಮಗೆ,
ಸಾವುಗಳೆ-ನೋವುಗಳೆ ಹಿಂಸೆ-ಯಾತನೆಗಳೆ
ಸ್ವಾಗತವು ಬನ್ನಿ ನಿಮಗೆ.

ಸುಖವುಂಡು ಬೇಸತ್ತು ಸತ್ತಿರುವೆ ಬೇವಿನ
ರಸವಾಗಿ ಬನ್ನಿ ಕುಡಿವೆ,
ಬದುಕು ಬೆಳುದಿಂಗಳಿಗೆ ಸತ್ತು ಬೇಸತ್ತಿರುವೆ
ಸುಡು ಬಿಸಿಲೆ ಬಾರೆ ಮುಡಿವೆ.

ಅಧಿಕಾರದಮೃತವೆ ವಿಷವಾಗು, ಹಾರಗಳ
ಭಾರ ಹಾವಾಗಿ ಕಚ್ಚು,
ಸ್ತುತಿಯೆ ಬೈಗುಳವಾಗು ಸಂತೃಪ್ತಿ ಕ್ಷುಧೆಯಾಗು
ನನ್ನ ಗರ್ವವನು ಬಿಚ್ಚು.

ವಿಧಿ ವಿಶ್ವಕರ್ಮರೇ ಗೊಮ್ಮಟನ ಕಡೆದಿರುವ
ಚಾಣ ಸುತ್ತಿಗೆಯ ತನ್ನಿ,
ಗಾಯಗಳೆ ಕಚ್ಚುಗಳೆ, ಮೈತುಂಬಿ ಮುಡಿಯುವೆನು
ಆಭರಣವಾಗ ಬನ್ನಿ.

ನೀರಿಗೆ ನೈದಿಲೆಯು ಶೃಂಗಾರ, ಬದುಕಿಗೆ
ನೋವುಗಳೆ ಶೃಂಗಾರವು,
ಬೆಂಕಿಯಲಿ ಬೆಂದು ಸುತ್ತಿಗೆ ಏಟುಗಳ ತಿಂದು ಬೆಳಗುವುದು ಬಂಗಾರವು.
■■

೩

ದಾರಿ ಬಿಡಿ

ಸತ್ಯವೆಂಬ ಕೂರಲಗನೇ ಹಿಡಿದು
ಓಡುತ್ತಲಿದ್ದೇನೆ, ವರದಿ ಒಪ್ಪಿಸಲಿಕ್ಕೆ,
ದೇವ ಸಭೆಗೆ,
ದಾರಿ ಬಿಡಿ, ದಾರಿ ಬಿಡಿ ದಾರೀ ಬಿಡಿ..

ಅಡ್ಡಗಟ್ಟಿದ ಗುಡ್ಡ
ಸೀಳಿ ಹೊರಟಿದ್ದೇನೆ
ತಗ್ಗುದಿನ್ನೆಗಳನ್ನು ಇಳಿದು ಏರಿದ್ದೇನೆ
ದಾರಿ ಬಿಡಿ, ದಾರಿ ಬಿಡಿ, ದಾರೀ ಬಿಡಿ.

ಸೂಜಿ ಡಬ್ಬಣ ಚೂರಿ
ಚಾಕು ತಲೆಯಲಿ ಊರಿ
ನನ್ನನ್ನು ಕುಕ್ಕಿದ್ದು
ನೀವೆಲ್ಲ ನಕ್ಕಿದ್ದು
ನಿನ್ನೆ ಮೊನ್ನೆಯ ಹಾಗೆ
ನನಗಿನ್ನು ನೆನಪಿದೆ
ಈ ವರದಿ ಒಪ್ಪಿಸಲು ಹೊರಟಿರುವೆ, ನಾನು
ದಾರಿ ಬಿಡಿ, ದಾರಿ ಬಿಡಿ, ದಾರೀ ಬಿಡಿ.

ನಿಮ್ಮದೋ
ಸಿಂಗರಿಸಿ ಕೊರಳು ಕತ್ತರಿಸಿದುಪಕಾರ
ನನ್ನದೋ
ಏಕಲವ್ಯನ ಹಾಗೆ ಭಕ್ತಿ ನೇರ
ಬೆರಳ ಕತ್ತರಿಸಿದಿರಿ
ಕೊರಳ ಕತ್ತರಿಸಿದಿರಿ
ನರಳುತ್ತಲಿದೆ ನನ್ನ ನೆರಳು ಕೂಡ,

ಒಪ್ಪಿಸಲು ಈ ವರದಿ ಹೊರಟಿರುವೆ ನಾನು
ದಾರಿ ಬಿಡಿ, ದಾರಿ ಬಿಡಿ, ದಾರೀ ಬಿಡಿ.

ನಿಲ್ಲುವುದು ನನ್ನ ರಕ್ತಗುಣವಲ್ಲ
ರಕ್ತ ನಿಲ್ಲುವುದಿಲ್ಲ,
ದಾರಿ ಬಿಡಿ, ದಾರಿ ಬಿಡಿ, ದಾರೀ ಬಿಡಿ.

■■

೪

ದಾರಿ

ಕಲ್ಲು-ಮುಳ್ಳುಗಳ ನೇರದಾರಿ, ನನ್ನದು.
ಹುಲ್ಲು ಹಾಸಿಗೆಯ
ವಕ್ರದಾರಿ, ನಿಮ್ಮದು.

ನೂರು ದಾರಿಯ ನಡುವೆ
ನನಗುಂಟು ನನ್ನ ದಾರಿ,
ನಿಮಗಿಲ್ಲ ನಿಮ್ಮ ದಾರಿ.

ಪಾದ ನೋಯುತ್ತಿರಲಿ
ಬೆರಳು ಬಿರಿಯುತ್ತಿರಲಿ,
ತುಳಿದು ನೇರ ದಾರಿ
ಮಧ್ಯಾಹ್ನಕ್ಕೆ ಮೊದಲು ಮುಟ್ಟುತ್ತೇನೆ
ನಾನು ನನ್ನ ಗುರಿ.

ಪಾದ ನೋಯುವುದಿಲ್ಲ,
ಬೆರಳು ಬಿರಿಯುವುದಿಲ್ಲ,
ಹಿಡಿದು ಸುಗಮ ದಾರಿ
ಸೂರ್ಯ ಮುಳುಗಿದರೂ ಮುಟ್ಟಲಾರಿರಿ
ನೀವು ನಿಮ್ಮ ಗುರಿ.

■■

೫

ದೀಪ

ದೀಪವಾಗಿರುವ ನನ್ನನ್ನು
ದ್ವೇಷದಿಂದ ತಳ್ಳುತ್ತೀರಿ,
ಕತ್ತಲೆಗೆ.

ನಿಮಗೇನು ಗೊತ್ತು?
ಆಗ
ಹೋಗುತ್ತೇನೆ–
ನಿಮಗೆ ಕತ್ತಲೆಯ ಬಿಟ್ಟು,
ಬೆಳಕು ಹೊತ್ತು.

■■

೬

ಮಲೆಯ ಮಲ್ಲೇಶ ನಾನು

ಗಗನ ಗರ್ಭವ ಸೀಳಿ
ಮರ್ತ್ಯಮುಖಿಯಾದಂಥ
ಓಂಕಾರ "ಶಬ್ದ" ನಾನು.

ಗಾಳಿ ಗವಿಯಲಿ ಹುಟ್ಟಿ
ಸುತ್ತಲೂ ಸುಳಿವಂಥ
ದಿವ್ಯ ಸುಖ "ಸ್ಪರ್ಶ" ನಾನು.

ಬೆಂಕಿ ಬಸಿರನು ಬಗಿದು
ಸಾಕಾರಗೊಂಡಂಥ
"ರೂಪ" ಸ್ವರೂಪ ನಾನು.

ಬಯಲ ಮೈ ಬೆವರೊಡೆದು
ಜಲವಾಗಿ ಜಿನುಗುವ
ಜೀವ "ರಸ" ತತ್ವ ನಾನು.
ಮಣ್ಣಿನಲಿ ಮೈ ಪಡೆದು
ಗಂಧರ್ವನಾಗಿರುವ
ಶ್ರೀ"ಗಂಧ" ಹಸ್ತಿ ನಾನು.

ಈ ಪಂಚತತ್ವಸ್ಥ
ದೇಶ-ಕಾಲ ವ್ಯಾಪ್ತ
ಮಲೆಯ ಮಲ್ಲೇಶ ನಾನು.
■■

೭

ನಾನು

ರೂಢನಾಮದ ನೆಲದಿಂದ
ಅಂಕಿತನಾಮದ ನೆಲೆಗೆ ಬಂದು,
ಬಿದ್ದಿದ್ದೇನೆ ಭವದೊಳಗೆ.

ನನ್ನೊಳಗೆ ಅಡಗಿರುವ ನಾನು
ನನ್ನನ್ನು ಸೃಷ್ಟಿಸಿಕೊಳ್ಳುತ್ತಲಿದ್ದೇನೆ,
"ಸ್ಥಿತಿ"ಯಲ್ಲಿ ಸ್ಥಿರವಾಗಲೆತ್ನಿಸಿ
ಆಗಾಗ
ಒಂದಿಷ್ಟು "ಲಯ" ವಾಗುತ್ತ ಸಾಗಿದ್ದೇನೆ.

ಹೀಗೆ
ಕಾಲಚಕ್ರದಲ್ಲಿ
ಚಕ್ರವಾಗುತ್ತ,
ನಿಲ್ಲದೆ,
ಚಕ್ರವರ್ತಿಯಾಗುತ್ತಲಿದ್ದೇನೆ,

ಉರುಳುತ್ತ ಉರುಳುತ್ತ
ಗತಿಯನ್ನು ಪ್ರಗತಿಯಲ್ಲಿ ಕಳೆದುಕೊಳ್ಳುತ್ತಲಿದ್ದೇನೆ.
■■

೮

ನನ್ನ ಬದುಕು

ಹಗಲು ಸರಿಯಿತು, ಸಂಜೆ ಕರೆಯಿತು
ಸೋಲೋ ಗೆಲವೋ ನಡೆದೆನು
ತುಳಿದ ಮಾರ್ಗವು ಬಹಳ ದೀರ್ಘವು
ಉಳಿದ ಮಾರ್ಗವು ಹ್ರಸ್ವವು.

"ಕಾಯುವವನು ದೇವರಲ್ಲವೊ
ಕಾಯುವುದು ಶ್ರಮ ನಮ್ಮನು"
ಹಿಡಿದು ಸೂತ್ರವಿದನು ಪಾತ್ರವ
ಆಡಿದೆನು ಜೀವನದಲಿ.

ನನ್ನ ಜೊತೆ ಜೊತೆ ನಡೆದ ಸೂರ್ಯ
ದಣಿದ ಸಂಜೆಯ ಹೊತ್ತಿಗೆ,
ಕಾಲದೊಂದಿಗೆ ಕಾಲು ಹಾಕಿದೆ,
ಅದಕೆ ಎಂದೂ ಸೋಲದೆ.

ಬೋಧಿಸಿದೆನು ಶೋಧಿಸಿದೆನು
ಸಾಧಿಸಿದೆನೀ ಬಾಳಲಿ
ಭವದ ಸಾಗರ ದಾಟಿದರೂ, ನಾ
ಬಳಿಕ ಜನಮನ ಆಳಲಿ.
■■

೯

ಹುಡುಕುತ್ತಲಿದ್ದೇನೆ ಸಮಾಧಿ

ಗೆಳೆಯಾ
ನಾನು ಸಂಶೋಧಕ.

ನೀನು ಹೇಳುವಂತೆ
ಶೋಧಿಸುತ್ತಲಿದ್ದೇನೆ ಸಮಾಧಿಗಳನ್ನು.

ಭ್ರೂಣಗಳ ಕಂದಗಳ ಕೊಂದು
ಯುವಕರನು, ಪ್ರೌಢರನು ಇರಿದು,
ಮುಚ್ಚಿ ಮಣ್ಣಿನಲಿ
ಸಭ್ಯತೆಯ ಸೋಗಿನಲಿ
ನೀನು ಕಟ್ಟಿರುವ ಗುಪ್ತ ಗೋರಿಗಳನ್ನು
ಹುಡುಕುತ್ತಲಿದ್ದೇನೆ.

ನೀನು ಕನ್ನಡದ ಗೌಡ, ಕರಣಿಕ, ಪುರೋಹಿತ.
ನಗುನಗುತ
ಸುತ್ತಲಿನ ವರ್ತಮಾನದ ಸುತ್ತ ಬಿಗಿದು
ಉರುಳ,
ಕಿತ್ತೆಸೆದು ಕೊರಳ
ಇತಿಹಾಸದಾಚೆಯಲಿ
ಕಟ್ಟಿರುವ ಸಮಾಧಿಗಳನ್ನು
ಹುಡುಕುತ್ತಲಿದ್ದೇನೆ.

ನೀನು ಹೇಳುವಂತೆ
ನಿನ್ನೆಯ ಕತ್ತಲಲಿ ನಾನು
ಕೈಯಾಡಿಸುತ್ತಿದ್ದೇನೆ, ನಿಜ–
ಇಂದಿನ ಬದುಕಿಗಾಗಿ

ಮುಂದಿನ ಬೆಳಕಿಗಾಗಿ
ನಿನ್ನ ಗೋಮುಖದ ಅನಾವರಣಕ್ಕಾಗಿ,
ನಿನ್ನಂಥವರ ಸಮಾಧಿ ಮಾಡುವುದಕ್ಕಾಗಿ,
ಶೋಧಿಸುತ್ತಲಿದ್ದೇನೆ ಸಮಾಧಿ.
■■

೧೦

ಸತ್ಯ

ಸತ್ಯ :
ದಾರಿ ನೇರ,
ಲೋಕದ ಡೊಂಕು ಇದಕೆ ವೈರ.
ಅಡ್ಡ ಬರುತ್ತದೆ ಅಡ್ಡಗಾಲಿಕ್ಕುತ್ತದೆ
ಆಗ ಸತ್ಯದ ದಾರಿ ದುರ್ಗಮ.

ನಾವೆಲ್ಲ ಡೊಂಕು
ನೀನೇಕೆ ನೇರ?
ಇದು ಲೋಕದ ತಕರಾರ.

ಈಗ ಬಹುಮತದ ಡೊಂಕು
ಸತ್ಯವನು ಸರಿಸುತ್ತ, ಸರಿಸುತ್ತ
ಸರಿದು ಹೋಗುತ್ತದೆ,
ತಾನೆ ಅದರಿಂದತ್ತ.

ಸತ್ಯ ಸರಿಯುವುದಿಲ್ಲ,
ಸತ್ಯ ಸಾಯುವುದಿಲ್ಲ
ಇದಕೆ
ಶಿಲುಬೆಯಲಿ ಬದುಕಿರುವ
ಏಸುವೆ ಸಾಕ್ಷಿ.
■■

೧೧

ಬೆಳಕು ಕಳೆದವು

ಕತ್ತಲೆಯು ತುಂಬಿರುವ
ಕೋಣೆಯನು ಬೆಳಗಿಸಲು
ಹಚ್ಚಿ ಇಟ್ಟೆನು ನಾನು
ದೀಪ ಒಂದು.

ದೀವಿಗೆಯ ಸುತ್ತ
ಇರುವೆಯ ಹಿಂಡು ಸೇರಿದವು
ಬೆಳಕು ಕಳೆದವು,
ಎಣ್ಣೆ ಬತ್ತಿ ತಿಂದು.

ಕತ್ತಲೆಯ ಕೋಣೆಯಲಿ
ಕಣ್ಣೆವೆಯ ಕದಮುಚ್ಚಿ
ಬದುಕು ಮಾಡುತ್ತಲಿವೆ
ದೈತ್ಯಹಿಂಡು.
ಕಿರಣ ಹೊರ ಬರದಂತೆ
ಮೂಡಣದ ಬಾಗಿಲನೆ
ಮುಚ್ಚಬೇಕೆನ್ನುತ್ತಿವೆ
ಇನ್ನು ಮುಂದು.
■■

೧೨

ಮರ ಕಡಿಯುತ್ತಲಿದ್ದಾರೆ

ಆಕಾಶ ಚಿಗುತು
ಮರವಾಗಿ ಸೋತು

ಇಳದಾದ ಇತ್ತ ನೆಲಕ!
ಪಾತಾಳ ಮುಟ್ಟುವನಕ

ಎಲೆ ಎಲ್ಲ ಹಣ್ಣು
ಹಣ್ಣೆಲ್ಲ ಹಕ್ಕಿ
ಬಿದ್ದಾವ ತೆಕ್ಕಿ ಮುಕ್ಕಿ
ಹಾಡ್ಯಾವ ಹರ್ಷವುಕ್ಕಿ

ಎಳೆಹುಲ್ಲ ತಿಂದು,
ತಿಳಿ ನೀರ ಕುಡದು
ಮಲಗ್ಯಾವ ಪ್ರಾಣಿ ಕೆಳಗ
ಹೊಸ ಗಂಡ ಹೆಂಡಿರ್ಹಾಂಗ

ಬಂದಿತ್ತು ಜನವು
ತಿಂದಿತ್ತು ಹಣ್ಣು
ಕೈಗಳಿಗೆ ಎಟಕುವನಕ
ಆ ಮರಕೆ ಹರ್ಷ ಪುಳಕ.

ಎಟುಕಲಾರದ
ಹಣ್ಣಿಗಾಗಿ ಮರ
ಏಕೆ ಏರಬೇಕು?
ಇದ ಉರುಳಿಸಿದರ ಸಾಕು.

ಹೀಗೆ ಯೋಚಿಸಿ
ತೆಕ್ಕೆ ಬಿದ್ದಿತು
ಮರಕೆ ಜನದ ಹಿಂಡು
ಆ ಮರವ ಹಣ್ಣನುಂಡು.

ಮೇಲೆ ಪಕ್ಷಿಗಳು
ಕೆಳಗೆ ಪ್ರಾಣಿಗಳು

ಉಗುಳಿ ಹೋದವಂದು
ಈ ಜನರ ನಡತೆ ಕಂಡು.

■■

೧೩

ಮೂರು ಸುತ್ತಿನ ಕೋಟೆ

ಸುತ್ತಿಕೊಂಡಿವೆ ನನಗೆ
ಮೂರು ಸುತ್ತಿನ ಕೋಟೆ

ಮಿತ್ರರು ಕಟ್ಟಿರುವ
ಹತ್ತಿರವೆ ಹತ್ತಿರುವ
ಮೃತ್ಯು ಕೋಟೆ
ಮೊದಲ ಸುತ್ತಿನ ಕೋಟೆ

ದೊಡ್ಡ ಕುತ್ತಿನ ಹಾಗೆ
ದೊಡ್ಡ ಸುತ್ತಾಗಿರುವ
ಕೋಟಿ ಜನ 'ಕುಲ' ಕೋಟೆ,
ಇದನು ಕ್ಷಮಿಸ್ಯೆ ಬಸವ
ಆಗಾಗ ಇರಿಯುವ
ಗೋಮುಖದ ಪಶುವ.
ಕೊನೆ ಮೊದಲು ಇಲ್ಲದ್ದು
ಕೊನೆಯ ಸುತ್ತು
ಸಾಮಾಜಿಕದ ಕೋಟೆ
ಅಂಕು ಡೊಂಕು,
ನೇರವಾಗದು, ನಾಯಿ ಬಾಲ ಡೊಂಕು.

■■

೧೪

ಹನ್ನಿಬ್ಬರು–ಇನ್ನಿಬ್ಬರು

ನಸುಕು,
ಭೂಮಿಗೆ ಇನ್ನೂ ಮುಸುಕು

ಸೂರ್ಯ ಮೂಡುವ ವರೆಗೆ ತಡೆಯಲಿಲ್ಲ,
ಅವಸರ ಅತ್ಯವಸರ
ನೀವು ಬಿತ್ತಿದಿರಿ ಬೀಜ
ಅವಸರದ ನೀರು, ಅತ್ಯವಸರದ ಗೊಬ್ಬರ
ಬೆಳೆಸಿದಿರಿ ಭೂಜ.

ದೊಡ್ಡ ಮರ, ಕಣ್ಣಿಗೋ ನುಣ್ಣಗೆ
ಟೊಳ್ಳು ಒಳಗೆ
ಒಂದೊಂದು ಕೋಲನ್ನು ಕಡಿಯುತ್ತ
ನಿಮಗೆ ಊರುಗೋಲು ಮಾಡಿಕೊಳ್ಳುತ್ತ
ಏರಿದಿರಿ ಆಸನ–ಸಿಂಹಾಸನ

ಬಳಿಕ
ವೃಕ್ಷ ಬೆಳೆಸಲು ಅಲ್ಲ, ಕಬಳಿಸಲು
ನನ್ನವರು 'ಹನ್ನಿಬ್ಬರು'
ಅನ್ಯರು 'ಇನ್ನಿಬ್ಬರು' ಸೇರಿದರು.

ಹನ್ನಿಬ್ಬರು ಮರದ ನೆರಳಲ್ಲಿ ಮಲಗಿರುವರು
ಇನ್ನೊಬ್ಬರಿಗೆ ಜಾಗವಿಲ್ಲದಂತೆ.
ಸದಾ ಎಚ್ಚರವಿರುವ ಇನ್ನಿಬ್ಬರಲಿ
ಒಬ್ಬ ಮೇಲೆ ಹೂ–ಹಣ್ಣು ಕಿತ್ತುತ್ತಲಿದ್ದಾನೆ
ಇನ್ನೊಬ್ಬ ಕೆಳಗೆ ಬೇರು ಕತ್ತರಿಸುತ್ತಲಿದ್ದಾನೆ.

■■

೧೫

ಒಡೆಯಂಗೆ ಬೊಗಳಿತ್ತು

"ನಾಯಿ ಮರಿ ನಾಯಿ ಮರಿ
ತಿಂಡಿ ಬೇಕೆ?
ಓದಿದ್ದೆ ತಪ್ಪಾಯ್ತು, ಬಾಲ್ಯದಲ್ಲಿ.

ಹುಡುಕಿದೆನು, ತಡಿಕಿದೆನು
ಹಾದಿ ಬೀದಿ.
ಬಿದ್ದಿತ್ತು ಸಂದಿಯಲಿ
ನಾಯಿ ಮರಿ.
ಕನಿಕರಕೆ ಕೈಕಾಲು
ನಾಯಿಮರಿ.

ನೋಡಿದೆ,
ಮನೆಗೆ ಮರಿಯನು ತಂದು
ಊಡಿದೆ
ತೋಳ ತೊಟ್ಟಿಲ ಮಾಡಿದೆ
ನಾ ಬೆಳೆದೆ, ಬೆಳೆಸಿದೆ.
ನನ್ನ ಮರಿ
ಬೆಳೆಯಬೇಕು, ನನ್ನಷ್ಟು, ನನ್ನ ಎರಡರಷ್ಟು,
ನನ್ನ ಗುರಿ.

ಉಣ್ಣುವ ತುತ್ತಿನಲಿ
ಅರ್ಧ ಅದಕೆ,
ಏಕೆ?
ಮೊದಲು ಅದಕೆ, ಬಳಿಕ ನನಗೆ.

ನನ್ನ

ಮೊಳಕಾಲು, ತೊಡೆ, ಎದೆ, ಕೊರಳತನಕ

ವಿನಯ ಸ್ವಾತಂತ್ರ್ಯದಲಿ
ಮರಿ ಬೆಳೆಯಿತು
ತಲೆತನಕ ಬೆಳೆಯಿತೋ
ತಲೆ ತಿರುಗಿತು

"ತುಡುಗುಣಿ ನಾಯಿಯ
ಹಿಡಿದು ತಂದು ಸಾಕಿದರೆ
ತನ್ನ ಒಡೆಯಂಗೆ ಬೊಗಳಿತ್ತು"
■■

೧೬

ಪುಣ್ಯಕೋಟಿ

ಸಾಕಿದ್ದೇನೆ, ಹಸುವ
ಪುಣ್ಯಕೋಟಿ.

ಕೋಟಿ ಪುಣ್ಯದಿ ಪಡೆದ
ಈ ಪುಣ್ಯಕೋಟಿಗೆ
ಕೊಯ್ಯುವುದು ಹುಲ್ಲ, ನನ್ನ ಕೆಲಸ,
ಕುಡಿಯುವುದು ಹಾಲು, ನಿಮ್ಮ ಕೆಲಸ.

ದುಡಿಯುತ್ತಲಿದ್ದೇನೆ ನಾನು,
ಎರಡು ಕೈಗಳಿಂದ
ಸೊರಗದಿರಲೆಂದು ನನ್ನ ಗೋವು.
ಗೋವಿನಲಿ ಅಡಗಿರುವ ನನ್ನ ದುಡಿತದ ನೋವು,
ಹಿಂಡುತ್ತಲಿದ್ದೀರಿ ನೀವು,
ನಾಲ್ಕು ಕೈಗಳಿಂದ

ನಾನು,
ದುಡಿದು ಸೊರಗುತ್ತಲಿದ್ದೇನೆ, ಮರುಳ

ನೀವು
ಹಿಂಡಿ ಹಾಲನು ಕುಡಿದು,
ತೋರುತ್ತಲಿದ್ದೀರಿ, ನನ್ನೆಡೆಗೆ ಬೆರಳ.
■■

೧೭

ನಾಯಿ ಕಾಟ

"ಅಂಬುಧಿಯಲ್ಲಿ ಆಲಿಕಲ್ಲು ಬಿದ್ದಂತೆ"
ವರ್ಗದಲಿ ಅವರ್ಗೀಯನಾಗಿ ನಿಂತು
ಮಗ್ನನಾಗಿರುವಾಗ ಪಾಠ ಪ್ರವಚನದಲ್ಲಿ,
ಒಂದು ನಾಯಿಯ "ನೆನಪು" ನನ್ನ ಮನಕೆ.

ಜಗದಗಲ ಮುಗಿಲಗಲ ಮಿಗೆ ಅಗಲ ಹಬ್ಬಿರುವ
ನೆಲಮುಗಿಲ ಸೌಂದರ್ಯ
ಮೂರು ಕಣ್ಣುಗಳಿಂದ ಕುಡಿಯುತ್ತಲಿರುವಾಗ
ಒಂದು ನಾಯಿಯ "ರೂಪ" ನನ್ನ ಕಣ್ಗೆ.

ಆ ಮಾತು ಈ ಮಾತು ಎಲ್ಲ ಮಾತಿನ ಮಾತೆ
ಓಂಕಾರ ಧ್ವನಿ ನನ್ನ ಕರ್ಣ ದೇಗುಲದಲ್ಲಿ
ಝೇಂಕರಿಸುತ್ತಿರುವಾಗ
ಒಂದು ನಾಯಿಯ "ಕೂಗು" ನನ್ನ ಕಿವಿಗೆ.

ನನ್ನೊಳಗೆ ನಾನಿಳಿದು
ನನ್ನನ್ನೆ ಬರೆಯುತಿರೆ
ಸಾಹಿತ್ಯಶ್ರೀ ಸುಳಿಯುತಿರೆ ಮೈಯ ಒಳಗೆ
ಒಂದು ನಾಯಿಯ "ಕಾಟ" ಮೈಯ ಹೊರಗೆ.
■■

೧೮

ಸಂಸ್ಥೆ–ಸಂತೆ

"ಸಂತೆಯಲೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ"
–ಹೇಳುತ್ತಾಳೆ, ಅಕ್ಕ,
ತನ್ನ ಸುತ್ತಲಿನ ಸಂತೆ ನೋಡಿ.
ಹೀಗೆ ಹೇಳುತ್ತಿರಲಿಲ್ಲವೇನೋ
ನೋಡಿದ್ದರೆ
ನನ್ನ ಸುತ್ತಲಿನ ಸಂಸ್ಥೆಯನ್ನು.

'ಅವನ' ಚಿಂತೆಯಲಿರುವ ಅವಳಿಗೆ
ಸಂತೆ ಕೇಳುಸುವುದಿಲ್ಲ.
'ನನ್ನ'ಚಿಂತೆಯ ನನಗೆ
ಈ ಸಂತೆ ಕಿವಿ ಕೊರೆಯುತ್ತದೆ,
ಘನ ಘೋರವೆನಿಸುತ್ತದೆ.

ಅವಳಿಗೆ ಒಳಗಿನ ಸಂತೆ
ಸಂತೈಸುವ ಚಿಂತೆ.
ನನಗೆ ಒಳಗಿನಂತೆ
ಹೊರಗೂ ಸಂತೆ,
ದೊಡ್ಡ ಚಿಂತೆ.
■■

೧೯

ಅಕ್ಕಮಹಾದೇವಿ

ಮಾಡಿದ್ದೇನೆ,
ಬೆಟ್ಟದ ಮೇಲೊಂದು ಮನೆಯ,

ಕಪಿ-ಮುಷ್ಠಿ, ನರಿ-ಬುದ್ಧಿ
ನನ್ನ ಸುತ್ತ-ಮುತ್ತ
ಹೊರಟಿದ್ದೇನೆ,
ನಂದಿನಿಷ್ಠೆಯಿಂದ ವೃಷಭವಾಹನನತ್ತ.

ಮಾಡಿದ್ದೇನೆ
ಸಮುದ್ರದ ತಡಿಯಲ್ಲಿ ಮನೆಯ,
ಮೊಸಳೆ-ಕಣ್ಣೀರು, ಕೂಪ-ಮಂಡೂಕ
ನನ್ನ ಸುತ್ತ-ಮುತ್ತ
ಹೊರಟಿದ್ದೇನೆ
ಕಡಲ ಘೋಷದಿ ಚಂದ್ರಭೂಷನತ್ತ

ಮಾಡಿದ್ದೇನೆ
ಸಂತೆಯಲ್ಲೊಂದು ಮನೆಯ,
ಕಪ್ಪು-ಹಣ, ಕಳ್ಳ-ವಸ್ತು,
ನನ್ನ ಸುತ್ತ-ಮುತ್ತ
ಹೊರಟಿದ್ದೇನೆ
ಹಿಡಿದು ತೂಕ-ತಕ್ಕಡಿ ಮಹಾದೇವಶೆಟ್ಟಿಯತ್ತ.
■■

೨೦

ಗುರುಕರುಣೆ

ಅತ್ತ ಹೋದರೂ ಇತ್ತ ಬಂದರೂ
ಮುಗಿಲು ತಲೆಯ ಮೇಲೆ,
ಅಲ್ಲಿ ಬಿದ್ದರೂ ಇಲ್ಲಿ ಬಿದ್ದರೂ
ನೆಲದ ತೊಡೆಯ ಮೇಲೆ

ದೀಪ ನೂರು ಹಚ್ಚಿದರೂ ಕತ್ತಲು
ಕಳೆವುದೆಂತು ಹೇಗೆ?
ಒಬ್ಬ ಸೂರ್ಯ ಹುಟ್ಟಿದರೆ ಸಾಕು
ಅದು ಉಳಿವುದೆಂತು ಹೇಗೆ?

ಗಗನ ಗುರುವು ಅವತಾರಗೊಂಡೆ
ನೀ ಮಳೆಯು. ನಾನು ಇಳೆಯು,
ಒಳಬಿತ್ತು, ತಲೆಯ ಎತ್ತಿತ್ತು ಮತ್ತೆ
ಆಕಾಶ ಬೆಳೆಯು.

ಹರದುಕೊಂಡು ಹೊರಟಿದ್ದೆ ಹಳ್ಳದಲಿ
'ಹೆದರಬೇಡ' ಎಂದೆ,
'ಪರದೇಶಿ' ನಾನು 'ಹರದೇಶಿ'ಯಾದೆ,
ಹರಿಗೋಲವಾಗಿ ಬಂದೆ.

■■

೨೧

ವಿದ್ಯಾರ್ಥಿ

ಸುಪ್ರಭಾತದಲಿ
ಮೂಡಣ ಗುರುವಿಗೆ
ಕೈಮುಗಿದೆದ್ದಿಹ
ಮೊಗ್ಗು.

ಗುರು ಮಂದಾನಿಲ
ಸುತ್ತು ಸುಳಿಯುತಿರೆ
ಹೊರಳುತ ಅರಳುವ
ಹೂವು.

ಗುರುನಭ ಹಸ್ತವು
ಮಸ್ತಕ ಮುಟ್ಟಲಿ
ಎನ್ನುತ ಬೆಳೆಯುವ
ಮಿಡಿಯು.
ನಿಷ್ಕಲ ಶ್ರೀಗುರು
ಚರಣ ಕಮಲದಲಿ
ಅರ್ಪಿತ ಅಮೃತ
ಫಲವು.

■■

೨೨

ಕೇಳಿಸುವುದಿಲ್ಲ

ಉಗುಳಿದರೆ ಮೂರ್ಖ
ಸೂರ್ಯ ಮಲಿನವಾಗುವುದಿಲ್ಲ,
ಬೊಗಳಿದರೆ ನಾಯಿ
ಬೆಟ್ಟ ಬೆದರುವುದಿಲ್ಲ.

ಬೆಟ್ಟದ
ಮೊಳಕಾಲವರೆಗೂ ಮುಟ್ಟದ ಧ್ವನಿ
ಮುಟ್ಟೀತೇ ಅದರ ಕಿವಿಗೆ?
ಮುಟ್ಟಿದರೂ ಸ್ವರ್ಗೀಯ ವಾಣಿ
ಸುಖಲೋಲ ಕರ್ಣ
ಕೇಳಿಸಿಕೊಳ್ಳುವುದಿಲ್ಲ ನಾಯಿ ನುಡಿ,

ಹೀಗಿದ್ದೂ
ನಾಯಿ ಬೊಗಳುತ್ತದೆ.
ಧ್ವನಿಗೆ ಪ್ರತಿಧ್ವನಿ,
ಬೆಟ್ಟವೂ ಬೊಗಳುತ್ತದೆಯೆಂದು ಭ್ರಮಿಸಿ
ನಾಯಿ ಬೊಗಳುತ್ತಲೇ ಇರುತ್ತದೆ.

■■

೨೩

ಕಾಡಸಿದ್ಧರು

ಕಾಡ ಸಿದ್ಧರು!
ಇವರು
ಯಾವ ಕಾಡಿನಿಂದಲಿ ಎದ್ದರು?

ಸುಡುವ ಕಾಡಿನಲ್ಲಿದ್ದ
ಸುಡುಗಾಡ ಸಿದ್ಧರು
ಸುಡಲು ಈ ನಾಡನ್ನು
ಹೇಗೆ ಇವರೆದ್ದರು!

ನಂದನವ ಹೊಕ್ಕ ದನ
ಮೇಯುತ್ತ ಅತ್ತಿತ್ತ
ಕಂಡವರ ಇರಿಯುತ್ತ
ಒಂದಿಷ್ಟು ಮಲಗುವರು
ಕಾಲಯಮ ವಾಹನರು,
ಬಂದು ಬಿದ್ದರು ಹೇಗೆ ಇಲ್ಲಿ?
ಈ ತಿಳಿ ನೀರ ತಟಾಕದಲ್ಲಿ.
ಸ್ವಚ್ಛವಾಗುವುದಿಲ್ಲ ಇವರು,
ಇವರಿರುವ ತನಕ
ಸ್ವಚ್ಛ ಉಳಿಯುವುದಿಲ್ಲ ನೀರು.

■■

೨೪

ಹಾವು ಹೊಡೆಯಲು ಹನ್ನೆರಡು ಕೋಲು

ಹಾವು :
ಹಾ! ಹಾ! ಕಾರವು,
ಮನೆಯ ತುಂಬ ಚಿತ್ಕಾರವು.

ಕಾಳಸರ್ಪ ಕಂದು ಬಣ್ಣ
ಹೌದು, ನೋಡು ಹೊಳೆವ ಕಣ್ಣ,
ಹೌದು, ಹೌದು
ಹಲ್ಲು ಮಾತ್ರ ತೀರ ಸಣ್ಣ.

ಮನೆಯ ಜನರು ಭೀತರು
ಹಾದಿ ಜನರು ಬಂದರು
ಬೀದಿ ಬೀದಿ ನಿಂದರು.

ಒಬ್ಬೊಬ್ಬನ ಕೈಯಲು
ಹಿಡಿದ ಕೋಲು ಹನ್ನೊಂದು
ಅಜ್ಜನದು, ಇನ್ನೊಂದು
ಕೋಲ ಹಿಡಿದು ಕೈಯಲಿ
ಪ್ರಾಣ ಹಿಡಿದು ಮೈಯಲಿ
ಹಾವು ಹಾ! ಹಾ! ಎಂದರು.

ಕೋಲು ಬೀಸಲಾಗಿ ತಪ್ಪಿ
ಅವಗೆ ಬಡಿದು, ಇವನು ಕೆಡೆದು
ಗಡಿಗೆ ಒಡೆದು, ಗಡಿಬಿಡಿ
ಗಾಜು ಪಾತ್ರೆ ಪುಡಿ ಪುಡಿ.

ಅಲ್ಲಿ ಬಂತು, ಇಲ್ಲಿ ಹೋಯ್ತು
ನೀನು ಹೊಡಿ, ಸ್ವಲ್ಪ ತಡಿ
ಬಾಯಿ ಹಿಡಿ, ಮೇಲೆ ಜಡಿ.

ಬೀಸಿ ಬೀಸಿ ಹೊಡೆಯಲಾಗಿ
ಕೋಲು ಮುರಿದು ಹನ್ನೊಂದು
ಅಜ್ಜನದು ಇನ್ನೊಂದು.

ಒಂದು ಕೋಲೂ ಉಳಿಯಲಿಲ್ಲ
ಹಾವು ಮಾತ್ರ ಸಾಯಲಿಲ್ಲ.
■■

೨೫

ಗೋಮುಖ ಭಕ್ತರು

ಹೊತ್ತಾರೆ ಎದ್ದರೋ
ಕುಡಿದು ಚಹಾ ಭಕ್ತಜನ
ಗೋಮಾತೆಯ ಪೂಜನ
ದಿನದಿನ, ದಿನದಿನ.

"ಮರ್ತ್ಯಲೋಕ ಕಾಮಧೇನು,
ನಮ್ಮ ಪುಣ್ಯಕೋಟಿ ನೀನು,
ನಿನ್ನ ಪದಕೆ ನಮ್ಮ ಭಕ್ತಿ
ನಿನ್ನ ಭಜನೆ ನಮಗೆ ಮುಕ್ತಿ".

ಹೀಗೆ ಗೋವು ಕೀರ್ತನ
ಮುಂದೆ ಗೋವು, ಹಿಂದೆ ಜನ
ನಡೆಯುತಿಹುದು, ದಿನ ದಿನ.

ಏಕೆ?
ಮುಕ್ತಿ ಪಡೆಯಲಿಕ್ಕೆ?
ಅಲ್ಲ
ಸಗಣಿ ಹಿಡಿಯಲಿಕ್ಕೆ
ಜನರ ಮೇಲೆ ಒಗೆಯಲಿಕ್ಕೆ.
■■

೨೬

ಆನೆ ಬೊಗಳುತ್ತದೆ

"ಆನೆ ಹೋಗುವಾಗ
ಶ್ವಾನ ಬೊಗಳುತ್ತದೆ"

ಇದು ದೊಡ್ಡವರು ದೊಡ್ಡವರಾಗಿ
ನಡೆದುಕೊಳ್ಳುತ್ತಿದ್ದ ಕಾಲದ ಗಾದೆ.

ಅಂದು
ಬೊಗಳುತ್ತಲಿದ್ದರೂ ಶ್ವಾನ
ಹೊರಳಿ ನೋಡದೆ
ಹೋಗುತ್ತಲಿದ್ದವು, ಆನೆ.

ಇಂದು
ಹಿಡಿದು ದೊಡ್ಡ ಕೋಲ
ಸಣ್ಣವರೂ ದೊಡ್ಡವರೆಂದು
ಮೆರೆಯುವ ಕಾಲ.
ಬೊಗಳಿದರೆ ಸಾಕು ಶ್ವಾನಗಳು
ತಿರುಗಿ ಬೊಗಳುತ್ತವೆ, ಈ ಆನೆಗಳು.
ಕೆಲವೊಮ್ಮೆ
ಶ್ವಾನ ಹೋದರೆ ಸಾಕು,
ಈ ಆನೆಗಳೇ ಬೊಗಳುತ್ತವೆ.
■■

೨೭

ಬಾಹುಬಲಿ

ದೇವತೆಗಳೆಲ್ಲರೂ
ದೇಗುಲದ ಒಳಗೆ–ಮಾಳಿಗೆಯ ಕೆಳಗೆ,
ಮುಗಿಲೇ ಮಾಳಿಗೆಯಾಯ್ತು ಬಾಹುಬಲಿಗೆ.

ಸಿದ್ಧಶಿಲೆಯಲಿ ನಿಂತ ಸಿದ್ಧನಂತೆ
ಈ ಲೋಕ ಆ ಲೋಕ ಮೂಲೋಕ ಮುಟ್ಟಲು

ಗಿರಿಯ ಗರ್ಭದಿ ಎದ್ದ
ಜೈನಬುದ್ಧ.

ಲೋಕಲೋಕದ ತುಂಬ ಕಾಳಕತ್ತಲೆ ಪಾಪ,
ದಾರಿ ತಪ್ಪಿದ ಚಂದ್ರ
ದಿಕ್ಕು ತಪ್ಪಿದ ಸೂರ್ಯ,
ಸಿದ್ಧ ಶಿಲೆಯಿಂದಿಳಿದ ದಿವ್ಯದೀಪ.

ಕಳೆದಿರುವ ಬಟ್ಟೆ ಬೆಟ್ಟದ ಮೇಲೆ ನಿಂತಿರುವ
ಬಾಹುಬಲಿ ಭಾರಕ್ಕೆ ಬೆಟ್ಟ ಬೆವರಿಟ್ಟಂತೆ
ಸುತ್ತಲೂ ಸೆಲೆ ನೂರು ಸುರಿಯುತ್ತಿವೆ,
ಪಾದತೀರ್ಥವ ಹೊತ್ತು ಮುನ್ನಡೆದಿವೆ.

ಈ ನಿರಾಭರಣನಿಗೆ
ಬತ್ತಲೆಯೆ ಆಭರಣ.
ಮೈತುಂಬ–
ಹಗಲು: ಬೆಳಕಿನ ಬಟ್ಟೆ
ಇರುಳು: ಕತ್ತಲೆ ಬಟ್ಟೆ,

ತುಳಿದು ನಿಂತಿದ್ದಾನೆ, ಮೋಹ ಬಟ್ಟೆ,
ಜಗದಗಲ ಮುಗಿಲಗಲ ಮಿಗೆಯಗಲ
ಇವ ಬೆಳೆದ
ಎಷ್ಟು ಬೆಳೆದರು ನಾವು,
ನಮ್ಮ ಶಿರ ಮುಟ್ಟದು
ಇವನ ಪಾದ.
■■

೨೮

ಮೂರ್ತಿ ಭಂಜನೆ

ಕಲ್ಲು,
ಸುಖಿಯಾಗಿದ್ದೆನು, ಕಾಡಿನಲಿ,
ಕಲ್ಲು, ಮಣ್ಣುಗಳ ಜೊತೆಯಲ್ಲಿ.

ಹಿಡಿದು ನನ್ನ
ಕಡೆದ ಶಿಲ್ಪಿ,
ಶಿಲೆಯಳಿದು ಕಲೆಯಾದೆ
ಕಾಡಿನಲ್ಲಿ,
ಬಂಡೆಗಲ್ಲುಗಳ ಬೀಡಿನಲ್ಲಿ.

ಕಲ್ಲುಗಳ ನಡುವೆ ಕಲೆಯೇಕೆ?
ಈ ಕಾಡಿನಲಿ ಇದು ಬೇಕೆ?
ಶಿಲ್ಪಕೆ ಶಿಲೆಗಳ ಕಾಟ.

ಕಾಲಿಗೆರಗುವ ನೆವದಿ
ಕಿತ್ತಿದರು ಹತ್ತು ಬೆರಳ
ಹಿಡಿದು ಹೂ ಹಾರ
ನಗುನಗುತ ಮುರಿದರು ಕೊರಳ
ಹೀಗೆ ಕಳಚೆ ಒಂದೊಂದೇ ಅಂಗ
ಕಲೆ ಕಲ್ಲಾಯಿತು ಮರಳಿ.
ಕಳೆಯಿತು ಕಲ್ಲಿನ ಕಾಟ,
ಈಗ ಕಲ್ಲಿಗು ಕಲ್ಲಿಗು ಒಡನಾಟ.

■■

೨೯

ಅಭಯಾರಣ್ಯ

ಇದು ನಂದನ
ನಿರ್ಬಂಧನ
ಕಾಲು ಹೋದತ್ತ ಕಾಲ ಕಳೆಯಬಹುದು–
ಹಸಿರಿನಲಿ
ಹಸುವು ತಿರುಗಾಡಿದಂತೆ,
ತಾಯ ಉಡಿಯಲಿ,
ಶಿಶುವು ಹರಿದಾಡಿದಂತೆ.

ಇತ್ತೀಚೆ
ಈ ನಿರಪಾಯ ನೆಲೆಯಲ್ಲಿ
ಬಲೆಯ ಹೂಡಿದ್ದಾರೆ,
ಮರೆತು ಇಟ್ಟೀರಿ ಕಾಲು ಜೋಕೆ,
ಕಾಲಿಗೂ ಕೈಗೂ ಹಗ್ಗ
ಬಿಗಿಯುತ್ತಾರೆ, ಬಲೆಯ ಮಗ್ಗ.

ಮುಗ್ಧರು ಒದ್ದಾಡುವುದನ್ನು
ನೋಡುತ್ತ,
ಮುಸುಕಿನಲಿ
ಮುಸು ಮುಸು ನಗುತ್ತಾರೆ,
ಈ ಇವರು, ಆ ಅವರು
ದೊಡ್ಡವರು!

■■

೩೦

ತಪ್ಪು ಹೆಜ್ಜೆ

ದಾರಿ ತಪ್ಪದೆ ನಾವು
ನಮ್ಮ ಕಾಲನು ನಂಬಿ
ನಡೆದರೆ, ನಡೆದಷ್ಟು ದಾರಿ ಇದೆ.
ಪಯಣದ ತುದಿಯಲ್ಲಿ
ಊರು ಇದೆ.
ನಾಳೆಯಾದರೂ ನಮಗೆ
ನಿಲವು ಇದೆ.

ದಾರಿ ತಪ್ಪಿದ ಬಳಿಕ
ಊರೆಲ್ಲಿದೆ?
"ನಾಳೆ" ಎನ್ನುವುದಕ್ಕೆ
ಕೊನೆಯೆಲ್ಲಿದೆ?
■■

೩೧

ಮಧ್ಯಬಿಂದು ಸಾಮ್ರಾಜ್ಯ

ಪರಿಘದ ತೆಕ್ಕೆಯ ಒಳಗೆ
ವರ್ತುಲ,
ವರ್ತುಲ ಗರ್ಭದಿ ಅಸಂಖ್ಯ ವ್ಯಾಸ
ದ್ವಿಸಂಖ್ಯೆ ತ್ರಿಜ್ಯ,
ಇದು, ನಿಷ್ಕಲ ಬಿಂದುನೃಪ ಸಾಮ್ರಾಜ್ಯ

ಈ ತ್ರಿಜ್ಯ, ವ್ಯಾಸ, ವರ್ತುಲ, ಪರಿಘವ
ಬಳಸಿ ಕಾಣದೆ ನಿಂದು,

ಆಳುತ್ತಿದೆ ಹೊರಗೆಂಬುದ
ಒಳಗಿನ ಬಿಂದು.

ಕಾಣದ ಬಿಂದು ಕಳೆದರೆ
ಕಳಚುತ್ತವೆ
ತ್ರಿಜ್ಯ, ವ್ಯಾಸ, ವರ್ತುಲ, ಪರಿಘ
ಅಲ್ಲಿ ಇಲ್ಲಿ
ಚಲ್ಲಾಪಿಲ್ಲಿ.
ಸಪ್ತವರ್ಣಮಯ
'ಸಕಲ' ಜಗತ್ತು
'ನಿಷ್ಕಲ'ವೇ ನಿಂತಿದೆ
ಇದೆಲ್ಲವ ಹೊತ್ತು.
■■

೩೨

ನೀರಿಲ್ಲದ ನಲ್ಲಿ

ನೀರಿಲ್ಲದ ನಲ್ಲಿ
ಜೋಡಿಸಿದವರಾರಿಲ್ಲಿ?
ಈ ಅರವಟ್ಟಿಗೆಯಲ್ಲಿ.

ನೀರಿರುವ ನಲ್ಲಿ
ಅಲ್ಲಿ, ಇಲ್ಲಿ,
ಇವುಗಳ ಜೊತೆಯಲ್ಲಿ
ಈ ನೀರಿಲ್ಲದ ನಲ್ಲಿ.

ಹಿಂದೆ ಕೆರೆ ಬರಿದು
ಮುಂದೆ
ನೀರಡಿಸಿದ ಕೊಡಗಳ ಸಾಲು
ಹಿರಿದು.

ನಡುವೆ ನೀರಿಲ್ಲದ
ನಲ್ಲಿ,
ಇಲ್ಲಿ
ಕನ್ನಡ ಶಿಕ್ಷಣದಲ್ಲಿ.
■■

೩೩

ವಿಶ್ವವಿದ್ಯಾಲಯಗಳು

ಹಳ್ಳಿಯ ದನಗಳಿಗೂ
ಶಿಕ್ಷಕ ಜನಗಳಿಗೂ
ಇದು ಹುಲ್ಲುಗಾವಲು,

ಅವು ಬರುತ್ತವೆ ಮುಂಜಾನೆ
ಮೆಯ್ದು ಹೋಗುತ್ತವೆ, ಸಂಜೆ.

ಇವು ಬರುತ್ತವೆ ಸೋಮವಾರ
ನಿದ್ದೆ ಮಾಡಿ
ಎದ್ದು ಹೋಗುತ್ತವೆ ಶನಿವಾರ,
ಒಮ್ಮೊಮ್ಮೆ ಇಡೀ ವಾರ.

ಇತ್ತೀಚೆ
ಕಟ್ಟಿದ್ದಾರೆ, ಬೇಲಿ ಆವರಣಕ್ಕೆ
ಕಟ್ಟಬೇಕಿದೆ ಬೇಲಿ
ಇವರ
ರಜಾ ದಿನಕ್ಕೆ,
ಮಧ್ಯಾಹ್ನ ಮನೆಗೆ ಹೋಗುವುದಕ್ಕೆ
■■

೩೪

ನೆಲ-ಮುಗಿಲು

ಮೈ ಚಾಚಿದೆ ನಸು ನಾಚಿದೆ
ಈ ಪಾರ್ವತಿ ನೆಲವು,
ಕೈ ಬಾಚಿದೆ, ಎದೆಗವಚಿದೆ
ಆ ಪರಶಿವ ನಭವು.

ಆಕಾಶದ ಆಲಿಂಗನದಲಿ
ಮಲಗಿದೆ, ಈ ನೆಲವು,
ಭೋಗವಲ್ಲವಿದು ಯೋಗದ ನಿಲವು.
ನಾವೆಲ್ಲ
ಈ ದಾಂಪತ್ಯದ ಫಲವು.

■■

೩೫

ಕೂಸು

ದೇವರ ಮನಸು
ಅದರಾಚೆಯ ಸುಂದರ ಕನಸು,
ಈ ಲೋಕದ ಹಣೆಬರೆದ ಅರಸು
ಈ ಕೂಸು

ಸತಿ-ಪತಿಯೋಗದ
ಸಂಸಿದ್ಧಿಯ ಶಿಶು
ತಾಯಿ ತಪಸ್ವಿನಿ
ಗರ್ಭಗುಡಿಯಲಿ
ನೆತ್ತರ ಊಡಿಸಿ ಸಲಹಿದ
ಮಾಸದ ನವಮಾಸದ ಸಸಿಯು

ತಟಾಕ ತೊಟ್ಟಿಲದೊಳಗೆ
ಮುಖ-ನಯನದ,ಕರ-ಚರಣದ
ದಶ ವಿಕಸಿತ ಕಮಲದ ಬಳ್ಳಿ,
ಚಂದಿರ
ಚೈತನ್ಯವೆ ಕವಲೊಡೆದಿದೆ
ಮೈ ಪಡೆದಿದೆ, ಇಲ್ಲಿ.

ಹಿಡಿದಿದೆ ಕೈ ಮುಟ್ಟಿಗೆಯಲಿ
ಭಾವೀ ಬದುಕಿನ ಕನಸು
ಬಿಚ್ಚಿದರೆ ಕಳೆದೀತೆನ್ನುವ ಅಳಕು

ಇದು ನವ ನವ ನವ್ಯ,
ಕವಿದಂಪತಿ ಸೃಷ್ಟಿಯು-
ನವರಸ ಕಾವ್ಯ
■■

೩೬

ಮಹಾಶ್ವೇತೆ

ಉಮಾ:
ಮನೆಯಲ್ಲಿ ಮೂಡಿತೋ
ಹುಣ್ಣಿಮೆಯ ಚಂದ್ರಮಾ
ಹೆಜ್ಜೆ ಇಟ್ಟಲ್ಲೆಲ್ಲ ಬೆಳಕು ತುಳುಕಿದ ಹಾಗೆ,
ಹೊಸ್ತಿಲ ಒಳಗೆ ಮೂಡಿತ್ತು ಅಲ್ಲಲ್ಲಿ ಇಂದ್ರಚಾಪ!!

ಈಕೆ ಆ ಮಹಾಶ್ವೇತೆ
'ಸಖೀಗೀತೆ' ಪುಟಪುಟವೂ ರಮ್ಯ ಜಾಲ
ಪುಟದ ಸಾಲುಗಳೆಲ್ಲ ಸೃಜನಶೀಲ.

ಶಯ್ಯಾಗೃಹಕೆ ಬಂದಳೋ
ಬೆಳದಿಂಗಳ ತಂದಳೋ
ಬೆಳಕಿನ ಹೊಳೆಯಲ್ಲಿ ಮಿಂದಳೋ
ನನ್ನ ಜೊತೆಯಲ್ಲಿ.

ದಿನವಿಡೀ ಕಾರ್ಯೇಷು ಮಂತ್ರಿ
ಇತ್ಯಾದಿ ಇತ್ಯಾದಿ ಆಗುತ್ತ ಆಗುತ್ತ ರಂಭೆಯಾಗುತ್ತಾಳೆ
ಶಯ್ಯಾಸಖಿ
ನಾನೆಂಬ ಕಲ್ಲು ಕರಗಿಸುತ್ತಾಳೆ ಚಂದ್ರಮುಖಿ.

ಸೌಂದರ್ಯ ಸಾಕಾರ!
ಆನಂದ ಅವತಾರ!!
ಹಾಲಿನಂತಹ ಹೆಣ್ಣು,
ಹಾಲುಂಡು ಮೇಲುಂಬರೇ?
■■

೩೭

ಹುಲ್ಲೆಗಣ್ಣಿನ ಹುಡುಗಿ

ಹುಲ್ಲೆಗಣ್ಣಿನ ಹುಡುಗಿ
ಇಲ್ಲಿ ನಿಲ್ಲಲು ಬ್ಯಾಡ
ಕಣ್ಣ ಕವಣಿಯ ಬೀಸಿ
ಕೊಲ್ಲಬ್ಯಾಡ.

ಹತ್ತಿರ ಬರಬ್ಯಾಡ
ಹತ್ತಿ ಹೂಹೂ ಹುಡುಗಿ
ಚಿತ್ತ ಚಲ್ಲಾಪಿಲ್ಲಿ
ಮಾಡಬ್ಯಾಡ.

ಕಣ್ಣ ಬೊಗಸೆಯ ಮೊಗೆದು
ನನ್ನ ಕುಡಿಯಲು ಬ್ಯಾಡ
ಕಣ್ಣಿದ್ದು ಕುರುಡ ನಾ
ಎನಿಸಬ್ಯಾಡ

ಏರಿಯೊಳಗಿನ ನೀರೆ
ತುಂಬಿ ತುಳುಕಲು ಬ್ಯಾಡ
ನೀರಡಿಕೆ ನನಗಿಲ್ಲ
ಕಾಡಬ್ಯಾಡ

ಹುಲ್ಲಾಗ ಬಯಸೀದಿ
ನನ್ನ ಹಾದಿಯ ಒಳಗ
ಗುಲ್ಲು ಬೆಳೆಯಲು ಬಹುದು
ಹೆಜ್ಜೆ ತೆಳಗ.

■■

೩೮

ಕಾಡುತ್ತಲಿದ್ದಾಳೆ ಕವಿತೆ

"ಗದ್ಯ ನಿನ್ನ ಪಟ್ಟದರಸಿ,
ಪದ್ಯ ನಾನು ಪ್ರೇಯಸಿ"
–ಹೀಗೆ ಪಿಸುಗುಟ್ಟುತ್ತ, ಪಿಸುಗುಟ್ಟುತ್ತ
ಭೃಂಗದ ಬೆನ್ನೇರಿ ಬರುತ್ತಲಿರುವೆ ಕವಿತೆ
ಎಲೆ ಎಲೆ
ಇಷ್ಟು ದಿನ ಎಲ್ಲಿ ಅವಿತೆ?

ವಸ್ತುಕಕೆ ವರ್ಣಕವು
ಪ್ರಿಯತಮಗೆ ಪ್ರೇಯಸಿಯು
–ಈ ವಾದ ಮಂಡಿಸುತ್ತ,

ಹಗಲು ಆದರೆ ನಾನು
ಬೆಳಕು ಆಗುತ್ತ
ರಾತ್ರಿಯಾದರೆ ನಾನು ಕತ್ತಲಾಗುತ್ತ
ಕಾಡುತ್ತಲಿರುವೆ ಕವಿತೆ
ಎಲೆ ಎಲೆ
ಇಷ್ಟು ದಿನ ಎಲ್ಲಿ ಅವಿತೆ?
ಹುಚ್ಚಿ
ತಲೆಯ ಕೂದಲು ಬಿಚ್ಚಿ
ಹೊತ್ತು ಗೊತ್ತಿಲ್ಲದೆ
ಹೊಕ್ಕು ಕಾಡುತ್ತಿರುವೆ
ಬೇಡವೆಂದರೂ ನಾನು
ಬೇಡ ಹೆಣ್ಣಿನ ಹಾಗೆ
ಕಾಡ ಸುತ್ತುತ್ತಿರುವೆ –ನನ್ನ ಒಳಗೆ,
ಬೇಟೆಯಾಡುತ್ತಿರುವೆ–ಬೇಟದೊಳಗೆ.
ಎಲೆ ಎಲೆ
ಇಷ್ಟುದಿನ ಎಲ್ಲಿ ಅವಿತೆ?

■■

೩೯

ಬರೆಯುತ್ತಲಿದ್ದೇನೆ ಕವಿತೆ

ಹೆಪ್ಪುಗಟ್ಟಿದ ನನ್ನ
ರಕ್ತ ಸಳಮಳ ಕುದಿದು,
ನರ ನಾಡಿಯಲಿ ಹಳ್ಳ ಹೊಳೆಯಾಗಿ ಹರಿದು,
ಜಲಪಾತ ಸುರಿದು, ಭೋರ್ಗರೆದು
ಈ ಜೀವ ಮರು ಜೀವ
ಮತ್ತೆ ಪಡೆಯಲಿಯೆಂದು
ಬರೆಯುತ್ತಲಿದ್ದೇನೆ ಕವಿತೆ

ಮಲೆತು ನಿಂತ ಸಮಾಜ
ಚಲಚಲನೆ ಚಲಚಲಿಸಿ,
ನಿಲ್ಲದೇ ಭೂತದಲಿ
ವರ್ತಮಾನಕೆ ದ್ರವಿಸಿ,
ಕಳಕಳ ಉಲಿಯುತ್ತ ಕಲ್ಲ ಹೊಳೆಯಂತೆ
ನೀರ ನಿರ್ಮಲವಾಗಲೆಂದು ಬಯಸಿ,
ಬರೆಯುತ್ತಲಿದ್ದೇನೆ ಕವಿತೆ
ಎಡಬಲದಿ ಎದ್ದಿರುವ
ಗೋಡೆಗಳ ಕೆಡಹುತ್ತ
ಬಿಡಿ ಸಮಾಜಗಳೆಲ್ಲ
ಕೈಗೆ ಕೈ ಹಿಡಿಯುತ್ತ
ಮೈಗೆ ಮೈ ಬೆಸೆಯುತ್ತ
ಹುಟ್ಟಿಸಲು ಹೊಸಲೋಕ, ಹೊಚ್ಚ ಹೊಸಲೋಕ
ಬರೆಯುತ್ತಲಿದ್ದೇನೆ ಕವಿತೆ

ಗತಕಾಲ ದ್ವೀಪದಲಿ
ಗಾಣದೆತ್ತಿನ ಪಯಣ
ಸಾಕಾಯ್ತು
ಬೇಕಾಯ್ತು ವರ್ತಮಾನದ ಭವಿಷ್ಯದ ಯಾನ
ಈ ಪೂರ್ಣ ಪಯಣಕ್ಕಾಗಿ
ಬರೆಯುತ್ತಲಿದ್ದೇನೆ, ಪೂರ್ಣ ಕವಿತೆ
■■

೪೦

ಕವಿಗೋಷ್ಠಿಗೆ ಒಂದು ಕವಿತೆ

ಹಾಲು,
ಹಾಲುಗಲ್ಲದ ಹಸುಳೆಗಳಿಗೆ,
ಅಡಗಿಸಿಟ್ಟಿದ್ದರೂ ಅಡಕಿಲೊಳಗೆ

ಕದ್ದು ಕುಡಿಯುವ
ಮಾರ್ಜಾಲ ಜಾಲಗಳ ಮಧ್ಯದಲಿ
ಜೀವ ಕೈಯಲಿ ಹಿಡಿದ ಗಿಳಿಯಂತೆ,
ಹಿಡಿದು ಕೈಯಲಿ ಕವಿತೆ
ಈ ಕವಿಗೋಷ್ಠಿಗಾಗಿ ನಾ ಕವಿತೆ ವಾಚಿಸಬೇಕು!

'ಸಂಜೆವಾಣಿ'ಯ ತುಂಬ ಕಾಳಕತ್ತಲೆಯ ಧ್ವನಿ,
'ದೈನಿಕ'ದ ಪುಟಗಳಲಿ ಪುಟಿವ ನೆತ್ತರ ಸುದ್ದಿ,
ಸಂಸಾರ ಪರಿವಾರದಲಿ ದೀವಳಿಗೆ ಹೋಗಿ
ಹೋಳಿ ಹುಣ್ಣಿವೆ ಬಂತು,
ಹೊಸ್ತಿಲಕು ಬರಲಿಲ್ಲ ಹೊಸ ಯುಗಾದಿ,
ಹೆಣ್ಣು ಗಂಡುಗಳೆಲ್ಲ ಶಯ್ಯಾಚತುಷ್ಪದಿ.
ಈ ರೀತಿ ವಿಪರೀತಗಳ ಮೌನದಲಿ ನೋಡಿ
ಮೂಕ ಪಶುವಿನ ಹಾಗೆ
ಈ ಬಲಿಪೀಠದಲಿ ನಿಂತು
ಕವಿಗೋಷ್ಠಿಗಾಗಿ ನಾ ಕವಿತೆ ವಾಚಿಸಬೇಕೆ?

ಐದು ವರ್ಷಕ್ಕೊಮ್ಮೆ,
ಇಪ್ಪತ್ತು ತಿಂಗಳಿಗೆ ಕೆಲವೊಮ್ಮೆ
ಚುನಾವಣೆ ಪ್ರಹಸನ
ಬಹುಮತದ ಕೌರವರಿಗೇ ಗೆಲುವು
ಸೋಲು ಪಾಂಡವರಿಗೆ.
ಧೃತರಾಷ್ಟ್ರನಿಗೆ ಕಣ್ಣಿಲ್ಲ,
ಗಾಂಧಾರಿಗೆ ಇದ್ದೂ ಇಲ್ಲ.
ದ್ರೋಣರಿಗೆ
ಬಾಯಿ ಇದ್ದೂ ನಾಲಗೆಯಿಲ್ಲ.
ವಿಧುರನಿಗೆ
ಕಿವಿಯಿದ್ದೂ ಕೇಳಿಸಿಕೊಳ್ಳುವುದಿಲ್ಲ.
ಭೀಷ್ಮರಿಗೆ ಎಲ್ಲ ಇದ್ದೂ ಏನೂ ಇಲ್ಲ.
ಹೀಗೆ ಬಲವಂತರಿಗೆ ಬಲವಿಲ್ಲದಿರುವಾಗ

ಸಚಿವ–ಶಾಸಕರು ಗೌಡನ ಸೂಳೆಯರು,
ಸೊಕ್ಕುತ್ತಲಿರುವಾಗ,
ಮಿಕ್ಕವರು ಸಿಕ್ಕ ಸಿಕ್ಕವರು
ರಾಜ್ಯ ತಿಕ್ಕಿ ಮುಕ್ಕುತ್ತಲಿರುವಾಗ
ಯಾರ ಮಾತೂ ಯಾರು ಕೇಳದಿರುವಾಗ
ಕೇಳಿಸಿಕೊಳ್ಳದಿರುವಾಗ,
ಇಂಥ ಕಿವುಡ ಧೃತರಾಷ್ಟ್ರರ
ಈ ಸಭೆಯಲ್ಲಿ ನಿಂತು
ಕವಿಗೋಷ್ಠಿಗಾಗಿ ನಾ
ಕವಿತೆ ಯಾಕೆ ವಾಚಿಸಬೇಕು?
■■

೪೧

ನನ್ ನಮಸ್ಕಾರ ನಿಮಗ

ಹೊಂಟೇನಿ ಇಂದ ಹೊರಗ
ನನ್ ನಮಸ್ಕಾರ ನಿಮಗ

ಸುಡು ನೀರ ಕಡಲ ಒಡಲಾಗ ಈಸಿದ ಮೀನ
ಬದುಕಿತ್ತ ಇಲ್ಲಿ
ಬದುಕಿತ್ತ ಇಲ್ಲಿ
ಇಲ್ಲಿ ಬದುಕಿತ್ತ ತೀರ್ಥದೊಳಗ
ನಿಮ್ ನೆದರ ನೆರಳ ಕೆಳಗs
ನಿಮ್ ನೆದರ ನೆರಳ ಕೆಳಗs
ಪಡೆದಿತ್ತ ದೊಡ್ಡ ಬಳಗ

ನಿಮ್ ಚಂದ್ರದೃಷ್ಟಿಯ ಸೆಳತದಿಂದ
ಉಕ್ಕುತ್ತ ಜಲಧಿ
ಉಕ್ಕುತ್ತ ಜಲಧಿ
ಉಕ್ಕುತ್ತ ಜಲಧಿ

ಉಕ್ಕುತ್ತ ಬಂತ ಇತ್ತ,
ಕೊಟ್ಟಿತ್ತ ಅಡಿಗೆ ಮುತ್ತ
ಕೊಟ್ಟಿತ್ತ ಅಡಿಗೆ ಮುತ್ತಽ
ಆ ಸುಖಾ ಅದಕ ಗೊತ್ತ

ನಿಮ್ ಚರಣದಲ್ಲಿ ನಮ್ ಹರಣಗಂಧ
ತೇದೇವಿ ಗಂಧ
ತೇದೇವಿ ಗಂಧ
ತೇದೇವಿ ಗಂಧ
ತೇದೇವಿ ಇರಲಿ ಕರುಣ
ಮರಿಬ್ಯಾಡ್ರಿ ನಿಮ್ಮ ಮಗನ
ಮರಿಬ್ಯಾಡ್ರಿ ನಿಮ್ಮ ಮಗನಽ
ಇದೋ, ತಾಯಿ ನಿಮಗ ಶರಣ

ಬ್ಯಾಸಗಿಯ ಹಳ್ಳ ಹಳಿನೆನಪ ನೆನೆದು
ನಡದ್ಹಾಂಗ ಮುಂದ
ನಡದ್ಹಾಂಗ ಮುಂದ
ನಡದ್ಹಾಂಗ ಮುಂದ
ನಾ ನಡದೆ ನುಂಗಿ ತಾಪ
ಬರೆದಿಡಾ ನನ್ನ ರೂಪ
ಬರೆದಿಡಾ ನನ್ನ ರೂಪ
ಹಚ್ಚಿಡ ನೆನಪ ದೀಪ

ಮಾಬಳೇಶ್ವರದ ಗಿರಿಯ ಶಿಖರದ
ಲಿಂಗಸ್ಥಾವರ
ಲಿಂಗಸ್ಥಾವರ
ಲಿಂಗಸ್ಥಾವರ
ಲಿಂಗದೀರ್ಘದಂಡ
ಇದೋ ನಿನಗ ದೀರ್ಘದಂಡ
ಇದೋ ನಿನಗ ದೀರ್ಘದಂಡಽ
ಉದ್ದಂಡ ದೀರ್ಘದಂಡ

■■

[illegible]

ಕೆಟ್ಟಿತ್ತು ಕಲ್ಯಾಣ

[ನಾಟಕ]

ಡಾ. ಎಂ. ಎಂ. ಕಲಬುರ್ಗಿ

೧೯೯೫

ಸಹೃದಯ ಸಾಂಸ್ಕೃತಿಕ ಅಕಾಡೆಮಿ, ಧಾರವಾಡ

ಸಾಮಾಜಿಕ ನ್ಯಾಯಕ್ಕಾಗಿ
ಸಾಹಿತ್ಯ–ಕಲೆಗಳನ್ನು ದುಡಿಸುತ್ತಲಿರುವ
ಸಾಹಿತಿ–ಕಲಾವಿದ ಸಮುದಾಯಕ್ಕೆ

ಪಾತ್ರಗಳು

ಬಾಗೇವಾಡಿ :

ಬಸವಣ್ಣ, ನಾಗಲಾಂಬಿಕೆ, ಬಲದೇವ, ಮಾದರಸ, ಮಾದಲಾಂಬೆ, ವೇದಭಟ್ಟ , ವೃದ್ಧಪುರೋಹಿತ, ಪುರೋಹಿತ-೧, ಪುರೋಹಿತ -೨, ಪೂವಮ್ಮ, ಸದಸ್ಯ. ಆಳುಗಳು, ಡಂಗುರದವ, ಸೇವಕ, ಬ್ರಾಹ್ಮಣರು, ಜನರು.

ಕೂಡಲಸಂಗಮ :

ಬಸವಣ್ಣ, ನಾಗಲಾಂಬಿಕೆ, ಈಶಾನ್ಯಗುರು, ಪಶುಪತಿ ಶಿವಾಚಾರ್ಯ, ಸದ್ಯೋಜಾತ, ಮಾರ್ಜಾಲಪ್ಪ, ನಂದಿಕೇಶ, ವಿದ್ಯಾರ್ಥಿ -೧, ವಿದ್ಯಾರ್ಥಿ -೨, ವಿದ್ಯಾರ್ಥಿ -೩, ವಿಪ್ರ -೧, ವಿಪ್ರ -೨, ಒಬ್ಬ.

ಕಲ್ಯಾಣ :

ಬಸವಣ್ಣ, ನಾಗಲಾಂಬಿಕೆ, ಬಲದೇವ, ಗಂಗಾಂಬಿಕೆ, ಬಿಜ್ಜಳ, ರಂಭಾ, ಕೇಶವಭಟ್ಟ, ನಾರಣಭಟ್ಟ, ವಾಮದೇವ ಶಿವಾಚಾರ್ಯ, ಲಕುಲೀಶ ಪಂಡಿತ. ಮಂಚಣ್ಣ, ಮಾಚಿದೇವ, ನಾಗಿಮಯ್ಯ, ಹರಳಯ್ಯ, ಮಧುವಯ್ಯ, ಘಟ್ಟಿವಾಳಯ್ಯ, ಜಗದೇವ, ಮಲ್ಲಿಬೊಮ್ಮಣ್ಣ, ಶಿವಾಚಾರ್ಯ, ಪುರೋಹಿತ, ಶೀಲವಂತ, ನೀಲಾವತಿ, ವೃದ್ಧ, ಸೂಳೆ, ದನಗಾಹಿ, ಹೆಳವ ಹೂವಯ್ಯ, ಅಧಿಕಾರಿ, ಶಿಷ್ಯ.

ಸೇವಕ -೧, ಸೇವಕ -೨, ಪ್ರಜೆ -೧, ಪ್ರಜೆ -೨, ಜಂಗಮ-೧, ಜಂಗಮ -೨, ಜಂಗಮ-೩, ಜಂಗಮ-೪, ಒಬ್ಬ, ಇನ್ನೊಬ್ಬ, ಮತ್ತೊಬ್ಬ, ತಳವಾರ-೧, ತಳವಾರ-೨, ಮಹಾಸತಿ-೧, ಮಹಾಸತಿ-೨, ಹೊಲೆಯ (ಬಾಲಕ), ಹೊಲೆಯ (ಮುದುಕ), ಹೊಲೆಯ (ಮುದುಕಿ), ಡಂಗುರದವ, ಯುವ ಶರಣರು, ಶರಣರು, ದ್ವಿಜರು. ಜನರು.

❖❖

*

ಅರಿಕೆ

ಈ ನಾಟಕವನ್ನು ಬರೆಯುವಾಗ ರಿಚರ್ಡ್ ಆ್ಯಟೆನ್ ಬರೋ ನಿರ್ದೇಶಿಸಿದ "ಗಾಂಧೀ" ಚಲನಚಿತ್ರ ನನ್ನ ಕಣ್ಣ ಮುಂದಿದೆ.

ಬಸವಣ್ಣನವರ ಜೀವನ ಮೂರು ಸಂಸ್ಕೃತಿಗಳಲ್ಲಿ ಸಾಗಿ ಬಂದಿದೆ: ಬಾಗೆವಾಡಿಯ ಅಗ್ರಹಾರ ಸಂಸ್ಕೃತಿ, ಕೂಡಲಸಂಗಮದ ದೇವಾಲಯ ಸಂಸ್ಕೃತಿ ಮತ್ತು ಕಲ್ಯಾಣದ ರಾಜಸಂಸ್ಕೃತಿ. ಇಲ್ಲೆಲ್ಲ ಆತ ಸ್ಥಾವರದಿಂದ ಜಂಗಮವಾಗುತ್ತ, ಸ್ಥಾವರವನ್ನು ಜಂಗಮಗೊಳಿಸುತ್ತ ಸಾಗಿಬಂದಿದ್ದಾನೆ. ಬಾಗೆವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ, ಸಂಗಮದಲ್ಲಿ ಅಂಗದಿಂದ ಲಿಂಗಕ್ಕೆ, ಕಲ್ಯಾಣದಲ್ಲಿ ಲಿಂಗದಿಂದ ಜಂಗಮಕ್ಕೆ ಆತನು ಹೆಜ್ಜೆ ಹಾಕಿದ್ದಾನೆ. ಮೊದಲಿನ ಎರಡು ಪರಿಸರಗಳಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಹರಿದುಕೊಂಡ ಬಸವಣ್ಣ, ಮೂರನೆಯ ಪರಿಸರಕ್ಕೆ ಬರುವಲ್ಲಿ, ಈ ಮೂರೂ ಒಂದುಗೂಡಿ ಅವನನ್ನು ದಂಡಿಸಿದವು.

ಅಗ್ರಹಾರ ಸಂಸ್ಕೃತಿಯನ್ನು ಧಿಕ್ಕರಿಸಿದ ಬಸವಣ್ಣನ ಬಗೆಗೆ ಬಾಗೆವಾಡಿಯ ಬ್ರಾಹ್ಮಣರು ಹೇಗೆ ನಡೆದುಕೊಂಡಿರಬಹುದು? ದೇವಾಲಯ ಸಂಸ್ಕೃತಿ - ಮಠ ಸಂಸ್ಕೃತಿಗಳನ್ನು ನಿರಾಕರಿಸಿದ ಅವನನ್ನು ಕೂಡಲಸಂಗಮದ ಶೈವಮಠ ಹೇಗೆ ನಡೆಸಿಕೊಂಡಿರಬಹುದು? ಭಂಡಾರಸಚಿವ ಬಸವಣ್ಣನ "ಜಂಗಮನೀತಿ"ಯನ್ನು ಬಿಜ್ಜಳನ "ಸ್ಥಾವರ ಅರ್ಥನೀತಿ" ಹೇಗೆ ಪ್ರತಿಭಟಿಸಿರಬಹುದು? ಕೊನೆಯದಾಗಿ ಜ್ಞಾನಿಯಾದ ಶೂದ್ರ ಅಲ್ಲಮನನ್ನು ಜಂಗಮನೆಂದು ಪರಿಗಣಿಸಿದುದಕ್ಕೆ, ಅದನ್ನು ಅಧಿಕೃತಗೊಳಿಸುವಂತೆ ಅವನನ್ನು ಶೂನ್ಯಪೀಠದ ಮೇಲೆ ಕುಳ್ಳಿರಿಸಿದುದಕ್ಕೆ ಶೈವ ಜಾತಿಜಂಗಮರು ಹೇಗೆ ಪ್ರತಿಕ್ರಿಯಿಸಿರಬಹುದು? ಎಂದು ಹಾಕಿಕೊಂಡ ಪ್ರಶ್ನೆಗಳಿಗೆ ಹೊಳೆದ ಸಹಜ ಉತ್ತರಗಳು ಇಲ್ಲಿವೆ. ಅಲ್ಲಲ್ಲಿಯ ಸಣ್ಣ-ಪುಟ್ಟ ಪ್ರಸಂಗಗಳು ವಚನಗಳನ್ನವಲಂಬಿಸಿ, ಶರಣಸಿದ್ಧಾಂತವನ್ನವಲಂಬಿಸಿ, ಇತಿಹಾಸದ ಮೌನದಿಂದ ಹೊರಡಿಸಿದ ಮಾತುಗಳಾಗಿವೆ. ಹೀಗಿದ್ದೂ ಸೃಜನಶೀಲ ಸಾಹಿತ್ಯಕೃತಿಗೆ ಅವಶ್ಯವಿರುವ ಸೂಕ್ತ ಸ್ವಾತಂತ್ರ್ಯವನ್ನು ಈ ನಾಟಕ ಅಲ್ಲಲ್ಲಿ ಪಡೆದಿದೆ. ಇಲ್ಲಿಯ ಕೆಲವು ಪ್ರಸಂಗಗಳನ್ನು ಈ ದೃಷ್ಟಿಯಿಂದ ನೋಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಬಸವಣ್ಣನವರ ಆತ್ಮತತ್ವಜ್ಞಾನವನ್ನು ಬಿಡದೆ, ಸಮಾಜತತ್ವಜ್ಞಾನವನ್ನು ಆಧರಿಸಿ ಬರೆದ ನಾಟಕವಿದು. ಅವರ ಸಮಗ್ರ ವ್ಯಕ್ತಿತ್ವಕ್ಕೆ ಬಿಡಿಸಿದ ದೃಶ್ಯರೂಪದ ವ್ಯಾಖ್ಯಾನವಿದು. ಸ್ಥಾವರಪರಿಸರ, ಅದಕ್ಕೆ ಬಸವಣ್ಣ ತೋರಿಸಿದ ಪ್ರತಿಕ್ರಿಯೆ; ಅದರಿಂದ ಆಕಾರಗೊಂಡ ಜಂಗಮಪರಿಸರ, ಇದನ್ನು ಸ್ಥಾವರಪರಿಸರ ನಾಶಮಾಡಿದ ರೀತಿ -ಇಷ್ಟು ಈ ನಾಟಕದ ಮೈ, ಮನಸ್ಸು.

ಕಾವ್ಯ ರಚಿಸುವವ ಕವಿ, ನಾಟಕ ರಚಿಸುವವ ನಾಟಕಕಾರನಲ್ಲ, ನಿರ್ದೇಶಕ. ಹೀಗಾಗಿ ಕವಿ ಬರೆದ ನಾಟಕ ಕೃತಿ ಎಷ್ಟೇ ಸಾಹಿತ್ಯಿಕವಾಗಿದ್ದರೂ ಕಚ್ಚಾ ಸರಕು, ಅದು ಪಕ್ಕಾ ಸರಕಾಗುವುದು ರಂಗಭೂಮಿಯ ಮೇಲೆ. ಈ ಎಚ್ಚರವನ್ನು ಉದ್ದಕ್ಕೂ ಕಾಯ್ದುಕೊಳ್ಳಲು ಪ್ರಯತ್ನಿಸಿದ್ದೇನೆ. ಜನರಿಗೆ ಬಸವಣ್ಣನವರ ಹೋರಾಟವನ್ನು

ತೋರಿಸಿಕೊಡಬೇಕು, ಸಿದ್ಧಾಂತಗಳನ್ನು ಕೇಳಿಸಿಕೊಡಬೇಕು- ಎಂಬ ಉದ್ದೇಶ ಹೊಂದಿರುವ ಈ ನಾಟಕದ ಪ್ರದರ್ಶನ ಪ್ರಸಂಗದಲ್ಲಿ ಅಭಿನಯದಷ್ಟೇ ಮಾತುಗಳಿಗೂ ಮಹತ್ವಕೊಡಬೇಕು. ಅಲ್ಲಲ್ಲಿ ಈ ನಾಟಕವನ್ನು ಪ್ರಾದೇಶಿಕ ಆಡುಮಾತಿಗೆ ತಿರುಗಿಸಿಕೊಳ್ಳಬೇಕು. ಆಗಾಗ ಪ್ರವಾಹಧ್ವನಿ ಹಿನ್ನೆಲೆಯಾಗಿ ಕೆಲಸ ಮಾಡಬೇಕು. ಸಶಬ್ದವಾಹಿನಿ, ಅಶುದ್ಧನೀರು-ಶುದ್ಧನೀರು, ಸ್ಥಗಿತಜಲ-ಚಲನಶೀಲಜಲ, ಅನೇಕ ಪ್ರವಾಹ-ಏಕೀಕೃತ ಪ್ರವಾಹ- ಇತ್ಯಾದಿ ಪ್ರವಾಹದೃಶ್ಯಗಳನ್ನು ಸಂದರ್ಭೋಚಿತವಾಗಿ, ಸಾಂಕೇತಿಕವಾಗಿ ಬಳಸಿಕೊಳ್ಳಬೇಕು. ಜೊತೆಗೆ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತ ಹೋಗಬೇಕು.

ಈ ನಾಟಕವನ್ನು ಬರೆದವನು ನಾನಾಗಿದ್ದರೂ ಬರೆಸಿಕೊಂಡವನು ನನ್ನೊಳಗಿರುವ ಬಸವಣ್ಣ. ಅವನನ್ನು ಕುರಿತು ನಾಟಕ ಬರೆಯಬೇಕೆಂದಿದ್ದ ನನ್ನ ಬಹುದಿನಗಳ 'ಬಯಕೆ' ಬರೆವಣಿಗೆಗೆ ಇಳಿಯಲು ಹವಣಿಸಿತು. ಅದರ ಫಲ, ಈ ನಾಟಕ.

ಚಂದ್ರಶೇಖರ ಪಾಟೀಲ, ಗಿರಡ್ಡಿ, ಪಟ್ಟಣಶೆಟ್ಟಿ, ಕೋತಿನ, ತೋಂಟದಾರ್ಯ, ಮುರಿಗೆಪ್ಪ, ಏಣಗಿ ನಟರಾಜ, ಮೋಹನ ನಾಗಮ್ಮನವರ, ಬಂಡು ಕುಲಕರ್ಣಿ, ಮಳಿಮಠ, ಸಮುದಾಯದ ಗಂಗಾಧರಸ್ವಾಮಿ, ಲಿಂಗದೇವರು ಹಳೆಮನಿ ಮೊದಲಾದವರು ಓದು-ವಾದಗಳ ಮೂಲಕ ಈ ನಾಟಕದ ಉತ್ತಮಿಕೆಗೆ ಕಾರಣರಾಗಿದ್ದಾರೆ. ತೋಂಟದಾರ್ಯ, ಮುರಿಗೆಪ್ಪ ತಮ್ಮ 'ಸಹೃದಯ ಸಾಂಸ್ಕೃತಿಕ ಅಕಾಡೆಮಿ'ಯ ಮೂಲಕ ಇದನ್ನು ಪ್ರಕಟಿಸಿದ್ದಾರೆ. ಈ ಗೆಳೆಯರಿಗೆ ಕೃತಜ್ಞ.

ಧಾರವಾಡ **-ಎಂ.ಎಂ. ಕಲಬುರ್ಗಿ**

❖❖

ದೃಶ್ಯ-೧

(ಆಗಮಿಕ ಶೈವಬ್ರಾಹ್ಮಣ ಮತ್ತು ಬಾಗೇವಾಡಿಯ ಪುರವರಾಧೀಶ್ವರನಾದ ಮಾದರಸನ ಭವ್ಯ, ಸಾಂಪ್ರದಾಯಿಕ ಮನೆ. ಒಳಗೆ "ಯಜ್ಞೋಪವೀತಂ ಪರಮಂ ಪವಿತ್ರಂ! ಪ್ರಜಾಪತೇಃ ಯತ್ಸಹಜಂ ಪುರಸ್ತಾತ್" ಮಂತ್ರಘೋಷ ಮತ್ತು ಪರಿವಾರದವರ ಸಡಗರದ ಮಧ್ಯೆ ಒಮ್ಮೆಲೇ ಗೊಂದಲ, ಗದ್ದಲ. "ಬಸವಣ್ಣಾ, ಬಸವಣ್ಣಾ ಜನಿವಾರ ಹರಿಬ್ಯಾಡ, ಜನಿವಾರ ಹರಿಬ್ಯಾಡ, ಹರಿಬ್ಯಾಡ. ಅದು ಪವಿತ್ರ ಯಜ್ಞೋಪವೀತ..." ಎಂಬ ಧ್ವನಿ ಪದೇ ಪದೇ ಕೇಳಿಸುತ್ತದೆ. ೧೫ ವರ್ಷ ವಯಸ್ಸಿನ ಬಸವಣ್ಣ ಜನ್ನಿವಾರವನ್ನು ಹರಿದುಕೊಳ್ಳಲು ಕೈಗೆ ಸುತ್ತಿಹಿಡಿದು, ತಪ್ಪಿಸಿಕೊಳ್ಳಲು ಮನೆಯಲ್ಲಿ ಓಡಾಡುತ್ತಿದ್ದಾನೆ. ಬೆನ್ನಟ್ಟಿ ಅವನನ್ನು ಹಿಡಿದ ಇಬ್ಬರು ಆಗಮಿಕ ಶೈವ ಪುರೋಹಿತರು ಎಡಬಲದಲ್ಲಿ ಅವನ ತೋಳು ಹಿಡಿದು ಅಡ್ಡಿಪಡಿಸುತ್ತಲಿದ್ದಾರೆ. ಅವರು ಬಸವಣ್ಣನನ್ನು ಹಿಂದೆ ಎಳೆಯುವ ಸ್ಥಿತಿಯಲ್ಲಿ, ಹೊಸ್ತಿಲ ಒಳಮಗ್ಗುಲಿಗೆ ಕಾಲುಕೊಟ್ಟು ನಿಂತಿದ್ದಾರೆ. ಅವರನ್ನು ಎಳೆದುಕೊಂಡು ಬಂದ ಬಸವಣ್ಣ, ಹೊಸ್ತಿಲ ದಾಟಿದ್ದಾನೆ. ಚಟ್ಟನೇ ಜನ್ನಿವಾರ ಹರಿದುಕೊಳ್ಳುವುದರೊಂದಿಗೆ ದೃಶ್ಯ ತೆರೆದುಕೊಳ್ಳುತ್ತದೆ. ಹರಿದುಕೊಂಡ ಜನ್ನಿವಾರ ಬಸವಣ್ಣನ ಮೈಮೇಲೆ ನೇತಾಡುತ್ತಿದೆ).

ಬಸವಣ್ಣ : ಬ್ಯಾಡ, ಈ ಜನಿವಾರ ನನಗ ಬ್ಯಾಡ. ನಾನು ಮಾನವ ಆಗಬೇಕಾಗ್ಯಾದ. ಈ ಜನಿವಾರ ಬಿಗದು ಆಗಮಿಕ ಶೈವಬ್ರಾಹ್ಮಣ ಮಾಡಬ್ಯಾಡರಿ. ಧರ್ಮದ ದಾರ್‍ಯಾಗ ನಡೀಬೇಕಾಗ್ಯಾದ, ನನಗ ಈ ದಾರ ಕಟ್ಟಿ ಕರ್ಮದ ಕೆಸರಿಗಿ ತಳ್ಳಬ್ಯಾಡರಿ, ತಳ್ಳಬ್ಯಾಡರಿ. ಕೊರಳಿಗಿ ಉರುಳ ಹಾಕಬ್ಯಾಡ್ರಿ, ಉರುಳ ಹಾಕಬ್ಯಾಡ್ರಿ. (ಗದ್ದಲ ಕೇಳಿ ಕೇರಿಯ ಆಗಮಿಕ ಶೈವಬ್ರಾಹ್ಮಣರು ಓಡಿಬರುತ್ತಾರೆ).

ಬ್ರಾಹ್ಮಣರು : ಏನು? ಯಾಕ ಗದ್ದಲ? ಇಷ್ಟ್ಯಾಕ ಗೊಂದಲ ?

ಪುರೋಹಿತ ೧ : ನೋಡ್ರಿ, ಇವತ್ತ ನೂಲಹುಣ್ಣಿವಿ. ಆಗಮಿಕ ಶೈವಬ್ರಾಹ್ಮಣರು ಹೊಸ ಜನಿವಾರ ಹಾಕಿಕೊಳ್ಳೊ ವಾರ್ಷಿಕ ಸಮಾರಂಭ. ಹೊಸ ಜನಿವಾರ ಯಾಕ? ಹಳಿ ಜನಿವಾರನೂ ಬ್ಯಾಡ ಅಂತ ಹರದ ಹಾಕ್ಯಾನ. (ಬಸವಣ್ಣನನ್ನು ಉದ್ದೇಶಿಸಿ) ಬಸವಣ್ಣಾ, ಆರು ವರ್ಷದಿಂದ ಕಟಗೊಂಡು ಬಂದ ಈ ಜನಿವಾರ ಧಿಕ್ಕರಿಸಬ್ಯಾಡ, ಸಂಪ್ರದಾಯದ ಗೆರಿ ದಾಟಬ್ಯಾಡ (ಎನ್ನುತ್ತ ಹೊಸ್ತಿಲ ಒಳಗೆ ಎಳೆಯುತ್ತಾರೆ).

ಬಸವಣ್ಣ : ದಾಟತೀನಿ, ದಾಟತೀನಿ (ಎನ್ನುತ್ತ ಹೊಸ್ತಿಲ ದಾಟಿ, ಇಬ್ಬರನ್ನೂ ಎಳೆದುಕೊಂಡು ಹೊರಬರುತ್ತಾನೆ). ಕಳೆದ ಆರು ವರ್ಷಗಳಿಂದ ಈ ಜನಿವಾರ ಅರ್ಥಮಾಡಿಕೊಂಡೀನಿ.

	ಇದು ನನಗ ಆಗಮಿಕ ಶೈವಬ್ರಾಹ್ಮಣ ಸಂಸ್ಕೃತಿಗೆ ಬಂಧಿಸೂ ದಾರ ಅನಿಸ್ಯಾದ. ಇದನ್ನ ಕಟಗೊಂಡಾಗಿನಿಂದ ಉಸಿರ ಕಟ್ಟಿದಂತಾಗಿ, ನನ್ನ ಬೆಳವಣಿಗೀನs ನಿಂತುಹೋಗ್ಯಾದ.
ಪುರೋಹಿತ ೨:	ಇಲ್ಲ. ಇದು ನಮ್ಮ ಜ್ಞಾನ ಬೆಳಸ್ತದ.
ಬಸವಣ್ಣ :	ಇಲ್ಲ, ಬೆಳಸೂದಿಲ್ಲ. ಈ ಮಡಿ, ಈ ಮೈಲಿಗಿ, ಈ ಹಿಂಸೆ, ಈ ಸ್ವಸ್ತಿವಾಚನ, ಈ ಮಂತ್ರಪಠಣ - ಮೊದಲಾದ ನಿತ್ಯಕರ್ಮಗಳನ್ನ ಕುರುಡನ ಹಾಂಗ ಅನುಸರಿಸಿ, ನನ್ನ ಜ್ಞಾನ ಬೆಳಿಯೂದಿರಲಿ, ನನ್ನ ಸೃಜನಶೀಲತೇನs ಕಳಕೊಂಡೀನಿ.
ಪುರೋಹಿತ ೧ :	ಇಲ್ಲ. ಇವುಗಳಿಂದ ಏನೂ ಕಳಕೊಳ್ಳೂದಿಲ್ಲ, ಎಲ್ಲಾ ಗಳಿಸಿಕೊಳ್ತೀವಿ.ವೈದಿಕ ಬ್ರಾಹ್ಮಣರ ಹಾಂಗ ಭೂಮಿ ಮ್ಯಾಲಿನ ದೇವತೆ ಎಂಬೂ ಪ್ರತಿಷ್ಠೆ ಕೂಡ ನಾವು ಗಳಿಸಿಕೊಳ್ತೀವಿ.
ಬಸವಣ್ಣ :	ಹೌದು, ಪ್ರತಿಷ್ಠೆ ಗಳಿಸಿಕೊಳ್ತೀವಿ, ಸಾಧನೆಯಿಂದಲ್ಲ. ಜಾತಿಭೇದ ಪದ್ಧತಿಯಿಂದ. ಈ ಜಾತಿಭೇದ ಪದ್ಧತಿ ಸಮಾಜವನ್ನು ಸೀಳತದ, ಪೂರ್ವಕರ್ಮ-ಪುನರ್ಜನ್ಮ ಸಿದ್ಧಾಂತ ಅದನ್ನ ಗಟ್ಟಿಗೊಳಿಸ್ತದ.
ಪುರೋಹಿತ ೨ :	ಅವಿವೇಕಿ, ನಿನಗೇನು ಗೊತ್ತು. ಈ ಜಾತಿಪ್ರತ್ಯೇಕತೆಯಿಂದ ನಮ್ಮ ಆಗಮಿಕ ಬ್ರಾಹ್ಮಣ ಸಮಾಜಕ್ಕ ಘನತೆ -ಗೌರವ ಪ್ರಾಪ್ತ ಆಗ್ಯಾದ.
ಬಸವಣ್ಣ :	ಇಲ್ಲ. ಈ ಪ್ರತ್ಯೇಕತೆಯಿಂದ ವೈದಿಕ ಬ್ರಾಹ್ಮಣ ಸಮಾಜದ ಹಾಂಗ ಆಗಮಿಕ ಬ್ರಾಹ್ಮಣ ಸಮಾಜವೂ ಸೃಜನಶೀಲತೆ ಕಳಕೊಂಡಾದ. ಸೃಜನಶೀಲತೆ ಬತ್ತಿಹೋಗಿ ಯಾಂತ್ರಿಕತೆ ಆರಂಭವಾಗೂದೇ ಜನಿವಾರ ಧಾರಣೆಯ ದಿನದಿಂದ. ಅದಕ್ಕs ನಾನು ಈ ದಾರ ಕಟ್ಟಿಗೊಳ್ಳಲಾರೆ.
ಪುರೋಹಿತ ೧ :	ನಿನ್ನ ತಿಳುವಳಿಕೆ ತಪ್ಪು. ಇದು ದಾರ ಅಲ್ಲ. ಉದ್ಧಾರದ ಸಾಧನ.
ಬಸವಣ್ಣ :	ಉದ್ಧಾರದ ಸಾಧನ ? ಹಾಂಗಾದರ ಶೂದ್ರರ ಉದ್ಧಾರ, ಸ್ತ್ರೀಯರ ಉದ್ಧಾರ ಈ ಜನಿವಾರದಿಂದ ಸಾಧ್ಯವೇ?
ಪುರೋಹಿತ ೨ :	(ಅಪ್ರತಿಭನಾಗಿ) ಇಲ್ಲ, ಅವರು ಅಪವಿತ್ರರು, ಯಜ್ಞೋಪವೀತ ಅವರಿಗಿ ಕೊಡಬಾರದು.
ಬಸವಣ್ಣ :	ಏನು? ಆಗಮಿಕ ಬ್ರಾಹ್ಮಣರು ಪವಿತ್ರ, ಶೂದ್ರರು ಅಪವಿತ್ರ? ಗಂಡಸರು ಪವಿತ್ರ, ಹೆಂಗಸರು ಅಪವಿತ್ರ? ಯಾರ ಹೇಳಿದರು? ನಾನು ಪವಿತ್ರ, ನನ್ನ ತಂಗಿ ನಾಗಲಾಂಬೆ ಅಪವಿತ್ರ? ಅದಕ್ಕs ನಾ ಹೇಳೂದು; ಈ ಜನಿವಾರ ದಾರ ಅಷ್ಟs ಅಲ್ಲ, ಬದುಕಿನ ಬಗ್ಗೆ ಒಂದು ಅನುದಾರ ಸೂತ್ರ.
ಮಾದರಸ :	(ಸಂತಯಿಸುತ್ತ) ಬಸವಾ, ಪುರೋಹಿತರ ಕೂಡ ವಾದಿಸಬಾರದು.ಇವರು ನಮಗಿಂತ ದೊಡ್ಡವರು. ವೇದಾಗಮ ವಿದ್ವಾಂಸರು. ಧರ್ಮಶಾಸ್ತ್ರದ ದಾರ್‍ಯಾಗ ಸಮಾಜ ಮುನ್ನಡೆಸವ್ರು.
ಬಸವಣ್ಣ :	ಅಪ್ಪಾ, ಇವರು ಸಮಾಜವನ್ನು ಮುನ್ನಡೆಸವ್ರಲ್ಲ, ಹಿನ್ನಡೆಸವ್ರು. ಇವರು ದೊಡ್ಡವರಿರಬಹುದು. ಸತ್ಯ ಇವರಿಗಿಂತ ದೊಡ್ಡದು. ಇವರ ಧರ್ಮಶಾಸ್ತ್ರಕ್ಕಿಂತ ದೊಡ್ಡದು. ಆ ಸತ್ಯಕ್ಕಾಗಿ ನನ್ನ ಆತ್ಮ ಹಂಬಲಿಸತಾ ಇದೆ. ಕಂಡೂ ಕಂಡು ಸತ್ಯ ಕೈಬಿಡಲಾರೆ. ನನ್ನ ಕೈ ಬಿಡ್ರಿ. (ಒಂದು ಕೈ ಬಿಡಿಸಿಕೊಳ್ಳುತ್ತಾನೆ).

ಪುರೋಹಿತ ೧ : (ಒಂದು ಕೈಹಿಡಿದು) ಬಿಡೂದಿಲ್ಲ.

ಬಸವಣ್ಣ : ಬಿಡೂದಿಲ್ಲ ? ಹೀಂಗs ನನ್ನನ್ನು ಎಷ್ಟ ದಿನ ಹಿಡಿತೀರಿ ? ಹಿಂದಕ ಎಳೀತೀರಿ? ನೀವು ಹಿಂದ ಎಳೆದಷ್ಟೂ ಮುಂದ ಹೋಗೂ ಹಂಬಲ ನನ್ನಲ್ಲಿ ಹೆಚ್ಚತದ.

ಮಾದಲಾಂಬೆ : ಮಗs ನನ ಮಾತ ಕೇಳು. ನೀನು ಹೇಳೂದು ನಿಜವಿರಬಹುದು. ವಾಸ್ತವ ಬ್ಯಾರೆ, ಆದರ್ಶ ಬ್ಯಾರೆ. ನಾವು ಈ ಊರಿನ ಒಂದು ಭಾಗವಾಗಿರುವ 'ಪುರ'ದ ಒಡೆಯರಿರಬಹುದು. ಆದರೆ ಈ ಅಗ್ರಹಾರದ ಭಾಗ, ಸಂಪ್ರದಾಯದ ಭಾಗ. ಅದರ ರೂಢಿಗಳನ್ನು ಒಪ್ಪದಿದ್ದರ ಹ್ಯಾಂಗ? ನಾಳೆ ಊರಿನ ಅಗ್ರಹಾರದ ಮಹಾಸಭೆಗೆ ನಾವು ಏನು ಹೇಳೂದು?

ಬಸವಣ್ಣ : ಅಗ್ರಹಾರ? ಯಾವುದು ಅಗ್ರಹಾರ? ಯಾರು ಮಾಡಿದರು ಈ ಭೇದನೀತಿಯ ಅಗ್ರಹಾರವನ್ನು? ಇದರ ಭಾಗವಾಗಿ ಬದುಕಿ, ನಾನು ವ್ಯಕ್ತಿತ್ವ ಮಲಿನಗೊಳಿಸಿಕೊಳ್ಳಲಾರೆ. ಈ ಅಗ್ರಹಾರ ಮಹಾಸಭೆಯ ನೀತಿ ನಿಯಮ ದಾಟತೀನಿ, ಸಮಾಜ ಧಿಕ್ಕರಿಸತೀನಿ.

ಪುರೋಹಿತ : ಸಮಾಜ ಧಿಕ್ಕರಿಸೂ ಉದ್ಧಟತನ ಮಾತಾಡಬ್ಯಾಡ, ಬಹಿಷ್ಕಾರಕ್ಕೆ ಗುರಿಯಾಗಬೇಕಾದೀತು.

ಬಸವಣ್ಣ : ನಿಮ್ಮ ಸಮಾಜವೇ ಬ್ಯಾಡ ಅಂತ ನಾನೇ ಹೇಳತಿರುವಾಗ, ನೀವು ಬಹಿಷ್ಕಾರ ಹಾಕೂದು ಎಲ್ಲಿ ಬಂತು ? ನಿಮ್ಮ ನೀರ ಬ್ಯಾಡ, ಬೆಂಕಿ ಬ್ಯಾಡ, ಜನಿವಾರವೂ ಬ್ಯಾಡ, ಹಿಡೀರಿ (ಬಿಡಿಸಿಕೊಂಡ ಕೈಯಿಂದ ಜನಿವಾರವನ್ನು ಮುದ್ದಿ ಮಾಡಿ, ಪುರೋಹಿತರ ಕೈಗೆ ಕೊಡಲು ಕೈಚಾಚುತ್ತಾನೆ).

ಬಲದೇವ : (ಬೆನ್ನ ಮೇಲೆ ಕೈಯಾಡಿಸುತ್ತ) ಬಸವಣ್ಣಾ, ಸಮಾಜ ಸಿಟ್ಟಾಗೂ ಹಾಂಗ ಮಾಡಬ್ಯಾಡ. ಆ ಸಿಟ್ಟಿನ ಬೆಂಕಿ ನಿನ್ನೊಬ್ಬನನ್ನs ಅಲ್ಲ, ನಮ್ಮೆಲ್ಲರನೂ ಸುಟ್ಟು ಹಾಕ್ತದ.

ಬಸವಣ್ಣ : ನೀವು ಹೇಳೂದೆಲ್ಲ ನಿಜ. ಇವರ ಬೆಂಕ್ಯಾಗ ಸುಟುಗೊಂಡು ಬೆಳಕ ಹುಟ್ಟಿಸಬೇಕಾಗ್ಯಾದ. ನಾನು ಸತ್ತು ಸತ್ಯ ಬದುಕಿಸಬೇಕಾಗ್ಯಾದ. ಕೈ ಬಿಡಿರಿ, ಬಿಡಿರಿ (ಬಸವಣ್ಣ ಇನ್ನೊಂದು ಕೈಯನ್ನೂ ಬಿಡಿಸಿಕೊಂಡು ಜನಿವಾರ ಎಸೆದು ಓಡಿಹೋಗುತ್ತಾನೆ).

❖❖

ದೃಶ್ಯ -೨

(ಮಾದರಸರ ಮನೆಯ ಪಡಸಾಲೆ, ಮಾದರಸ ಮಾದಲಾಂಬಿಕೆ, ಬಲದೇವ ಮೊದಲಾದ ಪರಿವಾರದ ಜನ ಅಲ್ಲಲ್ಲಿ ಕುಳಿತಿದ್ದಾರೆ. ಚಿಂತೆ ಆವರಿಸಿದೆ).

ಬಲದೇವ : ಮಾವ ಹೀಂಗs ಎಷ್ಟು ದಿನ ಚಿಂತಿ ಮಾಡ್ತೀರಿ? ನಾನೂ ಹೇಳಿ ನೋಡ್ದೆ. ಹುಡುಗ ಕೇಳತಿಲ್ಲ. ಈ ಆಗಮ ಸಂಸ್ಕೃತಿಗಿಂತ ನಾಥಪಂಥದ ಸಂಸ್ಕೃತಿ ಉದಾರ ಅಂತ ವಾದಸ್ತಾನ.

ಮಾದಲಾಂಬೆ : (ದುಃಖಿಸುತ್ತ) ಬರೀ ವಾದಿಸೂದಲ್ಲ. ಮನಿ ಬಿಟ್ಟು ನಾಥಯೋಗಿಗಳ ಸಂಗಮನಾಥನ ಕಪ್ಪಡಿ ಸಂಗಮಕ್ಕೆ ಹೋಗೂ ಸಿದ್ಧತ್ಯಾಗ ಅದಾನ (ಅಷ್ಟರಲ್ಲಿ ಬಸವಣ್ಣ ಬರುತ್ತಾನೆ).

ಬಸವಣ್ಣ : ಅಪ್ಪಾ, ನನ್ನs ಬಿಟ್ಟುಬಿಡ್ರಿ. ನನ್ನಿಂದ ನಿಮಗೂ ತೊಂದರೆ. ಆಗಮಿಕ ಶೈವ ಬ್ರಾಹ್ಮಣರಾದ ನೀವು ವೈದಿಕ ಶೈವಬ್ರಾಹ್ಮಣರ ಭ್ರಮೆಯಲ್ಲಿರುವಿರಿ. ನಿಮ್ಮ ದೇವಾಲಯ ಸಂಸ್ಕೃತಿಯ ಮೇಲೆ ಯಜ್ಞಸಂಸ್ಕೃತಿ ಸವಾರಿ ಮಾಡಿದೆ. ನೀವೂ ಇದನ್ನು ಒಪ್ಪಿ ಭಕ್ತಿ- ಕರ್ಮಗಳೆಂಬ ಉಭಯಮಾರ್ಗದ ಗೊಂದಲದಲ್ಲಿರುವಿರಿ. ಈ ಕರ್ಮ, ಈ ಜಾತಿ, ಈ ಮಡಿ, ಈ ಮೈಲಿಗಿ-ಇವುಗಳ ನಡುವ ನಾನು ಬದುಕಲಾರೆ. ಪುರೋಹಿತರ ಹಿಡಿತದಾಗ ನಾನು ಬಾಳಲಾರೆ. ಊರು ಬಿಟ್ಟು ಹೋಗ್ತೀನಿ. ಆಶೀರ್ವದಿಸಿರಿ.

ಮಾದಲಾಂಬೆ : ಹೋಗೂದು ಎಲ್ಲಿಗಿ? ಏನು ಹುಚ್ಚು. ನಿನ್ನ ಮನಸ್ಸಿನ್ಯಾಗಿರೂದಾದರೂ ಏನು ?

ಬಸವಣ್ಣ : ಅಮ್ಮಾ, ನನ್ನ ಉತ್ತರ ನಿಮ್ಮನ್ನ ಇನ್ನೂ ಅಸಮಾಧಾನಕ್ಕ ಗುರಿ ಮಾಡ್ತಾದ. ನನ್ನ ಪಾಲಿಗಿ ನನ್ನ ಬಿಟ್ಟುಬಿಡ್ರಿ.

ಬಲದೇವ : ಬಿಟ್ಟು ಬಿಡ್ತೀವಿ, ಬಸವಣ್ಣಾ. ಆದರ ಈ ಅಗ್ರಹಾರದ ಕಟ್ಟಳೆ ಮುರಿದು ಬದುಕೂದು ತುಂಬ ಕಷ್ಟ. ಮುರಿಬಾರ್ದು . . . .

ಬಸವಣ್ಣ : ಮುರೀತೀನಿ (ಸಿಟ್ಟಿನಿಂದ ಕೈಯಲ್ಲಿಯ ಕೋಲನ್ನು ಮುರಿದು ಒಗೆಯುತ್ತ) ಈ ಆಗಮಿಕ ವೈದಿಕ ಎರಡೂ ಬ್ರಾಹ್ಮಣ ಸಂಸ್ಕೃತಿ ಮುರಿದು ಬದುಕಿ ತೋರಸತೀನಿ. ಇದು ನನ್ನ ಕೊನೆ ನಿರ್ಧಾರ.

ಮಾದಲಾಂಬೆ : ನೀನು ಮೊದಲಿನಿಂದಲೂ ಹಟಮಾರಿ. ಯಾರ ಮಾತೂ ಕೇಳವ ಅಲ್ಲ. ನಿನ್ನ ವಿವೇಕ ಹೇಳಿಧಾಂಗ ನಡ್ಯಾವ. ನೀ ಹ್ವಾದರ ನಿನ್ನ ಹೆಂಡತಿ ಗಂಗಾಂಬೆಯ ಗತಿ ?

ಬಸವಣ್ಣ : ಇದೇನು ದೊಡ್ಡ ಸಮಸ್ಯೆ ? ಅವಳು ಇನ್ನೂ ಸಣ್ಣವಳು. ಕೆಲವು ದಿನ ತವರ ಮನ್ಯಾಗ ಇರಲಿ. (ಅಷ್ಟರಲ್ಲಿ ಮನೆಯ ಮುಂದಿನ ರಸ್ತೆಯ ಮೇಲೆ ಡಂಗುರದವನ ಪ್ರವೇಶ).

ಡಂಗುರದವ : ಕೇಳ್ರಿ, ಕೇಳ್ರಿ ಎಲ್ಲಾ ಬ್ರಾಹ್ಮಣರು ಕೇಳ್ರಿ. ಜನಿವಾರ ಹರಿದು ಹಾಕಿದ ಬಸವಣ್ಣನ ಬಗ್ಗೆ ಅಗ್ರಹಾರ ಮಂಟಪದಾಗ ಇವತ್ತ ಸಂಜೆ ಸಭೆ ಅದ. ಎಲ್ಲರೂ ಬರಬೇಕು. ಎಲ್ಲರೂ ಬರಬೇಕು (ಎಂದು ಸಾರುತ್ತ ಹೋಗುತ್ತಾನೆ. ಸೇವಕನ ಪ್ರವೇಶ).

ಸೇವಕ : ಬಸವಣ್ಣ ಜನಿವಾರ ಹರಕೊಂಡ ಬಗ್ಗೆ ಅಗ್ರಹಾರ ಮಂಟಪದಾಗ ಇವತ್ತ ಸಂಜೆ ಮತ್ತ ಸಭೆ ಇಟಗೊಂಡಾರ. ನೀವೆಲ್ಲ ಬರಬೇಕಂತ. ಈ ಮೊದಲಿನ ಹಾಂಗ ತಪ್ಪಿಸಬಾರದಂತ ವೇದಭಟ್ಟರು ತಿಳಿಸ್ಯಾರ. ಇದು ಮೂರನೆಯ ಸಲ ಕರಿಯೋದು; ಇದೇ ಕೊನೆಯ ಕರೆ ಅಂತ ಹೇಳ್ಯಾರ.

ಮಾದರಸ : ಬಲದೇವಾ, ಏನು ಮಾಡೂದು?

ಬಲದೇವ : ಇದು ಕೊನೆಯ ಕರೆ. ನಾವು ಹೋಗದಿದ್ರ ಅವರೇ ನಿರ್ಣಯ ತಗೋತಾರ. ಹೋಗೂದೇ ಒಳ್ಳೇದು. ನಮ್ಮ ತೊಂದರೆ ಹೇಳಿ ನೋಡೋಣ.

ಬಸವಣ್ಣ : ನಾ ಬರೂದಿಲ್ಲ, ತ್ಯಾಳಿನ ಮುಂದ ಕುರಿ ನ್ಯಾಯ ವಿಚಾರಣೆ.

ಮಾದರಸ : ಬಿಡು, ನಾವೆಲ್ಲ ಹೋಗತೀವಿ. (ಸೇವಕನಿಗೆ) ಆಗಲಿ ಬರತೀವಿ. (ಸೇವಕ ಹೋಗುತ್ತಾನೆ).

ಮಾದಲಾಂಬೆ : ಹೊತ್ತಾತು ನಡೀರಿ. ಊಟಕ್ಕ ಏಳ್ರಿ (ಎಲ್ಲರೂ ಎದ್ದು ಒಳಗೆ ಹೋಗುವರು).

❖❖

ದೃಶ್ಯ - ೩

(ಅಗ್ರಹಾರದ ಸಭಾಮಂಟಪ, ಬ್ರಾಹ್ಮಣರ ಸಭೆ)

ವೇದಭಟ್ಟ : ಮಾದರಸರು ಇವತ್ತಿನ ಸಭೆಗೆ ಬರತೀನಂತ ಹೇಳಿ ಕಳಿಸ್ಯಾರ. ಅವರ ಮಗ ಧರ್ಮಬಾಹಿರ ಬಸವಣ್ಣನ ಬಗ್ಗೆ ಚರ್ಚಿಸಿ, ನಾವು ತೀರ್ಪು ತಗೋಬೇಕು. ಬಾಗೇವಾಡಿ ಅಗ್ರಹಾರ ಅಂದರ ದಕ್ಷಿಣಕಾಶಿ. ನಾವು ಐದುನೂರು ಮಹಾಜನರು ಇಂದಿನ ತನಕ ಮನುಸ್ಮೃತಿ ಹೇಳಿದ್ಹಂಗ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಸಮಾಜ ಮುನ್ನಡಿಸ್ತಾ ಬಂದೀವಿ. ಇಂದಿನ ತನಕ ಯಾರೂ ಇದನ್ನ ಮೀರಲಿಲ್ಲ. ಹೀಗಿದ್ದೂ, ಕಳೆದ ವಾರ ಮಾದರಸರ ಮಗ ಜನಿವಾರ ಹರಿದುಹಾಕಿ, ಮನುಸ್ಮೃತಿಗೆ ಧಿಕ್ಕಾರ ಹೇಳಿದ.

ಪುರೋಹಿತ ೧ : ನಮ್ಮೆಲ್ಲರಿಗಿ ಮನುಸ್ಮೃತಿನs ಅಂತಿಮ ಪ್ರಮಾಣ. (ಕೈಯಲ್ಲಿರುವ ಗ್ರಂಥವನ್ನು ಎತ್ತಿ ತೋರಿಸುತ್ತ) ಇದನ್ನು ಹರಿಬ್ರಹ್ಮರೂ ಮೀರೂ ಹಾಂಗಿಲ್ಲ. (ಅಷ್ಟರಲ್ಲಿ ದುಗುಡ ಹೊತ್ತ ಮಾದರಸ, ಬಲದೇವ ಪ್ರವೇಶಿಸುತ್ತಾರೆ).

ಮಾದರಸ : ನಮಸ್ಕಾರ ಮಹಾಜನರೇ.

ಮಹಾಜನರು : ನಮಸ್ಕಾರ, ಕೂತಕೊಳ್ರಿ. (ಮಾದರಸ ಮತ್ತು ಬಲದೇವ ವಿಚಾರಣಾ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ).

ಮಾದರಸ : ವೇದಭಟ್ಟರೇ, ನಾನು ತಮ್ಮಲ್ಲಿ ಒಂದು ಉಪಕಾರ ಬೇಡಲಾಕ ಬಂದೀನಿ. ನಿಮಗ ಗೊತ್ತಿರೂ ಹಾಂಗ, ಮಂಡಿಗೆ ಗ್ರಾಮದಿಂದ ಬಾಗೇವಾಡಿಗೆ ಬಂದ ಆಗಮಿಕ ಶೈವ ಬ್ರಾಹ್ಮಣರಾದ ನಮ್ಮದು ಪುರವರಾಧೀಶ್ವರ ಮನೆತನ. ಆದರೂ, ಅದು ಅಗ್ರಹಾರದ ಒಂದು ಭಾಗ ಅಂತ ಈ ವರೆಗೂ ಭಾವಿಸ್ತ ಬಂದೀವಿ.

ವೇದಭಟ್ಟ : (ಮಧ್ಯೆ ಬಾಯಿ ಹಾಕಿ) ಅದೆಲ್ಲ ಪುರಾಣ ಬಿಚ್ಚಬ್ಯಾಡ್ರಿ. ನೇರವಾಗಿ ವಿಷಯಕ್ಕ ಬರ್ರಿ.

ಮಾದರಸ : ವಿಷಯ ನಿಮಗ ತಿಳಿದೇ ಅದ. ಮಗ ನನ್ನ ಮಾತ ಕೇಳತಿಲ್ಲ. ನಾವೆಲ್ಲ ಹೇಳಿ ನೋಡಿದೆವು. ಕೆಲವು ದಿನ ತಡೀರಿ, ಅಷ್ಟರಾಗ ದಾರಿಗಿ ಬರಬಹುದು. (ಮಹಾಜನರು ಒಟ್ಟಾಗಿ "ಇಲ್ಲ, ಇಲ್ಲ, ಸಾಧ್ಯವಿಲ್ಲ" ಎಂದು ಗದ್ದಲ ಮಾಡುತ್ತಾರೆ).

ವೃದ್ಧ ಪುರೋಹಿತ : ಸಮಾಧಾನದಿಂದ ವರ್ತಿಸರಿ. ಬಂದವರು ಪುರವರಾಧೀಶ್ವರರು. ಅವರು ಧರ್ಮಶಾಸ್ತ್ರ ಬಾಹಿರವಾಗಿ ವರ್ತಿಸಿದವರಲ್ಲ. ಹಟಮಾರಿ ಮಗನಿಂದಾಗಿ ಸಂಕಟಕ್ಕ ಸಿಲುಕ್ಯಾರ.

ಪುರೋಹಿತ ೧ : ಪುರವರಾಧೀಶ್ವರರಿರಬಹುದು. ಆದರೆ ಅಗ್ರಹಾರಕ್ಕಿಂತ ಇವರೇನು ದೊಡ್ಡವರಲ್ಲ. ಮನುಸ್ಮೃತಿ ಎದುರು ಎಲ್ಲರೂ ಸಮಾನರು.

ವೃದ್ಧ ಪುರೋಹಿತ : ಅದೆಲ್ಲ ನನಗ ಗೊತ್ತದ. ಒಂದಿಷ್ಟು ಸಮಯ ಕೇಳಲಾಕ ಬಂದಾರ. ಸಮಾಧಾನದಿಂದ ವರ್ತಿಸಿರಿ.

ವೇದಭಟ್ಟ : ಸುಮ್ಮನಿರಿ. (ಮಾದರಸರ ಕಡೆಗೆ ತಿರುಗಿ) ಮಾದರಸರೇ, ಜನಿವಾರ ಹರಿದುಕೊಳ್ಳೂದು ಮನುಸ್ಮೃತಿಗೇ ಅಪಮಾನ. ಆಗಮಿಕ ಶೈವಬ್ರಾಹ್ಮಣರೇ ಆಗಲಿ, ವೈದಿಕ ಶೈವಬ್ರಾಹ್ಮಣರೇ ಆಗಲಿ, ಹೀಂಗ ಬ್ರಾಹ್ಮಣ್ಯದ ಒಂದೊಂದು ಕಟ್ಟು ಕಳಚತಾ ಹೋದರ, ಮನುವಿನ ಮಕ್ಕಳಾದ ನಾವು ಅವನ ಸ್ಮೃತಿಗ್ರಂಥಕ್ಕ ಅಗೌರವ ತೋರಿಸಿದಂತಾಗ್ತದ.

ಪುರೋಹಿತ ೧ : ಬಲದೇವ ಮಂತ್ರಿಗಳೇ, ಬಸವಣ್ಣ ಜನಿವಾರ ಧರಿಸದಿದ್ದರ ಬಹಿಷ್ಕಾರ ಹಾಕಬೇಕಾದೀತು. ಬಹಿಷ್ಕಾರದ ಬೆಂಕಿ ಭುಗಿಲೆನ್ನಲು ಅವಕಾಶ ಕೊಡಬ್ಯಾಡರಿ. ನಿಮ್ಮ ಮಾವಗ ತಿಳಿಸಿ ಹೇಳ್ರಿ.

ಬಲದೇವ : ಪುರವರಾಧೀಶ್ವರರಾಗಿಯೂ ನನ್ನ ಮಾವನವರು ಒಂದು ವಾರದಿಂದ ಸಂಕಟ ಎದುರಿಸ್ತ ಇದ್ದಾರ. ಇಂಥವರೊಂದಿಗೆ ಸರಿಯಾಗಿ ಮಾತನಾಡೂ ಸೌಜನ್ಯವೂ ಈ ಸಭೆಗೆ ಇಲ್ಲದುದು ದುರ್ದೈವದ ಸಂಗತಿ.

ಪುರೋಹಿತ ೧ : (ಸಿಟ್ಟು, ತಾತ್ಸಾರದಿಂದ) ಸೌಜನ್ಯದ ಬುದ್ಧಿವಾದ ನಿಮ್ಮಿಂದ ನಾವು ಕಲೀಬೇಕಿಲ್ಲ. ಮಹಾಮಂತ್ರಿ ಅನ್ನೂ ದರ್ಪ ಇಲ್ಲಿ ಪ್ರಯೋಗಿಸಬ್ಯಾಡ್ರಿ. ಇದು ಕ್ಷತ್ರಿಯರ ಕಲ್ಯಾಣ ಅಲ್ಲ. ಬ್ರಾಹ್ಮಣರ ಬಾಗೆವಾಡಿ.

ಬಲದೇವ : ನಾಲಗಿ ಬಿಗಿ ಹಿಡಿದು ಮಾತಾಡ್ರಿ. ಬ್ರಾಹ್ಮಣರ ಬಾಯಾಗ ಶೂದ್ರ ನಾಲಗಿ!

ವೇದಭಟ್ಟ : ಈ ಉದ್ಧಟ ಅಧಿಕಾರಿ ಕೂಡ ಮಾತ ಸಾಕು. "ಜನಿವಾರ ಹರಿದುಹಾಕಿದ ಬಸವಣ್ಣಗ ಬಹಿಷ್ಕಾರ. ಇದು ದೇವದ್ವಿಜರ ತೀರ್ಪು. ತೀರ್ಪಿನ ಗಂಟೆ ಬಾರಿಸಿರಿ."

ಮಾದರಸ : (ನಡುವೆಯೇ ಬಾಯಿ ಹಾಕಿ) ವೇದಭಟ್ಟರೇ ತಡೀರಿ. ತಡೀರಿ. ಒಂದು ವಾರ ಸಮಯ ಕೊಡ್ರಿ. ಅವನನ್ನು ತಿದ್ದಲು ಪ್ರಯತ್ನಿಸ್ತೀನಿ. ಒಂದು ವಾರ ದಯ ತೋರಿರಿ.

ವೇದಭಟ್ಟ : ಸಾಧ್ಯವಿಲ್ಲ. ನೀವು ಹೇಳಿದ್ಹಾಂಗ ಕೇಳ್ತ ಹ್ವಾದರ ಮಿಕ್ಕವರಿಗೂ ಅವಕಾಶ ಸಿಕ್ಕು, ಪೂರಾ ಬ್ರಾಹ್ಮಣ ವ್ಯವಸ್ಥೆ ಹಾಳಾದೀತು. 'ಬಸವಣ್ಣನಿಗೆ ಬಹಿಷ್ಕಾರ....."(ಅಷ್ಟರಲ್ಲಿ ಬಸವಣ್ಣ ಬಟ್ಟೆ ಗಂಟನ್ನು ತುದಿಗೆ ಕಟ್ಟಿರುವ ಕೋಲನ್ನು ಹೆಗಲ ಮೇಲೆ ಹೊತ್ತು ಬರುತ್ತಾನೆ).

ಬಸವಣ್ಣ : ಏನು ? ಹೇಳಿ.

ವೇದಭಟ್ಟ : ನಿನಗ ಬಹಿಷ್ಕಾರ....

ಬಸವಣ್ಣ : ನನಗ ಬಹಿಷ್ಕಾರ ? ಧರ್ಮದ ಹೆಸರಿನ್ಯಾಗ ದುರಾಡಳಿತ. ನಾನು ಇದನ್ನು ಧಿಕ್ಕರಿಸಿ, ಅಗ್ರಹಾರದ ಸಹಾಯ -ಸಂಪರ್ಕ ಇಲ್ಲದೆ ಬದುಕಬಲ್ಲೆ. ಧೈರ್ಯ ಇದ್ದರ ಬಹಿಷ್ಕಾರ ಘೋಷಿಸಿರಿ.

ಮಾದರಸ : (ಎದ್ದು ಹೋಗಿ ಬಸವಣ್ಣನನ್ನು ಅಪ್ಪಿಕೊಂಡು ದುಃಖಿಸುತ್ತ) ಬ್ಯಾಡ ಮಗು, ಬ್ಯಾಡ.

ವೇದಭಟ್ಟ : ಇದು ಮಹಾಸಭೆಯ ನಿರ್ಧಾರ. ಇನ್ನ ಮ್ಯಾಲ ಈ ಊರಿನ ವೈದಿಕ, ಆಗಮಿಕ ಬ್ರಾಹ್ಮಣರು ಬಸವಣ್ಣನ ಕೂಡ ಯಾವುದೆ ಸಂಪರ್ಕ ಇಟ್ಟುಕೊಳ್ಳಬಾರದು. ಇದು ಅಗ್ರಹಾರದ ಅಂತಿಮ ತೀರ್ಪು.

ಪುರೋಹಿತ ೧ : (ಸ್ಮೃತಿಗ್ರಂಥ ಎತ್ತಿ ಹಿಡಿದು) "ಈ ಮನುಸ್ಮೃತಿ ಸಮ್ಮತವಾಗಿ ನೀಡಿದ ತೀರ್ಪು". (ತೀರ್ಪಿನ ಗಂಟೆ ಬಾರಿಸುತ್ತದೆ).

ಬಸವಣ್ಣ : ನಾನು ಈ ಮನುಸ್ಮೃತಿ ಮನ್ನಿಸೂದಿಲ್ಲ. ಧಿಕ್ಕರಿಸತೀನಿ. (ಕಸಿದುಕೊಂಡು ಎಸೆದ ತಾಳೆಗ್ರಂಥ ಹೋಮಕುಂಡಕ್ಕೆ ಬಿದ್ದು ಧಗಧಗ ಉರಿಯುತ್ತದೆ. ಮಗ್ಗುಲಲ್ಲಿದ್ದ ಪುರೋಹಿತ- ೧ : ಬಸವಣ್ಣನ ಕಪಾಳಕ್ಕೆ ಹೊಡೆಯುತ್ತಾನೆ. ಬಾಯಿಯಿಂದ ರಕ್ತ ಸೋರುತ್ತದೆ. ಬಸವಣ್ಣ ಆ ಏಟನ್ನು ಸಹಿಸಿಕೊಂಡು) ಅಪ್ಪಾ, ನಾನು ಕೂಡಲಸಂಗಮಕ್ಕ ಹೋಗತೀನಿ. ಆಶೀರ್ವಾದ ಮಾಡ್ರಿ. (ಅವರ ಉತ್ತರಕ್ಕಾಗಿ ಕಾಯದೆಯೇ ನಮಸ್ಕರಿಸಿ, ಗಂಟುಸಹಿತವಾದ ಕೋಲನ್ನು ಹೆಗಲ ಮೇಲೆ ಹೊತ್ತು, ಗಂಭೀರವಾಗಿ ಹೊರಟು ಹೋಗುತ್ತಾನೆ. ದುಃಖ ಆಶ್ಚರ್ಯದಿಂದ ಜನ ನೋಡುತ್ತಾರೆ).

❖❖

ದೃಶ್ಯ - ೪

(ಕೂಡಲ ಸಂಗಮದ ಮಠ, ಸಾಯಂಕಾಲ ಸಮಯ. "ಓಂ ಸಹನಾವವತು..." ಪಠನ ಮಾಡುತ್ತ ವಿದ್ಯಾರ್ಥಿಗಳು ಕುಳಿತಿದ್ದಾರೆ. ಈಶಾನ್ಯಗುರುಗಳ ಪ್ರವೇಶ, ವಿದ್ಯಾರ್ಥಿಗಳು ಎದ್ದು ಕೈಮುಗಿದು ಕುಳಿತುಕೊಳ್ಳುತ್ತಾರೆ).

ಈಶಾನ್ಯ ಗುರು : ಮಕ್ಕಳೇ, ನಿನ್ನೆ ಸುರೂ ಮಾಡಿದ್ದ ಪಾಠ ಯಾವುದು?

ವಿದ್ಯಾರ್ಥಿ ೧ : ಶಿವ, ಜೀವ ಸ್ವರೂಪ.

ಈಶಾನ್ಯ ಗುರು : ಹೌದು, 'ಯತ್ರ ಜೀವಸ್ತತ್ರ ಶಿವಃ" ಹೀಗೆಂದರೇನು?

ವಿದ್ಯಾರ್ಥಿ ೧ : ಶಿವನು ಸಕಲಜೀವಿಗಳಲ್ಲಿ ಇದ್ದಾನೆ.

ವಿದ್ಯಾರ್ಥಿ ೨: ಅಂದರೆ ಮಾನವ, ಪಶು-ಪಕ್ಷಿ ಎಲ್ಲವುಗಳಲ್ಲಿ ಇದ್ದಾನೆ.

ವಿದ್ಯಾರ್ಥಿ ೩: ಉತ್ತಮ-ಅಧಮ, ದುಷ್ಟ-ಶಿಷ್ಟ ಎಲ್ಲರಲ್ಲಿಯೂ ಇದ್ದಾನೆ.

ಬಸವಣ್ಣ : (ಬಟ್ಟೆ ಗಂಟು ತುದಿಗೆ ಕಟ್ಟಿದ ಕೋಲನ್ನು ಹೊತ್ತು ಒಮ್ಮೆಲೇ ಪ್ರವೇಶಿಸಿ) ಅಲ್ಲ, ಅಲ್ಲ. ಅಧಮ, ದುಷ್ಟ ಇವರೆಲ್ಲರಲ್ಲಿ ಶಿವ ಇರೂದಿಲ್ಲ. ಉತ್ತಮರೊಳಗ ಮಾತ್ರ ಇರ್ತಾನ; ಭಕ್ತರೊಳಗ ಮಾತ್ರ ಇರ್ತಾನ. 'ಭಕ್ತದೇಹಿಕ ದೇವ"ನಾಗಿರ್ತಾನ.

ಈಶಾನ್ಯಗುರು : ಯಾರು ನೀನು ?

ಬಸವಣ್ಣ : ಬಸವಣ್ಣ.

ಈಶಾನ್ಯಗುರು : ಊರು ?

ಬಸವಣ್ಣ : ಬಾಗೆವಾಡಿ

ಈಶಾನ್ಯ ಗುರು : ತಂದೆ ?

ಬಸವಣ್ಣ : ಪುರವರಾಧೀಶ್ವರ ಮಾದಿರಾಜ.

ಈಶಾನ್ಯ ಗುರು : ಪುರವರಾಧೀಶ್ವರರ ಮಗನೊ? ದೊಡ್ಡ ಮನುಷ್ಯನ ದೊಡ್ಡ ಮಗ ಅಂತ ನಿನ್ನ ಉತ್ತರಾನ ಹೇಳ್ತದ.

ಬಸವಣ್ಣ : ಹೌದು, ನಾನು ದೊಡ್ಡವರ ಮಗ. (ಬೇಸರದಿಂದ) ನಂದು ದೊಡ್ಡ ಕಥಿ.

ಈಶಾನ್ಯ ಗುರು : ಇರಲಿ, ಇಲ್ಲಿ ಬಂದದ್ದು ಯಾಕೆ ?

ಬಸವಣ್ಣ : ಕಲಿಯಬೇಕೆಂಬ ಆಸೆ, ಮನಿ ಬಿಟ್ಟು ಬಂದೀನಿ. (ಮಾತು ತಡವರಿಸುತ್ತದೆ. ಗಂಭೀರನಾಗುತ್ತಾನೆ. ಕಣ್ಣಲ್ಲಿ ನೀರು).

ಈಶಾನ್ಯ ಗುರು : ಬಾ, ಇಲ್ಲಿ (ಸಂತಯಿಸುತ್ತ). ಇರಲಿ, ದುಃಖಿಸಬ್ಯಾಡ. ದಣಿದು ಬಂದೀದಿ, ಸ್ನಾನ ಮಾಡಿ ಊಟಮಾಡು. ಆಮ್ಯಾಲ ನಿನ್ನ ಕಥಿ ಕೇಳತೀನಿ ಅಥವಾ ತಾನಾಗೇ ಗೊತ್ತಾಗ್ತದ. ನಂದಿಕೇಶಾ, ಇವ ನಿನ್ನ ಗೆಳೆಯ. ನಿನ್ನ ಕೋಣೆಯೊಳಗ ಕೆಲವು ದಿನ ಇರಲಿ, ಕರಕೊಂಡು ಹೋಗು. (ನಂದಿಕೇಶ ತಲೆ ಅಲ್ಲಾಡಿಸಿ ಕರೆದುಕೊಂಡು ಹೋಗುತ್ತಾನೆ. ಹೋಗುತ್ತಿರುವ ಬಸವಣ್ಣನನ್ನು ನೋಡುತ್ತ, ಸ್ವಗತ) ಇವನೊಬ್ಬ ವಿಲಕ್ಷಣ ವಿದ್ಯಾರ್ಥಿ. ಸ್ಪಷ್ಟ ವಿಚಾರ, ದಿಟ್ಟ ಉತ್ತರ ನೀಡಿ ನನ್ನ ಮನಸ್ಸನ್ನೇ ಕದಡಿ ಬಿಟ್ಟ. ಇಂದು ಬೋಧನೆ ಬೇಡ. ಹೊರಡಿರಿ (ಎಲ್ಲ ವಿದ್ಯಾರ್ಥಿಗಳೂ, ಈಶಾನ್ಯಗುರು ನಿರ್ಗಮಿಸುತ್ತಾರೆ).

❖❖

ದೃಶ್ಯ - ೫

(ಬಾಗೇವಾಡಿ ಮಾದರಸರ ಮನೆ, ಮಾದರಸ, ಮಾದಲಾಂಬಿಕೆ)

ಮಾದಲಾಂಬಿಕೆ : ಕೂಡಲಸಂಗಮ ಮಠಕ್ಕ ಮಗ ಹೋಗಿ ಕೆಲವು ತಿಂಗಳು ಆದವು. ಊಟ ಉಪಚಾರ ಆರೋಗ್ಯ ಹ್ಯಾಗಿದೆಯೋ.

ಮಾದರಸ : ನಿನಗ ಊಟ-ಉಪಚಾರದ ಚಿಂತಿ, ನನಗ ಅವನ ಅಭ್ಯಾಸದ ಚಿಂತಿ. ಈ ಬ್ರಾಹ್ಮಣರನ್ನು ಧಿಕ್ಕರಿಸಿ ಹ್ವಾದ ನಿನ್ನ ಮಗ ಇವರೆಲ್ಲರನ್ನು ಮೀರಿ ಬೆಳೀಬೇಕು. ಅವ ಊರ ಬಿಡೂ ಹಾಂಗ ಮಾಡಿದ ಈ ಜನ, ಅವತ್ತ ನನ್ನ ಮಗನ್ನ ಸೋಲಿಸಲಿಲ್ಲ, ಹಿಂಸಿಸಿದರು.

ಮಾದಲಾಂಬಿಕೆ : ಹೌದು. ಅಂದಿನ ಆ ಘಟನೆ ನೆನದರ ನನ್ನ ಕರುಳ ಕಿವುಚಿದಂತಾಗ್ತದ. ಶಂಭುಶಾಸ್ತ್ರಿ ನನ್ನ ಕೂಸಿನ ಕಪಾಳಕ್ಕ ಪಟಾರನೇ ಹೊಡದ. ಮಗ ಪಿಟ್ಟೆನ್ನಲಿಲ್ಲ. ಕರುಣೆ ತುಂಬಿದ ಕಣ್ಣುಗಳಿಂದಲೇ ಉತ್ತರಿಸಿದ. (ದುಃಖಿಸುತ್ತಾಳೆ).

ಮಾದರಸ : ದುಃಖಿಸಬ್ಯಾಡ, ಇವರು ಓದಿ ಕೆಟ್ಟ ಕೂಚಿಭಟ್ಟರು. ಯಾವ ಕಾಲಕ್ಕೂ ಅಗ್ರಹಾರಗಳು ವಿಚಾರವನ್ನು ನಾಶಮಾಡ್ತಾನs ಬಂದಾವ, ವಿಚಾರವಂತರನ್ನು ಹಿಂಸಿಸ್ತs ಬಂದಾವ. ಬೆಳಕು ಕಾಣದ ಗೂಬೆಗಳು, ಬಾವಲಿಗಳು.

ಮಾದಲಾಂಬೆ : ಹೋಗಲಿ, ನಮ್ಮ ಗತಿ ಎಲ್ಲಿಗಿ ಬಂತು ? ಇಲ್ಲಿಯ 'ಪುರವರಾಧೀಶ್ವರ' ಮನೆತನ ನಮ್ಮದು. ನಮ್ಮನ್ನು ಗೌರವದಿಂದ ನೋಡ್ತಿದ್ದ ಈ ಬ್ರಾಹ್ಮಣರಿಗಿ ನಾವಂದರ ಈಗ ತಿರಸ್ಕಾರ. ಇವರ ದರ್ಪಕ್ಕ ಅಂಜಿ ಬ್ಯಾರೆಯವರೂ ನಮ್ಮಿಂದ ದೂರ ಉಳದಾರ.

ಮಾದರಸ : ಈ ನೋವು ನನಗೂ ಬಾಧಸ್ತದ. ಮೊದಲಿನಿಂದಲೂ ಈ ವೈದಿಕ ಬ್ರಾಹ್ಮಣರಿಗೆ ಆಗಮಿಕ ಬ್ರಾಹ್ಮಣರಾದ ನಮ್ಮ ಬಗ್ಗೆ ಅನಾದರ. ಮಗನ ಸಾಮಾಜಿಕ ಬಹಿಷ್ಕಾರದಿಂದಾಗಿ ಇನ್ನೂ ಅನಾದರ.

ಮಾದಲಾಂಬಿಕೆ : ಹೌದು, ನಮ್ಮ ಮಗ ಈ ವೈದಿಕ ಬ್ರಾಹ್ಮಣರಿಂದಾಗುವ ಅನಾದರಕ್ಕ ಬ್ಯಾಸತ್ತು ಹೀಂಗ ವರ್ತಿಸಿಧಾಂಗ ಕಾಣಸ್ತದ.

ಮಾದರಸ : ನೀನು ಹೇಳೂದು ಸರಿ. ಇವರು ಅಗ್ರಹಾರದ ಯಜಮಾನರು. ಎಲ್ಲ ಜಾತಿಯವರೂ ತಮ್ಮ ತಮ್ಮ ಸಂಪ್ರದಾಯ ಮೀರದಂತೆ ನೋಡಿಕೊಳ್ಳುವ ಅಧಿಕಾರ ಇವರದು.

ಮಾದಲಾಂಬೆ : ನಮ್ಮ ಕುಲಾಚಾರಗಳೂ ಇವರ ಹಿಡಿತದಲ್ಲಿ.

ಮಾದರಸ :	ಹೌದು, ನೀನು ಹೇಳೂದು ಸರಿ. ಆಗಮಿಕ ಬ್ರಾಹ್ಮಣರಾದ ನಮ್ಮ ಹಿರಿಯರು ಈ ವೈದಿಕ ಬ್ರಾಹ್ಮಣರ ಶ್ರೇಷ್ಠತೆಗೆ ಮರುಳಾಗಿ, ಅವರ ತತ್ವ ಆಚಾರಗಳನ್ನು ರೂಢಿಸಿಕೊಂಡರು. ನಮ್ಮ ಆಗಮ ಸಿದ್ಧಾಂತ ಕುಲಗೆಟ್ಟಿತು. ನಮ್ಮ ಕುರುಡು ಭಕ್ತಿ ಇವರ ಕರ್ಮದ ಕಲಬೆರಕೆಯಿಂದ ಇನ್ನೂ ಕೆಟ್ಟಿತು. ಬಸವಣ್ಣ ಇದನ್ನು ನಿರಾಕರಿಸಿದ, ನಮ್ಮನ್ನೂ ನಿರಾಕರಿಸಿದ.
ಮಾದರಸ :	ಇದರ ಫಲವಾಗಿ ಈ ವೈದಿಕರು ನಮ್ಮ ಮಗನನ್ನು, ಒಂದು ರೀತಿ ನಮ್ಮನ್ನೂ ಬಹಿಷ್ಕರಿಸಿದರು.
ಮಾದಲಾಂಬಿಕೆ :	ಇದರಿಂದಾಗಿ ಮಗು ನಾಗಲಾಂಬೆಗೆ ಜೊತೆಗಾರರೂ ಇಲ್ಲ. ಒಂದೇ ಕುಳಿತು ಹೊತ್ತ ಕಳಿsತಾದ. ಈ ಅಗ್ರಹಾರದವರೆಂದರೆ ಈಗ ಅವಳಿಗೂ ಸಿಟ್ಟು - ಭಾರೀ ಸ್ವಾಭಿಮಾನಿ.
ಮಾದರಸ :	ಅಣ್ಣನ್ಹಾಂಗ ತಂಗಿ. ನನಗ ಇವಳ ಭವಿಷ್ಯದ್ದೇ ಚಿಂತಿ.

❖❖

ದೃಶ್ಯ - ೬

(ಕೂಡಲ ಸಂಗಮಮಠ. ವಿದ್ಯರ್ಥಿಗಳ ಮೌನ ಅಧ್ಯಯನ. ಬಸವಣ್ಣನ ಮುಂದೆಯೂ ವ್ಯಾಸಪೀಠ. ಪುಸ್ತಕ ಬಿಚ್ಚುತ್ತಾನೆ, ಬೇಸರ).

ಈಶಾನ್ಯಗುರು : ಬಸವಾ ಇಲ್ಲಿ ಬಾ. (ಬಸವಣ್ಣ ಹತ್ತಿರ ಬರುತ್ತಾನೆ. ಈಶಾನ್ಯಗುರು ಬೆನ್ನ ಮೇಲೆ ಕೈಯಾಡಿಸುತ್ತ) ನೀನು ಇಲ್ಲಿಗಿ ಬಂದು ಎರಡು ವರ್ಷ ಆಗ್ತ ಬಂತು. ಅಭ್ಯಾಸ ಅರ್ಥ ಆಗ್ತದ?

ಬಸವಣ್ಣ : (ಮೌನ)

ಈಶಾನ್ಯಗುರು : ಅರ್ಥ ಆಗ್ಯಾದ?

ಬಸವಣ್ಣ : ಅರ್ಥ ಆಗ್ಯಾದ.

ಈಶಾನ್ಯಗುರು : ಏನು ಅರ್ಥ ಆಗ್ಯಾದ?

ಬಸವಣ್ಣ : ವ್ಯರ್ಥ ಅಂತ ಅರ್ಥ ಆಗ್ಯಾದ. (ಎಲ್ಲ ವಿದ್ಯಾರ್ಥಿಗಳು ಬೆಚ್ಚಿ ಬೀಳುತ್ತಾರೆ).

ಈಶಾನ್ಯಗುರು : ಹಾಂ!

ಬಸವಣ್ಣ : ಹೌದು ಗುರುಗಳೇ, ನನ್ನೊಳಗಿನ ಮನುಷ್ಯ ಉಸಿರುಗಟ್ಟಿ ಸಾಯತಿದ್ದಾನ. ಅವನನ್ನು ನಾನು ಬದುಕಿಸಬೇಕಾಗ್ಯಾದ.

ಈಶಾನ್ಯಗುರು : ಹೀಗ್ಯಾಕೆ ಮಗು ?

ಬಸವಣ್ಣ : ಏನು ಹೇಳಲಿ ಗುರುಗಳೇ, ನಾಥಸಂಸ್ಕೃತಿಯ ಯೋಗಮಾರ್ಗಕ್ಕ, ವರ್ಗ-ವರ್ಣ-ಲಿಂಗಭೇದರಹಿತ ತತ್ವಕ್ಕ ಆಕರ್ಷಿತವಾಗಿ ಇಲ್ಲಿಗಿ ಬಂದೆ. ಆದರೆ ಇತ್ತೀಚೆ ನಮ್ಮ ಕಣ್ಣೆದುರಿಗೇ ಆಗಮಿಕ ಶೈವಬ್ರಾಹ್ಮಣರು ಈ ನಾಥಶೈವರನ್ನು ಹೊರಗ ಹಾಕಿ ಅವರ ಮಠವನ್ನು ಆಕ್ರಮಿಸಿ, ಯಾವ ಯಾವುದೇ ಕರ್ಮಕೂಪಗಳಲ್ಲಿ ಮುಳುಗ್ಯಾರ. ಕತ್ತಲೆಯಿಂದ ಮತ್ತೆ ಕತ್ತಲೆಗೇ ಬಂದಂತಾಗಿದೆ.

ಈಶಾನ್ಯಗುರು : ಆ ಕರ್ಮಾಚರಣೆಗಳನ್ನು ಬಿಡು. ಈ ಸಿದ್ಧಾಂತ ಗ್ರಂಥಗಳನ್ನಾದರೂ ಓದು.

ಬಸವಣ್ಣ : ಇವನ್ನು ಓದುವಾಗಲೆಲ್ಲ ಹಾಲಹಳ್ಳ ತೊರೆದು, ಉಪ್ಪು ನೀರ ಕುಡಿದ ಅನುಭವವಾಗ್ತದ. ಓದೂದಕ್ಕಾಗಿ ಓದೂದು, ಓದಬಾರದನ್ನು ಓದೂದು-ಹೀಗೆ ಎಷ್ಟು ದಿನ ವ್ಯರ್ಥ ಕಳೀಲಿ?

ಪಂಡಿತನಾಗಲು, ಪುರೋಹಿತನಾಗಲು ಓದುವ ಈ ಅಭ್ಯಾಸ, ನನಗೆ ರುಚಿಸುತಾ ಇಲ್ಲ. (ಮಿಕ್ಕ ವಿದ್ಯಾರ್ಥಿಗಳು ಆಶ್ಚರ್ಯದಿಂದ ಈ ಮಾತು ಆಲಿಸುತ್ತಾರೆ).

ಈಶಾನ್ಯಗುರು : ಮಿಕ್ಕ ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದ್ತಾರ ...

ಬಸವಣ್ಣ : ಹೌದು, ಅವರಿಗೆ ಈ ಗ್ರಂಥಗಳ ಮರೆಮೋಸ ಅರ್ಥವಾಗಿಲ್ಲ. ಆತ್ಮದ ಬಗ್ಗೆ ಬರೆದ ಮಾತುಗಳೋ ಚೆನ್ನಾಗಿವೆ, ಸರಿಯಾಗಿಲ್ಲ. ದಾರಿತೋರಿಸುತ್ತಲೇ ದಾರಿ ಬಿಡಿಸ್ತವ.

ಈಶಾನ್ಯಗುರು : ಬಸವಾ ಹಾಗೆನ್ನಬಾರದು, ಅವುಗಳನ್ನು ಬರೆದವರೆಲ್ಲ ದೊಡ್ಡ ವ್ಯಕ್ತಿಗಳು.

ಬಸವಣ್ಣ : ಇರಬಹುದು. ಅವರಿಗಿಂತ ಸತ್ಯ ದೊಡ್ಡದು. ಆ ಸತ್ಯ ಕಾಣಲು ನನ್ನ ಮನಸ್ಸು ಹಂಬಲಿಸ್ತದ.

ಈಶಾನ್ಯಗುರು : ಆ ಸತ್ಯವನ್ನ ಇಡಿಯಾಗಿ ಹಿಡಿಯೂದು ಅಷ್ಟು ಸುಲಭಲ್ಲ.

ಬಸವಣ್ಣ : ಹೌದು, ಗುರುಗಳೇ, ನನಗೂ ಗೊತ್ತದ. ಆದರ ಸತ್ಯ ಸಮಕಾಲೀನ ಮತ್ತು ಸಾರ್ವಕಾಲೀನ ಅಂತ ಎರಡು ಬಗೆಯಾಗಿರ್ತದ. ಸಮಕಾಲೀನತೆಯನ್ನು ಮರೆತು ಕೇವಲ ಸಾರ್ವಕಾಲೀನ ಸತ್ಯ ಹೇಳಿದ್ರ ವಾಸ್ತವ ಬದುಕು ಸಾರ್ಥಕವಾಗೂದಾದರೂ ಹ್ಯಾಂಗ ?

ಈಶಾನ್ಯಗುರು : ಅಂದರ ?

ಬಸವಣ್ಣ : ಮನುಷ್ಯನ ಬಗ್ಗೆ ಮಾತಾಡೂದು ಬ್ಯಾರೆ, ಸಾಮಾಜಿಕ ಮನುಷ್ಯನ ಬಗ್ಗೆ ಮಾತಾಡೂದು ಬ್ಯಾರೆ. ಈ ಎರಡೂ ನೆಲೆಗಳನ್ನು ಗಮನಿಸಿ ಸಿದ್ಧಾಂತ ಕಟ್ಟಬೇಕು. ಇಲ್ಲದಿದ್ರ ಬೋಧೆ ಗಾಳಿಗೋಪುರ ಅನಸ್ತದ. ಇಂಥ ಗಾಳಿಗೋಪುರ ಬಿಟ್ಟು ನಿಜಗೋಪುರ ಕಟ್ಟುವದನ್ನು ನಮ್ಮ ಮಠಗಳು ಕಲಿಸ್ಬೇಕು.

ಈಶಾನ್ಯಗುರು : ಇರಲಿ. ಈ ಮಠದಲ್ಲಿ ಅಂಥ ವಾತಾವರಣವಿಲ್ಲವೆ ?

ಬಸವಣ್ಣ : ಇಲ್ಲ. ಇನ್ನ ಮ್ಯಾಲ ಮಠಗಳ ಶುದ್ಧೀಕರಣ ಅವಶ್ಯ ಅದ. ಇಲ್ಲಿಯ ಉಳಿದ ಅಧ್ಯಾಪಕರೇ ಬ್ಯಾರೆ, ನೀವೇ ಬ್ಯಾರೆ. ಅದಕ್ಕs ಮನಬಿಚ್ಚಿ ಮಾತಾಡೀನಿ, ಕ್ಷಮಿಸಿರಿ.

ಈಶಾನ್ಯಗುರು : ಇರಲಿ. ನಿನ್ನೊಂದಿಗೆ ಆಮೇಲೆ ಮಾತಾಡ್ತೀನಿ, ಹೋಗು. (ಎಲ್ಲ ವಿದ್ಯಾರ್ಥಿಗಳಿಗೆ) ಇಲ್ಲಿಗೆ ಇವತ್ತಿನ ಪಾಠ ನಿಲ್ಲಿಸಿರಿ. (ಎಲ್ಲರೂ ಹೋಗುತ್ತಾರೆ. ಅವರ ಹಿಂದೆ ಬಸವಣ್ಣನೂ ಭಾರವಾದ ಹೆಜ್ಜೆ ಹಾಕುತ್ತಾ ಹೋಗುತ್ತಾನೆ.) ಏನು ಈ ಬಾಲಕನ ವಿಚಾರ? ಇವನ ರೀತಿಯೇ ಬ್ಯಾರೆ. ಈ ಮಗುವನ್ನು ಸರಿಯಾದ ದಾರ್‍ಯಾಗ ನಡೆಸಬೇಕು. ಸಸಿಯನ್ನು ಸಲುಹಬೇಕು. ದೀಪ ಗಾಳಿಗಿ ಆರದ ಹಾಂಗ ನೋಡಿಕೊಳ್ಳಬೇಕು; ನೋಡಿಕೊಳ್ಳಬೇಕು (ಎನ್ನುತ್ತ ಹೋಗುವನು).

❖❖

ದೃಶ್ಯ-೨

(ಬೆಳಗಿನ ಸಮಯ. ಬಸವಣ್ಣ, ನಂದಿಕೇಶ ತಂಬಿಗೆ, ಬಟ್ಟೆ ತೆಗೆದುಕೊಂಡು ನದಿ ತೀರಕ್ಕೆ ಬಂದಿದ್ದಾರೆ. ಬಟ್ಟೆ ಕಳಚುತ್ತ).

ನಂದಿಕೇಶ : ಏನು ಬಸವಣ್ಣಾ, ನಿನ್ನೆ ರಾತ್ರಿ ಸೃಷ್ಟಿ-ಆತ್ಮ-ಜೀವ ... ಏನೇನೋ ಬಡಬಡಿಸತಿದ್ದಿ.

ಬಸವಣ್ಣ : (ಮೌನ)

ನಂದಿಕೇಶ : ಏನು ? ನಿದ್ದಿ ಬರಲಿಲ್ಲ?

ಬಸವಣ್ಣ : ಹೌದು. ನಿದ್ದಿ ಬರಲಿಲ್ಲ. ಎಚ್ಚರವಾಗೇ ಇದ್ದೆ.

ನಂದಿಕೇಶ : ಏನೋ, ನನಗ ಎಚ್ಚರವೇ ಇಲ್ಲ.

ಬಸವಣ್ಣ : ನಂದಿಕೇಶಾ, ನೀನು ಪುಣ್ಯವಂತ. ನಿನಗೆ ನಿದ್ದಿ, ನನಗೆ ಎಚ್ಚರ. ಕಳೆದ ಕೆಲವು ದಿನಗಳಿಂದ ನಿದ್ದೀಽನ ಇಲ್ಲ. ಬಹುಶಃ ಇನ್ನ ಮ್ಯಾಲ ನನಗ ನಿದ್ದೀಽನ ಇಲ್ಲ. ಎಚ್ಚರವಾಗೇ ಇರಬೇಕಾಗ್ಯಾದ. ಎಚ್ಚರವಾಗಿರೂದನ್ನ ರೂಢಿಸಿಕೊಳ್ಳಬೇಕಾಗ್ಯಾದ.

ನಂದಿಕೇಶ : ಯಾಕ ? ಆರು ತಿಂಗಳಿನಿಂದಲೂ ನೋಡತೀನಿ, ಅಂತರ್ಮುಖಿಯಾಗೇ ಇರುತ್ತೀ. ಅಪ್ಪ - ಅಮ್ಮನ ಚಿಂತೆಯೇ ?

ಬಸವಣ್ಣ : ಇಲ್ಲ. ಅಪ್ಪ ಅಮ್ಮನ ಚಿಂತಿಗಿಂತ ನನಗ ದೇವರ ಚಿಂತಿ ಮುಖ್ಯ ಆಗ್ಯಾದ. ಮಲಿನವಾಗಿರುವ ಮನದಾಗ ಹುದುಗಿರುವ ಆತ್ಮ ಶುದ್ಧವಾಗಬೇಕಾಗ್ಯಾದ. (ನೀರಿಗಿಳಿಯುತ್ತಾರೆ, ಸ್ನಾನಮಾಡುತ್ತಾರೆ. ಬಸವಣ್ಣ ಅಲ್ಲಲ್ಲಿ ಮಡುಗಟ್ಟಿದ, ಹರಿಯುವ ನೀರನ್ನು ನೋಡುತ್ತ, ಬೊಗಸೆಯಲ್ಲಿ ಮತ್ತೆ ಮತ್ತೆ ನೀರು ತುಂಬಿಕೊಂಡು ನೋಡುತ್ತ ಹರ್ಷಭರಿತನಾಗಿ)

ಹಾಂ. ಆತ್ಮ ಶುದ್ಧವಾಗಬೇಕು, ಆತ್ಮ ಶುದ್ಧವಾಗಬೇಕು. ಈ ನೀರಿನಂತೆ, ಈ ನೀರಿನಂತೆ, ಈ ನೀರಿನಂತೆ. ಅಶುದ್ಧ ಆಗಿರುವ ನೀರಿನೊಳಗಽ ಶುದ್ಧ ಆಗೂ ಗುಣ ಅದ. ಶುದ್ಧ ಆಗಬೇಕಾದರ ನೀರು ನಿಲ್ಲಬಾರದು, ಹರೀತಿರಬೇಕು. ನಿಂತರ ಅಶುದ್ಧ, ಹರಿದರ ಶುದ್ಧ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ". ಹೋ, ಹೊಳೀತು, ಹೊಳೀತು, ಹೊಳೀತು. ಹೋ ಹೋ ಇದು ನೀರಲ್ಲ, ಗುರು, ನನ್ನ ಗುರು. (ಎನ್ನುತ್ತ ಆತ್ಮಸಾಕ್ಷಾತ್ಕಾರ ಭಾವದಿಂದ ಕುಣಿಯುತ್ತಾನೆ).

ನಂದಿಕೇಶ : ಏನು ಬಸವಾ. ಯಾಕ ಕುಣೀತಿ ? ಯಾಕ ಕೂಗತಿ ?

ಬಸವಣ್ಣ : ಏನೂ ಇಲ್ಲ, ತಿಳಿಯಿತು. ನೀರು ನಿಲ್ಲಬಾರದು, ಹರೀತಿರಬೇಕು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ", ಜಂಗಮಕ್ಕೆ ಅಳಿವೇ ಇಲ್ಲ. ನನ್ನ ಆತ್ಮ ಜಂಗಮವಾಗಬೇಕು. "ಜಂ...ಗ...ಮ...ವಾ...ಗ...ಬೇ...ಕು.

ನಂದಿಕೇಶ : ಏನು? ಬೋಧಿವೃಕ್ಷದ ಕೆಳಗ ಗೌತಮ ಬುದ್ಧಗ ಜ್ಞಾನೋದಯ ಆದ್ಹಾಂಗ ನೀರೊಳಗ ನಿಂತ ನಿನಗೂ...

ಬಸವಣ್ಣ : ಹೌದು ನನಗೂ, ಸತ್ಯ ಹೊಳೆಯಿತು. ನಾನು ನೀರಿನಂತಾಗಬೇಕು. ಹರಿಯುವ ನೀರಿನಂತಾಗಬೇಕು. ಹರಿಯುವ ನೀರು ನನ್ನ ಕಣ್ಣು ತೆರೆಸಿದ ಗುರು. ಜಂಗಮಕ್ಕಳಿವಿಲ್ಲ, ಅಳಿವಿಲ್ಲ, ಅಳಿವಿಲ್ಲ (ಇಲ್ಲಿಂದ ಮುಂದೆ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯವಾಕ್ಯ ಆಗಾಗ ಕೇಳಿಸುತ್ತ ಹೋಗಬೇಕು. ನೀರಿನಿಂದ ಹೊರಬಂದು ಬಟ್ಟೆ ತೊಟ್ಟು ಕೋಣೆಗೆ ಹೊರಡುತ್ತಾರೆ. ಬಸವಣ್ಣ 'ಜಂಗಮಕ್ಕಳಿವಿಲ್ಲ' ಎಂಬುದು ಗಂಭೀರವಾಗಿ ನುಡಿಯುತ್ತಿರುತ್ತಾನೆ. ಅಷ್ಟರಲ್ಲಿ ಒಬ್ಬ ಓಡಿ ಬರುತ್ತಾನೆ).

ಒಬ್ಬ : ಬಸವಣ್ಣಾ, ಬಸವಣ್ಣಾ, ಕೆಟ್ಟ ಸುದ್ದಿ, ಕೆಟ್ಟ ಸುದ್ದಿ, ನಿನ್ನ ತಂದೆ ತೀರಿಕೊಂಡರು. ಇದೀಗ ಸುದ್ದಿ ಬಂತು. (ಬಸವಣ್ಣ ಮುಗಿಲ ಕಡೆಗೆ ಮುಖಮಾಡಿ. "ತಂದೆ ನೀನು - ತಾಯಿ ನೀನು, ಬಂಧು ನೀನು - ಬಳಗ ನೀನು, ಎನಗೆ ನೀನಲ್ಲದೆ ಮತ್ತಾರು ಇಲ್ಲವಯ್ಯಾ ಕೂಡಲಸಂಗಮದೇವಾ" ಎಂದು ನುಡಿಯುತ್ತಾನೆ).

ನಂದಿಕೇಶ : ಬಸವಣ್ಣಾ, ಕಳೆದ ವರ್ಷದಿಂದ ತಾಯಿಯಿಲ್ಲದ ನೀನು ಇಂದು ತಂದೆಯೂ ಇಲ್ಲದ ಪರದೇಶಿಯಾದೆ (ಎಲ್ಲರೂ ನಿರ್ಗಮಿಸುತ್ತಾರೆ).

❖❖

ದೃಶ್ಯ-೮

(ಬಾಗೇವಾಡಿಯ ಮನೆ. ಮಾದರಸನ ಶವಸಂಸ್ಕಾರ ಮುಗಿಸಿ ಕುಟುಂಬದ ಸದಸ್ಯರು ದುಃಖಿತರಾಗಿ ಕುಳಿತಿದ್ದಾರೆ. ಬಸವಣ್ಣ ಬರುತ್ತಾನೆ).

ನಾಗಲಾಂಬಿಕೆ : ಅಣ್ಣ ಬಂದ (ಧಾವಿಸಿ ಹೋಗಿ ಅಪ್ಪಿಕೊಂಡು ಅಳುತ್ತಾಳೆ. ಮಿಕ್ಕವರೂ ದುಃಖಿಸುತ್ತಾರೆ).

ಸದಸ್ಯ : ಬಹಿಷ್ಕಾರದಿಂದಾಗಿ ನಿಮ್ಮ ಘನತೆವೆತ್ತ ಕುಟುಂಬ ಕುಸೀತಾ ಹೋಯ್ತು. ಸಮಾಜದ ಸಂಬಂಧ ಶಿಥಿಲಗೊಂಡು ಇಷ್ಟು ದಿನ ಸತ್ತು ಬದುಕಿತು. ಈ ಚಿಂತ್ಯಾಗ ಕೊರಗಿ ನಿನ್ನ ತಾಯಿ ಕೊನೆಯುಸಿರೆಳೆದಳು. ಆಗಲೂ ನಿನ್ನ ಹಟ ಬಿಡಲಿಲ್ಲ. ಈಗ ನಿನ್ನ ತಂದೆಯೂ ....

ಬಸವಣ್ಣ : ಇವರೆಲ್ಲ ಈ ಹೊಲ, ಈ ಮನೆ, ಈ ಹಿರಿಯರ ಆಸ್ತಿ ಅಂತ ಇಲ್ಲಿ ಉಳಕೊಳ್ಳಬಾರದಿತ್ತು.

ಸದಸ್ಯ : ಏನೋ ಉಳಕೊಂಡರು. ಮಗನ ಮ್ಯಾಲಿನ ಬಹಿಷ್ಕಾರದಿಂದ ದಿನವೂ ಕೊರಗಿ ಕೊನೆಯುಸಿರೆಳೆದರು. (ನಾಗಲಾಂಬಿಕೆ ಗಟ್ಟಿಯಾಗಿ ಅಳುತ್ತಾಳೆ. ಬಸವಣ್ಣ ಶೂನ್ಯ ಮನಸ್ಕವಾಗಿ ಕುಳಿತುಕೊಳ್ಳುತ್ತಾನೆ. ಅಲ್ಲಲ್ಲಿ ಗಂಡು-ಹೆಣ್ಣು ಆಳುಗಳು ಖಿನ್ನರಾಗಿ ಕುಳಿತಿದ್ದಾರೆ. ಅಳುವ ಧ್ವನಿ ಕೇಳಿ, ಬ್ರಾಹ್ಮಣರೂ ಊರಿನ ಬ್ರಾಹ್ಮಣೇತರರೂ ಓಡಿ ಬರುತ್ತಾರೆ).

ವೇದಭಟ್ಟ : (ಬ್ರಾಹ್ಮಣರ ಕಡೆ ತಿರುಗಿ) ಬಸವಣ್ಣ ಬಹಿಷ್ಕೃತ ವ್ಯಕ್ತಿ. ಯಾರೂ ಒಳಗ ಪ್ರವೇಶ ಮಾಡಬ್ಯಾಡರಿ. ಇವನಿಗೆ ನೆರವಾಗಬ್ಯಾಡರಿ. ಬುದ್ಧಿ ಕಲಿಸೋಣ. (ಬ್ರಾಹ್ಮಣರು ಅಲ್ಲಲ್ಲಿ ಬಾಗಿಲ ಹೊರಗೆ ಕುಳಿತುಕೊಳ್ಳುತ್ತಾರೆ).

ವೃದ್ಧ ಪುರೋಹಿತ : ಬಸವಣ್ಣ ಮಾಡಿದ ತಪ್ಪಿಗೆ ಮಾದರಸರು ಇಷ್ಟು ದಿವಸ ಕಷ್ಟ ಅನುಭವಿಸಬೇಕಾಯಿತು. ಈಗ ಅವರು ಸತ್ತಾರ. ಮನ್ಯಾಗ ಹಿರ್ಯಾರೂ ಇಲ್ಲ. ತಬ್ಬಲಿ ಮಕ್ಕಳು ದಿಕ್ಕ ತೋಚದ ಕೂತಾರ. ಬಹಿಷ್ಕಾರ ಹಿಂತೆಗೆದುಕೊಳ್ಳೋಣ.

ಪುರೋಹಿತ ೧ : ಬಸವಣ್ಣ ಹೊರಗ ಬಂದು ಕ್ಷಮೆ ಕೇಳಲಿ.

ವೃದ್ಧ ಪುರೋಹಿತ : ನನಗೆ ಗೊತ್ತು, ಅವನು ಹೊರಗ ಬರೂದಿಲ್ಲ. ಕ್ಷಮೆ ಕೇಳೂದಿಲ್ಲ. ಹೋಗಲಿ, ನಾವೆಲ್ಲ ಕಷ್ಟದಲ್ಲಿದ್ದಾಗ ಪುರವರಾಧೀಶ್ವರ ಮಾದಿರಾಜರು ಪ್ರೀತಿಯಿಂದ ನಮ್ಮೆಲ್ಲರನ್ನೂ ನೋಡಿಕೊಂಡ ದೊಡ್ಡ ಮನುಷ್ಯರು. ಅವರ ಮುಖ ನೋಡಿ ಮಗನ ಮ್ಯಾಲಿನ ಬಹಿಷ್ಕಾರದ ತೀರ್ಪು ಈಗ ಹಿಂತೆಗೆದುಕೊಳ್ಳೂದು ಮಾನವೀಯ ಕೂಡ. ಪರದೇಶಿ

ಮಕ್ಕಳು.

ಬ್ರಾಹ್ಮಣರ ಗುಂಪು : ಎಲ್ಲಿಯ ಪರದೇಶಿ ? ಒಳಗೆ ಹೋಗಿ ಕ್ಷಮೆ ಯಾಚಿಸಲು ಬಸವಣ್ಣನಿಗೆ ಕೇಳೋಣ ನಡೀರಿ. ಮರಣ ಸೂತಕದಿಂದ ಮನೆ ಮೈಲಿಗೆಯಾಗಿದೆ. ಶುದ್ಧೋದಕ ತನ್ನಿ (ಒಬ್ಬ ಓಡಿ ಹೋಗಿ ಶುದ್ಧೋದಕ ತರುತ್ತಾನೆ. ಬ್ರಾಹ್ಮಣರೆಲ್ಲ ಶುದ್ಧೋದಕ ಸಿಂಪಡಿಸುತ್ತ, ಮಂತ್ರಘೋಷದೊಂದಿಗೆ ಮನೆಯೊಳಗೆ ಬರುತ್ತಾರೆ. ದುಃಖದಿಂದ ನಾಗಲಾಂಬಿಕೆ ಬಳಲಿದ್ದಾಳೆ. ಬಸವಣ್ಣ ಗಂಭೀರವಾಗಿ ಕುಳಿತಿದ್ದಾನೆ).

ಪುರೋಹಿತ ೧ : ಬಸವಣ್ಣಾ, ಈಗಲಾದರೂ ಕ್ಷಮೆ ಕೇಳು. ಸಮಾಜ ಎದುರು ಹಾಕಿಕೊಂಡರ ಆಗೂದೇ ಹೀಂಗ.

ಬಸವಣ್ಣ : ಸಮಾಜ. ಸಮಾಜ. ಯಾವುದು ಸಮಾಜ? ಬಹಿಷ್ಕಾರದ ಈ ಕ್ರೂರ ನಿಯಮ ಮಾಡಿದವರ್ಯಾರು ? ನನಗ ನಿಮ್ಮ ಸಮಾಜನೂ ಬ್ಯಾಡ, ನೀವೂ ಬ್ಯಾಡ.

ಪುರೋಹಿತ ೧: ಬಸವಣ್ಣಾ ದುಡುಕಬ್ಯಾಡ. ಇದು ಗಂಭೀರ ಸಂದರ್ಭ. ಸಮಾಜದ ಕ್ರೋಧ ಮತ್ತೂ ಹೆಚ್ಚಿಸಿಕೋಬ್ಯಾಡ. ಇಲ್ಲಿಗಿ ಮುಗಿಯೂದಿಲ್ಲ. ನಿನಗೊಬ್ಬ ತಂಗಿ ಇದ್ದಾಳ. ಅವಳ ಜೀವನ ದಾರುಣವಾಗೂದನ್ನು ಕಣ್ಣಾರೆ ನೋಡಬೇಕಾದೀತು.

ನಾಗಲಾಂಬಿಕೆ : ದಾರುಣಾಗೂದು ಇನ್ನೇನು ಉಳಿದದ ? ತಂದೆ -ತಾಯಿಗಳಿಲ್ಲದ ನಾವು ಈಗ ಸ್ವತಂತ್ರರು. ನಮಗ ನೀವು ಯಾಕ ? ನಿಮ್ಮ ನೆರಳೂ ಬ್ಯಾಡ.

ಪುರೋಹಿತ ೧ : ಏನು. ಹೆಂಗಸಿನ ಬಾಯಾಗ ಇಂಥ ಮಾತು ? ಇದು ಬ್ರಾಹ್ಮಣ ಸಮಾಜಕ್ಕ ಅಪಮಾನ.

ನಾಗಲಾಂಬಿಕೆ : ಈ ಅಪಮಾನಕ್ಕ ನೀವು ಅರ್ಹರು. ಶುದ್ಧ ವ್ಯಕ್ತಿತ್ವದ ನನ್ನ ಅಣ್ಣನ ಕೂಡ ಮಾತಾಡಿ, ಅವನ್ನ ಅಪವಿತ್ರಗೊಳಿಸಬ್ಯಾಡ್ರಿ. ನಡಿರಿ ಹೊರಗ. (ಬ್ರಾಹ್ಮಣರು ಹೊರಡುತ್ತಾರೆ). ಅಣ್ಣಾ ಮುಂದೇನು ?

ಪೂವಮ್ಮ : ತಾಯೀ, ನಾಗಮ್ಮ ನಿನ್ನ ಅಣ್ಣನ ಧೈರ್ಯವೇ ಧೈರ್ಯ.

ನಾಗಲಾಂಬೆ : ಏನು ಧೈರ್ಯವೋ, ಇಂಥ ಅಣ್ಣನ ಪಡೆದುದಕ್ಕ ಧನ್ಯತೆಯೆನಿಸ್ತದ. ಆದರೆ ಸಮಾಜ ಅವನ ವಿಷಯವಾಗಿ ಇಷ್ಟು ಕ್ರೂರವಾಗಿ ವರ್ತಿಸ್ತದಂತ ನಾ ಊಹಿಸಿರಲಿಲ್ಲ.

ಪೂವಮ್ಮ : ತಾಯೀ, ದೇವರು ದೊಡ್ಡವ, ಅವ ಸತ್ಯದ ಹಿಂದ ಇರತಾನ. ನಿಮ್ಮ ಹಿಂದ ಇದ್ದಾನ, ಭಯಪಡಬ್ಯಾಡರಿ.

ಬಸವಣ್ಣ : ಹೌದು ಭಯಪಡುವ ಕಾರಣವಿಲ್ಲ. ಈಗ ಎಲ್ಲರೂ ದಣಿದೀವಿ, ಈ ಬಗ್ಗೆ ನಾಳೆ ಮಾತಾಡೋಣ, ಏಳಿರಿ.

❖❖

ದೃಶ್ಯ - ೯

(ಬಸವಣ್ಣ, ನಾಗಲಾಂಬೆ ಬಾಗೆವಾಡಿ ಬಿಡುವ ದೃಶ್ಯ. ನಾಗಲಾಂಬೆ ಗಂಟು ಕಟ್ಟುತ್ತಿದ್ದಾಳೆ. ಬಸವಣ್ಣ ಕೋಲಿನ ಎರಡೂ ತುದಿಗೆ ಗಂಟು ಕಟ್ಟುತ್ತಿದ್ದಾನೆ).

ನಾಗಲಾಂಬೆ : ಅಣ್ಣಾ, ನಮ್ಮ ವಿಷಯದಲ್ಲಿ ಈ ಅಗ್ರಹಾರ ಉಗ್ರವಾಗಿ ವರ್ತಿಸಿತು.

ಬಸವಣ್ಣ : ಸ್ವಲ್ಪ ತಡಿ, ಮಧ್ಯಾಹ್ನದ ಬಿಸಿಲು ಬಹಳ ಹೊತ್ತು ಉಳಿಯೂದಿಲ್ಲ. ರಾಜನ ರಕ್ಷಣೆಯಲ್ಲಿರುವ ಇವರು ಶೋಷಿತ ಜನರ ವಿರೋಧ ಎದುರಿಸೂ ದಿನ ದೂರವಿಲ್ಲ.

ನಾಗಲಾಂಬೆ : ಜನಸಾಮಾನ್ಯರಿಗೆ ವಿರೋಧಿಸುವ ವಿಚಾರ ಗೊತ್ತಾಗೂದಾದರೂ ಹೇಗೆ ?

ಬಸವಣ್ಣ : ಇವರ ಮಧ್ಯದಿಂದಲೇ ಒಬ್ಬ ನಾಯಕವ್ಯಕ್ತಿ ಹುಟ್ತಾನ. ಸಮಾಜವನ್ನು ಈ ಶೋಷಕರ ವಿರುದ್ಧ ಸಂಘಟಿಸ್ತಾನ, ಶೋಷಿತರನ್ನು ಉದ್ಧರಿಸ್ತಾನ.

ನಾಗಲಾಂಬೆ : ನೀನೇ ಯಾಕ ಆ ನಾಯಕತ್ವ ವಹಿಸಬಾರದು ?

ಬಸವಣ್ಣ : ಕಾಲ ಕೂಡಿ ಬರಲಿ, ನೋಡೋಣ....

(ಅಷ್ಟರಲ್ಲಿ ಮನೆಯ ಹೆಣ್ಣು, ಗಂಡು ಆಳುಗಳು ಕಣ್ಣೀರಿಡುತ್ತ ಬರುತ್ತಾರೆ).

ಬಸವಣ್ಣ : (ಎದ್ದು ನಿಂತು) ದುಃಖಿಸಬ್ಯಾಡ್ರಿ. ಈ ಊರಿನ ಉಸಿರುಗಟ್ಟಿದ ವಾತಾವರಣದಾಗ ನಾನು ಬಾಳಲಾರೆ, ಬೆಳೆಯಲಾರೆ. ಈ ಊರ ಬಿಡೂದು ನನಗ ಅನಿವಾರ್ಯ ಆಗ್ಯಾದ. ತಂಗಿನ್ನ ಇಲ್ಲಿ ಬಿಟ್ಟು ಹೋಗೂದು ಸರಿ ಅಲ್ಲ. ಕಾರಣ ನಾವಿಬ್ಬರೂ ಈ ನೆಲದ ಹಂಗ ಹರಕೊಂಡು ಕೂಡಲಸಂಗಮಕ್ಕ ಹೊಂಟೇವಿ.

ಆಳುಗಳು : ಧಣೀ, ಈಗೇನೋ ಕೂಡಲಸಂಗಮಕ್ಕ ಹೋಗುತೀರಿ. ಆಮೇಲೆ ? ಗೊತ್ತು ಗುರಿ ಇಲ್ಲದೆ ಹೀಂಗ ಹೊರಟರ ಹ್ಯಾಂಗ ?

ಬಸವಣ್ಣ : ನಿಮ್ಮ ದೃಷ್ಟ್ಯಾಗ ನನ್ನ ಪ್ರಯಾಣಕ್ಕ ಗೊತ್ತು ಗುರಿ ಇಲ್ಲ. ಆದರ ನನಗ ಗೊತ್ತು, ಆ ಗುರಿ. ಅದೇ ನನ್ನ ಸಮಾಧಾನದ ಸ್ಥಾನ. ಅಲ್ಲಿಯ ವರೆಗೂ ನಾನು ನಡೀಬೇಕು, ಪಡೀಬೇಕು. ಅದೇ ನನ್ನ ಆಸ್ತಿ. ಮನಿ ಮಗ ನಾನಾಗಿದ್ರೂ ಆಳುಮಕ್ಕಳಂತ ವಂಶಪಾರಂಪರ್ಯ ದುಡಿದು, ಈ ಹೊಲ, ಈ ಮನಿ ಬೆಳೆಸಿದವ್ರು ನೀವು. ಅದಕ್ಕs ಇದು ನಿಮ್ಮ ಆಸ್ತಿ.

ಆಳುಗಳು : ಅಲ್ಲ ಒಡೆಯಾ, ಇದು ನಿಮ್ಮ ಆಸ್ತಿ, ನಿಮ್ಮ ಹಿರೇರ ಆಸ್ತಿ.

ಬಸವಣ್ಣ : ಸುಳ್ಳು, ಇದು ಬೆಳೆದದ್ದು ನಿಮ್ಮ ಬೆವರಿನಿಂದ. ನಿಮ್ಮ ಆಸ್ತಿ ನಿಮಗ ಕೊಡತೀನಿ. ತಗೊಂಡು ನನ್ನನ್ನು ಋಣಮುಕ್ತ ಮಾಡ್ರಿ. ಹೊಲ-ತ್ವಾಟ, ಮನಿ -ಬಯಲು ಜಾಗ, ಕೊಟ್ಟಿಗ್ಯಾನ ದನ-ಕರು ನೀವೆಲ್ಲ ಆಮ್ಯಾಲ ಹಂಚಿಕೊಳ್ಳಿ. ಈಗ ಈ ದುಡ್ಡು ನಿನಗ, ಚಿನ್ನ-ಬೆಳ್ಳಿ ನಿನಗ, ಮುತ್ತು ಹವಳದ ಆಭರಣ ಕಸಗೂಡಿಸುವ ನಿನಗ, ಒಳಗಿನ ಪಾತ್ರೆ-ಪಗಡಿ ನೀ ತೆಗೆದುಕೊ (ಹೀಗೆ ಹೇಳುತ್ತ ಗಂಡು ಹೆಣ್ಣು ಆಳುಗಳಿಗೆ ಹಂಚಿಕೊಟ್ಟು, ತಂಗಿಯೊಂದಿಗೆ ಹೊರಡುತ್ತಾನೆ. ನಾಗಲಾಂಬೆ ತಲೆಯ ಮೇಲೆ, ಬಗಲಲ್ಲಿ ಗಂಟುಹೊರುತ್ತಾಳೆ. ಬಸವಣ್ಣ ಕೋಲು ಹೆಗಲಿಗೇರಿಸುತ್ತಾನೆ. ಆಳುಗಳು ದುಃಖಿಸುತ್ತಾರೆ. ಬ್ರಾಹ್ಮಣರು ಬಾಗಿಲು ಮುಚ್ಚಿಕೊಳ್ಳುತ್ತಾರೆ. ಗ್ರಾಮದ ಮಿಕ್ಕ ಜನಸಮುದಾಯ ಅವರು ಹೊರಟ ದಾರಿಯನ್ನು ನೋಡುತ್ತ ಕಣ್ಣೀರು ಸುರಿಸುತ್ತಾರೆ. "ಸ್ಥಾವರಕ್ಕಳಿವುಂಟು. ಜಂಗಮಕ್ಕಳಿವಿಲ್ಲ" ಧ್ಯೇಯವಾಕ್ಯ ಪದೇ ಪದೇ ಹಿನ್ನೆಲೆಯಾಗಿ ಕೇಳಿಸುತ್ತದೆ. ಪ್ರಯಾಣ ಬೆಳೆಸುತ್ತಾರೆ).

❖❖

ದೃಶ್ಯ - ೧೦

(ಕೂಡಲಸಂಗಮ ದೇವಸ್ಥಾನದಲ್ಲಿ ಇಷ್ಟಲಿಂಗ ಪೂಜಾನಿರತ ಬಸವಣ್ಣ. ಮರಿಯೊಂದಿಗೆ ಓಡಿಬಂದ ಕುರಿ ದೇವಾಲಯವನ್ನು ಪ್ರವೇಶಿಸಿ, ಲಿಂಗದ ಹಿಂದೆ ನಿಲ್ಲುತ್ತದೆ. ಎಡವಿದ ಗಂಟೆ, ಆರತಿ ಬಿದ್ದು ಸಪ್ಪಳವಾಗುತ್ತದೆ. ಬಸವಣ್ಣನಿಗೆ ಎಚ್ಚರ. ಕುರಿ ಅಂಜಿ ಅರಚುತ್ತದೆ. ಅಷ್ಟರಲ್ಲಿ ಇಬ್ಬರು ಬ್ರಾಹ್ಮಣರು ಕೈಯಲ್ಲಿ ಮಚ್ಚು ಹಿಡಿದು ಓಡಿಬರುತ್ತಾರೆ).

ಬಸವಣ್ಣ : (ಮರಿ ಎತ್ತಿಕೊಂಡು) ಏನಯ್ಯಾ ಇದು ?

ವಿಪ್ರ ೧ : ವರುಣಯಜ್ಞಕ್ಕ ತಂದ ಹರಕೆಯ ಕುರಿ, ಮರಿಯೊಂದಿಗೆ ಬಲಿ ಕೊಡಬೇಕೆನ್ನುವಷ್ಟರಾಗ ತಪ್ಪಿಸಿಕೊಂಡು ಓಡಿ ಬಂತು.

ಬಸವಣ್ಣ : ಈಗ ಏನ ಮಾಡತೀರಿ ?

ವಿಪ್ರ ೨ : ಒಯ್ಯತೀವಿ. ಯಜ್ಞಕ್ಕ ಬಲಿ ಕುಡತೀವಿ, ವರುಣನ್ನ ತೃಪ್ತಿಪಡಿಸಿ ಮಳಿ ಬರಿಸತೀವಿ.

ಬಸವಣ್ಣ : ಮಳಿ ಬರದಿದ್ದರ ? (ವಿಪ್ರರು ಪರಸ್ಪರ ಮುಖ ನೋಡಿಕೊಂಡು ನಿರುತ್ತರರಾಗುತ್ತಾರೆ). ಹೇಳಿ, ಮಳಿ ಬರದಿದ್ದರ ಏನ ಮಾಡ್ತೀರಿ?

ವಿಪ್ರ ೧: ಮಳಿ ಬರದಿದ್ದರೇನಾಯ್ತು, ಕುರಿ ಕೊಂದು ಹೊಟ್ಟಿ ತುಂಬ ಊಟ ಮಾಡತೀವಿ,

ಬಸವಣ್ಣ : ಊಟಕ್ಕ ಪ್ರಾಣಿಯೇ ಬೇಕಿದ್ದರ ಹೋಮದ ನೆವ ಯಾಕ? ಹೋಗಲಿ, ಊಟಕ್ಕ ಪ್ರಾಣೇನs ಬೇಕೇನು ?

ವಿಪ್ರ ೨ : ನಮಗೇನೂ ಗೊತ್ತಿಲ್ಲ. ನಮ್ಮ ಋತ್ವಿಜರು ಹೇಳ್ಯಾರ, ಈ ಕುರಿ ಒಯ್ಯತೀವಿ. (ಕುರಿ ಹಿಡಿಯಲು ಹೋಗುತ್ತಾರೆ. ಮರಿಯನ್ನು ಇಳಿಸಿ, ಬಸವಣ್ಣ ಅಡ್ಡಗಟ್ಟಿ ಕುರಿ ಹಿಡಿಯುತ್ತಾನೆ).

ಬಸವಣ್ಣ : ನಾನು ಕುರಿ ಬಿಡೂದಿಲ್ಲ. ನನ್ನನ್ನs ಬಲಿ ತಗೊಂಡು, ಈ ಪ್ರಾಣೆನ್ನ ಕೈಬಿಡಲು ನಿಮ್ಮ ಋತ್ವಿಜರಿಗೆ ಹೇಳಿರಿ. ನರಬಲಿಯಿಂದ ವರುಣ ಇನ್ನೂ ಸಂತೃಪ್ತನಾದಾನು. ನಾಳೆ ಬರುವ ಮಳಿ ಇಂದೇ ಬಂದೀತು.

ವಿಪ್ರ ೨: ಇಂಥ ಬಣ್ಣದ ಮಾತ ಆಡ ಬ್ಯಾಡ. ಬಿಡದಿದ್ದರ ಈ ಕುರಿನ್ನs ಇಲ್ಲೇ ಸಂಗಮೇಶ್ವರನಿಗಿ ಬಲಿ ಕೊಡತೀವಿ. (ಕೈಯಲ್ಲಿಯ ಮಚ್ಚು ಬೀಸುತ್ತಾನೆ. ಬಸವಣ್ಣ ಎರಡೂ ಕೈಗಳಿಂದ ಹಿಡಿಯುತ್ತಾನೆ. ರಕ್ತ ಸುರಿಯುತ್ತದೆ. ನಾಗಲಾ, ನಾಗಲಾ, ನಂದಿಕೇಶಾ, ನಂದಿಕೇಶಾ

ಎಂದು ಬಸವಣ್ಣ ಕೂಗುತ್ತಾನೆ. ವಿಪ್ರರು ಅಂಜಿ ಮಚ್ಚು ಒಗೆದು ಓಡುತ್ತಾರೆ. ನಾಗಲಾಂಬಿಕೆ, ನಂದಿಕೇಶ ದನಿ ಕೇಳಿ ಓಡಿ ಬರುತ್ತಾರೆ. ಅಣ್ಣನ ಅವಸ್ಥೆಯನ್ನು ನೋಡಿ, ನಾಗಲಾಂಬಿಕೆ ಚಿಟ್ಟನೇ ಚೀರಿ)

ನಾಗಲಾಂಬೆ : ಅಣ್ಣಾ, ಅಣ್ಣಾ, ಅಯ್ಯೋ (ವಸತಿಗೃಹದ ವಿದ್ಯಾರ್ಥಿಗಳು ಓಡಿಬರುತ್ತಾರೆ. ನಾಗಲಾಂಬಿಕೆ ಸೆರಗು ಹರಿದು ಬಸವಣ್ಣನ ಕೈಗೆ ಕಟ್ಟತೊಡಗುತ್ತಾಳೆ).

ನಂದಿಕೇಶ : ಏನು ಬಸವಾ ನಿನ್ನ ಸ್ಥಿತಿ ?

ಬಸವಣ್ಣ : (ಕುರಿಯತ್ತ ನೋಡುತ್ತ) ವೈದಿಕರ ಯಜ್ಞಕ್ಕ ಬಲಿಯಾಗತಿದ್ದ ಕುರಿ ತಪ್ಪಿಸಿಕೊಂಡು ಬಂದು, ದೇವಾಲಯ ಹೊಕ್ಕತು. ಬೆನ್ನಟ್ಟಿ ಬಂದ ವಿಪ್ರರಿಂದ ಬಿಡಿಸಲು ಯತ್ನಿಸಿದೆ. (ಅಂಗೈ ಬಿಚ್ಚಿ ತೋರಿಸುತ್ತ) ಈ ಸ್ಥಿತಿ.

ನಂದಿಕೇಶ : ಏನ ನಿನ್ನ ಅಂತಃಕರಣ. ಕುರಿ ಉಳಿಸಿಕೊಳ್ಳಲು ಹೋಗಿ ಕೈಕಳೆದುಕೊಳ್ಳೂದ ?

ನಾಗಲಾಂಬೆ : ಅಯ್ಯೋ ವೈದಿಕರ ಕ್ರೌರ್ಯವೇ, ಅಯ್ಯೋ ಅಣ್ಣನ ಕರುಣವೇ (ರಕ್ತ ತೊಳೆಯುವ, ಅರಿವೆ ಸುತ್ತುವ ಕೆಲಸ ನಡೆಯುತ್ತದೆ).

ಬಸವಣ್ಣ : (ಮರಿಯನ್ನು ಎತ್ತಿಕೊಂಡು) ನೋಡಿ, ಅಂಜಿದ ಮರಿ ಇನ್ನೂ ಅರಚತದ. (ದುಃಖಭಾವದಿಂದ) ಅಯ್ಯೋ ನಿರ್ದಯವೇ, ದಯವಿಲ್ಲದ ಧರ್ಮವೇ. ದಯವಿಲ್ಲದ ಧರ್ಮ ಅದೇವುದು ಕೂಡಲಸಂಗಾ !

❖❖

ದೃಶ್ಯ - ೧೧

(ಕೂಡಲಸಂಗಮನಾಥ ದೇವಾಲಯ. ದೇವರ ಕಡೆಗೆ ಬೆನ್ನು ಮಾಡಿ ಕುಳಿತ ಬಸವಣ್ಣನ ಇಷ್ಟಲಿಂಗ ಪೂಜೆ).

ಈಶಾನ್ಯಗುರು : (ಪ್ರವೇಶಿಸಿ) ಏನು ವಿಚಿತ್ರ ಬಾಲಕ! ಕಳೆದ ಕೆಲವು ತಿಂಗಳಿಂದ ಸಂಗಮನಾಥಲಿಂಗದ ಸೋಮವಾರ ಉತ್ಸವಕ ಈತ ಬರತಾ ಇಲ್ಲ. ಹೋಗಲಿ, ಸ್ವಯಂಭೂ ಸಂಗಮನಾಥಲಿಂಗಕ್ಕ ಎಲ್ಲರೂ ಸಮ್ಮುಖವಾಗಿ ಕುಳತರ, ಈತ ವಿಮುಖವಾಗಿ ಕುಳತಾನ. ಅಂಗೈಯಲ್ಲಿ ಲಿಂಗ ಪೂಜಿಸತಿದ್ದಾನ. ಸೂರ್ಯನ ಕಡಿಗಿ ಬೆನ್ನ ಮಾಡಿ, ದೀಪ ಹಚಗೊಂಡ ಕುಳಿತ್ಹಾಂಗ.

ಬಸವಣ್ಣ : ಹೊರಗೆ ಪೂಜಿಸಿ ಏನ ಮಾಡುವೆನಯ್ಯಾ.

ಒಳಗೆ ಶುದ್ಧನಾಗದನ್ನಕ್ಕ ?

ಒಳಗೆ ಶುದ್ಧವಾಗದನ್ನಕ್ಕ ?

ಒಳಗೆ ಶುದ್ಧವಾಗದನ್ನಕ್ಕ ?

(ಎಂದು ಗಂಭೀರವಾಗಿ ಹೇಳುತ್ತ ಹೇಳುತ್ತ ಕಣ್ಣು ತೆರೆಯುತ್ತಾನೆ).

ಈಶಾನ್ಯಗುರು : ಹೌದು, ಒಳಗ ಶುದ್ಧವಾಗದಿದ್ರ ಹೊರಗ ಮಾಡಿದ ಪೂಜೆ ವ್ಯರ್ಥ. ಆದರ ಒಳಗ ಶುದ್ಧವಾಗೂದಕ್ಕ ಹೊರಗಿನ ಪೂಜೆ ಅಗತ್ಯ. ಬಸವಣ್ಣಾ, ನೀನು ಮಾತ್ರ ಹೊರಗಿನ ಸ್ವಯಂಭೂಲಿಂಗದ ಪೂಜೆ ಬಿಟ್ಟು, ಇದೇನು ಪೂಜೆ ಮಾಡತಾ ಇದ್ದೀ.

ಬಸವಣ್ಣ : ಹೌದು, ಗುರುಗಳೇ, ಮನುಷ್ಯನಿಗೆ ಮುಖ್ಯವಾದುದು ಒಳಗಿನ ಶುದ್ಧೀಕರಣ. ಅದಕ್ಕ ಅಗತ್ಯವಾದುದು ಆತ್ಮಧ್ಯಾನ. ಆದರೆ ಇಂದು ಹೊರಗಿನ ಸ್ಥಾವರಲಿಂಗ ಪೂಜೆ ಒಂದು ಕಡಿ ಬೆಳೆದು, ಒಳಗಿನ ಆತ್ಮಧ್ಯಾನ ಅಲಕ್ಷ್ಯಕ್ಕ ಗುರಿಯಾಗ್ಯಾದ. ಇದನ್ನು ತಪ್ಪಿಸಬೇಕಾದ್ರ ಆತ್ಮವನ್ನೇ ಲಿಂಗ ಅಂತ ಭಾವಿಸಬೇಕು. ಅದರ ಕುರುಹಾಗಿರುವ ಈ ಇಷ್ಟಲಿಂಗ ಪೂಜೆ ಮಾಡಬೇಕು.

ಈಶಾನ್ಯ ಗುರು : ಶೈವ ಆಚಾರ್ಯರು ದೇವರ ಜಗುಲಿಯ ಮೇಲಿಟ್ಟು ಪೂಜಿಸೂದು, ಪ್ರವಾಸದಾಗ ಎದಿ ಮ್ಯಾಲ ಕಟಗೊಂಡು ಹೋಗೂದೂ ಇಷ್ಟಲಿಂಗವಲ್ಲವೇ ?

ಬಸವಣ್ಣ : ಹೌದು, ಅದರ ಹೆಸರೂ ಇಷ್ಟಲಿಂಗ. ಆದರ ಅದರ ಪೂರ್ವಾಶ್ರಯ ಕಳೆದು, ಅಂದರ ಹಳೆಯ ಅರ್ಥ ಕಳೆದು ಹೊಸ ಅರ್ಥ ತುಂಬೀನಿ. ಹೀಗಾಗಿ ಅದರಿಂದ ಇದು ಬ್ಯಾರೆ.

ಈಶಾನ್ಯಗುರು : ಹ್ಯಾಂಗ ?

ಬಸವಣ್ಣ : ಶೈವರ ಇಷ್ಟಲಿಂಗ ಅವರ ಇಷ್ಟದೇವತೆಯಾದ ಗುಡಿಯೊಳಗಿನ ಸ್ಥಾವರಲಿಂಗದ ಪ್ರತೀಕ. ಇದು ಒಳಗಿನ ಆತ್ಮಲಿಂಗದ ಕುರುಹು.

ಈಶಾನ್ಯಗುರು : ಆತ್ಮವನ್ನೇ ಲಿಂಗ ಅಂತ ಭಾವಿಸಿದ ಬಳಿಕ ಈ ಕುರುಹು ಮತ್ತ್ಯಾಕ, ಬಸವಾ ?

ಬಸವಣ್ಣ : ನಿರಾಕಾರವಾಗಿರುವ ಆತ್ಮದ ಶುದ್ಧಿsಗಿ, ಅದರ ಸಾಕಾರರೂಪವಾದ ಈ ಕುರುಹು ಒಂದು ಸುಲಭ ಸಾಧನ. ಈ ಲಿಂಗವನ್ನು ಅನುಸಂಧಾನ ಮಾಡುವವರೆಲ್ಲ ಲಿಂಗಾಯತರು. ಇದು ಅವರ ದೇಹದ ಮ್ಯಾಲ ಇರಬೇಕು.

ಈಶಾನ್ಯಗುರು : ಹಾಗಾದರ ಇದು ಜನಿವಾರದ ಇನ್ನೊಂದು ರೂಪ ಅಲ್ಲ ?

ಬಸವಣ್ಣ : ಅಲ್ಲ, ಅಲ್ಲ, ಕೊರಳಾಗ ಕಟಗೊಂಡ ಮಾತ್ರಕ್ಕ ಎರಡೂ ಒಂದೇ ಅಲ್ಲ. ಜನಿವಾರ ಧರಿಸುತ್ತಲೇ ವ್ಯಕ್ತಿ ಬ್ರಾಹ್ಮಣ ಆಗತಾನ. ಅವತ್ತಿನಿಂದಲೇ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಂತ ವರ್ಗೀಕರಿಸಿ ಬಾಳಲು ಸುರು ಮಾಡತಾನ. ಇದಕ್ಕ ವಿರುದ್ಧ ಅನ್ನೂ ಹಾಂಗ ಈ ಲಿಂಗ, ವೈದಿಕರು ಸೃಷ್ಟಿಸಿರುವ ವರ್ಣಭೇದ ಅಳಿಸಿ ಹಾಕ್ತದ. ಅಂದರ ಜನಿವಾರ ಸಮಾಜವನ್ನು ಒಡದರ, ಶಿವದಾರ ಒಂದಗೂಡಸ್ತದ. ಅವರನ್ನು ಭಕ್ತರೆಂದು ಮನ್ನಿಸ್ತದ, ಮಿಕ್ಕವರನ್ನು ಭವಿಗಳೆಂದು ಗುರುತಿಸ್ತದ.

ಈಶಾನ್ಯ ಗುರು ; ಹಾಗಾದರ ಜನಿವಾರ ನಾಲ್ಕು ವರ್ಗ ಮಾಡಿದರ ಶಿವದಾರ ಭಕ್ತ-ಭವಿ ಎರಡು ವರ್ಗ ಮಾಡತದಲ್ಲ?

ಬಸವಣ್ಣ : ಹಾಗಲ್ಲ, ಗುರುಗಳೇ, ಜನಿವಾರ ಜನರನ್ನ ಜನನ ನೋಡಿ ವರ್ಗೀಕರಿಸಿದರ, ಇಷ್ಟಲಿಂಗ ಗುಣ ನೋಡಿ ವರ್ಗೀಕರಿಸ್ತದ. ಜನನ ನೋಡಿ ಮಾಡೂ ವರ್ಗೀಕರಣದಾಗ ಗುಣಕ್ಕ ಕಿಮ್ಮತ್ತಿಲ್ಲ, ಜನನಕ್ಕs ಕಿಮ್ಮತ್ತು. ಗುಣ ನೋಡಿ ಮಾಡೂ ವರ್ಗೀಕರಣದಾಗ ಜನನಕ್ಕ ಕಿಮ್ಮತ್ತಿಲ್ಲ, ಗುಣಕ್ಕs ಕಿಮ್ಮತ್ತು. ಇಷ್ಟs ಅಲ್ಲ, ಸದಾಚಾರಿಯಾದ ಶೂದ್ರ ಆಗಲಿ, ವೈಶ್ಯ ಆಗಲಿ, ಯಾಕ? ಕ್ಷತ್ರಿಯನೂ ಬ್ರಾಹ್ಮಣನಾಗಲು ಬರೂದಿಲ್ಲ. ಬ್ರಾಹ್ಮಣ ಆಗಬೇಕಾದ್ರ ಅವ ಮತ್ತೊಮ್ಮೆ ಹುಟ್ಟಿ ಬರಬೇಕು. ಲಿಂಗಾಯತ ಹೀಂಗಲ್ಲ. ಅನಾಚಾರದಿಂದ ಭವಿಯೆನಿಸಿದವ ಈ ಜನ್ಮದಲ್ಲೇ ಸದಾಚಾರದಿಂದ ಭಕ್ತ ಆಗಬಹುದು. ಇದು ಇಷ್ಟಲಿಂಗದ ಸಾಮಾಜಿಕ ಮಹತ್ವ.

ಈಶಾನ್ಯ ಗುರು : ಆಧ್ಯಾತ್ಮಿಕವಾಗಿಯೂ ಇಷ್ಟಲಿಂಗ, ಯಜ್ಞೋಪವೀತಗಳಲ್ಲಿ ಭೇದ ಅದ?

ಬಸವಣ್ಣ : ಖಂಡಿತವಾಗಿಯೂ ಭೇದ ಅದ. ಲಿಂಗತತ್ವ ಬ್ಯಾರೆ, ಯಜ್ಞೋಪವೀತತತ್ವ ಬ್ಯಾರೆ. ಯಜ್ಞೋಪವೀತಧಾರಣೆ ಯಜ್ಞ ಮಾಡೂ ಅಧಿಕಾರ ಕೊಟ್ಟರ, ಲಿಂಗಧಾರಣೆ ಆತ್ಮಶುದ್ಧಿಗಿ ಅನುವು ಮಾಡಿಕೊಡ್ತದ. ಅದಕ್ಕs ಅಂಗ ಲಿಂಗವಾಗುವುದರ ಸಲುವಾಗಿ ಈ ಲಿಂಗಪೂಜೆ ಅವಶ್ಯ.

ಈಶಾನ್ಯಗುರು : ಈ ಲಿಂಗ ಪೂಜಿಸಿ ಲಿಂಗವಾದ ಬಳಿಕ ಇದನ್ನು ಬಿಡಬಹುದಲ್ಲ?

ಬಸವಣ್ಣ : ಇಲ್ಲ, ಲಿಂಗದ ಉಪಾಸನೆ ಅಂದರ ಆತ್ಮಧ್ಯಾನವಾಗಿರುವುದರಿಂದ ಇದರ ಉಪಾಸನೆ ಬಿಟ್ಟರ ಆತ್ಮಧ್ಯಾನ ಬಿಟ್ಟ ಹಾಗೆಯೇ ? ಆತ್ಮಧ್ಯಾನ ಬಿಡಬೇಕ ?

ಈಶಾನ್ಯಗುರು : ಇಲ್ಲ, ಆತ್ಮಕ್ಕ ಮನಸ್ಸ ಅನ್ನೂ ಹಾವಸೆ ಆವರಿಸಿರ್ತದ. ತಿಳಿನೀರಿಗಾಗಿ ಹಾವಸೆಯನ್ನು ಮತ್ತ ಮತ್ತ ದೂರ ದೂರ ಸರಿಸೂ ಹಾಂಗ, ಆತ್ಮಶುದ್ಧಿಗಾಗಿ ಮನಸ್ಸೆಂಬ ಹಾವಸೆ ದೂರ ಮಾಡಲು ನಿತ್ಯ ನಿತ್ಯ ಆತ್ಮಧ್ಯಾನ ......

ಬಸವಣ್ಣ : ಅಂದರ ನಿತ್ಯ ನಿತ್ಯ ಆತ್ಮಲಿಂಗಪೂಜೆ ನಡಿಬೇಕು, ಇದು ನಿತ್ಯವೂ ನಡಸೂ ಆತ್ಮಾವಲೋಕನ, ಆತ್ಮವಿಮರ್ಶೆ. ಇದರಿಂದ ಸಾಧ್ಯವಾಗೂ ಆತ್ಮಶುದ್ಧಿಯ ವಿವಿಧ ರೂಪಗಳೇ ಸತ್ಯ, ಶಾಂತಿ, ದಯೆ, ಇತ್ಯಾದಿ ಸದ್ಗುಣಗಳು. ಇದೇ ವ್ಯಕ್ತಿ ಮಾನವ ಆಗೂದು.

ಈಶಾನ್ಯಗುರು : ಹೌದು ಬಸವಾ, ಇದೇ ಅಂಗ ಲಿಂಗವಾಗೂದು. ಬಸವ ಬಸವಲಿಂಗನಾಗೂದು; ಬಸವ ಬಸವಲಿಂಗನಾಗೂದು. ನೀನು ಆವಿಷ್ಕರಿಸಿರುವ ಈ ಇಷ್ಟಲಿಂಗ ತತ್ವ ಲೋಕಕ್ಕೆ ನೀನು ನೀಡಿರುವ ಹೊಸ ಕಾಣಿಕೆ, ಬಸವಾ. ಹೊಸ ಕಾಣಿಕೆ. (ಬಸವಣ್ಣ ನಮಸ್ಕರಿಸುತ್ತಾನೆ. ಗುರು ಆಶೀರ್ವದಿಸುತ್ತಾನೆ. 'ಸ್ಥಾವರಕ್ಕಳಿವುಂಟು.... " ಎಂಬ ಧ್ಯೇಯ ವಾಕ್ಯ ಕೇಳಿಸುತ್ತದೆ).

❖❖

ದೃಶ್ಯ - ೧೨

(ಕೂಡಲಸಂಗವು ಮಠ, "ಪಶುಪತಿ ಶಿವಾಚಾರ್ಯರಿಗೆ ಜಯವಾಗಲಿ, ಹರಹರಮಹಾದೇವ" ಎಂಬ ಘೋಷಣೆಯೊಂದಿಗೆ ಬಂದು ಪೀಠದ ಮೇಲೆ ಪಶುಪತಿಶಿವಾಚಾರ್ಯ ಕುಳಿತುಕೊಳ್ಳುವನು. ಎಡಬಲದಲ್ಲಿ ಸೇವಕರು, ಮಾರ್ಜಾಲಪ್ಪ, ಸಮೀಪದಲ್ಲಿ, ಈಶಾನ್ಯಗುರು ನಿಂತಿದ್ದಾರೆ).

ಪಶುಪತಿ : ಈಶಾನ್ಯಗುರುಗಳೇ, ಮಠದಾಗ ವಿದ್ಯಾಭ್ಯಾಸ ಚೆನ್ನಾಗಿ ಸಾಗಿದೆಯೇ ? ವಿದ್ಯಾರ್ಥಿಗಳು ನಮ್ಮ ನಿಯಮಗಳಿಗೆ ಬದ್ಧರಾಗಿ ಅಧ್ಯಯನ ಮಾಡ್ತಿದ್ದಾರ ?

ಈಶಾನ್ಯಗುರು : ಮಾಡ್ತಿದ್ದಾರ,

ಪಶುಪತಿ : ಏನೋ, ಬಸವಣ್ಣನ ಬಗ್ಗೆ ಕೆಲವು ಆರೋಪ ಅವ.

ಈಶಾನ್ಯಗುರು : ಹಾಗೇನೂ ಇಲ್ಲ, ನನ್ನ ದೃಷ್ಟಿಯೊಳಗ ಅವನೊಬ್ಬ ವಿಶಿಷ್ಟ ವಿದ್ಯಾರ್ಥಿ. ಸ್ವತಂತ್ರ ವಿಚಾರವಾದಿ.

ಪಶುಪತಿ : ನಮಗೆ ಅಂಥವರು ಬೇಕಿಲ್ಲ. ಮಠ ಪ್ರವೇಶಿಸಿದ ಹೊಸದರಲ್ಲಿ ಈ ಅಭ್ಯಾಸ ವ್ಯರ್ಥ ಅಂತ ವರ್ಗದಲ್ಲೇ ಹೇಳಿದನಂತ. ಇದರಿಂದ ಉಳಿದ ವಿದ್ಯಾರ್ಥಿಗಳ ಮ್ಯಾಲ ಏನ ಪರಿಣಾಮವಾದೀತು?

ಈಶಾನ್ಯಗುರು : ಅವ ಹೇಳೂದು ಕೆಲಮಟ್ಟಿಗೆ ಸರಿ ಅದ. ವಿಚಾರಸಾಹಿತ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಅವ ಅಪೇಕ್ಷಿಸತಾನ.

ಪಶುಪತಿ : ಏನು, ವಿಚಾರ ಮತ್ತು ಸ್ವಾತಂತ್ರ್ಯ ? ಅಂಥವುಗಳಿಗೆ ಇಲ್ಲಿ ಅವಕಾಶವಿಲ್ಲ. ಅಂಥವರಿಗೆ ಇಲ್ಲಿ ಜಾಗವಿಲ್ಲ. ನೀವು ನಿಗ್ರಹಿಸದಿದ್ರ ಅವನನ್ನು ನಾವು ನಿಗ್ರಹಿಸಬೇಕಾಗತದ.

ಈಶಾನ್ಯಗುರು : ಪರಿಸ್ಥಿತಿ ನೀವು ಕೈ ಹಾಕುವಷ್ಟು ಗಂಭೀರವೇನಿಲ್ಲ.

ಪಶುಪತಿ : ನಿಮಗ ಅವನ ಬಗ್ಗೆ ವಿಶೇಷ ಪ್ರೀತಿ ಅಂತ ಕೇಳೀವಿ. ಇತ್ತೀಚೆ ಅವ ಸ್ವಯಂಭೂ ಸಂಗಮನಾಥ ಲಿಂಗದ ಪೂಜೆ ಮಾಡೂದೂ ಬಿಟ್ಟಾನಂತ. ಗುರುಗಳ ಸಮಾಧಿಗೆ ಭಕ್ತರು ಕಾಣಿಕೆ ಅರ್ಪಿಸೂ ಕಾರ್ಯಕ್ರಮಕ್ಕೂ ಮೊನ್ನೆ ಬರಲಿಲ್ಲಂತ ?

ಈಶಾನ್ಯಗುರು : ಹೌದು (ತಲೆ ಅಲ್ಲಾಡಿಸುತ್ತಾನೆ).

ಮಾರ್ಜಾಲಪ್ಪ : ಏನು ಹೌದು, ಸತ್ತ ಸ್ವಾಮೀ ವರ್ಚಸ್ಸನ್ನು ಹಣ ಗಳಿಸೂ ಸಾಧನಮಾಡಿಕೊಂಡಿರುವ ಕಾರ್ಯಕ್ರಮ ಅಂದನಂತ?

ಈಶಾನ್ಯಗುರು : (ಹೌದು ಎಂಬಂತೆ ತಲೆ ಅಲ್ಲಾಡಿಸುತ್ತಾನೆ).

ಪಶುಪತಿ : ಮಿಕ್ಕ ವಿದ್ಯಾರ್ಥಿಗಳು ಇವನನ್ನು ಕ್ರಮೇಣ ಅನುಸರಿಸುತ್ತಿರುವರೆಂದೂ ಕೇಳೀವಿ. ಇದನೆಲ್ಲ ಕೈಬಿಡಲು ಬಸವಣ್ಣಗ ಹೇಳ್ರಿ.

ಈಶಾನ್ಯಗುರು : ಆ ಮಗುವಿನ ಸ್ವಭಾವನಃ ವಿಲಕ್ಷಣ ಅದ. ಕಂದಾಚಾರ ಅವಗ ಸೇರೂದಿಲ್ಲ. ಅವನ ಪಾಡಿಗಿ ಅವನನ್ನು ಬಿಡೂದೇ ಲೇಸು. ಅದನ್ನು ತಡೆಯಲು ನನ ಮನಸ್ಸೂ ಒಪ್ಪದು. ಅವನೂ ನನ ಮಾತ ಕೇಳಲಿಕ್ಕಿಲ್ಲ...

ಪಶುಪತಿ : ಹಾಗಾದರ ನಾವು ಹೇಳಿತೀವಿ. ಬಸವಣ್ಣನ್ನ ಕರೀರಿ. (ಕರೆಯಲು ಸೇವಕರು ಹೋಗುತ್ತಾರೆ).

ಮಾರ್ಜಾಲಪ್ಪ : ಪ್ರಭೂ, ಇವನ ಇತಿಹಾಸ ದೊಡ್ಡದದ. ಈ ರೀತಿ ಸಂಪ್ರದಾಯ ಪ್ರಶ್ನಿಸಿದ ಕಾರಣಕ್ಕಾಗೇ ಇವನ್ನ ಬಾಗೆವಾಡಿಯಿಂದ ಹೊರದೂಡಿದರೆಂದು ನಮಗ ತಡವಾಗಿ ತಿಳೀತು.

ಪಶುಪತಿ : ಸೂಜಿಯಾಗಿ ಒಳಗೆ ಬಂದ ಇವನ್ನ ಡಬ್ಬಣವಾಗಿ ಬೆಳೆಯಲು ಬಿಡಬಾರದು. (ಕರೆಯಲು ಹೋದ ಸೇವಕರೊಂದಿಗೆ ಬಸವಣ್ಣ ಬರುತ್ತಾನೆ) ನಿನ್ನನ್ನು ಯಾಕ ಕರೆಸೀವಿ ಗೊತ್ತೋ?

ಬಸವಣ್ಣ : ಗೊತ್ತು.

ಪಶುಪತಿ : ಇನ್ನ ಮೇಲಾದರೂ ತಪ್ಪ ತಿದ್ದಿಕೋ.

ಬಸವಣ್ಣ : ಮಾಡದ ತಪ್ಪ ತಿದ್ದಿಕೊಳ್ಳೂದೆಲ್ಲಿ ಬಂತು ? ಗುರುಗಳೇ.

ಪಶುಪತಿ : ಹಾಗಾದರೆ ನೀನು ಮಾಡ್ತಿರೋದೇನು ?

ಬಸವಣ್ಣ : ತಪ್ಪನ್ನು ಮಾಡೂದಲ್ಲ. ಇನ್ನೊಬ್ಬರು ಮಾಡಿದ ತಪ್ಪನ್ನು ಆಡೂದು ಅಲ್ಲ, ಆ ತಪ್ಪಿಗೆ ಭಾಗಿಯಾಗದೆ ದೂರ ಉಳಿಯೂದು.

ಪಶುಪತಿ : ಹಾಗಾದರೆ ಈ ಸುಕ್ಷೇತ್ರದಾಗ ತಪ್ಪುಗಳಾಗ್ತವ ?

ಬಸವಣ್ಣ : ಆಗದೇ ಮತ್ತೇನು ? ತಪ್ಪಿನ ಕಡೆಗೇ ದೇವಾಲಯ, ಮಠ ಎಳಕೊಂಡು ಹೊಂಟೀರಿ. ಜಾತಿ ಭೇದ ಇಲ್ಲದೆ ಎಲ್ಲ ಜನರನ್ನೂ ಒಳಗೊಳ್ಳುತ್ತಿದ್ದ ದೇವಾಲಯದಾಗ, ಮಠದಾಗ ಸಮೂಹಸಂಸ್ಕೃತಿ ನಾಶವಾಗ್ತ ಇದೆ. ಇತ್ತೀಚೆ ಇನ್ನೂ...

ಪಶುಪತಿ : ಏನೂ ? (ಎದ್ದು ಬಂದು ಬೆತ್ತದಿಂದ ಥಳಿಸುತ್ತ) ಇವನನ್ನು ಮಠದಿಂದ ಹೊರಗ ಹಾಕಿರಿ. (ಬೀಸಿದ ಬೆತ್ತ ತಾಗಿ, ಉರಿಯುತ್ತಿದ್ದ ತೂಗುದೀಪ ಹೊಯ್ದಾಡಿ ಹರಿದು ಬೀಳುತ್ತದೆ).

ಈಶಾನ್ಯ ಗುರು : (ಮಧ್ಯೆ ಪ್ರವೇಶಿಸಿ) ಬ್ಯಾಡ್ರಿ, ಬ್ಯಾಡ್ರಿ. ಅಗ್ರಹಾರದ ಕ್ರೂರ ಕೈಯಿಂದ ಬಿಡಿಸಿಕೊಂಡ ಬಂದ ಈ ಮಗುವನ್ನು ಮಠದ ಕಾಲಿನಿಂದ ಹೊರದೂಡಬ್ಯಾಡ್ರಿ. ನಾನು ಇವನನ್ನ ತಿದ್ದತೀನಿ. ಶಿವಸಂಸ್ಕೃತಿಯ ವ್ಯಕ್ತಿಯಾಗಿ ಬೆಳಸತೀನಿ. (ಎನ್ನುತ್ತ ಈಶಾನ್ಯಗುರು ಅಪ್ಪಿಕೊಂಡು ಹೊರಗೆ ಹೋಗುತ್ತಾನೆ. ಪಶುಪತಿ ಶಿವಾಚಾರ್ಯ ಸಿಟ್ಟಿನಿಂದ ಬುಸುಗುಡುತ್ತ ಒಳಗೆ ಹೋಗುತ್ತಾನೆ. ಎಲ್ಲರೂ ಹಿಂಬಾಲಿಸುತ್ತಾರೆ).

❖❖

ದೃಶ್ಯ - ೧೩

(ಬಸವಣ್ಣನ ಕೋಣೆ, ಹತ್ತಿರ ಬಂದ ನಂದಿಕೇಶ ಹೊರಗೆ ನಿಂತು ಅವನನ್ನು ಕರೆಯುತ್ತಾನೆ).

ನಂದಿಕೇಶ : ಬಸವಾ, ಓದಲು ಮಠಕ್ಕ ಹೋಗೂ ಹೊತ್ತಾಯ್ತು.

ಬಸವಣ್ಣ : (ಹೊರಗೆ ಬಂದು) ನಾನು ಇನ್ನ ಮ್ಯಾಲ ಮಠಕ್ಕ, ದೇವಾಲಯಕ್ಕ ಬರೂದಿಲ್ಲ.

ನಂದಿಕೇಶ : ಬಸವಾ, ನಿನ್ನೆ ಮಠ ನಿನ್ನನ್ನು ದಂಡಿಸಿದ ಘಟನೆ ತುಂಬ ಕ್ರೂರವಾದುದು. ಹೋಗಲಿ, ನಿನಗೆ ದೇವಾಲಯ, ಮಠ ಅಂದರ ಇಷ್ಟ್ಯಾಕ ಬೇಸರ ?

ಬಸವಣ್ಣ : ಅಗ್ರಹಾರ ಸಂಸ್ಕೃತಿಗಿ ಬ್ಯಾಸತ್ತು ಈ ನಾಥಕೇಂದ್ರ ಕಪ್ಪಡಿ ಸಂಗಮಕ ಬಂದರ, ಕಂದಾಚಾರದಿಂದ ದುರ್ಬಲವಾಗಿ ಇದು ಇತ್ತೀಚೆ ಶೈವಾಚಾರ್ಯರ ವಶವಾಗಿ ಬಿಟ್ತು. ಇಲ್ಲಿ ಧರ್ಮ ಅಂದರ ದೇವಾಲಯ, ದೇವಾಲಯ ಅಂದರ ಧರ್ಮ ಅಂತ ಬೋಧಿಸಲಾಗ್ತದ.

ನಂದಿಕೇಶ : ಬೋಧಿಸಿದರೇನಾಯ್ತು? ದೇವಾಲಯ ಬಿಟ್ರ ಧರ್ಮ ಅನ್ನೂದು ಬ್ಯಾರೆ ಏನದ? ನಮ್ಮನ್ನ ಉದ್ಧಾರ ಮಾಡೂ ಕೇಂದ್ರಗಳಿವು.

ಬಸವಣ್ಣ : ಅಲ್ಲ, ಈ ಶ್ರೀಮಂತ ದೇವಾಲಯಗಳೂ ಆಚರಣೆಗಳೂ ನಮ್ಮನ್ನ ಉದ್ಧರಿಸಲಾರವು. ಇಲ್ಲಿ ದಾನ-ದಕ್ಷಿಣೆಯ ಮೂಲಕ ಮೇಲು ವರ್ಣದವರನ್ನು ಮೇಲು ವರ್ಗದವರು ಪೋಷಿಸೂದು ನಿರಂತರ ನಡದದ. ಬಡವರು ಶ್ರೀಮಂತರಲ್ಲಿ ಸಾಲಮಾಡಿ, ಭಕ್ತಿ ಸಲ್ಲಿಸುವ ಸ್ಥಿತಿ ನಿರ್ಮಾಣ ಆಗ್ಯಾದ.

ನಂದಿಕೇಶ : ಹೌದು, ಜಗದ್ಗುರುಗಳಿಗಿ ಕಾಣಿಕೆ ಅಂತ ಮಾಡಿಸಿಕೊಟ್ಟ ಪಲ್ಲಕ್ಕಿಯ ಸಾಲದಾಗs ಕುಂಬಾರ ಚಿಕ್ಕಣ್ಣ ಇನ್ನೂ ಬಳಲ್ತಿದಾನ.

ಬಸವಣ್ಣ : ಇದು ಹೋಗಲಿ, ಹೆಚ್ಚಿನದಾಗಿ ರಂಗಭೋಗದ ದೇವದಾಸಿ ಪದ್ಧತಿ, ಅಭಿಷೇಕ, ಅಡ್ಡಪಲ್ಲಕ್ಕಿ, ಪೂಜಾವಸ್ತುಗಳ ಖರೀದಿ ಇತ್ಯಾದಿ ಆಡಂಬರದ ಚಟುವಟಿಕೆಗಳು ದೇವಾಲಯಕ ಸುತಗೊಂಡಾವ. ಈ ಚಟುವಟಿಕೆಗಳನ್ನಲ್ಲ, ದೇವಾಲಯವನ್ನೇ ನಿರಾಕರಿಸಿದರ, ಇವೆಲ್ಲ ಆಡಂಬರ ತಾವಾಗೇ ನಾಶಾಗಿ ಹೋಗತಾವ.

ನಂದಿಕೇಶ : ಹಾಗಾದರ ಹಳ್ಳಿಪಳ್ಳಿಯ ಗ್ರಾಮೀಣರ ನಿರಾಡಂಬರ ಗುಡಿಗಳು ?

ಬಸವಣ್ಣ : ಅವೂ ನಮ್ಮನ್ನು ಉದ್ಧರಿಸಲಾರವು. ಗಡಿಗಿ -ಮಡಿಕಿ, ಬೀದಿಯ ಕಲ್ಲ, ಮರ-ಗಿಡ ಮೊದಲಾದವು ಇಲ್ಲಿ ದೇವರಾಗಿ ಮೆರಿತಾವ. ಮೈಲಾರನ ಪೂಜಿಸಿ ನಾಯಾಗಿ ಬೊಗಳೂದು, ಭೈರವನನ್ನಾರಾಧಿಸಿ ಬತ್ತಲೆ ತಿರುಗೂದು, ಕೆಂಡ ತುಳಿಯೂದು, ಸಿಡಿ ಆಡೂದು, ಬಸುರಿ, ಬಾಣಂತಿ, ಕೊಡಗೂಸ ಬಲಿಕೊಡೂದು ಇತ್ಯಾದಿ ಕ್ರೂರ ಆಚರಣೆ ಇಲ್ಲಿ ಬೆಳೆದು ಬಂದಾವ. ಈ ಗುಡಿಗಳನ್ನ ನಿರಾಕರಿಸಿದರ ಅವುಗಳ ಸುತ್ತ ಬೆಳೆದಿರೂ ಈ ಎಲ್ಲ ವಾಮಾಚಾರ ತಾವಾಗೇ ನಾಶ ಆಗ್ತಾವ.

ನಂದಿಕೇಶ : ನಿಜ, ನಿಜ. ಈ ದೇವಾಲಯ - ಈ ಗುಡಿ ನಿರಾಕರಿಸಿದರ, ಇವುಗಳ ಸುತ್ತ ಹಬ್ಬಿಕೊಂಡಿರೂ ಆಡಂಬರಭಕ್ತಿ, ಮೂಢಭಕ್ತಿಗಳ ಕಸ ದೂರಾಗಿ ಧರ್ಮಕ್ಷೇತ್ರ ಬಹುಮಟ್ಟಿಗಿ ಹಸನಾಗ್ತದ.

ಬಸವಣ್ಣ : ಅಷ್ಟೇ ಅಲ್ಲ, ದೇವಾಲಯ ಸಾಲದೆಂಬಂತೆ, ಮಠಗಳೂ ಶೋಷಣೆಯ ದೊಡ್ಡ ಕೇಂದ್ರ ಆಗ್ಯಾವ.

ನಂದಿಕೇಶ : ಹೌದು, ಮಠಗಳಲ್ಲಿ ಸಿದ್ಧಾಂತ ಇಲ್ಲ. ಆಡಂಬರ ಅದ, ಶ್ರೀಮಂತಿಕಿ ಅದ. ಪೀಠಾಧಿಪತಿಗಳಲ್ಲಿ ಹಣ ಅದ. ಅವರ ಮುಖಂಡತ್ವಕ್ಕ ತಾಳ ಹಾಕೂ ಭಕ್ತರು ಅದಾರ.

ಬಸವಣ್ಣ : ಇಂಥ ಭಕ್ತರ ಬಲದಿಂದಲೇ ಚೌರಂಗಿನಾಥ ಶೈವರ ಈ ಸಾರಂಗಮಠವನ್ನು ಕಳೆದ ವರ್ಷ ನಮ್ಮ ಕಣ್ಣುಮುಂದೆಯೇ ಶಿವಾಚಾರ್ಯರು ಕಸಗೊಂಡರು.

ನಂದಿಕೇಶ : ಸ್ವಾಮಿಗಳ ಮುಖಂಡತ್ವದಲ್ಲಿ ಇದೆಲ್ಲ ನಡೀತು.

ಬಸವಣ್ಣ : ಹೌದು, ದುಷ್ಟರ ಸಮಾಜದಾಗ ಅತಿ ದುಷ್ಟನೇ ಮುಖಂಡ ಎನ್ನೂ ಹಾಂಗಾದ, ಇಲ್ಲಿಯ ಪರಿಸ್ಥಿತಿ. ಕೈಯಾಗ ನಾಲ್ಕು ದುಡ್ಡು, ನಾಲ್ಕು ಜನ ದುಷ್ಟರು ಇದ್ದರ ಧರ್ಮದ ಹೆಸರಿನ್ಯಾಗ ಬೇಕಾದ್ದನ್ನ ಮಾಡಬಹುದಂತ ಭಾವಿಸ್ಯಾರ. ಆದರ ಈ ಹಣ, ಈ ಹಣಕ್ಕಾಗಿ ಸೇರಿರುವ ಈ ಸ್ವಾಮಿಗಳು, ಅವರ ಭಕ್ತರು, ಈ ಮಠಕ್ಕೆ ಮೃತ್ಯು ಆಗಿ ಪರಿಣಮಿಸೂ ಕಾಲ ದೂರ ಇಲ್ಲ.

ನಂದಿಕೇಶ : ನೀನು ಹೇಳೂದು ನಿಜ. ಈ ಮಠ, ಈ ಸ್ವಾಮಿ, ಇವರ ಸುತ್ತಲಿನ ಈ ಭಕ್ತವರ್ಗ- ಇದೆಲ್ಲ ನೋಡಿದರ ಹುತ್ತ ಸೇರಿಕೊಂಡ ಘಟಸರ್ಪ, ಅದರ ಪರಿವಾರಗಳ ನೆನಪಾಗ್ತದ.

ಬಸವಣ್ಣ : ದೇವಾಲಯದ ಅರ್ಚಕರು, ಮಠದ ಆಚಾರ್ಯರು ಸಾಲದೆಂಬಂತೆ ಪುರೋಹಿತರು ಹುಟ್ಟಿ ಮನೆಗಳನ್ನು ಹೊಕ್ಕು, ಅನೇಕ ಕೆಟ್ಟ ಆಚರಣೆಗಳನ್ನು ಅಲ್ಲಿಯೂ ಹುಟ್ಟುಹಾಕ್ಯಾರ. ಜನನ - ಮರಣ, ಮದುವಿ -ಮುಂಜಿವಿ ಇತ್ಯಾದಿ ಸಂದರ್ಭಗಳಲ್ಲಿಯ ಅರ್ಥವಿಲ್ಲದ ವಿಧಿ -ವಿಧಾನಗಳು ಜನತೆಯನ್ನು ದಿನವೂ ದಾರಿ ತಪ್ಪಿಸತಾವ. ಇವನ್ನ ತಗದಹಾಕಿದರ ಜನರ ಕಷ್ಟ ಅರ್ಧದಷ್ಟು ಕಡಿಮಿ ಆಗ್ತದ. ಹೀಗಾಗಿ ಬ್ರಾಹ್ಮಣರ ಅಗ್ರಹಾರ ಬಹಿಷ್ಕರಿಸಿ ಬಂದ ನಾನು, ಶೈವ ಆಚಾರ್ಯರ ದೇವಾಲಯಗಳನ್ನೂ ಕಂದಾಚಾರಗಳನ್ನೂ ನಿರಾಕರಿಸಬೇಕಾಗ್ಯಾದ.

ಈಶಾನ್ಯಗುರು : (ಪ್ರವೇಶಿಸಿ) ಏನು, ದೇವಾಲಯ ನಿರಾಕರಿಸಬೇಕ ?

ಬಸವಣ್ಣ : ಹೌದು, ಗುರುಗಳೇ, ದೇವರ ದುರುಪಯೋಗದ ಕೇಂದ್ರವಾಗಿರುವ ದೇವಾಲಯ ನಿರಾಕರಿಸಬೇಕು. ನಮ್ಮ ಕಾಲ ಕಂಬ ಆಗಬೇಕು; ಶಿರ ಸುವರ್ಣದ ಕಳಸ ಆಗಬೇಕು; ದೇಹ ದೇವಾಲಯ ಆಗಬೇಕು. ವ್ಯಕ್ತಿತ್ವ ಸ್ಥಾವರದಿಂದ ಜಂಗಮಕ್ಕ ಪರಿವರ್ತನೆಗೊಳ್ಳಬೇಕು.

ಈಶಾನ್ಯಗುರು : (ನೆಮ್ಮದಿಯಿಂದ) ಬಸವಣ್ಣಾ, ನೀನು ಎಲ್ಲರ ಹಾಗೆ ಯುಗದ ಮಗುವಾಗಿ ಹುಟ್ಟದಿ. ಆದರ ಯುಗದ ತಂದೆಯಾಗಿ ಬೆಳೀತಾ ಇರುವಿ. ನಿನ್ನ ವಿಚಾರ ಆಚಾರಕ್ಕಿಳಿದರ ಈ ಯುಗ ಸ್ಥಾವರದಿಂದ ಜಂಗಮಕ್ಕ ಖಂಡಿತ ಹೊರಳ್ತದ. ಖಂಡಿತ ಹೊರಳ್ತದ.

❖❖

ದೃಶ್ಯ - ೧೪

(ಪಶುಪತಿಶಿವಾಚಾರ್ಯ, ಮಾರ್ಜಾಲಪ್ಪ, ಸದ್ಯೋಜಾತ ರಹಸ್ಯ ಮಾತುಕತೆ ನಡೆಸಿದ್ದಾರೆ).

ಪಶುಪತಿ : ಮೊನ್ನಿನ ಘಟನೆಯ ಬಳಿಕ ಕೋಣೆಯಲ್ಲಿದ್ದೂ ಬಸವಣ್ಣ ಓದಲು ಮಠಕ್ಕ ಬರುತ್ತಿಲ್ಲ. ಸಂಗಮನಾಥ ದೇವಾಲಯಕ್ಕಂತೂ ಬರುತ್ತಲೇ ಇಲ್ಲ ಅಂತ ಕೇಳಿವಿ. ಅವನು ತೋರುತ್ತಿರುವ ಈ ಅಸಡ್ಡೆಯಿಂದಾಗಿ ಇಲ್ಲಿಯ ವಾತಾವರಣ ಮೌನಪ್ರತಿಭಟನೆಯಾಗಿ ರೂಪಗೊಳ್ಳತಾ ಇದೆ. ಇದರಿಂದ ನಮ್ಮ ವ್ಯವಸ್ಥೆಯ ದೋಷಗಳು ಎಲ್ಲ ವಿದ್ಯಾರ್ಥಿಗಳಿಗೂ ಕ್ರಮೇಣ ಗೊತ್ತಾಗತೊಡಗ್ಯಾವ.

ಮಾರ್ಜಾಲಪ್ಪ : ವಿದ್ಯಾರ್ಥಿಗಳಷ್ಟೇ ಅಲ್ಲ, ನಮ್ಮ ಬಗ್ಗೆ ಸಾರ್ವಜನಿಕರಲ್ಲೂ ಗುಜುಗುಜು ಕೇಳಿಬರತಾ ಇದೆ.

ಸದ್ಯೋಜಾತ : ಮೊನ್ನೆ ನೀವು ಬೆತ್ತದಿಂದ ಥಳಿಸಿದ ಬಳಿಕಂತೂ ನಮ್ಮದೇ ತಪ್ಪು ಅಂತ ಆರೋಪ ನಾವು ಹೊರೂ ಪರಿಸ್ಥಿತಿ ನಿರ್ಮಾಣ ಆಗ್ಯಾದ.

ಮಾರ್ಜಾಲಪ್ಪ : ಹೌದು ಗುರುಗಳೇ, ಈಗ ತಪ್ಪ ಅವನ ಮ್ಯಾಲೇ ಹೊರಿಸಿ, ಅವನನ್ನು ಆದಷ್ಟು ಬೇಗ ಮಠದಿಂದ ಹೊರಗ ಹಾಕಬೇಕು. ಇಲ್ಲದಿದ್ದರ ಇನ್ನೂ ತೊಂದರೆ.

ಪಶುಪತಿ : ಹೌದು, ಅವನದೇ ತಪ್ಪು ಅಂತ ಬರೆಸಿಕೊಂಡು ಹೊರಗ ಹಾಕೋಣ. ಕೋಣೆಯಿಂದ ಅವನನ್ನು ಕರೆತನ್ನಿ.

ಮಾರ್ಜಾಲಪ್ಪ : ಆಗಲಿ ಪ್ರಭು. (ಹೋಗುತ್ತಾನೆ).

ಸದ್ಯೋಜಾತ : ಪ್ರಭೂ, ಒಬ್ಬ ಸಣ್ಣ ಹುಡುಗ ಎಂಥ ದೊಡ್ಡ ಸಮಸ್ಯೆ ನಿರ್ಮಿಸಿದನಲ್ಲ!

ಪಶುಪತಿ : ಹಾಗೇನಲ್ಲ, ನನ್ನ ದೃಷ್ಟ್ಯಾಗ ಈ ಸಮಸ್ಯೆ ಈಗಲೂ ಸಣ್ಣದೇ. ದೊಡ್ಡದಾಗಲಿಕ್ಕ ಬಿಡಬಾರದು. (ಅಷ್ಟರಲ್ಲಿ ಮಾರ್ಜಾಲಪ್ಪ ತಿರುಗಿ ಬರುತ್ತಾನೆ).

ಮಾರ್ಜಾಲಪ್ಪ : ಪ್ರಭೂ, ಬಸವಣ್ಣ ಬರಲು ನಿರಾಕರಿಸಿದ. "ನನ್ನ ದೃಷ್ಟೀಲಿ ಅದು ಮಠ ಅಲ್ಲ. ಅವರು ಮಠಾಧಿಪತಿ ಇಲ್ಲ. ಅಲ್ಲಿಗೆ ನಾನು ಬರೂದಿಲ್ಲ" ಅನ್ನತಾ ಇದ್ದಾನ.

ಪಶುಪತಿ : ಜಗತ್ತೇ ಒಪ್ಪಿಕೊಂಡಿರೂ ನನ್ನ ಜಗುದ್ಗುರುತ್ವ ಇವ ನಿರಾಕರಿಸ್ತಾನ ? ಎಳಕೊಂಡು ಬರ್ರಿ. (ಕೆಲವು ವಟುಗಳೊಂದಿಗೆ ಮಾರ್ಜಾಲಪ್ಪ ಹೋಗುತ್ತಾನೆ). ಚೋಟುದ್ದ ಹುಡುಗನ ಬಾಯಾಗ ಗೇಣುದ್ದ ನಾಲಗಿ.

ಸದ್ಯೋಜಾತ : ಪ್ರಭೂ, ಬಸವಣ್ಣ ವಾದದಾಗ ತುಂಬ ಗಟ್ಟಿಗ. ಈ ಹುಡುಗನೊಂದಿಗೆ ವಾದ ಬೆಳೆಸಬ್ಯಾಡ್ರಿ, ಕೆಸರಿನ್ಯಾಗ ಕಲ್ಲ ಎಸಿಬ್ಯಾಡ್ರಿ.

ಪಶುಪತಿ : ಕೆಸರ ಒಣಗಿಸಿ ಮಣ್ಣು ಮಾಡೂದು ನನಗೆ ಗೊತ್ತು. ಅವನ ರುಜು ಹಾಕಿಸಿಕೊಳ್ಳೋಣ, ಪತ್ರ ಸಿದ್ಧಮಾಡ್ರಿ. (ಸದ್ಯೋಜಾತ ಪತ್ರ ಸಿದ್ಧಮಾಡುತ್ತಾನೆ. ಅಷ್ಟರಲ್ಲಿ ಮಾರ್ಜಾಲಪ್ಪ ಕೆಲವು ವಟುಗಳೊಂದಿಗೆ ಬಸವಣ್ಣನನ್ನು ಒತ್ತಾಯದಿಂದ ಎಳೆದುಕೊಂಡು ಬರುತ್ತಾನೆ).

ಪಶುಪತಿ : ಬಸವಣ್ಣಾ, ನಿನ್ನಿಂದ ಇಲ್ಲಿಯ ಪವಿತ್ರ ವಾತಾವರಣ ಹಾಳಾಗ್ತಾ ಇದೆ.

ಬಸವಣ್ಣ : ಹಾಳಾಗ್ತಿರೂದು ನನ್ನಿಂದ ಅಲ್ಲ; ನಿಮ್ಮಿಂದ. ಅದಕ್ಕ ನಾನೂ ಭಾಗಿಯಾಗಧಾಂಗ ದೂರ ಉಳಿದೀನಿ, ಅಷ್ಟೇ.

ಪಶುಪತಿ : ಹಾಂಗ ದೂರ ಉಳಿಯೂದರಿಂದ ನೀನು ನಮ್ಮ ವ್ಯವಸ್ಥೆ ಬಹಿಷ್ಕರಿಸಿದಂತಾಗ್ತದ. ನಾವು ಅಪರಾಧಿ ಅಂತ ಅಪ್ರತ್ಯಕ್ಷವಾಗಿ ಸೂಚಿಸಿದ ಹಾಂಗಾಗ್ತದ. ನೀನೇ ಅಪರಾಧಿ ಅಂತ ನಮ್ಮ ಅಭಿಪ್ರಾಯ. ಅದನ್ನು ಬರೆದೀವಿ. ರುಜುಹಾಕಿ ಮಠ ಬಿಟ್ಟು ಹೋಗು.

ಬಸವಣ್ಣ : ನಾನು ಅಪರಾಧಿಯಲ್ಲ, ಯಾಕ ರುಜು ಹಾಕಬೇಕು ?

ಪಶುಪತಿ : ನಾವು ಅಪರಾಧಿಯಲ್ಲ ಅಂತ ಜನರಿಗಿ ತೋರಿಸಿಕೊಳ್ಳಲಾಕ.

ಬಸವಣ್ಣ : ನಿಮ್ಮ ರಕ್ಷಣೆಗಾಗಿ ನಾನು ರುಜು ಹಾಕಲಾರೆ.

ವಟುಗಳು : ಗುರುಗಳ ಮಾತ ಮೀರಿದರ ಕೈಕಾಲು ಕಟ್ಟಿ ರುಜು ಹಾಕಿಸಿಕೊಳ್ತೀವಿ,

ಬಸವಣ್ಣ : ಕೈಕಾಲು ಕಟ್ಟಿ ಯಾಕ ? ಕತ್ತರಿಸಿದರೂ ನಾನು ರುಜು ಹಾಕೂದಿಲ್ಲ.

ಪಶುಪತಿ : ಧರ್ಮಾಧಿಕಾರಿ ಎದುರ ಇಷ್ಟು ಉದ್ಧಟತನವೇ ?

ಬಸವಣ್ಣ : ನಿಮ್ಮನ್ನ ಧರ್ಮಾಧಿಕಾರಿ ಅಂತ ನಾನು ಒಪ್ಪಿದ್ದರಲ್ಲವೇ ?

ಪಶುಪತಿ : ಏನು ? (ಎದ್ದು ಬಂದು ಬೆತ್ತದಿಂದ ಮನಸೋಕ್ತ ಥಳಿಸುತ್ತಾನೆ. ವಟುಗಳೂ ಏಟು ಹಾಕುತ್ತಾರೆ.) ಹೂಂ. ರುಜು ಹಾಕಿಸಿಕೊಳ್ಳಿರಿ, ಹಾಕಿಸಿಕೊಳ್ಳಿರಿ. (ಒತ್ತಾಯದಿಂದ ಕೈ ಹಿಡಿಯುತ್ತಾರೆ. ಬಸವಣ್ಣ ಕೈ ಹಿಂದಕ್ಕೆ ತೆಗೆದುಕೊಳ್ಳುವಷ್ಟರಲ್ಲಿ ಪಶುಪತಿ ಶಿವಾಚಾರ್ಯ ಬಸವಣ್ಣನ ತೋಳಿನ ಮೇಲೆ ಪಾದ ಇಡುತ್ತಾನೆ. ಮಾರ್ಜಾಲಪ್ಪ ಸಹಿ ಹಾಕಿದ ಪತ್ರ ತೆಗೆದುಕೊಳ್ಳುತ್ತಾನೆ). ಕೋಣೆಗೆ ಹೊತಗೊಂಡು ಹೋಗ್ರಿ. ಆಗಷ್ಟು ಬೇಗ ಈ ಊರು ಬಿಡಿಸ್ರಿ.(ಅಯ್ಯೋ, ಅಯ್ಯೋ ಎಂದು ನರಳುವ, ರಕ್ತ ಸೋರುವ ಬಸವಣ್ಣನನ್ನು ಎತ್ತಿಕೊಂಡು ಹೋಗುತ್ತಾರೆ).

ಮಾರ್ಜಾಲಪ್ಪ : ಗುರುಗಳೇ, ಒಳ್ಳೆಯ ಕೆಲಸ ಮಾಡಿದ್ರಿ. ವ್ಯವಸ್ಥೆ ಹಾಳು ಮಾಡುವವರಿಗೆ ಇಂಥ ಶಿಕ್ಷೆ ಅವಶ್ಯ. ಇವನ ಮಾತಿಗೆ ಮರುಳಾಗುತ್ತಿದ್ದ ವಿದ್ಯಾರ್ಥಿಗಳಿಗೂ ಇದು ಎಚ್ಚರಿಕೆ. ಮಠ ಅಂದರ ಏನ ತಿಳದಾನ?

ಸದ್ಯೋಜಾತ : ಮೊದಮೊದಲು ದೇವಾಲಯವೇ ಬೇಡ ಅಂತಿದ್ದ ಬಸವಣ್ಣ ಈಗ ಮಠಗಳೂ ಯಾಕಬೇಕು? ಅನ್ನಾಕ ಸುರು ಮಾಡ್ಯಾನ. ಮಠಗಳ ಹೊಣೆ ಪ್ರತಿಯೊಂದು ಮನೆ ಹೊರಬೇಕು. ಮನೆಗಳೇ ಮಠಗಳಾಗಬೇಕು ಅನ್ನೂ ವಾದ ಹುಟ್ಟಹಾಕ್ಯಾನ.

ಪಶುಪತಿ : ಈ ಯಾವ ವಿಚಾರನೂ ಇಲ್ಲಿ ಬೆಳೆಯಬಾರದು. ಮಾರ್ಜಾಲಪ್ಪ ಈ ಕಡಿ ಗಮನ ಕೊಡ್ರಿ (ಎನ್ನುತ್ತ ಎದ್ದು ಹೊರಡುತ್ತಾನೆ. ಮಿಕ್ಕವರೂ ಹಿಂಬಾಲಿಸುತ್ತಾರೆ).

ಮಾರ್ಜಾಲಪ್ಪ : ಆಗಲಿ ಗುರುಗಳೇ (ಎನ್ನುತ್ತ ಇವನೂ ಹಿಂಬಾಲಿಸುತ್ತಾನೆ).

❖❖

ದೃಶ್ಯ - ೧೫

(ಸಾಯಂಕಾಲ. ಬಸವಣ್ಣನ ಕೋಣೆ. ಅಲ್ಲಲ್ಲಿ ಗಾಯಗಳು. ತಲೆಗೆ, ಹಸ್ತಕ್ಕೆ ಪಟ್ಟಿ ಕಟ್ಟಿದ್ದಾರೆ. ನಾಗಲಾಂಬೆ ಕೈತುತ್ತು ಮಾಡಿ ಉಣಿಸುತ್ತಲಿದ್ದಾಳೆ. ದುಃಖ ಒತ್ತರಿಸಿ ಬಂದು ತುಟಿಕಚ್ಚಿ, ತುಟಿಕಚ್ಚಿ ಅಳುತ್ತಾಳೆ).

ಬಸವಣ್ಣ : ತಂಗೀ ಅಳಬ್ಯಾಡ, ನನಗೆ ಏನೂ ಆಗೂದಿಲ್ಲ. ಗುಣವಾಗ್ತಿದೆಯಲ್ಲ.

ನಾಗಲಾಂಬೆ : (ದುಃಖಿಸುತ್ತ) ಅವ್ವನ ನೆನಪಾಯ್ತು. ಅವಳಿದ್ರ ನಿನ್ನನ್ನು ಸರಿಯಾಗಿ ನೋಡಿಕೊಳ್ತಿದ್ದಳು.

ಬಸವಣ್ಣ : ಈಗ ಉಣಿಸುತ್ತಿರುವ ನೀನು ಯಾರು ? ಅವ್ವ ಅಲ್ಲದೇ ಮತ್ತಾರು ?

ನಾಗಲಾಂಬೆ : (ಇನ್ನೂ ದುಃಖಿಸುತ್ತ) ತಾಯಿಯಿಲ್ಲದ ಮಕ್ಕಳಿಗಿ ಸಮಾಜವೇ ತಂದೆ-ತಾಯಿಯಾಗಬೇಕು. ಆದರ ಈ ಸಮಾಜ ನಿನಗ, ಹರಿಯೂ ನೀರಿಗಿ ದಾರಿ ಬಿಡುತಿಲ್ಲವಲ್ಲ.

ಬಸವಣ್ಣ : ನಾಗಲಾ, ನನ್ನ ದಾರಿ ನನಗ ಸ್ಪಷ್ಟ ಆಗಿರೂದರಿಂದ ಈ ಮಠದ ಭಯೋತ್ಪಾದಕರ ಅಂಜಿಕೆಯೇ ನನಗಿಲ್ಲ.

ನಾಗಲಾಂಬೆ : ನನಗ ಮಾತ್ರ ಈ ವಾತಾವರಣದಿಂದ ಭಯವುಂಟಾಗ್ಯದ.

ಬಸವಣ್ಣ : (ಊಟ ಮುಗಿಸಿ, ನೀರು ಕುಡಿದು, ದಿಂಬಿಗೆ ಒರಗುತ್ತ) ಭಯ ಯಾಕಮ್ಮ, ಇವರು ನನ್ನನ್ನು ಕೊಲ್ಲಬಹುದು, ನನ್ನ ವಿಚಾರ ಕೊಲ್ಲಲಾರರು.

ಈಶಾನ್ಯ ಗುರು : (ಒಳಗೆ ಬರುತ್ತ) ಬಸವಾ, ಬಸವಣ್ಣಾ...

ನಾಗಲಾಂಬೆ : (ದೊಡ್ಡ ದನಿಯಿಂದ ಅಳುತ್ತ ಎದ್ದು, ಎದುರುಗೊಂಡು) ಊರಿಂದ ಯಾವಾಗ ಬಂದಿರಿ ? ಗುರುಗಳೇ, ಕಳೆದ ವಾರ ನೀವು ಇಲ್ಲದಾಗ ನಿಮ್ಮ ಬಸವಣ್ಣನ ಮ್ಯಾಲ ದೊಡ್ಡ ಹಲ್ಲೆ ನಡೀತು. ನನ್ನ ಅಣ್ಣಾನ್ನ ಉಳಿಸಿಕೊಡ್ರಿ. ತಂದೆ ತಾಯಿಗಳಿಲ್ಲದ ಪರದೇಶಿ ಮಕ್ಕಳು ನಾವು. ನನಗಾಗಿ ನನ್ನ ಅಣ್ಣನ ಉಳಿಸಿಕೊಡ್ರಿ. (ಕಾಲು ಹಿಡಿದು ಅಳುತ್ತಾಳೆ).

ಈಶಾನ್ಯ ಗುರು : (ಸಂತಯಿಸುತ್ತ) ನಿನಗಾಗಿ ಅಲ್ಲ ಮಗು, ಜಗತ್ತಿಗಾಗಿ ನಿನ್ನ ಅಣ್ಣ ಉಳೀಬೇಕಾಗ್ಯಾದ. (ಇಬ್ಬರೂ ಬಸವಣ್ಣನಲ್ಲಿಗೆ ಸಾಗಿ ಕುಳಿತುಕೊಳ್ಳುತ್ತಾರೆ).

ನಾಗಲಾಂಬೆ : ನೋಡಿ ಗುರುಗಳೇ, ಕರುಣೆಯ ಮೂರ್ತಿಯಾದ ನನ್ನ ಅಣ್ಣನ ಮ್ಯಾಲ ನಿಷ್ಕರುಣೆಯ ದಾಳಿ (ಒಂದೊಂದೇ ಗಾಯಗಳನ್ನು ತೋರಿಸುತ್ತಾಳೆ).

ಈಶಾನ್ಯ ಗುರು : (ಕಣ್ಣೀರು ಸುರಿಸುತ್ತ, ಬಸವಣ್ಣನ ಬೆನ್ನಮೇಲೆ ಕೈಯಾಡಿಸುತ್ತಾನೆ). ಅನ್ಯಾಯ, ಅನ್ಯಾಯ. ಇನ್ನೊಬ್ಬರ ಕಾಲಾಗ ಮುಳ್ಳು ನಟ್ಟರ ನಿನ್ನ ಕಣ್ಣಾಗ ನಟ್ಟಾಂಗ ಮರುಗsವ ನೀನು. ನಿನ್ನಂಥವನಿಗಿ ಈ ಗತಿಯೇ ?

ನಾಗಲಾಂಬೆ : ನಾನು ಇನ್ನೂ ಸಣ್ಣವಳು. ಅಣ್ಣನ ಈ ಪರಿಸ್ಥಿತಿ ನೋಡಿ ಒಮ್ಮೊಮ್ಮೆ ಅತ್ತುಬಿಡ್ತೀನಿ (ದುಃಖಿಸುತ್ತಾಳೆ).

ಈಶಾನ್ಯಗುರು : ನಾಗಲಾ, ಎಲ್ಲ ಸರಿ ಹೋಗ್ತದ. ದುಃಖಿಸಬ್ಯಾಡ ಮಗೂ. (ಬಸವಣ್ಣನನ್ನು ಕುರಿತು) ಬಸವಣ್ಣಾ, ನೀನು ಸತ್ಯವನ್ನೇ ಹೇಳಿದಿ. ಈ ಮಠ ನಿನ್ನನ್ನು ಹಿಂಸಿಸಿತು. ಹಿಂಸೆ ಹೇಡಿಗಳ ಕೆಲಸ. ಈಗ ನೋವು ಹ್ಯಾಂಗ ಅದ ?

ಬಸವಣ್ಣ : ಗುಣವಾಗ್ತಾ ಅದ. ಆದರ ನನಗೆ ಬಿದ್ದಲ್ಲಿಯೇ ಬಿದ್ದು ಬ್ಯಾಸರ ಆಗ್ಯಾದ.

ಈಶಾನ್ಯ ಗುರು : ಹಾಗಾದರ ನದಿ ಕಡೆ ಸ್ವಲ್ಪ ತಿರುಗಾಡಿ ಬರೋಣ ? (ಬಸವಣ್ಣ ತಲೆ ಅಲ್ಲಾಡಿಸಿ, ಏಳುತ್ತಾನೆ. ಇಬ್ಬರೂ ಹೋಗುತ್ತಾರೆ).

ನಾಗಲಾಂಬೆ : (ಸ್ವಗತ) ದೇವರೇ, ನನ್ನ ಅಣ್ಣ ಕತ್ತಲಾಗ ದೀಪ ಆಗ್ಯಾನ. ಆದರ ಗಾಳಿ ಸುರು ಆಗ್ಯಾದ. ಈ ಗಾಳಿ ದೊಡ್ಡದಾಗದಿರಲಿ. ಈ ದೀಪ ಆರದಿರಲಿ. ಶಿವಶಿವಾ (ಎನ್ನುತ್ತ ಹಾಸಿಗೆ ಸುತ್ತಿ ಒಳಗೆ ಒಯ್ಯುವಳು).

❖❖

ದೃಶ್ಯ - ೧೬

(ಬಸವಣ್ಣ ಕೋಲೂರುತ್ತ ಈಶಾನ್ಯಗುರುವಿನ ಜೊತೆ ನದಿತೀರದಲ್ಲಿ ನಡೆದಿದ್ದಾನೆ).

ಈಶಾನ್ಯಗುರು : ಬಸವಣ್ಣಾ, ನನ್ನ ದೃಷ್ಟ್ಯಾಗ ಉಳಿದ ವಿದ್ಯಾರ್ಥಿಗಳೇ ಬ್ಯಾರೆ, ನೀನೇ ಬ್ಯಾರೆ. ಯಾವುದೋ ವಿಶಿಷ್ಟ ಶಕ್ತಿ ನಿನ್ನಲ್ಲಿ ಅದ. ಅದು ಕ್ರಮೇಣ ಜಾಗೃತವಾಗೂದನ್ನೂ ನಾನು ಕಂಡುಕೊಂಡೀನಿ. ಅದಕ್ಕಾಗೇ ನಾನು ಇಷ್ಟು ವರ್ಷ ಗುರುಕುಲದ ಯಾವ ನಿರ್ಬಂಧವನ್ನೂ ನಿನಗ ಹಾಕಿಲ್ಲ. ಈಗ ನಿನಗ ಕಾಡೂ ಪ್ರಶ್ನೆಯಾದರೂ ಯಾವುದು?

ಬಸವಣ್ಣ : (ಶೂನ್ಯಮನಸ್ಕನಾಗಿ) ಗುರುಗಳೇ, ಅಗ್ರಹಾರ ಹೋಗಲಿ, ದೇವಾಲಯಗಳ ಹಾಂಗ ಈ ಮಠಗಳೂ ನನಗ ಬ್ಯಾಸರ ಹುಟ್ಟಿಸ್ಯಾವ. ನಮ್ಮ ಮಠವನ್ನೇ ನೋಡ್ರಿ. ಪೀಠಾಧಿಕಾರಿ ಪಶುಪತಿ ಜಗದ್ಗುರುಗಳ ಒಳ ಜಗತ್ತು ನಿಮಗೂ ಗೊತ್ತದ; ವಿದ್ಯಾರ್ಥಿಗಳಿಗೂ ಗೊತ್ತದ. ಮಠದಾಗ ಸಣ್ಣ ದೊಡ್ಡ ಪಾಪಗಳನ್ನೇ ಮಾಡ್ತ, ಅವುಗಳನ್ನು ಪರಸ್ಪರರು ಮುಚ್ಚಿಕೊಳ್ತ ಕಾಲ ನೂಕುತಾ ಇದ್ದಾರ.

ಈಶಾನ್ಯಗುರು : ಗೊತ್ತಿದೆ ಮಗು. ಏನು ಮಾಡೂದು ?

ಬಸವಣ್ಣ : ಮಠದಾಗ ಬಡ್ಡಿ ವ್ಯವಹಾರ ವಿಪರೀತ ಬೆಳೆದದ. ಒತ್ತಿಹಾಕಿದ ಬಡವರ ಹೊಲಗಳೆಲ್ಲ ಮಠದ ಪಾಲಾಗ್ಯಾವ. ಕತ್ತಲಾಯಿತು. ಈ ಮಠ ಕಳ್ಳವ್ಯಾಪಾರಕ್ಕಾಗಿ ಬಡ್ಡಿ ಹಣ ಒಯ್ಯುವವರ ಚಟುವಟಿಕೆಯ ಕೇಂದ್ರ ಆಗಿ ಬಿಡ್ತದ.

ಈಶಾನ್ಯಗುರು : ಬಳ್ಳಿಗಾವಿ ಕೇದಾರೇಶ್ವರ ಮಠದ ಬಡ್ಡಿವ್ಯವಹಾರದ ಕತಿ ಕೇಳಿಲ್ಲ?

ಬಸವಣ್ಣ : ಕೇಳೀನಿ, ಮಾಂಡಲೀಕರಾದ ಹಾನಗಲ್ಲ ಕದಂಬರ ಕಿರೀಟವನ್ನೇ ಕೇದಾರೇಶ್ವರ ಮಠ ಒತ್ತಿ ಇಟಗೊಂಡು ಸಾಲ ಕೊಟ್ಟಿದ್ದು, ಇಂದು ಗುಟ್ಟಿನ ವಿಷಯ ಆಗಿ ಉಳಿದಿಲ್ಲ.

ಈಶಾನ್ಯಗುರು : ಸಾಲ ತೀರಿಸಿದರೂ ಆ ಮಠದ ಸ್ವಾಮಿಗಳು ಕಿರೀಟ ಹಿಂದಿರುಗಿಸಲು ಹಿಂದುಮುಂದು ನೋಡಿದರಂತ. ಸಿಟ್ಟಿಗೆದ್ದ ಮಾಂಡಲೀಕರು ಆ ಜಗದ್ಗುರು ವಾಮಶಕ್ತಿದೇವನನ್ನು ಬಹಿರಂಗವಾಗಿಯೇ ಬಂಧಿಸಿದರಂತ.

ಬಸವಣ್ಣ : ಕೇಳೀನಿ, ಗುರುಗಳೇ. ಹೀಗೆ ಗಳಿಸಿದ ಪಾಪದ ಹಣವನ್ನು ಜಗದ್ಗುರುಗಳು ತಮ್ಮ ಕೀರ್ತಿ- ಪ್ರಸಿದ್ಧಿಗಿ ಬಳಸೂದು ಒಪ್ಪಿತ ವ್ಯವಸ್ಥೆ ಆಗಿಬಿಟ್ಟದ.

ಈಶಾನ್ಯಗುರು : ಹೌದು, ಸ್ವಾಮಿಗಳ ತುಲಾಭಾರ, ಷಷ್ಟಿಪೂರ್ತಿ, ವಾರ್ಷಿಕ ಗುರುವಂದನೆ, ಮೊದಲಾದ

ಸಮಾರಂಭಗಳಲ್ಲಿ ಹಣದ ಹೊಳೀನs ಹರಿತದ. ಮತ ಶ್ರೀಮಂತ ಆಗೂದಂದ್ರ ಮತ ಬಡವ ಆಗೂದೆಂದೇ ಅರ್ಥ.

ಬಸವಣ್ಣ : ಹಣ ಹೋಗಲಿ, ಶಿಗ್ಗಾವಿ, ಅಣ್ಣಿಗೇರಿ ಗ್ರಾಮಗಳ ಮಠಾಧೀಶರನ್ನು ಜನರು ಹಾಡಹಗಲೇ ಮಠದಿಂದ ಹೊರಹಾಕಿ, ಬ್ರಹ್ಮಚಾರಿಗಳೇ ಮಠದ ಸ್ವಾಮಿಯಾಗಬೇಕು ಅಂತ ಶಾಸನಗಳನ್ನೇ ಬರದು ನಿಲ್ಲಿಸಿದರು. ಬಹಳಷ್ಟು ಮಠ ಹೀಂಗ ಇರೂದು ನಿಮಗೂ ಗೊತ್ತದ.

ಈಶಾನ್ಯಗುರು : ಗೊತ್ತದ ಮಗು, ಏನು ಮಾಡೂದು? ಜಂಗಮಪೀಠದ ಮ್ಯಾಲ ಸ್ಥಾವರ ಜಗದ್ಗುರುಗಳು ಕುಳಿತಾರ. ನಾನು ಮಠದಲ್ಲಿ ಒಬ್ಬ ಅಧ್ಯಾಪಕ, ಅಸಹಾಯಕ.

ಬಸವಣ್ಣ : ಹೌದು, ಆದರ ಎಷ್ಟು ದಿನ ಇದನ್ನು ಸಹಿಸಿಕೊಳ್ಳೂದು ? ಎಲ್ಲ ಮಠಾಧೀಶರು ಅಂತಃಶಕ್ತಿ ಬೆಳೆಸಿಕೊಳ್ಳಬೇಕು. ಎಲ್ಲ ಮಠದಾಗ ಜಾತ್ಯತೀತ ಸಂಸ್ಕೃತಿ ತರಬೇಕು. ಆದರ ಪೀಠಾಧಿಕಾರಿಗಳ ಬಂಧು ಬಳಗದವರಂತೂ ಬಡಭಕ್ತರ ದಾನ-ದಕ್ಷಿಣೆ ಮೇಯುತ್ತ ಮಠಗಳಲ್ಲಿ ಬೇರ ಬಿಟ್ಟಾರ. ತಾವು ಮಾಡಲಿರುವ ಪಾಪದ ಕೆಲಸ ರಕ್ಷಿಸಲಿಕ್ಕ ಮಠಾಧೀಶರು ಸಣ್ಣಪುಟ್ಟ ಮಠಾಧಿಕಾರಿಗಳನ್ನು, ಗಾವುಂಡರನ್ನು, ವಿದ್ವಾಂಸರನ್ನು, ವರ್ತಕರನ್ನು ಭಕ್ತರೆಂದು ಸಾಕ್ಯಾರ.

ಈಶಾನ್ಯಗುರು : ಹೌದು, ಭಕ್ತರನ್ನಲ್ಲ, ಮಾರ್ಜಾಲ ಭಕ್ತರನ್ನು ಸಾಕ್ಯಾರ. ಸ್ವಾಮಿಗಳ ಬಂಧುಬಳಗಕ್ಕ-ಜಾತಿ ಬಾಂಧವರಿಗಿ ಬೆಣ್ಣಿ, ಈ ಮಾರ್ಜಾಲರಿಗೆ ಹಾಲ, ಬಡಭಕ್ತರಿಗಿ ಮಜ್ಜಿಗಿ. ಇದು ನಮ್ಮ ಮಠದ ವ್ಯವಸ್ಥೆ.

ಬಸವಣ್ಣ : ಹೋಗಲಿ, ಪಶುಪತಿಸ್ವಾಮಿಗಳು ಕಳೆದ ತಿಂಗಳ ತಮ್ಮ ಉತ್ತರಾಧಿಕಾರಿಯಾಗಿ ತಂಗಿಯ ಮಗ ಸದ್ಯೋಜಾತನನ್ನೇ ಪಟ್ಟಗಟ್ಟಿದರು.

ಈಶಾನ್ಯಗುರು : ಹೌದು, ಅವನೋ ಹೆಸರಿಗೆ ತಕ್ಕಂತೆ ನಿನ್ನೆ ಹುಟ್ಟಿದ ಸದ್ಯೋಜಾತ, ಇಂದು ಸ್ಥಾನಾಚಾರ್ಯನಾದ.

ಬಸವಣ್ಣ : ಇದೇ ಮುಂದುವರಿದರ, ಸಾರ್ವಜನಿಕ ಆಸ್ತಿ ಆಗಿರುವ ಮಠಗಳು ಈಗಾಗಲೇ ಒಂದೇ ಜಾತಿಯವರ ಆಸ್ತಿ ಆಗಿದ್ದು, ಇನ್ನು ಮುಂದೆ ಒಂದೇ ಮನೆತನದವರ ಸ್ವಂತ ಆಸ್ತಿಯಾಗೂ ಭಯ ಅದ.

ಈಶಾನ್ಯಗುರು : ಹೌದು ಬಸವಣ್ಣಾ. ಇತ್ತೀಚೆ ಶಿಷ್ಯವರ್ಗದ ಮಠಸಂಪ್ರದಾಯದ ಜೊತೆಗೆ ಪುತ್ರವರ್ಗದ ಮಠಸಂಪ್ರದಾಯ ಅಂಕುರಿಸುತ್ತಿದೆ.

ಬಸವಣ್ಣ : ಮಠಗಳನ್ನಷ್ಟೇ ಅಲ್ಲ. ಈ ಮಠಗಳು ರೂಪಿಸಿರುವ ಸಾಮಾಜಿಕ ತಾರತಮ್ಯವನ್ನೂ ತಪ್ಪಿಸಬೇಕಾಗ್ಯಾದ. ಇದು ಅಪಾಯದ ರೀತಿಯಲ್ಲಿ ಬೆಳೀತಾ ಇದೆ. ಇದನ್ನೂ ಶುದ್ಧೀಕರಿಸಬೇಕು.

ಈಶಾನ್ಯಗುರು : ಹೌದು, ನೀನು ಹೇಳೂ ಹಾಂಗ ಈ ಸಮಾಜ ಶುದ್ಧೀಕರಿಸೂದು ಇಂದು ಅಗತ್ಯ ನಡೆಯಬೇಕಾಗ್ಯಾದ. ಅದು ನಿನ್ನಂಥವನಿಂದ ಮಾತ್ರ ಸಾಧ್ಯ. ನಿನ್ನದು ನಮ್ಮೆಲ್ಲರಂತೆ

ಗುರುವಿನ ಮೂಲಕ ಜ್ಞಾನಿಯಾದ ಜೀವವಲ್ಲ. ನಿನಗೆ ಯಾವ ಗುರುವೂ ಇಲ್ಲ. ಬುದ್ಧನಂತೆ ಸ್ವಯಂಜ್ಞಾನಿ ನೀನು. ನಿನ್ನ ಅರಿವೇ ನಿನಗೆ ಗುರು. ಆ ಅರಿವು ವ್ಯಕ್ತಿಯ ಉದ್ಧಾರಕ್ಕಷ್ಟೇ ಅಲ್ಲ, ಸಮಾಜದ ಉದ್ಧಾರಕ್ಕೂ ಉಪಯೋಗವಾಗಬೇಕಂತ ಇತ್ತೀಚೆ ನೀನು ಹಂಬಲಿಸುತ್ತಿರುವಿ. ಅದನ್ನು ನಾನು ಗಮನಿಸೀನಿ.

ಬಸವಣ್ಣ : ಹೌದು, ಗುರುಗಳೇ, ಆತ್ಮಜ್ಞಾನದ ಸಾಮಾಜಿಕರಣವೇ ಅನುಭಾವ. ಪ್ರತಿಯೊಬ್ಬರೂ ಇಂಥ ಅನುಭಾವಿ ಆಗಬೇಕು. ಮನುಷ್ಯ ದೇವರಾಗುವುದು ಮುಖ್ಯವಲ್ಲ. ಮುಂದುವರಿದ ಸಮಾಜವಾಗುವುದು ಮುಖ್ಯ. ಈ ವರೆಗೆ ನನಗೆ ಆತ್ಮಶುದ್ಧಿ ಮುಖ್ಯ ಅನಿಸಿತ್ತು. ಈಗ ಸಮಾಜಶುದ್ಧಿಯೂ ಅಷ್ಟೇ ಮುಖ್ಯ ಅನಸ್ತಾದ. ವ್ಯಕ್ತಿ ಸುಧಾರಿಸದೆ ಸಮಾಜ ಸುಧಾರಿಸೂದಿಲ್ಲ ಅನ್ನೂದು ಎಷ್ಟು ಸತ್ಯವೋ, ಸಮಾಜ ಸುಧಾರಿಸದೆ ವ್ಯಕ್ತಿಯೂ ಸುಧಾರಿಸೂದಿಲ್ಲ ಅನ್ನೂದು ಅಷ್ಟೇ ಸತ್ಯ. ಹೀಗಾಗಿ ಇಂದಿನ ಈ ಸಮಾಜವ್ಯವಸ್ಥೆ ಮುರಿದು ಕಟ್ಟೂ ವರೆಗೆ ದುಃಖ, ನೋವುಗಳಿಂದ ಜನರಿಗೆ ಬಿಡುಗಡೆ ಇಲ್ಲ.

ಈಶಾನ್ಯಗುರು : ಆದರ ಸಮಾಜದ ಕ್ರೂರ ವ್ಯವಸ್ಥೆ ಬದಲಿಸಲು ಕೈಹಾಕಿದರ, ಅಪಾಯಪರಂಪರೆಗಳೇ ಎದುರಾಗ್ತಾವ. ಆದುದರಿಂದಲೇ ವೈದಿಕ ತತ್ವಜ್ಞಾನಿಗಳು ಸಮಾಜಕಲ್ಯಾಣಕ್ಕ ಕೈಹಾಕದೆ, ವ್ಯಕ್ತಿಕಲ್ಯಾಣ ಮಾತ್ರ ಬೋಧಿಸಿದರು; ಅಮೂರ್ತವಾದ ಮಾನವ ಕಲ್ಯಾಣ ಮಾತ್ರ ಘೋಷಿಸಿದರು.

ಬಸವಣ್ಣ : ನನ್ನ ದಾರಿ ಅದಲ್ಲ. ಈಗ ರಾಜರಿಂದ ಪ್ರಜೆಗಳ, ಪುರೋಹಿತರಿಂದ ಭಕ್ತರ, ಪುರುಷರಿಂದ ಸ್ತ್ರೀಯರ ಶೋಷಣೆ ನಡದದ. ಇದರಿಂದ ಸಮಾಜದಾಗ ಶೋಷಣೆ ಮಾಡುವ, ಶೋಷಣೆ ಮಾಡಿಸಿಕೊಳ್ಳುವ ಎರಡು ಭಿನ್ನ ಪ್ರವಾಹಗಳು ನಿರ್ಮಾಣ ಆಗ್ಯಾವ.....

ಈಶಾನ್ಯಗುರು : (ನಡುವೆಯೇ ಬಾಯಿಹಾಕಿ) ಈ ಎರಡೂ ಪ್ರವಾಹ ಒಂದಾಗಬೇಕಂತ ನಿನ್ನ ವಿಚಾರವೇ?

ಬಸವಣ್ಣ : ಹೌದು. ಎರಡೂ ಪ್ರವಾಹಗಳು ಒಂದಾಗ್ಬೇಕು. (ಬೆರಳು ಮಾಡಿ ತೋರಿಸುತ್ತ) ಈ ಕೃಷ್ಣೆ -ಮಲಪ್ರಭೆಯರು ಸೇರಿ ಕೂಡಲಸಂಗಮವಾಧಾಂಗ ಎರಡಾಗಿರುವ ಸಮಾಜ ಒಂದಾಗ್ಬೇಕು; ಒಂದಾಗಿ ಹರೀಬೇಕು. ವ್ಯಕ್ತಿಪ್ರಜ್ಞೆ ನೀರಿನ್ಹಾಂಗ ಚಲನಶೀಲವಾಗಬೇಕು- ಅಂತ ಈವರೆಗೆ ಹೇಳ್ತಿದ್ದ. ನನಗ ಈಗ ಸಮಾಜವ್ಯವಸ್ಥೆಯೂ ಸಣ್ಣ ದೊಡ್ಡ ಮಡುವುಗಳಾಗಿರಬಾರದು, ಏಕ ನದಿಯಾಗಿ ಸಮಪಾತಳಿಯಲ್ಲಿ ಪ್ರವಹಿಸಬೇಕು ಅನಸ್ತದ. ವರ್ಣ-ವರ್ಗ-ಲಿಂಗ ಭೇದಗಳೆಂಬ ಭೇದ ಸಂಸ್ಕೃತಿ ನೀಗಿ, ಅಭೇದ ಸಂಸ್ಕೃತಿ ಅಸ್ತಿತ್ವಕ್ಕೆ ಬರಬೇಕೆಂದು ಮನಸು ಹಂಬಲಿಸ್ತದ. ವ್ಯಕ್ತಿ ದೇವರಾಗಬೇಕು; ಮುಂದುವರಿದು ಸಮಾಜವಾಗಬೇಕು. ಸೋಹಂ ಪ್ರಜ್ಞೆಯದು ಅಪೂರ್ಣ ವ್ಯಕ್ತಿತ್ವ, ದಾಸೋಹಂ ಪ್ರಜ್ಞೆಯದು ಪೂರ್ಣ ವ್ಯಕ್ತಿತ್ವ.

ಈಶಾನ್ಯಗುರು : ಬಸವಣ್ಣಾ, ನಿನ್ನ ಈ ಧ್ಯೇಯ ಸಾಧನೆಗೆ ಈ ಮಠ ಯೋಗ್ಯ ನೆಲೆ ಅಲ್ಲ. ಭೇದ ನೀತಿಯಿಂದ ತುಂಬಿರುವ ಈ ಮಠ ನಿನ್ನ ವಿಚಾರಗಳನ್ನು ಸಹಜವಾಗೇ ನಾಶಮಾಡ್ತದ. ಮೇಲಾಗಿ ಕೂಡಲಸಂಗಮ ಒಂದು ಸಣ್ಣ ಹಳ್ಳಿ. ಕಾರಣ, ಯಾವುದೇ ದೊಡ್ಡ ನಗರಕ್ಕ,

ಸಾಧ್ಯವಾದರ ನಿನ್ನ ಸೋದರಮಾವ ಬಲದೇವ ಮಂತ್ರಿಗಳಿರುವ ರಾಜಧಾನಿ ಕಲ್ಯಾಣಕ್ಕ ಹೋಗು. ಇಲ್ಲಿಯ ವ್ಯಕ್ತಿಕಲ್ಯಾಣದ ಮುಂದುವರಿಕೆ ಅನ್ನೂ ಹಾಂಗ ಅಲ್ಲಿ ಸಮಾಜಕಲ್ಯಾಣಕ್ಕ ತೊಡಗು. ಕೂಡಲಸಂಗಮದ ದೀಪವಾಗಿರುವ ನೀನು ಜಗತ್ತಿನ ಜ್ಯೋತಿಯಾಗಿ ಬೆಳಗು.

(ಬಸವಣ್ಣ ನಮಸ್ಕರಿಸುತ್ತಾನೆ. ಗುರು ಆಶೀರ್ವದಿಸುತ್ತಾನೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯ ವಾಕ್ಯ ಪದೇ ಪದೇ ಕೇಳಿಸುತ್ತದೆ.)

❖❖

ದೃಶ್ಯ - ೧೭

("ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ರಾಜಪರಮೇಶ್ವರ, ಕಾಳಾಂಜರಪುರವರಾಧೀಶ್ವರ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್" ವಂದಿ ಮಾಗಧರ ಈ ಜಯಘೋಷದೊಂದಿಗೆ ಬಿಜ್ಜಳನು ಆಸ್ಥಾನಕ್ಕೆ ಬಂದು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ).

ಬಿಜ್ಜಳ : ಏನು ಮಂತ್ರಿ ಮಂಚಣ್ಣನವರೇ, ಗಣಕಶಾಲೆಯ ಲೆಕ್ಕಪತ್ರ ಹೊಂದಿಕೆಯಾಯ್ತ?

ಮಂಚಣ್ಣ : ಇಲ್ಲ ಪ್ರಭೂ. ಕಳೆದ ಒಂದು ವಾರದಿಂದ ಎಲ್ಲ ಅಧಿಕಾರಿಗಳು ಪ್ರಯತ್ನ ನಡಸ್ಯಾರ, ಸಮಸ್ಯೆ ಬಗೆ ಹರೀತಿಲ್ಲ. ಸ್ವಲ್ಪವೂ ಪ್ರಗತಿ ಕಾಣತಿಲ್ಲ.

ಬಿಜ್ಜಳ : ನನಗ ಹಲವಾರು ಹಳೆಯ ಚಿಂತೆಗಳು. ಇದೊಂದು ಹೊಸ ಚಿಂತೆ. ಕಲ್ಯಾಣಕ್ಕ ನಾನು ಬಂದು ಒಂದು ವರ್ಷವಾಯಿತು. ಗಣಕಶಾಲೆಯ ಆಡಳಿತ ನಿಯಂತ್ರಣಕ್ಕೇ ಬರತಿಲ್ಲ.

ಮಂಚಣ್ಣ : ತುಂಬ ಎಚ್ಚರವಹಿಸಿದರೂ ತಪ್ಪು ಮತ್ತೆ ಮತ್ತೆ ಘಟಿಸ್ತಾ ಅದ. ನಾವು ಎಲ್ಲಿ ತಪ್ಪೀವಿ ಎಂಬುದೇ ಅರ್ಥ ಆಗತಾ ಇಲ್ಲ.

ಬಿಜ್ಜಳ : (ಸಿಟ್ಟಿನಿಂದ) ಸೈನ್ಯ ಮತ್ತು ಭಂಡಾರ - ಇವೆರಡೂ ರಾಜ್ಯ ರಥದ ಎರಡು ಚಕ್ರಗಳು. ಇವುಗಳಲ್ಲಿ ಭಂಡಾರ ಅಸ್ತವ್ಯಸ್ತ ಆಗೂದಂದರ...

ಬಲದೇವ : (ಬಸವಣ್ಣನೊಂದಿಗೆ ಬರುತ್ತಾನೆ) ನಮಸ್ಕಾರ ಪ್ರಭುಗಳಿಗೆ, ಏನು ತುಂಬ ಸಿಟ್ಟಿನಲ್ಲಿದ್ದೀರಿ?

ಬಿಜ್ಜಳ : ಬನ್ನಿ ಸಚಿವರೇ, ಗಣಕ ಶಾಲೆ ಮೊದಲಿನಿಂದ ನನಗೆ ಒಂದು ಸಮಸ್ಯೆ ಆಗ್ಯಾದ. ಇದು ಎಂದು ಸುಧಾರಿಸುವುದೋ. ಯಾವ ಪುಣ್ಯಾತ್ಮ ಬಂದು ಇದನ್ನು ಸುಧಾರಸ್ತಾನೋ.

ಬಸವಣ್ಣ : ನಾನು, ನಾನು ಸುಧಾರಿಸತೀನಿ, ಪ್ರಭು.

ಬಿಜ್ಜಳ : ನೀನು ? ಬಲದೇವ, ಯಾರು ಈತ ?

ಬಲದೇವ : ಪ್ರಭೂ, ನನ್ನ ಅಳಿಯ, ಬಸವಣ್ಣ - ಬಾಗೇವಾಡಿಯವ.

ಬಿಜ್ಜಳ : ಏನು ಬಲದೇವ ? ಸೂರ್ಯನೇ ಚಂದ್ರನಾಗಿ ಅವತರಿಸಿದಂಥ ವ್ಯಕ್ತಿ, ಕರುಣೇಯೇ ಜೀವ ಪಡೆದ ವ್ಯಕ್ತಿ. ನೀನು ಪುಣ್ಯವಂತ. ನಿನ್ನ ಮಗಳು ಗಂಗಾಂಬೆ ಪುಣ್ಯವಂತೆ.

ಬಲದೇವ : ಎಲ್ಲ ದೇವರಿಚ್ಛೆ.

ಬಿಜ್ಜಳ : ಅಂದ ಹಾಂಗ, ಬಸವಣ್ಣನ ವೃತ್ತಿ ?

ಬಲದೇವ : ನಿನ್ನೆಯೇ ಬಂದಾನ. ವೃತ್ತಿ ವಿಷಯವನ್ನೇ ಕುರಿತು ತಮ್ಮೊಂದಿಗೆ ಮಾತಾಡಲಿಕ್ಕ ಬಂದೀನಿ.

ಬಿಜ್ಜಳ : ಮಾತಾಡೂದೇನದ ? ಗಣಕ ಶಾಲೆ ಸುಧಾರಿಸುವುದಾಗಿ ಹೇಳತಾನ. ತುಂಬ ಆತ್ಮವಿಶ್ವಾಸದ ವ್ಯಕ್ತಿ ಅಂತ ಕಾಣತದ. ನಮ್ಮಲ್ಲಿ ಗಣಕಾಧಿಕಾರಿ ಆಗಿರಲಿ. (ಬಸವಣ್ಣನ ಕಡೆ ಹೊರಳಿ) ಏನು ಬಸವಣ್ಣಾ, ನಿನ್ನ ಅರ್ಹತೆಗಳೇನು ?

ಬಸವಣ್ಣ : ಪ್ರಾಮಾಣಿಕತೆ, ಪರಿಶ್ರಮ.

ಬಿಜ್ಜಳ : ಹಾಂ! ಆಸಕ್ತಿ ?

ಬಸವಣ್ಣ : ಕಾರ್ಯ ಯೋಜಿಸೂದು, ಯೋಜನೆ ಕಾರ್ಯಗತಗೊಳಿಸೂದು.

ಬಿಜ್ಜಳ : ಭಲೇ, ಸೋಮವಾರದಿಂದ ಕೆಲಸಕ್ಕ ಬಂದುಬಿಡು.

ಬಸವಣ್ಣ : ಪ್ರಭೂ, ಕೆಲಸಗಾರರಿಗೆ ಮುಖ್ಯವಾದುದು ದಿವಸವಲ್ಲ; ಕೆಲಸ.

ಬಿಜ್ಜಳ : ನಿನ್ನ ಇಚ್ಛೆ. ಇಂದೇ ಕೆಲಸ ಸುರೂ ಮಾಡು. ಗಣಾಧಿಕಾರಿಯಾಗಿ ಅಲ್ಲ. ಮಹಾಗಣಾಧಿಕಾರಿಯಾಗಿಯೇ ಸುರೂ ಮಾಡು.

ಬಸವಣ್ಣ : ಆಗಲಿ ಪ್ರಭು (ಕೈಮುಗಿದು ಇಬ್ಬರೂ ಹೋಗುತ್ತಾರೆ).

❖❖

ದೃಶ್ಯ - ೧೮

(ಗಣಕಶಾಲೆ, ಬಾಗಿಲ ಮೇಲೆ "ಕಾಯಕವೇ ಕೈಲಾಸ" ನಾಮಫಲಕ. ಇಬ್ಬರು ಸೇವಕರು ಕಸಗುಡಿಸುತ್ತ ಮಾತನಾಡುತ್ತಿದ್ದಾರೆ).

ಸೇವಕ ೧ : ನಮ್ಮ ಗಣಕಶಾಲೆ ಈಗ ಮೊದಲಿನ ಹಾಂಗ ಉಳಿದಿಲ್ಲ.

ಸೇವಕ ೨ : ಬಸವಣ್ಣನವರು ಬಂದಾಗಿನಿಂದ ಇದರ ಬಣ್ಣSನS ಬದಲಾಗ್ಯಾದ.

ಸೇವಕ ೧ : ಹೌದು, ಅವರು ಬಂದ ಆರು ತಿಂಗಳದಾಗೇ ಆರು ವರ್ಷಗಳ ಸುಧಾರಣೆ ಮಾಡಿದ್ರು. (ಮೇಲೆ ಬೆರಳು ಮಾಡುತ್ತ) ಈಗಂತೂ ಈ ವಾಕ್ಯದ ಪ್ರತಿಯೊಂದು ಅಕ್ಷರವೂ ಇಲ್ಲಿ ಆಚರಣೆಗೆ ಇಳೀತಾ ಇದೆ.

ಸೇವಕ ೨: ಕೆಲವರಿಗಿ ಇದರಿಂದ ತೊಂದರೆಯೂ ಆಗ್ಯಾದ. ದಡ್ಡರೂ, ದುಷ್ಟರೂ, ಆಲಸಿಗಳೂ ಸಂಸ್ಥೆಗೆ ದೊಡ್ಡ ಶಾಪ ಅಂತ ಇವರ ಅಭಿಪ್ರಾಯ.

ಸೇವಕ ೧: ಹೌದು, ಇಂಥವರು ಬಸವಣ್ಣನವರನ್ನು ದೂಷಿಸತಾ ಇದ್ದಾರ. ದುಡಿಯುವರಿಗಿ ಮಾತ್ರ ಇಲ್ಲಿ ಮುಕ್ತ ಅವಕಾಶ ಅದ.

ಸೇವಕ ೨: 'ಸರಿಯಾದ ಸಮಯಕ್ಕ ಸರಿಯಾದ ಕೆಲಸ ಮಾಡು" ಎಂಬ ಇವರ ಹೊಸ ನೀತಿಯಿಂದಾಗಿ ಕೆಲಸದ ವೇಗವೂ ಹೆಚ್ಚಾಗ್ಯಾದ, ಗುಣಮಟ್ಟವೂ ಹೆಚ್ಚಾಗ್ಯಾದ. ಈ ವಿಷಯ ಬಿಜ್ಜಳ ಮಹಾರಾಜರಿಗೆ ಸಂತೋಷ ಉಂಟುಮಾಡ್ಯಾದ.

ಸೇವಕ ೨ : ಹೌದು, ಈಗ ಮಹಾರಾಜರು ಎಲ್ಲ ಕೆಲಸಗಳಿಗೂ ಬಸವಣ್ಣನನ್ನೇ ಕೇಳ್ತಾರ.

ಸೇವಕ ೧ : ಹಾಗಾದರ, ಉಳಿದ ಅಧಿಕಾರಿಗಳು ಸಿಟ್ಟಿಗೇಳ್ತಾರ ನೋಡು.

ಸೇವಕ ೨ : ಈಗಾಗಲೇ ಕೊಂಡಿ ಮಂಚಣ್ಣ ಮೊದಲಾದವರು ಸಿಟ್ಟಾಗ್ಯಾರ. ಬಸವಣ್ಣನ ಹೀಂಗ ಬೆಳಿಲಾಕ ಬಿಡಬಾರದಂತ ಪಿತೂರಿ ಸುರು ಮಾಡ್ಯಾರ.

ಸೇವಕ ೧ : ಯಾರು ಏನೇ ಮಾಡಲಿ, ಬಸವಣ್ಣನವರು ಅದ್ಭುತ ವ್ಯಕ್ತಿ. ಗಣಕಶಾಲೆಯ ಲೆಕ್ಕವೆಲ್ಲ ಇವರ ಕೈಮ್ಯಾಲ.

ಸೇವಕ ೨: ಹಣದ ವಿಷಯದಾಗ ಮಿತವ್ಯಯ -ಪಾವಿತ್ರ್ಯ ಸಾಧ್ಯ ಆಗಿ, ಸೋರೂದು ನಿಂತು, ಭಂಡಾರ ಬೆಳೀತಾ ಅದ.

ಸೇವಕ ೧ : ನಿನ್ನೆ ಹೇಳಿದರು 'ಹಣವನ್ನು ನೀರಿನ ಹಾಂಗ ಗಳಿಸ್ರಿ, ತೀರ್ಥದ ಹಾಂಗ ಬಳಸ್ರಿ' ಅಂತ. ಮೊನ್ನೆ ಹೇಳಿದರು 'ರಾಜ್ಯ ವಿಸ್ತಾರ ಯಾಕ ಬೇಕು ? ಯುದ್ಧ ಅನವಶ್ಯ. ಎಲ್ಲರೂ ದುಡಿದರ, ದಯೆಯಿಂದ ನಡದರ ರಾಜ್ಯಾಡಳಿತವೂ ಬ್ಯಾಡ' ಅಂತ.

ಸೇವಕ ೨: ಹೇಳೂದೇನು ಬಂತು ? ಹೇಳಿದಾಂಗ ಬಾಳತಾರ. ಶಕ್ತಿ ಇರುವಷ್ಟು ದುಡೀತಾರ, ಅವಶ್ಯವಿರುವಷ್ಟು ಸಂಬಳ ಪಡೀತಾರ. ಇದು ಕೆಲಸ -ಸಂಬಳಗಳ ಬಗ್ಗೆ ಇವರು ಇಟಗೊಂಡ ನೀತಿ.

ಸೇವಕ ೧: ಅಷ್ಟೇ ಯಾಕ, ಕೆಲಸದಲ್ಲಿ ತಾರತಮ್ಯನೇ ಮಾಡೂದಿಲ್ಲ. ಮೊನ್ನೆ ಅವರ ಸೇವಕ ಬಂದಿರಲಿಲ್ಲ. ತಾವೇ ಬಾಗಿಲ ತಗದ್ರು, ಕಸ ಗುಡಿಸಿದ್ರು, ತಮ್ಮ ಕೆಲಸಕ್ಕ ತೊಡಗಿದ್ರು. ಇವೆಲ್ಲ ನಮಗೆ ದೊಡ್ಡ ಪಾಠಗಳಾಗಿ ಪರಿಣಮಿಸ್ಯಾವ (ಕಸಗುಡಿಸುತ್ತ ಹೋಗುತ್ತಾರೆ).

❖❖

ದೃಶ್ಯ - ೧೯

(ಬಿಜ್ಜನ ಅರಮನೆ. ರಾಣಿ ರಂಭಾದೇವಿಯೊಂದಿಗೆ ಬಿಜ್ಜಳನ ಮಾತುಕತೆ)

ಬಿಜ್ಜಳ : ರಂಭಾ, ಪುರುಷನ ಭಾಗ್ಯ ಬಲ್ಲವರಾರು? ಕೇವಲ ಮಾಂಡಲಿಕ ಆಗಿದ್ದ ನಾನು ಚಕ್ರವರ್ತಿ ಆಗೂ ಕನಸ ಕಂಡಿರಲಿಲ್ಲ. ಹೇಡಿ ತೈಲಪ ಅರಮನೆ ಬಿಟ್ಟು ಓಡಿಹ್ವಾದ. ಆದರ ಚಾಲುಕ್ಯರ ಸ್ವಾಮಿನಿಷ್ಠ ಮಾಂಡಲಿಕರು ನನ್ನ ಚಕ್ರಾಧಿಪತ್ಯ ಒಪ್ಪಿಕೊಳ್ಳಲು ಇನ್ನೂ ಹಿಂದುಮುಂದ ನೋಡತಾ ಇದ್ದಾರ.

ರಂಭಾ : ಹೌದು ಮಹಾರಾಜ. ಕುರುಗೋಡ ಸಿಂದರು, ಗೋವೆಯ ಕದಂಬರು ಬಂಡೆಗಲ್ಲಿನ್ಹಾಂಗ ನಿಮ್ಮ ಎದುರ ನಿಂತಾರ.

ಬಿಜ್ಜಳ : ಈಗ ಪ್ರಜೆಗಳಲ್ಲಿ ನನ್ನ ಬಗ್ಗೆ ಪ್ರಶ್ನಾತೀತ ವಿಶ್ವಾಸ ಬೆಳೆಯೂದು ಅವಶ್ಯ ಅದ. ಹೀಗಾಗಿ ನಾನು ಒಬ್ಬ ಪ್ರಭಾವಶಾಲಿ ವ್ಯಕ್ತಿಯ ವರ್ಚಸ್ಸನ್ನು ಬಳಸಿಕೊಳ್ಳಬೇಕಾಗ್ಯಾದ, ರಂಭಾ.

ರಂಭಾ : ಪ್ರಭು, ಸಮಯ ಬಹಳ ಸೂಕ್ಷ್ಮ ಅದ. ಜಾಗೃತೆಯಿಂದ ಹೆಜ್ಜಿ ಹಾಕ್ರಿ. ಪ್ರಭಾವಶಾಲಿ ವ್ಯಕ್ತಿ ಸಿಗಬಹುದು. ಪ್ರಾಮಾಣಿಕ ವ್ಯಕ್ತಿ ಸಿಗಬೇಕಲ್ಲ.

ಬಿಜ್ಜಳ : ಹುಡುಕೀನಿ, ಈಗ ಇಲ್ಲಿಗೂ ಬರಲಿಕ್ಕ ಹೇಳೀನಿ.

ರಂಭಾ : ಯಾರ ಅವರು ?

ಬಿಜ್ಜಳ : ನಮ್ಮ ಮಹಾಗಣಾಧಿಕಾರಿ ಬಸವಣ್ಣ.

ರಂಭಾ : ನಾನೂ ಕೇಳೀನಿ. ಕಳೆದ ಎರಡು ವರ್ಷಗಳಿಂದ ಅವರ ಹೆಸರು ಬೆಳೀತಾ ನಡದದ. ತುಂಬ ಸಾತ್ವಿಕ ವ್ಯಕ್ತಿ ಅಂತ ಜನ ಹೇಳೂದನ್ನ ಕೇಳೀನಿ.

ಬಿಜ್ಜಳ : ಕೇವಲ ಸಾತ್ವಿಕ ಅಲ್ಲ. ಅದನ್ನೂ ಮೀರಿದ ದೈವೀವ್ಯಕ್ತಿ. ವಿಶ್ವಾಸಕ್ಕ ಬರೆದ ವ್ಯಾಖ್ಯಾನ; ಪ್ರಾಮಾಣಿಕತೆಗೆ ಬರೆದ ಭಾಷ್ಯ. ದಿನದಿಂದ ದಿನಕ್ಕ ಅವನ ವರ್ಚಸ್ಸಿನ ವರ್ತುಲ ವಿಸ್ತಾರವಾಗ್ತಾ ನಡದದ. ಅವನ ಆಗಮನ ಕಲ್ಯಾಣನಗರಕ್ಕ ಕಿರಣ, ಕುಂತಳ ನಾಡಿಗಿ ಬೆಳಕ.

ರಂಭಾ : ತುಂಬಾ ಸಾತ್ವಿಕರು ರಾಜಕಾರ್ಯದ ಚಾಣಕ್ಯನೀತಿಗಿ ಉಪಯೋಗ ಬೀಳ್ತಾರ?

ಬಿಜ್ಜಳ : ಉಪಯೋಗಿಸಿಕೊಳ್ಳುವ ನಮ್ಮ ಕೈಯಾಗ ಅದ. ಆ ವಿಚಾರ ನನಗ ಇರಲಿ.

(ಅಷ್ಟರಲ್ಲಿ ಬಲದೇವ, ಬಸವಣ್ಣ ಆಗಮಿಸುತ್ತಾರೆ, ರಂಭಾ ಎದ್ದು ಒಳಗೆ ಹೋಗುತ್ತಾಳೆ).

ಬಲದೇವ -ಬಸವಣ್ಣ : ನಮಸ್ಕಾರ, ಪ್ರಭುಗಳಿಗೆ.

ಬಿಜ್ಜಳ : ಬನ್ನಿ ಕುಳಿತುಕೊಳ್ಳಿ. (ಕುಳಿತುಕೊಳ್ಳುತ್ತಾರೆ).

ಬಲದೇವ : ನಮ್ಮಿಬ್ಬರನ್ನು ಕರೆಸಿದ ಕಾರಣವೇನು ಪ್ರಭು?

ಬಿಜ್ಜಳ : ಸಚಿವರೇ, ಕುಂತಳ ನಾಡಿನ ಹಣೆಯ ಬರಹ ಕ್ರಮವಾಗಿ ಬದಲಾಗುತ್ತಿರುವ ಲಕ್ಷಣಗಳು ತೋರಿ ಬರತಾ ಇವೆ. ಮಾಂಡಲಿಕನಾಗಿದ್ದ ನಾನು ಚಕ್ರವರ್ತಿಯಾದುದಕ್ಕಿಂತ, ಬಸವಣ್ಣ ಮಹಾಗಣಾಧಿಕಾರಿಯಾಗಿ ಬಂದು ಭಂಡಾರ ಸುಧಾರಿಸಿರೂದು ಮಹತ್ವಪೂರ್ಣ ಘಟನೆಯಾಗ್ಯಾದ.

ಬಸವಣ್ಣ : ಏನೋ ನ್ನ ಕೈಯಿಂದಾಗುವ ಕೆಲಸ ಶ್ರದ್ಧೆಯಿಂದ ಮಾಡತಾ ಇದ್ದೇನೆ.

ಬಿಜ್ಜಳ : ಇರಬಹುದು, ಆದರ "ನಮ್ಮ ಪ್ರಾಮಾಣಿಕತೆಯೇ ನಮ್ಮ ಆಸ್ತಿ" ಎಂಬ ನಿಮ್ಮ ನಡತೆಯಿಂದಾಗಿ ರಾಜ್ಯಭಂಡಾರದ ಕಾರ್ಯಕಲಾಪ ಸುಧಾರಿಸ್ತ ನಡದಾದ.

ಬಲದೇವ : ಪ್ರಜೆಗಳೂ ಹೀಗೆಯೇ ಹೇಳ್ತಿದಾರ, ಪ್ರಭು.

ಬಿಜ್ಜಳ : ಈಗ ಒಂದು ವಿಷಯ. ಕಳೆದ ವಾರ ಭಂಡಾರ ಸಚಿವ ಸಿದ್ಧರಸರು ತೀರಿಕೊಂಡ್ರು. ಆ ಸ್ಥಾನ ತುಂಬಲು ಬಸವಣ್ಣಾ, ನೀವೇ ಸಮರ್ಥರೆಂದು ನನ್ನ ಅನಿಸಿಕೆ. ನೀವು ಈ ಹೊಣೆ ಹೊರಬೇಕು. ಅದಕ್ಕಾಗಿ ನಿಮ್ಮನ್ನು ಕರೆಸಿದ್ದು. ಹಿಡಿಯಿರಿ (ಎನ್ನುತ್ತ ಅಧಿಕಾರಪತ್ರವನ್ನು ಎತ್ತಿ ಹಿಡಿಯುತ್ತಾನೆ).

ಬಸವಣ್ಣ : ಇದೇನು ಪ್ರಭುಗಳೇ ಇಷ್ಟು ದೊಡ್ಡ ಭಾರ.....

ಬಿಜ್ಜಳ : ಹೌದು, ನಾನು ದೊಡ್ಡ ಭಾರ ಕಡಿಮೆ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ನೀವು ಹೊರಬಲ್ಲಿರಿ, ಇವತ್ತಿನ ಸಂದರ್ಭದಾಗ ನೀವೊಬ್ಬರೇ ಹೊರಬಲ್ಲಿರಿ. ಹಿಡಿಯಿರಿ (ಅಧಿಕಾರ ಪತ್ರ ಕೊಡುತ್ತಾನೆ).

ಬಸವಣ್ಣ : ಆಗಲಿ ಪ್ರಭು. (ಅಧಿಕಾರ ಪತ್ರವನ್ನು ಸ್ವೀಕರಿಸುತ್ತಾನೆ).

ಬಿಜ್ಜಳ : ಬಸವಣ್ಣಾ, ಈವರೆಗೆ ನಿಮ್ಮ ಕೈ ರಾಜ್ಯದ ಕಡತಗಳ ಮ್ಯಾಲ; ಈಗ ರಾಜ್ಯ ಸಂಪತ್ತು ನಿಮ್ಮ ಕೈ ಮ್ಯಾಲ. ಅದರ ನೇರ ವಿನಿಯೋಗದ ಪರಮಾವಧಿ ಅಧಿಕಾರ ನಿಮ್ಮದು. ಇದೊಂದು ನಿಮಗ ಅಗ್ನಿಪರೀಕ್ಷೆ.

ಬಸವಣ್ಣ : ನನಗ ಅಗ್ನಿಪರೀಕ್ಷೆ ಅಂದರ ಯಾವಾಗಲೂ ಪ್ರಿಯವಾದುದು. ಹಣದ ಮಧ್ಯೆ ಇದ್ರೂ ಶುದ್ಧವಾಗಿರೂದು ಒಂದು ರೀತಿ ನನ್ನನ್ನು ನಾನು ಪರೀಕ್ಷೆಗೆ ಒಡ್ಡಿಕೊಂಡಂಗ. ಇದು ಒಂದು ಬಗೆಯ ಆತ್ಮಶುದ್ಧಿಯ ಪ್ರಯೋಗ ಅಂತs ಭಾವಿಸ್ತೀನಿ.

ಬಲದೇವ : ಬಸವಣ್ಣಾ, ಈ ವರೆಗೆ ನಿನ್ನ ಪ್ರಯೋಗಗಳನ್ನು ಜನ ನೋಡ್ಯಾರ, ಕೇಳ್ಯಾರ. ನಿನ್ನ ಬಗ್ಗೆ ಅನೇಕರಿಗೆ ಕುತೂಹಲ ಅದ.

ಬಸವಣ್ಣ : ಏನೋ ನಾನೊಬ್ಬ ಸಾಮಾನ್ಯ, ಶಿವಸಾಮಾನ್ಯ. ಮಹಾರಾಜರು ವಹಿಸಿಕೊಟ್ಟ ಈ ಹೊಣೆ ಪ್ರಾಮಾಣಿಕವಾಗಿ ನಿರ್ವಹಿಸತೀನಿ.

ಬಿಜ್ಜಳ : ನನಗೆ ನಿಮ್ಮ ಮ್ಯಾಲ ತುಂಬ ವಿಶ್ವಾಸ ಅದ. ಬಲದೇವಾ, ನೀವು ಆಗಾಗ ಭಂಡಾರ ಸಚಿವ ಬಸವಣ್ಣನವರಿಗೆ ಮಾರ್ಗದರ್ಶನ ಮಾಡತಿರಬೇಕು.

ಬಲದೇವ : ಆಗಲಿ, ಪ್ರಭು (ಇಬ್ಬರೂ ನಮಸ್ಕಾರ ಹೇಳಿ ಹೋಗುತ್ತಾರೆ).

❖❖

ದೃಶ್ಯ - ೨೦

(ಡಂಗುರ ಸಾರುವುದು. "ಕೇಳಿರಿ, ಕೇಳಿರಿ, ದೀನರು-ದಲಿತರು ಭಂಡಾರ ಶಾಲಿಗಿ ಬರಬೇಕಂತ ಸಚಿವ ಬಸವಣ್ಣನವರು ಆದೇಶ ಹೊರಡಿಸ್ಯಾರ. ನಿಮ್ಮ ಕುಂದುಕೊರತೆ ಕೇಳಿ, ಸಾಧ್ಯವಿರುವ ಪರಿಹಾರ ನೀಡ್ತಾರ. ಎಲ್ಲರೂ ಬರಬೇಕು" ಎನ್ನುತ್ತು ಹೋಗುತ್ತಾನೆ. ಭಂಡಾರದತ್ತ ಜನ ಸಾಗಿಬರುತ್ತದೆ).

ಪ್ರಜೆ ೧: ಈ ವರೆಗೆ ಮಂತ್ರಿಗಳನ್ನೇ ನೋಡದವ್ರು ನಾವು. ನಮ್ಮನ್ನು ನೋಡಲು ಈ ಮಂತ್ರಿ ಆಮಂತ್ರಿಸ್ಯಾರ. ಇವರು ಹೊಸ ರೀತಿಯ ಮಂತ್ರಿಗಳಂತs ಕಾಣ್ತದ. (ಜನಸಮೂಹ ನೆರೆದಿದೆ).

ಬಸವಣ್ಣ : (ಹೊರಬಂದು, ಸ್ವಗತ) ಅಯ್ಯೋ ಬಡತನವೇ ಅಪಾರ ದಾರಿದ್ರ್ಯವೇ. (ವ್ಯಕ್ತವಾಗಿ) ಬಂಧುಗಳೇ, ಇಲ್ಲಿ ದೀನರೂ-ದಲಿತರೂ ಸೇರೀರಿ, ಈ ಎರಡೂ ಯಾತನೆಗಳಿಂದ ಬಿಡಿಸಿಕೊಂಡರ ಮಾತ್ರ ನಿಮ್ಮ ಉದ್ಧಾರ ಸಾಧ್ಯ.

ಪ್ರಜೆ ೧ : ಬಿಡಿಸಿಕೊಳ್ಳೂ ದಾರಿ ಯಾವುದು ಸ್ವಾಮೀ ?

ಬಸವಣ್ಣ : ಧರ್ಮಾಧಿಕಾರಿಗಳ ಧೂರ್ತತನದಿಂದ ದಲಿತರು -ದಲಿತರಲ್ಲದವರೆಂಬ ಜಾತಿಭೇದ ಹುಟ್ಟಿಕೊಂಡದ. ನಿಮ್ಮ ಸೋಮಾರಿತನದಿಂದ ಬಡವರು-ಶ್ರೀಮಂತರೆಂಬ ಭೇದ ಹುಟ್ಟಿಕೊಂಡದ.

ಪ್ರಜೆ ೨ : ದಲಿತ-ದಲಿತರಲ್ಲದವರು ಎಂಬ ಜಾತಿಭೇದವನ್ನು ಧರ್ಮಾಧಿಕಾರಿಗಳು ಹುಟ್ಟಿಸ್ಯಾರ?

ಬಸವಣ್ಣ : ಹೌದು. ದೇವಾಲಯದ ಪುರೋಹಿತರು, ಮಠದ ಆಚಾರ್ಯರು-ಇವೆರಡೂ ಪ್ರತಿಗಾಮಿಶಕ್ತಿಗಳು. ಧರ್ಮದ ಹೆಸರಿನ್ಯಾಗ ದಲಿತವರ್ಗವನ್ನು ಸೃಷ್ಟಿಸುತ್ತ ಬಂದ ಎರಡು ಕ್ರೂರ ಕೈಗಳು. ಇವೆರಡನ್ನೂ ನಾವು ದುರ್ಬಲಗೊಳಿಸಬೇಕು. ಇಲ್ಲದಿದ್ದರ ನಾವು ಬೆಳೆಸಿದುದನ್ನು ಇವು ಅಳಿಸ್ತಾ ಹೋಗ್ತಾವ.

ಪ್ರಜೆ : ಹಾಗಾದರೆ ನಾವು ಏನು ಮಾಡಬೇಕು ?

ಬಸವಣ್ಣ: ಆಚಾರ್ಯರ ಮಠ ನಿಮ್ಮನ್ನು ತಿರಸ್ಕರಿಸ್ಯಾದ, ನೀವಾಗಿಯೇ ಮಠಗಳನ್ನು ನಿರಾಕರಿಸಿ. ನಿಮ್ಮ ಮನೆಗಳೇ ಮಠಗಳೆಂದು ಭಾವಿಸಿರಿ. ಪುರೋಹಿತರ ದೇವಾಲಯ ನಿಮ್ಮನ್ನು ತಿರಸ್ಕರಿಸ್ಯಾದ, ನೀವಾಗಿಯೇ ದೇವಾಲಯವನ್ನು ನಿರಾಕರಿಸಿ, ದೇಹವನ್ನೇ ದೇವಾಲಯ ಮಾಡಿಕೊಳ್ಳಿರಿ.

ಪ್ರಜೆ ೨ : ದೇಹದೇವಾಲಯಕ್ಕ ದೇವರು ?

ಬಸವಣ್ಣ : ನಿಮ್ಮ ಆತ್ಮವೇ ದೇವರು. ಅದರ ಪ್ರತೀಕವೆಂಬಂತೆ ಇಷ್ಟಲಿಂಗ ಧರಿಸಿರಿ. ದಿನನಿತ್ಯದ ಉಪಾಸನೆಯಿಂದ ಇದು ಆತ್ಮೋದ್ಧಾರದ ಸಾಧನ ಆಗ್ತದ. ಸ್ಪೃಶ್ಯ-ಅಸ್ಪೃಶ್ಯರೆನ್ನದೆ ಎಲ್ಲರ ಎದಿ ಮ್ಯಾಲ ಇರೂದರಿಂದ ಸಾಮಾಜಿಕ ಸಮಾನತೆಯ ಕುರುಹೂ ಆಗ್ತದ.

ಪ್ರಜೆ ೧ : ಹೌದು, ದೇವರು ಮತ್ತು ನಮ್ಮ ನಡುವ ನಿಂತು ನಮ್ಮನ್ನು ಪುರೋಹಿತರು ಹರಿದು ತಿನ್ನೂದನ್ನು ಇದು ತಪ್ಪಸ್ತದ, ನಿಜ. ಆದರ ನಮ್ಮ ಬಡತನ ನೀಗಿಸುವ ದಾರಿ ಯಾವುದು ?

ಬಸವಣ್ಣ : ದುಡಿಮೆಯೊಂದೇ ಇದಕ್ಕೆ ಅನಿವಾರ್ಯ ದಾರಿ.

ಪ್ರಜೆ ೧ : ಸ್ವಾಮೀ, ದುಡಿಯಲು ಹೊಲ ಹೋಗಲಿ, ಉಪಕರಣಗಳೂ ನಮ್ಮಲ್ಲಿ ಇಲ್ಲ.

ಬಸವಣ್ಣ : ನನಗೆ ಗೊತ್ತು, ದುಡಿಯಲು ನಿಮಗೆ ಸ್ವಂತ ಹೊಲವಿಲ್ಲ, ಉದ್ಯೋಗವಿಲ್ಲ. ಇನ್ನೊಬ್ಬರಲ್ಲಿ ದುಡಿಯಬೇಕಂದರ ಕೈಯಲ್ಲಿ ಉಪಕರಣಗಳೂ ಇಲ್ಲ. ಅವನ್ನು ರಾಜ್ಯಭಂಡಾರದಿಂದ ಪೂರೈಸತೀವಿ. ಸಾಮೂಹಿಕವಾಗಿ ದುಡಿದು, ಸಾಮೂಹಿಕವಾಗಿ ಉಣ್ಣೂದನ್ನೂ ಕೆಲವರಿಗೆ ಕಲ್ಪಿಸತೀವಿ.

ಪ್ರಜೆ ೨ : ಇದಕ್ಕ ನಮ್ಮ ಒಪ್ಪಿಗಿ ಅದ. ಆದರ ತಕ್ಷಣ ಬದುಕಲು ?

ಬಸವಣ್ಣ : ಹೌದು. ರಾಜ್ಯದ ಮೂಲಸದಸ್ಯರಾದ ನಿಮ್ಮ ಪ್ರಾಥಮಿಕ ಆವಶ್ಯಕತೆ ಪೂರೈಸೂದು ರಾಜ್ಯದ ನೈತಿಕ ಹೊಣೆ ಆಗ್ಯಾದ. ಆದುದರಿಂದ ನಿಮಗ ವಾಸಿಸಲು ಒಂದು ಮನಿ, ಮರ್ಯಾದಿ ಮುಚ್ಚಿಕೊಳ್ಳಲು ಒಂದಿಷ್ಟು ಬಟ್ಟೆ ಇತ್ಯಾದಿ ಮೊದಲ ಸಲ ಭಂಡಾರದಿಂದ ಪೂರೈಸತೀವಿ.

ಪ್ರಜೆ ೧ : ರಾಜ ಸುಮ್ಮನಿರ್ತಾನ ? ಅವನ ಭಂಡಾರ ನಮಗಾಗಿ ಬಳಸಿದರ ?

ಬಸವಣ್ಣ : ರಾಜ್ಯಭಂಡಾರ ರಾಜನದಲ್ಲ. ಪ್ರಜೆಗಳಾದ ನಿಮ್ಮದು. ನಿಮಗರಿಯದಂತೆ ಅದನ್ನು ನೀವು ಬೆಳೆಸೀರಿ. ಹೀಗಾಗಿ ನಾಳೆ ಬಂದು ಮನೆಯ ಜಾಗ - ಹೊಲ ಪಡೆಯಿರಿ, ವೃತ್ತಿ-ಉಪಕರಣಗಳನ್ನು ಒಯ್ಯಿರಿ. ಈಗ ಸಧ್ಯದ ಆವಶ್ಯಕತೆ ನೀಗಿಸಿಕೊಳ್ಳುವುದಕ್ಕಾಗಿ ಒಂದಿಷ್ಟು ಬಟ್ಟೆ, ಒಂದಿಷ್ಟು ಹಣ ಹಿಡೀರಿ. (ಎಲ್ಲರಿಗೂ ಹಂಚಲಾಗುವುದು. ಪಡೆದ ಪ್ರಜೆಗಳು ಹಿಂದಿರುಗುತ್ತಾರೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ"ಎಂಬ ಧ್ಯೇಯ ವಾಕ್ಯ ಪದೇ ಪದೇ ಕೇಳಿಸುತ್ತದೆ).

❖❖

ದೃಶ್ಯ - ೨೧

(ಬಸವಣ್ಣನವರ ಮಹಾಮನೆ)

ದನಗಾಹಿ : (ಓಡಿಬಂದು) ಒಡೆಯಾ ಒಡೆಯಾ, ಮಹಾಮನಿಯ ಆಕಳು, ಮಹಾಮನಿಯ ಆಕಳು....

ಬಸವಣ್ಣ : ಏನು ? ಏನಾಯ್ತು ?

ದನಗಾಹಿ : ಮೇಯತಿದ್ದ ನಮ್ಮ ಆಕಳ ವೈರಿಗಳು ಸೆರೆಹಿಡಿದುಕೊಂಡು ಹೋದ್ರು. ಅವನ್ನ ಬಿಡಿಸಿಕೊಳ್ಳಬೇಕು, ಇಲ್ಲ ಸತ್ತು ವೀರಸ್ವರ್ಗವೇರಬೇಕಂತ ಹೋರಾಡಿದೆವು. ಆದರ ನಮ್ಮನ್ನೆಲ್ಲ ಹೊಡೆದು, ಗಾಯಗೊಳಿಸಿ ಅವುಗಳನ್ನು ಒಯ್ದೇ ಬಿಟ್ರು.

ಬಸವಣ್ಣ : ಒಯ್ದೇ ಬಿಟ್ರ? ತಡೀರಿ. (ಕೊಟ್ಟಿಗೆಗೆ ಹೋಗಿ, ಕರುಗಳನ್ನು ಬಿಚ್ಚಿ ಹಿಡಿದುಕೊಂಡು ಬಂದು) ಈ ಕರುಗಳನ್ನೂ ಅವರಿಗಿ ಕೊಟ್ಟು ಬರ್ರಿ, ಇವುಗಳ ತಾಯಿ ಮರುಗಬಾರದು, ಪಾಪ.

ದನಗಾಹಿ : ಒಡೆಯಾ, ಇದೆಂಥಾ ರೀತಿ ?

ಬಸವಣ್ಣ : ಇದೇ ಸರಿಯಾದ ರೀತಿ. ಹಾಲ ನಾವು ಉಂಡರೇನು ? ಅವರು ಉಂಡರೇನು? ಕೂಡಲ ಸಂಗಮದೇವ ಏಕೋಭಾವ.

ದನಗಾಹಿ : ಹಾಗಲ್ಲ ಒಡೆಯಾ, ಸೈನ್ಯ ತಗೊಂಡು ಹೋಗಿ ಹೋರಾಡಿ ಹಸು ಬಿಡಿಸಿ ತರಬೇಕು, ಇಲ್ಲವೆ ಸತ್ತು ವೀರ ಸ್ವರ್ಗ ಸೇರಬೇಕು.

ಬಸವಣ್ಣ : (ಸಿಟ್ಟಿನಿಂದ) ಅದು ಅರ್ಥ ಇಲ್ಲದ ಆಚರಣೆ. ಎಲ್ಲಿದೆ ವೀರಸ್ವರ್ಗ ? ಒಂದು ಪ್ರಾಣಿಗಾಗಿ ನೂರಾರು ಜನ ಪ್ರಾಣ ಕಳೆದುಕೊಳ್ಳೂದು, ಅವರ ಕುಟುಂಬ ಅನಾಥವಾಗೂದು...

ದನಗಾಹಿ : ಪ್ರಭೂ, ಬ್ರಾಹ್ಮಣರ ಹಾಂಗ ಗೋವುಗಳೂ ದೇವರು. ಹೋರಾಡಿ ಅವನ್ನು ಮರಳಿ ತರಬೇಕಂತ ನಮ್ಮ ಧರ್ಮ ಹೇಳ್ತದ.

ಬಸವಣ್ಣ : ಧರ್ಮ, ಧರ್ಮ, ಧರ್ಮ. ಯಾರು ಸೇರಿಸಿದ್ರು ಇವುಗಳನ್ನು ಧರ್ಮದೊಳಗ? ಅರ್ಥವಿಲ್ಲದ ವೈದಿಕ ಆಚರಣೆಗಳು, ನನಗ ಸಮ್ಮತ ಇಲ್ಲ. ಕರ ಹೊಡೆದುಕೊಂಡು ಹೋಗಿ ಅವರಿಗೇ ಕೊಟ್ಟುಬಿಡ್ರಿ. (ದನಗಾಹಿಗಳು ಕರುಗಳನ್ನು ಹೊಡೆದುಕೊಂಡು ಹೋಗುತ್ತಾರೆ. ಅಷ್ಟರಲ್ಲಿ ಮಹಾಮನೆಗೆ ಕೆಲಸದ ಉಪಕರಣ ಹೊತ್ತ ೧೦-೧೫ ಜನ ಜಂಗಮರ ಪ್ರವೇಶ. ಹೊಸ್ತಿಲಲ್ಲಿಯೇ ಪಾದಕ್ಕೆ ನೀರು ಸುರುವಿ ಬಸವಣ್ಣ ನಮಸ್ಕರಿಸುತ್ತಾನೆ).

ಜಂಗಮ ೧ : (ದೂರ ಸರಿದು) ಏನು ಬಸವಣ್ಣನವರs, ನೀವು ಮಹಾಮಂತ್ರಿಗಳು, ಮೇಲಾಗಿ ಹುಟ್ಟಾ ಹಾರೂರು, ನಮ್ಮ ಪಾದ ಮುಟ್ಟೂದs?

ಬಸವಣ್ಣ : ನಾನು ಹಾರುವ ಅಂದರ ಕೂಡಲಸಂಗಯ್ಯ ನಗತಾನ. ನಾನು ಬ್ರಾಹ್ಮಣ ಅಲ್ಲ, ನೀವು ಬ್ರಾಹ್ಮಣೇತರರಲ್ಲ. ಈ ಅಸಮಾನತೆ ದೂರ ಮಾಡೂದಕ್ಕಾಗಿಯೇ ಈ ಪಾದಪೂಜೆ. ಇದು, ಒಂದು ಜೀವ ಇನ್ನೊಂದು ಜೀವಕ್ಕ ತೋರೂ ಗೌರವವೂ ಹೌದು. ನನ್ನ ಸಾಮಾಜಿಕ ಸಂವಿಧಾನದಾಗ ಬ್ರಾಹ್ಮಣರೂ ಇಲ್ಲ, ಬ್ರಾಹ್ಮಣೇತರರೂ ಇಲ್ಲ. ನಾವೆಲ್ಲ ಮಾನವರು, ಸಮಾನರು.

ಜಂಗಮ ೨ : ಅಲ್ಲ, ನೀವು ಆಳುವವರು, ನಾವು ಆಳಾಗಿರುವವರು. ಒಡೆಯರಿಗಿ ಆಳು ಗೌರವ ತೋರಬೇಕು, ಅದನ್ನು ಬಿಟ್ಟು ಒಡೆಯರೇ ಆಳುಗಳನ್ನು ಗೌರವಿಸೂದ? ಪ್ರಭುಗಳು ಈ ರೀತಿ ಮಾಡಬಾರದು.

ಬಸವಣ್ಣ : (ನಕ್ಕು) ಯಾರು ಪ್ರಭು ? ಯಾರು ಸೇವಕರು? ನೀವೇ ಪ್ರಭು, ನಾವು ಸೇವಕರು. ದುರ್ದೈವ, ನಮ್ಮ ರಾಜನೀತಿ ತಿರುವು ಮುರುವು ಆಗ್ಯಾದ.

ಜಂಗಮ ೩ : ಹಾಗಾದರ ಬಿಜ್ಜಳ ಮಹಾರಾಜ ?

ಬಸವಣ್ಣ : ಅವರು ಇನ್ನೂ ದೊಡ್ಡ ಸೇವಕರು.

ಜಂಗಮ ೩: ಹಾಂ. ಇದೆಂಥ ಮಾತ?

ಬಸವಣ್ಣ: ಇದೇ ಸರಿಯಾದ ಮಾತ. ಬರ್ರಿ, ಒಳಗ ಹೋಗಿ ಪ್ರಸಾದ ಸ್ವೀಕರಿಸಿರಿ. (ಒಳಗೆ ಹೋಗುತ್ತಾರೆ. ಅಷ್ಟರಲ್ಲಿ ಪ್ರಸಾದ ಸ್ವೀಕರಿಸಿದ ಕೆಲವು ಪ್ರಜೆಗಳು ಹೊರಗೆ ಬರುತ್ತಾರೆ. ಅವರನ್ನು ಉದ್ದೇಶಿಸಿ) ದುಡಿಯುವ ನೀವು ನನ್ನ ದೇವರು. ನಿಮ್ಮಂಥವರ ಆಗಮನದಿಂದ ನನ್ನ ಮನಿ ಮಹಾಮನಿಯಾಗ್ತ ಇದೆ.

ಜಂಗಮ ೪ : ಏನು ಬಸವಣ್ಣನವರೆ, ನಾವು ದೇವರs ?

ಬಸವಣ್ಣ : ಖಂಡಿತ, ನೀವು ದೇವರು. ಭಾವಶುದ್ಧಿ ಉಳ್ಳ ನಿಮ್ಮ ಕಾಯ ಕೈಲಾಸ. ನಿಮ್ಮ ಕಾಯಕವೂ ಕೈಲಾಸ.

ಜಂಗಮ ೧ : ನಮಗ ಏನೊಂದೂ ಅರ್ಥವಾಗ್ತ ಇಲ್ಲ.

ಬಸವಣ್ಣ : ಅರ್ಥವೇನು ಬಂತು ? ಆಚರಿಸ್ತ ಇರುವಿರಿ. ಮೈ ಅಷ್ಟನ್ನೇ ಅಲ್ಲ, ಮನಸ್ಸನ್ನೂ ದುಡಿಸೂದು, ತಾವು ಬದುಕಲು ಅಲ್ಲ, ಸಮಾಜ ಬದುಕಲು ದುಡಿಯೂದು ಕಾಯಕ.

ಜಂಗಮ ೧ : ನಮ್ಮಲ್ಲಿ ಬಹಳ ಜನ ಕುಂಬಾರ, ಕಂಬಾರ, ಮಡಿವಳ, ಸಮಗಾರ, ಡೋಹರ, ನಾವಿದ ಕೆಲಸ ಮಾಡ್ತಾರ. ನಮ್ಮದು ಕೀಳು ಕೆಲಸ ಅಂತ ಹೇಳ್ತಾರ.

ಬಸವಣ್ಣ : ವ್ಯಕ್ತಿ ವ್ಯಕ್ತಿಗಳಲ್ಲಿ ಮೇಲು-ಕೀಳು ಇಲ್ಲ. ಹಾಗೇ ವೃತ್ತಿ ವೃತ್ತಿಗಳಲ್ಲಿಯೂ ಮೇಲು-ಕೀಳುಗಳಿಲ್ಲ. ಶ್ರದ್ಧೆಯಿಂದ ಮಾಡಿದ ಸಮ್ಮಗಾರಿಕೆ, ಶ್ರದ್ಧೆಯಿಲ್ಲದೆ ಮಾಡಿದ ಪೂಜೆಗಿಂತ ಶ್ರೇಷ್ಠ. ಹೀಗಾಗಿ ಅವರವರ ಮನೆತನದ ವೃತ್ತಿ ಅಥವಾ ಅವರಿಗೆ ಇಷ್ಟವಾದ ವೃತ್ತಿಗಳನ್ನು ಕಾಯಕವನ್ನಾಗಿ ಪರಿವರ್ತಿಸಿಕೊಂಡವರೆಲ್ಲರೂ ಭೂಮಿಯ ಮೇಲಿನ ದೇವರು.

ಜಂಗಮ ೨ : ಹಾಂ ! ಬ್ರಾಹ್ಮಣರು ತಾವು ಮಾತ್ರ ಭೂಮಿಯ ಮೇಲಿನ ದೇವರು, ಮಿಕ್ಕವರು ಪಾಪಿಗಳು, ನರಕಿಗಳು ಅಂತ ಹೇಳ್ತಾರ.

ಬಸವಣ್ಣ : ಪಾಪ, ನರಕ, ಇವೆಲ್ಲ ಭಯ ಹುಟ್ಟಿಸುವ ಹುಸಿ ಕಲ್ಪನೆಗಳು. ಭಯ ಹುಟ್ಟಿಸಿ ಜನರನ್ನು ಶೋಷಿಸುವ ಕಪಟವಿಚಾರಗಳು. ಇವುಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ 'ಆಚಾರವೇ ಸ್ವರ್ಗ, ಅನಾಚಾರವೇ ನರಕ"- ಈ ಭಾವದಿಂದ ಬದುಕಬೇಕು, ಕಾಯಕ ಮಾಡಬೇಕು. ಈ ಕಾಯಕದ ಸಾರ್ಥಕತೆ ಇರೂದು ಜಂಗಮ ದಾಸೋಹ ಮಾಡುವಲ್ಲಿ.

ಜಂಗಮ ೩ : ಅಂದರ ದುಡಿದು ಗಳಿಸಿದ್ದರಲ್ಲಿ ಒಂದಿಷ್ಟು ದಾನ ಮಾಡಬೇಕಲ್ಲs?

ಬಸವಣ್ಣ : ಅಲ್ಲ, ದಾಸೋಹಮಾಡಬೇಕು. ದಾನ ಬ್ಯಾರೆ, ದಾಸೋಹ ಬ್ಯಾರೆ. ನಮ್ಮ ಒಡೆತನದ ವಸ್ತು ಇನ್ನೊಬ್ಬರ ಒಡೆತನಕ್ಕ ಒಪ್ಪಿಸೂದು ದಾನ. ವಸ್ತುವಿನ ಮ್ಯಾಲ ನನ್ನ ಒಡೆತನವೂ ಇಲ್ಲ, ನಿನ್ನ ಒಡೆತನವೂ ಇಲ್ಲ, ದೇವರ ಒಡೆತನ ಅದ ಅಂತ ಭಾವಿಸಿ, ಅದನ್ನು ಇನ್ನೊಬ್ಬನಿಗೆ ವಿನಿಯೋಗಿಸೂದು, ದಾಸೋಹ. ಇಲ್ಲಿ ಸಂಗ್ರಹಕ್ಕ ಅವಕಾಶವಿಲ್ಲ. ಸಂಗ್ರಹಿಸದಿದ್ದರ ನಾವೆಲ್ಲ ಸುಖವಾಗಿ ಬಾಳತೀವಿ, ಭಂಡಾರವೂ ಸಮೃದ್ಧವಾಗಿ ಬೆಳೀತದ.

ಜಂಗಮರು : ನಾವೆಲ್ಲ ಈ ಆದರ್ಶ ಬದುಕತೀವಿ. ಬಸವಣ್ಣಾ, ಹೋಗಿಬರುತೀವಿ. (ಪರಸ್ಪರ ಕೈಮುಗಿಯುತ್ತಾರೆ. ವಿವಿಧ ಕೃಷಿ ಹಾಗೂ ಕೈಗಾರಿಕೆಗಳ ದೃಶ್ಯ)

❖❖

ದೃಶ್ಯ -೨೨

(ಅನುಭವ ಮಂಟಪ, ಎಲ್ಲ ಶರಣರೂ ನೆರೆದಿದ್ದಾರೆ)

ಮಾಚಿದೇವ : ಶರಣರೇ, ಶ್ರಮ ನಮಗ ಬಹಳ ದೊಡ್ಡ ಪಾಠವಾಗಿ ಪರಿಣಮಿಸ್ಯಾದ. ದುಡಿಯುವವನ ಮನಸ್ಸು ಶುದ್ಧ ಆಗಿರ್‍ತದಂತ ನಮಗ ಮನವರಿಕೆಯಾಗ್ಯಾದ. ಇದರಿಂದ ಕಲ್ಯಾಣದಾಗ "ಶ್ರಮಸಂಸ್ಕೃತಿ"ರೂಪಗೊಳ್ತ ಇದೆ.

ಬಸವಣ್ಣ : ಹೌದು, ಶ್ರಮವನ್ನು ನಾವೆಲ್ಲ ದೈವೀಕರಿಸಿಕೊಳ್ಳುವಲ್ಲಿ ನಿರ್ಮಾಣವಾಗಿರುವ 'ಕಾಯಕತತ್ವ'ದ ಜೊತೆ "ದಾಸೋಹತತ್ವ"ವೂ ಬೆಳದದ. 'ನಾನು ದುಡಿಯಬೇಕು. ನಾವು ಉಣ್ಣಬೇಕು' ಎಂಬ ತತ್ವದಿಂದಾಗಿ ಸಮಾಜದಾಗ ಸುಖ ಸಂತೃಪ್ತಿ ನೆಲೆಯೂರತೊಡಗ್ಯಾದ. ನಮ್ಮದು "ಕಾಯಕ -ದಾಸೋಹಧರ್ಮ'ವೆಂಬ ಚಿತ್ರ ತಾನಾಗಿಯೇ ಆಕಾರ ಪಡಿಯತೊಡಗ್ಯಾದ.

ಮಧುವಯ್ಯ : ಗುರುವಿಗಿ "ತನು ದಾಸೋಹ", ಲಿಂಗಕ್ಕ "ಮನ ದಾಸೋಹ"ವೆಂಬ ಹಳೆಯ ತತ್ವ ನಂಬಿದ ನಾವು, ಜೊತೆಗೆ ಜಂಗಮಕ್ಕ 'ಧನ ದಾಸೋಹ"ವೆಂಬ ಹೊಸ ತತ್ವ ಅಸ್ತಿತ್ವಕ್ಕೆ ತಂದೆವು. ಈ "ಅರ್ಥಮೂಲ ಸಿದ್ಧಾಂತ'ದಿಂದಾಗಿ ಸಮಾಜದಾಗ ಶ್ರೀಮಂತ-ಬಡವ ಎನ್ನುವ ವರ್ಗಭೇದ ವ್ಯವಸ್ಥೆ ಸಡಿಲಾಗ್ತ ನಡದದ.

ಮಾಚಿದೇವ : ಈ ವರ್ಗಭೇದ ಅಷ್ಟೇ ಯಾಕ? ಇಷ್ಟಲಿಂಗತತ್ವ ಎಲ್ಲರಿಗೂ ಅನ್ವಯಿಸಿದ ಕಾರಣ, ವರ್ಣಭೇದ ವ್ಯವಸ್ಥೆ ನಾಶಪಡಿಸುವ ಒಂದು ಪರ್ಯಾಯ ಪ್ರಯೋಗ, ಇಲ್ಲಿ ತಾನಾಗಿಯೇ ತೆರೆದುಕೊಳ್ಳತಾ ಇದೆ.

ಬಸವಣ್ಣ : ಹೌದು, ಆದರ ಇನ್ನೊಂದು ಹೊಸ ಜಾತಿಯನ್ನಾಗಿಸುವ ಅಪಾಯವೂ ಈ ಇಷ್ಟಲಿಂಗದಲ್ಯಾದ. ಆದುದರಿಂದ ಅಂತರಾತ್ಮನ ಆರಾಧನೆಯೆಂಬ ಅರ್ಥದ ಮೇಲೆ ಒತ್ತು ಬೀಳೂ ಹಾಂಗ ಈ ಲಿಂಗತತ್ವ ಬೆಳೆಸಬೇಕು.

ನಾಗಲಾಂಬಿಕೆ : ಇದು ಖಂಡಿತ ಒಪ್ಪಬೇಕಾದುದೇ. ಇನ್ನೊಂದು ಮಾತು, ಮಹಿಳೆಯರು ನಮ್ಮೊಂದಿಗೆ ಇನ್ನೂ ತೀವ್ರ ಹೆಜ್ಜೆ ಹಾಕಬೇಕಾಗ್ಯಾದ.

ಬಸವಣ್ಣ : ಇದು ಸ್ವಲ್ಪ ನಿಧಾನವಾಗೂದು ಸಹಜ. "ಸತಿ ಭಕ್ತೆಯಾದರೆ ಹೊಲೆಗಂಜಲಾಗದು" ಎಂಬ ನಮ್ಮ ತತ್ವ ಕಾರಣವಾಗಿ, ಸ್ತ್ರೀಯರಲ್ಲಿ ತಾನು 'ಅಸ್ಪೃಶ್ಯಳಲ್ಲ" ಎಂಬ ವಿಶ್ವಾಸ

ಬೆಳೀತಾ ನಡದದ. ಅನುಭವ ಮಂಟಪದ ಸಂಪರ್ಕ ಈ ಆತ್ಮವಿಶ್ವಾಸವನ್ನು ಇನ್ನೂ ಬೆಳಸತಾ ಇದೆ.

ಮಾಚಿದೇವ : ಹೌದು, ಈ ಅನುಭವ ಮಂಟಪ ನಾವೆಲ್ಲ ಒಂದು ಎನ್ನುವ ಭಾವ ಬೆಳಿಸ್ಯಾದ. ಅರ್ಚಕರ ದಬ್ಬಾಳಿಕಿಗಿ ದಾರಿಮಾಡಿಕೊಟ್ಟ ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿ, ಈ ಹಿಂದೆ ಆಚಾರ್ಯರ ಮಠಸಂಸ್ಕೃತಿ ಅಸ್ತಿತ್ವಕ್ಕ ಬಂತು. ಈಗ ಆಚಾರ್ಯರ ದಬ್ಬಾಳಿಕಿಗಿ ದಾರಿಮಾಡಿಕೊಟ್ಟ ಈ ಮಠ ಸಂಸ್ಕೃತಿಯನ್ನು ನಿರಾಕರಿಸಿ, ಅದರ ಸ್ಥಾನದಾಗ ನಾವು ಅಸ್ತಿತ್ವಕ್ಕ ತಂದ ಈ "ಅನುಭವ ಮಂಟಪ" ನಮ್ಮಲ್ಲಿ ಸಮೂಹ ಸಂಸ್ಕೃತಿಯನ್ನು, ಸಂಘಟನೆಯನ್ನು ಬೆಳಸತಾ ಇದೆ.

ಬಸವಣ್ಣ : ಇಲ್ಲಿ ಜರುಗತಾ ಇರೂ ಸಾಮಾಜಿಕ ಮತ್ತು ಧಾರ್ಮಿಕ ಚರ್ಚೆಗಳು, ನಮಗರಿಯದ ಹಾಂಗ ಸಿದ್ಧಾಂತಗಳಾಗಿ ರೂಪಗೊಳ್ಳತಾ ಇವೆ. ಈ ಸಿದ್ಧಾಂತ ಜನರಿಗೆ ಮುಟ್ಟಿಸಬೇಕೆಂಬ ನಮ್ಮ ಪ್ರಾಮಾಣಿಕ, ಉತ್ಕಟ 'ಮಾತು' ವಚನ'ಕೃತಿ'ಯಾಗಿ ತುಂಬ ಪರಿಣಾಮಕಾರಿ ಕೆಲಸ ಮಾಡತಾ ಇದೆ.

ಮಾಚಿದೇವ : ಖಂಡಿತವಾಗಿಯೂ, ಈ ಮೊದಲು ರಾಜರ ಸ್ತುತಿಗಿ ಬಳಸುವ ಮೂಲಕ, ಮಾತು ಮಲಿನವಾಗಿತ್ತು; ಭಾಷೆ ಭವಿಯಾಗಿತ್ತು. ಈಗ ಜನಕಲ್ಯಾಣದ ಉಪಕರಣವನ್ನಾಗಿ ಬಳಸುವ ಮೂಲಕ ಮಾತು ತನ್ನ ಮಾಲಿನ್ಯವನ್ನು ಕಳೆದುಕೊಳ್ಳತಾ ಇದೆ; ಅದರ ದುರ್ಬಳಕೆ ತಪ್ಪತಾ ಇದೆ.

ಮಧುವಯ್ಯ : ಹೌದು, "ಲಿಂಗವಿಲ್ಲದ ಅಂಗ ಭವಿ, ಮುಟ್ಟಲಾಗದು, ಲಿಂಗವಿಲ್ಲದ ಮಾತು ಸೂತಕ ಕೇಳಲಾಗದು" ಎಂಬ ನಿಮ್ಮ ಧೋರಣೆಯಿಂದಾಗಿ ವಚನಗಳ ಭಾಷೆಯ ಬಳಕೆ ಪವಿತ್ರ, ಶೈಲಿ ಸರಳ, ಧೋರಣೆ ಜನಪರ - ಅಂತ ಎಲ್ಲರಿಗೂ ಮನವರಿಕ್ಯಾಗ್ಯಾದ. ಎಲ್ಲರೂ ಅದನ್ನು ಪ್ರೀತಿಸತಾ ಇದಾರ.

ನಾಗಲಾಂಬೆ : ಕೆಲವರು ಅದನ್ನು ಒಳಗೊಳಗs ದ್ವೇಷಿಸತಾ ಇದಾರ. ಈ ವರೆಗಿನ ಧಾರ್ಮಿಕ ಸಾಹಿತ್ಯಕ್ಕಿಂತ ಭಿನ್ನವಾಗಿ ಇದು ಸಾಮಾಜಿಕ ಬದಲಾವಣೆಯನ್ನೂ ಪ್ರತಿಪಾದಿಸೂದರಿಂದ, ಸಮಾಜದಾಗ ಬೇರುಬಿಟ್ಟರೂ ಪುರೋಹಿತವರ್ಗದವರು, ಆಡಳಿತವರ್ಗದವರು ಈ ಸಾಹಿತ್ಯದ ಬಗ್ಗೆ ಅಸೂಯೆ ವ್ಯಕ್ತಪಡಿಸತಾ ಇದಾರ.

ಮಾಚಿದೇವ : ಹೌದು, ಇದನ್ನು ನಾನೂ ಗಮನಿಸೀನಿ. ಮಾನವೀಯ ಸಂದೇಶಕ್ಕಾಗಿ ಸಾಹಿತ್ಯ ನಿರ್ಮಿಸೂದು ಬ್ಯಾರೆ. ಸಾಮಾಜಿಕ ನ್ಯಾಯಕ್ಕಾಗಿ ಸಾಹಿತ್ಯ ನಿರ್ಮಿಸೂದು ಬ್ಯಾರೆ. ವಚನ ಸಾಹಿತ್ಯ ಸಾಮಾಜಿಕ ನ್ಯಾಯವನ್ನೂ ಪ್ರತಿಪಾದಿಸೂದರಿಂದ ಪಟ್ಟಭದ್ರ ಸಮಾಜ ಸಿಟ್ಟಾಗೂದ ಸಹಜ.

ಬಸವಣ್ಣ : "ಆರು ಮುನಿದು ನಮ್ಮನೇನು ಮಾಡುವರು?" ಮಾಚಯ್ಯಾ. ನಮ್ಮ ವಿಚಾರಶುದ್ಧ, ಆಚಾರಶುದ್ಧ, ಅಭಿವ್ಯಕ್ತಿ ಶುದ್ಧ ಇದ್ದರೆ ಸಾಕು. ಈ ವಚನಸಾಹಿತ್ಯವನ್ನು ನಮ್ಮ ಚಳುವಳಿಯ ಒಂದು ದೊಡ್ಡ ಅಸ್ತ್ರವನ್ನಾಗಿ ಬೆಳೆಸಬಹುದು.

ನಾಗಲಾಂಬಿಕೆ : ಈಗ ಅನುಭವಮಂಟಪದಾಗ ಅಕ್ಷರ ಚಳುವಳಿ ಅಸ್ತಿತ್ವಕ್ಕ ಬಂದು, ನೂರಾರು ಜನ ಶರಣ-ಶರಣೆಯರು ವಚನ ಬರೀತಾ ಇದ್ದಾರ. ಇನ್ನ ಮ್ಯಾಲ ಇವನ್ನು ಪ್ರತಿಮಾಡುವ, ತಾಳೆಗರಿ ಕಟ್ಟು ಸಿದ್ಧಪಡಿಸುವ, ಸರಿಯಾಗಿ ರಕ್ಷಿಸುವ ಒಂದು ದೊಡ್ಡ ವ್ಯವಸ್ಥೆಯನ್ನೇ ನಾವು ಆರಂಭಿಸಬೇಕಾಗ್ಯಾದ.

ಮಾಚಿದೇವ : ಜೊತೆಗೆ ಓದೂದು, ಓದಿ ಹೇಳಿ ಜನರೊಳಗ ಜಾಗೃತಿಯನ್ನುಂಟು ಮಾಡೂದು, ವಚನಕಟ್ಟು ಬ್ಯಾರೆ ಬ್ಯಾರೆ ಪ್ರದೇಶಗಳಿಗೆ ಸಾಗಿಸೂದೂ ಅವಶ್ಯ ಅದ. ಆಗ ಈ ವಚನಗಳು ಅನುಭವಮಂಟಪದ ಸಿದ್ಧಾಂತಗಳ ಪ್ರತಿನಿಧಿಗಳ ಹಾಂಗ ದೂರ ದೂರ ಹೋಗಿ, ವ್ಯಕ್ತಿಯನ್ನು, ಸಮಾಜವನ್ನು ತಿದ್ದೂ ಕೆಲಸಮಾಡತಾವ.

ಬಸವಣ್ಣ : ಒಳ್ಳೇ ಸಲಹೆ. "ಅನುಭವಮಂಟಪ" ವಿಚಾರ-ಆಚಾರಗಳ ಮಂಟಪವಷ್ಟೇ ಅಲ್ಲ, ಸಾಹಿತ್ಯಮಂಟಪವಾಗಿಯೂ ಬೆಳೆಯೂ ಹಾಂಗ ನಾವೆಲ್ಲ ನೋಡಿಕೊಳ್ಳೋಣ.

❖❖

ದೃಶ್ಯ - ೨೩

(ಬಿಜ್ಜಳನ ಆಸ್ಥಾನ. ಅಧಿಕಾರಿಗಳು, ದ್ವಿಜರು, ಶಿವಾಚಾರ್ಯರು ಆಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. "ಸ್ವಸ್ತಿ ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ, ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಡಮರುಗತೂರ್ಯನಿರ್ಘೋಷಣ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್" ಎಂಬ ಘೋಷಣೆಯೊಂದಿಗೆ ಬಿಜ್ಜಳ ಒಳಗೆ ಬರುತ್ತಲೇ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿ ಕುಳಿತುಕೊಳ್ಳುತ್ತಾರೆ).

ಬಿಜ್ಜಳ : ಏನು ? ಕೇಶವಭಟ್ಟರ, ವಾಮದೇವ ಶಿವಾಚಾರ್ಯರ ಆಗಮನ?

ಕೇಶವಭಟ್ಟ : ಪ್ರಭೂ, ಎಲ್ಲ ಗ್ರಾಮಗಳ ಹಾಂಗ ಅಗ್ರಹಾಗಳಿಗೂ ಭಂಡಾರ ಸಚಿವ ಬಸವಣ್ಣ ತೆರಿಗಿ ವಿಧಿಸ್ಯಾನ. ಅವುಗಳಿಗೆ ರಾಜ್ಯದಿಂದ ಸಲ್ಲಬೇಕಾದ ಸಹಾಯಧನವನ್ನೂ ಅರ್ಧದಷ್ಟು ಕಡಿಮೆ ಮಾಡ್ಯಾನ. ಇದರಿಂದ ಅಗ್ರಹಾರಗಳು ತಮ್ಮ ವೈಭವ ಕಳಕೊಂಡು ಸೊರಗ್ತಾ ನಡದಾವ. ವಿಪ್ರರು ವೈದಿಕಕರ್ಮ ಇಲ್ಲದೆ ದಿನ ನೂಕುತಾ ಇದ್ದಾರ.

ವಾಮದೇವ ಶಿವಾಚಾರ್ಯ : ದೇವಾಲಯಗಳೂ ದುಸ್ಥಿತಿಯಲ್ಲ್ಯಾವ. ಚಕ್ರವರ್ತಿಗಳು ಕಟ್ಟಿಸಿದ ಅವು ಮೊದಲಿನ ವೈಭವದಿಂದ ವಂಚಿತ ಆಗ್ಯಾವ. ಭಂಡಾರಿ ಬಸವಣ್ಣ ರಾಜ್ಯದಿಂದ ದೇವಾಲಯಗಳಿಗೆ ಸಲ್ಲಬೇಕಾದ ವಾರ್ಷಿಕ ಹಣ ಬಹಳಷ್ಟು ಕಡಿಮೆಗೊಳಿಸ್ಯಾನ. ಅವನ [illegible]ಲಿಂಗ ಪೂಜಾಕ್ರಮದಿಂದ ದೇವಾಲಯಕ್ಕ ಬರುವ, ಕಾಣಿಕೆ ಸಲ್ಲಿಸುವ ಜನರ ಸಂಖ್ಯೆಯೂ ಕಡಿಮೆ ಆಗ್ಯಾದ.

ಬಿಜ್ಜಳ : ಇದು ವಿಚಿತ್ರ ಆಡಳಿತ. ಅಗ್ರಹಾರಗಳೂ ದೇವಾಲಯಗಳೂ ಸುಖವಾಗಿದ್ದರ, ರಾಜ್ಯಕ್ಕೂ ಸುಖ.

ಕೇಶವಭಟ್ಟ : ರಾಜರಿಗೂ ಸುಖ. ದೇವಾಲಯ, ಅಗ್ರಹಾರ ರಕ್ಷಿಸೂದು ರಾಜಧರ್ಮ. ಇದನ್ನು ನಿರಾಕರಿಸೂದಂದರ ನಿಮ್ಮನ್ನೇ ನಿರಾಕರಿಸಿದ ಹಾಂಗ. ಬಸವಣ್ಣಗ ಜನರೇ ದೇವರು. ನೀವು ಲೆಕ್ಕಕ್ಕೇ ಇಲ್ಲ.

ಬಿಜ್ಜಳ : ಏನು, ನಾನು ಲೆಕ್ಕಕ್ಕೇ ಇಲ್ಲ?

ಕೇಶವ ಭಟ್ಟ : ಇಲ್ಲ; ನೀವು ಪಾಲಿಸತಾ ಬಂದ ಯಜ್ಞ -ಯಾಗ-ದೇವಪೂಜೆ, ದಾನ-ದಕ್ಷಿಣೆ ಇವೆಲ್ಲ ಕ್ರಮೇಣ ನಿಲ್ಲುತ್ತ ನಡದಾವ. ಇದು ಸುಧಾರಣೆಯೇ ? ಹಣದಲ್ಲಿ ಸಮಾನತೆ ಬಂದರ ಕ್ರಮೇಣ ಸಮಾಜದಲ್ಲಿ ಸಮಾನತೆ ತಾನಾಗಿಯೇ ಬರತದಂತ ಹೊಸ ಅರ್ಥನೀತಿ ಹೇಳತಾನ. ಬೀದಿ ಭಿಕಾರಿಗಳಿಗಿ ಬೊಕ್ಕಸದಿಂದ ಹಣದ ಹೋಳೀನಃ ಹರಸ್ಯಾನ.

ಬಿಜ್ಜಳ : ಏನು ? ಬೊಕ್ಕಸದ ಹಣ ?

ಕೇಶವ ಭಟ್ಟ : ಹೌದು, ತುತ್ತ ಕೂಳ ಕಾಣದ ಅವರಿಗಿ ಸುಖಭೋಜನ, ನಮಗೋ ಉಪವಾಸ. ತುಂಡುಬಟ್ಟಿ ಕಾಣದ ಅವರಿಗಿ ದಿವ್ಯದುಕೂಲ. ನಮಗೋ ಇನ್ನೊಂದು ಪಂಚೆಯಿಲ್ಲ. ವಿಪರೀತ ಆಡಳಿತ.

ಮಂಚಣ್ಣ : ನಮ್ಮದೂ ಅದೇ ಸ್ಥಿತಿ. ರಾಜ್ಯದ ಬೊಕ್ಕಸದಿಂದ ನಮಗೆ ಸಲ್ಲತಿದ್ದ ವಾರ್ಷಿಕ ಸಂಬಳ, ಕಾಣಿಕೆ ಅರ್ಧದಷ್ಟು ಕಡಿಮೆಗೊಳಿಸ್ಯಾನ.

ಬಿಜ್ಜಳ : ನನ್ನ ಪರಿವಾರದವರ ವಿಷಯವಾಗಿಯೂ ಹೀಂಗಃ ನಡಕೊಳ್ಳಲು ಆರಂಭಿಸ್ಯಾನಂತ ತಿಳಿದುಬಂದಾದ. ಇದೇನು ಬಸವಣ್ಣನ ಸ್ವಂತ ಆಸ್ತಿಯೇ ? ಕರೆಯಿರಿ ಅವನನ್ನು (ಅಷ್ಟರಲ್ಲಿ ಬಸವಣ್ಣ ಬರುತ್ತಾನೆ).

ಮಂಚಣ್ಣ : ಅದೋ, ಕರೆಸಬೇಕೆನ್ನುವಷ್ಟರಲ್ಲಿ ಬಂದೇಬಿಟ್ಟ.

ಬಸವಣ್ಣ : ನಮಸ್ಕಾರ ಪ್ರಭೂ, ಏನಿದು ? ಆಸ್ಥಾನದಲ್ಲಿ ಇವರೆಲ್ಲ !

ಬಿಜ್ಜಳ : ಇವರೆಲ್ಲ ಯಾರು ಗೊತ್ತ ?

ಬಸವಣ್ಣ : ಗೊತ್ತು. ಅಗ್ರಹಾರಗಳ ಬ್ರಾಹ್ಮಣರು, ಮಠದ ಆಚಾರ್ಯರು, ಆಡಳಿತದ ಅಧಿಕಾರಿಗಳು.

ಬಿಜ್ಜಳ : ಇವರಿಗೆ ಇರುವ ಆರ್ಥಿಕ ಸವಲತ್ತು ಯಾಕ ಕಡಿಮೆ ಮಾಡಿದಿರಿ ?

ಬಸವಣ್ಣ : ಕಡಿಮೆ ಮಾಡಿಲ್ಲ. ಅನ್ಯಾಯವಾಗಿ ಹೆಚ್ಚು ಆಗಿದ್ದುದನ್ನು ಸರಿಪಡಿಸೀನಿ.

ಬಿಜ್ಜಳ : ಯಾರನ್ನು ಕೇಳಿ ಸರಿಪಡಿಸಿದಿರಿ ?

ಬಸವಣ್ಣ : ನನ್ನ ವಿವೇಕವನ್ನು.

ವಾಮದೇವ ಶಿವಾಚಾರ್ಯ : ಅಲ್ಲ, ರಾಜರನ್ನು ಕೇಳಬೇಕು.

ಬಸವಣ್ಣ : ಒಂದೆರಡು ಸಲ ರಾಜರನ್ನು ಕೇಳಿ ನೋಡಿದೆ. ಪ್ರಯೋಜನವಾಗಲಿಲ್ಲ. ಅವರು ನಿಮ್ಮಿಂದ ಪ್ರಭಾವಿತರು. ಹೀಗಾಗಿ ನನ್ನ ವಿವೇಕವನ್ನು ಕೇಳಿ, "ಭಂಡಾರದ ಒಡೆಯ ರಾಜರಲ್ಲ, ಪ್ರಜೆಗಳೆ"ಂದು ಉತ್ತರ ಪಡೆದೀನಿ.

ಕೇಶವ ಭಟ್ಟ : ಬಸವಣ್ಣಾ, ಹಣದ ವಿಷಯವಾಗಿ ಈ ಹೊಸ ಬಗೆಯ ನೀತಿ ಪ್ರಾರಂಭಿಸಿದರ ಈಗಿರುವ ಆರ್ಥಿಕ ವ್ಯವಸ್ಥೇ ಹಾಳಾದೀತು. ಅಷ್ಟೇ ಅಲ್ಲ, ಕೆಟ್ಟೀತು ಕಲ್ಯಾಣ, ಹಾಳಾದೀತು ನೋಡಾ ಬಸವಣ್ಣ.

ಬಿಜ್ಜಳ : ಸಾಕು, ಸಾಕು, ನಾನು ಕಷ್ಟಪಟ್ಟು ಗೆದ್ದಿರುವ ಈ ಕಲ್ಯಾಣದ ಬಗ್ಗೆ ಅಪಶಕುನ ನುಡಿಬ್ಯಾಡರಿ. (ಕಿವಿ ಮುಚ್ಚಿಕೊಳ್ಳುತ್ತಾನೆ, ಅರ್ಥಪೂರ್ಣವಾಗಿ). ನನಗ ಎಲ್ಲಾ ಗೊತ್ತಾಯ್ತು. ಸೂಕ್ತಕಾಲದಾಗ ನಿರ್ಣಯ ತೆಗೆದುಕೊಳ್ಳತೀನಿ. (ಎಂದವನೇ ತಟ್ಟನೇ ಎದ್ದು ಹೋಗುತ್ತಾನೆ. ಎಲ್ಲರೂ ಬೆರಗಾಗುತ್ತಾರೆ. ಸಭೆ, ನಿರ್ಗಮನ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತದೆ).

❖❖

ದೃಶ್ಯ -೨೪

(ಮಹಾಮನೆಯ ಮುಂಭಾಗ, ಜಂಗಮರು ಗುಂಪುಗುಂಪಾಗಿ ಪ್ರವೇಶಿಸುತ್ತಿದ್ದಾರೆ. ದುಡಿದು ದಣಿದಿದ್ದಾರೆ. ಕೃಷಿ, ಬಡಿಗತನ, ಕಂಬಾರಿಕೆ, ಮೊದಲಾದ ಉಪಕರಣ ಹೊತ್ತಿದ್ದಾರೆ. ಬಾಗಿಲು ಮುಂದೆ ಘಟವಾಳಯ್ಯ ನಿಂತು ಬಂದವರನ್ನು ಕೈಮುಗಿದು ಬರಮಾಡಿಕೊಳ್ಳುತ್ತಾನೆ).

ಬಸವಣ್ಣ : (ಹೆಳವನನ್ನು ಹೆಗಲಾಸರೆಯಿಂದ ಕರೆದುಕೊಂಡು ಬಂದು) ಶರಣಾರ್ಥಿ, ಘಟ್ಟಿವಾಳಯ್ಯನವರೇ, ಇಲ್ಲೇಕೆ ? ಒಳಗ ನಡೀರಿ.

ಘಟ್ಟಿವಾಳಯ್ಯ : ಬರತೀನಿ. ನೀವು ನಡೀರಿ. (ಬಸವಣ್ಣ ಒಳಗೆ ಹೋಗುತ್ತಾನೆ. ಮಹಾಮನೆ ಪ್ರವೇಶಿಸುವ ಕೆಲವರನ್ನು ಘಟ್ಟಿವಾಳಯ್ಯ ಮತ್ತೆ ಮತ್ತೆ ಮರಳಿಸುತ್ತಿದ್ದಾನೆ. ಪ್ರತಿಭಟಿಸಿದರವನ್ನು ಒತ್ತಾಯದಿಂದ ಹೊರದೂಡುತ್ತಿದ್ದಾನೆ. ಆಗಾಗ ಗದ್ದಲ, ಘರ್ಷಣೆಯ ವಾತಾವರಣ ನಿರ್ಮಾಣವಾಗುತ್ತಲಿದೆ) ತಡೀರಿ. ಇದು ಭವಿಯ ಮನಿ ಅಲ್ಲ, ಭಕ್ತ ಬಸವಣ್ಣನ ಮನಿ.

ಗುಂಪು : ನಮಗ ಗೊತ್ತು.

ಘಟ್ಟಿವಾಳಯ್ಯ : ಏನು ಗೊತ್ತು? ಇಲ್ಲಿ ಜಂಗಮರಿಗ ಮಾತ್ರ ಪ್ರಸಾದಕ್ಕ ಅವಕಾಶ,

ಗುಂಪು : ಕಾಳಾಮುಖ ಶೈವರೂ, ಶುದ್ಧಶೈವರೂ ಆದ ನಾವೂ ಜಂಗಮರೇ.

ಘಟ್ಟಿವಾಳಯ್ಯ : ಅಲ್ಲ, ನೀವು ಸ್ಥಾವರವ್ಯಕ್ತಿಗಳು. ಜಂಗಮವ್ಯಕ್ತಿಗಳಲ್ಲ.

ಒಬ್ಬ : ನಾನು ಜಂಗಮವ್ಯಕ್ತಿ ಅಲ್ಲ? ನಾನು ಕ್ರಿಯಾಶಕ್ತಿಗಳ ಮಗ ನೀಲಕಂಠಜೀಯ ಇದೀನಿ.

ಇನ್ನೊಬ್ಬ : ನಾನು ಬ್ರಹ್ಮೇಶ್ವರ ಮಠದ ಶಿವಾಚಾರ್ಯ ಸೋಮದೇವ ಇದೀನಿ.

ಮತ್ತೊಬ್ಬ : ನಾನು ಶ್ರೀ ವಿರೂಪಾಕ್ಷೇಶ್ವರ ಮೂಲಸ್ಥಾನದ ಅರ್ಚಕರ ಮಗ ಮಹಾದೇವಸ್ವಾಮಿ ಇದೀನಿ.

ಘಟ್ಟಿವಾಳಯ್ಯ : ಅಯ್ಯಾ, ಸಿಟ್ಟಿಗೆಬ್ಬಿಸಬ್ಯಾಡ್ರಿ ಹೋಗರಿ, ನೀವು ಜಂಗಮರಲ್ಲ.

ಒಬ್ಬ : ನಾವಲ್ಲದ ಮತ್ಯಾರು ಜಂಗಮರು? (ನುಗ್ಗುತ್ತಾರೆ).

ಘಟ್ಟಿವಾಳಯ್ಯ : (ತಡೆದು) ಅಲ್ಲ, ನಿಮ್ಮ ಭಾವನೆ ಜಂಗಮ ಆಗಿಲ್ಲ.

ಇನ್ನೊಬ್ಬ : ಈಗ ಒಳಗ ಹ್ವಾದ ಹೆಳವ ಹೂವಯ್ಯ ಜಂಗಮನೇ ? ರೋಗಿಗಳೂ, ಕುರುಡರೂ, ಕುಂಟರೂ - ಈ ಅಂಗಹೀನರೆಲ್ಲ ಅಶುಭ. ಸಮಾಜಕ್ಕ ಭಾರ. ಇಂಥವರೆಲ್ಲ ಹ್ಯಾಂಗ ಜಂಗಮರು ?

ಘಟ್ಟಿವಾಳಯ್ಯ : ನಾಲಿಗಿ ಸರಿಯಾಗಿ ಬಳಸ್ರಿ.

ಹಾಲ ಕಂದಲು, ತುಪ್ಪದ ಮಡಕೆಯ ಬೋಡು ಮುಕ್ಕೆನಬೇಡ.

ಹಾಲು ಸಿಹಿ, ತುಪ್ಪ ಕಮ್ಮನೆ: ಲಿಂಗಕ್ಕೆ ಬೋನ.

ಕೂಡಲಸಂಗನ ಶರಣರ ಅಂಗಹೀನರೆಂದೆಡೆ ನಾಯಕ ನರಕ.

ಇದು ನಮ್ಮ ಬಸವಣ್ಣನ ನೀತಿ-ನಿಲುವು. ಇವರ ದೇಹ ಊನವಾಗಿರಬಹುದು; ಭಾವ ಜಂಗಮ ಆಗ್ಯಾದ.

ಒಬ್ಬ : ಒಳಗೆ ಹೊರಟಿರುವ ಈ ಮಾದರ ಧೂಳ, ಆ ಬಡಿಗರ ಬಸವ ಇವರ ಭಾವನೆ ಜಂಗಮವೇ?

ಘಟ್ಟಿವಾಳಯ್ಯ : ಹೌದು. ಇವರು ಕಾಯದಲ್ಲಿ ಜಂಗಮರು. ಪ್ರಾಣದಲ್ಲಿ ಜಂಗಮರು, ಭಾವದಲ್ಲಿ ಜಂಗಮರು.

ಒಬ್ಬ : ಅಲ್ಲ, ಅವರು ದುಡಿಯುವ ಕೆಳವರ್ಗದ ಜನ.

ಘಟ್ಟಿವಾಳಯ್ಯ : ಹೋಗಯ್ಯಾ, ಅಲ್ಲಿ ಸಾಮೂಹಿಕವಾಗಿ ದುಡೀತಾರ, ಇಲ್ಲಿ ಸಾಮೂಹಿಕವಾಗಿ ಉಣ್ತಾರ, ನಿಮ್ಮ ಹಾಂಗ ದುಡಿಯದೇ ಉಣ್ಣೂದಿಲ್ಲ.

ಇನ್ನೊಬ್ಬ : ನಾವು ದುಡಿಯಬೇಕೆಂದೇನಿಲ್ಲ. ಯಾರ ಮನ್ಯಾಗಾದರೂ ಊಟ ಮಾಡೂ ಅಧಿಕಾರ ಮಾಹೇಶ್ವರರ ಮಕ್ಕಳಾದ ನಮಗದ.

ಘಟ್ಟಿವಾಳಯ್ಯ : ನೀವು ಜಂಗಮರೇ ಅಲ್ಲ ಅಂತ ಹೇಳುವಾಗ ಮತ್ತ್ಯಾಕ ವಾದಿಸ್ತೀರಿ?

ಇನ್ನೊಬ್ಬ : ನಾವೂ ಇತ್ತೀಚೆ ಲಿಂಗಾಯ್ತರು ಆಗೀವಿ. ನಮಗ ಎದಿ ಮ್ಯಾಲ ಲಿಂಗ ಅದ ನೋಡು, ನಿನಗೆ ಮತ್ತೇನು ಸಾಕ್ಷಿಬೇಕು ? (ಕೆಂಪುವಸ್ತ್ರದಲ್ಲಿ ಕಟ್ಟಿಕೊಂಡ ಎದೆಯ ಮೇಲಿನ ಲಿಂಗ ತೋರಿಸುತ್ತಾರೆ).

ಘಟ್ಟಿವಾಳಯ್ಯ : ಅಯ್ಯೋ ಅಜ್ಞಾನವೇ, ವಸ್ತ್ರದಾಗ ಲಿಂಗ ಕಟಗೊಂಡ ಮಾತ್ರಕ್ಕ ಜಂಗಮರೇ? (ಎನ್ನುತ್ತ ಬೀದಿಯಲ್ಲಿ ಬಿದ್ದ ಕಲ್ಲನ್ನು ಹೆಗಲ ಮೇಲಿನ ವಸ್ತ್ರದಲ್ಲಿ ಬಂಧಿಸಿ, ಕೊರಳಿಗೆ ಕಟ್ಟಿಕೊಳ್ಳುತ್ತ) ನೋಡ್ರಿ. ನೋಡ್ರಿ. ನನ್ನ ಕೊರಳ ಈ ಕಲ್ಲು, ನಿಮ್ಮ ಕೊರಳ ಆ ಲಿಂಗ, ಎರಡೂ ಸಮ.

ಗುಂಪು : ಮೂರ್ಖಾ,ನಮ್ಮ ಕೊರಳ ದೇವರನ್ನು ಕಲ್ಲ ಅಂತ ನಿಂದಿಸ್ತೀಯಾ ? (ಒಳಗೆ ನುಗ್ಗುತ್ತಾರೆ).

ಘಟ್ಟಿವಾಳಯ್ಯ : ಮಾಹೇಶ್ವರರು ಅನ್ನೂ ಅಧಿಕಾರದಿಂದ ಅಶನಕ್ಕಾಗಿ ಕಂಡವರ ಮನಿಗಿ ನುಗ್ಗುವ ನಿಮ್ಮನ್ನು ಈ ಮಹಾಮನಿ ನುಗ್ಗಲು ನಾನು ಬಿಡೂದೇ ಇಲ್ಲ. ಪದಾರ್ಥವಾದಿಗಳಿಗೆ ಪ್ರಸಾದ ಸೇವಿಸೂ ಅಧಿಕಾರವಿಲ್ಲ. (ನೂಕುತ್ತಾನೆ. ಗುಂಪು ಕಲ್ಲು ತೂರುತ್ತದೆ, ಬಳಿಕ ಬಡಿಗೆಯಿಂದ ಏಟಿನ ಮೇಲೆ ಏಟು ಹಾಕುತ್ತಾರೆ. ಘಟ್ಟಿವಾಳಯ್ಯ ಪ್ರಜ್ಞೆತಪ್ಪಿ ಬೀಳುತ್ತಾನೆ. ಎಲ್ಲರೂ ಓಡಿ ಹೋಗುತ್ತಾರೆ).

❖❖

ದೃಶ್ಯ - ೨೫

(ಅಶ್ವಾರೋಹಿ ಬಸವೇಶ್ವರ ಆಸ್ಥಾನಕ್ಕೆ ಹೊರಟಿದ್ದಾನೆ. ಸುತ್ತ ಪರಿಮಿತ ಪರಿವಾರ. ಎದುರು ಕಹಳೆ ಹಲಗೆಗಳ ಅಬ್ಬರ. ಇಬ್ಬರು ಸ್ತ್ರೀಯರು ಹೊಸ ಸೀರೆಯುಟ್ಟು ದಂಡಿ-ಕುಂಕುಮ ಧರಿಸಿ, ಬಲಗೈಯಿಂದ ಲಿಂಬೆ ಹಣ್ಣು ತೂರುತ್ತ, ಎಡಗೈಯಲ್ಲಿ ಕನ್ನಡಿ ಹಿಡಿದು ಕುಣಿಯುತ್ತ ಬರುತ್ತಲಿದ್ದಾರೆ. ಹಿಂದೆ ಸುಮಂಗಲಿಯರು ಹಾಡುತ್ತಲಿದ್ದಾರೆ. ಒಬ್ಬಳ ಬಗಲಲ್ಲಿ ಕೂಸುಯಿದೆ. "ಮಾರಸಿಂಗ ದಂಡನಾಯಕರಿಗೆ ವೀರಸ್ವರ್ಗ ಲಭಿಸಲಿ"; "ವೇಳೆವಾಳಿ ಶಂಕಪಯ್ಯನಿಗೆ ವೀರಸ್ವರ್ಗ ಲಭಿಸಲಿ" ಎಂದು ಘೋಷಿಸುತ್ತ ನಡೆದಿದ್ದಾರೆ).

ಬಸವಣ್ಣ : ಏನದು ಗದ್ದಲ ?

ಅಧಿಕಾರಿ : (ಹೋಗಿ ಮರಳಿ ಬಂದು) ನಿನ್ನೆ ಮಾರಸಿಂಗ ದಂಡನಾಯಕರು ಯುದ್ಧದಾಗ ವೀರಸ್ವರ್ಗ ಏರಿದರು. ಅವರ ವೇಳೆವಾಳಿ ವ್ಯಕ್ತಿ ಶಂಕಪಯ್ಯ ಇದೀಗ ರುಂಡ ಕತ್ತರಿಸಿಕೊಂಡು ವೀರಸ್ವರ್ಗ ಏರಿದ. ಈಗ ಅವನ ಇಬ್ಬರೂ ಹೆಂಡಿರು ಸಹಗಮನಕ್ಕಾಗಿ ಉತ್ಸವದೊಂದಿಗೆ ಹೊಂಟಾರ.

ಬಸವಣ್ಣ : ಅಯ್ಯೋ ಕ್ರೂರ ಆಚರಣೆಯೆ ? (ಎಂದವನೇ ಕುದುರೆಯಿಂದ ಇಳಿದು, ಜನರ ಮಧ್ಯೆ ಧುಮುಕುತ್ತಾನೆ).

ಅಧಿಕಾರಿ : ಪ್ರಭೂ, ಇದು ಕ್ರೂರ ಆಚರಣೆ ಅಲ್ಲ. ಪರಂಪರಾಗತವಾಗಿ ನಡೆದುಬಂದ ಪುಣ್ಯ ಆಚರಣೆ. ಒಡೆಯ ಜೀವಂತವಾಗಿರುವಾಗ ಅವನಿಗಿ ಸುಖಸಂತೋಷ ಒದಗಿ ಬರಲೆಂದೋ, ಸತ್ತಾಗ ಅವನು ಸ್ವರ್ಗ ಸೇರಲೆಂದೋ ಜೀವತ್ಯಾಗ ಮಾಡಿಕೊಳ್ಳೂದು ವೇಳೆವಾಳಿ ವ್ಯಕ್ತಿಯ ಕರ್ತವ್ಯ. ಹಾಗೇ ಗಂಡ ಸತ್ತಾಗ ಚಿತೆ ಏರೂದು ಹೆಂಡಂದಿರ ಕರ್ತವ್ಯ.

ಬಸವಣ್ಣ : ಯಾರು ಹೇಳಿದರು ? ಈ ವೇಳೆವಾಳಿ ಮರಣ, ಮಾಸ್ತಿಮರಣಗಳು ಪುಣ್ಯ ಆಚರಣೆ ಅಂತ?

ಅಧಿಕಾರಿ : ಪ್ರಭೂ, ಪುರಾಣಕಾಲದಿಂದ ನಡೆದು ಬಂದ ವೈದಿಕ ಸಂಪ್ರದಾಯಗಳಿವು. ಸಾಮಾಜಿಕ ಮೌಲ್ಯಗಳಿವು.

ಬಸವಣ್ಣ : ಮೌಲ್ಯವಲ್ಲ. ಮೌಲ್ಯದ ಸೋಗುಹಾಕಿದ ಶೋಷಣೆಗಳಿವು. ರಾಜವರ್ಗದಿಂದ ಪ್ರಜೆಗಳ ಶೋಷಣೆ, ಪುರುಷವರ್ಗದಿಂದ ಸ್ತ್ರೀಯರ ಶೋಷಣೆ. (ಎಂದವನೇ, ಬಸವಣ್ಣ ಸ್ತ್ರೀಯರ ಹತ್ತಿರ ಹೋಗುತ್ತಾನೆ). ತಾಯಿಗಳಿರಾ, "ಕೂಡಲಸಂಗಯ್ಯನನೊಲಿಸಲು ಬಂದ ಪ್ರಸಾದಕಾಯವ ಕೆಡಿಸಲಾಗದು." ನಿಮ್ಮ ಪತಿ ಒಡೆಯನಿಗಾಗಿ ರುಂಡ ಕತ್ತರಿಸಿಕೊಂಡುದು ಅಮಾನುಷ ಆಚರಣೆ. ಅವನ ಸಲುವಾಗಿ ನೀವು ಬೆಂಕಿಯಲ್ಲಿ ಬಿದ್ದು ಸಾಯೂದು ಇನ್ನೊಂದು ಅಮಾನುಷ ಆಚರಣೆ.

ಸ್ವರ್ಗ, ಸ್ವರ್ಗಪ್ರವೇಶ ಮೊದಲಾದವು ಹುಸಿಕಲ್ಪನೆ, ಭ್ರಮೆ. (ಕೂಸನ್ನು ಎತ್ತಿಕೊಂಡು) ಈ ಕಂದಮ್ಮನಿಗಾದರೂ ನೀವು ಉಳೀಬೇಕು.

ಜನರು : ಪ್ರಭೂ. ಈಗಾಗಲೇ ಸತಿ ಹೋಗೂದರ ಸಲುವಾಗಿ ಗಾವುಂಡರಿಂದ ದಂಡೆ ಕುಪ್ಪಸ ಪಡೆದೀವಿ. ಒಪ್ಪಿಗಿ ಲಭಿಸ್ಯಾದ.

ಬಸವಣ್ಣ : ರಾಜ್ಯದ ಸಚಿವನಾಗಿ ಈ ಒಪ್ಪಿಗಿ ನಾನು ನಿರಾಕರಿಸತೀನಿ.

ಜನರು : ಪ್ರಭು, ಇದನ್ನು ಬಿಡಲು ಹ್ಯಾಂಗ ಸಾಧ್ಯ ?

ಬಸವಣ್ಣ : ವಾದಿಸಬ್ಯಾಡ್ರಿ. ಈ ಆಚರಣೆಗೆ ನನ್ನ ಒಪ್ಪಿಗೆ ಇಲ್ಲ. ಇನ್ನು ಮುಂದಿನ ದಿನ ಇಂಥ ವೇಳೆವಾಳಿ ಮತ್ತು ಮಾಸ್ತಿ ಆಚರಣೆಗಳಿಗೆ ಈ ರಾಜ್ಯದಲ್ಲಿ ನಿಷೇಧ ಅದ. ನಡೀರಿ. (ಮಾಸ್ತಿ ನಿಲ್ಲುತ್ತದೆ. ಎಲ್ಲರೂ ಮನೆಗೆ ಹಿಂದಿರುಗುತ್ತಾರೆ).

ಅಧಿಕಾರಿ : ಪ್ರಭೂ, ಇಂಥ ಆದೇಶಗಳು ಯೋಗ್ಯವೇ ? ಈಗ ಗಂಡ ಸತ್ತ ಹೆಂಡತಿ ಏನ ಮಾಡಬೇಕು?

ಬಸವಣ್ಣ : ಹೆಂಡತಿ ಸತ್ತರ ಗಂಡ ಏನ ಮಾಡತಾನ ?

ಅಧಿಕಾರಿ : ಮದುವೆಯಾಗತಾನ.

ಬಸವಣ್ಣ : ಹಾಗಿದ್ದರ, ಗಂಡ ಸತ್ತ ಹೆಂಡತಿಯೂ ಮತ್ತೆ ಮದುವೆಯಾಗಬಹುದು ಅಷ್ಟೇ.

ಅಧಿಕಾರಿ : ರುಂಡ ಕತ್ತರಿಸಿಕೊಂಡ ಈ ವೇಳೆವಾಳಿ ಪದ್ಧತಿಯೂ ತ್ಯಾಜ್ಯವೇ?

ಬಸವಣ್ಣ : ಖಂಡಿತವಾಗಿಯೂ ತ್ಯಾಜ್ಯ.

ಅಧಿಕಾರಿ : ಅಂಗದ ಮೇಲಿನ ಸ್ಥಾವರ ಲಿಂಗ ಜಾರಿಬಿದ್ದರ ಶೈವರು ಲಿಂಗದ ವೇಳೆವಾಳಿ ಅಂತ ಪ್ರಾಣಘಾತ ಮಾಡಿಕೊಳ್ಳೂದಿಲ್ಲವೇ ? ಅಲ್ಲಿ ಲಿಂಗನಿಷ್ಠೆ ಅದ, ಇಲ್ಲಿ ರಾಜನಿಷ್ಠೆ ಅದ, ಅಷ್ಟೇ.

ಬಸವಣ್ಣ : ಇಂಥ ಲಿಂಗನಿಷ್ಠೆ, ಇಂಥ ರಾಜನಿಷ್ಠೆ ನನಗ ಸಮ್ಮತ ಇಲ್ಲ. ಲಿಂಗಕ್ಕಾಗಿ ಭಕ್ತ ಪ್ರಾಣತ್ಯಾಗ ಮಾಡಿಕೊಳ್ಳೂದು ಶಿವಭಕ್ತಿಯ ಭ್ರಮೆ. ರಾಜನಿಗಾಗಿ ಪ್ರಜೆ ಪ್ರಾಣತ್ಯಾಗ ಮಾಡಿಕೊಳ್ಳೂದು ರಾಜಭಕ್ತಿಯ ಭ್ರಮೆ. ನಿಜ ಹೇಳಬೇಕಂದರ ರಾಜನಿಗಿಂತ ಶ್ರೇಷ್ಠನಾದವನು ಪ್ರಜೆ. ಅವನೇ ರಾಜ್ಯದ ಮೂಲ ಸದಸ್ಯ. ಮೂಲ ಸಂಪತ್ತು. ಆದುದರಿಂದ ರಾಜನಿಗಿ ಪ್ರಜೆ ವೇಳೆವಾಳಿಯಾಗಬಾರದು, ಪ್ರಜೆಗಳಿಗಿ ರಾಜನೇ ವೇಳೆವಾಳಿಯಾಗಬೇಕು.

ಅಧಿಕಾರಿ : ಅಂದರ ಪ್ರಜೆಗಳಿಗಾಗಿ ರಾಜನು ಪ್ರಾಣತ್ಯಾಗ ಮಾಡಿಕೊಳ್ಳಬೇಕೆ ?

ಬಸವಣ್ಣ : ಅಲ್ಲ, ಪ್ರಜೆಗಳಿಗಾಗಿ ರಾಜ ಪ್ರಾಣತ್ಯಾಗ ಮಾಡಿಕೊಳ್ಳಬಾರದು; ಪ್ರಾಣದಂತೆ ಅವರನ್ನು ಪ್ರೀತಿಸಬೇಕು. ಪ್ರಜೆಗಳೊಂದಿಗೆ ವೇಳೆವಾಳಿ ಭಾವಸಂಬಂಧ ಇಟ್ಟುಕೋಬೇಕು. ಇಂದಿನಿಂದ ನಾನು 'ರಾಜವೇಳೆವಾಳಿ' ಎಂಬ ವೈದಿಕ ಮೌಲ್ಯ ಧಿಕ್ಕರಿಸಿ, ಪ್ರಜೆಗಳೇ ನನ್ನ ಪ್ರಾಣ ಅಂತ ಭಾವಿಸುವ 'ಪ್ರಜಾವೇಳೆವಾಳಿ' ಪ್ರತಿಜ್ಞಾಬದ್ಧನಾಗತೀನಿ. (ಕೈ ಎತ್ತುತ್ತಾನೆ. ಅಷ್ಟರಲ್ಲಿ ಹೊಲೆಯರ ಬಾಲಕನೊಬ್ಬ ಬೆನ್ನಿಗೆ ಕಟ್ಟಿದ ಮುಳ್ಳು ರೆಂಬೆ ಎಳೆಯುತ್ತ, ಕೊರಳಲ್ಲಿ ಉಗುಳುಗಡಿಗೆ ಕಟ್ಟಿಕೊಂಡು ಊರಲ್ಲಿ ಬರುತ್ತಿದ್ದಾನೆ).

ಹೊಲೆಯ : ಸಂಬೋಳಿ, ಸಂಬೋಳಿ, ಸಂಬೋಳಿ. (ಜನ 'ಹೊಲೆಯ ಬಂದ, ಹೊಲೆಯ ಬಂದ, ದೂರ ಸರೀರಿ' ಎನ್ನುತ್ತಾ ಓಡುತ್ತಾರೆ. ಬಾಗಿಲ ಮುಚ್ಚಿಕೊಳ್ಳುತ್ತಾರೆ. ಬಸವಣ್ಣ ಬಾಲಕನ ಹತ್ತಿರ ಬಂದು)

ಬಸವಣ್ಣ : ಮಗು ನಿಲ್ಲು.

ಅಧಿಕಾರಿ : ಪ್ರಭೂ. ಅವನು ಹೊಲೆಯ. ಮಾತಾಡಿಸಬ್ಯಾಡ್ರಿ.

ಬಸವಣ್ಣ : ಸುಮ್ಮನಿರಿ, ಏನು ಮಗು ? ಎಲ್ಲಿಗಿ ಹೊಂಟಿರುವಿ ?

ಹೊಲೆಯ : ಗಾವುಂಡರ ಮನೆಯ ಬಚ್ಚಲ ಹಸನುಮಾಡಲು ಹೊಂಟೇನಿ (ಎಂದವನೇ "ಸಂಬೋಳಿ, ಸಂಬೋಳಿ" ಎನ್ನುತ್ತಾ ಹೊರಡುತ್ತಾನೆ).

ಬಸವಣ್ಣ : (ಕೈ ಹಿಡಿದು ನಿಲ್ಲಿಸಿ) ಹೋಗಬೇಡ ನಿಲ್ಲು. ಮೊದಲು ಈ ಮುಳ್ಳುರೆಂಬೆ ಬಿಚ್ಚು. (ಕೈಮುಟ್ಟಿ ಬಿಚ್ಚುತ್ತ) ಅನಾಗರಿಕ, ಅಮಾನವೀಯ. ನಿಮ್ಮ ಕೇರಿಗಿ ನಡಿ (ಹೊರಡುತ್ತಾರೆ).

❖❖

ದೃಶ್ಯ -೨೬

(ಹೊಲಗೇರಿ ಸಮೀಪಿಸುತ್ತಲೇ ಒಂದು ಬಾವಿ. ಅದರ ಬಳಿಯಲ್ಲಿ ಒಂದು ಎಲುಬಿನ ಹಂದರವನ್ನು ನೇತು ಬಿಡಲಾಗಿದೆ.)

ಬಸವಣ್ಣ : (ಅಧಿಕಾರಿಗೆ) ತಗಿಸಿರಿ ಇದನ್ನು.

ಅಧಿಕಾರಿ : ಪ್ರಭೂ, ತಗದರ ಇದು ಹೊಲೇರ ಬಾವಿ ಅಂತ ಉತ್ತಮರಿಗಿ ಹ್ಯಾಂಗ ಗೊತ್ತಾಗಬೇಕು?

ಬಸವಣ್ಣ : ಯಾಕ ಗೊತ್ತಾಗಬೇಕು ? ತಗದು ಹಾಕಿರಿ. (ಎಲುವಿನ ಹಂದರ ತೆಗೆಯಲಾಗುತ್ತದೆ, ಹೊಲಗೇರಿ ಪ್ರವೇಶಿಸುತ್ತಾನೆ. ಕೇರಿಯಲ್ಲಿ ನಾಲ್ಕಾರು ಜನ ಗಂಡು-ಹೆಣ್ಣು ಬಾಲ-ವೃದ್ಧರು ಬೆನ್ನಿಗೆ ಮುಳ್ಳು ರೆಂಬೆ ಕಟ್ಟಿಕೊಂಡು ಊರ ಪ್ರವೇಶಕ್ಕೆ ಸಿದ್ಧರಾಗಿದ್ದಾರೆ. ಬಸವಣ್ಣನನ್ನು ನೋಡಿ 'ನಮಸ್ಕಾರ ಪ್ರಭೂ' ಎನ್ನುತ್ತಾರೆ. ಬಸವಣ್ಣ ಪ್ರತಿ ನಮಸ್ಕಾರ ಹೇಳುತ್ತಾನೆ).

ಬಸವಣ್ಣ : ಅಯ್ಯೋ, ಈ ಅಮಾನವೀಯ ಜೀವನ ಇನ್ನೂ ಎಷ್ಟು ದಿನ ?

ವೃದ್ಧ : ದೇವಾ, ಅನಾದಿಕಾಲದಿಂದ ಬಂದದ್ದು, ಕಾಲಕಾಲಕ್ಕ ನಡೀಬೇಕಾದದ್ದು.

ಬಸವಣ್ಣ : (ಸಮೂಹವನ್ನು ಕುರಿತು) ನೀವು ಮನುಷ್ಯರು ಅನ್ನೂದನ್ನು ಜನರೂ ಮರತಾರ, ನೀವೂ ಮರತೀರಿ. ಬಿಚ್ಚಿರಿ ಇದನ್ನು (ಬಿಚ್ಚಲಾಗುತ್ತದೆ. ಅಷ್ಟರಲ್ಲಿ

"ಹೊಲೆಯರ ಬಾವಿಯಲೊಂದು ಎಲು ನೆಟ್ಟಿದ್ದರೆ
ಹೊಲೆ ಹೊಲೆ ಎಂಬುದೀ ಲೋಕವೆಲ್ಲ.
ಹಲುವೆಲುವಿದ್ದ ಬಾಯಿಯಿಂದ ಒಲವರವ ನುಡಿದರೆ
ಹೊಲೆಯರ ಬಾವಿಗಿಂದ ಕರಕಷ್ಟ, ಕಾಣಾ ರಾಮನಾಥಾ"

ಎಂಬ ವಚನ ಕೇಳಿಸುತ್ತದೆ).

ಬಸವಣ್ಣ : ಮಹಾಶರಣ ಜೇಡರ ದಾಸಿಮಯ್ಯನವರ ವಚನ ! ಯಾರ ಧ್ವನಿ ?

ವೃದ್ಧ : ಸಂಬೋಳಿ ನಾಗಿಮಯ್ಯನ ಧ್ವನಿ. ಇದೇ ಅವನ ಮನೆ (ಅಷ್ಟರಲ್ಲಿ ನಾಗಿಮಯ್ಯ ಹೊರಗೆ ಬರುತ್ತಾನೆ).

ಬಸವಣ್ಣ : ಶರಣಾರ್ಥಿ (ಪಾದಮುಟ್ಟಿ ನಮಸ್ಕರಿಸುತ್ತಾನೆ).

ನಾಗಿಮಯ್ಯ : ದೇವಾ, ಬೇಡ. ನೀವು ಯಾರು, ನಾನು ಯಾರು! ಸಸಿs ಮ್ಯಾಲ ಸಾಗರ ಹರಿsಬಾರದು.

ಬಸವಣ್ಣ : ಅದನ್ನs ನಾನೂ ಹೇಳೂದು. ನೀವು ಯಾರು, ನಾನು ಯಾರು ! ನೀನು ನಾಗಿಮಯ್ಯನಲ್ಲ, ಶಿವನಾಗಿಮಯ್ಯ. ಮೋಡ ಕವಿದ ಸೂರ್ಯನ ಹಾಂಗಿರುವ ನಿನ್ನನ್ನು ನಿನ್ನ ಸಮಾಜವನ್ನು ಮುಟ್ಟದೆ ದೂರ ಇಟ್ಟಿರುವ ಸಾಮಾಜಿಕ ಅಪರಾಧಕ್ಕಾಗಿ ನಾನು ಜನತೆಯ ಪರವಾಗಿ ಕ್ಷಮಾ ಕೇಳತೀನಿ.

ನಾಗಿಮಯ್ಯ : ಇರಲಿ ಬಿಡಿ ದೇವಾ, ಶತಶತಮಾನಗಳಿಂದ ಇದು ಬೆಳೆದು ಬಂದದ, ಬೆಳೀತಾ ಹೋಗತದ.

ಬಸವಣ್ಣ : ನಾನು ಬೆಳೀಗೊಡೂದಿಲ್ಲ. "ನೆಲನೊಂದೇ ಹೊಲಗೇರಿ -ಶಿವಾಲಯಕ್ಕೆ, ಜಲವೊಂದೇ ಶೌಚ-ಆಚಮನಕ್ಕೆ, ಕುಲವೊಂದೇ ತನ್ನ ತಾನರಿದವಂಗೆ.... "ಇದು ನನ್ನ ನಿಲುವು. ಹುಟ್ಟುತ್ತ ಯಾವನೂ ಹೊಲೆಯ ಅಲ್ಲ, ಯಾವನೂ ಹಾರುವ ಅಲ್ಲ. ಹೀಗಿದ್ದೂ ಮನುಷ್ಯರಲ್ಲಿ ಈ ಭೇದಕಲ್ಪನೆ ಹುಟ್ಟಿಸಿದವನೇ ಹೊಲೆಯ.

ವೃದ್ಧ : ಹಾಗಾದರ ಈ ಜಾತಿ ಯಾಕ ಹುಟ್ಟಿಸಿದ್ರು?

ಬಸವಣ್ಣ : ಸ್ವಾರ್ಥಕ್ಕ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ". ಇವೆಲ್ಲ ಶ್ರಮದ ವಿವಿಧ ರೀತಿಗಳು. ಹೀಗಿರುವಾಗ ಬೌದ್ಧಿಕ ಶ್ರಮದವನು ಶ್ರೇಷ್ಠ, ದೈಹಿಕ ಶ್ರಮದವನು ಕನಿಷ್ಠ ಹ್ಯಾಂಗ ? ಈ ಜಾತಿಯೆಂಬ ಕೆಟ್ಟ ಸಂಪ್ರದಾಯ ನಾಶಮಾಡಬೇಕಾಗ್ಯಾದ.

ನಾಗಿಮಯ್ಯ : ಪ್ರಭೂ, ನೀವು ಹೇಳೂದು ನಿಜ. ಆದರ ಜಾತಿಭೇದ ವ್ಯವಸ್ಥೆಯ ನಾಶಕ್ಕ ಕೈಹಾಕಿದವ್ರು ನಾಶ ಆಗಬೇಕಾಗ್ತದ.

ಬಸವಣ್ಣ : ಅದೆಲ್ಲ ನನಗ ಗೊತ್ತು. ಅದಕ್ಕೂ ನಾನು ಸಿದ್ಧ. 'ವಿಪ್ರ ಮೊದಲು, ಅಂತ್ಯಜ ಕಡೆಯಾಗಿ ಶಿವಭಕ್ತರನು ಒಂದೇ ಎಂಬೆ" ಎಂಬ ನಿಲುವು ನನ್ನದು. ಧರ್ಮದ ಹೆಸರಿನ್ಯಾಗ ತಲೆಯೆತ್ತಿರುವ ಈ ಅನ್ಯಾಯ ಸರಿಪಡಿಸ್ತೀನಿ.

ನಾಗಿಮಯ್ಯ : ದೇವಾ, ಈ ಕೆಲಸಕ್ಕ ಕೈ ಹಾಕುವಾಗ ಇನ್ನೊಮ್ಮೆ ವಿಚಾರ ಮಾಡ್ರಿ. ಮಿಕ್ಕ ಮಹಾತ್ಮರ ಹಾಂಗ ಆತ್ಮಕಲ್ಯಾಣದ ಮಟ್ಟಿಗೆ ನಿಮ್ಮ ಧರ್ಮತತ್ವ ಸೀಮಿತವಾಗಿರೂದೇ ಸುರಕ್ಷಿತ. ಸಮಾಜಕಲ್ಯಾಣಕ್ಕ ಕೈಹಾಕಿದರ, ಸಮಾಜದ ವೈರ ಕಟ್ಟಿಕೊಳ್ಳಬೇಕಾಗ್ತದ.

ಬಸವಣ್ಣ : ನನಗ ಇದೆಲ್ಲ ಗೊತ್ತು. ನಮ್ಮ ಪ್ರಾಚೀನ ಸಿದ್ಧಾಂತಗಳು ಆತ್ಮಕಲ್ಯಾಣ ಪ್ರತಿಪಾದಿಸಿ, ಸಮಾಜಕಲ್ಯಾಣ ಉಪೇಕ್ಷಿಸಿದವು. ಇದರಿಂದ ನಾವು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರಾದೆವು. ಈಗ ಆ ತಪ್ಪ ತಿದ್ದಿಕೊಳ್ಳುವ ರೀತಿಯಲ್ಲಿ ಸಮಾಜಕಲ್ಯಾಣವೂ ನಮ್ಮ ಗುರಿಯಾಗಬೇಕು.

ನಾಗಿಮಯ್ಯ : ಅಷ್ಟು ದೂರ ಹೋಗಬ್ಯಾಡ್ರಿ ಪ್ರಭೂ. ನಿಮ್ಮ ಕಾಯಕತತ್ವದ ಆಚರಣೆಯಿಂದ ನಮ್ಮ ಕೇರಿ ಸುಧಾರಿಸ್ತ ನಡದದ. ಇಲ್ಲಿ ಲಿಂಗಪೂಜೆ, ಕಾಯಕನಿಷ್ಠೆ ಬೆಳೀತಾ ಇದೆ. ನಿಮ್ಮಿಂದ ದೂರವಿದ್ದೇ ಈ ಕೆಲಸ ಮಾಡ್ರಿ. ಸಮಾಜ ಮಿಶ್ರ ಮಾಡೂದರಿಂದ ದೊಡ್ಡ ಅಪಾಯ ಸಂಭವಿಸ್ತಾವ.

ಬಸವಣ್ಣ : ಅದೆಲ್ಲ ನನಗೆ ಕಾಣಿಸ್ತದ. ನಾನು ಲೆಕ್ಕಿಸಲಾರೆ. ಕಲ್ಯಾಣ ಪಟ್ಟಣದ ನಕ್ಷೆಯಿಂದ, ಕುಂತಳ ರಾಜ್ಯದ ನಕ್ಷೆಯಿಂದ ಹೊಲಗೇರಿ ಎಂಬ ರೇಖೆಯನ್ನು ಅಳಿಸಿಹಾಕಬೇಕಾಗ್ಯಾದ. ಅಂತ್ಯಜ - ಕುಲಜರೆಂಬ ಭೇದ ಅಳಿಯಬೇಕಾಗ್ಯಾದ (ಎಂದವನೇ ನಾಗಿಮಯ್ಯನನ್ನು ಅಪ್ಪಿಕೊಳ್ಳುತ್ತಾನೆ).

ವೃದ್ಧ : ದೇವಾ, ಎಲ್ಲ ಉತ್ತಮರೂ ನಿಮ್ಮ ಹಾಗೇ ನಡೆದುಕೋಬೇಕು. ನಮ್ಮೊಂದಿಗೆ ಬೆರೀಬೇಕು, ನಮ್ಮ ಮನ್ಯಾಗ ಊಟ ಮಾಡಬೇಕು.....

ಬಸವಣ್ಣನವರು : ಹೌದು, ಬೆರೀಬೇಕು, ಊಟಮಾಡಬೇಕು. ಹಾಗಿದ್ದರೆ ನಾಗಿಮಯ್ಯಾ, ನಿಮ್ಮ ಮನೆಯ ಪ್ರಸಾದ ಕೊಡು.

ನಾಗಿಮಯ್ಯ : ಬ್ಯಾಡ ದೇವಾ, ಅಷ್ಟು ದೂರ ಹೋಗಬ್ಯಾಡ್ರಿ.

ಬಸವಣ್ಣ : ನಿನ್ನ ಮನೆಯ ಪ್ರಸಾದದಿಂದ ನಾನು ಪವಿತ್ರ ಆಗಬೇಕಾಗ್ಯಾದ. ಬೇಗ ಕೊಡು; (ನಾಗಿಮಯ್ಯ ಒಳಗೆ ಹೋಗುತ್ತಾನೆ. ಹೆಂಡತಿ ಎರಡು ತಟ್ಟೆಗಳಲ್ಲಿ ರೊಟ್ಟಿ ತರುತ್ತಾಳೆ. ಬಸವಣ್ಣ ನಾಗಿಮಯ್ಯನ ಜೊತೆ ಜನಸಮ್ಮುಖದಲ್ಲಿಯೇ ಕುಳಿತು ಊಟಕ್ಕೆ ತೊಡಗುತ್ತಾನೆ).

ನಾಗಿಮಯ್ಯ : ದೇವಾ, ಇಂದು ನಾನು ಧನ್ಯನಾದೆನು.

ಬಸವಣ್ಣ : ಹಾಗೇನೂ ಇಲ್ಲ. ಶಿವನಾಗಿಮಯ್ಯಾ, ನಿನ್ನ ಮನೆಯ ಊಟವೇನು ? ನನ್ನ ಮನೆಯ ಊಟವೇನು? ಭಾವ ಮುಖ್ಯ. ಭಿನ್ನಭಾವದಿಂದ ಸ್ವೀಕರಿಸಿದರ ಎರಡೂ ಪದಾರ್ಥ; ಶಿವಭಾವದಿಂದ ಸ್ವೀಕರಿಸಿದರ ಎರಡೂ ಪ್ರಸಾದ. ನಾನು ಬೇರೆಯಲ್ಲ, ನೀನು ಬೇರೆಯಲ್ಲ, ಇಬ್ಬರೂ ಶರಣರು, ಶ್ರಮದಿಂದ ಗಳಿಸಿ ಸಿದ್ಧಮಾಡಿದ ಅಡಿಗಿ ಹಿರಿಯ ಪ್ರಸಾದ (ಶಿವ, ಶಿವಾ ಎನ್ನುತ್ತ ಊಟ ಮುಂದುವರಿಸುತ್ತಾರೆ).

❖❖

ದೃಶ್ಯ - ೨೭

(ಬಿಜ್ಜಳನ ಆಸ್ಥಾನ. 'ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಸುವರ್ಣ ವೃಷಭಧ್ವಜ ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ 'ಭೋ ಪರಾಕ್, ಭೋ ಪರಾಕ್' - ಬಿಜ್ಜಳ ಆಗಮಿಸಿ ಸಿಂಹಾಸನಾರೂಢನಾಗುತ್ತಾನೆ. ಕೇಶವಭಟ್ಟ, ನಾರಾಯಣಭಟ್ಟರ ಅವಸರದ ಪ್ರವೇಶ).

ಕೇಶವ ಭಟ್ಟ : ಪ್ರಭುಗಳಿಗೆ ಜಯವಾಗಲಿ. ಪ್ರಭೂ, ನಿಮ್ಮ ಮಂತ್ರಿ ಬಸವಣ್ಣನ ಚರಿತ್ರೆ ದಿನವೂ ವಿಪರೀತದಿಂದ ವಿಪರೀತಕ್ಕ ಬೆಳೀತಾ ಇದೆ. ಭಾಂಡಾರ ಹಾಳು ಮಾಡೂದು ಹೋಗಲಿ, ವರ್ಣವ್ಯವಸ್ಥೆಯನ್ನೂ ಹಾಳು ಮಾಡಲು ಆರಂಭಿಸ್ಯಾನ.

ಬಿಜ್ಜಳ : ಈಗೇನಾಯಿತು?

ಕೇಶವ ಭಟ್ಟ : ಆಸ್ಥಾನಕ್ಕ ಬರುವಾಗ ಹೊಲಗೇರಿ ಪ್ರವೇಶ ಮಾಡಿದ. ಅಲ್ಲಿಗಿ ಹೋದವನು ಸಂಬೋಳಿ ನಾಗಿಮಯ್ಯನ ಮನ್ಯಾಗ ಊಟಮಾಡಿದ. ತಾವು ಈ ವರೆಗೆ ಕಾಪಾಡ್ತ ಬಂದ ವರ್ಣಧರ್ಮ ಮತ್ತ್ಯಾರೂ ಅಲ್ಲ, ನಿಮ್ಮ ಮಂತ್ರಿಯೇ ದಾಟೂದಂದರ ?

ಬಿಜ್ಜಳ : ಹೌದು, ಬಸವಣ್ಣ ಈವರೆಗೆ ನನ್ನ ಕೆಲವು ಗೆರೆ ದಾಟಿದ. ಇದನ್ನೂ ದಾಟುವಷ್ಟು ದೂರ ಹೋಗುವನೆಂದು ಭಾವಿಸಿರಲಿಲ್ಲ.

ನಾರಣಭಟ್ಟ : ಬ್ರಾಹ್ಮಣರಾದ ನಾವು ಇದನ್ನು ಸಹಿಸೂದಿಲ್ಲ. ನೀವು, ನಿಮ್ಮ ಬಸವಣ್ಣ ಈ ಕಲ್ಯಾಣದಾಗ, ಈ ರಾಜ್ಯದಾಗ ಸುಖವಾಗಿ ಇದ್ದುಬಿಡಿರಿ. ನಾವು ಈ ರಾಜ್ಯ ಬಿಟ್ಟು ಹೋಗತೀವಿ. (ಬ್ರಾಹ್ಮಣರು ಹೊರಡುತ್ತಾರೆ).

ಬಿಜ್ಜಳ : ತಡೀರಿ, ತಡೀರಿ. ನಿಮ್ಮ ಅಭಿಪ್ರಾಯ ಏನು ?

ಕೇಶವ ಭಟ್ಟ : ನ್ಯಾಯ ವಿಚಾರಣೆ ಆಗಬೇಕು. ವರ್ಣಸಂಕರ ಮಾಡಿದರ ಕಲ್ಯಾಣ ಕೆಟ್ಟೀತು, ಕೆಟ್ಟೀತು ಕಲ್ಯಾಣ.

ಬಿಜ್ಜಳ : (ಕಿವಿಮುಚ್ಚಿಕೊಳ್ಳುತ್ತ) ಇದನ್ನು ನುಡಿ ಬ್ಯಾಡರಿ, ನಾನು ಕಷ್ಟಪಟ್ಟು ಗೆದ್ದುಕೊಂಡ ಈ ಕಲ್ಯಾಣಕ್ಕೆ ಅಪಶಕುನ ನುಡಿ ಬ್ಯಾಡರಿ. ಯಾರಿಲ್ಲಿ?

ಸೇವಕ : (ಬರುತ್ತಾನೆ) ಪ್ರಭೂ

ಬಿಜ್ಜಳ : ಹೊಲಗೇರಿಗಿ ಹೋಗಿ ಬಸವಣ್ಣನ್ನ ಕರೆತನ್ನಿ. (ಸೇವಕ ಹೋಗುತ್ತಾನೆ).

ಕೇಶವಭಟ್ಟ : ಪ್ರಭೂ, ಹೊಲೆಯರ ಮನ್ಯಾಗ ಊಟಮಾಡಿ ಮೈಲಿಗಿ ಆಗಿರುವ ಬಸವಣ್ಣ ಒಳಗ ಬಂದರ ಆಸ್ಥಾನ ಮೈಲಿಗಿ ಆಗ್ತಾದ.

ಬಿಜ್ಜಳ : ಹೌದು, ಏನು ಮಾಡೂದು ?

ನಾರಣಭಟ್ಟ : ಸಿಂಹಾಸನ ಆಸ್ಥಾನದ ಹೊರಗ ಇಡಿಸ್ರಿ. ಬೀದ್ಯಾಗs ನ್ಯಾಯವಿಚಾರಣೆ ನಡೀಲಿ.

ಬಿಜ್ಜಳ : ಹೌದು, (ಬೀದಿಗೆ ಸಿಂಹಾಸನ ಎತ್ತಿ ತರುತ್ತಾರೆ. ಅಷ್ಟರಲ್ಲಿ ಬಸವಣ್ಣನೊಂದಿಗೆ ಹೊಲೆಯರೂ ಬರುತ್ತಾರೆ. ಬಿಜ್ಜಳ-ಪುರೋಹಿತರು ಒಂದು ಕಡೆ, ಬಸವಣ್ಣ-ಹೊಲೆಯರು ಇನ್ನೊಂದು ಕಡೆ).

ಬಿಜ್ಜಳ : ಬಸವಣ್ಣಾ, ಇದು ಎರಡನೆಯ ಸಲ ನಡೀತಿರುವ ವಿಚಾರಣೆ. ರಾಜಾಜ್ಞೆ ಮೀರಿದವ್ರು ಉಗ್ರಶಿಕ್ಷೆಗೆ ಒಳಗಾಗಬೇಕಾಗ್ತದ.

ಬಸವಣ್ಣ : ಯಾವ ತಪ್ಪಿಗಾಗಿ ಈ ನ್ಯಾಯ ವಿಚಾರಣೆ ? ನನಗೊಂದೂ ಅರ್ಥವಾಗ್ತಿಲ್ಲ.

ಬಿಜ್ಜಳ : ನಿಮ್ಮ ಚಲನವಲನ ನಮಗ ಗೊತ್ತು. ದೇವರು -ಪೂಜೆ ಇಷ್ಟರಮಟ್ಟಿಗೆ ನಿಮ್ಮ ಚಟುವಟಿಕಿ ಸೀಮಿತವಾದರ ನನ್ನ ಅಭ್ಯಂತರವೇನೂ ಇಲ್ಲ. ಆದರ ನೀವು ಭಂಡಾರದ ಮ್ಯಾಲಿನ ನನ್ನ ಅಧಿಕಾರನs ಪ್ರಶ್ನಿಸುವ ರೀತಿಯಲ್ಲಿ ವರ್ತಿಸ್ತ ಬಂದಿರಿ. ಈ ಬಗ್ಗೆ ಸೂಕ್ಷ್ಮ ಎಚ್ಚರಿಕೆ ನೀಡಿದರೂ ಪ್ರಯೋಜನ ಆಗಲಿಲ್ಲ. ಈ ಭಂಡಾರಕ್ಕ ನಾನು ಹಕ್ಕುದಾರ ಅಲ್ಲ. ಪ್ರಜೆಗಳು ಅಂತ ಅವರಲ್ಲಿ ತಿಳುವಳಿಕೆ ಬೆಳಸ್ತ ಇದ್ದೀರಿ.

ಬಸವಣ್ಣ : ಅದು ನಿಜವೇ ಆಗಿದೆ. ಪ್ರಜೆಗಳೇ ಪ್ರಭುಗಳು.

ಬಿಜ್ಜಳ : ಬಾಯಿಮುಚ್ಚು. ಭಾಂಡಾರ ನನ್ನದು, ಚಕ್ರವರ್ತಿ ನಾನು.

ಬಸವಣ್ಣ : ಹೌದು ಪ್ರಭೂ, ಚಕ್ರವರ್ತಿಗಳು ನೀವಾಗಿರಬಹುದು. ಈ ಭಂಡಾರ ಬೆಳೆದದ್ದು ಪ್ರಜೆಗಳಿಂದ, ಬೆಳೆಸಿದವ್ರು ಪ್ರಜೆಗಳು.

ಬಿಜ್ಜಳ : ಹೀಗೋ ನಿಮ್ಮ ಲೆಕ್ಕಾಚಾರ ? ಈಗಾಗಲೇ ನೀವು ಪ್ರಜೆಗಳ ಪ್ರೀತಿ ಗಳಿಸಲಿಕ್ಕ ಹೊರಟು, ಅವರಿಗಿ ಹಣ ವಿನಿಯೋಗಿಸಿದ ಆರೋಪ ನಿಮ್ಮ ಮ್ಯಾಲದ. (ಅಧಿಕಾರಿಗಳ ಪುರೋಹಿತರ ಕಡೆ ಬೆರಳು ಮಾಡಿ) ಇವರು ನಮ್ಮ ಪ್ರಜೆಗಳಲ್ಲ? ಇವರಿಗ್ಯಾಕ ನೀವು ವಿನಿಯೋಗಿಸೂದಿಲ್ಲ?

ಬಸವಣ್ಣ : ಪ್ರಭೂ, ನಿಮ್ಮದು ತಪ್ಪು ತಿಳುವಳಿಕೆ. ಅವರು ದುಡಿಯೂ ಜನ, ದಾಸೋಹದ ಜನ. ಅಂಥವರು ಮಾತ್ರ ನಮ್ಮ ಜನ.

ಬಿಜ್ಜಳ : ಅಂದರ ಅಂಥವರೆಲ್ಲ ನಿನ್ನ ಜನ. (ಈ ಕಡೆ ಬೆರಳು ಮಾಡಿ) ಇಂಥವರೆಲ್ಲ ನನ್ನ ಜನ ಅಂತ ನಿಮ್ಮ ಅರ್ಥs?

ಬಸವಣ್ಣ : ನಾನು ವಿವರಿಸಲಾರೆ, ನೀವೇ ವಿಚಾರ ಮಾಡಿಕೊಳ್ರಿ.

ಬಿಜ್ಜಳ : ವಿಚಾರ ಮಾಡಿಕೊಂಡೀನಿ. ಈ ಬಗ್ಗೆ ಸೂಕ್ತಕಾಲದಾಗ ನಿರ್ಣಯ ತೆಗೆದುಕೊಳ್ತೀನಿ. (ಮಾತಿನ ಧಾಟಿ ಬದಲಿಸಿ) ಅದಿರಲಿ, ಈಗ ನಿಮ್ಮನ್ನು ಕರೆಸಿರುವ ಉದ್ದೇಶ, ನೀವು

ಹೊಲಗೇರಿಗಿ ಹೋದಿರಿ; ಅಲ್ಲಿ ಊಟ ಮಾಡಿ ಜಾತಿವ್ಯವಸ್ಥಾಪದ್ಧತಿ ಮೀರಿದಿರಿ. ಹೀಂಗ ಮೀರೂದಂದರ ರಾಜಾಜ್ಞೆ ಮೀರಿದಾಂಗ.

ಬಸವಣ್ಣ : ಇದು ರಾಜಾಜ್ಞೆ ಮೀರುವಿಕೆ ಅಂತ ಎಲ್ಲಿ ಹೇಳ್ಯಾದ ?

ಕೇಶವಭಟ್ಟ : ಮನುಸ್ಮೃತ್ಯಾಗ ಹೇಳ್ಯಾದ.

ಬಸವಣ್ಣ : ನಾನು ಅದನ್ನ ಮನ್ನಿಸೂದಿಲ್ಲ.

ಬಿಜ್ಜಳ : ಬಸವಣ್ಣಾ, ಅದನ್ನು ಮನ್ನಿಸೂದಿಲ್ಲ ಅಂದರ ರಾಜಾಜ್ಞೆ ಮನ್ನಿಸೂದಿಲ್ಲ ಅಂತ ಪರ್ಯಾಯವಾಗಿ ಹೇಳಿದಂತಾಗ್ತದ. ಅದು ನಮ್ಮ ಪರೋಕ್ಷ ಸಂವಿಧಾನ. ಅದಕ್ಕ ಈ ರಾಜ್ಯದಲ್ಲಿರುವವರು ಬದ್ಧರಾಗಿರಬೇಕು.

ಬಸವಣ್ಣ : ಅದು ನನಗೆ ಸಮ್ಮತ ಇಲ್ಲ. ನನ್ನ ನಿಲವೇ ಬ್ಯಾರೆ.

ನಾರಾಯಣಭಟ್ಟ : ಅಂದರ , ಬಿಜ್ಜಳನ ಸಂವಿಧಾನ ಬ್ಯಾರೆ, ಬಸವಣ್ಣನ ಸಂವಿಧಾನ ಬ್ಯಾರೆ ಅಂತ ನಿಮ್ಮ ಅರ್ಥs?

ಬಸವಣ್ಣ : ಹಾಗೇ ಭಾವಿಸಬಹುದು.

ಬಿಜ್ಜಳ : ಸಾಧ್ಯವಿಲ್ಲ. ಈ ರಾಜ್ಯದಾಗ ನನ್ನ ಸಂವಿಧಾನಕ್ಕ ಸಮಾಂತರ ಇನ್ನೊಂದು ಸಂವಿಧಾನ ಬೆಳದರ ಅದನ್ನು ನಾಶಪಡಿಸ್ತೀನಿ. ಭಂಡಾರದ ಮ್ಯಾಲಿರೂದು ನನ್ನ ಹಕ್ಕು; ಜಾತಿಭೇದ ರಕ್ಷಿಸೂದು ನನ್ನ ಕರ್ತವ್ಯ

ಬಸವಣ್ಣ : ಇವೆರಡನ್ನೂ ಒಪ್ಪಲು ನನಗೆ ಆಗ್ತಿಲ್ಲ. ಇದು ನನ್ನ ಅಂತಿಮ ನಿಲುವು.

ಬಿಜ್ಜಳ : ನನ್ನ ಆಜ್ಞೆ ಮೀರಿದರ ಅನುಭವಿಸಬೇಕಾದ ಉಗ್ರ ಶಿಕ್ಷೆ ಊಹೆಗೂ ಮೀರಿದ್ದು.

ಬಸವಣ್ಣ : ಅದನ್ನು ನಾನು ಊಹಿಸಬಲ್ಲೆ, ಇವರು ದುಡಿಯುವವರು, ನನ್ನ ಜನ. ಇಂಥವ್ರು ಈ ರಾಜ್ಯದ, ಅಷ್ಟೇ ಯಾಕ ಈ ಲೋಕದ ಒಡೆಯರು (ಎಂದು ಹೇಳಿದವನೇ ಬಸವಣ್ಣ ಹೊರಡುವನು. ನೂರಾರು ಜನ ಅಸ್ಪೃಶ್ಯ ಗಂಡಸರು-ಹೆಂಗಸರು 'ವರ್ಣವಾದಿಗಳಿಗೆ ಧಿಕ್ಕಾರ' ಎನ್ನುತ್ತ ಅವನನ್ನು ಹಿಂಬಾಲಿಸುವರು. ವಿರುದ್ಧ ದಿಕ್ಕಿನಲ್ಲಿ ಬಿಜ್ಜಳ ಹೊರಡುವನು. 'ವರ್ಣವಿರೋಧಿಗಳಿಗೆ ಧಿಕ್ಕಾರ' ಎನ್ನುತ್ತ ಅವನನ್ನು ಅಧಿಕಾರಿಗಳು ಪುರೋಹಿತರು ಹಿಂಬಾಲಿಸುವರು. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯವಾಕ್ಯ ಕೇಳಿಸುತ್ತದೆ)

❖❖

ದೃಶ್ಯ -೨೮

(ಬಸವಣ್ಣನ ಮಹಾಮನೆಯ ಮಲಗು ಕೋಣೆ. ಬಸವಣ್ಣ ಗಂಗಾದೇವಿ ಮಂಚದ ಮೇಲೆ ಕುಳಿತಿದ್ದಾರೆ. ಬಸವಣ್ಣ ವಿಚಾರಮಗ್ನನಾಗಿದ್ದಾನೆ.)

ಬಸವಣ್ಣ : ನನ್ನ ಮತ್ತು ಬಿಜ್ಜಳನ ಸಂಬಂಧ ಬಹಳ ದಿನ ಉಳೀಲಿಕ್ಕಿಲ್ಲ ಗಂಗಾ.

ಗಂಗಾಂಬಿಕೆ : ಯಾಕ ?

ಬಸವಣ್ಣ : ಸಮಾಜದ ಬಗೆಗಿನ ನನ್ನ ಹೊಸ ವಿಚಾರ, ಅದರಲ್ಲಿಯೂ ರಾಜ್ಯದ ಬಗೆಗಿನ ನನ್ನ ಹೊಸ ವಿಚಾರಗಳಿಂದ ಬಿಜ್ಜಳ ಮಹಾರಾಜ ವಿಚಲಿತರಾದ್ಹಾಂಗ ಕಾಣ್ತದ. ನನ್ನನ್ನು ಕೆಲಸದಿಂದ ತೆಗೆಯಬಹುದು.

ಗಂಗಾಂಬಿಕೆ : ಅದನ್ನು ಪ್ರಭುಗಳು ಆಡಿ ತೋರಿಸಿದರೆ ?

ಬಸವಣ್ಣ : ಇಲ್ಲ, ಜನ ಆಡಿಕೊಳ್ಳೂದು ನನ್ನ ಕಿವಿಗೆ ಬಿದ್ದದ.

ಗಂಗಾಂಬಿಕೆ : ನಿಮ್ಮ ಏಳಿಗೆ ಸಹಿಸದವರು ಸುಳ್ಳು ಸುದ್ದಿ ಹುಟ್ಟಿಸಿರಬಹುದು.

ಬಸವಣ್ಣ : ಇಲ್ಲ, ಅವರ ಮಾತಿನಲ್ಲಿ ಒಂದಿಷ್ಟು ನಿಜವಿರಬಹುದು. ಯಾಕಂದ್ರ ಇತ್ತೀಚೆ ಪ್ರಭುಗಳು ನನ ಕೂಡ ಸಮಾಲೋಚನೆ ನಡೆಸುವದನ್ನು ಕಡಿಮೆ ಮಾಡ್ಯಾರ.

ಗಂಗಾಂಬಿಕೆ : ಈಗ ನಿಮ್ಮ ಮುಂದಿನ ವಿಚಾರ ?

ಬಸವಣ್ಣ : ನನ್ನ ಕಣ್ಣ ಮುಂದ ಈಗ ಎರಡು ಪ್ರಶ್ನೆಗಳಾವ. ಕೆಟ್ಟ ವ್ಯವಸ್ಥೆಯೊಂದಿಗಿ ಹೊಂದಿಕೊಂಡು ವರ್ತಮಾನದಾಗ ಬದುಕಬೇಕೋ, ಕೆಟ್ಟ ವ್ಯವಸ್ಥೆಯನ್ನು ಪ್ರತಿಭಟಿಸಿ ಭವಿಷ್ಯತ್ತಿನ್ಯಾಗ ಬದುಕಬೇಕೋ.

ಗಂಗಾಂಬಿಕೆ : ಎರಡೂ ಕಾಲಘಟ್ಟಗಳಲ್ಲಿ ಬದುಕೂ ಹಾಂಗ ನಡೆಯಲು ಸಾಧ್ಯ ಇಲ್ಲs?

ಬಸವಣ್ಣ : ಸಾಧ್ಯ ಇಲ್ಲ, ಇಲ್ಲಿ ಬದುಕಿದವ್ರು ಅಲ್ಲಿ ಸಾಯತಾರ. ಅಲ್ಲಿ ಬದುಕಬೇಕಾದವ್ರು ಇಲ್ಲಿ ಸಾಯಬೇಕಾಗ್ತದ.

ಗಂಗಾಂಬಿಕೆ : ನನಗ ಏನೊಂದೂ ಅರ್ಥವಾಗ್ತಿಲ್ಲ. ನೀವು ಕಷ್ಟದಾಗ ಸಿಲುಕಿಕೊಳ್ಳಬಾರದು, ಅಷ್ಟು ಮಾತ್ರ ನನಗ ಅರ್ಥವಾಗ್ತದ.

ಬಸವಣ್ಣ : ಹೌದು. ನೀನು ಬಾಲ್ಯದಿಂದಲೂ ವೈದಿಕರ ಕರ್ಮಸಂಸ್ಕೃತಿಯೊಳಗ, ಅಧಿಕಾರಿಗಳ ಯಜಮಾನ ಸಂಸ್ಕೃತಿಯೊಳಗ ಬೆಳೆದುಬಂದವಳು. ಅದನ್ನು ತಕ್ಕಮಟ್ಟಿಗಿ ಬಿಡಿಸಿಕೊಂಡದ್ದೇ ದೊಡ್ಡ ಸಾಧನೆ.

ಗಂಗಾಂಬಿಕೆ : ಹೌದು, ಸಂಪ್ರದಾಯದಿಂದ ಬಿಡಿಸಿಕೊಳ್ಳೂದು ಅಷ್ಟು ಸುಲಭವಲ್ಲ ಅಂತ ಕಾಣ್ತದ. ಅದರಲ್ಲಿಯೂ ವ್ಯಕ್ತಿ ಹೊರಗ ಎಷ್ಟೇ ಸುಧಾರಣಾವಾದಿ ಆದ್ರೂ ಒಳಗ ಸಂಪ್ರದಾಯದ ಒಂದು ಗಟ್ಟಿ ಎಳಿ ಉಳಿದುಕೊಂಡಿರ್ತದ.

ಬಸವಣ್ಣ : ನಿಜ ಹೇಳಿದಿ ಗಂಗಾ. ನಮ್ಮ ಸಂಘಟನ್ಯಾಗ ಸೇರಿಕೊಂಡಿರುವ ಬಹಳಷ್ಟು ಜನ ಬ್ರಾಹ್ಮಣರಿಗಿ ನಾನು ಶೂದ್ರ ನಾಗಿಮಯ್ಯನ ಮನ್ಯಾಗ ಊಟ ಮಾಡಿದ್ದು ಮನಸ್ಸಿಗೆ ಬಂದಿಲ್ಲ ಅಂತ ತೋರ್‍ತದ. ಈ ಮಟ್ಟದಲ್ಲಿ ವರ್ಣನಾಶಮಾಡಬಾರದಾಗಿತ್ತು ಅಂತ ಅವರು ಮಾತಾಡಿಕೊಳ್ತಿದ್ದಾರ.

ಗಂಗಾಂಬಿಕೆ : ನನಗೂ ಹಾಂಗs ಅನಿಸ್ತದ. ಬ್ರಾಹ್ಮಣರ ಶ್ರೇಷ್ಠತೆಯನ್ನು ಇಷ್ಟು ಬೇಗ ನೀವು ಅಲ್ಲಗಳೆಯಬಾರದಿತ್ತು.

ಬಸವಣ್ಣ : ಬ್ರಾಹ್ಮಣರು ಶ್ರೇಷ್ಠರಲ್ಲ, ಶೂದ್ರರು ಕನಿಷ್ಠರಲ್ಲ. ಇವೆರಡೂ ಕೃತಕ ವಿಚಾರಗಳು. ಒಂದನ್ನು ಬಿಟ್ಟು ಒಂದನ್ನು ನಾಶಮಾಡಬಾರದು. ಎರಡನ್ನೂ ಏಕಕಾಲಕ್ಕ ನಾಶಮಾಡಿದಾಗಲೇ ಸಮಾಜದಲ್ಲಿ ಸಮಾನತೆ ಬೇಗ ಬರೂದು. ಶೋಷಣೆ ತಪ್ಪೂದು.

ಗಂಗಾಂಬಿಕೆ : ಏನೋ, ನಿಮ್ಮಷ್ಟು ನಾನು ಪ್ರಬುದ್ಧಳಲ್ಲ. ನಿಮಗ ತೊಂದರೆಯುಂಟಾಗಬಾರದು, ಅಷ್ಟೇ.

ಬಸವಣ್ಣ : ಎಲ್ಲಾ ಕೂಡಲಸಂಗನ ಇಚ್ಛೆ. ಇರಲಿ, ಹೊತ್ತಾಯಿತು ಮಲಗು. (ಮಲಗುತ್ತಾರೆ).

❖❖

ದೃಶ್ಯ - ೨೯

(ಬಿಜ್ಜಳನ ಅರಮನೆಯ ಶಯ್ಯಾಗೃಹ. ಬಿಜ್ಜಳ ರಂಭಾ ಮಂಚದ ಮೇಲೆ ಕುಳಿತಿದ್ದಾರೆ. ಬಿಜ್ಜಳ ಚಿಂತಾಮಗ್ನನಾಗಿದ್ದಾನೆ).

ಬಿಜ್ಜಳ : ನನ್ನ ಮತ್ತು ಬಸವಣ್ಣನ ಸಂಬಂಧ ಬಹಳ ದಿನ ಉಳೀಲಿಕ್ಕಿಲ್ಲ, ರಂಭಾ. ಅವನು ಸಾಂಪ್ರದಾಯಿಕ ರೀತಿಯಲ್ಲಿ ಹೊಸ ಧರ್ಮ ಕಟ್ಟತಾನಂತ ತಿಳಿದು ಈ ವರೆಗೆ ಸುಮ್ಮ ಇದ್ದೆ. ಆದರ ಅವನ ಕಲ್ಪನೆಯೇ ಬ್ಯಾರೆ ರೀತಿಯಲ್ಲ್ಯಾದ.

ರಂಭಾ : ಅಂದರ?

ಬಿಜ್ಜಳ : ಅವನ ದೃಷ್ಟಿಯಲ್ಲಿ ಧರ್ಮ ಬ್ಯಾರೆ ಅಲ್ಲ, ಸಮಾಜ ಬ್ಯಾರೆಯಲ್ಲ. ರಾಜಕೀಯವೂ ಇದರಿಂದ ಪ್ರತ್ಯೇಕ ಅಲ್ಲ ಅನ್ನೂ ಧೋರಣೆ ಅವನದು. ಒಂದು ಸಮಗ್ರ ಸುಧಾರಣೆಯ ರೀತಿಯಲ್ಲಿ ಅವನು ಮುಂದುವರಿಯೂದರಿಂದ ಪ್ರಾಚೀನ ಕಾಲದಿಂದಲೂ ನಡೆದುಬಂದ ಸಾಮಾಜಿಕ ಸಂಪ್ರದಾಯಗಳು ಒಂದೊಂದಾಗಿ ಸಡಿಲಾಗ್ತಾ ಇವೆ.

ರಂಭಾ : ಅವನ ಸುಧಾರಣೆಗಿ ಜನ ಆಕರ್ಷಿತರಾಗ್ಯಾರ?

ಬಿಜ್ಜಳ : ಆಗದೇ ಏನು ? ಈ ವರೆಗೆ ದಲಿತರೂ ಅಸ್ಪೃಶ್ಯರು ಮಾತ್ರ ಆಕರ್ಷಿತರಾಗ್ತಿದ್ದರು. ಈಗ ಸೊಡ್ಡಳ ಬಾಚರಸನಂಥ ಅಧಿಕಾರಿಗಳೂ ಅವನತ್ತ ಒಲವು ತೋರ್ತಿದ್ದಾರ. ನನ್ನ ತಂಗಿ ನೀಲಲೋಚನೆಯೂ ಅವನ ಸಿದ್ಧಾಂತ ಮೆಚ್ಚಿಧಾಂಗ ಕಾಣ್ತದ. ಮೊನ್ನೆ ಶರಣರ ವಚನಗಳಲ್ಲ ಕಟ್ಟಬಿಚ್ಚಿ ಓದತಿರೂದು ಗಮನಿಸಿದೆ.

ರಂಭಾ : ಹೌದು, ಮೊನ್ನೆ ನನಗೂ ಕೆಲವು ವಚನ ಓದಿ ಹೇಳಿದಳು. ಕೇವಲ ಮನಮುಖಿ ವಚನಗಳಲ್ಲ, ಜನಮುಖಿ ವಚನಗಳನ್ನೂ ನಾನು ಗಮನಿಸಿದೆ.

ಬಿಜ್ಜಳ : ನನಗೆ ತೊಂದರೆ ಬಂದದ್ದೇ ಜನಮುಖಿ ವಚನಗಳಿಂದ. ಅಲ್ಲಿ ಇಂದಿನ ರಾಜತ್ವ ವ್ಯವಸ್ಥೆಯ ವಿರೋಧಿ ವಚನಗಳಿವೆ. ಇವುಗಳನ್ನು ಓದಿ ಜನ ನನ್ನನ್ನು ಪ್ರಶ್ನಿಸುವ ಮನೋಧರ್ಮ ಬೆಳೆಸಿಕೊಳ್ಳಬಹುದೇನೋ.

ರಂಭಾ : ಯಾಕೆ ? ಸ್ತ್ರೀ-ಪುರುಷಭೇದ ಪ್ರಶ್ನಿಸುವ ವಚನಗಳನ್ನೂ ನೀಲಲೋಚನೆ ಓದಿ ಹೇಳಿದಳು. "ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ", "ಹೆಣ್ಣು ಪ್ರತ್ಯಕ್ಷ್ಯ ಕಪಿಲಸಿದ್ಧ

ಮಲ್ಲಿಕಾರ್ಜುನ" ಎಂಬಂಥ ವಚನ ಕೇಳಿದಾಗಿನಿಂದ ನನ್ನ ಮನಸಿನಾಗೂ ಹೊಸ ವಿಚಾರ ಆರಂಭ ಆಗ್ಯಾವ.

ಬಿಜ್ಜಳ : ಹೌದು, ಪುರುಷವರ್ಗವನ್ನೂ, ಪ್ರಭುವರ್ಗವನ್ನೂ, ಪುರೋಹಿತವರ್ಗವನ್ನೂ ಪ್ರಶ್ನಿಸುವ ವಚನಗಳಿಂದಾಗಿ ಸಮಾಜ ಪ್ರಚೋದನೆಗೊಳ್ಳುವ ಸಾಧ್ಯತೆಯಿದೆ.

ರಂಭಾ : ಇರಲಿ, ಬಸವಣ್ಣನ ಧೋರಣೆ ನ್ಯಾಯಸಮ್ಮತವೋ, ಅಲ್ಲವೋ ? ನಿಮ್ಮ ಅಂತರಂಗ ಏನ ಹೇಳ್ತದ?

ಬಿಜ್ಜಳ : ರಂಭಾ, ಬಹಳ ಮಹತ್ವದ ಪ್ರಶ್ನೆ ಹಾಕಿದಿ. ಅವನ ದಾರಿ ಸರಿಯಾಗಿ ಅದ. ಆದರ ಸಮಾಜ ಈ ವರೆಗೆ ಬ್ಯಾರೆ ದಾರ್‍ಯಾಗ ಬಹಳ ದೂರ ನಡದು ಬಂದಾದ. ನಾವೆಲ್ಲ ಅದರ ಒಂದು ಭಾಗ ಆಗೀವಿ. ಏನ ಮಾಡೂದು ? ತಾತ್ವಿಕವಾಗಿ ಅವನದು ಸರಿ. ವಾಸ್ತವ ಬ್ಯಾರೆ ಅದ.

ರಂಭಾ : ನಿಮ್ಮ ತೊಳಲಾಟ ಅರ್ಥಮಾಡಿಕೊಂಡೀನಿ. ಬಸವಣ್ಣನವರೊಂದಿಗೆ ಹೊಂದಿಕೊಂಡು ಹೋಗೂದೇ ಸರಿಯಾದ ದಾರಿ.

ಬಿಜ್ಜಳ : ಬಹುಶಃ ಇದು ಸಾಧ್ಯವಿಲ್ಲ. ರಾಜಪರಿವಾರದವರು, ವೈದಿಕ ಬ್ರಾಹ್ಮಣರು, ಶೈವ ಮಠಾಧೀಶರು ಅವನ ವಿರೋಧಿಗಳಾಗಿ ಬೆಳೀತಿದ್ದಾರ. ಅವನ ಸಂಘಟನೆಯೊಳಗ ಬಿರುಕು ಉಂಟಾಗುವ ವರೆಗೂ ಕಾಯ್ತೀನಿ.

ರಂಭಾ : ಬಸವಣ್ಣನಂಥ ನೇತಾರ ಇರುವ ವರೆಗೂ ಅದು ಸಾಧ್ಯ ಇಲ್ಲ ಅಂತ ತೋರ್‍ತದ.

ಬಿಜ್ಜಳ : ನಿನಗ ಸಮಾಜದ ಮನಸ್ಸ ಗೊತ್ತಿಲ್ಲ. ನಮ್ಮ ದೇಶದಾಗ ಜಾತಿ ಆಧರಿಸಿಯೇ ಸಂಘಟನೆ ಬೆಳೀತಾವ, ಕೊನೆಗೆ ಜಾತಿ ಆಧರಿಸಿಯೇ ಒಡೀತಾವ. ಆಗ ಏನೋ ಅರ್ಥ ಹಚ್ಚಿ, ಮೊದಲ ಹೊರಗ ಬರವ್ರು ಬುದ್ಧಿವಂತರಾದ ಮೇಲುಜಾತಿಯವರೇ, ನೋಡ್ತಿರು.

ರಂಭಾ : ನನಗ ಅಷ್ಟೆಲ್ಲ ತಿಳಿಯೂದಿಲ್ಲ. ಇರಲಿ, ದಣಿದಿದ್ದೀರಿ, ಮಲಗಿರಿ (ಮಲಗುತ್ತಾರೆ).

❖❖

ದೃಶ್ಯ- ೩೦

(ಅನುಭವ ಮಂಟಪ. ಶರಣರೆಲ್ಲ ನೆರೆದಿದ್ದಾರೆ).

ಬಸವಣ್ಣ : ಬಂಧುಗಳೇ, ನಮ್ಮ ಈವರೆಗಿನ ಸಾಮಾಜಿಕ, ಆರ್ಥಿಕ ಕಾರ್ಯವಿಧಾನಗಳೇ ಬ್ಯಾರೆ, ಇನ್ನ ಮುಂದ ಅನುಸರಿಸಬೇಕಾದ ಕಾರ್ಯವಿಧಾನಗಳೇ ಬ್ಯಾರೆ. ಅರಸ ಮುನಿದರ ನಾಡೊಳಗಿರುವುದು ಕಠಿಣ. ರಾಜನ ವಿರೋಧ ಬಹಿರಂಗ ಆಗ್ಯಾದ.

ಮಾಚಿದೇವ : ರಾಜನ ವಿರೋಧ ಬಹಿರಂಗಾಗಿದ್ರ ನಮ್ಮ ಸುಧಾರಣಾ ಕ್ರಮಗಳನ್ನೂ ನಾವು ಬಹಿರಂಗವಾಗೇ ಮುಂದುವರಿಸಬೇಕು. ಅನೇಕ ರೀತಿಗಳಲ್ಲಿ ಮುನ್ನಡೆಸಬೇಕು.

ಬಸವಣ್ಣ : ಈಗಾಗಲೇ ಭಂಡಾರದ ಬಳಕೆಯ ಹೊಸ ಪ್ರಯೋಗದಿಂದಾಗಿ, ಕಾಯಕ-ದಾಸೋಹಗಳ ಪ್ರಜ್ಞೆ ಜಾಗೃತಗೊಂಡು, ಆರ್ಥಿಕ ಅಸಮಾನತೆ ಕಡಿಮೆಯಾಗುತ್ತ ನಡದು, ಬಡವ-ಶ್ರೀಮಂತರೆಂಬ ವರ್ಗಭೇದ ನಾಶವಾಗ್ತ ಸಾಗ್ಯಾದ.

ಗಂಗಾಂಬಿಕೆ : ನಮ್ಮ ನಮ್ಮ ಮನ್ಯಾಗ, ಅನುಭವ ಮಂಟಪದಂಥ ಸಮುದಾಯ ಭವನದಾಗ, ಶರಣರ ಕೇರ್‍ಯಾಗ ಸ್ತ್ರೀ ಪುರುಷರು ಮುಕ್ತವಾಗಿ ವ್ಯವಹರಿಸುವುದರಿಂದಾಗಿ, ಸ್ತ್ರೀ-ಪುರುಷ ಅನ್ನೂ ಭೇದವೂ ಕಡಿಮೆಯಾಗ್ತಾ ಇದೆ.

ಬಸವಣ್ಣ : ಆದರ ವರ್ಣಭೇದ ನಿವಾರಣೆಯಲ್ಲಿ ನಾವು ನಿರೀಕ್ಷಿಸಿದಷ್ಟು ಪ್ರಗತಿ ಸಾಧ್ಯವಾಗಿಲ್ಲ.

ಮಾಚಿದೇವ : ಹೌದು. ಈ ವರ್ಣಭೇದ ರೋಗನಿವಾರಣೆಗೆ ರಕ್ತಸಂಬಂಧವೇ ಒಳ್ಳೇ ಔಷಧ.

ಬಸವಣ್ಣ : ಏನು ಮಾಡೂದು? ಇದಕ್ಕ ನಾನೇ ಉದಾಹರಣೆಯಾಗ್ತಿದ್ದೆ. ಆದರ ಬಾಲ್ಯದಲ್ಲಿಯೇ ನನ್ನ ಮದುವಿ ಅನಿರೀಕ್ಷಿತವಾಗಿ ಜರುಗಿ ಹೋಯಿತು.

ಗಂಗಾಂಬಿಕೆ : ನೀವು ನಮ್ಮ ಚಳುವಳಿಯ ನೇತಾರರು. ಜನ ನಿಮ್ಮಿಂದ ಇಂತಹ ಆದರ್ಶ ಅಪೇಕ್ಷಿಸ್ತಾರ. ಎರಡನೆಯ ಮದುವೆ ತಪ್ಪು, ಆದರೆ ದೊಡ್ಡ ಆದರ್ಶಕ್ಕಾಗಿ ನೀವು ಈ ಸಣ್ಣ ತಪ್ಪು ಮಾಡಿದರ ದೋಷವಲ್ಲ ಅಂತ ನನ್ನ ಅಭಿಪ್ರಾಯ.

ಮಾಚಿದೇವ : ಇದನ್ನು ನಾನು ಅನುಮೋದಿಸ್ತೀನಿ.

ನೀಲಾಂಬಿಕೆ : (ಜನರ ಮಧ್ಯದಿಂದ ನುಗ್ಗಿ ಬಂದು) ಅಕ್ಕ ಗಂಗಾಂಬಿಕೆಯ ಒಪ್ಪಿಗೆ ಇದ್ದರೆ, ಕ್ಷತ್ರಿಯ ಕನ್ಯೆಯಾದ ನಾನು ಈ ವಿವಾಹಕ್ಕ ಸಿದ್ಧಳಿದ್ದೀನಿ.

ಗಂಗಾಂಬಿಕೆ : ನಿನ್ನನ್ನು ತಂಗಿಯಾಗಿ ಸ್ವೀಕರಿಸಲು ನನಗ ಸಂತೋಷ ಅನಸ್ತದ. ಹೋರಾಟ ತೀವ್ರ ಆಗಿರುವ ಇಂದಿನ ಸಂದರ್ಭದಲ್ಲಿ ನಿನ್ನಂಥ ಬೌದ್ಧಿಕ ಸಾಹಚರ್ಯದ "ವಿಚಾರಪತ್ನಿ" ಬಸವಣ್ಣನವರಿಗೆ ಅವಶ್ಯ ಅದ.

ಬಸವಣ್ಣ : ನಾನು, ಇನ್ನೊಂದು ಮದುವೆ ?

ಮಾಚಿದೇವ : ಹೌದು, ಅಂತರ್ಜಾತಿ ವಿವಾಹದ ಆದರ್ಶಕ್ಕಾಗಿ ಕ್ಷತ್ರಿಯ ನೀಲಲೋಚನೆಯನ್ನು ಕನ್ಯೆ ಮದುವೆಯಾದರೆ ತಪ್ಪೇನು ?

ಶರಣರು : ಏನೂ ತಪ್ಪಿಲ್ಲ, ಏನೂ ತಪ್ಪಿಲ್ಲ.

ಗಂಗಾಂಬಿಕೆ : ಏನೂ ತಪ್ಪಿಲ್ಲ. (ಎನ್ನುತ್ತ ಇಬ್ಬರ ಕೈ ಹಿಡಿಸುತ್ತಾಳೆ, ನೆರೆದವರೆಲ್ಲ "ಶರಣರ ಜಾತ್ಯತೀತ ವಿವಾಹಕ್ಕೆ ಜಯವಾಗಲಿ, ಶರಣತತ್ವಕ್ಕೆ ಜಯವಾಗಲಿ" ಎನ್ನುತ್ತಾರೆ).

ಬಸವಣ್ಣ : ಎಲ್ಲ ದೇವರಿಚ್ಛೆ. ಇದು ವರ್ಣಭೇದ ನಿವಾರಣೆಯ ಮೊದಲ ಹೆಜ್ಜೆ.

ಮಾಚಿದೇವ : ಇದು ಇಷ್ಟಕ್ಕ ನಿಲ್ಲಬಾರದು. ಬ್ರಾಹ್ಮಣ -ಶೂದ್ರ ಜಾತಿಗಳಿಂದ ಬಂದ ಶರಣರ ನಡುವೆಯೂ ಇಂಥ ಸಂಬಂಧಗಳು ಜರುಗಬೇಕು. ಮದುವೆಯಿಂದ ವಂಚಿತರಾದ ದಾಸಿಪುತ್ರಿಯರ, ವೇಶ್ಯಾಪುತ್ರಿಯರ ಸಂಖ್ಯೆ ನಮ್ಮಲ್ಲಿ ಬಹಳ ಅದ. ಅಂಥವರನ್ನೂ ಕೈ ಹಿಡೀಲಿಕ್ಕ ನಮ್ಮ ಶರಣರು, ಅದರಲ್ಲಿಯೂ ಯುವಕರು ಮುಂದ ಬರಬೇಕು.

ಯುವ ಶರಣರು : (ಎದ್ದು ನಿಂತು) ನಾವು ಸಿದ್ಧರಿದ್ದೀವಿ. ಅಂಥ ಹತಭಾಗಿನಿಯರ ಕೈ ಹಿಡಿಯಲು ನಮ್ಮ ಒಪ್ಪಿಗಿ ಅದ.

ಬಸವಣ್ಣ : ನೀವೆಲ್ಲ ನನಗಿಂತ ಒಂದು ಹೆಜ್ಜೆ ಮುಂದು. ಇದಕ್ಕೆಲ್ಲ ಕೂಡಲಸಂಗನೇ ದಾರಿ ತೋರಸಬೇಕು.

❖❖

ದೃಶ್ಯ - ೩೧

(ಬಿಜ್ಜಳನ ಅರಮನೆ. ನೀಲಾಂಬಿಕೆಯೊಂದಿಗೆ ಬಿಜ್ಜಳನ ಗಂಭೀರ ಮಾತುಕತೆ. ಕುಳಿತಿದ್ದಾರೆ).

ಬಿಜ್ಜಳ : ನೀಲಾ, ಚಕ್ರವರ್ತಿಯ ತಂಗಿಯಾದ ನೀನು ಬಸವಣ್ಣನಂಥ ಒಬ್ಬ ಸಾಮಾನ್ಯ ಅಧಿಕಾರಿಯನ್ನು ಮದುವೆಯಾಗುವುದು....

ನೀಲಲೋಚನೆ : ತಾನು ಮೂಲತಃ ಮನುಷ್ಯನೆಂಬುದನ್ನು ಮರೆತ ವ್ಯಕ್ತಿಗಿ ಇಂತಹ ಘಟನೆ ಪ್ರಶ್ನೆಯಾಗಿ ಕಾಡೂದು ಸಹಜ.

ಬಿಜ್ಜಳ : ಹಾಗಲ್ಲ, ಸಾಮಾಜಿಕ ವ್ಯವಸ್ಥೆಯೆನ್ನೂದು ಇರೂದಿಲ್ಲವೇ ?

ನೀಲಲೋಚನೆ : ಮಾನವಿಕ ವ್ಯವಸ್ಥೆಯ ಮ್ಯಾಲ ನಾವು ಮಾಡಿಕೊಂಡಿರೂ ಇನ್ನೊಂದು ವ್ಯವಸ್ಥೆಯೇ ಸಾಮಾಜಿಕ. ಅದರಲ್ಲಿ ಅರಿತೋ, ಅರಿಯದೆಯೋ ಬೆಳೆದು ಬಂದಿರೂ ಅರ್ಥರಹಿತ ಅಂಶಗಳನ್ನು ನಾವು ಬದಲಾಯಿಸಿಕೊಳ್ಳಬೇಕು. ಸ್ತ್ರೀಯರ ವಿಷಯದಲ್ಲಿ ಶರಣರು ಮಾಡತಾ ಇರೂದು ಅಂಥ ಬದಲಾವಣೆಯನ್ನು.

ಬಿಜ್ಜಳ : ಅಂಥ ಬದಲಾವಣೆ ಈಗ ಅವಶ್ಯವೇ? ಸ್ತ್ರೀಗೆ ಸಮಾಜದಲ್ಲಿ ಇಂದು ಗೌರವಗಳಿಲ್ಲವೇ ?

ನೀಲಲೋಚನೆ : ಇಲ್ಲ. ಕೆಲವೊಮ್ಮೆ ಸಂಪತ್ತು-ವೈಭವಗಳ ಅನುಕೂಲತೆಗಳಿರಬಹುದು. ಆದರ ಪುರುಷಪ್ರಧಾನ -ಸ್ತ್ರೀ ಅಪ್ರಧಾನ ದೃಷ್ಟಿಭೇದ ಕಾರಣಮಾಗಿ ಅವಳು ಸಾಮಾಜಿಕ ನ್ಯಾಯದಿಂದ ವಂಚಿತಳಾಗ್ಯಾಳ. ಅನೇಕ ಯಾತನೆಗಳಲ್ಲಿ ನರಳತಾ ಇದ್ದಾಳ. ಅದು ನಿಮ್ಮಂಥವರಿಗೆ ಕೇಳಿಸೂದಿಲ್ಲ. ಈ ಭೇದ ನಿವಾರಿಸೂದೇ ಶರಣ ಚಳುವಳಿಯ ಉದ್ದೇಶ.

ಬಿಜ್ಜಳ : ಹಾಗಲ್ಲ, ಮೂಲತಃ ಗಂಡು-ಹೆಣ್ಣಿನ ಭೇದ ಅನ್ನೂದು ಸ್ವಾಭಾವಿಕವಾದುದು.

ನೀಲಲೋಚನೆ : ಏನು ಭೇದ ? "ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು. ಒಳಗೆ ಸುಳಿವ ಆತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ" ಎಂಬ ತತ್ವ, ಶರಣಸಮಾಜದಲ್ಲಿ ಸ್ಥಾಪಿತವಾಗ್ತ ನಡದದ. ಪಾರಮಾರ್ಥಿಕ ಸ್ತರದೊಳಗ ಪ್ರಾರಂಭವಾದ ಈ ವೈಚಾರಿಕ ಕ್ರಾಂತಿ, ಪ್ರಾಪಂಚಿಕ ನೆಲೆಯೊಳಗೂ ಇಂದು ಕಾಣಿಸಿಕೊಂಡದ. ಅವಳಿಗಿ ಆತ್ಮಗೌರವ ಸಾಧ್ಯ ಆಗ್ಯಾದ. ಸಂಪ್ರದಾಯದ ಬಂದಿಯಾಗಿದ್ದ ಹೆಣ್ಣ ಜೀವಕ್ಕ ಚಲನಶೀಲ ವ್ಯಕ್ತಿತ್ವ ಪ್ರಾಪ್ತ ಆಗ್ಯಾದ.

ಬಿಜ್ಜಳ : ಒಪ್ಪಿದೆ. ಸ್ತ್ರೀ -ಪುರುಷರು ಆತ್ಮನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ ಸಮಾನರು. ಆದರೆ ಸಾಮಾಜಿಕ ಪ್ರತಿಷ್ಠೆಯೆನ್ನುವುದು ಇರುವುದಿಲ್ಲವೇ ? ನಿನ್ನದು ಚಕ್ರವರ್ತಿ ಕುಟುಂಬ, ಬಸವಣ್ಣನದು ಸಾಮಾನ್ಯ ಕುಟುಂಬ.

ನೀಲಲೋಚನೆ : ಯಾವ ಕುಟುಂಬದಲ್ಲಿ ವ್ಯಕ್ತಿ ಹುಟ್ಟಿದ ಮುಖ್ಯವಲ್ಲ, ಎಂಥ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾನೆಂಬುದು ಮುಖ್ಯ. ಕಿರೀಟಧಾರಿಯಾದ ಚೋಳ ಚಕ್ರವರ್ತಿಯ ಶಿರ ಧೂಳು ಮುಸುಕಿದ ಮಾದರ ಚೆನ್ನಯ್ಯನ ಪಾದಕ್ಕೆ ಎರಗಿತು. ಇವರಲ್ಲಿ ಯಾರು ಶ್ರೇಷ್ಠ? ಯಾರು ಕನಿಷ್ಠ ? ಹೇಳು ಅಣ್ಣಾ.

ಬಿಜ್ಜಳ : ನೀನು ಪರಮಸತ್ಯಗಳನ್ನು ನುಡಿದು ನನ್ನ ಬಾಯಿ ಮುಚ್ಚಿಸುತ್ತಿರುವಿ. ಆದರ ಎರಡು ಭಿನ್ನ ಜಾತಿಗಳಲ್ಲಿ ರಕ್ತಸಂಬಂಧ ....

ನೀಲಲೋಚನೆ : (ಗಹಗಹಿಸಿ ನಕ್ಕು).... ಜಾತಿ, ಜಾತಿ, ಜಾತಿ. ಅದು ನಾವು ಕಲ್ಪಿಸಿದ ಹೀನ ವ್ಯವಸ್ಥೆ. "ಆವ ಕುಲವಾದರೇನು ? ಶಿವಲಿಂಗವಿದ್ದವನೇ ಕುಲಜನು........ ಒಕ್ಕುದ ಕೊಂಬೆನೆವರನ್ನಲ್ಲಿ, ಕೂಸ ಕೊಡುವೆನೆವರಲ್ಲಿ" ಎಂದು ಬಸವಣ್ಣ ಸಾರಿದುದು ಲೋಕಮಾನ್ಯ ಮಾತಲ್ಲವೇ ?

ಬಿಜ್ಜಳ : ಊರ ಮಾತ ಬ್ಯಾಡ. ಅರಮನ್ಯಾಗ ನಿನಗ ಏನು ಕಡಿಮೆಯಿತ್ತು ?

ನೀಲಲೋಚನೆ : ಅರಸರ ಮನ್ಯಾಗ ಅರಸಿಯಾಗಿರೂದಕಿಂತ ಶರಣರ ಮನ್ಯಾಗ ದಾಸಿಯಾಗಿರೂದು ಲೇಸು.

ಬಿಜ್ಜಳ : ಹಾಂ !

ನೀಲಲೋಚನೆ : ಹೌದು, ಸ್ಥಗಿತ ಮೌಲ್ಯದ ಅರಸನ ರಾಣಿಯಾಗಿರೂದಕಿಂತ, ಚಲನಶೀಲ ಮೌಲ್ಯದ ಬಡವನ ಹೆಂಡತಿಯಾಗಿರೂದು ಸುಖ. ಈ ಆತ್ಮಸ್ವಾತಂತ್ರ್ಯಕ್ಕಾಗಿಯೇ ನಾನು ಆ ಸಣ್ಣ ಅಧಿಕಾರಿನs ಮದುವೆ ಆದದ್ದು. ಗಂಡು-ಹೆಣ್ಣಿನ ಲೌಕಿಕ ಸುಖಭೋಗ ಎಷ್ಟಿದ್ದರೇನು, ಅವರಲ್ಲಿ ವೈಚಾರಿಕ ಸಾಹಚರ್ಯ ಇಲ್ಲದಿದ್ದರ ? "ವಿಚಾರಪತ್ನಿ' ಆಗೂ ಉದ್ದೇಶದಿಂದ ಎರಡನೆಯ ಪತ್ನಿಯಾಗಿ ಬಸವಣ್ಣನ ಕೈ ಹಿಡಿದೀನಿ.

ಬಿಜ್ಜಳ : (ಸಿಟ್ಟಿನಿಂದ) ಶರಣತತ್ವದ ಸೆರೆ ಕುಡಿದವಳ ಹಾಂಗ ಮಾತಾಡಬ್ಯಾಡ.

ನೀಲಲೋಚನೆ : (ಉದಾಸೀನ ಭಾವದಿಂದ) ಮಹಾರಾಜ, ಕ್ಷಮಿಸಿ. (ತಟ್ಟನೆ ಎದ್ದು, ಕೈಮುಗಿದು ಹೋಗುತ್ತಾಳೆ).

❖❖

ದೃಶ್ಯ - ೩೨

(ಸಂಜೆಯ ಸಮಯ. ಅನುಭವ ಮಂಟಪ, ಶರಣರು ಸೇರಿದ್ದಾರೆ.)

ಬಸವಣ್ಣ : ಶರಣರೇ, ಕುಂತಳ ರಾಜ್ಯದಾಗ ಬದಲಾವಣೆ ತೀವ್ರವಾಗಿ ಜರುಗತಾ ನಡದಾದ. ನಮ್ಮ ಕನಸುಗಳು ನನಸಾಗತಾ ಸಾಗ್ಯಾವ. "ಕಾಯಕವೇ ಕೈಲಾಸ' ತತ್ವದ ಸಾಕಾರಮೂರ್ತಿಯಾಗ್ತಾ ಇರುವ ಶರಣರು, ತಮ್ಮ ಕೇರಿ ಕೈಲಾಸವನ್ನಾಗಿಸ್ತಾ ಇದ್ದಾರ. (ಹೊರಗ ಗದ್ದಲ. "ಅಯ್ಯೋ, ಹೊಡೀಬ್ಯಾಡ್ರಿ, ನಿಮ್ಮ ಕಾಲಿಗಿ ಬೀಳ್ತಿನಿ" ಎಂಬ ಧ್ವನಿ) ಏನದು ಗದ್ದಲ ? ಮಾಚಿದೇವರೇ, ವಿಚಾರಿಸಿರಿ. (ಮಾಚಿದೇವ ಹೋಗುತ್ತಾನೆ).

ಬಸವಣ್ಣ : ಏನು ಹೇಳುತ್ತಿದ್ದೆ ?

ನೀಲಲೋಚನೆ : ಕಾಯಕದ ಬಗ್ಗೆ.

ಬಸವಣ್ಣ : ಹೌದು. ಕಾಯಕದಾಗ ಯಾವುದೂ ಶ್ರೇಷ್ಠ ಅಲ್ಲ. ಯಾವುದೂ ಕನಿಷ್ಠ ಅಲ್ಲ ಎಂಬ ಧೋರಣೆಯಿಂದಾಗಿ ಎಲ್ಲ ಕಾಯಕಗಳಿಗೂ ಗೌರವ ಪ್ರಾಪ್ತ ಆಗ್ಯಾದ.

ನೀಲಲೋಚನೆ : ನಿಜ, ಎಲ್ಲರೂ ತಮ್ಮ ತಮ್ಮ ಮೂಲಕಾಯಕಗಳನ್ನು ಗೌರವದಿಂದ ಮುಂದುವರಿಸುತ್ತಿರುವುದಷ್ಟೇ ಅಲ್ಲ, ಎಲ್ಲ ಕಾಯಕಗಳೂ ಸಮಾನ ಅನ್ನೂ ನಂಬಿಕೆ ಕಾರಣವಾಗಿ, ಯಾವುದೇ ಜಾತಿ ವೃತ್ತಿಗಳಿಂದ ಬಂದ ಶರಣರು ಯಾವುದೇ ಕಾಯಕ ತೆರೆದ ಮನಸ್ಸಿನಿಂದ ಮಾಡತಿದ್ದಾರ. ಕಾಶ್ಮೀರದ ದೊರೆ ಮೋಳಿಗೆ ಮಾರಯ್ಯನವರು ಆಡಳಿತಕ್ಕ ಬದಲು ಕಟಿಗಿ ಕಾಯಕ ಕೈಗೆತ್ತಿಕೊಂಡರು. ಇದರಿಂದಾಗಿ ಕಾಯಕಗಳು ಮಡಿ ಮೈಲಿಗೆಗಳಿಂದ ಮುಕ್ತವಾಗ್ತ ನಡದಾವ. (ಅಷ್ಟರಲ್ಲಿ ಮಾಚಿದೇವ ಒಳಗೆ ಬರುತ್ತಾನೆ. ಅವನ ಹಿಂದೆ ಇಬ್ಬರು ತಳವಾರರು ತೋಳಿಗೆ ಹಗ್ಗ ಬಿಗಿದ ಹೆಂಗಸನ್ನು ಕರೆದುಕೊಂಡು ಬರುತ್ತಿದ್ದಾರೆ. ಅವಳ ಕೈಯಲ್ಲಿ ಅದೇ ಆಗ ಹುಟ್ಟಿದ ಕೂಸು).

ಬಸವಣ್ಣ : ಏನದು ?

ತಳವಾರ : ಪ್ರಭೂ, ಈಕಿ ಸೂಳೆ. ಹಡೆದ ಕೂಸ ಕತ್ತಲಾಗ ಎಸೆದು ಹೊಂಟಿರೂದು ಗೊತ್ತಾಯ್ತು, ಎಳಕೊಂಡು ನ್ಯಾಯಾಲಯಕ್ಕ ವಿಚಾರಣೆಗೆ ಹೊಂಟೇವಿ.

ಬಸವಣ್ಣ : (ಸಿಟ್ಟಿನಿಂದ) ಹಗ್ಗ ಬಿಚ್ಚಿರಿ. ನಾನೇ ವಿಚಾರಿಸಿತೀನಿ. (ಬಿಚ್ಚ ತೊಡಗುತ್ತಾರೆ. ನೀಲಲೋಚನೆ ತನ್ನ ಉತ್ತರೀಯವನ್ನು ಚಳಿಯಿಂದ ನಡುಗುವ ಸೂಳೆಗೆ ಹೊಚ್ಚುತ್ತಾಳೆ. ಮಗುವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಕಣ್ಣೀರು ಒರೆಸಿಕೊಳ್ಳುತ್ತಾಳೆ).

ಬಸವಣ್ಣ : ತಾಯೀ, ನಾನು ನಿನ್ನನ್ನು ಅರ್ಥ ಮಾಡಿಕೊಂಡೀನಿ. ಯಾವ ಅಸಹಾಯಕ ಪರಿಸ್ಥಿತಿ ಕಾರಣವಾಗಿ ನೀನು ಈ ವೃತ್ತಿಗಿ ಇಳಿದೀದಿ ಅನ್ನೂದನ್ನು ನಾನು ಊಹಿಸಿಕೊಳ್ಳಬಲ್ಲೆ.

ಸೂಳೆ : (ದುಃಖಿಸುತ್ತ) ಸ್ವಾಮೀ, ಆ ಅಸಹಾಯಕ ಪರಿಸ್ಥಿತಿಯೇ ನನ್ನನ್ನು ಈ ವೃತ್ತಿಗೆ ಮತ್ತೆ ಮತ್ತೆ ನೂಕತಾ ಇದೆ.

ಬಸವಣ್ಣ : ನನಗ ಗೊತ್ತು. ಈಗ ನಿನಗ ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆ, ಕೈತುಂಬ ಕೆಲಸ, ಸಾಧ್ಯವಾದರೆ ಮದುವಿ-ಇಷ್ಟು ನಡೆಸಿಕೊಟ್ಟರ ಈ ವೃತ್ತಿ ಬಿಡತೀಯಾ ?

ಸೂಳೆ : ದೇವರೇ, ಇದಕ್ಕಿಂತ ದೊಡ್ಡ ಭಾಗ್ಯ ಏನದ ? ಪರಿಸ್ಥಿತಿಯ ಒತ್ತಡ ನನ್ನನ್ನು ಈ ವೃತ್ತಿಗಿ ತಳ್ಳ್ಯಾದ. ಎದ್ದು ಬರಲು ಪ್ರಯತ್ನಿಸಿದಷ್ಟೂ ಹೆಚ್ಚು ಆಳಕ್ಕ ಬೀಳ್ತ ನಡದೀನಿ. ನನ್ನ ಪಾಲಿನ ದೇವರು ನೀವು.

ನೀಲಲೋಚನೆ : ಶರಣರೇ, ಇವಳು ಸೂಳೆ, ಇದು ಇವಳ ಕೂಸು. ಇದೀಗ ಹುಟ್ಟಿದ ಈ ಹಸುಳೆ ಶರಣರಲ್ಲಿ ತನಗೂ ತನ್ನ ತಾಯಿಗೂ ಸಾಮಾಜಿಕ ನ್ಯಾಯ ಕೇಳ್ತದ (ಅಳುತ್ತದೆ). ಹೇಳಿ, ಹೇಳಿ ಇದಕ್ಕ ಸಾಮಾಜಿಕ ನ್ಯಾಯ ಏನು ?

ಮಾಚಿದೇವ : ಮತ್ತೇನು ? ಇನ್ನು ಮ್ಯಾಲ ಇವಳು ಶರಣೆ, ಇದು ಶರಣಶಿಶು.

ಬಸವಣ್ಣ : ಹಾಂ!

ಮಾಚಿದೇವ : ಈ ಅನುಭವಮಂಟಪ ಕೇವಲ ವಿಚಾರ ಚರ್ಚೆಯ ಕೇಂದ್ರ ಅಲ್ಲ, ಆಚಾರಗಳ ಅನುಷ್ಠಾನ ಮಂದಿರ. ಇದು ಯುವಶರಣರ ತತ್ವನಿಷ್ಠೆ ಪರೀಕ್ಷಿಸುವ ಪ್ರಸಂಗ. ಈ ಹತಭಾಗಿನಿಯನ್ನು ಹೆಂಡತಿ ಅಂತ, ಈ ಅನಾಥ ಶಿಶುವನ್ನು ಮಗ ಅಂತ ಸ್ವೀಕರಿಸಲು ಯಾರು ಸಿದ್ಧರಿದ್ದೀರಿ? ಹೇಳಿ, ಹೇಳಿ.

ಯುವಶರಣ : (ತಟ್ಟನೆ ಎದ್ದು ಮುಂದೆ ಬಂದು) ನಾನು ಸಿದ್ಧ ಇದ್ದೀನಿ. ದಾಸೀ ಪುತ್ರವಾಗಲಿ, ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಶರಣರೇ. ಇವಳಿಗೆ ಒಪ್ಪಿಗಿ ಇದ್ದರ ನಾನು.....

ನೀಲಲೋಚನೆ : ಮಗಳೇ ನಿನಗೆ ಒಪ್ಪಿಗೆಯೇ ?

ಸೂಳೆ : ತಾಯಿ, ಇದಕ್ಕಿಂತ ದೊಡ್ಡ ಭಾಗ್ಯ ಏನದ. (ಗಂಗಾಂಬಿಕೆ ಬಂದು ಅವಳ ಹಣೆಗೆ ವಿಭೂತಿ ಹಚ್ಚುತ್ತಾಳೆ. ಯುವಕ ಬಂದು ಕೈ ಹಿಡಿಯುತ್ತಾನೆ).

ಸೂಳೆ : (ಬಸವಣ್ಣನನ್ನು ಕುರಿತು) ಅಣ್ಣಾ, ಕಲ್ಯಾಣ ಕೈಲಾಸ ಆಗ್ತಿರೂದಕ್ಕ ಇದಕ್ಕಿಂತ ದೊಡ್ಡ ಉದಾಹರಣೆ ಯಾವುದದ ? ದರಿದ್ರರು ಕಾಯಕದಿಂದ ಧನಿಕರಾದ ಪವಾಡ ಮಾಡಿದ ನೀನು, ಸೂಳೆಯಾದ ನನ್ನನ್ನು ಸತಿಯಾಗಿಸಿದುದು ಇನ್ನೊಂದು ಪವಾಡ. ನೀನು ನನ್ನ ಪಾಲಿನ ಪರಮಾತ್ಮ.

ಬಸವಣ್ಣ : ತಾಯಿ, ನಿನ್ನ ಹಣೆಯಲ್ಲಿ ವಿಭೂತಿ, ಮುಖದಲ್ಲಿ ನಗೆ ಕಂಡ ಪುಣ್ಯ ನನ್ನದಾಯಿತು.

ಮಾಚಿದೇವ : ಈ ಕ್ರಿಯೆ ಇಲ್ಲಿಗೇ ನಿಲ್ಲಬಾರದು. ಇಂಥವರು ವೇಶ್ಯಾಸ್ತ್ರೀಯರಾಗಲು ಸಮಾಜವೇ ಕಾರಣ. ಈಗ ಸಮಾಜವೇ, ಅಂದರೆ ಸಮಾಜದ ಭಾಗವಾಗಿರುವ ನಾವೇ ಈಗ ಆ ತಪ್ಪ ತಿದ್ದಬೇಕು. ಇಂಥ ಪಣ್ಯಸ್ತ್ರೀಯರು ಪುಣ್ಯಸ್ತ್ರೀಯರಾಗಿ ತಲೆಯೆತ್ತಿ ಬಾಳೂ ಹಾಂಗ ಮಾಡಬೇಕು. ("ಇದಕ್ಕ ನಾವು ಸಿದ್ಧರಿದ್ದೇವೆ" ಎಂದು ಯುವಶರಣರು ಸಾರುತ್ತಾರೆ).

❖❖

ದೃಶ್ಯ -೩೩

(ದೇವಾಲಯದ ಕಟ್ಟೆಯ ಮೇಲೆ ಕುಳಿತು, ವೀಳ್ಯೆ ಅಗೆಯುತ್ತ ಮಾತುಕತೆ).

ಪುರೋಹಿತ : ಈ ಬಸವಣ್ಣ ಭಂಡಾರಮಂತ್ರಿಯಾದದ್ದು ನಮಗ ದೊಡ್ಡ ಶಾಪ ಆಗಿ ಪರಿಣಮಿಸಿತು. ಶಿವಶಿವಾ.

ಶಿವಾಚಾರ್ಯ : ನಮಗಷ್ಟೇ ಯಾಕ ? ಸ್ವತಃ ಬಿಜ್ಜಳ ರಾಜನಿಗೂ. ಈಗ ಪ್ರಜಾಶಕ್ತಿ ಒಂದು ಕಡೆ, ರಾಜಶಕ್ತಿ ಇನ್ನೊಂದು ಕಡೆ ಎಂಬಂಥ ಪರಿಸ್ಥಿತಿ ನಿರ್ಮಾಣಾಗ್ತಾ ಅದ. ಬಿಜ್ಜಳಗ ತಿಳೀಲಿಲ್ಲ. ಇವನಿಗಿ ಭಂಡಾರಮಂತ್ರಿ ಮಾಡೂದ ಬಿಟ್ಟು, ಬೇರೆ ಮಂತ್ರಿ ಮಾಡಿದ್ದರ ಈ ಪರಿಸ್ಥಿತಿ ನಿರ್ಮಾಣ ಆಗತಿರಲಿಲ್ಲ. ದೀನರು ದಲಿತರು ಹೋಗಲಿ, ಹೊಲೆಯರಾದರೂ ಹದ್ದುಬಸ್ತಿನಲ್ಲಿರ್ತಿದ್ರು (ವೀಳ್ಯ ಉಗುಳುತ್ತಾನೆ).

ಪುರೋಹಿತ : ಈ ಮೊದಲ ಹೊಲಗೇರಿಗಿ ಹೋಗಿ ಊಟ ಮಾಡಿ ಬಂದ ಬಸವಣ್ಣ, ಮೊನ್ನೆ ಲಿಂಗದೀಕ್ಷೆ ಹೊಂದಿದ್ದ ಯಾವನೋ ಹುಡುಗನೊಂದಿಗೆ ಸೂಳೆಯ ಮದುವೆ ಮಾಡಿಸಿದನಂತ!

ಶಿವಾಚಾರ್ಯ : ಕೇಳಿಲ್ಲೇನು ? ಗಂಡ ಸತ್ತ ಹೆಂಗಸರು ಚಿತಾಪ್ರವೇಶ ಮಾಡೂದನ್ನ ನಿಲ್ಲಿಸ್ಯಾನ. ವಿಧವಾ ವಿವಾಹನೂ ಮಾಡಿಸ್ತಾ ಇದ್ದಾನ.

ಪುರೋಹಿತ : ಏನು ಕೆಟ್ಟ ಕಾಲ! ರಾಜ್ಯಕ್ಕ ಅಪಶಕುನಗಳಿವು. ನಾವು ಜಾತಿಗಳನ್ನು ಪರಸ್ಪರ ಎಷ್ಟು ದೂರ ಇಡಬೇಕೆನ್ನುತಿವೋ, ಇವನು ಅಷ್ಟು ಹತ್ತಿರ ತರ್ತಾ ಇದ್ದಾನ.

ಶಿವಾಚಾರ್ಯ : ಹೌದು, ಈಗ ಹೊಲೇರು ನಮ್ಮ ಮಠಗಳ ಮುಂದ ನಿರ್ಭೀತಿಯಿಂದ ತಿರುಗಾಡ್ತಾ ಇದ್ದಾರ.

ಪುರೋಹಿತ : ನಮ್ಮನ್ನ ಕಂಡ ಕೂಡಲೇ ನೆಲಕ್ಕ ಹಣಿ ಹಚ್ಚತಿದ್ದ ಈ ಸೂಳಿಮಕ್ಕಳು, ಈಗ ತಲಿಯೆತ್ತಿ ತಿರಗ್ತಾರ. ಗಂಡಸರ ಹಾಂಗ ಹೆಂಗಸರೂ ಧಾರ್ಮಿಕ ಲಾಂಛನಗಳಾದ ಲಿಂಗ ವಿಭೂತಿ ಧರಸ್ತಾರ (ವೀಳ್ಯ ಉಗುಳುತ್ತಾನೆ).

ಶಿವಾಚಾರ್ಯ : ವಂಶಪರಂಪರೆಯಿಂದ ಜೀತದಾಳಾಗಿದ್ದ, ಕೂಲಿಗಾಗಿ ಕಾಲ ಹಿಡೀತಿದ್ದ ಹೊಲೆಮಾದಿಗರು ಈಗ ತಮ್ಮದs ಹೊಲ, ತಮ್ಮದs ವೃತ್ತಿ ಅವಲಂಬಿಸಿದ ಕಾರಣ, ಕೂಲಿ ಆಳs ಸಿಗತಾ ಇಲ್ಲ. ಇದೆಲ್ಲ ಬಸವಣ್ಣನ ಸಹಾಯ-ಸಹಾನುಭೂತಿಯ ಫಲ.

ಪುರೋಹಿತ : ಪಾಪ, ಗುರುಗಳಾದ ನಿಮಗ, ಪುರೋಹಿತರಾದ ನಮಗ ಸಹಾಯ ಮಾಡೂದು ಬಿಟ್ಟು, ಈ ಬಸವಣ್ಣ ರೈತರ ಕಂದಾಯ ಈ ವರ್ಷ ಅರ್ಧದಷ್ಟು ಕಡಿಮಿ ಮಾಡ್ಯಾನಂತ.

ಶಿವಾಚಾರ್ಯ : ಏನು ? ಅರ್ಧದಷ್ಟು ಕಂದಾಯ ಕಡಿಮಿ ಮಾಡಿದರ ಆರ್ಥಿಕವಾಗಿ ರಾಜ್ಯ ನಡೆಸೂದಾದರೂ ಹ್ಯಾಂಗ ?

ಪುರೋಹಿತ : ಪ್ರಜೆಗಳಲ್ಲಿ ಕಾಯಕ- ದಾಸೋಹಪ್ರಜ್ಞೆ ಜಾಗೃತವಾಗಿ "ದುಡಿಮೆ ಹೆಚ್ಚು ಸಂಗ್ರಹ ಕಡಿಮೆ" ಧೋರಣೆ ಬೆಳೆದು, ಬೊಕ್ಕಸ ಭಾಳ ಬೆಳದಾದಂತ ಜನ ಮಾತನಾಡಿಕೊಳ್ಳಿತ್ತಿದ್ದಾರ.

ಶಿವಾಚಾರ್ಯ : ಹೀಗೇನು ?

ಪುರೋಹಿತ : ಅದ್ಯಾಕ, ಜನರಿಗೆ ಹಂಚಿ ಬಸವಣ್ಣ ಬೊಕ್ಕಸ ಬರಿದು ಮಾಡ್ಯಾನ ಅನ್ನೊ ಆರೋಪದ ನ್ಯಾಯವಿಚಾರಣೆ ನಡದು, ಕೊನಿಗೆ ಅವನು ನಿರ್ದೋಷಿ ಅಂತ ಸಿದ್ಧಾಯ್ತು. ಭಂಡಾರ ಎರಡು ಪಟ್ಟು ಬೆಳೆದದ್ದು ಸಾಬೀತಾಗಿ ವಿರೋಧಿಗಳ ಮಾರಿ ಪೆಚ್ಚಾಯ್ತು.

ಶಿವಾಚಾರ್ಯ : ಅಂದರ, ಭಂಡಾರ ಬೆಳದದ್ದು ಬಿಜ್ಜಳಗ ಗೊತ್ತಿರಲಿಲ್ಲೇನು ?

ಪುರೋಹಿತ : ಗೊತ್ತಿತ್ತು, ಆದರೆ ಬಿಜ್ಜಳಗ ಇದು ಮುಖ್ಯ ಅಲ್ಲ. ಭಂಡಾರ ರಾಜನದಲ್ಲ, ಪ್ರಜೆಗಳದು ಅನ್ನೂದು ಅವನಿಗಿ ನುಂಗಲಾರದ ತುತ್ತಾಗ್ಯಾದ.

ಶಿವಾಚಾರ್ಯ : ಅಯ್ಯೋ, ಕೃಷಿಕರಿಗಿ, ಕೂಲಿಕಾರರಿಗಿ ಭಂಡಾರ ಬಳಸೂ ಬಸವಣ್ಣ ನಮಗಾಗಿ ಯಾಕ ಬಳಸ್ತಿಲ್ಲ. ದೇವರೇ.

ಪುರೋಹಿತ : ನಾವು ದೇವರು, ಭೂಮಿಯ ಮೇಲಿನ ದೇವರು - ನಮ್ಮ ಶಾಪ ಅವನಿಗಿ ತಟ್ಟದೇ ಹೋಗೂದಿಲ್ಲ.

ಶಿವಾಚಾರ್ಯ : ಶಾಪ ಅಂತ, ಶಾಪ. ನಿಮ್ಮ ಶಾಪ ಬಸವಣ್ಣನಂಥವರಿಗೆ ತಟ್ಟೂದಿಲ್ಲ.

ಪುರೋಹಿತ : ಯಾಕ ತಟ್ಟೂದಿಲ್ಲ ?

ಶಿವಾಚಾರ್ಯ : ಯಾಕ ತಟ್ಟಬೇಕು ? ಬಸವಣ್ಣ ನಿಮ್ಮ ವರ್ಣಭೇದಪದ್ಧತಿ ವಿರೋಧಿಸೂದು ನ್ಯಾಯ ಅಲ್ಲವೇ?

ಪುರೋಹಿತ : ನೂರಕ್ಕೆ ನೂರು ನ್ಯಾಯ. ಆದರs ಮೊದಲಿನಿಂದ ನಡೆದು ಬಂದ ಈ ಪದ್ಧತಿ ಬಿಡಲು ಹ್ಯಾಂಗ ಸಾಧ್ಯ ? ಒಂದು ವೇಳೆ ಬಿಟ್ಟರ ನಮ್ಮ ಗತಿ ? (ಊಟದಂತೆ ಕೈ ಮಾಡುತ್ತಾನೆ). ನಮ್ಮದಿರಲಿ, ಅವನು ನಿಮ್ಮ ದೇವಾಲಯ, ಮಠ ವಿರೋಧಿಸೂದು ನ್ಯಾಯವಲ್ಲವೇ ?

ಶಿವಾಚಾರ್ಯ : ನೂರಕ್ಕೆ ನೂರು ನ್ಯಾಯ. ಆದರೆ ಮೊದಲಿನಿಂದಲೂ ಬೆಳೆದು ಬಂದ ಈ ದೇವಾಲಯ ಸಂಸ್ಕೃತಿ, ಮಠಸಂಸ್ಕೃತಿ ಬಿಟ್ಟುಕೊಡಲು ಹೇಗೆ ಸಾಧ್ಯ? ಬಿಟ್ಟರ ನಮ್ಮ ಗತಿ? (ಊಟದಂತೆ ಕೈ ಮಾಡುತ್ತಾನೆ).

ಪುರೋಹಿತ : ಅಯ್ಯೋ, ಆಗಮಿಕ ಬ್ರಾಹ್ಮಣನಾಗಿ ಹುಟ್ಟಿ, ವೈದಿಕ ಬ್ರಾಹ್ಮಣ್ಯ ನಾಶಮಾಡಹತ್ತಿದ, ಈ ಬಸವಣ್ಣ (ಉಗುಳುತ್ತಾನೆ).

ಶಿವಾಚಾರ್ಯ : ಅಯ್ಯೋ ಆಗಮಿಕ ಬ್ರಾಹ್ಮಣನಾಗಿ ಹುಟ್ಟಿ, ಆಗಮಿಕ ಬ್ರಾಹ್ಮಣರಾದ ನಮ್ಮನ್ನೇ ನಾಶಮಾಡಹತ್ತಿದ, ಈ ಬಸವಣ್ಣ. ಕೊಡಲಿ ಕಾವು ಕುಲಕ್ಕೆ ಮೂಲ. (ಉಗುಳುತ್ತಾನೆ).

ಇಬ್ಬರು : ಅಂತೂ ಬಸವಣ್ಣನಿಂದಾಗಿ ನಮಗ ಉಳಿಗಾಲ ಇಲ್ಲ.

❖❖

ದೃಶ್ಯ - ೩೪

(ಅನುಭವ ಮಂಟಪ)

ಮಾಚಿದೇವ : ಶರಣರೇ, ಕುಂತಳ ನಾಡು ಆದರ್ಶ ಪ್ರಾಂತವಾಗಿ ರೂಪಗೊಳ್ತಾ ಅದ. ನಮ್ಮ ಆಂದೋಲನದಿಂದಾಗಿ ಲಿಂಗಭೇದ, ವರ್ಣಭೇದ, ವರ್ಗಭೇದರಹಿತ ಮುಕ್ತ ಸಮಾಜವೊಂದು ಉದಯಿಸ್ತಾ ಅದ. ಅನ್ಯ ಪ್ರಾಂತಗಳಲ್ಲಿ ರಾಜಸತ್ತೆ, ಪುರೋಹಿತಸತ್ತೆಗಳಿಂದ ಬ್ಯಾಸತ್ತವರು ಮುಕ್ತವಾತಾವರಣದಾಗ ಬದುಕೂದಕ್ಕಾಗಿ ಇಲ್ಲಿಗಿ ಧಾವಿಸ್ತಾ ಇದ್ದಾರ. ಇದರಿಂದಾಗಿ ಶರಣ ಸಮಾಜಕ್ಕ ವಿಸ್ತಾರ, ವೈವಿಧ್ಯ ಪ್ರಾಪ್ತವಾಗ್ತ ನಡದದ.

ನೀಲಲೋಚನೆ : ಹೌದು, ಸಮಾಜ ಅನೇಕತೆಯಿಂದ ಏಕತೆಯತ್ತ ಧಾವಿಸಲು ಪ್ರಾರಂಭಿಸ್ಯಾದ. ಜೈನಧರ್ಮದ ಮನುಮುನಿ ಗುಮ್ಮಟದೇವ, ನಾಥಪಂಥದ ಗೋರಕ್ಷ ಮೊದಲಾದವರು ದೊಡ್ಡ ಪ್ರಮಣದಾಗ ಬಂದು ಸೇರ್‍ಯಾರ. ಪಾಶುಪತ, ನಕುಲೀಶ, ಮಹಾವ್ರತಿ, ಶುದ್ಧಶೈವರು ಇನ್ನೂ ದೊಡ್ಡ ಪ್ರಮಾಣದಲ್ಲಿ ಒಳಗ ಬಂದಾರ. ಕೆಳವರ್ಣದವರಂತೂ ದಿನಾಲೂ ಒಳಗ ಸೇರತಿದ್ದಾರ. ಹೀಗಾಗಿ ವರ್ಣಭೇದ ಹುಸಿ ಕಲ್ಪನೆ ಅಂತ ಜನರಿಗಿ ಮನವರಿಕ್ಯಾಗ್ಯಾದ.

ಮಾಚಿದೇವ : ಮನವರಿಕೆ ಯಾಕ? ಇದಕ್ಕ ದೊಡ್ಡ ನಿದರ್ಶನ ಅನಿಸೂ ಮದುವಿಯೊಂದು ಇಂದು ಇಲ್ಲಿ ಜರುಗಲಿದೆ.

ಬಸವಣ್ಣ : ಯಾರ ಮದುವಿ ?

ಮಧುವಯ್ಯ : ನನ್ನ ಮಗಳ ಮದುವಿ. ಇವಳನ್ನು ಶರಣ ಹರಳಯ್ಯನ ಮಗನಿಗಿ ಕೊಡಲು ನಾವು ನಿಶ್ಚಯಿಸೀನಿ.

ಹರಳಯ್ಯ : ಇದಕ್ಕ ನಾನೂ ಒಪ್ಪೀನಿ.

ಶರಣರು : ಇದು ನಮಗ ಸಂತೋಷದ ಅಷ್ಟೇ ಅಲ್ಲ, ಹೆಮ್ಮೆಯ ಘಟನೆಯೂ ಆಗ್ಯಾದ. ಇದಕ್ಕ ನಮ್ಮ ಸಮ್ಮತಿ ಅದ.

ಬಸವಣ್ಣ : ಈ ಮದುವಿ ಜರುಗಿದ್ದೇ ಆದರ, ಜಗತ್ತಿನ ಇತಿಹಾಸದಲ್ಲೇ ಇದು ಮೊದಲ ಉದಾಹರಣೆಯಾಗ್ತದ.

ಶರಣರು : ಜರುಗಿದ್ವೇ ಆದರ..... ಯಾಕ ? ಈಗ ಮಧುವಯ್ಯ ಬ್ರಾಹ್ಮಣನಲ್ಲ, ಹರಳಯ್ಯ ಶೂದ್ರನಲ್ಲ, ಇಬ್ಬರೂ ಶರಣರು. ಶರಣರ ರಕ್ತಸಂಬಂಧದಲ್ಲಿ ತಪ್ಪೇನದ ?

ಬಸವಣ್ಣ : ತಪ್ಪೇನೂ ಇಲ್ಲ. ಮದುವೀಽ ವಿಷಯದಲ್ಲಿ ನಾವು ಈಗಾಗಲೇ ಸುಧಾರಣೆ ಆರಂಭಿಸೀವಿ. ಇದು ದೊಡ್ಡ ಸುಧಾರಣೆ.

ಮಾಚಿದೇವ : ಹೌದು, ಬಸವಣ್ಣಾ, ಈ ವರೆಗೆ ಕೆಲವೊಮ್ಮೆ ಹೆಂಡತಿದು ಒಂದು ಧರ್ಮಾಚರಣೆ, ಗಂಡನದು ಇನ್ನೊಂದು ಧರ್ಮಾಚರಣೆಯಾಗಿತ್ತು. ಇದರಿಂದಾಗಿ ಆ ಕುಟುಂಬಗಳ ದಾಂಪತ್ಯ ಅಶಾಂತಿಯಿಂದ ತುಂಬಿ ಹೋಗಿತ್ತು. ಆದರ ದಂಪತಿಗಳದು ಒಂದೇ ಧರ್ಮಾಚರಣೆ ಯಾಗಬೇಕೆಂಬ ನಮ್ಮ ಸಿದ್ಧಾಂತದಿಂದಾಗಿ, ಅವರಲ್ಲಿ ಒಂದೇ ಮನೋಧರ್ಮ ರೂಪಗೊಂಡು, ಮನೆಗಳು ಮಹಾಮನಿಗಳಾಗ್ತಾ ನಡದಾವ.

ಹರಳಯ್ಯ : ಹೌದು. "ಗಂಡ ಶಿವಲಿಂಗದೇವರ ಭಕ್ತ. ಹೆಂಡತಿ ಮಾರಿ ಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ-ಮಾಂಸ, ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ". ಹೀಗಾಗಬಾರದೆಂಬ ಬಸವಣ್ಣನವರ ವಚನ ಆಚರಣೆಗೆ ಬಂದು, ಆದರ್ಶ ದಾಂಪತ್ಯಗಳು ಅಸ್ತಿತ್ವಕ್ಕ ಬರತೊಡಗ್ಯಾವ.

ಮಾಚಿದೇವ : ಸಧ್ಯ ಜರುಗಲಿರುವ ಮದುವಿ ಇನ್ನೊಂದು ಪ್ರಯೋಗ. ನಾಗಿಮಯ್ಯನ ಮನೆಯಲ್ಲಿ ನೀವು ಊಟ ಮಾಡುವ ಮೂಲಕ ಅಂತ್ಯಜರ ಕೃತಕ ಕನಿಷ್ಠತೆಯನ್ನು ಕೆಡವಿದ ನಾವು, ಈ ಮದುವಿ ಮೂಲಕ ಬ್ರಾಹ್ಮಣರ ಕೃತಕ ಶ್ರೇಷ್ಠತೆಯನ್ನು ಕೆಡವೂದು ನ್ಯಾಯವೇ ಆಗ್ಯಾದ.

ಬಸವಣ್ಣ : ನಿಜ. ಆದರ ಈವರೆಗಿನ ಮದುವಿಗಳೇ ಬ್ಯಾರೆ, ಇದೇ ಬ್ಯಾರೆ. ಇದು ಯಾವ ಯಾವುದೋ ಮೇಲು ವರ್ಣಗಳ ನಡುವಿನ ಮದುವಿ ಅಲ್ಲ, ಮೇಲುವರ್ಣ- ಕೆಳವರ್ಣಗಳ ಮದುವಿ. ಬ್ರಾಹ್ಮಣ-ಶೂದ್ರ ಇವು ಸಮಾಜದ ಎರಡು ತುದಿಗಳು. ವರ್ಣವಾದಿಗಳು ಈ ಮದುವಿ ಹ್ಯಾಂಗ ಸ್ವೀಕರಿಸತಾರೋ ನೋಡಬೇಕು. ವರ್ಗವಾದಿ ಬಿಜ್ಜಳ ಈಗಾಗಲೇ ಅಸಹನೆಯಿಂದ ಉರೀತಾನ. ಅವನೊಂದಿಗೆ ಈ ವರ್ಣವಾದಿಗಳು ಸೇರಿಕೊಂಡು ನಮ್ಮನ್ನು ಅಪರಾಧಿ ಸ್ಥಾನದಾಗ ನಿಲ್ಲಿಸಬಹುದು.

ಮಧುವಯ್ಯ : ನೀವು ಹೇಳುವ ಎಲ್ಲ ಅಪಾಯ ಊಹಿಸಿಕೊಂಡೇ ಎರಡೂ ಕುಟುಂಬದವರು ಈ ನಿರ್ಣಯಕ್ಕ ಬಂದೀವಿ. ತತ್ವ ಇರೂದು ಹೇಳಲಿಕ್ಕಲ್ಲ, ಬಾಳಲಿಕ್ಕ - ಎಂಬ ನಿಮ್ಮ ಮಾತ ನಂಬಿರುವ ನಮಗ, ಇದರಲ್ಲಿ ಏನೂ ತಪ್ಪ ಕಾಣಿಸೂದಿಲ್ಲ. "ಎಮ್ಮವರು ಬೆಸಗೊಂಡರೆ ಶುಭಲಗ್ನ" ಎಂಬ ನಿಮ್ಮ ವಚನವಾಣಿ ಆಚರಣೆಗಿಳಿಯಲಿ. ಶೀಲವಂತ, ನೀಲಾ ಬನ್ನಿರಿ. (ಇಬ್ಬರೂ ಸಭೆಯ ಮಧ್ಯೆ ಬಂದು ನಿಲ್ಲುತ್ತಾರೆ).

ಬಸವಣ್ಣ : ಪ್ರಮಾಣ ವಚನ ಸ್ವೀಕರಿಸಿರಿ.

ಶೀಲವಂತ : ನಾನು ನೀಲಾವತಿಯನ್ನು ಆತ್ಮಸಾಕ್ಷಿಯಾಗಿ, ಶರಣಸಮಾಜ ಸಾಕ್ಷಿಯಾಗಿ ಪತ್ನಿ ಅಂತ ಸ್ವೀಕರಿಸ್ತೀನಿ.

ನೀಲಾವತಿ : ನಾನು ಶೀಲವಂತನನ್ನು ಆತ್ಮಸಾಕ್ಷಿಯಾಗಿ, ಶರಣಸಮಾಜ ಸಾಕ್ಷಿಯಾಗಿ ಪತಿ ಅಂತ ಸ್ವೀಕರಿಸ್ತೀನಿ. (ಹಾರ ವಿನಿಮಯ).

ಬಸವಣ್ಣ : "ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರಲಿಂಗಕ್ಕೆ ಅರ್ಪಿತವಾಗಿತ್ತು" ಎಂಬ ಪ್ರಭುದೇವರ ವಚನೋಕ್ತಿಯ ಆದರ್ಶದಲ್ಲಿ ಬಾಳಿರಿ.

ಶರಣರು : ಶರಣದಂಪತಿಗಳಿಗೆ ಕಲ್ಯಾಣವಾಗಲಿ. ಜಾತ್ಯತೀತ ವಿವಾಹಕ್ಕೆ ಜಯವಾಗಲಿ.
("ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತದೆ).

❖❖

ದೃಶ್ಯ - ೩೫

(ಬಸವಣ್ಣನ ಮಹಾಮನೆ. ಹೊರಗೆ 'ಬಸವಣ್ಣನಿಗೆ ಧಿಕ್ಕಾರ', 'ಸನಾತನ ಪೀಠದ್ರೋಹಿಗೆ ಧಿಕ್ಕಾರ' ಫಲಕ ಎತ್ತಿ ಹಿಡಿದು ಮಾಹೇಶ್ವರರು ಕೂಗುತ್ತಿದ್ದಾರೆ. ಹಣೆಯ ಮೇಲೆ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಗಳಿವೆ. ಮಾಚಿದೇವ ಅವಸರದಿಂದ ಬರುತ್ತಾನೆ).

ಮಾಚಿದೇವ : ಬಸವಣ್ಣಾ, ಹೊರಗ ಲಕುಲೀಶಪಂಡಿತ ವಾಮದೇವಶಿವಾಚಾರ್ಯ ಮೊದಲಾದ ಶಿವಾಚಾರ್ಯರ ದೊಡ್ಡ ಗುಂಪು ನೆರದಾದ. ನಿನ್ನೆ ಅಲ್ಲಮನನ್ನು ನಾವು ಶೂನ್ಯಪೀಠಾಧಿಕಾರಿಯನ್ನಾಗಿ ಮಾಡಿದೆವು. ಅದನ್ನು ವಿರೋಧಿಸಿ, ಘೋಷಣೆ ಕೂಗತಿದ್ದಾರ.

ಬಸವಣ್ಣ : ಹೀಗೋ, ಇದನ್ನು ನಾನು ನಿರೀಕ್ಷಿಸಿದ್ದೆ. (ಅಷ್ಟರಲ್ಲಿ ವಾಮದೇವ ಶಿವಾಚಾರ್ಯ, ಲಕುಲೀಶಪಂಡಿತ ಮೊದಲಾದ ಶಿವಾಚಾರ್ಯರು ಒಳಗೆ ನುಗ್ಗುತ್ತಾರೆ). ಏನು ಆಚಾರ್ಯರೇ? ಧರ್ಮಪೀಠಗಳು ಕೆಟ್ಟ ಸರಕಾರದ ಹಾಂಗ ಜನರ ಶೋಷಣೆ ಮಾಡುವುದನ್ನು ಬಿಟ್ಟು, ಪ್ರಗತಿಪರ ವಿಚಾರಗಳ ವಾಹಕವಾಗಬೇಕು ಎಂಬ ವಾದ ನಾವು ಸಮಾಜದ ಮುಂದಿಟ್ಟೆವು. ಎಲ್ಲರೂ ಒಪ್ಪಿಕೊಂಡರು. ಶಿವಾಚಾರ್ಯರಾದ ನೀವು ಮಾತ್ರ ಒಪ್ಪಲಿಲ್ಲ.

ವಾಮದೇವ ಶಿವಾಚಾರ್ಯ : ಪೀಠಕ್ಕ ಬುದ್ಧಿ ಹೇಳಲು ನೀ ಯಾರು ? ಸಾವಿರ ವರ್ಷಗಳಿಂದ ಬಂದ ಪೀಠಸಂಪ್ರಾದಯ ನಾವ್ಯಾಕ ಬದಲಿಸಬೇಕು ?

ಬಸವಣ್ಣ : ಬಿಡಿರಿ, ನಿಮ್ಮ ಕಂದಾಚಾರಪೀಠ ನಿಮಗಿರಲಿ. ಈಗ ನಾವು ಅಸ್ತಿತ್ವಕ್ಕೆ ತಂದುದು 'ಜಾತಿಪೀಠ'ವಲ್ಲ. 'ಜ್ಞಾನಪೀಠ'. ನಮ್ಮ ಚಳುವಳಿಯಿಂದಾಗಿ ಒಂದು ಪರಿಪೂರ್ಣ ಜೀವನಸಿದ್ಧಾಂತ ರೂಪಗೊಂಡಾದ. ಅದನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಜವಾಬ್ದಾರಿಯುಳ್ಳ ಇಂಥ ಒಂದು ಪೀಠಪದ್ಧತಿ ನಮಗ ಅನಿವಾರ್ಯ ಆಗಿತ್ತು. ಕಾರಣ, ನಮ್ಮ ಪಾಡಿಗೆ ನಾವು ಈ ಪೀಠ ಅಸ್ತಿತ್ವಕ್ಕ ತಂದೀವಿ.

ಲಕುಲೀಶ ಪಂಡಿತ : ಆದರ ಈ ಪೀಠ ನಮ್ಮ ಪರಂಪರೆಗೆ ತೊಡಕಾಗ್ತದ.

ಮಾಚಿದೇವ : ಇದೆಲ್ಲಿಯ ಮಾತು ? ನಿಮಗೂ ನಮಗೂ ಎಲ್ಲಿಯ ಸಂಬಂಧ ?

ವಾಮದೇವ ಶಿವಾಚಾರ್ಯ : ತಲೆಹರಟೆ ಬೇಡ. ಕಳೆದ ೧೨ ವರ್ಷಗಳಿಂದ ಅದನ್ನು ಯಾರೂ ಏರದಂತೆ ಅಡ್ಡಿಪಡಿಸಿದ ನಾವು ಈಗಲೂ ಅಡ್ಡಿಪಡಿಸ್ತೀವಿ. ಶಿವಪರ ಪರ್ಯಾಯಪೀಠ ಸ್ಥಾಪಿಸಿದಂತಾಗಿ ಖಂಡಿತ ಇದು ನಮಗ ತೊಡಕಾಗ್ತದ.

ಬಸವಣ್ಣ : ಯಾವುದೇ ಜನಪರ ವಿಚಾರ ನಿಮ್ಮ ವ್ಯವಸ್ಥೆಗೆ ತೊಡಕಾಗತಿದ್ದರ ನಾವೇನು ಮಾಡಬೇಕು? ಅಲ್ಲಮ ಜ್ಞಾನಿ, ಶರಣಸಿದ್ಧಾಂತದ ಸಮರ್ಥವಾಹಕ.

ಲಕುಲೀಶ ಪಂಡಿತ : ಸಮರ್ಥನೋ, ಅಸಮರ್ಥನೋ ನಮಗ ಅದು ಮುಖ್ಯ ಅಲ್ಲ. ಯಾವ ದೇಶದವನೋ ಏನೋ, ಶೂದ್ರನು ಪೀಠವೇರುವ ಈ ಸಂಪ್ರದಾಯ ನಾವು ವಿರೋಧಿಸ್ತೀವಿ,

ಬಸವಣ್ಣ : ಲಕುಲೀಶಪಂಡಿತರೇ "ಜಂಗಮಕ್ಕ ಜಾತಿಯಿಲ್ಲ, ಗಂಗಿಗಿ ಹೊಲೆಯಿಲ್ಲ." ಜ್ಞಾನಕ್ಕೂ ಜಾತಿಗೂ ಸಂಬಂಧವಿಲ್ಲ. ದಾಸೀಪುತ್ರವಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದೇ ವಂದಿಸಬೇಕು -ಇದು ಶರಣ ಸಿದ್ಧಾಂತ.

ವಾಮದೇವ ಶಿವಾಚಾರ್ಯ : ಬೇರೆ ಸಾಮಾಜಗಳ ಪೀಠ ವ್ಯವಸ್ಥೆಯಲ್ಲಿ ಏನು ಬೇಕಾದರೂ ಮಾಡಿಕೋ. ಆದರ ನಮ್ಮ ಶಿವಪರ ಪೀಠವ್ಯವಸ್ಥೆಯ ವರೆಗೆ ಬರೂದಂದರ, ನಮ್ಮ ಧಾರ್ಮಿಕ ಅಧಿಕಾರವನ್ನೇ ಕಸಿದುಕೊಂಡ್ಹಾಂಗ. ಇದನ್ನು ನಾವು ಸಹಿಸೂದಿಲ್ಲ. ಶೈವ ಆಚಾರ್ಯ ವಂಶಸಂಭೂತರಾದ ನಾವೇ ಪೀಠವೇರೂ ಅಧಿಕಾರವುಳ್ಳ ಶುದ್ಧಜಂಗಮರು. ಯಾವುದೇ ಶಿವಪರ ಧಾರ್ಮಿಕ ಅಗ್ರಪೀಠ ಸಲ್ಲಬೇಕಾದುದು ನಮಗೇ.

ಬಸವಣ್ಣ : ಇನ್ನೊಮ್ಮೆ ಹೇಳತೀನಿ ಕೇಳಿ. ಜಂಗಮ ಅನ್ನೂದು ಜಾತಿವಾಚಿಯಲ್ಲ, ಜ್ಞಾನವಾಚಿ. ಸಾಮಾಜಿಕವೇ ಇರಲಿ, ಧಾರ್ಮಿಕವೇ ಇರಲಿ, ಎಲ್ಲ ಹಂತಗಳಲ್ಲಿಯೂ ಜಾತಿಯನ್ನು ನಿರಾಕರಿಸಿ ಜ್ಞಾನ ಎತ್ತಿಹಿಡಿಯುವುದು ನಮ್ಮ ಧ್ಯೇಯ. ("ಇದನ್ನು ನಾವು ವಿರೋಧಿಸತೀವಿ, ಪ್ರತಿಭಟಿಸತೀವಿ" ಎನ್ನುತ್ತ ಕೆಲವು ಮಾಹೇಶ್ವರರು ಕುಳಿತುಕೊಳ್ಳುತ್ತಾರೆ).

ಮಾಚಿದೇವ : ನೀವು ಹೀಂಗ ಹಟ ಹಿಡಿದರ ಏನೂ ಪ್ರಯೋಜನವಾಗೂದಿಲ್ಲ. ಪ್ರಭುದೇವ ಕೇವಲ ಜಂಗಮನಲ್ಲ, ಮಹಾಜಂಗಮ. ಅವನಲ್ಲದ ಮತ್ತಾರು ಈ ಪೀಠಕ್ಕ ಅರ್ಹರು ?

ಲಕುಲೀಶ ಪಂಡಿತ : ಹೀಗೋ. (ಬಸವಣ್ಣನನ್ನು ಉದ್ದೇಶಿಸಿ) ಬಸವಣ್ಣಾ, ಇನ್ನೊಮ್ಮೆ ವಿಚಾರಿಸು. ನೀನು ಜಂಗಮ ಪರಿಕಲ್ಪನೆ ಇಷ್ಟು ದೂರ ಒಯ್ಯೂದರಿಂದ ದೊಡ್ಡ ಸಮಸ್ಯೆ ಉದ್ಭವಿಸ್ತದ.

ಬಸವಣ್ಣ : ನೀವು ಬಡಿಗಿ ಬಳಸಿ ಘಟ್ಟಿವಾಳಯ್ಯನನ್ನು ಮಾರಣಾಂತಿಕವಾಗಿ ಹಿಂಸಿಸಿದಾಗಲೇ 'ಸಮಸ್ಯೆ' ಉದ್ಭವ ಆಗ್ಯಾದ. ಸತ್ಯದ ದಾರ್‍ಯಾಗ ಮುಂದಿಟ್ಟ ಹೆಜ್ಜೆ ಹಿಂದಿಡಲು ನನಗ ಆಗೂದಿಲ್ಲ.

ವಾಮದೇವ ಶಿವಾಚಾರ್ಯ :	ಈ ನಿನ್ನ ಧೋರಣೆ ಕಲ್ಯಾಣ ಹಾಳಾಗಲು ಕಾರಣವಾದೀತು. ಬಸವಣ್ಣಾ, ಕೆಟ್ಟೀತು ಕಲ್ಯಾಣ, ಹಾಳಾದೀತು ನೋಡು, ನಿನ್ನ ಈ ಹೊಸ ರೀತಿಯ ಜಂಗಮದ ಅಭಿಮಾನದಿಂದ.
ಬಸವಣ್ಣ :	ಹಾಳಾದರ ಇಂಥ ಹತ್ತು ಕಲ್ಯಾಣ ಕಟ್ಟಬಹುದು. ನನಗೆ ಮುಖ್ಯವಾದುದು ಜನಕಲ್ಯಾಣ. ನಾನು ಮಾತ್ರ ಜಾತಿಜಂಗಮ ಪೀಠಪರಂಪರೆ ಕೆಡವಿ, ಜ್ಞಾನಿಜಂಗಮ ಪೀಠಪರಂಪರೆ ಬೆಳಸ್ತೀನಿ.
ಲಕುಲೀಶ ಪಂಡಿತ :	ಎಲ್ಲ ಕಾಲಕ್ಕೂ ಅಲ್ಲಮನಂಥವರು ಎಲ್ಲಿ ಸಿಗತಾರ ? ಅಧಿಕಾರ ಅನ್ನೂದು ಬಹಳ ಸೂಕ್ಷ್ಮ. ಸ್ವಾರ್ಥ ಯಾರಿಗೂ ಬಿಟ್ಟಿಲ್ಲ. ಕಾಲಕ್ರಮದಲ್ಲಿ ನಿನ್ನವರೇ ಈ ಪೀಠವನ್ನು ಸಂಕುಚಿತ ಅರ್ಥದಾಗ ಬೆಳಸ್ತಾರ.
ಬಸವಣ್ಣ :	ನೀವು ಹೇಳುವುದೇನು ಬಂತು ? ಇದನ್ನು ನಾನು ಈ ಮೊದಲೇ ಊಹಿಸೀನಿ. ಚಳಿಗಾಲದಲ್ಲಿ ಹೆಪ್ಪುಗಟ್ಟುವುದೂ, ಬೇಸಿಗೆ ಕಾಲದಲ್ಲಿ ಕರಗಿ ಹರಿಯುವುದೂ ನೀರಿನ ಗುಣಧರ್ಮ. ಅದೇ ರೀತಿ ಕರ್ಮದಿಂದ ಸ್ಥಗಿತಗೊಳ್ಳೂದೂ ಧರ್ಮದಿಂದ ಚಲನಶೀಲಗೊಳ್ಳೂದೂ ಸಮಾಜದ ಲಕ್ಷಣ. ಮುಂದ ಸ್ಥಗಿತಗೊಳ್ಳತಾದಂತ ಇಂದು ಅದನ್ನು ಚಲನಶೀಲಗೊಳಿಸದೆ ಬಿಡಬಾರದು. ಆಗಾಗ ಚಲನಶೀಲಗೊಳಿಸೂ ಪ್ರಯೋಗ- ಪ್ರಯತ್ನಗಳು ನಡೆಯಲೇಬೇಕು. ಅದಕs ನಾವು ನಿಮ್ಮಂಗ ಧರ್ಮಗ್ರಂಥ ರಚಿಸಿಲ್ಲ. ವಚನಗಳಲ್ಲಿ ಬೀಜ ಮಾತ ಹೇಳೀವಿ. ನಮ್ಮ ಜನ ಇವುಗಳಿಗೆ ಸಮಕಾಲೀನ ಸಂಸ್ಕಾರ ಕೊಡತಾ ಹೋಗತಾರ. ಪೂರ್ಣಧರ್ಮವಾಗಿರುವ ಇದನ್ನು ಪೂರ್ಣದಿಂದ ಪೂರ್ಣಕ್ಕ ಮುನ್ನಡಸ್ತಾರ.
ವಾಮದೇವ ಶಿವಾಚಾರ್ಯ :	ಅಂಥ ಮಹಾತ್ಮರು ಮತ್ತೆ ಮತ್ತೆ ಹುಟ್ಟಲಾರರು.
ಬಸವಣ್ಣ :	ವ್ಯಕ್ತಿ- ಸಮಾಜಗಳ ಸ್ಥಗಿತತೆಗೆ ಅವಕಾಶ ಕೊಡದ ರೀತಿಲ್ಲಿ ನಮ್ಮ ಸಿದ್ಧಾಂತ ರೂಪಿಸೀವಿ. ಹೀಗಾಗಿ ಮುಂದೆಯೂ ನಮ್ಮ ಜನ, ಸಮಾಜವನ್ನು ಸ್ಥಗಿತ ರೀತಿಯಲ್ಲಿ ಬೆಳಸೂದಿಲ್ಲ. ಅಂತ ನಂಬೀನಿ.
ವಾಮದೇವ ಶಿವಾಚಾರ್ಯ :	(ನಿರ್ಗಮನ ಸ್ಥಿತಿಯಲ್ಲಿ ನಿಂತು) ಅವರು ಹಾಂಗ ಬೆಳಸಲಿ, ಬಿಡಲಿ. ಕ್ರಮೇಣ ನಿನ್ನ ಈ ಜಂಗಮಪೀಠ ಜಾತಿ ಜಂಗಮಪೀಠವಾಗಿ ಪರಿವರ್ತನೆಗೊಳ್ಳೂ ಹಾಂಗ ನಾವ್ ನೋಡಿಕೊಳ್ತೀವಿ.
ಎಲ್ಲರೂ :	(ನಿರ್ಗಮನ ಸ್ಥಿತಿಯಲ್ಲಿ ಎದ್ದು ನಿಂತು) ನೀನು ಸತ್ತರೂ ನಿನ್ನನ್ನು, ನಿನ್ನ ಈ ಸಿದ್ಧಾಂತವನ್ನು ಶತಶತಮಾನಗಳಲ್ಲಿಯೂ ವಿರೋಧಿಸತೀವಿ. (ಎನ್ನುತ್ತ "ಬಸವಣ್ಣನಿಗೆ ಧಿಕ್ಕಾರ" "ಶಿವಾಚಾರ್ಯ ಪೀಠದ್ರೋಹಿಗೆ ಧಿಕ್ಕಾರ" ಎನ್ನುತ್ತ ಎಲ್ಲರೂ ಹೋಗುತ್ತಾರೆ)

❖❖

ದೃಶ್ಯ- ೩೬

(ಸ್ಥಾನಾಚಾರ್ಯರ ಮಠದಲ್ಲಿ ಸಭೆ. ಸ್ಥಾನಾಚಾರ್ಯರು, ಶಿಷ್ಯರು)

ಲಕುಲೀಶ ಪಂಡಿತ : ಬಸವಣ್ಣನ ಸಮಾಜಘಾತಕ ಕಾರ್ಯಗಳು ಒಂದರ ಮೇಲೊಂದು ಘಟಿಸ್ತ ನಡದಾವ. ಮೊನ್ನೆ ವಿಪ್ರರ ವರ್ಣವ್ಯಸ್ಥೆಗೆ ಅವಹೇಳನ ಅನ್ನೂ ಹಾಂಗ ವೈದಿಕ ಬ್ರಾಹ್ಮಣ-ಅಂತ್ಯಜರ ಮದುವಿ ಜರುಗಿಸಿದ. ನಿನ್ನೆ ಹನ್ನೆರಡು ವರ್ಷಗಳ ನಮ್ಮ ವಿರೋಧವನ್ನೂ ಲೆಕ್ಕಿಸದೆ, ಧರ್ಮಪೀಠದ ಮ್ಯಾಲ ಜ್ಞಾನದ ಹೆಸರಿನ್ಯಾಗ ಒಬ್ಬ ಶೂದ್ರನ್ನ ಕುಳ್ಳಿರಿಸಿದ.

ಶಿಷ್ಯ: ಹೌದು ಬುದ್ಧೀ, ಹೊಲಗೇರ್‍ಯಾಗ ಊಟ ಮಾಡಿದಾಗಿನಿಂದ ಬಸವಣ್ಣನ ಮ್ಯಾಲ ಉರಿದೇಳ್ತಿದ್ದ ಬ್ರಾಹ್ಮಣರು, ಮೊನ್ನೆಯ ಹರಳಯ್ಯ - ಮಧುವಯ್ಯಗಳ ಮಕ್ಕಳ ಮದುವೆಯಿಂದ ಇನ್ನಷ್ಟು ಕೆರಳ್ಯಾರ. ಆದರ ಅಸಹಾಯಕರಾಗಿ ಕೈಚೆಲ್ಲಿ ಕುಳಿತುಬಿಟ್ಟಾರ.

ವಾಮದೇವ ಶಿವಾಚಾರ್ಯ : ಯಾಕ ಅಸಹಾಯಕರಾಗಬೇಕು ? ಅನ್ಯಾಯ ಗೆಲ್ಲಲು ಬಿಡಬಾರದು. ಅಲ್ಲಮನನ್ನು ಶೂನ್ಯಸಿಂಹಾಸನದ ಮ್ಯಾಲ ಕುಳ್ಳಿರಿಸಿದ ಸೇಡ ತೀರಿಸಿಕೊಳ್ಳಲು ಇದು ಒಳ್ಳೆಯ ಸಂದರ್ಭ. ಮದುವಿ ಘಟನೆಯಿಂದ ರೊಚ್ಚಿಗೆದ್ದಿರುವ ಬ್ರಾಹ್ಮಣರನ್ನೂ ಈಗ ಬಳಸಿಕೊಂಡು, ಬಸವಣ್ಣನ ಮ್ಯಾಲ ನಾವು ದೊಡ್ಡ ದಾಳಿ ಮಾಡಬೇಕು.

ಶಿಷ್ಯ : ಬ್ರಾಹ್ಮಣರು ಈ ಸಂದರ್ಭದಲ್ಲಿ ಸುಮ್ಮನಿದ್ದರೂ ನಾವು ಸುಮ್ಮನಿರಬಾರದು.

ವಾಮದೇವ ಶಿವಾಚಾರ್ಯ : ಹೌದು, ಈಗ ಬ್ರಾಹ್ಮಣರಿಗಿಂತ ದೊಡ್ಡ ಹಾನಿ, ನೇರವಾದ ಹಾನಿ ನಮಗಾಗ್ಯಾದ. ಇದನ್ನು ತಡೆಯೂದಕ್ಕಾಗಿ ಮದುವೆಯ ಅವಮಾನದಿಂದ ನರಳುತ್ತಲಿರುವ ಬ್ರಾಹ್ಮಣರಿಗಿ ಬರಲಿಕ್ಕ ಹೇಳೀನಿ (ಅಷ್ಟರಲ್ಲಿ ಬ್ರಾಹ್ಮಣರು ಬರುತ್ತಾರೆ).

ಕೇಶವಭಟ್ಟ : ನಮಸ್ಕಾರ, ಶಿವಾಚಾರ್ಯರಿಗೆ.

ಲಕುಲೀಶ ಪಂಡಿತ : ಬರ್‍ರಿ, ಬರ್‍ರಿ ಕುಳಿತುಕೊಳ್ರಿ, (ಸೂಕ್ತ ಸ್ಥಳದಲ್ಲಿ ಬ್ರಾಹ್ಮಣರು ಕುಳಿತುಕೊಳ್ಳುತ್ತಾರೆ).

ಕೇಶವಭಟ್ಟ : ಏನು ಸಮಾಚಾರ ? ಕರಸಿದ್ದು ಯಾಕ?

ಲಕುಲೀಶ ಪಂಡಿತ : ಈ ಬಸವಣ್ಣನ ಬಗ್ಗೆ ನಾವೂ ನೀವೂ ಕೂಡಿ ಒಂದು ನಿರ್ಣಯಕ್ಕ ಬರಲೇಬೇಕಾಗ್ಯಾದ.

ಕೇಶವಭಟ್ಟ : ಯಾಕ ತೆಲಿ ಕೆಡಿಸಿಕೋತೀರಿ? ಕೆಸರಿನ ಮ್ಯಾಗ ಕಲ್ಲ ಒಗದು ಮೈ ಹೊಲಸ ಮಾಡಿಕೋತೀರಿ ?

ಶಿಷ್ಯ : ಎದೆಯ ವರೆಗೂ ಬಂದಿರುವ ಈ ಕೆಸರಿನ್ಯಾಗ ತಿರುಗಾಡೂದು ಹ್ಯಾಂಗ ? ಹೀಂಗs ಬಿಟ್ಟರ ಅದು ಕುತ್ತಿಗಿ ವರೆಗೂ ಬೆಳೀತದ.

ಕೇಶವಭಟ್ಟ : ಏನು ಮಾಡೂದು? ನಮಗಂತೂ ಅವನ ಬಗ್ಗೆ ಬ್ಯಾಸರ, ಹೇಸಿಕಿ ಬಂದುಬಿಟ್ಟಾದ.

ವಾಮದೇವ ಶಿವಾಚಾರ್ಯ : ಯಾಕ ?

ನಾರಣ ಭಟ್ಟ : ಹೊಲಗೇರ್ಯಾಗ ಊಟ ಮಾಡಿದಾಗಲೇ ರಾಜನಿಗೆ ದೂರು ನೀಡಿದೆವು. ವಿಚಾರಣೆ ನಡೀತು. ಏನೂ ಪ್ರಯೋಜನ ಆಗಲಿಲ್ಲ. ಈಗ ಮದುವೆಯ ಬಗ್ಗೆ ದೂರು ಒಯ್ಯುವುದೂ ವ್ಯರ್ಥ. ಇದನ್ನು ಕೈಬಿಡಬೇಕಂತ ಇಂದು ಮುಂಜಾನೆ ಸೇರಿದ್ದ ಸಭೆಯಲ್ಲಿ ನಿರ್ಣಯಿಸೀವಿ. ನಮಗ ಮಾಡಲು ಬ್ಯಾರೆ ಒಳ್ಳೆ ಕೆಲಸ ಅವ.

ಲಕುಲೀಶ ಪಂಡಿತ : ನಿಮ್ಮ ಒಳ್ಳೆ ಕೆಲಸ ಅಂವ ಹಾಳ ಮಾಡ್ತಿದ್ದಾನ. ವರ್ಣಭೇದ ಪರಿಪಾಲನೆ ನಿಮ್ಮ ಕರ್ತವ್ಯ. ಮೊನ್ನೆ ಬ್ರಾಹ್ಮಣ - ಶೂದ್ರ ಮದುವಿ ಜರುಗಿಸಿ ಅದನ್ನು ಮುರದು ಹಾಕದ. ಶಿವಧರ್ಮ ಪೀಠವೇರುವುದು ನಮ್ಮ ಹಕ್ಕು; ನಿನ್ನೆ ಒಬ್ಬ ಶೂದ್ರನ್ನ ಅದರ ಮ್ಯಾಲ ಕುಳ್ಳಿರಿಸಿಬಿಟ್ಟ. ಇವೆರಡೂ ನಿಮ್ಮ ನಮ್ಮ ಸಂಪ್ರದಾಯಗಳಿಗಿ ದೊಡ್ಡ ಅವಹೇಳನಗಳು.

ಕೇಶವಭಟ್ಟ : ಮದುವೆ ಬಿಡಿ. ಅಪವಾದಾತ್ಮಕವೆಂಬಂಥ ಈ ಘಟನೆ ಉಪೇಕ್ಷಿಸಿ, ನಮ್ಮ ವರ್ಣವ್ಯವಸ್ಥೆ ಯಥಾಪ್ರಕಾರ ಮುಂದುವರೀತದ. ಅಲ್ಲಮನ ಘಟನೆ ಹೀಂಗಲ್ಲ. ಧರ್ಮಪೀಠದ ಮೇಲೆ ಒಬ್ಬ ಶೂದ್ರನ್ನ ಕುಳ್ಳಿರಿಸೂದಂದರ ಸಾಕ್ಷಾತ್ ಶಿವನೇ ನಿಮಗೆ ದಯಪಾಲಿಸಿದ ಜಗದ್ಗುರು ಅಧಿಕಾರವನ್ನs ಶಾಶ್ವತ ಕಸಿದುಕೊಂಡ್ಹಂಗ. ಇದು ಬಹಳ ದೊಡ್ಡ ಅನ್ಯಾಯ.

ವಾಮದೇವ ಶಿವಾಚಾರ್ಯ: ಹೌದು, ಅಲ್ಲಮನ ಘಟನೆ ನಮ್ಮ ಧರ್ಮಾಧಿಕಾರದ ಬುಡಕ್ಕೇ ಬೀಸಿದ ಕೊಡಲಿ ಆಗ್ಯಾದ. ಅದಕ್ಕಾಗೇ ನೀವು ಬಿಟ್ಟರೂ ನಾವು ಬಿಡೂದಿಲ್ಲ. ಹೋರಾಟ ಕೈಗೆತ್ತಿಕೊಳ್ತೀವಿ.

ನಾರಣಭಟ್ಟ : ವಾಮದೇವರೇ ಹೋರಾಟಕ್ಕ ಜನ ಬೇಕು.

ವಾಮದೇವ ಶಿವಾಚಾರ್ಯ : ಅದು ನಮಗ ಗೊತ್ತದ. ಶರಣದೀಕ್ಷೆ ಹೊಂದಿದ್ದ ನಮ್ಮವರು ಬಸವಣ್ಣನೊಂದಿಗಿ ಒಂದು ಹಂತದ ವರಿsಗಿ ಸಹಕರಿಸಿದ್ದರು. ಆದರ ನಮ್ಮ ಧರ್ಮಪೀಠದ ಅಧಿಕಾರ ಪ್ರಶ್ನಿಸಿದರ ಬಿಟ್ಟಾರs? ಬಸವಣ್ಣನ ಸಂಘಟನೆಯಿಂದ ಆ ನಮ್ಮ ಜನ ಈಗ ಹೊರಬಂದಾರ. ನಮ್ಮೊಂದಿಗಿ ಸೇರಿಕೊಂಡಾರ. ಇದರಿಂದ ಅವನ ಸಂಘಟನ್ಯಾಗ ದೊಡ್ಡ ಬಿರುಕು ಕಾಣಿಸಿಕೊಂಡದ.

ನಾರಣಭಟ್ಟ : ದೀಕ್ಷೆ ಪಡೆದು ಶರಣರಾಗಿದ್ದ ಅನೇಕ ಜನ ನಮ್ಮ ಬ್ರಾಹ್ಮಣರೂ ಈ ಶೂದ್ರ-ಬ್ರಾಹ್ಮಣ ಮದುವೆಯಿಂದ ಸಿಟ್ಟಿಗೆದ್ದು, ಬಸವಣ್ಣನ ಸಂಘಟನೆಯಿಂದ ಹೊರಬಂದಾರ.

ಲಕುಲೀಶ ಪಂಡಿತ : ಅರಸು ಬಿಜ್ಜಳನೂ, ಅವನ ಪರಿವಾರವೂ ಬಸವಣ್ಣನ ಆರ್ಥಿಕ ಸುಧಾರಣೆಯಿಂದ ಬ್ಯಾಸತ್ತಾರ. ಬಸವಣ್ಣನ ಸಂಘಟನ್ಯಾಗ ಈಗ ಹೆಚ್ಚಾಗಿ ದೀನರು-ದಲಿತರು ಮಾತ್ರ ಉಳಕೊಂಡಾರ.

ನಾರಣಭಟ್ಟ : ರೈತರಾದ ಪಂಚಮಸಾಲಿನವರು, ರೈತರಿಗೆ ಪೂರಕವಾದ ಸಣ್ಣಪುಟ್ಟ ಕೈಗಾರಿಕೆಯವರು ಮತ್ತು ಇವರ ಉತ್ಪಾದನೆಗಳನ್ನು ಮಾರಾಟಮಾಡುವ ವರ್ತಕ ವರ್ಗದವರು ಬಸವಣ್ಣಗ ಬೆಂಬಲವಾಗಿ ಉಳಕೊಂಡಾರ.

ಲಕುಲೀಶ ಪಂಡಿತ : ಸಹಜ ಅದ. ಬಸವಣ್ಣನ ಕಾಯಕ ನೀತಿಯಿಂದಾಗಿ ರಾಜ್ಯದಾಗ ಉದ್ಯೋಗ ಚಟುವಟಿಕೆ ಬೆಳೆದು ನಿಂತಾದ. ಈ ಹಿಂದೆ ಎಂದೂ ಕಾಣದಂಥ ದೊಡ್ಡ ಲಾಭ ಪಂಚಮಸಾಲು ಮೊದಲು ಮಾಡಿ ಐದೂ ಸಾಲುಗಳ ವರ್ತಕರಿಗಿ ಆಗ್ತಾ ಇದೆ. ಹೀಗಾಗಿ ಅವರು ಬಸವಣ್ಣನ ಆಂದೋಲನ ಬೆಂಬಲಿಸೂದು ಸಹಜ ಆಗ್ಯಾದ.

ಕೇಶವ ಭಟ್ಟ : ಚಳುವಳಿಯ ಎದೆಯೇ ಸೀಳಿರುವಾಗ ಈ ನರ-ನಾಡಿಗಳಂಥ ಶೂದ್ರ - ಕೃಷಿಕ - ವರ್ತಕರ ಬೆಂಬಲದಿಂದ ಆಗುವ ಪ್ರಯೋಜನವಾದರೂ ಏನು ? ಯಾವುದೇ ಚಳುವಳಿ ಹೊರಗಿನ ವಿರೋಧ ಹೆಚ್ಚಿದಷ್ಟೂ ಉಗ್ರ ಆಗ್ತದ; ಒಳಗಿನ ವಿಘಟನೆ ಹೆಚ್ಚಿದಷ್ಟೂ ದುರ್ಬಲ ಆಗ್ತದ. ಬಸವಣ್ಣ ಈಗ ಅಂಥ ದುರ್ಬಲ ಪರಿಸ್ಥಿತಿಗಿ ಇಳದಾನ.

ಲಕುಲೀಶ ಪಂಡಿತ : ನೀವು ಹೇಳೂದು ನಿಜ. ಗೂಳಿ ಬಿದ್ದಾಗಲೇ ಆಳಿಗೊಂದು ಕಲ್ಲು ಹಾಕಬೇಕು. ಹೇಳಿ, ಕೇಶವಭಟ್ಟರೇ ಈಗ ನಿಮ್ಮ ವಿಚಾರವೇನು ?

ಕೇಶವಭಟ್ಟ : ವಿಚಾರವೇನಿದೆ ? ಬಸವಣ್ಣನ ಮ್ಯಾಲ ಎಲ್ಲರೂ ಸೇರಿ ದಾಳಿ ಮಾಡೂ ಕಾಲ ಈಗ ಪಕ್ವ ಆಗ್ಯಾದ. ಮುಂದುವರಿಯೋಣ.

ಲಕುಲೀಶ ಪಂಡಿತ : ಹಾಗಾದರ ಇವತ್ತs ರಾಜರಿಗಿ ಹೇಳಿ ಕಳಿಸ್ರಿ. ನಾಳೆ ರಾಜಾಸ್ಥಾನದಾಗ ನಾವೆಲ್ಲ ಸೇರೋಣ. ನೋಡಿ, ಒಂದು ವಿಷಯ : ಅಲ್ಲಮನ ಪೀಠಾರೋಹಣದಿಂದಾದ ನಮ್ಮ ಪೀಠಾಧಿಕಾರದ ನಾಶ, ಏನಂದರೂ ನಮ್ಮ ಧರ್ಮದ ಪ್ರಶ್ನೆ ಅನಸ್ತದ. ಮದುವಿs ಘಟನೆಯಿಂದಾದ ಸಾಮಾಜಿದ ವ್ಯವಸ್ಥೆಯ ನಾಶ ಮಾತ್ರ ಆಡಳಿತದ ಪ್ರಶ್ನೆ ಅನಸ್ತದ. ರಾಜನ ಕಾನೂನು ಮೀರಿದ ಉದ್ಧಟತನ ಅನಸ್ತದ. ......

ವಾಮದೇವ ಶಿವಾಚಾರ್ಯ : ಹೌದು, ಅದಕ್ಕs ನಾಳೆ ರಾಜಸಭೆಯಲ್ಲಿ ಅಲ್ಲಮನ ಪ್ರಸಂಗಕ್ಕಿಂತ ಮದುವೆಯ ಪ್ರಸಂಗವನ್ನೇ ದೊಡ್ಡದು ಮಾಡಿ, ವಾದ ಹೂಡೋಣ.

ಕೇಶವಭಟ್ಟ : ನೀವು ಹೇಳೂದೂ ನಿಜ. ಮದುವಿs ವಿಷಯವನ್ನೇ ಮುಖ್ಯವಾಗಿಟ್ಟುಕೊಂಡು ವಾದಿಸೋಣ.

❖❖

ದೃಶ್ಯ -೩೭

(ಬಿಜ್ಜಳನ ಆಸ್ಥಾನ. ವೈದಿಕರು, ಸ್ಥಾನಾಚಾರ್ಯರು, ರಾಜಪ್ರಮುಖರು ಸೇರಿದ್ದಾರೆ. ತೆರೆಯ ಹಿಂದೆ "ಬಸವಣ್ಣನಿಗೆ ಧಿಕ್ಕಾರ, ವರ್ಣವಿರೋಧಿಗೆ ಧಿಕ್ಕಾರ". - 'ಬಸವಣ್ಣನಿಗೆ ಜಯವಾಗಲಿ, ವರ್ಣವಾದಿಗಳಿಗೆ ಧಿಕ್ಕಾರ, ಎಂಬ ಪರ-ವಿರೋಧ ಧ್ವನಿಗಳು ಗದ್ದಲದ ನಡುವೆ ಆಗಾಗ ಕೇಳಿಸುತ್ತವೆ). ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರಪುರವರಾಧೀಶ್ವರ, ಡಮರುಗತೂರ್ಯ ನಿರ್ಘೋಷಣ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್ - (ಬಿಜ್ಜಳನ ಆಗಮನ).

ದ್ವಿಜರು : ಅಗ್ರಹಾರ - ಗೋ-ಬ್ರಾಹ್ಮಣ ಪರಿಪಾಲಕ, ವರ್ಣಧರ್ಮ ಸಂರಕ್ಷಕ, ಶ್ರೀ ಬಿಜ್ಜಳ ಭೂಪಾಲಾಯ ಶುಭಮಸ್ತು, ಶುಭಮಸ್ತು, ಶುಭಮಸ್ತು.

ಗುರುಗಳು : ಗುರುಜನ, ದೇವಾಲಯ, ಮಠ ಪರಿಪಾಲಕ ಶ್ರೀ ಬಿಜ್ಜಳ ಭೂಪಾಲಾಯ ಸಿದ್ಧಿರಸ್ತು, ಸಿದ್ಧಿರಸ್ತು, ಸಿದ್ಧಿರಸ್ತು.

ದ್ವಿಜರು ಮತ್ತು ಗುರುಗಳು : ದುಷ್ಟ ಶಿಕ್ಷಕ, ಶಿಷ್ಟರಕ್ಷಕ, ಶ್ರೀ ಶ್ರೀ ಬಿಜ್ಜಳ ಭೂಪಾಲಾಯ ಜಯಮಸ್ತು, ಸಿದ್ಧಿರಸ್ತು, ಶುಭಮಸ್ತು, (ಬಿಜ್ಜಳ ಸಿಂಹಾಸನದ ಮೇಲೆ ಆರೂಢನಾಗುತ್ತಾನೆ).

ಬಿಜ್ಜಳ : ಇಂದು ನಾವು ಒಂದು ಧರ್ಮಯುದ್ಧದ ಸನ್ನಿವೇಶದಲ್ಲಿದ್ದೀವಿ. ನನ್ನ ಜೀವನದಾಗ ಅನೇಕ ಆಹ್ವಾನ ಸ್ವೀಕರಿಸಿ, ಮಹಾಯುದ್ಧಗಳಲ್ಲಿ ಜಯಶಾಲಿಯಾಗ್ತಾ ಬಂದೀನಿ. ಆದರ ನಿಮಗ ತಿಳಿದಿರೂ ಹಾಂಗ ಬಸವಣ್ಣನ ನ್ಯಾಯವಿಚಾರಣೆ ಇಂದು ನನಗ ಇನ್ನೂ ದೊಡ್ಡ ಆಹ್ವಾನವಾಗಿ, ದೊಡ್ಡ ಯುದ್ಧವಾಗಿ ಪರಿಣಮಿಸ್ಯಾದ. ಈ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯ ತಿಳಿಯಬಯಸೀನಿ.

ಕೇಶವ ಭಟ್ಟ : ಸಮಾಜಸುಧಾರಣೆಯ ಹೆಸರಿನ್ಯಾಗ "ವರ್ಣವ್ಯವಸ್ಥೆ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

ವಾಮದೇವ ಶಿವಾಚಾರ್ಯ: ಧರ್ಮಸುಧಾರಣೆಯ ಹೆಸರಿನ್ಯಾಗ "ಧರ್ಮವ್ಯವಸ್ಥೆ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

ಮಂಚಣ್ಣ : ರಾಜಕೀಯ ಸುಧಾರಣೆಯ ಹೆಸರಿನ್ಯಾಗ "ರಾಜಧರ್ಮ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

ಬಿಜ್ಜಳ : ಈ ಧಿಕ್ಕಾರಕ್ಕ ನನ್ನ ಅನುಮೋದನೆ ಅದ. ಆದರ ಈ ಸಮಸ್ಯೆ ಹ್ಯಾಂಗ ಎದುರಿಸೂದು ಎಂಬುದು ನಮ್ಮ ಮುಂದಿನ ಪ್ರಶ್ನೆ.

ಕೇಶವಭಟ್ಟ : ಸಾಮೋಪಾಯದಿಂದ ಎದುರಿಸುವ ಎಲ್ಲ ಪ್ರಯತ್ನಗಳೂ ನಮ್ಮ ಮಟ್ಟಿಗೆ ಮುಗದಾವ. ಕಾಯಕ -ದಾಸೋಹತತ್ವದ ಶರಣರ ಮುಂದ ದಾನೋಪಾಯದ ನಮ್ಮ ಆಟ ನಡೆಯದು.

ಬಿಜ್ಜಳ : (ನಡುವೆಯೇ ಬಾಯಿ ಹಾಕಿ) ಹೌದು, ದಂಡೋಪಾಯವೊಂದೇ ನಮಗ ಉಳಿದಿರುವ ದಾರಿ. 'ಭಂಡಾರದ ಮೇಲಿರೂದು ಪ್ರಜೆಗಳ ಒಡೆತನ' ಎಂಬ ಆರ್ಥಿಕ ನೀತಿ ಅಸ್ತಿತ್ವಕ್ಕ ತಂದ ದಿನವೇ ಅವನನ್ನ ಶಿಕ್ಷಿಸಬೇಕಿತ್ತು. ತಿದ್ದಿಕೊಳ್ಳಬಹುದೆಂದು ಭಾವಿಸಿ ಸುಮ್ಮನಾದೆ. ಹೋಗಲಿ, ನಾಗಿಮಯ್ಯನ ಮನ್ಯಾಗ ಊಟಮಾಡಿ ಬಂದು ವಿಪ್ರರ ಮನಸ್ಸಿಗಿ ನೋವು ಮಾಡಿದಾಗಲೇ ಶಿಕ್ಷಿಸಬೇಕಿತ್ತು. ಆಗ ಕಾಲ ಪಕ್ವವಾಗಿಲ್ಲ ಅಂತ ನನ್ನ ಮನಸ್ಸ ಹೇಳ್ತು. ಅವನ ಸಂಘಟನೆಯೊಳಗ ಬಿರುಕು ಹುಟ್ಟುವ ದಿನವನ್ನು ಎದುರು ನೋಡುತಿದ್ದೆ.

ನಾರಣಭಟ್ಟ : ಈಗ ಬಿರುಕು ಹುಟ್ಯಾದ. ಅವನ ಸಂಘಟನೆಯೊಳಗ ಸೇರಿಕೊಂಡಿದ್ದ ಆಗಮಿಕ ಲಿಂಗಿಬ್ರಾಹ್ಮಣರು, ವೈದಿಕ ಬ್ರಾಹ್ಮಣರು ನಡುನೀರಿನಲ್ಲಿಯೇ ಅವನ ಕೈಬಿಟ್ಟು ನಮ್ಮೊಂದಿಗೆ ಬಂದಾರ. ಭೇದೋಪಾಯ ತಾನಾಗಿಯೇ ಸೃಷ್ಟಿಯಾಗಿ, ದಂಡೋಪಾಯಕ್ಕ ಕಾಲ ಕೂಡಿ ಬಂದದ.

ವಾಮದೇವ ಶಿವಾಚಾರ್ಯ : ಕಾಯ್ದಿರುವಾಗಲೇ ಕಬ್ಬಿಣ ಬಡೀಬೇಕು.

ಬಿಜ್ಜಳ : ನೀವು ಹೇಳೋದೇನೋ ನಿಜ. ಆದರೂ ಇನ್ನೊಮ್ಮೆ ವಿಚಾರ ಮಾಡ್ರಿ.

ಮಂಚಣ್ಣ : ವಿಚಾರ ಮಾಡೂದೇನದ ? ನಾರಣಭಟ್ಟರ, ವಾಮದೇವಯ್ಯನವರ ಈ ಅಭಿಪ್ರಾಯವನ್ನ ಆಡಳಿತ ವರ್ಗದ ನಾವೂ ಬೆಂಬಲಿಸ್ತೀವಿ, ನಿನ್ನೆ ನಡದ ಮದುವಿಯಂತೂ ಈ ರಾಜ್ಯದಲ್ಲಿ ಕಾನೂನಿನ ವ್ಯವಸ್ಥೆಯೇ ಇಲ್ಲ ಅನ್ನೂ ಹಾಂಗ ಘಟಿಸಿಬಿಟ್ಟಿತು.

ಲಕುಲೀಶ ಪಂಡಿತ : ಕುಂತಳ ರಾಜ್ಯದಲ್ಲಿ ಸಮಾಜ ವ್ಯವಸ್ಥೆ ನೋಡಿಕೊಳ್ಳುವವರು ನೀವೋ? ಆ ಬಸವಣ್ಣನೋ?

ಕೇಶಭಟ್ಟ : ಸಮಾಜ ಅನ್ನೂದು ಒಂದು ದೊಡ್ಡ ಅಸ್ತ್ರ. ಅದನ್ನು ರಾಜನಿಗೆ ಅನುಕೂಲವಾಗೂ ಹಾಂಗ ನಾವು ಈ ವರಿಗೆ ರೂಪಿಸ್ತ ಬಂದೀವಿ. ಹೀಗೆ ಬಿಟ್ಟರ ಅದು ನಿಮಗ ಪ್ರತಿಕೂಲ ಅಸ್ತ್ರವಾಗಿ ಬೆಳೆದೀತು.

ಬಿಜ್ಜಳ : ಹಾಗಾದರ ಹರಳಯ್ಯ-ಮಧುವಯ್ಯಗಳನ್ನು, ಈ ಮದುವಿಗಿ ಕಾರಣನಾದ ಬಸವಣ್ಣನನ್ನು ನ್ಯಾಯ ವಿಚಾರಣೆಗೆ ಗುರುಪಡಿಸೋಣವೇ ?

ಕೇಶವಭಟ್ಟ : ಇದರಾಗ ಕೇಳೂದೇನದ ? ವಿಚಾರಣಾಸ್ಥಾನದಲ್ಲಿ ನಿಲ್ಲಿಸಿ ಮಹಾರಾಜರು ಇಂದು ತೀರ್ಪು ನೀಡಲೇಬೇಕು.

ಬಿಜ್ಜಳ : ಅಪರಾಧಿಗಳನ್ನು ಬಂಧಿಸಿಕೊಂಡು ಬೀದಿಯಲ್ಲಿ ಕರೆದು ತನ್ನಿ. (ಇಬ್ಬರು ಯೋಧರು ಹೋಗುತ್ತಾರೆ. ಬಿಜ್ಜಳ ಸ್ವಗತ) ನಾನೊಂದು ಬಗದರ ದೈವವೊಂದು ಬಗೀತು. ಬಸವಣ್ಣನ ಪ್ರಭಾವವನ್ನು ಸ್ವಾರ್ಥಕ್ಕ, ರಾಜಸತ್ತೆಗೆ ರಕ್ಷಣೆಯಾಗಿ ಬಳಸಿಕೊಳ್ಳಲು ಯೋಚಿಸಿದೆ. ಕೈಗೂಡಲಿಲ್ಲ. ಅಸತ್ಯದೊಂದಿಗೆ ಸತ್ಯ ಹ್ಯಾಂಗ ಸಹಕರಿಸೀತು. (ಅಷ್ಟರಲ್ಲಿ ಬಸವಣ್ಣ, ಹರಳಯ್ಯ-ಮಧುವಯ್ಯಗಳನ್ನು ಅನುಭವಮಂಟಪದಲ್ಲಿ ಬೇಡಿ ತೊಡಿಸಿ ಬಂಧಿಸಲಾಗುವುದು. ದೂರದಿಂದ 'ಭವಿ ಬಿಜ್ಜಳನಿಗೆ ಧಿಕ್ಕಾರ, ಪುರೋಹಿತಶಾಹಿಗೆ ಧಿಕ್ಕಾರ, ಇತ್ಯಾದಿ ಧ್ವನಿಗಳು ಕೇಳಿಸುತ್ತವೆ. ಬೀದಿಯಲ್ಲಿ ಮೂವರನ್ನು ಕರೆದುಕೊಂಡು ಬರುತ್ತಾರೆ. ಶರಣ ಸಮೂಹ "ಭವಿ ಬಿಜ್ಜಳನಿಗೆ ಧಿಕ್ಕಾರ, ಪುರೋಹಿತ ಶಾಹಿಗೆ ಧಿಕ್ಕಾರ" ಎಂದು ಹೇಳುತ್ತ ಹಿಂಬಾಲಿಸುತ್ತದೆ. ಬಸವಣ್ಣನ ಮೈಮೇಲೆ ಬಿಳಿ ಪಂಚೆ ಮಾತ್ರವಿದೆ. ಹರಳಯ್ಯ-ಮಧುವಯ್ಯಗಳದು ಎಂದಿನಂತೆ ಸರಳವೇಷ. ಆಸ್ಥಾನಕ್ಕೆ ಪ್ರವೇಶ. "ಬಸವಣ್ಣನಿಗೆ ಧಿಕ್ಕಾರ, ವರ್ಣವಿರೋಧಿಗೆ ಧಿಕ್ಕಾರ" ಎಂಬ ಕೂಗು ಪುರೋಹಿತ ವರ್ಗದಿಂದ ಕೇಳಿ ಬರುತ್ತದೆ).

ಬಿಜ್ಜಳ : ಬಸವಣ್ಣಾ, ಸುಧಾರಣೆಯು ನೆವದಾಗ ಸಮಾಜಧರ್ಮ,ರಾಜಧರ್ಮಗಳೆರಡನ್ನೂ ನೀನು ನಾಶಮಾಡುತ್ತೀ ಎಂಬ ಆರೋಪ ನಿಮ್ಮ ಮ್ಯಾಲದ.

ಬಸವಣ್ಣ : ಪ್ರಭೂ ನಾನು ನಾಶಮಾಡಿಲ್ಲ. 'ನಾಶ' ಮಾಡುವವ ಅಲ್ಲ. 'ನಿರ್ಮಾಣ' ಮಾಡಬೇಕು ಅನ್ನುವವ.

ಕೇಶವಭಟ್ಟ : ಇವನಿಗಿ ಬಂಧನದ ಅವಮಾನದಿಂದ ಇನ್ನೂ ಜ್ಞಾನೋದಯವಾಗಿಲ್ಲ ಅಂತ ಕಾಣತದ.

ಬಸವಣ್ಣ : ನಾನು ತಪ್ಪು ಮಾಡಿಲ್ಲ. ಹೀಗಿರುವಾಗ ಈ ಬಂಧನ ನನಗ ಅಪಮಾನವಲ್ಲ. ಅವಮಾನ, ಈ ಬಂಧನ ಮಾಡಿದವರಿಗಿ.

ಬಿಜ್ಜಳ : ಅಂದರ ನನಗ ?

ಬಸವಣ್ಣ : ನಾನು ಹಾಗೆ ಹೇಳಿದೆನೆ ? ವರ್ತಮಾನದಲ್ಲಿ ಸತ್ಯಕ್ಕ ಅವಮಾನ ಮಾಡಿದವರು ಭವಿಷ್ಯತ್ತಿನಲ್ಲಿ ಶಾಶ್ವತ ಅವಮಾನಕ್ಕ ಗುರಿಯಾಗ್ತಾರ, ಅಷ್ಟೇ.

ಬಿಜ್ಜಳ : ನಾಲಗಿ ಬಿಗಿಹಿಡಿದು ಮಾತಾಡು. ಪ್ರಜೆಗಳನ್ನು ಜಾಗ್ರತಗೊಳಿಸುವ ಮೂಲಕ ನನ್ನ ಅಧಿಕಾರವನ್ನೇ ದುರ್ಬಲಮಾಡಿ, ಅವಮಾನಿಸಿದವರು ಯಾರು ?

ಬಸವಣ್ಣ : ಅಧಿಕಾರ, ಅಧಿಕಾರ, ಅಧಿಕಾರ. ರಾಜ್ಯದ ಮ್ಯಾಲ ಯಾರ ಅಧಿಕಾರ ? ರಾಜ್ಯವನ್ನು ಪ್ರೀತಿಸುವವರ ಅಧಿಕಾರವೇ ಹೊರತು, ಅಧಿಕಾರವನ್ನು ಪ್ರೀತಿಸುವವರ ಅಧಿಕಾರವಲ್ಲ.

ಬಿಜ್ಜಳ : ನೀನು ರಾಜ್ಯವನ್ನು ಪ್ರೀತಿಸುವವ, ನಾನು ಅಧಿಕಾರವನ್ನು ಪ್ರೀತಿಸುವವ ?

ಶರಣರು : ಹೌದು. ಬಸವಣ್ಣ ರಾಜ್ಯವನ್ನು ಪ್ರೀತಿಸಿದ ಕಾರಣ ಕುಂತಳದೇಶ ಸುಖೀರಾಜ್ಯವಾಗಿ ಬೆಳೀತಾ ಇದೆ. "ಶ್ರಮ ವ್ಯಕ್ತಿಗೆ, ಶ್ರಮದ ಫಲ ಸಮಾಜಕ್ಕ" ಎಂದು ಬದುಕಲು ಕಲಿಸಿದ ಕಾರಣ, ಸುಖೀರಾಜ್ಯ ಬೆಳೀತಾ ಇದೆ.

ಮಂಚಣ್ಣ : 'ರಾಜಸತ್ತೆ' ನಾಶಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

ನಾರಣಭಟ್ಟ : 'ವರ್ಣಸತ್ತೆ' ಹಾಳುಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

ವಾಮದೇವ ಶಿವಾಚಾರ್ಯ : 'ಧರ್ಮಸತ್ತೆ' ಹಾಳು ಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

ಎಲ್ಲರೂ : ರಾಜ್ಯಕ್ಕ ಸುಖವಾಗಬೇಕಾದರ ನಿನ್ನಂಥ ದ್ರೋಹಿಗಿ ತಕ್ಕ ಶಿಕ್ಷೆಯಾಗಲೇಬೇಕು.

ಬಿಜ್ಜಳ : ಬಸವಣ್ಣಾ, ಕೊನೆಯ ಎಚ್ಚರಿಕೆ ನೀಡತೀನಿ. ಇನ್ನೊಮ್ಮೆ ವಿಚಾರಿಸು. ನಿನ್ನ ಧಾರ್ಮಿಕ ಸುಧಾರಣೆಗೆ ನನ್ನ ಸಮ್ಮತಿ ಅದ. ಆದರ 'ಆರ್ಥಿಕ ಸಮಾನತೆ", "ಸಾಮಾಜಿಕ ಸಮಾನತೆ" ಈ ಎರಡೂ ಹುಚ್ಚು ವಿಚಾರಗಳನ್ನು ಕೈ ಬಿಡು.

ಬಸವಣ್ಣ : ಪ್ರಭು, ಸತ್ಯವನ್ನು ಕೈಬಿಡುವುದು ನನ್ನಿಂದ ಸಾಧ್ಯವಿಲ್ಲ.

ಬಿಜ್ಜಳ : ಇದೇ ನಿನ್ನ ಅಂತಿಮ ನಿರ್ಧಾರವಾಗಿದ್ದರ ಮಂತ್ರಿಪದವಿ ಬಿಡಬೇಕಾಗ್ತದ.

ಬಸವಣ್ಣ : ಮಂತ್ರಿ ಪದವಿ ಯಾಕ? ಪ್ರಾಣವನ್ನು ಬಿಡಲೂ ಸಿದ್ಧ. ಆದರ ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ, ಧಾರ್ಮಿಕ ಅಸಮಾನತೆಗಳ ನಿವಾರಣೆಯ ವಿಚಾರವನ್ನೂ ಇದನ್ನು ಬಾಳುತ್ತಲಿರುವ ಈ ಪ್ರಜೆಗಳನ್ನೂ ಕೈಬಿಡಲಾರೆ.

ಕೇಶವಭಟ್ಟ : ರಾಜ ದೊಡ್ಡವರೋ, ಈ ಪ್ರಜೆಗಳು ದೊಡ್ಡವರೋ ?

ಬಸವಣ್ಣ : ಭವಿಗಿಂತ ಭಕ್ತ ದೊಡ್ಡವ.

ಲಕುಲೀಶಪಂಡಿತ : ಹಾಗಾದರ ಚಕ್ರವರ್ತಿಗಳು ಭವಿ ?

ಬಸವಣ್ಣ : ನಾನು ಬಿಡಿಸಿ ಹೇಳಲಾರೆ. ಭವಿ ಎಷ್ಟೇ ದೊಡ್ಡವನಿರಲಿ ವ್ಯಕ್ತಿವಾದಿ. ಭಕ್ತ ಎಷ್ಟೇ ಸಣ್ಣವನಿರಲಿ ಸಮಾಜವಾದಿ, ಮಾನವತಾವಾದಿ.

ಕೇಶವಭಟ್ಟ : ಹಾಗಾದರ ನಿನ್ನ ಶರಣರು ಮಾನವತಾವಾದಿ, ನಮ್ಮ ಚಕ್ರವರ್ತಿಗಳು ವ್ಯಕ್ತಿವಾದಿ? ಬಸವಣ್ಣಾ, ಎಚ್ಚರದಿಂದ ಮಾತಾಡು, ಕೆಟ್ಟೀತು ಕಲ್ಯಾಣ, ಹಾಳಾದೀತು.....

ಬಿಜ್ಜಳ : (ಕಿವಿಮುಚ್ಚಿಕೊಳ್ಳುತ್ತಾ) ಸಾಕು, ಸಾಕು, ನಾನು ಕಷ್ಟಪಟ್ಟು ಗಳಿಸಿದ ಈ ಕಲ್ಯಾಣದ ಬಗ್ಗೆ ಅಪಶಕುನ ಕೇಳಲಾರೆ. ಮಾತು ಹೆಚ್ಚು ಬೆಳೆಸಬ್ಯಾಡರಿ. (ಗಂಭೀರವಾಗಿ) ಇದು ಚಕ್ರವರ್ತಿಯ ತೀರ್ಪು:ರಾಜಸತ್ತೆ ವರ್ಣಸತ್ತೆ

ಧರ್ಮಸತ್ತೆಗಳನ್ನು ಮೀರಿದ ಬಸವಣ್ಣನವರನ್ನು ಮಂತ್ರಿಪದವಿಯಿಂದ ಚ್ಯುತಗೊಳಿಸಿ, ಗಡಿಪಾರು ಶಿಕ್ಷೆ ನೀಡಲಾಗಿದೆ. ವರ್ಣ ವ್ಯವಸ್ಥೆ ಧಿಕ್ಕರಿಸಿದ ಹರಳಯ್ಯ-ಮಧುವಯ್ಯನವರ ವಿಚಾರಣೆ ನಾಳೆಗೆ ಮುಂದೂಡಲಾಗಿದೆ....
(ತಟ್ಟನೇ ಬಿಜ್ಜಳ ಎದ್ದು ಹೋಗುವಷ್ಟರಲ್ಲಿ)

ಬಸವಣ್ಣ : ಪ್ರಭೂ ಪ್ರಭೂ. (ಎನ್ನುವಷ್ಟರಲ್ಲಿ ಬಿಜ್ಜಳ ಕಿವಿಯಲ್ಲಿ ಹಾಕಿಕೊಳ್ಳದೆ ಎದ್ದು ಹೋಗುತ್ತಾನೆ. ಸೈನಿಕರು ಖಡ್ಗ ಹಿರಿದು ಬಸವಣ್ಣನ ಸುತ್ತು ನಿಲ್ಲುತ್ತಾರೆ. ಮೊದಲು ಹರಳಯ್ಯ-ಮಧವಯ್ಯಗಳನ್ನು ಕರೆದುಕೊಂಡು ಹೋಗುತ್ತಾರೆ. ಬಳಿಕ ಬಸವಣ್ಣನನ್ನು ಕರೆದುಕೊಂಡು ಹೋಗುವಾಗ ಅವನ ಹೆಜ್ಜೆಗಳು ಮಾತ್ರ ನೆಲದ ಮೇಲೆ ಮೂಡುತ್ತ ಮುಂದುವರಿಯುತ್ತವೆ. ಬಿಜ್ಜಳನಿಗೆ ಜಯವಾಗಲಿ, ಬಸಮ್ಣನಿಗೆ ಜಯವಾಗಲಿ, ಬಿಜ್ಜಳನಿಗೆ ಧಿಕ್ಕಾರ,ಬಸಮ್ಣನವರಿಗೆ ಧಿಕ್ಕಾರ ಎಂಬ ಪರ-ವಿರೋಧ ಘೋಷಣೆಗಳು ಕೇಳಿಸುತ್ತವೆ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ವಾಕ್ಯ ದೊಡ್ಡ ದನಿಯಲ್ಲಿ ಪದೇ ಪದೇ ಕೇಳಿಸುತ್ತದೆ. ಕೊನೆಗೆ ಪ್ರತಿಧ್ವನಿ ರೂಪದಲ್ಲಿ ಕ್ಷೀಣವಾಗುತ್ತ ಹೋಗುತ್ತದೆ).

❖❖

ದೃಶ್ಯ -೩೮

ಡಂಗುರದವ : ಕೇಳಿರಿ, ಕೇಳಿರಿ, ಮಕ್ಕಳ ಮದುವೆಯ ಮೂಲಕ ವರ್ಣಧರ್ಮ ನಾಶಮಾಡಿದ ಹರಳಯ್ಯ ಮಧುವಯ್ಯಗಳಿಗೆ ಬಿಜ್ಜಳ ಮಹಾರಾಜರು ಇಂದು ಎಳೆಹೂಟೆ ಶಿಕ್ಷೆ ವಿಧಿಸ್ಯಾರ. ಎಳೆಹೂಟೆ, ಎಳೆಹೂಟೆ (ಸಾರುತ್ತ ಹೋಗುತ್ತಾನೆ. ಆಮೇಲೆ ಬಂಧಿತರನ್ನು ಕರೆದುಕೊಂಡು ಹೋಗುವ ದೃಶ್ಯ, ಬಳಿಕ ಎಳೆಹೂಟೆ ದೃಶ್ಯ).

ಡಂಗುರದವ : ಕೇಳಿರಿ, ಕೇಳಿರಿ, ರಾಜಸತ್ತೆ, ವರ್ಣಸತ್ತೆಗಳನ್ನು ಪ್ರಶ್ನಿಸುವ ವಚನಸಾಹಿತ್ಯಕ್ಕ ಬಿಜ್ಜಳ ಮಹಾರಾಜರು ಬಹಿಷ್ಕಾರ ವಿಧಿಸ್ಯಾರ. ವಚನಸಾಹಿತ್ಯಕ್ಕ ಬಹಿಷ್ಕಾರ, ಬಹಿಷ್ಕಾರ, ಬಹಿಷ್ಕಾರ (ಸಾರುತ್ತ ಹೋಗುತ್ತಾನೆ. ಬಳಿಕ ಶರಣರು ವಚನಕಟ್ಟುಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಮುಚ್ಚಿಡುತ್ತಿದ್ದಾರೆ. ಪುರೋಹಿತರು, ಶಿವಾಚಾರ್ಯರು, ಅಧಿಕಾರಿಗಳು ಅವುಗಳನ್ನು ಹುಡುಕಿ ಅಲ್ಲಲ್ಲಿ ಸುಡುತ್ತಲಿದ್ದಾರೆ).

❖❖

ದೃಶ್ಯ -೩೯

(ಬಿಜ್ಜಳನ ಅರಮನೆಯ ಮುಂಭಾಗ. ಜಗದೇವ ಮಲ್ಲಿಬೊಮ್ಮಣ್ಣ ದೀವಟಿಗೆ ಸಜ್ಜುಗೊಳಿಸುತ್ತಲಿದ್ದಾರೆ).

ಜಗದೇವ : ಮಲ್ಲಿಬೊಮ್ಮಣ್ಣ, ಮೂರು ತಿಂಗಳ ಹಿಂದೆ ಜರುಗಿದ ಹರಳಯ್ಯ -ಮಧುವಯ್ಯಗಳ ಎಳೆಹೂಟೆ ಶಿಕ್ಷೆ ನೋಡಬಾರದು. ಕೇಳಬಾರದು.

ಮಲ್ಲಿಬೊಮ್ಮಣ್ಣ : ಜಗದೇವಾ, ಎಂಥ ಕ್ರೂರ ಘಟನೆ. ವೈದಿಕ ಪುರೋಹಿತ ವರ್ಗ, ಶೈವ ಆಚಾರ್ಯವರ್ಗ, ಬಿಜ್ಜಳ ಮೊದಲಾದ ರಾಜವರ್ಗವೆಂಬ ಪಟ್ಟಭದ್ರರು ಸೇರಿ, ಹಾಡುಹಗಲೇ ನಮ್ಮ ಶರಣರಿಗೆ ಅಪಮಾನ ಮಾಡಿದರು. ನಮ್ಮ ಸಾಹಿತ್ಯಕ್ಕ ಅನ್ಯಾಯ ಮಾಡಿದರು.

ಜಗದೇವ : ವೈದಿಕ ಬ್ರಾಹ್ಮಣರು, ಅವರಿಗಿಂತ ಆಗಮಿಕ ಶೈವ ಆಚಾರ್ಯರು ನಮ್ಮಿಂದ ದೂರ ಸರಿಯುವಲ್ಲಿ ನಮ್ಮ ಸಂಘಟನೆಯ ಅರ್ಧಭಾಗವೇ ದುರ್ಬಲವಾಯಿತು. ಪಾರ್ಶ್ವರೋಗಪೀಡಿತ ಶರೀರದ ಸ್ಥಿತಿ ಅದಕ್ಕ ಒದಗಿತು.

ಮಲ್ಲಿಬೊಮ್ಮಣ್ಣ: ನಮ್ಮ ನಾಯಕವ್ಯಕ್ತಿ ಬಸವಣ್ಣನನ್ನು ಗಡಿಪಾರುಗೊಳಿಸಿ, ಆ ಶರೀರದ ತಲೆಯನ್ನೇ ಕತ್ತರಿಸಿದಂತೆ ಮಾಡಿದರು.

ಜಗದೇವ : ಹೌದು, ಬಸವಣ್ಣನವರನ್ನು ಅಂದೇ ತಕ್ಷಣ ಕಲ್ಯಾಣದಿಂದ ಹೊರಹಾಕಿದರು. ಅಲ್ಲಮಪ್ರಭುವೆಂಬ ಜಂಗಮನನ್ನು ಅನುಭವ ಮಂಟಪದ ಅಧ್ಯಕ್ಷನನ್ನಾಗಿ ನೇಮಿಸಿದುದನ್ನೇ ಮುಂದು ಮಾಡಿ, ಇಷ್ಟೆಲ್ಲ ಅನಾಹುತ ಮಾಡಿದರು. 'ಅರಸು ವಿಚಾರ, ಸಿರಿಯ ಶೃಂಗಾರ, ಸ್ಥಿರವಲ್ಲ ಮಾನವಾ, ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ ಒಬ್ಬ ಜಂಗಮದ ಅಭಿಮಾನದಿಂದ" ಎಂಬ ವಚನವನ್ನು ಬಸವಣ್ಣನವರು ಹೇಳುತ್ತಿದ್ದಂತೆಯೇ ಎಲ್ಲಿಗೋ ಅವರನ್ನು ದೂರ ಕರೆದುಕೊಂಡು ಹೋದರು.

ಮಲ್ಲಿಬೊಮ್ಮಣ್ಣ : ಜಗದೇವಾ, ಬಸವಣ್ಣನವರು ಬಿಜ್ಜಳನ ದೃಷ್ಟಿಯಲ್ಲಿ ದೂರ ಹೋಗಿರಬಹುದು. ಆದರ ಅವರ ತತ್ವಗಳು ನಮ್ಮಲ್ಲಿ ಜೀವಂತವಾಗಿರುವ ವರೆಗೆ ಅವರು ನಮ್ಮಲ್ಲಿಯೇ, ನಮ್ಮೊಳಗs ಇರ್ತಾರ. ಶತಶತಮಾನಗಳ ವರೆಗೆ ನಮ್ಮ ಚಳುವಳಿಯನ್ನು ಮುನ್ನಡೆಸತಾರ.

ಜಗದೇವ : ನಿಜ. ಸತ್ಯ ಸಾಯೂದಿಲ್ಲ, ಸತ್ಯಕ್ಕ ಸಾವೆಂಬುದೇ ಇಲ್ಲ,

ಮಲ್ಲಿಬೊಮ್ಮಣ್ಣ : ಜಗದೇವಾ, ಕರ್ಮಕ್ಕ ಬದಲು ಧರ್ಮ ರೂಢಿಸಿದೆವು. ದೇವಾಲಯಕ್ಕ ಬದಲು ದೇಹದೇವಾಲಯ ಸಂಸ್ಕೃತಿ ರೂಪಿಸಿದೆವು.

ಜಗದೇವ : ಅರಮನಿಗೆ ಬದಲು ಮಹಾಮನಿ ಸಂಸ್ಕೃತಿ ರೂಪಿಸಿದೆವು. ಮಠಕ್ಕ ಬದಲು ಅನುಭವಮಂಟಪ ಸಂಸ್ಕೃತಿ ರೂಢಿಸಿದೆವು. ಇದನ್ನು ಯಾರೂ ಅರ್ಥಮಾಡಿಕೊಳ್ಳಲಿಲ್ಲ.

ಮಲ್ಲಿಬೊಮ್ಮಣ್ಣ : ಕಿವುಡರಿಗೆ ಕಿನ್ನುರಿ ಹ್ಯಾಂಗ ಕೇಳಿಸೀತು ?

ಜಗದೇವ : ಇವರು ಕಿವುಡರಲ್ಲ, ಕೇಳಿಯೂ ಕೇಳಿಸದಂತೆ ವರ್ತಿಸುವ ಜಾಣಕಿವುಡರು. ಅದಿರಲಿ, ನಮ್ಮ ಶರಣರ ಮುಂದಿನ ವಿಚಾರವೇನು ?

ಮಲ್ಲಿಬೊಮ್ಮಣ್ಣ : ಅನುಭವಮಂಟಪದಾಗ ಎರಡು ಮೂರು ಸಲ ಸಭೆ ಸೇರಿದ್ದರು. 'ದಯವೇ ಧರ್ಮದ ಮೂಲ' ಸಿದ್ಧಾಂತದ ನಾವು ಈ ಹಿಂಸೆಯನ್ನು ಅಹಿಂಸೆಯಿಂದಲೇ ಎದುರಿಸಬೇಕೆಂದು ನಿರ್ಣಯಿಸಿದರು.

ಜಗದೇವ : ಏನು? ಖಡ್ಗವನ್ನು ಕುಸುಮದಿಂದ ಎದುರಿಸುವುದೇ? ಅಲ್ಲ, ಅಲ್ಲ. ಖಡ್ಗವನ್ನು ಖಡ್ಗದಿಂದಲೇ ಎದುರಿಸಬೇಕು. ಎಳೆಹೂಟೆಯಲ್ಲಿ ನಮ್ಮ ಶರಣರ ರಕ್ತದಿಂದ ಕಲ್ಯಾಣ ರಕ್ತಕಲ್ಯಾಣವಾಯ್ತು. ಹಾದಿಬೀದಿಯಲ್ಲಿ ಹರಳಯ್ಯ-ಮಧುವಯ್ಯಗಳ ರಕ್ತ.... ರಕ್ತ.... ರಕ್ತ..... ನೆನಪಿಸಿಕೊಂಡರೆ ನನ್ನ ರಕ್ತ ಕುದೀತದ (ಖಡ್ಗ ಹಿರಿಯುತ್ತಾನೆ). ಇಂದಿನಿಂದ ಇದು ನಮಗೆ ಅರಮನೆಯ ಕಾಯಕವಲ್ಲ, ಸೆರೆಮನೆಯ ಸೇವೆ.

ಮಲ್ಲಿಬೊಮ್ಮಣ್ಣ : (ಖಡ್ಗ ಹಿರಿಯುತ್ತ) ಹೌದು ಜಗದೇವಾ, ರಾಜನ ಎಡಬಲದಲ್ಲಿ ನಿಂತು ನಾವು ಮಾಡುವ ದೀವಟಿಗಿ ಸೇವೆಗೆ ಇಂದಿನದು ಕೊನೆಯ ದಿನವಾಗಬೇಕು.

ಜಗದೇವ : ಹೌದು. ಹಿರಿದ ಖಡ್ಗ ಬಿಜ್ಜಳನನ್ನು ಬಲಿ ತೆಗೆದುಕೊಳ್ಳಲೇಬೇಕು. (ಮಲ್ಲಿದೇವನ ಕಿವಿಯಲ್ಲಿ ಏನೋ ಹೇಳುತ್ತಾನೆ. 'ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್, ಭೋ ಪರಾಕ್' ಘೋಷಣೆಯ ಧ್ವನಿ ತೆರೆಯ ಹಿಂದೆ ಕೇಳಿಸುತ್ತದೆ).

ರಾಜರು ಅರಮನೆಯಿಂದ ಆಸ್ಥಾನಕ್ಕೆ ಹೊರಟರೆಂದು ಕಾಣ್ತದ. ದೀವಟಿಗಿ ಹೊತ್ತಿಸೋಣ. (ಇಬ್ಬರೂ ದೀವಟಿಗೆ ಹೊತ್ತಿಸಿ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ದೀವಟಿಗೆ ಹಿಡಿದು ಸಜ್ಜಾಗುತ್ತಾರೆ. "ಸ್ವಸ್ತಿ ಸಮಸ್ತ ಭುವನಾಶ್ರಯ ...." ಎಂಬ ಘೋಷಣೆಯೊಂದಿಗೆ, ವಾದ್ಯ ಓಲಗದ ನಡುವೆ ಪಲ್ಲಕ್ಕಿಯಲ್ಲಿ ಕುಳಿತು ಬಿಜ್ಜಳ ಹೊರಬರುತ್ತಾನೆ. ದೀವಟಿಗೆ ಹಿಡಿದ ಜಗದೇವ ಮಲ್ಲಿಬೊಮ್ಮಣ್ಣಗಳು ಎಡಬಲದಲ್ಲಿ ಮುಂದುವರಿದು ಪರಸ್ಪರ ಸನ್ನೆ-ಸೂಚನೆಗಳ ಮೂಲಕ ನಡೆಯುತ್ತ, ಕೊನೆಗೆ ಆಯಕಟ್ಟಿನ ಸ್ಥಳಕ್ಕೆ ಬರುತ್ತಲೇ ದೀವಟಿಗೆ ಒಗೆದು, 'ಶರಣದ್ರೋಹಿ ಬಿಜ್ಜಳನಿಗೆ ಧಿಕ್ಕಾರ, ಭವಿ ಬಿಜ್ಜಳನಿಗೆ ಧಿಕ್ಕಾರ, ಧಿಕ್ಕಾರ' ಎನ್ನುತ್ತ ಅವನನ್ನು ಪಲ್ಲಕ್ಕಿಯಿಂದ ಹೊರಗೆಳೆದು, ನಡುಬೀದಿಯಲ್ಲಿ ರುಂಡ ಕತ್ತರಿಸಿ, ಖಡ್ಗದ ತುದಿಯಲ್ಲಿ ಎತ್ತಿಹಿಡಿದು ಕುಣಿಯುತ್ತಾರೆ. ಕೆಲವರು ದಿಕ್ಕೆಟ್ಟು ಓಡುತ್ತಾರೆ. ಗದ್ದಲ, ಪರಸ್ಪರ ಘರ್ಷಣೆ, ಬೆಂಗಾವಲಿನ ಬಿಜ್ಜಳನ ಸೈನಿಕರು ಜಗದೇವ, ಮಲ್ಲಿಬೊಮ್ಮಣ್ಣರನ್ನು ಬೆನ್ನಟ್ಟಿ ಕೊಲ್ಲುತ್ತಾರೆ).

❖❖

ದೃಶ್ಯ - ೪೦

("ಅನುಭವಮಂಟಪಕ್ಕೆ ನಡೆಯಿರಿ" ಎಂದು ಬಿಜ್ಜಳನ ಸೈನಿಕರು ಕೂಗುತ್ತ ಸಾಗಿ ಅನುಭವಮಂಟಪವನ್ನು ಮುತ್ತುತ್ತಾರೆ. ಸೈನ್ಯಕ್ಕೂ ಅಲ್ಲಿರುವ ಶರಣರಿಗೂ ಘರ್ಷಣೆ. ಶರಣರ ಶವ ಬೀಳುತ್ತವೆ. ಶರಣರೂ-ಶರಣೆಯರೂ ವಚನಸಾಹಿತ್ಯವನ್ನು ಕಟ್ಟಿಕೊಂಡು ದಿಕ್ಕುಪಾಲಾಗಿ ಓಡುತ್ತಾರೆ. ಬಿಜ್ಜಳನ ಸೈನ್ಯ ಬೆನ್ನಟ್ಟಿ ಬೇಟೆಯಾಡುತ್ತದೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಎತ್ತರದ ಧ್ವನಿ ಕೋಲಾಹಲಕ್ಕೆ ಹಿನ್ನೆಲೆಯಾಗಿ ಪದೇ ಪದೇ ಕೇಳಿಸುತ್ತದೆ).

❖❖

ಖರೇ ಖರೇ ಸಂಗ್ಯಾ-ಬಾಳ್ಯಾ

[ಸಣ್ಣಾಟ]

ಎಂ. ಎಂ. ಕಲಬುರ್ಗಿ

೨೦೦೫

ಲೋಹಿಯಾ ಪ್ರಕಾಶನ
ಬಳ್ಳಾರಿ

*

ಅರಿಕೆ

ಸಂಗ್ಯಾ-ಬಾಳ್ಯಾ ಸಣ್ಣಾಟದ ಇನ್ನೊಂದು ರೂಪವಾಗಿದೆ, ಈ "ಖರೇ ಖರೇ ಸಂಗ್ಯಾ-ಬಾಳ್ಯಾ" ಸಣ್ಣಾಟ. ಪ್ರಾಚೀನ ಕರ್ನಾಟಕದ ವೀರಯುಗ ಸಂದರ್ಭದಲ್ಲಿ ದೊಡ್ಡಾಟ, ಭಕ್ತಿಯುಗ ಸಂದರ್ಭದಲ್ಲಿ ಸಣ್ಣಾಟಗಳು ಹುಟ್ಟಿದ್ದು, ಇಂದಿನ ಸಾಮಾಜಿಕಯುಗ ಸಂದರ್ಭದಲ್ಲಿ ನಾಟಕಗಳು ಹುಟ್ಟುತ್ತಲಿವೆ. ಪ್ರಸ್ತುತ ಸಂಗ್ಯಾ-ಬಾಳ್ಯಾ ಘಟನೆ ಮತ್ತು ಸಣ್ಣಾಟ ಕೃತಿರಚನೆ, ಭಕ್ತಿಯುಗ-ಸಾಮಾಜಿಕ ಯುಗಗಳ ಮಧ್ಯಕಾಲದಲ್ಲಿ ಸಂಭವಿಸಿದುವಾಗಿವೆ.

ಸಜ್ಜನರ ಮೇಲೆಯೂ ಸುಳ್ಳು ಶಾಬ್ದಿಕ ಹಲ್ಲೆ(Blackmail) ವಿಜೃಂಭಿಸುತ್ತಿರುವ ಕಾಲವಿದು. ನೂರು ವರ್ಷಗಳ ಹಿಂದೆ ನಿರಪರಾಧಿ ಗಂಗಿಯ ವಿಷಯದಲ್ಲಿ ಸೃಷ್ಟಿಯಾದ ಇಂಥ ಒಂದು ಹಲ್ಲೆಗೆ ಅಕ್ಷರರೂಪ ಕೊಡಲು ಮಾಡಿದ ಪ್ರಯತ್ನ, ಈ ಸಣ್ಣಾಟ. ಹೀಗಾಗಿ ಗಂಗಿಯ ವಿಗ್ರಹಭಂಜನೆ ಮಾಡುತ್ತ, ಇಂದು ರಂಗದ ಮೇಲೆ ವಿಜೃಂಭಿಸುತ್ತಿರುವ ಆ "ಸಂಗ್ಯಾ-ಬಾಳ್ಯಾ" ಸಣ್ಣಾಟ ಮತ್ತು ಈ "ಖರೇ ಖರೇ ಸಂಗ್ಯಾ-ಬಾಳ್ಯಾ" ಸಣ್ಣಾಟ ಮುಖಾಮುಖಿ ಸೃಷ್ಟಿಯೆನಿಸಿದೆ.

ಬೈಲಹೊಂಗಲದ ಸೊಸೆಯಾದ ಗಂಗಾ ಹಾದರದ ಅಪವಾದ ಹೊತ್ತು ಗಂಡನ ಮನೆಗೆ ಎರವಾದದ್ದು, ಸಂಗ್ಯಾನ ಕೊಲೆಯಾದದ್ದು, ಈರಪ್ಪನಿಗೆ ಗಲ್ಲುಶಿಕ್ಷೆಯಾದದ್ದು, ಬಸವಂತ-ಇರಪಾಕ್ಷಿ ಕ್ರೈಸ್ತಮತ ಸ್ವೀಕರಿಸಿದ್ದು ನೈಜ ಘಟನೆಗಳಾದರೂ, ಇದರ ಹಿಂದಿರುವ ನಿಜವಾದ ಕಾರಣ ಯಾವುದು? ಎಂಬುದು ಪ್ರಶ್ನಾರ್ಹವಾಗಿದೆ. ಈಗಾಗಲೇ ಪ್ರಚಾರದಲ್ಲಿರುವ "ಸಂಗ್ಯಾ-ಬಾಳ್ಯಾ" ಸಣ್ಣಾಟದ ಕಥೆ ಎಲ್ಲರಿಗೂ ಗೊತ್ತಿದೆ. "ಇದು ನಿಜವಾದ ಕಥೆಯಲ್ಲ. ಗಂಗೆಯನ್ನು ಮೋಹಿಸಿ ವಿಫಲವಾದ ಪತ್ತಾರ ಮಾಸ್ತರನ ವಿಕೃತ ಮನಸ್ಸು ಸಂಗ್ಯಾನೊಂದಿಗೆ ಅವಳ ಸಂಬಂಧವನ್ನು ಕಲ್ಪಿಸಿ, ಇದು ನಿಜವೆನ್ನುವಂತೆ ತಂತ್ರಗಳನ್ನು ಸೃಷ್ಟಿಸಿ, ಕುಟುಂಬದ ಸದಸ್ಯರು ನಂಬುವಂತೆ ಮಾಡಿ, ಅವಳು ಗಂಡನ ಮನೆಗೆ ಎರವಾಗುವಂತೆ ಮಾಡಿದುದಲ್ಲದೆ, ಕೊನೆಗೆ ಅವಳನ್ನು ಕುರಿತು ಒಂದು ಸಣ್ಣಾಟವನ್ನೂ ಬರೆದ"- ಎಂಬ ಅಸ್ಪಷ್ಟ ಹೇಳಿಕೆ ಈ ಪ್ರದೇಶದಲ್ಲಿ ಪ್ರಚಾರದಲ್ಲಿದೆ. ಅಕ್ಷರ ಜಗತ್ತಿನ ದುಷ್ಟವ್ಯಕ್ತಿಗಳಿಂದ ಇಂಥ ಸೃಷ್ಟಿ ಅಸಹಜವೇನಲ್ಲ. ಇಂಥ ವ್ಯಕ್ತಿಗಳನ್ನೇ ಕೇಂದ್ರಪಾತ್ರವಾಗಿಟ್ಟುಕೊಂಡು ಈ ಕೃತಿ ಕಟ್ಟಡ ಬೆಳೆದಿದೆ. ಇಷ್ಟಾಗಿಯೂ, ಸಿದ್ಧಕಥೆಯ ಮರುಸೃಷ್ಟಿ ಸ್ವಾತಂತ್ರ ಲೇಖಕನಿಗೆ ಇದ್ದೇ ಇದೆ.

ಒಂದು ಮಾತು ನಿಜ: ಘಟನೆಯೊಂದರ ನಿರ್ದಿಷ್ಟೀಕರಣ ಪ್ರಯತ್ನ ಇತಿಹಾಸದ ಕೆಲಸ, ಸಾಮಾನ್ಯೀಕರಣ ಪ್ರಯತ್ನ ಸಾಹಿತ್ಯದ ಕೆಲಸ. ಹೀಗಿದ್ದೂ ಒಂದು ಘಟನೆಯನ್ನು, ಆದರಲ್ಲಿಯೂ ಸಮಕಾಲೀನ-ಸ್ವಗ್ರಾಮದ ಕೌಟುಂಬಿಕ ಅವಮಾನದಂಥ ಘಟನೆಯನ್ನು ಸಾಹಿತ್ಯದಲ್ಲಿ ನಿರ್ದಿಷ್ಟೀಕರಿಸ

ಹೊರಟ ಲೇಖಕನಿಗೆ ದೊಡ್ಡ ಜವಾಬ್ದಾರಿ ಇರಬೇಕಾಗುತ್ತದೆ. ಇದನ್ನು ಕಡೆಗಣಿಸಿದ ಕನ್ನಡದ ಪ್ರಥಮ ಕೃತಿಯಾಗಿದೆ, ಸಂಗ್ಯಾ-ಬಾಳ್ಯಾ ಸಣ್ಣಾಟ. ಇಂಥ ಸಾಹಿತ್ಯಿಕ ಬೇಜವಾಬ್ದಾರಿಯನ್ನು ಪ್ರಶ್ನಿಸುವುದೂ ಈ ಕೃತಿರಚನೆಯ ಇನ್ನೊಂದು ಉದ್ದೇಶವಾಗಿದೆ.

ಬಹಳ ವರ್ಷಗಳ ಹಿಂದೆಯೇ ಮೇಲೆ ಪ್ರಸ್ತಾಪಿಸಿದ ಹೇಳಿಕೆ ನನ್ನ ಕಿವಿಗೆ ಬಿದ್ದಿತ್ತು. ವಿದ್ವಾಂಸರ ಪುಸ್ತಕಗಳಲ್ಲಿಯೂ ಒಂದಿಷ್ಟು ಪೂರಕ ಸಾಮಗ್ರಿ ನನ್ನ ಗಮನ ಸೆಳೆದಿದ್ದಿತು. ಇಬ್ಬರು ಮೂವರು ಸಾಹಿತಿ ಸ್ನೇಹಿತರಿಗೆ ಇದನ್ನು ದೃಶ್ಯಕೃತಿಗೊಳಿಸಲು ಸೂಚಿಸಿದೆ. ಕೈಗೂಡಲಿಲ್ಲ. ಕೆಲವು ವರ್ಷಗಳ ಹಿಂದೆ ನಾನೇ ಕರಡು ಪ್ರತಿ ಸಿದ್ಧಪಡಿಸಿದೆ. ಹೊಸ ಹೊಸ ಹೊಣೆಗಳ ನಡುವೆ ಅದು ಅಂತಿಮ ಆಕಾರ ಪಡೆಯದೆ, ಅನೇಕ ವರ್ಷ ಹಾಗೆಯೇ ಉಳಿದಿದ್ದಿತು.

ನಿವೃತ್ತಿ ಜೀವನದಲ್ಲಿ ನಡೆಸಿದ ಹಳೆಯ ಕಡತಗಳ ಪರಿಷ್ಕರಣದ ಫಲ, ಈ ಸಣ್ಣಾಟ. ನಗರದಲ್ಲಿ ವೃತ್ತಿಜೀವನ ನಡೆಸುತ್ತಿದ್ದರೂ, ನನ್ನ ಬಾಲ್ಯಜೀವನದ ಆಡುಂಬೊಲ ಹಳ್ಳಿ. ದೊಡ್ಡಾಟ, ಸಣ್ಣಾಟಗಳ ಭಾಗವಾಗಿಯೇ ಬೆಳೆದವನು ನಾನು. ಹೀಗಾಗಿ ಸುಲಭವಾಗಿಯೇ ಈ ಕಥೆ ಕೃತಿರೂಪ ಪಡೆಯಿತು. ಈಗಾಗಲೇ ಪ್ರಚಾರದಲ್ಲಿರುವ ಪತ್ತಾರ ಮಾಸ್ತರ ಬರೆದ "ಸಂಗ್ಯಾ-ಬಾಳ್ಯಾ" ಸಣ್ಣಾಟದಿಂದ ಕೆಲವು ಹಾಡುಗಳನ್ನು ಇಲ್ಲಿ ಕೃತಜ್ಞತೆಯಿಂದ ಸ್ವೀಕರಿಸಿದ್ದೇನೆ. ಮಿಕ್ಕಂತೆ ಇಡಿ ಸಣ್ಣಾಟ ನನ್ನ ಸೃಷ್ಟಿ.

೨೦೦೫ ಮೇ ೧೪ರಂದು ಸಣ್ಣಾಟವನ್ನು ರಂಗದ ಮೇಲೆ ಪ್ರಥಮ ಸಲ ಯಶಸ್ವಿಯಾಗಿ ಪ್ರಯೋಗಿಸಿದ ಧಾರವಾಡದ "ಜಾನಪದ ಸಂಶೋಧನ ಸಂಸ್ಥೆ"ಯ ಶ್ರೀ ಬಸಲಿಂಗಯ್ಯ ಹಿರೇಮಠ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಅವರಿಗೂ, ಶ್ರಮವಹಿಸಿದ ಶ್ರೀ ಬಾಳಣ್ಣ ಶೀಗೀಹಳ್ಳಿ, ಬಸವರಾಜ ಹೂಗಾರ ಅವರಿಗೂ, ಶ್ರದ್ಧೆಯಿಂದ ಅಭಿನಯಿಸಿದ ಎಲ್ಲ ಪಾತ್ರವರ್ಗದವರಿಗೂ, ರಂಗಕರ್ಮಿಗಳಿಗೂ ಕೃತಜ್ಞತೆಗಳು.

ಪ್ರಕಟಿಸಿದ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸ್ನೇಹಿತರಾದ ಶ್ರೀ ಸಿ. ಚೆನ್ನಬಸವಣ್ಣ, ಮುದ್ರಿಸಿದ ಬೆಂಗಳೂರಿನ "ವಿಶ್ವಾಸ್ ಪ್ರಿಂಟ್ಸ್" ನ ಮಾಲೀಕರಾದ ಶ್ರೀ ಟಿ.ಎಲ್. ವೆಂಕಟೇಶ್ ಅವರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ವಂದನೆಗಳು.

–ಎಂ. ಎಂ. ಕಲಬುರ್ಗಿ

❖❖

ದೃಶ್ಯ –೧

(ರಂಗದ ಮೇಲೆ ಪಾತ್ರ ಪರಿವಾರ, ಭಾಗವತನಿಂದ ಗಣಪತಿಯ ಪೂಜೆ–ಸ್ತೋತ್ರ)

ಗುಣವದನಾ ನಿಮ್ಮ ಧ್ಯಾನ ಮಾಡುವ ನಾವಾ
ಇರಲಿ ಈ ಆಟಕ್ಕ ನಿಮ್ಮಯ ಕರುಣಾ ॥ಪಲ್ಲ॥

ಕರಿ ಕಣ್ಣಿನ ತೆಂಗಿನಕಾಯಿ ಗೊನಿ ಮುರದ ಬಾಳಿಕಾಯಿ
ಕರಿಕಿ ಪತ್ರಿ–ಹೂವ ತರಿಸಿ, ಮಾಡುವೆವು ಸೇವಾ ॥೧॥

ಮಂದ ಮತಿಗಳು ನಾವು ಬುದ್ಧಿ ಕೊಡಬೇಕ್ರಿ ನೀವು
ವಂದಿಸುವೆವು ನಾವು ಪಾರ ಮಾಡಬೇಕ್ರಿ ನೀವು ॥೨॥

(ಪಾತ್ರಗಳ ನಿರ್ಗಮನ "ಸಭೆಗೆ ಶರಣು ಶರಣಾರ್ಥಿ ಆಟ ಸುರು ಮಾಡ್ತೀವಿ, ಸಭಿಕರು ನಿದ್ದಿ ಮಾಡಬ್ಯಾಡ್ರಿ, ಗದ್ದಲ ಮಾಡಬ್ಯಾಡ್ರಿ" ಎಂದು ಕೈಮುಗಿದು ಹೇಳಿ, ಭಾಗವತ ಹಾಡು ಆರಂಭಿಸುತ್ತಾನೆ)

ಕೂಡಿದ ಜನಾ ಗಲ್ ಗಲ್
ಮಾಡಬ್ಯಾಡ್ರಿ ಗುಲ್ಲ !
ನಿಮ್ ನೋಡಿ ನಾಚಿ ನಿಂತೇವೆಲ್ಲ ॥೧॥

ಹೆಣ್ಣು ಗಂಡು ಸಭಾ ಕೂಡೇತಿ
ಭರತಿನಾಗೇತಿ
ನಮ್ಮ ವ್ಯಾಲೆ ಇರಲಿ ನಿಮ್ಮ ಪ್ರೀತಿ ॥೨॥

ಸಂಗ್ಯಾ ಬಾಳ್ಯಾ ಕಥಿ ಮಜಕೂರ
ಆಟದ ಸಾರ
ಕುಂತು ಕೇಳ್ರಿ ಬಲ್ಲ ಹಿರಿಯರ ॥೩॥

ಗಂಡಮಟ್ಟ ಗದಗಿನ ಶಾಪೂರ
ಬಸವಣ್ಣದೇವರ
ಆತಗ್ಹೋಗಿ ಮಾಡುವ ನಮಸ್ಕಾರ ॥೪॥

ಮುದುಕ : (ಪ್ರೇಕ್ಷಕರ ಮಧ್ಯದಿಂದ ಎದ್ದು ಬರುತ್ತ) ಏ, ಬಂದ ಮಾಡ್ರಿ, ಈ ಆಟ ಬಂದ ಮಾಡ್ರಿ ಯಾರ್ ಹೇಳ್ಯಾರ ಈ ಆಟ ಆಡಲಾಕ ?

ಭಾಗವತ : ಯಾರ್ ಹೇಳೂದೇನು ? ನಾವ ನಿರ್ಧಾರ ಮಾಡೀವಿ, ನಾವ ಆಡತೀವಿ

ಮುದುಕ : ಏನ್ ಆಡತೀರಿ ? ಆಡವ್ರು ಬುದ್ಧಿಗೇಡಿ, ನೋಡವ್ರು ನಿದ್ದಿಗೇಡಿ.

ಭಾಗವತ : ಬರದಾವ ?

ಮುದುಕ : ಕಿಡಿಗೇಡಿ, ಮಹಾ ಕಿಡಿಗೇಡಿ, ಆಟ ಅಂದ್ರ ಹುಡುಗಾಟ ಅಂತ ತಿಳಕೊಂಡಾರ. ಇದು ಆಟ ಅಲ್ಲ, ದುಷ್ಟ ಸಾಹಿತಿಯ ಕೆಟ್ಟ ಕೃತಿ. ಇದನ್ನ ಬರೆದವಗ ಅಕ್ಷರದ ಜವಾಬ್ದಾರಿ ಗೊತ್ತದ ಏನ? ಅಕ್ಷರ ಅಂದ್ರ ......ಅದು ಬೆಂಕಿ, ಎಚ್ಚರದಿಂದ ಬಳಸಬೇಕು. ಮಾತ ಮಲಿನ ಮಾಡಬಾರದು. ಬಾಯೊಳಗಿನ ಮಾತ, ಕೈಯೊಳಗಿನ ಲೇಖನಿ ಪವಿತ್ರವಾಗಿ ಬಳಸಬೇಕಂತ ಹಿರೇರು ಹೇಳ್ಯಾರ.

ಭಾಗವತ : ಈಗೇನಾಗೇದ ?

ಮುದುಕ : ಇನ್ನೇನಾಗಬೇಕು? ಭಾಷೆ ಅನ್ನೂದು ಕಾಮಧೇನು, ಅದನ್ನ ಇರಿಯೂ ದನ ಅಂತ ತಿಳಿಕೋಬಾರದು, ಹಾಂಗ ತಿಳಿಕೊಂಡು ಬಳಸಿದ್ರ ಅವ್ರು ಜನ ಅಲ್ಲ ದನ. ದೇವರಿಂದ ವರ ಪಡೆದ ರಾಕ್ಷಸರು ಲೋಕನಾಶ ಮಾಡಿಧಾಂಗ, ಸರಸ್ವತಿಯಿಂದ ವರ ಪಡೆದ ಸಾಹಿತಿಗಳು ಸಮಾಜ ನಾಶಮಾಡಬಾರದು. ಸಾಹಿತ್ಯದ ಹೆಸರಿನೊಳಗ ದುರ್ಜನರನ್ನು ಹೊಗಳೂದು, ಸಜ್ಜರನ್ನು ತೆಗಳೂದು ಮಾಡಬಾರದು. ಹಾಂಗ ಮಾಡಿದರ ಅದು ಕವಿ ಸೃಷ್ಟಿ ಅಲ್ಲ, ಕಪಿ ಚೇಷ್ಟೆ. ಅವರ ಬಾಯಿಂದ ಬಂದದ್ದು ಸಾಹಿತ್ಯ ಅಲ್ಲ, ಉಗುಳು. ಬರೀಲಿಕ್ಕೆ ಬರತಾದಂತ ಮಾನವಂತರು ಮಾರಿ ಎತ್ತಧಾಂಗ ಬರೀಬಾರದು.

ಮಾನವಂತರು ಮಾರಿ ಎತ್ತಧಾಂಗ
ಬರಿಯಬ್ಯಾಡ್ರಿ ತೆಗಳಿ।
ಮಾನಗೇಡಿಗಳು ಮೆರೆಯುವ ಹಾಂಗ
ಬರಿಯಬ್ಯಾಡ್ರಿ ಹೊಗಳಿ ।

ಬದುಕಿಸಿದರು ನೀವ್ ಭಂಡರ ಅವರು
ಮುಂದ ಸಾಯತಾರ ।
ಸತ್ತುಹೊಡೆದರೂ ಸತ್ಯವಂತರು
ಸತ್ತು ಬದಕತಾರ ॥

ಕೆಡಸಬ್ಯಾಡರಿ ಕಾಗದ ಗರತಿಯ
ಮಿಂಡ ಮಸಿಯ ಕೆಳಗ ।
ತೊಳಿಯಬ್ಯಾಡರಿ ವಿಷದ ಲೇಖನಿ
ಕುಡಿವ ನೀರಿನೊಳಗ ॥

ಭಾಗವತ : ಅಂದರ ಏನು ಮಾಡಬೇಕು ?

ಮುದುಕ : ಕವಿ ಕಂಡದೆಲ್ಲ ಬರಿಬಾರದು, ಕತೆಗಾರ ಸಿಕ್ಕಿದೆಲ್ಲ ಆಡಬಾರದು, ಅವ ಹೊತಿಗ್ಯಾಗ ಬರೆದದ್ದೆಲ್ಲ ಇವ ಅಟ್ಟದ ಮ್ಯಾಲ ಆಡಬಾರದು. ಸಮಾಜ ನಾಶಮಾಡಲಾಕ ಸಾಕಷ್ಟು ಸಾಧನ ಅವ. ಸಾಹಿತ್ಯ ಇನ್ನೊಂದು ಸಾಧನ ಆಗಬಾರದು, ಅದು ಸತ್ಯ ಕಟ್ಟಬೇಕು, ಅಸತ್ಯ ಕೆಡವಬೇಕು.

ಭಾಗವತ : ಏ ಮುದಕಪ್ಪ, ಈಗ ಆದದ್ದಾರೂ ಏನು ?

ಮುದುಕ : ಸಂಗ್ಯಾ ಬಾಳ್ಯಾ ಆಟಾ ಬರದು ಪತ್ತಾರ ರಾಯಪ್ಪ ಮಾಸ್ತರ ಸತ್ಯಕ್ಕ ಅಪಮಾನ ಮಾಡಿದ, ಸುಳ್ಳ ಬರದು ಹೆಣ್ಣಿನ ಮರ್ಯಾದಿ ಹಾಳಮಾಡದ. ಹಣ್ಣ ಕೈಗೆ ನೆಲಕದಿದ್ರ ಕಲ್ಲಲ್ಲೆ ಹೊಡೆದು ಹಾಳ ಮಾಡಿದ್ರು ಅನ್ನೂ ಹಾಂಗ ಮಾಡಿದ.

ಭಾಗವತ : ಅಂದರ ?

ಮುದುಕ : ಗಂಗಾ ಗಂಡನ ಮನ್ಯಾಗ ಹೂ ಬೆಳೆಸಿದಳು. ಈ ಪತ್ತಾರ ಹುಲ್ಲ ಬೆಳೆಸಿದಳು, ಮುಳ್ಳ ಬೆಳಸಿದಳು ಅಂತ ಬರದ. ಶಿವ ಶಿವಾ, ಗಂಗವ್ವ ಅಂದರ ಗರತಿ ಗಂಗವ್ವ, ಗಂಗಾನದಿ ಬ್ಯಾರೆ ಅಲ್ಲ, ಈ ಗಂಗವ್ವ ಬ್ಯಾರೆ ಅಲ್ಲ, ನಾನು ಬೈಲಹೊಂಗಲದಾವ, ಆಕಿ ನೆರಮನಿಯವ, ಅಣಿ ಮಾಡಿ ಹೇಳ್ತಿನಿ ಕಿಡಿಗೇಡಿ ಪತ್ತಾರ ಮಾನವಂತರ ಮಾನ ಹಾಳಮಾಡಿದ. ನೆಲಕಲಾರದ ದ್ರಾಕ್ಷಿ ಹುಳಿ ಅಂತಾರಲ್ಲ, ಹಾಂಗ ಮಾಡ್ದ. ತಾನು ಹೀಂಗ ಬರದರ ಜನ ಕ್ಷಮಿಸೂದಿಲ್ಲ ಅಂತ, ಎಲ್ಲಿಯೂ ತನ್ನ ಹೆಸರ ಕಾಣಿಸದೆ ಈ ಬೇನಾಮಿ ಸಣ್ಣಾಟ ಬರೆದ.

ಭಾಗವತ : ಆದದ್ದಾದರೂ ಏನು ? ಬಿಡಿಸಿ ಹೇಳಲಾ, ನಾವೂ ಕೇಳ್ತೀವಿ.

ಮುದುಕ : ಕೇಳೂದೇನು, ಬರಕೊಳ್ರಿ, ಖರೇ ಸಂಗತಿ ಹೇಳ್ತಿನಿ, ಆಟಾನೇ ಹೇಳ್ತಿನಿ ಬರಕೊಳ್ರಿ.

ಭಾಗವತ : ಹೇಳು, ಬರಕೋತೀವಿ (ಕುಳಿತುಕೊಂಡು ಹೇಳುವ, ಬರೆದುಕೊಳ್ಳುವ ಅಭಿನಯ)

ಮುದುಕ : ಆಟಾ ಬರಕೊಂಡ್ರಾ, ಈಗ ಈ ಸುಳ್ಳ ಸುಳ್ಳ "ಸಂಗ್ಯಾ–ಬಾಳ್ಯಾ" ಬಂದ ಮಾಡ್ರಿ, ಇನ್ ಮ್ಯಾಲ "ಖರೇ ಖರೇ ಸಂಗ್ಯಾ–ಬಾಳ್ಯಾ" ಸುರುಮಾಡ್ರಿ.

❖❖

ದೃಶ್ಯ - ೨

(ಲಗಳಿಯವರ ಮನೆ, ಈರಪ್ಪನು ಬಸವಂತ, ಇರಪಾಕ್ಷಿ ಜೊತೆ ಕುಣಿಯುತ್ತ ಹಾಡುತ್ತಾನೆ)

ಈರಪ್ಪ ನಾನು ಬಹದ್ದೂರ ।
ಬಯಲಹೊಂಗಲದ ಸಾವಕಾರ ।
ಹಣದ ಹಳ್ಳ-ಹೊಳ್ಳಿ ಭರಪೂರ
ಊರೆ ಹೋಗಳತದ ಮನಿ ಹೆಸರ ॥

ಗರತಿ ಗಂಗವ್ವ ನನ್ನ ಹೆಂಡ್ತಿ ।
ಬಿಲಿಜ್ವಾಳ ರೊಟ್ಟಿ ಈ ಯುವತಿ ।
ಮೀಸಲ ತುಪ್ಪ ಇವ್ಳ ನಡತಿ
ಹಾಲಾಗ ಬೆಲ್ಲ ಬೆರತ್ಯೈತಿ ॥

ಹುಲಿಯಂಥ ತಮ್ಮದೇರು ಪೈಲವಾನರು ।
ಹೊಲದಾಗ ಮನಿಯಾಗ ದುಡಿತಾರು ।
ಸ್ವರ್ಗವೆ ಇಳದದ ಮುನಿಯಾಗ।
ಇದ್ದರ ಇರಬೇಕು ನಮ್ಮ ಹಾಂಗ ॥

ಈರಪ್ಪ : ತಮ್ಮಾ, ಬಸವಂತ-ಇರಪಾಕ್ಷಿ, ಬೈಲಗೊಂಗಲದ ನಮ್ಮ ಮನಿ ಅಂದರ ಹತ್ತ ಹಳ್ಯಾಗ ಪ್ರಸಿದ್ಧ ಆಗ್ಯಾದ, ಲಗಳಿ ಈರಪ್ಪ, ಬಸವಂತ, ಇರಪಾಕ್ಷಿ ಅಂದರ ಬ್ರಹ್ಮ-ವಿಷ್ಣು-ಮಹೇಶ್ವರ ಅಂತ ಜನ ಮಾತಾಡತಾರ, ಲಕ್ಷ್ಮೀ ನಮ್ಮ ಮನ್ಯಾಗ ಕಾಲ ಮುರಕೊಂಡು ಬಿದ್ದಾಳ. ನೀತಿ ನಮ್ಮ ಮನಿಗಿ ಬುನಾದಿ ಆಗ್ಯಾದ.

ಬಸವಂತ : ಸತ್ಯ-ನ್ಯಾಯ ನಮ್ಮ ಮನಿಗಿ ಕಂಬ-ಗ್ವಾಡಿ ಆಗ್ಯಾವ.

ಇರಾಪಾಕ್ಷಿ : ಶೀಲ-ಚಾರಿತ್ರ್ಯ ನಮ್ಮ ಮನಿಗಿ ಬುನಾದಿ ಆಗ್ಯಾದ.

ಈರಪ್ಪ : ಹೌದು ತಮ್ಮಗಳಿರಾ, ನಮ್ಮದು ದಾನ-ಧರ್ಮದ ಮನಿತನ, ಬಡವರು ಬಗ್ಗರು ನಮ್ಮಿಂದ ಬದಕತಾರ.

ಬಸವಂತ : ಊರ ದನ-ಕರ ನಮ್ಮ ಹೊಲದಾಗ ಹುಲ್ಲು-ಮೇವ ಮೇಯ್ತಾವ.

ಇರಾಪಕ್ಷಿ : ಊರ ಕೂಸ-ಕುನ್ನಿ ನಮ್ಮಮನಿ ಹಾಲ ಕುಡುದು -ಬೆಣ್ಣಿ ತಿಂದು ಬೆಳಿತಾವ.

ಈರಪ್ಪ ; ಹೌದು, ಈ ಸುಖ-ಸಂಪತ್ತು, ಈ ಕೀರ್ತಿ – ಖ್ಯಾತಿಗಿ ನಮ್ಮ ಮನಿದೇವರು ಮರಡಿ ಬಸವಣ್ಣನ ದಯವೇ ಕಾರಣ.

ಇರಪಾಕ್ಷಿ : ಜೊತೆಗೆ ಅತಿಗೆವ್ವ ಗಂಗವ್ವನ ಕಾಲಗುಣವೂ ಕಾರಣ, ಆಕೆ ನಮ್ಮನಿಗಿ ಭಾಗ್ಯದ ಲಕ್ಷ್ಮಿ ಹಾಂಗ ಬಂದಳು. ಅಂದಿನಿಂದ ಸಸಿಯಾಗಿದ್ದ ನಮ್ಮ ಸಂಪತ್ತು, ಗಿಡ ಆಗಿ, ಮರ ಆಗಿ, ಮಾಮರ ಆಗಿ ಬೆಳಿಲಾಕ ಹತ್ಯಾದ.

ಬಸವಂತ : ಆದರ ಅಣ್ಣಾ, ಅತ್ತಿಗಿ ಬಂದು ಐದು ವರ್ಷ ಆಯ್ತು. ಆಕಿಗಿ ಒಂದಿಷ್ಟು ಬಂಗಾರ ದಾಗೀನ ಮಾಡಿಸಲಿಲ್ಲ.

ಈರಪ್ಪ : ಅವಳಿಗೀ ಬಂಗಾರ ಆಸೆ ಇಲ್ಲ. ನಾರಿಗೆ ಗುಣವೇ ಶೃಂಗಾರ ಎನ್ನು ಮಾತ, ಅವಳನ್ನೇ ನೋಡಿ ಹುಟ್ಟಿರಬೇಕು. ನನ್ನ ಹೆಂಡತಿ ಗಂಗಿ ಗುಣದಲ್ಲಿ ಗೌರಿ, ನಾನು ಎಷ್ಟು ಹೇಳಿದರೂ ಆಕಿ ಗುಂಜಿ ಬಂಗಾರ ಬ್ಯಾಡ ಅಂತಾಳ.

ಇಬ್ಬರೂ : ನಾವು ಒಪ್ಪುಸ್ತೀವಿ. ನಮಗ ಬಂಗಾರ ಕೊಡು.

ಈರಪ್ಪ : ಆಕೆ ಒಪ್ಪುವುದಿಲ್ಲ ಬ್ಯಾಡ್ರಿ.

ಇರಪಾಕ್ಷಿ : ನಮಗೆ ಕೊಟ್ಟರೆ ನೋಡು. ನಾವು ಹ್ಯಾಂಗ ಒಪ್ಪಸ್ತೀವಿ.

ಈರಪ್ಪ : ಹೀಂಗ? ನಿಮಗ ಬಿಟ್ಟಿದ್ದು, (ತಿಜೋರಿಯಿಂದ ತೆಗೆದು ಇಬ್ಬರಿಗೂ ಕೊಡುತ್ತ) ಏನ ಬೇಕಾದ್ದು ಮಾಡ್ರಿ, ಕತ್ತಲಾಯ್ತು. ಎತ್ತಿಗಿ ಮೇವ ಹಾಕಿ ಬರತೀನಿ (ಹೋಗುತ್ತಾನೆ).

ಇರಪಾಕ್ಷಿ : ಬಸವಂತ, ತಾಯಿ ಇಲ್ಲದ ಮಕ್ಕಳು ನಾವು, ಅತಿಗೆವ್ ನಮ್ಮನ್ನು ಹೊಟ್ಟಿಲೆ ಹುಟ್ಟಿದ ಮಕ್ಕಳ್ಹಂಗ ನೋಡ್ತಾಳೆ. ತಾಯಿ ಅಂದ್ರು ಆಕೀನ್, ಅತಿಗೆ ಆಂದ್ರು ಆಕೀನ. ದಾಗೀನ ಮಾಡಿಸಿಕೊಳ್ಳದಿದ್ರೆ ಊಟ ಮಾಡುದಿಲ್ಲ ಅಂತ ಹಟ ಹಿಡಿಯೋಣ. ನಮಗೆ ಸತ್ತಾ ಅದ, ಒಪ್ಪಿಸೋಣ (ಅಷ್ಟರಲ್ಲಿ ಗಂಗಾ ಬರುತ್ತಾಳೆ).

ಗಂಗಾ : ಇರಪಾಕ್ಷಿ, ಬಸವಂತ, ನಿಮ್ಮ ಅಣ್ಣ ಆಮ್ಯಾಲ ಊಟ ಮಾಡ್ತಾರ, ಕತ್ತಲಾಯಿತು. ನೀವು ಕೈಕಾಲ ತೋಳಕೊಳ್ಳಿ, ಊಟಾ ಮಾಡ್ರಿ. (ಇರಪಾಕ್ಷಿ ಬಸವಂತ ಕೈಕಾಲು ತೊಳೆದುಕೊಂಡು ಬಂದು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಗಂಗಾ ಊಟ ತಂದು ನೀಡುತ್ತಾಳೆ. ಹಿಮ್ಮೇಳದ ಹಾಡು).

ಜೋಳದ ಬೋನಕ್ಕೆ। ಬೇಳೆಯ ತೊಗೆಯಾಗಿ
ಕಾಳೆಮ್ಮೆ ಕರೆದ ಹಯನಾಗಿ। ಬೆಳುವಲದ
ಮೇಳ ನೋಡೆಂದ ಸರ್ವಜ್ಞ॥

ಗಂಗಾ : ತಮ್ಮಗಳಿರಾ, ಯಾಕ ಸುಮ್ಮ ಕುಳಿತಿರಿ, ಊಟ ಮಾಡಿರಿ (ಉತ್ತರವಿಲ್ಲ). ನಿಮಗ ದೃಷ್ಟಿ ಆಗ್ಯಾದೇನು? ಮಕ್ಕಳಿರಾ, ಯಾರ ಕೆಟ್ಟ ಕಣ್ಣ ನಿಮ್ಮ ಊಟಕ್ಕೆ ನಟ್ಟಾವ

(ಮೆಣಸಿನಕಾಯಿ ತಂದು ಇಳುಹುತ್ತಾಳೆ). ಊಟಾ ಮಾಡಿರಿ (ಮೌನ) ಹಾಲ ಗಂಗಾ ಬೇಕ? ತುಪ್ಪ ಬೇಕೆ? (ಮಾನ). ಇರಪಾಕ್ಷಿ ಬೆಣ್ಣೆ ಬೇಕ? (ಮೌನ), ಬಸವಂತ ಕನಿಬೇಕ? (ಮೌನ), ಯಾಕೆ ಕಂದಗಳಿರಾ, ನಿಮ್ಮ ಮನಸ್ಸಿದಾಗ ಏನ ಮಾತದ, ಮುಚ್ಚಿಡಬ್ಯಾಡಿರಿ, ಬಿಚ್ಚಿ ಹೇಳಿರಿ (ಇಬ್ಬರೂ ಪರಸ್ಪರ ನೋಡುವರು, ನೀ ಮೊದಲು ಹೇಳು, ನೀ ಮೊದಲು ಹೇಳು ಎಂಬಂತೆ).

ಬಸವಂತ : ಸಣ್ಣ ಮಗ ಇರಪಾಕ್ಷಿಗಿ ಕೇಳು.

ಗಂಗಾ : ಇರಪಾಕ್ಷಿ, ಇರಪಣ್ಣಾ ಹೇಳಪಾ, ಏನು ದುಃಖ? ಏನು ದುಗುಡ? (ಇರಪಾಕ್ಷಿ ದುಃಖಿಸುವನು)

ಬಸವಂತ : ಅತಿಗೆವ್ವಾ, ನೀ ನಮ್ಮ ಮನಿಗಿ ಬಂದಾಗ ನಾವು ೧೦-೧೨ ವರ್ಷದ ಮಕ್ಕಳಿದ್ದೆವು.

ಗಂಗಾ : ಇದ್ದಿರಿ.

ಬಸವಂತ : ನಾವು ಈಗ ೧೭-೧೮ ವರ್ಷದವರಾದೆವು.

ಗಂಗಾ : ಆದಿರಿ.

ಇರಪಾಕ್ಷಿ : ಈ ಐದು ವರ್ಷ ನಮ್ಮನ್ನ ಮಕ್ಕಳಂಗ ನೋಡಿದಿ.

ಗಂಗಾ : ಮಕ್ಕಳಲ್ದ ಮತ್ತೇನು?

ಬಸವಂತ : ನೀ ಬಂದ ವರ್ಷ ಸಣ್ಣ ಹೊಲಾ ದೊಡ್ಡ ಬೆಳೆ ಕೊಟ್ಟು.

ಗಂಗಾ : ಬೆಳಿ ಕೊಟ್ರು.

ಇರಪಾಕ್ಷಿ : ತ್ವಾಟದಾಗಿನ ಬತ್ತಿದ ಬಾವಿ ತುಂಬಿ ಹರಿತು.

ಗಂಗಾ : ತುಂಬಿ ಹರಿತು.

ಬಸವಂತ : ಯಾಪಾರದಾಗ ಸಾವಿರ ಸಾವಿರ ಗಳಿಕೆ ಆತು.

ಗಂಗಾ : ಗಳಿಕೆ ಆತು.

ಇರಪಾಕ್ಷಿ : ಇದಕ್ಕೆಲ್ಲ ಕಾರಣ, ನಿನ್ನ ಕಾಲ್ಗುಣ.

ಗಂಗಾ : ಹುಚ್ಚ ಹುಡಗರಾ, ಹಾಗನ್ನಬಾರದು, ನಿಮ್ಮ ಅಣ್ಣ-ನೀವು ದುಡದಿರಿ, ಮರಡಿ ಬಸವಣ್ಣ ಕಣ್ಣ ತೆರೆದ. ಅದಕ್ಕ ನಿಮ್ಮ ಒಕ್ಕಲತನ-ಯಾಪಾರ ಬೆಳೆದದ. ಇದರಾಗ ನನ್ನ ಕಾಲ್ಗುಣ, ಕೈಗುಣ ಏನ ಆದ?

ಬಸವಂತ : ನಿನ್ನ ಕಾಲ್ಗುಣ, ಕೈಗುಣ ಅಂತ ನಮಗ ಅನಸ್ಯಾದ. ಅದಕ್ಕ ನೀ ಸಂತೋಷದಿಂದ ಇರಬೇಕು.

ಗಂಗಾ : ಈಗ ಸಂತೋಷದಿಂದ, ಭಾಳ ಸಂತೋಷದಿಂದ ಇದೀನಲ್ಲ.

ಇರಪಾಕ್ಷಿ : ಇರಬಹುದು. ಇನ್ನೂ ಸಂತೋಷದಿಂದ ಇರಬೇಕು. ನಾವು ಅದನ್ನ ಕಣ್ತುಂಬ ನೋಡಬೇಕು.

ಗಂಗಾ : ನೀವು ಅನ್ನೂದಾದರೂ ಏನು?

ಇರಪಾಕ್ಷಿ : ಏನೂ ಇಲ್ಲ (೫ ತೋಲಿ ಗಟ್ಟಿ ಇಟ್ಟು), ಇದನ್ನ ಅಣ್ಣ ಕೊಟ್ಟಾನ, ಒಡವಿ ಮಾಡಿಸಕೋಬೇಕು.

ಬಸವಂತ : (೫ ತೊಲಿ ಗಟ್ಟಿ ಇಟ್ಟು), ಇದನ್ನ ಅಣ್ಣ ಕೊಟ್ಟಾನ, ವಸ್ತ ಮಾಡಿಸಕೋಬೇಕು.

ಗಂಗಾ : ಹುಚ್ಚ ಹುಡುಗರ್‍ಯಾ, ಇರಪಾಕ್ಷಿ ನೀ ನನ್ ವಸ್ತ, ಬಸವಂತ ನೀ ನನ್ನ ಒಡವಿ. ನಿಮ್ಮ ಅಣ್ಣ ನನ್ನ ಮಂಗಳಸೂತ್ರ. ಇನ್ನೇನು ಬೇಕು ನನಗ.

ಇರಪಾಕ್ಷಿ : ನೀ ಏನ ಹೇಳಿದರೂ ನಾವು ಕೇಳೋದಿಲ್ಲ.

ಬಸವಂತ : ನೀ ಬಂಗಾರ ಮುಟ್ಟದಿದ್ದರ, ನಾವು ಊಟ ಮುಟ್ಟೂದಿಲ್ಲ.

ಗಂಗಾ : ಆಯಿತು, ನಿಮ್ಮ ಅಣ್ಣಗ ಕೇಳತೀನಿ, ಊಟ ಮಾಡಿರಿ.

ಈರಪ್ಪ : (ಸುಲಿಗಾಯಿ ತಿನ್ನುತ್ತ ಬಂದು) ಕೇಳೂದೇನದ, ೫ ವರ್ಷ ಆಯ್ತು, ನಾ ಹೇಳಿದರೂ ನೀ ಕೇಳಲಿಲ್ಲ.

ಗಂಗಾ : ಇದೆಲ್ಲ ಎದಕ? ಬಂಧು ಬಳಗನೇ ನನಗೆ ಬಂಗಾರ.

ಇಬ್ಬರೂ : ಅದೆಲ್ಲ ಹೇಳಬ್ಯಾಡ, ನಾವು ಊಟ ಮಾಡೂದಿಲ್ಲ (ಏಳುತ್ತಾರೆ).

ಗಂಗಾ : ಕೂಡ್ರಿ, ಕೂಡ್ರಿ, ನೀವು ಗೆದ್ದಿರಿ (ತೆಗೆದುಕೊಳ್ಳುತ್ತಾಳೆ. ಊಟ ಆರಂಭಿಸುತ್ತಾರೆ).

ಹಣ್ಣ ಹಾಗಲಕಾಯಿ ಎಣ್ಯಾಗ ಕರದೀನಿ
ಬೆಣ್ಣಿ ಬಿಸಿ ರೊಟ್ಟಿ ನೀಡೀನಿ
ಉಣ್ಣೊ ಬಸವಂತ ಬಹದ್ದೂರ
ಸಣ್ಣಕ್ಕಿ ಸರಗುಳಗಿ ಸ್ಯಾವಿಗಿ ಬಸದೀನಿ
ಚೆನ್ನಿಸಕ್ತಿ ಹಾಲ ಬೆರಸೀನಿ
ಉಣ್ಣೊನನ ಕೂಸ ಇರಪಾಕ್ಷಿ
(ಊಟ ಮುಗಿಯುತ್ತದೆ. ತೇಗುತ್ತಾರೆ)

ಈರಪ್ಪ : ತಮ್ಮಗಳಿರಾ, ಹೋತ್ತಾಯ್ತು ತ್ವಾಟಕ್ಕ ನಡೀರಿ (ಹೋಗುತ್ತಾರೆ).

ಈರಪ್ಪ : ಬಾ ಗಂಗಾ, ಕೂಡು, ನೀನೂ ತಿನ್ನು (ಕುಳಿತುಕೊಂಡು, ಸುಲಿಗಾಯಿ ಕೊಡುತ್ತ ಎಳೆದು ಹತ್ತರ ಕುಳ್ಳಿರಿಸಿಕೊಳ್ಳುತ್ತಾನೆ).

ಗಂಗಾ : ಬಿಡ್ರಿ, ಹೊಸದಾಗಿ ಲಗ್ನ ಆದವರಂಗ ಮಾಡಬ್ಯಾಡ್ರಿ. (ಸುಲಿಗಾಯಿ ತಿನ್ನುತ್ತ) ಇನ್ನೂ ಹುಡುಗರಾಂಗ ಮಾಡೂದ?

ಈರಪ್ಪ : ಗಂಗಾ, ನಿನ್ನ ನೋಡಿದರ ಸಾಕು, ನಾನು ಹುಡಗನೇ ಆಗತೀನಿ, ನಿನ್ನ ರೂಪ, ಅದಕ್ಕಿಂತ ನಿನ್ನ ಗುಣ, ನನ್ನ ಭಾಗ್ಯ ದೊಡ್ಡದು!

ಗಂಗಾ : ನಿಮಗಿಂತ ನನ್ನ ಭಾಗ್ಯ ದೊಡ್ಡದು. ಮಕ್ಕಳಂಥ ಮೈದುನರು, ನೋಡಿದರ ಹೊಟ್ಟಿ ತುಂಬಬೇಕು, ಅಂಥಾ ಗಂಡ.

ಈರಪ್ಪ : ನೋಡು ಗಂಗಾ ನೀ ಬಂದಾಗಿನಿಂದ ಹಗಲ - ರಾತ್ರಿ ಅಂತರನ ಮರತೀನಿ. ನಾ ರಾತ್ರಿಯಾಗಿ ಎರಗತೀನಿ, ನೀ ಹಗಲಾಗಿ ಕರಗತೀದಿ, (ಅವಳನ್ನ ತೆಕ್ಕೆಯೊಳಗೆ ಹಿಡಿದು ರಮಿಸುತ್ತಾನೆ).

ಗಂಗಾ : (ಬಿಡಿಸಿಕೊಳ್ಳುತ್ತ) ನನಗ ನಿಮ್ಮಿಂಗ ಮಾತಾಡಲಿಕ್ಕ ಬರೂದಿಲ್ಲ. ಸತ್ಯವಾಹನಗ ಸಾವಿತ್ರಿಯಾಗಿ ಬದುಕಬೇಕೆನ್ನುವದು ಮಾತ್ರ ನನಗ ಗೊತ್ತು. ಊಟಕ್ಕ ಏಳ್ರಿ ಹೊತ್ತಾಯ್ತು. (ಎದ್ದು ಇಬ್ಬರೂ ಮುದ್ದಾಡುತ್ತ, ಕುಣಿಯುತ್ತ ಒಳಗೆ ಹೋಗುವರು).

❖.❖

ದೃಶ್ಯ - ೩

(ಪತ್ತಾರನ ಮನೆ, ಅವನು ತನ್ನ ಕೆಲಸದಲ್ಲಿ ಮಗ್ನ, ಭಾಗವತ ಪತ್ತಾರನನ್ನು ಕುರಿತು ಹಾಡುತ್ತಾನೆ).

ಈ ಪತ್ತಾರ, ಈ ಪತ್ತಾರ, ಈ ಪತ್ತಾರ
ಕೈತುಂಬ ಕೆಲಸ ಬಂಗಾರ
ಬರು-ಹೋಗುವ ಹೆಣ್ಣ ಶೃಂಗಾರ ॥

ಈ ಪತ್ತಾರ, ಈ ಪತ್ತಾರ, ಈ ಪತ್ತಾರ
ಕಾಣಧಾಂಗ ಬಂಗಾರ ಕದಿವ
ಹೆಣ್ಣುಗಳ ಮನಸ ಇವ ಗೆದಿವ ॥

(ಗಂಗಾ, ಪರವ್ವ ಬರುತ್ತಾರೆ).

ಪರವ್ವ : ಏ ಪತ್ತಾರಣ್ಣಾ, ಪತ್ತಾರಣ್ಣಾ, ಬಂಗಾರ ತಂದೀನಿ.

ಪತ್ತಾರ : ಬಾ ಪರವ್ವ, ಖರೇನ ಬಂಗಾರ ತಂದೀಯಲ್ಲ. (ಆಸೆಗಣ್ಣಿನಿಂದ ಗಂಗೆಯನ್ನು ನೋಡಿ), ಇವರಾರು?

ಪರವ್ವ : ಈಕಿ ಸಾವಕಾರ ಈರಪ್ಪನ ಹೆಂಡತಿ ಗಂಗವ್ವ. ನಿನಗ ಗೊತ್ತಿಲ್ಲೇನು? ಈಕೀನೂ ನಿಮ್ಮೂರ ಬೈಲವಾಡದಾಕೀನ.

ಪತ್ತಾರ : ನಮ್ಮೂರ ಬೈಲವಾಡ ಅಲ್ಲ, ಗದಗ, ಎರಡೂವರೆ ವರ್ಷದ ಹಿಂದೆ ಗದಗ ಬಿಟ್ಟು ಬೈಲವಾಡಕ ಬಂದೆ. ಅಲ್ಲಿ ೬ ತಿಂಗಳ ಇದ್ದು ಈ ಊರಿಗಿ ಬಂದೆ, ಅದಕ್ಕ ನಿಮ್ಮೂರ ಜನ ನನಗ ಬೈಲವಾಡ ಪತ್ತಾರ ಅಂತಾರ.

ಪರವ್ವ : ಹೀಂಗ್. ಈಕಿ ಬೈಲವಾಡ ಬಿಟ್ಟು ಈ ಊರಿಗೆ ಬಂದು ೫ ವರ್ಷ ಆಯ್ತು. ಅದಕ ಅಲ್ಲಿ ಈಕಿ ಪರಿಚಯ ನಿನಗೆ ಇಲ್ಲ.

ಪತ್ತಾರ : ಆದಿರಲಿ, ಈ ಊರಿಗಿ ನಾ ಬಂದು ಎರಡೂ ವರ್ಷವಾದರೂ ನನ್ನ ಹತ್ತಿರ ಇವರು ಬಂದೇ ಇಲ್ಲ (ಆಗಾಗ ಅವಳನ್ನು ಕದ್ದು ನೋಡುತ್ತಾನೆ).

ಪರವ್ವ : ಈಕಿ ಹೊಸ್ತಲ ದಾಟಿದವಳಲ್ಲ, ನೆರಳಾಗ ಬೆಳೆದ ಸಾವಕಾರತಿ. ಇರಲಿ, ಒಡವಿ ಮಾಡಬೇಕಲ್ಲ.

ಗಂಗಾ	:	ಅಣ್ಣಾ, ಹತ್ತ ತೊಲಿ ಬಂಗಾರ ಆದ. ಮೊದಲ ಮಂಗಳಸೂತ್ರ ಮಾಡು, ಆಮೇಲೆ ಎರಡನೇ ವಿಚಾರ.
ಪತ್ತಾರ	:	ಆಗಲಿ ತಂಗೀ, ಮೊದಲ ನಿನಗ ಮಂಗಳಸೂತ್ರ ನನ್ನದೂ ಅದೇ ವಿಚಾರ. ಪರವ್ವ
ಪರವ್ವ	:	ಪತ್ತಾರಣ್ಣ, ನಮ್ಮ ಗಂಗವ್ವಗ ಸಿಂಗಾರ ಅಂದರ ಬ್ಯಾಸರ. ಹೆಣ್ಣಿಗಿ ಗುಣಾನ ಶೃಂಗಾರ ಅನ್ನೋಹಾಂಗ ಇವಳ ನಡತಿ. ಈ ನಡತಿಗೆ ಒಪ್ಪುವಂಥ ಆಭರಣ ಮಾಡಿಕೊಡು.
ಪತ್ತಾರ	:	ನೀ ಹೇಳೂ ಕಾರಣ ಇಲ್ಲ. ಇವಳ ನಡತಿಗಿ ತಕ್ಕಂತ.........
ಗಂಗಾ	:	ಅಣ್ಣಾ, ನನ್ನ ನಡತಿಗಿ ತಕ್ಕಂಗ ಸಂಪ್ರದಾಯದ ಆಭರಣ ಇರಲಿ.
ಪತ್ತಾರ	:	ತಂಗೀ ನಿನ್ನ ಮನಸ್ಸು ಬಂಗಾರ, ಅದರ ಮ್ಯಾಲ ನನ್ನ ಆಭರಣ ಕುಂದಣ,
ಪರವ್ವ	:	ಅಷ್ಟಾದರ ಸಾಕು.
ಪತ್ತಾರ	:	ನನ್ನ ಇಚ್ಚೆಯೂ ಅದೇ.
ಪರವ್ವ	:	ಬೆಂಕಿಯಂಥ ಬಂಗಾರ ಕೆಡಸಬ್ಯಾಡ, ಮತ್ತ.
ಪತ್ತಾರ	:	ಕೆಡಸಲಾರದೆ ಸೃಷ್ಟಿ ಆಗೋದಿಲ್ಲ, ಹಾಂಗ, ಬಂಗಾರ ಕೆಡಿಸಲಾರದೆ ಆಭರಣ ಆಗೋದಿಲ್ಲ. ಒಂದಿಷ್ಟು ತಾಮ್ರ ಕೂಡಸಬೇಕಾಗ್ತದ.
ಪರವ್ವ	:	ಅವಶ್ಯವಿರುವಷ್ಟು ತಾಮ್ರ ಕೂಡಿಸು. ಅದರ ಬೆಸಿ ಬ್ಯಾಡ.
ಪತ್ತಾರ	:	ಬೆಸಿಲಾರದೆ ವಸ್ತು ಆಗೊದಿಲ್ಲ. ಪರವ್ವ.
ಗಂಗಾ	:	ಅಣ್ಣಾ, ಮಾತ ಬೆಳಸಬ್ಯಾಡ. ನಿನಗ ಏನ ಆಭರಣ ಮಾಡ್ಲಿಕ್ಕೆ ಬರ್ತದ ಹೇಳು.
ಪತ್ತಾರ	:	ತಂಗೀ, ನನಗ ಉಳಿದವರು ಬ್ಯಾರೆ, ನೀ ಬ್ಯಾರೆ, ನಿನ್ನ ಮೈ ಮ್ಯಾಲ...
ಪರವ್ವ	:	ಹೌದು, ಈಕಿ ಮೈ ಮ್ಯಾಲ ನಿನ್ನ ಆಭರಣ ಒಪ್ಪಬೇಕು.
ಗಂಗಾ	:	ಅದು ನನ್ನ ಗಂಡನ ಮನಸಿಗೂ ಬರಬೇಕು.
ಪತ್ತಾರ	:	ನನ್ನ ಮನಸಿಗೂ ಬರಬೇಕು. ನಾ ನಿನ್ನ ಕೊರಳಿಗೆ ಪಾವಲಿ ಪದಕ, ನಾ ನಿನ್ನ ತೋಳಿಗೆ ತೋಳಬಂದಿ, ನಾ ನಿನ್ನ ಸೊಂಟಕ್ಕೆ ಒಡ್ಯಾಣ... ... ... ಹ್ಯಾಂಗ ಮಾಡ್ತೇನೀ ನೋಡು.
ಗಂಗಾ	:	ಇರಲಿ ಅಣ್ಣಾ, ಮಂಗಳಸೂತ್ರ, ಪಾವಲಿ ಪದಕ, ತೋಳಬಂದಿ, ಒಡ್ಯಾಣ ಇಷ್ಟ ಮಾಡು. ನನಗೆ ಸಂತೋಷ ಆಗಬೇಕು. ನನ್ನ ಇಚ್ಚಾ ಪೂರ್ಣವಾಗಬೇಕು.
ಪತ್ತಾರ	:	ಎಂಟು ದಿನದಾಗ ನಿನ್ನ ಇಚ್ಚಾ ಪೂರ್ಣ ಮಾಡ್ತೀನಿ.
ಗಂಗಾ	:	ಪರವ್ವ, ಕತ್ತಲಾಯ್ತು. ನಾ ಹೋಗತೀನಿ. ಕಾಗದದಾಗ ಎಲ್ಲ ಬರಸಿಕೊಂಡು ಬಾ (ಎನ್ನುತ್ತ ಹೋಗಿಯೇ ಬಿಡುವಳು).
ಪರವ್ವ	:	ಆಗಲಿ, ನಿನ್ನ ಹಿಂದ ಬಂದೆ.

ಪತ್ತಾರ : (ಕೈಯಲ್ಲಿ ಕಾಗದ ಪೆನ್ಸಿಲ್ ಹಿಡಿದು, ಹೋಗುವವಳನ್ನೇ ದಿಟ್ಟಿಸಿ ನೋಡುತ್ತಲಿರುವಾಗ ಹಿಮ್ಮೇಳ).

ಹದಿನಾರು ಕಳೆಗಳ ಹೆಣ್ಣು ಕಳೆಗಳ ಹೆಣ್ಣು ಕಳೆಗಳ ಹೆಣ್ಣು॥
ನಿನ ನೋಡಿ ಮುಚ್ಯಾವ ನನ ಕಣ್ಣು॥
ಇಸಗೊಂಡೆ ನಾನು ಇಸಗೊಂಡೆ ನಾನು ಇಸಗೊಂಡೆ ನಾನು ಬಂಗಾರಾ
ಕಸಗೊಂಡು ಹ್ವಾದ್ಯು ಮನ ಪೂರಾ॥
ಕುಚ ತುಂಬಿ ತುಳುಕುವಾ ಹಣ್ಣ ಮಾವಿನ ಹಣ್ಣ ಮಾವಿನ ಹಣ್ಣ
ನಿಂಬಿಯ ಹಣ್ಣ ಮೈಬಣ್ಣ॥

(ಸ್ವಗತ) ಕ್ಯಾದಗಿ ತೆನಿಯಂಥ ಹೆಣ್ಣು. ಹೊರಗ ಮುಳ್ಳ ಭಾಳ, ಮುಳ್ಳ ಮುರದ್ರ ಒಳಗ ಎಂಥ ಗಂಧ! ಇವಳ ಭೋಗ ಮಾಡಿದವನ ಜೀವನ ಸಾರ್ಥಕ. ಎಷ್ಟೋ ಹೆಂಗಸರು ನನ್ನ ಬಲಿಗೆ ಬಿದ್ಧಾರ. ಇಂಥವಳು! ಇದೇ ಮೊದಲು ಇದೇ ಕೊನೆ, ಏನು ಬಣ್ಣ? ಏನ ಕಣ್ಣ? ಏನು ಬ್ರಹ್ಮನ ಕೃತಿ, ಏನ ಆಕೃತಿ! ಇವಳ ಮಲಿ ಮ್ಯಾಲ ಮಲಗಬೇಕು. ಸುಳಿನಾಭಿಯಲ್ಲಿ ಸುಳಿಬೇಕು. ತೊಡೆಯ ತಟದಲ್ಲಿ ತಂಗಬೇಕು. ಈ ಕಲ್ಪನೆಯೇ ಇಷ್ಟು ಸಖ. ಕೂಡಿದರೆ ಎಷ್ಟು ಸುಖ! ಇವಳು ಬ್ರಹ್ಮನ ಚಮತ್ಕಾರ, ಕಾಮನ ಹಸ್ತಾಕ್ಷರ, ಮಾತಾಡಿದರ ಮಲ್ಲಿಗಿ ಸುರಿತಾವ. ಚಕಮತಿ ಕಟದಂಗ ಹಲ್ಲ ಹೊಳಿತಾವ, ನಕ್ಕರ ಬೆಳಕ ಬೀಳತದ (ಮೈಮರೆತು ಕೂಡುವನು).

ಪರವ್ವ : (ಎಚ್ಚರಿಸುವಂತೆ) ಏ ಪತ್ತಾರಪ್ಪ, ಬೇಗ ಬರದು ಮುಗಸು, ಎಲ್ಲಿಗಿ ಬಂತು?

ಪತ್ತಾರ : ಎಲ್ಲಿಗೆ ಬಂತು? ಆಗ ಸೊಂಟಕ್ಕ ಬಂದಿತ್ತು. ಈಗ ಕುತ್ತಿಗಿ ಮಟ ಬಂತು?

ಪರವ್ವ : ಏನ್ ಹಾಂಗಂದರ.

ಪತ್ತಾರ : ಹಾಗಂದರ ಹೀಂಗ (ಎರಡೂ ಕೈ ಬೆರಳು ಕೊಂಡಿ ಮಾಡುತ್ತಾನೆ)

ಪರವ್ವ : ಬಿಡಿಸಿ ಹೇಳಲಾ.

ಪತ್ತಾರ : ಕೂಡಸಲಾಕ ವಚನ ಕೋಡು, ಬಿಡಿಸಿ ಹೇಳತೀನಿ.

ಪರವ್ವ : ಏನ್ ವಚನಾ?

ಪತ್ತಾರ : ನೋಡ ಪರವ್ವ, ನೀ ನನಗ ಅಕ್ಕನ ಸರಿ. ನನ್ನ ಉಳಸಬೇಕು. ಹೊಟ್ಟ್ಯಾನ ಮಾತ ಬಿಚ್ಚಿ ಹೇಳತೀನಿ.

ಪರವ್ವ : ಹೇಳಲಾ.

ಪತ್ತಾರ : ಅಕ್ಕಾ, ಖರೇ ಹೇಳಬೇಕಂದ್ರ ನೀ ಗಂಗಾನ ಕರಕೊಂಡು ಬರಲಿಲ್ಲ. ಹುಣಿವಿ ಚಂದರನ ಕರಕೊಂಡು ಬಂದಿ.

❖❖

ದೃಶ್ಯ–೪

(ಈರಪ್ಪನ ಮನೆ, ಊಟ ಮುಗಿಸಿದ ಸೂಚನೆಯೆಂಬಂತೆ ಶತಪಥ ಹಾಕುತ್ತ)

ಈರಪ್ಪ : ಗಂಗಾ, ನಿನ್ನ ಊಟ ಮುಗಿತೇನು? ಎಲಿ ಚೀಲ ತಗೊಂಡು ಬಾ (ಕುಳಿತುಕೊಳ್ಳುತ್ತಾನೆ).

ಗಂಗಾ : (ಎಲಿ ಚೀಲದೊಂದಿಗೆ ಬರುತ್ತ) ಬಂದೆ, (ಎನ್ನುತ್ತ ಜೊತೆಗೆ ಕುಳಿತು ಎರಡು ವೀಳ್ಯ ಮಡಿಸುತ್ತ) ಹೊತ್ತಾಯ್ತು, ಬಸವಂತ ಇರಪಾಕ್ಷಿ ತ್ವಾಟದಿಂದ ಇನ್ನೂ ಬರಲಿಲ್ಲ.

ಈರಪ್ಪ : ಇವತ್ತ ವಿಜಯದಶಮಿ. ತ್ವಾಟದಾಗ ಇದು ಮಾವಿನ ಸಸಿ ಹಚ್ಚಿ ಬರತೀವಿ ಅಂತ ಹೋಗ್ಯಾರ, ಗೊಬ್ಬರ, ಮುಳ್ಳ ಬೇಲಿ ಎಲ್ಲ ಮುಗಿಸಿಯೇ ಬರೂಹಾಂಗ ಕಾಣಸತದ.

ಗಂಗಾ : ಏನು ಹುಡುಗರೋ, ಕೆಲಸ ಇದ್ದರ ಮುಗೀತು, ಹಸು ನೀರಡಿಕಿ ಮರಿತಾರ.

ಈರಪ್ಪ : ದುಡೀಲಿ ಬಿಡು. ಸಣ್ಣ ವಯಸ್ಸಿನಾಗ ದುಡಿಯೋದು ಕಲಿಬೇಕು. ಮಡಿ ಸುಖಾ ಪಡಿ–ಅಂತ ಹಿರೇರು ಹೇಳ್ಯಾರ.

ಗಂಗಾ : ಈ ಪರಿ ದುಡಿಯೂದಾ? ನನಗಂತೂ ಸಣ್ಣ ಕೂಸ ಇರಪಾಕ್ಷಿ ದುಡಿಯೂದು ನೋಡಿದರ ಕಳ್ಳ ಚುರ್ ಅಂತಾದ. ಇಷ್ಟು ದುಡಿಯೂ ಮಕ್ಕಳು, ಸ್ವಲ್ಪೂ ಚೈನಿ ಮಾಡೂದಿಲ್ಲ, ಊಟ ಬಟ್ಟಿ ಇದ್ದರ ಸಾಕು.

ಈರಪ್ಪ : ನೀನೂ ಅಷ್ಟೇ. ಉಡಬೇಕು, ತೊಡಬೇಕು–ಅನ್ನೂ ಆಸೆ ಇಲ್ಲ. ಈ ಮನಿಗಿ ದುಡಿಯೂದು, ಇದರ ಕೀರ್ತಿ–ಶ್ರೀಮಂತಿಕೆ ಬೆಳಸೂದು ಮಾತ್ರ ನಿನಗ ಗೊತ್ತು.

ಗಂಗಾ : ಹೊಗಳಬ್ಯಾಡ್ರಿ, ಹೆಣ್ಣು ಶ್ರೀಮಂತ ಮನಿಗಿ ಹೋಗೂದು ದೊಡ್ಡದಲ್ಲ, ಹೋದ ಮನಿ ಶ್ರೀಮಂತ ಮಾಡೂದು ದೊಡ್ಡದು. ಇರಲಿ. ಹಿಡಿರಿ (ಮಡಸಿದ ವೀಳ್ಯ ಕೈಗೆ ಕೊಡಲು ಹೋಗುತ್ತಾಳೆ. ಈರಪ್ಪ ಬಾಯಿ ತೆರೆಯುತ್ತಾನೆ. ನಗುತ್ತ ಬಾಯಿಯಲ್ಲಿ ಇಡುತ್ತಾಳೆ. ಈರಪ್ಪ ಇನ್ನೊಂದು ವೀಳ್ಯ ಅವಳ ಬಾಯಿಗೆ ಇಡುತ್ತಾನೆ. ಇಬ್ಬರೂ ಸರಸ ಪ್ರಸಂಗ ಸೃಷ್ಟಿಸುತ್ತಾರೆ. ಇಬ್ಬರಿಂದಲೂ ಕೆಳಗಿನ ಹಾಡು)

ಈರಪ್ಪ : ಹೆಣ್ಣಿಗಿ ಚೆಲವು ಸಂಪತ್ತು!

ಗಂಗಾ : ಗಂಡಿಗಿ ಬಲವು ದೌಲತ್ತು!

ಇಬ್ಬರೂ : ಇಬ್ಬರಿಗು ಒಲವು ಕೈತುತ್ತು
ಇದು ನಮ್ಮ ಬಾಳ ತಾಕತ್ತು॥

ಈರಪ್ಪ : ಪತಿ ಸೋಲಬೇಕು ಸತಿಗೆ।

ಗಂಗಾ : ಸತಿ ಸೋಲಬೇಕು ಪತಿಗೆ॥

ಇಬ್ಬರೂ : ಇಬ್ಬರು ಸೋತು ಗೆದಿಬೇಕು
ನಮ್ ಹಾಂಗ ಜೋಡಿ ಇರಬೇಕು॥

(ಅಷ್ಟರಲ್ಲಿ ಸಂಗಣ್ಣ ಬರುತ್ತಾನೆ).

ಸಂಗಣ್ಣ : ಈರಪ್ಪಣ್ಣ, ಈರಪ್ಪಣ್ಣ ಮನ್ಯಾಗ ಇದ್ದೀ ಏನ?

ಗಂಗಾ : (ಎದ್ದು) ಬಾ ಅಣ್ಣಾ, ಮನ್ಯಾಗ ಮಕ್ಕಳು ಮರಿ ಆರಾಮ? (ಕಂಬಳಿ ಹಾಸುತ್ತಾಳೆ, ಸಂಗಣ್ಣ ಕುಳಿತುಕೊಳ್ಳುತ್ತಾನೆ).

ಸಂಗಣ್ಣ : ಆರಾಮ ನೋಡವಾ ತಂಗೀ, ಏನು ಇಬ್ಬರೂ ಭಾಳ ಖುಷಿಯಾಗ ಇದ್ದೀರಿ.

ಈರಪ್ಪ : ಏನಿಲ್ಲ, ಇವತ್ತ ವಿಜಯ ದಶಮಿ, ಹೋಳಿಗೆ ಊಟಾ ಮುಗಿಸಿ ಇಬ್ಬರೂ ಎಲಿ ತಿನಕೊಂತ ಕೂತೀವಿ.

ಸಂಗಣ್ಣ : ಸಂಜಿಗಿ ಮಂದಿ ಬನ್ನಿಕೊಡಲಾಕ ಮನಿಗಿ ಬರತಾರ. ಆಗ ನನಗ ಪುರಸೊತ್ತು, ಸಿಗಲಿಕ್ಕಿಲ್ಲ ಅಂತ, ನಿನಗ ಈಗ ಬನ್ನಿ ಕುಡಲಾಕ ಬಂದೆ, ಹಿಡಿ (ಈರಪ್ಪನಿಗೆ ಕೊಟ್ಟು ನಮಸ್ಕರಿಸುತ್ತಾನೆ).

ಈರಪ್ಪ : (ಸ್ವೀಕರಿಸಿ ತಾನೂ ಕೊಟ್ಟು) ದೇವರು ನಿನಗ ಇನ್ನೂ ಒಳ್ಳೇದು ಮಾಡಲಿ, ನೋಡು ಸಂಗಣ್ಣ ಹಿಂದಿನ ಜನ್ಮದಾಗ ನಾವಿಬ್ಬರೂ ಅಣ್ಣತಮ್ಮ ಆಗಿದ್ದೇವು ಕಾಣಸ್ತಾದ

ಗಂಗಾ : ಹಿಂದಿನ ಜನ್ಮದಾಗ ಯಾಕ? ಈ ಜನ್ಮದಾಗೂ ನೀವು ಅಣ್ಣ-ತಮ್ಮ ಒಬ್ಬರ ಕಾಲಾಗ ಮುಳ್ಳ ನಟ್ಟರ ಇನ್ನೊಬ್ಬರ ಕಣ್ಣಾಗ ನಟ್ಟಾಂಗ ಮರಗತೀರಿ.

ಸಂಗಣ್ಣ : ತಂಗಿ ಬನ್ನಿ ಹಿಡಿ, ಕಾಲ ಜೋಡಿಸು.

ಗಂಗಾ : (ಕೈಯಲ್ಲಿ ಇಸಿದುಕೊಳ್ಳಲು ಪ್ರಯತ್ನಿಸುತ್ತ) ಬ್ಯಾಡ್ರಿ ಅಣ್ಣಾ, ಬ್ಯಾಡ್ರಿ, ನೀವು ಹಿರೇರು.

ಸಂಗಣ್ಣ : ಹುಚ್ಚೀ, ನೀ ತಂಗಿ- ನಾ ಅಣ್ಣ, ತಂಗಿ ಅಂದರ ಲಕ್ಷ್ಮಿ ಸಮಾನ ಅಂತಾರ. ಅಣ್ಣನ ಹಣಿಗಿ ತಂಗಿ ಪಾದ ಧೂಳಿ ಹತ್ತಿದರ ಅದಕಿಂತ ದೊಡ್ಡ ಪುಣ್ಯ ಯಾವದಾದ? ಅದರಾಗ ನೀ ಭಾಳ ಪುಣ್ಯವಂತಿ. ನೀ ಬಂದ ಬಳಿಕ ಈ ಮನಿ ಭಾಗ್ಯಾ ತೆರೀತು. ನಿನ್ನಂಥಾ ಸೋಸಿ ಮುಂದ ನನಗೂ ಸಿಗಲಿ ಅಂತ ಆಶೀರ್ವಾದ ಮಾಡು (ಬನ್ನಿ ಕೊಟ್ಟು ನಮಸ್ಕಾರ ಮಾಡುವನು).

ಗಂಗಾ : ಅಣ್ಣಾ, ಭಾವ ಸುದ್ದ ಇದ್ರ ಭಾಗ್ಯಕ್ಕೇನು ಕಡಿಮಿ? ನಿಂದು ಭಾವ ಸುದ್ದ ಅದ. ದೇವರು ನನಗ ಇನ್ನೂ ಒಳ್ಳೆದು ಮಾಡತಾನ. ಕಾಳಜಿ ಬಿಡರಿ (ಎನ್ನುತ್ತ ಒಳಗೆ ಹೋಗುವಳು).

ಈರಪ್ಪ : ಸಂಗಣ್ಣ ನಾನೇ ಕರಸಬೇಕಂತ ಮಾಡಿದ್ದೆ, ನೀನೇ ಬಂದಿ.

ಸಂಗಣ್ಣ : ಏನು ಕೆಲಸಿತ್ತು?

ಈರಪ್ಪ : ಏನಿಲ್ಲ, ಹೋದ ವಾರ ಸಿರಸಿ– ಶಿವಮೊಗ್ಗ ಯಾಪಾರಕ್ಕ ಹೋಗಿದ್ದೆ. ದೊಡ್ಡ ಲಾಭ ಆತು. ನನಗ ಒಂದು ಜರಿಕಟ್ಟಿ ಪಟಗಾ ಖರೀದಿಸಿದೆ. ನಿನಗೂ ಒಂದು ತಂದೀನಿ. ಗಂಗಾ ಆ ಪಟಗಾ ತಾ. (ಗಂಗಾ ೨ ಪಟಗಾ ತಂದು ಗಂಡನ ಕೈಗೆ ಕೊಡುತ್ತಾಳೆ. ಈರಪ್ಪ ಸಂಗಣ್ಣನಿಗೆ ಕೊಡುತ್ತಾನೆ).

ಸಂಗಣ್ಣ : ನನಗ ಪಟಗಾ ಜರೂರ ಇರಲಿಲ್ಲ ಸುಮ್ಮನ ಖರ್ಚು.

ಈರಪ್ಪ : ಸಂಗಣ್ಣ, ದುಡ್ಡು ದೊಡ್ಡದಲ್ಲ, ಗೆಳೆತನ ದೊಡ್ಡದು. ತಗೋ (ಇಬ್ಬರೂ ಧರಿಸುತ್ತಾರೆ).

ಗಂಗಾ : (ನೋಡಿ,) ಎನ್, ಇಬ್ಬರೂ ರಾಮ–ಲಕ್ಷ್ಮಣರ ಹಾಂಗ ಕಾಣತೀರಿ. ಪಟಗಾ ಮಾರಿಗಿ ಬಹಳ ಚಂದ ಕಾಣಸ್ತದ (ಗಂಗಾ ಒಳಗೆ ಹೋಗುತ್ತಾಳೆ).

ಈರಪ್ಪ : ಸಂಗಣ್ಣ ನಿನ್ನ ಯಾಪಾರ ಹ್ಯಾಂಗ ನಡದದ?

ಸಂಗಣ್ಣ : ಈ ವರ್ಷದಷ್ಟು ಲಾಭ ಎಂದೂ ಆಗಿರಲಿಲ್ಲ. ಕಳೆದ ತಿಂಗಳ ಸಂಕೇಶ್ವರ– ನಿಪ್ಪಾಣಿ ಹೋಗಿದ್ದೆ. ಹಾಂಗ ಕೊಲ್ಲಾಪುರ ತನ ವ್ಯಾಪಾರ ಮಾಡಿದೆ. ಬೆಲ್ಲದಾಗ ಎರಡು ಸಾವಿರ ರೂಪಾಯಿ ಲಾಭ ಆಯಿತು.

ಈರಪ್ಪ : ಹೋದ ವರ್ಷ ನನಗೂ ಬೆಲ್ಲದಾಗ ಹಾಂಗ ಲಾಭ ಆಗಿತ್ತು. ಅದರಾಗ ಆ ಎರಿಹೊಲ ಖರೀದಿಸಿದ್ದು, ಮ್ಯಾಲಿನ ಹೊಲದಾಗ ಭಾವಿ ತಗಿಸಿದ್ದು, ಅದಕ್ಕ ಇತ್ತೀಚೆ ನಾನು ದೂರ ಹೋಗಿಲ್ಲ.

ಸಂಗಣ್ಣ : ಈ ವರ್ಷ ಎಲ್ಲಿಗಾದರೂ ಹೋಗಬೇಕು?

ಈರಪ್ಪ : ಬಳ್ಳಾರಿಗೆ ಹೋಗಬೇಕಂತೀನಿ, ಮುಂಗಾರಿ ಸುಗ್ಗಿ ಯಾಪಾರಕ ಬರಬೇಕಂತ ಸೇಡಜಿ ಹೇಳಿ ಕಳಸ್ಯಾನ. ಒಂದು ತಿಂಗಳ ಹೋಗಿ ದುಡ್ಡ ಬಳಕೊಂಡ ಬರಬೇಕು.

ಸಂಗಣ್ಣ : ಒಳ್ಳೆಯ ವಿಚಾರ ಹೋಗಿ ಬಾ (ಹಳೆಯ ಪಟಗಾದೊಂದಿಗೆ ಹೊರಡುವನು).

ಈರಪ್ಪ : ಹೋಗಿ ಬಾ, ನಾನೂ ತ್ವಾಟಕ್ಕ ಹೋಗಬೇಕು (ಹೊರಗೆ ಹೋಗುವನು, ಅಷ್ಟರಲ್ಲಿ ಪರವ್ವ ಬರುತ್ತಾಳೆ).

ಪರವ್ವ : ಗಂಗಾ, ಗಂಗಾ

ಗಂಗಾ : ಬಾ ಪರವ್ವ, ದಾಗೀನ ಏನಾಯ್ತು?

ಪರವ್ವ : ಎಲ್ಲ ಬರೋಬರಿ ಆಗ್ಯಾದ. ಈಗ ಅಲ್ಲಿಂದ ಬಂದೆ. ಏನು ಪತ್ತಾರ, ಏನ ಸುದ್ದಿ.

ಗಂಗಾ : ಅಂದರ?

ಪರವ್ವ : ಕೊಟ್ಟೀವಿ ಬಂಗಾರಚ್ಚೇರ
ಮಾಡ್ಯಾನ ಒಡವಿ ಸಿಂಗಾರ

ಮಾಡಿದ ತಾಳಿ ಥಳ ಥಳಕ
ನಿನ್ನೆದಿಮ್ಯಾಲ ಅವ್ನ ಬೆಳಕ
ಮಾಡ್ಯಾನ ಪಾವ್ಲಿಸರ ಚದರ
ನಿನ್ ಕೊರಳ ಸುತ್ತ ಅವ್ನ ನೆದರ
ಒಡ್ಯಾಣ ನಿನ್ನ ಕಟಿ ಸುತ್ತ
ಅವ್ನ ಮುತ್ತ ಅದರ ಸುತ್ತಮುತ್ತ
ಎನ್ ಚಂದ ನಿನ್ನ ತೋಳಬಂದಿ
ಅವ್ನ ತೋಳ ತುಂಬ ನೀ ಬಂದಿ
ಏನು ಪತ್ತಾರ! ಬಂಗಾರದಂಥ ಪತ್ತಾರ, ಏನ ಆಭರಣ!!

ಗಂಗಾ : ಹ್ಯಾಂಗ ಮಾಡ್ಯಾನ?

ಪರವ್ವ : ಎದಿಮ್ಯಾಲ........

ಗಂಗಾ : ಏನ ಎದಿಮ್ಯಾಲ?

ಪರವ್ವ : ನಿನ್ನ ಎದಿಮ್ಯಾಲ ಮಾವಿನಕಾಯಿ.......

ಗಂಗಾ : ಅಂದರ?

ಪರವ್ವ : ಮಾವಿನಕಾಯಿ ಪದಕ ಹಾಕಿ ಪಾವಲಿಸರ ಮಾಡ್ಯಾನ, ಮತ್ತು ನನ್ನ ಹೆಂಡ್ತಿ ಬ್ಯಾರೆ ಅಲ್ಲ, ಗಂಗಾ ಬ್ಯಾರೆ ಅಲ್ಲ, ಅದಕ್ಕೆ ಅಂಥಾ ಮಂಗಳಸೂತ್ರನೇ ಮಾಡೀನಿ ಅಂದ.

ಗಂಗಾ : ಮತ್ತ ಏನ ಮಾಡ್ಯಾನ?

ಪರವ್ವ : ನಿನ್ನ ಸೊಂಟದ ಸುತ್ತ.........

ಗಂಗಾ : ಏನು ಹೇಳಲ?

ಪರವ್ವ : ಮೊನ್ನೆ ನಿನ್ನ ಸೊಂಟದ ಸುತ್ತಳತಿ ಅವಗ ಹೇಳಿದೆ, ಗಾಬರ್ಯಾದ, ಇಷ್ಟು ಸಣ್ಣ ಸೊಂಟ? ಅಂದ. ಇದಕ ಒಪ್ಪುಹಾಂಗ ಒಡ್ಯಾಣ ಮಾಡೀನಿ ಅಂದ, ಮತ್ತ ನಿನ್ನ ತೋಳಸುತ್ತ......

ಗಂಗಾ : ಏನು ತೋಳ ಸುತ್ತ?

ಪರವ್ವ : ಅವತ್ತ ದಾರ ಹಿಡದು ನಿನ್ನ ತೋಳ ಸುತ್ತಳತಿ ನೋಡಿದ್ನಲ್ಲ? ಇಲ್ಲಿ ತನಕಾ ಇಂಥ ತೋಳ ನೋಡಿದ್ದಿಲ್ಲ. ಅದಕ್ಕ ಇಷ್ಟ ಮನಸಗೊಟ್ಟು ತೋಳಬಂದಿ ಮಾಡೀನಿ ಅಂದ.

ಗಂಗಾ : ಹೌದು, ಮನಸಗೊಟ್ಟು ಮಾಡಿದರ ಕೆಸಲ ಚಂದ ಆಗತಾವ.

ಪರವ್ವ : ನಿಮ್ಮ ಗಂಗಾ ರೂಪದಲ್ಲಿ ರತಿ, ಅಕಿ ಅಂದರ ನನಗ ಪ್ರೀತಿ, ಅದಕ್ಕ ಪ್ರೀತಿಯಿಂದ

		ಮಾಡೀನಿ ಅಂದ. ಅದಿರಲಿ, ಏನು ಅವನ ಕೆಲಸ, ಏನ ಅವನ ಗಳಿಕಿ, ತಿಂಗಳಿಗಿ ಒಂದು ತೊಲಿ ಗಳಿಸತಾನ, ನೂರಾರು ತೊಲಿ ಗಳಿಸ್ಯಾನ. ಅವ ಸಾವಕಾರ, ನೀ ಸಾವಕಾರತಿ.
ಗಂಗಾ	:	ಹುಚ್ಚಿ, ಅವನ ಸಾವಕಾರಕಿ ನನಗೇನು ಸಂಬಂಧ, ಒಡವಿ ತಂದಿದ್ದರ ತೋರಿಸು, ಎಷ್ಟು ತಡ, ಏನು ಕತಿ?
ಪರವ್ವ	:	ಅಯ್ಯ, ಅದು ದೊಡ್ಡ ಕತಿ, ಅವ ಭಾಳ ಸೊಗಸಗಾರ, ಆಟ ಬರಿಯೋದು, ಆಟ ಆಡೂದು ಅವಗ ಭಾಳ ಇಷ್ಟ. ಮೊನ್ನೆ ಕಿತ್ತೂರಾಗ ರತಿಕಲ್ಯಾಣ ಆಟ ಆಡಿಸದ, ಅವ ಮೊದಲೇ ಚೆಲುವ, ಅದರಾಗ ಕಾಮನ ಸೋಗ ಹಾಕಿದ್ದ. ಅದನ್ನ ಕಂಡು ಹೆಂಗಸರು ಹುಚ್ಚಾದರು. ರತಿ ಆದಾಕಿ ಥೇಟ ನಿನ್ನ ಹಾಂಗ ಇದ್ಳು. ಆಕಿ ಕದ್ದು ನೋಡೋದೇನು! ಅವ ಮುದ್ದ ಕೊಡೋದೇನು! ಏನ ಅವನ ಮಾಟ! ಏನ ಅವನ ಆಟ!
ಗಂಗಾ	:	ಆವ ಆಟ ಬಂದರೇನು? ಆಟ ಆಡಿದರೇನು? ಅದು ನನಗೇನು ಸಂಬಂಧ? ಒಡವಿ ಬಗ್ಗೆ ಹೇಳು.
ಪರವ್ವ	:	ಆಟದ ಹವ್ಯಾಸದಾಗ ಪುರಸೊತ್ತ ಸಿಕ್ಕಿಲ್ಲಂತ, ಎಲ್ಲ ನಾಳಿಗಿ ಕುಡತಾನಂತ, ನೀನ ಬರಬೇಕಂತ, ನೀ ಅಂದರ್, ಅಲ್ಲ ನೀ ಬಂದರ್, ಎಲ್ಲಾ ವ್ಯಾವಹಾರ ಖಲಾಸ್ ಅಂದ.
ಗಂಗಾ	:	ಆಗಲಿ, ನಾಳೆ, ಸಂಜಿಗಿ ಹೋಗೋಣ. (ಪರವ್ವ ಹೋಗುವಳು, ಗಂಗಾ ಒಳಗೆ ಹೋಗುವಳು).

❖❖

ದೃಶ್ಯ – ೫

(ಸಂಗಣ್ಣ ಮನೆ, ಹೊಸ ಪಟಗಾ ಸುತ್ತಿಕೊಂಡು, ಪಗಡಿ ಪಟ್ಟಾ ಬಿಚ್ಚಿ ಬಾಳಣ್ಣನ ನೀರಿಕ್ಷೆಯಲ್ಲಿ ಕುಳೀತಿದ್ದಾನೆ. ಬಾಳಣ್ಣ ಬರುತ್ತಾನೆ.)

ಬಾಳಣ್ಣ : ನಮಸ್ಕಾರ ಸಂಗಣ್ಣ.

ಸಂಗಣ್ಣ : (ಏಳುತ್ತ) ಬಾ ಬಾಳಣ್ಣಾ, ನಿಮಗ ಹೇಳಿಕಳಿಸಿ ಎಷ್ಟೋತ್ತಾಯ್ತು, ಈಗ ಬರೋದಾ? ಇರಲಿ, ನಮಸ್ಕಾರ ಅನಬ್ಯಾಡ ಅಂತ ಎಷ್ಟು ಸಲ ಹೇಳೀನಿ, ನೀ ನನ್ನ ಜೀವನದ ಗೆಳೆಯ. ಹೀಗೆಲ್ಲ ಅನಬಾರದು.

ಬಾಳಣ್ಣ : ನೋಡು ಸಂಗಣ್ಣ, ನಾವು ಗೆಳೆಯರಿರಬಹುದು. ಅದರ ನೀನು ಶ್ರೀಮಂತ. ನಾನು ಬಡವ, ನಿನಗ ಊರಾಗ ಗೌರವ ಅದ. ಇಡಿ ಊರ ಜನ ನಿನಗ ಮನ್ನಿಸತಾರ, ನಾನೂ ಅವರಲ್ಲಿ ಒಬ್ಬ.

ಸಂಗಣ್ಣ : ಇರಬಹುದು. ಊರಿಗೆ ಅರಸನಾದರೂ ತಾಯಿಗಿ ಮಗ, ಹಾಂಗ ಎಲ್ಲರಿಗೂ ನಾನೂ ದೊಡ್ಡವ ಇದ್ದರೂ ನಿನಗ ದೊಡ್ಡವ ಅಲ್ಲ, ಜೀವದ ಗೆಳೆಯ.

ಬಾಳಣ್ಣ : ಹೌದು, ಅದು ಊರ ಜನರಿಗೇ ಗೊತ್ತು, ನಾವಿಬ್ಬರೂ ಒಂದೇ ತಾಯಿ ಮಕ್ಕಳು, ನೀ ಅಣ್ಣ ನಾ ತಮ್ಮ ಅಂತ ಎಲ್ಲರೂ ಮಾತಾಡತಾರ. ಈ ಊರಾಗ ಲಗಳಿ ಈರಪ್ಪಣ್ಣನ ಮನಸಿನ್ಹಾಂಗ ನಿನ್ನ ಮನಸ್ಸೂ ದೊಡ್ಡದು. ನನಗೆ ಕಷ್ಟದಾಗ ನೀವಿಬ್ಬರೂ ಸಹಾಯ ಮಾಡ್ತ ಬಂದೀರೀ, ನೀನಂತೂ ಎಲ್ಲ ಹೊಣೆ ಹೊತ್ತು ಮೊನ್ನೆ ನನ್ನ ತಂಗಿ ಲಗ್ನ ಮಾಡಿದಿ......

ಸಂಗಣ್ಣ : (ತಡೆದು) ಶ್! ಹಾಗನಬಾರದು. ನಿನ್ನ ತಂಗಿ ಬೇರೆ ಅಲ್ಲ, ನನ್ನ ತಂಗಿ ಬೇರೆ ಅಲ್ಲ.

ಬಾಳಣ್ಣ : ನಿನ್ನ ಮನಸ ದೊಡ್ಡದು, ಇರಲಿ, ನನಗ ಬರಲಿಕ್ಕೆ ಹೇಳಿ ಕಳಿಸಿದಿ, ಏನು ಕೆಲಸ?

ಸಂಗಣ್ಣ : ಏನಿಲ್ಲ, ಹೊತ್ತು ಹೋಗುವಲ್ದು, ಪಗಡಿ ಆಡಲಾಕ ಕರೆಸಿದೆ. ಕೂಡು (ಇಬ್ಬರೂ ಕುಳಿತು ಪಗಡಿ ಆಟ ಸುರು ಮಾಡುತ್ತಾರೆ. ನಡುನಡುವೆ ಪಡಗಿ ಪರಿಭಷೆ ಬಳಸುತ್ತಾರೆ)

ಆಡೋಣ ಬಾ ಗೆಳೆಯ ಜೋಡಿ ನಾವಿಬ್ಬರು.
ಪಗಡಿಯನಾಡೋಣ।
ಹಸರು ಹಳದಿ ನಂದು ಕರಿದು ಕೆಂಪು ನಿಂದು
ಪಗಡಿಯನಾಡೋಣ।
ದಶ ಪಾಶಕ ಹೊಡತ। ಚಕ್ಕಾ ತೀನಿಗೆ ಕಡತ
ಪಗಡಿಯನಾಡೋಣ।

ಬಾಳಣ್ಣ : ಸಂಗಣ್ಣ ಕತ್ತಲಾಗ್ತಾ ಬಂತು, ಆಟದಾಗ ಹೊತ್ತ ಹೋದದ್ದೇ ಗೊತ್ತಾಗಲಿಲ್ಲ. ಆಟಾ ಸಾಕು (ಇಬ್ಬರೂ ಏಳುತ್ತಾರೆ) ಅರೇ, ಪಟಗಾ ಹೋಸಾದು ಕಾಣಸ್ತಾದ?

ಸಂಗಣ್ಣ : ಹೌದು, ಲಗಳಿ ಈರಪ್ಪಣ್ಣ ಸಿರಸಿ–ಶಿವಮೊಗ್ಗ ಯಾಪಾರಕ ಹೋಗಿದ್ದನಂತ. ತನಗ ಪಟಗಾ ಖರೀದಿಸಿ ನನಗೂ ಒಂದು ತಂದಾನ. ಮೊನ್ನೆ ಅದನ್ನು ನನಗ ಸುತ್ತಿ ಕಳಿಸಿದ.

ಬಾಳಣ್ಣ : ಈ ಪಟಗಾ ನಿನ್ನ ಮಾರಿಗಿ ಭಾಳ ಒಪ್ಪತದ, ಕಾಮಣ್ಣನ್ಹಂಗ ಕಾಣಸ್ತಿ.

ಸಂಗಣ್ಣ : ತಗಿ ಅಂದರ (ಒತ್ತಾಯಿಸುತ್ತಾನೆ. ಬಾಳಣ್ಣ ಪಟಗಾ ತೆಗೆಯುತ್ತಾನೆ. ಸಂಗಣ್ಣ ಅವನ ತಲೆಯ ಮೇಲಿಟ್ಟು), ನನಗಿಂತ ನಿನಗ ತುಂಬಾ ಒಪ್ಪತದ. ಇದು ಖಾಯಂ ನಿನ್ನ ತಲಿಮ್ಯಾಲೇ ಇರಲಿ.

ಬಾಳಣ್ಣ : (ಗಾಬರಿಯಾಗಿ) ಬ್ಯಾಡ ಸಂಗಣ್ಣ. ಈರಪ್ಪ ಸಾವಕಾರ ನಿನಗ ತಂದಾನ.

ಸಂಗಣ್ಣ : ನನಗೇನು, ನಿನಗೇನು, ನಿನಗ ಇರಲಿ,

ಬಾಳಣ್ಣ : ಬ್ಯಾಡ ಮಾರಾಯ, ಈ ಪಟಗಾ ನಿನಗ ಅವ ಕಾಣೀಕೆ.......

ಸಂಗಣ್ಣ : ಹೌದು, ನಿನ್ನ ಪಟಗಾ ನನಗೆ ಕಾಣೀಕಿ (ಎಂದು ಹಳೆಯ ಪಟಗಾ ಕಸಿದುಕೊಂಡು ಸುತ್ತಿಕೊಳ್ಳುತ್ತಾನೆ.) ಈಗ ನನಗೆ ಖೂಷಿ ಆಯ್ತು ನೋಡು, ಬಾಳಾಣ್ಣಾ.

ಬಾಳಣ್ಣ : ನಿನ್ನ ಮನಸ ದೊಡ್ಡದು.

ಸಂಗಣ್ಣ : ನೋಡು ಬಾಳಣ್ಣ, ನಾ ಸಾವಕಾರ, ಮತ್ತೆ ಖರೀದಿಸಬಹುದು. ನೀ ಬಡವ, ಹ್ಯಾಂಗ ಖರೀದಿಸಲಿಕ್ಕೆ ಸಾಧ್ಯ. ನೀ ಎಷ್ಟು ದುಡಿದರೂ ದೇವರು ಕಣ್ಣ ತೆರಿವಲ್ಲ.

ಬಾಳಣ್ಣ : ದೇವರು ತಾನೇ ಪ್ರತ್ಯಕ್ಷ ಬಂದು ಯಾರಿಗೂ ಸಹಾಯ ಮಾಡೂದಿಲ್ಲ, ಸಂಗಣ್ಣನ ರೂಪದಿಂದ, ಈರಪ್ಪನ ರೂಪದಿಂದ ಬಂದು ನೆರವಾಗತಾನ, ನಮ್ಮಂಥ ಬಡವರ ಕೈ ಬಿಡುವುದಿಲ್ಲ.

ಸಂಗಣ್ಣ : ನಾನು ಇದುವರೆಗೂ ನಿನ್ನ ಕೈ ಬಿಡೂದಿಲ್ಲ (ಬಾಳಣ್ಣನ ಕೈಹಿಡಿಯುತ್ತಾನೆ). ಬಾಳಣ್ಣಾ ಈ ಪಟಗಾಕ್ಕ ಒಪ್ಪುವ ಅಂಗಿ ದೋತರ ಬೇಕು, ನಡಿ ಮಾರವಾಡೇರ ಅಂಗಡೀಗಿ ಹೋಗೋಣ, ಇಸಕುಡತೀನಿ.

ನಡಿ ಬಾಳ್ಯಾ ಹೋಗೋಣು ಪ್ಯಾಟ್ಯಾಗ
ಮಾರವಾಡೆರಂಗಡ್ಯಾಗ
ಹೊಸ ತರದ ಅರವಿ ಬಂದಾವೊ ಈಗ॥

ಶೈನ ಸಿಲ್ಕ ಕೊಂಡು ಕೊಡುವೆ ಬಾಳ್ಯಾ ನಿನಗ
ಇರಲೆಪ್ಪ ಮೈಯಾಗ
ಸಾಯುತನ ಪ್ರೀತಿ ಇರಲಿ ನನ್ನ ಮ್ಯಾಗ॥

(ಹಾಡುತ್ತ ಕುಣಿಯುತ್ತ ಹೋಗುತ್ತಾರೆ)

❖❖

ದೃಶ್ಯ – ೬

(ಪತ್ತಾರ ಮನೆ, ಗಂಗಾ, ಪರವ್ವ ಪ್ರವೇಶ)

ಪತ್ತಾರ : ಬರ್‍ರಿ ತಂಗಿ, ಬಾ ಪರವ್ವ,

ಪರವ್ವ : (ಇಬ್ಬರೂ ಕುಳಿತುಕೊಳ್ಳುತ್ತಾರೆ.) ನಮ್ಮ ಸಾವಕಾರತಿ ಬಂದಾಳ, ಆಭರಣ ಕೊಡು, ಆಕಿ ಸಂತೋಷ ಪಡಲಿ, ಗಂಗಾ, ಪತ್ತಾರಣ್ಣಾಗ, ನಿನ್ನ ಬಗ್ಗೆ ಬಹಳ ಪ್ರೀತಿ, (ತಟ್ಟನೇ ನೆನಪು ಮಾಡಿಕೊಂಡಂತೆ ನಟಿಸಿ) ಏ! ಶಿವನ ಮನಿ ಬಾಗಲ ಹಾಕದ ಹಂಗ ಬಂದೀನಿ. ತೂಕ ಮಾಡಿಸು. ನಾ ಒಂದ ಗಳಿಗ್ಯಾಗ ಬರತೇನಿ (ಎನ್ನುತ್ತಲೇ ಹೋಗುವಳು).

ಗಂಗಾ : (ಅಸಾಹಾಯಕ ಸ್ಥಿತಿಯಲ್ಲಿ) ಪರವ್ವಾ, ಪರವ್ವಾ (ಅಷ್ಟರಲ್ಲಿ ಪರವ್ವ ಹೋಗಿಬಿಡುವಳು).

ಪತ್ತಾರ : ಯಾಕ ತಂಗಿ, ಗಾಬರಿ ಆಗೂ ಕಾರಣ ಇಲ್ಲ, ಇಗಾ ಈ ಪಾವಲಿಸರ, (ತೋರಿಸುವ ನೆಪದಲ್ಲಿ ಮೈ ಮುಟ್ಟುವನು) ಕ್ಷಮಿಸು, ಎನೋ ಕೈ ತಾಗಿತು.

ಗಂಗಾ : ಇರಲಿ, ಆಭರಣ ತೋರಿಸಬ್ಯಾಡ, ತೂಗಿ ಕಟ್ಟಿಕೊಡು, ಹಿಡಿ ನಿನ್ನ ನೂರು ರೂಪಾಯಿ ಮಜೂರಿ.

ಪತ್ತಾರ : (ತೆಗೆದುಕೊಳ್ಳದೆ) ಗಂ......ಗಾ.

ಗಂಗಾ : ಏನು?

ಪತ್ತಾರ : ಗಂ.......ಗಾ ಇನ್ನೂ ಹತ್ತ ತೊಲಿ ಕೊಡತೀನಿ.

ಗಂಗಾ : ನಾ ತಗೊಂಡು ಏನ ಮಾಡಲಿ?

ಪತ್ತಾರ : ಎನ್ ಮಾಡಲಿ?...... ನನಗ ಪ್ರೀತಿಮಾಡು

ಗಂಗಾ : (ದಿಗ್ಗನೇ ಎದ್ದು) ನೋಡ ಅಣ್ಣಾ, ಇದು ಸಭ್ಯರು ಆಡೂ ಮಾತಲ್ಲ.

ಪತ್ತಾರ : (ಎದ್ದು) ನನಗೂ ಗೊತ್ತು. ಆದರ ನಿನ್ನ ರೂಪಕ್ಕ ನಾ ಮಳ್ಳ ಆಗೀನಿ. (ಹತ್ತಿರ ಹೋಗುವುದು, ಆಕೆ ಮತ್ತೆ ಮತ್ತೆ ತಪ್ಪಿಸಿಕೊಳ್ಳುವುದು).
ಏನ್ ಬಗೆ ಬೈಲಿಗೆ ಬಿದ್ದಿ ಭಾಳ ದಿನಕ
ಹುಣೀವಿ ಚಂದ್ರ ಮೂಡಿಧಾಂಗ ಮರ್ತೇಕ
ಕಣ್ಣೀಗೆ ದೀಪ ಹಚ್ಚಿಧಾಂಗ ನಿನ್ನ ಬೆಳಕ

ಜರದ ಸೆಲ್ಲೆ ಹಾಸತೀನಿ ಪಾದ ಬುಡಕ
ಹುಡಿಗಿ ಮಾತನಾಡ ಜರಾ ನನ್ನ ಸೋಂಕ
ಬಾಳೆ ಮಾಡು ಜೀಂದಗಾನಿ ಯಾಕ ಬೇಕ

ಗಂಗಾ : ಗಂಡ ಇದ್ದಗರತಿ ಬಗ್ಗೆ ಹೀಂಗೆಲ್ಲ ಮಾತಾಡಬಾರದು. ಜಲ್ದ ಆಭರಣ ಕೊಡಿರಿ. ಹೊತ್ತ ಆಗತದ.

ಪತ್ತಾರ : ಹೊತ್ತ ಆಗೂದ ನನಗ ಬೇಕಾಗೇದ. ನಿನ್ನ ಕೂಡ ಹೊತ್ತ ಕಳೀಬೇಕಾಗ್ಯಾದ ನಿನ್ನ ನೋಡಿದ ಬಳಿಕ ಊಟ ರುಚಿ ಹತ್ತೂವಲ್ದು (ಮತ್ತೆ ತಪ್ಪಿಸಿಕೊಳ್ಳುವುದು. ಮತ್ತೆ ಮತ್ತೆ ಹತ್ತಿರ ಹೋಗುವುದು).

ಗಂಗಾ : ಪತ್ತಾರಣ್ಣಾ, ನೀ ಬುದ್ದೀ ಮಾತಿಗೆ ನಡತಿ ತಿದ್ದಿಕೊಳ್ಳೋಹಾಂಗ ಕಾಣೂದಿಲ್ಲ. ಹುಲಿಯಂಥ ಮೈದನರ ಕರಸತೀನಿ, ಕಡದ ಹೆಡಗಿ ತುಂಬತಾರ.

ಪತ್ತಾರ : ನಿನ್ನ ಒಮ್ಮ ಕೂಡಿದ ಬಳಿಕ ಕಡದರೂ ಅಷ್ಟೇ, ಬಿಟ್ಟರೂ ಅಷ್ಟೇ ಇಮ್ಮೆ ನೀನು ವಶ ಆಗಬೇಕು.

ಗಂಗಾ : ಬಂಗಾರಕ ತಾಮ್ರ ಕೂಡುಸು ಬುದ್ದಿ ಎಲ್ಲಿ ಬಿಡತಿ. ಒಂದ ಕಡಿ ತಪ್ಪ ಮಾಡಾವ ಎಲ್ಲ ಕಡಿಗೂ ತಪ್ಪ ಮಾಡತ ಬರತಾನ.

ಪತ್ತಾರ : ನೀ ಏನ ಹೇಳಿದರೂ ನಾ ಮನಸ ತೆಗಿಯೂದಿಲ್ಲ. ನನ್ನ ಪ್ರಾಣ ತಗದರೂ ನಿನ್ನ ಬಿಡೂದಿಲ್ಲ.

ಗಂಗಾ : ಈ ಪರವ್ವ, ಆ ಕಡೇ ಹೋಯ್ತಲ್ಲ ಬಾರಿಗಿ, ಜಲ್ದ ಬರಬಾರದ ಶಿವ ಶಿವಾ (ಕೈ ಕೊಸರಿಕೊಂಡು, ಅವನನ್ನು ದೂಡುವಳು)

ಪತ್ತಾರ : ಶಿವ ಇಲ್ಲ, ಹರ ಇಲ್ಲ, ಎಂದಾದರೂ ನಾ ನಿನ್ನ ಕೂಡವನೇ, ಇವತ್ತ ಕೂಡೂದು ನಿನ್ನ ದೃಷ್ಟಿಯಿಂದ ಸುರಕ್ಷಿತ, ಇಲ್ಲದೆ ಹೋದರ......

ಗಂಗಾ : ಅಂದರ?

ಪತ್ತಾರ : ನೀ ಕೂಡದ ಇದ್ದರ ಏನರೆ ಸುಳ್ಳ ಸುದ್ದಿ ಹುಟ್ಟಿಸಿ, ನಿನ್ನ ಜೀವನ ಹಾಳ ಮಾಡತೀನಿ.

ಗಂಗಾ : ಏನು ಹುಟ್ಟಸತೀ?

ಪತ್ತಾರ : ಈಗ ಹೇಳೂದಿಲ್ಲ, ಅದನ್ನ ಹೇಳಿದರೆ ನೀ ಎದಿ ಒಡಕೊಂಡು ಸಾಯತಿ, ಪ್ರಾಣಕ್ಕ ಪ್ರಾಣ ಹೋಗತದ. ತನ್ನ ಆಸೆ ಹಾಗೇ ಉಳಿತದ, ಅದಕ್ಕ ನಾ ಹೇಳೂದಿಲ್ಲ.

ಗಂಗಾ : ನೀ ಏನ್ ಮಾಡತೀದಿ, ನಾ ಊಹಿಸಿಕೊಳ್ಳಬಲ್ಲೆ, ನನ್ನ ಗಂಡಗ ನನ್ನ ಬಗ್ಗೆ ವಿಶ್ವಾಸ ಅದ.

ಪತ್ತಾರ : ಆ ವಿಶ್ವಾಸ ಹ್ಯಾಂಗ ಹಾಳ ಮಾಡಬೇಕು ನನಗ ಗೊತ್ತ ಅದ, ಹಾಂಗಾಗಬಾರದು ಅಂದ್ರ ಈ ಕಡೆ ನನ್ನ ಗೆಳೆತನ ಮಾಡಕೋ, ಆ ಕಡೆ ನಿನ್ನ ಗಂಡನ ವಿಶ್ವಾಸ ಉಳಿಸಿಕೋ.

ಗಂಗಾ : ಛೀ. ಹೊಲಸ.

ಪತ್ತಾರ : ತಿಳಕೊಂಡಂಗ ಅದ. ಹೊಸಲ ಅಂದರ ಹೊಲಸ, ವಿಲಾಸ ಅಂದರ ವಿಲಾಸ. ನೋಡು, ಜೀವನ ನರಕ ಮಾಡಕೋಬ್ಯಾಡ. ನನ್ನ ತಂತ್ರ ತುಂಬಾ ಅಪಾಯಕಾರಿ (ಕೈಹಿಡಿಯುತ್ತಾನೆ).

ಗಂಗಾ : (ಕೋಸರಿಕೊಂಡು) ನಿನ್ನ ತಂತ್ರ–ಮಂತ್ರದ ಆಟ ನನ್ನ ಮುಂದ ನಡಿಯೂದಿಲ್ಲ. ನನ್ನದು ಸ್ವಚ್ಚ ಬದುಕದ. ಸ್ವಚ್ಛ ಬದಕತೀನಿ. ಮುಟ್ಟಿದರ ದೇವರಾಣಿ.

ಪತ್ತಾರ : ನನಗೆ ಗೊತ್ತದ, ಹೀಂಗ ಆಣಿ ಮಾಡಿದವರ ಕೊನಿಗಿ ಕಾಲ ಜಾರಿದಾರ. ನೀ ಯಾವ ಗಿಡದ ತಪ್ಪಲು, ಒಪ್ಪಿಕೋ, ಇಲ್ಲದಿದ್ದರೆ ನೀನ ನನ್ನ ಹತ್ತರ ಕೈ ಮುಗುದು ಓಡಿ ಬರೂಹಾಂಗ ಮಾಡತೀನಿ.

ಗಂಗಾ : ಇದು ನಿನ್ನ ಭ್ರಮಾ.

ಪತ್ತಾರ : ಅಲ್ಲ. ಇದು ಸತ್ಯ, ನಾ ಅಂದರ, ನನ್ನ ಸೇಡ ಅಂದರ ಬಹಳ ಕೆಟ್ಟ. ಒಪ್ಪದಿದ್ದರ ನೀ ಹಾದರಗಿತ್ತಿ ಅಂತು ಸುಳ್ಳ ಸುದ್ದಿ ಹುಟ್ಟಿಸಿ, ಊರೆಲ್ಲ ಉಗಳೂ ಹಾಂಗ ಮಾಡ್ತೀನಿ. ಗಂಡನಿಂದ ನಿನ್ನ ದೂರ ಮಾಡತೀನಿ. ಅಷ್ಟೂ ದೂರ ಹೋಗಬ್ಯಾಡ.

ಗಂಗಾ : ಹಂಗಾಗೂದಿಲ್ಲ. ಒಂದು ವೇಳೆ ನಿನ್ನ ಕುತಂತ್ರದಿಂದ ಅದು ಘಟಿಸಿದ್ದೇ ಆದರ, ಒಂಟಿ ಹೆಣ್ಣ ಜೀವನ ಬದಕತೀನೇ ಹೊರತು, ಕೆಟ್ಟ ಕೆಲಸ ಮಾಡಲಾರೆ.

ಪತ್ತಾರ : ಅಷ್ಟ ಅಲ್ಲ, ಕೊನಿಗೆ ನಿನ್ನ ಗಂಡ ತಾಳಿ ಹರಕೊಂಡು ಮನಿಯಿಂದ ದೂಡು ಹಾಂಗ ಮಾಡ್ತೀನಿ.

ಗಂಗಾ : ಅಯ್ಯೋ! (ಚಟ್ಟನೆ ಚೀರಿ, ಮಜೂರಿ ಹಣ ಒಗೆದು ಬಂಗಾರದ ಗಂಟ ಕಸಗೊಂಡು ಹೊರಗೆ ಓಡುತ್ತಾಳೆ).

ಪತ್ತಾರ : ಈಕಿ ಅಂತೂ, ಇನ್ನ ಮ್ಯಾಲ ನನ್ನ ಮನಿಗಿ ಬರೂದಿಲ್ಲ, ಈರಪ್ಪನ ಗೆಳೆತನ ಬೆಳಸತೀನಿ. ಗಂಡಸರು ಇಲ್ಲದ ಸಮಯದಾಗ ಈಕಿ ಮನಿಗಿ ಹೋಗಿ, ಪ್ರೀತಸತೀನಿ, ಒಪ್ಪದಿದ್ದರ ಅಂಜಸತೀನಿ.

ಈರಪ್ನ ಸಲಿಗಿ ಬೆಳಸ್ತೀನಿ
ಈ ಹೆಣ್ಣಿಗಿ ಮುಳ್ಳ ಮಾಡತೀನಿ॥

ಹಾಸಿಗ್ಯಾಗ ತಿಕ್ಕಿ ಮುಕ್ಕತೀನಿ
ತೆಕ್ಕ್ಯಾಗ ಸುಖಾ ಪಡತೀನಿ॥

ಸಿಗದಿದ್ರ ಕಾಡಿ ದಿನ ದಿನಾ
ಕೊಲ್ತೀನಿ ಪ್ರತಿ ಕ್ಷಣ ಕ್ಷಣಾ॥

(ಕುಣಿಯುತ್ತ ಒಳಗೆ ಹೋಗುವನು)

❖❖

ದೃಶ್ಯ - ೭

(ಈರಪ್ಪನ ಮನೆ. ಇರಪಾಕ್ಷಿ ಕಬ್ಬು ತಿನ್ನುತ್ತಲಿದ್ದಾನೆ. ಬಸವಂತ ಹೊರಗಿನಿಂದ ಬಂದು)

ಬಸವಂತ : ಏನು ಇರಪಾಕ್ಷಿ, ತ್ವಾಟದಿಂದ ಯಾವಾಗ ಬಂದಿ?

ಇರಪಾಕ್ಷಿ : ಇದೀಗ ಬಂದೆ. ಈ ವರ್ಷ ಕಬ್ಬಿನ ಬೆಳೆ ಭಾಳ ಚಲೋ ಅದ, ಕಬ್ಬು ರುಚಿನೂ ಹೆಚ್ಚು. ಹಿಡಿ ನೀನೂ (ಮೊಳಕಾಲ ಹಚ್ಚಿ ಮುರಿದು ಕೊಡುತ್ತಾನೆ).

ಬಸವಂತ : (ತಿನ್ನುತ್ತ) ಈ ವರ್ಷ ಗೊಬ್ಬರ ನೀರ ಸಾಕಷ್ಟು ಕೊಟ್ಟೆವು. ಅದಕ ರುಚಿ ಭಾಳ ಆಗೇದ.

ಈರಪ್ಪ : (ಹೊರಗಿನಿಂದ ಬಂದು) ತಮ್ಮ ಗಳಿರಾ, ಬಳ್ಳಾರಿಯಿಂದ ಶೇಡಜಿ ಪತ್ರ ಬಂದಾದ. ಮುಂಗಾರಿ ಸುಗ್ಗಿ ಸುರು ಆಗ್ಯಾದ, ಯಾಪಾರಕ್ಕ ಬರಬೇಕಂತ ಬರದಾನ.

ಬಸವಂತ : ಅವಶ್ಯ ಹೋಗು. ಸುಗ್ಗಿ ಯಾಪಾರ ಬಿಡಬಾರದು.

ಇರಪಾಕ್ಷಿ : ಏನು ಯಾಪಾರವೋ, ತಿಂಗಳಗಟ್ಟಲೇ ಹೋಗೂದು. ಮನಿಕಡಿ ನಾವಿಬ್ಬರೂ ಸಣ್ಣ ಹುಡುಗರು. ಅತಿಗೆವ್ವ ಒಬ್ಬಳೇ ಎಲ್ಲ ನೋಡಿಕೊಳ್ಳಬೇಕು.

ಈರಪ್ಪ : ಹೌದು, ಏನು ಮಾಡೂದು, ಕೈ ಕೆಸರಾದರ ಬಾಯಿ ಮೊಸರು. ದುಡೀದಿದ್ದರ ಹ್ಯಾಂಗ? (ಅಷ್ಟರಲ್ಲಿ ಪತ್ತಾರ ಬರುವನು).

ಪತ್ತಾರ : ಸಾವಕಾರ, ಸಾವಕಾರ.

ಈರಪ್ಪ : ಯಾರವರು? ಒಳಗ ಬರ್ರಿ.

ಪತ್ತಾರ : (ಸ್ವಗತ) ಮನ್ಯಾಗ ಗಂಡಸರು ಇಲ್ಲ ಅಂತ ಬಂದರ.........(ಸುಧಾರಿಸಿಕೊಂಡು), ನಾನ್ರಿ ಸಾವಕಾರ, ಪತ್ತಾರ ರಾಯಪ್ಪ.

ಈರಪ್ಪ : ಏನ್ ರಾಯಪ್ಪ ಈ ಕಡಿ ಬಂದಿ?

ಪತ್ತಾರ : ಏನೂ ಇಲ್ರಿ, ಗೌಡರ ಮನಿ ಕಡಿ ಹೋಗಿದ್ದೆ. ದಾರ್‍ಯಾಗ ಇಲ್ಲಿಗೂ ಬಂದೆ. ಅಂಥಾಂಗ ಮೊನ್ನೆ ಮಾಡಿ ಕೊಟ್ಟ ಬಂಗಾರ ಸಾಮಾನ ನಿಮ್ಮ ಮನಸಿಗಿ ಬಂದೂವ?

ಈರಪ್ಪ : ಏನ ರಾಯಪ್ಪ ನಿನ್ನ ಕೈಕೆಲಸ, ಬಂಗಾರ ವಸ್ತುಗಳ ಮಾಟ ಏನು? ನೀಟ

ಏನು?

ಪತ್ತಾರ : ಸಾವಕಾರ, ನಿಮ್ಮ ದಾಗೀನ ಅಂದರ ನಾ ಚೆನ್ನಾಗಿ ಮಾಡಬೇಕಲ್ಲ. ಗಂಗಾ ತಾಯಿ ಪಾರ್ವತಿಯಂಥವರು, ಈ ದಾಗೀನದಾಗ ಲಕ್ಷ್ಮೀ ಹಾಂಗ ಕಾಣಸತಿರಬೇಕಲ್ಲ? ಎಲ್ಲಿ ಸುಳಿವೇ ಇಲ್ಲ.

ಈರಪ್ಪ : ಮೊನ್ನೆ ಒಡವಿ ತಂದಾಗಿನಿಂದ ಮುಸುಕ ಹಾಕಿ ಮಲಗಿಬಿಟ್ಟಾಳ.

ಪತ್ತಾರ : (ಬೆಚ್ಚಿಬಿದ್ದು) ಬಹುಶಃ ಒಡವಿ ಹಾಕೊಂಡ ಗಂಗಾತಾಯಿಗೆ ನೀವು ನೆದರ ಬಿಟ್ಟಿರಬೇಕು. ಇರಲಿ, ನಾ ಹೋಗಿ ಬರತೇನಿ.

ಇರಪಾಕ್ಷಿ : ನಮ್ಮ ಅತಿಗೆವ್ವಗ ಇನ್ನಷ್ಟ ದಾಗೀನ ಮಾಡಸ್ತೀವಿ. ಆಗಾಗ ಮನಿಗಿ ಬರತಾ ಇರು.

ಪತ್ತಾರ : ಒಳ್ಳೆ, ಬರತೀನಿ (ಹೊರಡುವನು, ಅಷ್ಟರಲ್ಲಿ ಸಂಗಣ್ಣ, ಬಾಳಣ್ಣಾ ಬರುವರು).

ಈರಪ್ಪ : ಬಾ ಸಂಗಣ್ಣ, ಕೂಡು, ನಾನೇ ಕರಸಬೇಕಂತ ಮಾಡಿದ್ದೆ, ನೀನೇ ಬಂದಿ (ಬಾಳಣ್ಣನನ್ನು ನೋಡಿ) ಅರೇ ಬಾಳಣ್ಣ, ಕೂಡು, ನೀ ತಮ್ಮ–ಇವ ಅಣ್ಣ.

ಬಾಳಣ್ಣ : ನೀ ಹಿರಿ ಅಣ್ಣ (ಎಲ್ಲರೂ ನಗುವರು)

ಸಂಗಣ್ಣ : ಕರಸಬೇಕಂತ ಮಾಡಿದ್ದೆ ಅಂದಿ, ಯಾಕೆ?

ಈರಪ್ಪ : ಏನಿಲ್ಲ, ಇಷ್ಟವರುಷ ಬಹಳ ಅಂದರ ಒಂದು, ಇಲ್ಲ ಎರಡೂ ವಾರ ಯಾಪಾರಕ್ಕ ಹೋಗತಿದ್ದೆ. ಈ ಸಾರಿ ಬಳ್ಳಾರಿ ಯಾಪಾರಕ್ಕ ಒಂದು ತಿಂಗಳ ಹೊಂಟೇನಿ. ಮುಂಗಾರಿ ಸುಗ್ಗಿ ಮುಗಿಯೂ ತನಕ, ಆ ಊರ ಈ ಊರ ತಿರಗಿ ಖರೀದಿ ಮಾಡೂದು, ಮಾರೂದು ಮಾಡಬೇಕು. ಮನ್ಯಾಗ ಸಣ್ಣ ಹುಡುಗರು. ಮನಿಕಡಿ ಸ್ವಲ್ಪ ನೆದರ ಇರಲಿ.

ಸಂಗಣ್ಣ : ಮನಿಯ ಕಾಯಲಾಕ। ತಂಗಿಯ ಸಾತ್ವಿಕತಯೆ ಸಾಕ
ಹಾವು ಅಂಜಿ ಹರದಾರಿ ಹೋಗತದ।
ನಾವು–ನೀವು ಯಾಕ? ಅಣ್ಣ ಮನಿಯ ಕಾಯಲಾಕ॥

ಕಳ್ಳ ಕಾಲಿಡಲಾರ। ಇತ್ತ ಸುಳ್ಳ ಸುಳಿಯಲಾರ
ತಂಗಿಯ ಶುಧ ಭಾವ ಕಾಯಕದ
ನಾವು–ನೀವು ಯಾಕ? ಅಣ್ಣ ಮನಿಯ ಕಾಯಲಾಕ॥

ಆದರೂ ಈರಪ್ಪಣ್ಣ, ನಿನ್ನ ಮನಿ ಬ್ಯಾರೆ ಅಲ್ಲ, ನನ್ನ ಮನಿ ಬ್ಯಾರೆ ಅಲ್ಲ, ಕಾಳಜಿ ಬಿಟ್ಟು ಹೋಗು. ಒಂದ ತಿಂಗಳ ದುಡದರ ಒಂದು ವರ್ಷ ಆರಾಮ ಮನಿ ನಡಸಬಹುದು. ಇಂಥ ಅವಕಾಶ ಕಳಕೊಳ್ಳಬಾರದು.

ಈರಪ್ಪ : ಗಂಗಾ, ಗಂಗಾ (ಕರೆಯುವನು).

ಗಂಗಾ : (ಬಂದು) ಯಾಕ, ಕರಿದಿರಿ?

ಸಂಗಣ್ಣ : ಯಾಕ ತಂಗಿ, ಈಗ ಹಾಸಿಗೆಂದು ಎದ್ದು ಬಂಥಾಂಗ ಕಾಣಸ್ತೀ? ಆರಾಮ ಇಲ್ಲೆನು?

ಈರಪ್ಪ : ಪತ್ತಾರ ಮನಿಯಿಂದ ದಾಗೀನ ತಂದಾಗಿನಿಂದ ಸ್ವಲ್ಪ ಮಲಕೊಂಡೆ ಬಿಟ್ಟಾಳ.

ಗಂಗಾ : ಏನಿಲ್ಲ, ಸ್ವಲ್ಪ ಸುಸ್ತು, ಇವತ್ತ ಒಂದಿಷ್ಟು ಆರಾಮ ಆಗ್ಯಾದ.

ಈರಪ್ಪ : ನೋಡು, ನಿನಗ ಗೊತ್ತದಲ್ಲ, ಬಳ್ಳಾರಿಗಿ ಹೋಗೋ ವಿಷಯ, ಮನಿಕಡಿ ಜ್ವಾಕಿ ಅಂತ ಸಂಗಣ್ಣಗ ತಿಳಿಸೀನಿ, ನೆರಮನಿ ಪರವ್ವಗ ಈಗ ಬರಲಾಕ ಹೇಳಿಕಳಿಸೀನಿ.

ಗಂಗಾ : ಪರವ್ವ ಏನ್ ಬ್ಯಾಡ್ರಿ, ಅದು ಭಾಳ ಕಿರಿಕಿರಿ ಹೆಂಗಸು. ಹುಲಿಯಂಥ ಇಬ್ಬರು, ಮೈದುನದೇರ ಅದಾರ. ನನಗ್ಯಾತರ ಅಂಜಿಕಿ.

ಈರಪ್ಪ : ನಿನಗ ಗೊತ್ತಾಗೂದಿಲ್ಲ. ಜೊತೆಗೆ ಇನ್ನೊಬ್ಬರು ಬೇಕು, ಒಂದಿಷ್ಟು ಚಹಾ ತಗೊಂಡು ಬಾ (ಗಂಗಾ ಒಳಗೆ ಹೋಗುತ್ತಾಳೆ. ಅಷ್ಟರಲ್ಲಿ ಪರವ್ವ ಬರುತ್ತಾಳೆ).

ಪರವ್ವ : ಯಾಕ್ರಿ ಸಾವಕಾರ, ಯಾಕ ಕರೆಸಿದಿರಿ?

ಈರಪ್ಪ : ನಾಳೆ ನಾ ಬಳ್ಳಾರಿ ಯಾಪಾರಕ್ಕ ಹೊಂಟೀನಿ. ಗಂಗಾ ಒಬ್ಬಳೇ ಮನ್ಯಾಗ, ನೀ ಜೋಡಿ ಇರಬೇಕು.

ಪರವ್ವ : ಇದ್ಯಾದ ದೊಡ್ಡ ಕೆಲಸ. ನೆರಿಹೋರಿ ಅಂದರ ಒಬ್ಬರಿಗೊಬ್ಬರು ನೆರವಾಗಬೇಕು.

ಇರಪಾಕ್ಷಿ : ಅಣ್ಣ, ಸಂಗಣ್ಣಗೂ ಹೇಳ್ಯಾನ, ನೀನು ಇದ್ದರ ಅನುಕೂಲ, (ಅಷ್ಟರಲ್ಲಿ ಗಂಗಾ ಚಹಾ ಕೊಟ್ಟು ಒಳಗೆ ಹೋಗುತ್ತಾಳೆ ಗಂಡಸರು ಎಲ್ಲರೂ ಕುಡಿಯುತ್ತಾರೆ. ವೀಳ್ಯೆಗೆ ಸುಣ್ಣ ಹಚ್ಚುತ್ತ).

ಈರಪ್ಪ : ನೋಡು ಸಂಗಣ್ಣ, ನೆದರ ಇಡಬೇಕು, ಈ ಕಡೆ.

ಸಂಗಣ್ಣ : ಒಂದ ಕಣ್ಣ ನಮ್ಮ ಮನಿಮ್ಯಾಲ, ಒಂದ ಕಣ್ಣ ನಿಮ್ಮ ಮನಿಮ್ಯಾಲ, ಆಯ್ತುಲ್ಲೋ.

ಬಾಳಣ್ಣ : ಸಂಗಣ್ಣಗ ಈರಪ್ಪ ಅಂದರ ಅಣ್ಣ, ಗಂಗವ್ವ ಅಂದರ ಅತಿಗಿ. ಹಿಂದಿನ ಜನ್ಮದಾಗ ನಾವು ಮೂವರೂ ಒಂದೇ ಮನ್ಯಾಗ ಹುಟ್ಟಿರಬೇಕು. ಅಂತ ನನ ಮುಂದ ಭಾಳ ಸಾರಿ ನುಡದಾನ.

ಈರಪ್ಪ : ಎಲ್ಲಾ ದೇವರಿಚ್ಚೆ, ಇರಲಿ, ಸಂಗಣ್ಣಾ ಮನಿ ಜವಾಬ್ದಾರಿ ನಿನಗ ಹೇಳಿ ನನಗ ಸಮಾಧಾನ ಆಯ್ತು.

ಸಂಗಣ್ಣ : ನಾ ಹೋಗತೇನಿ. ಯಾಪಾರದಾಗ ಎಚ್ಚರ ಇರಲಿ (ಹೋಗುವನು).

ಪರವ್ವ : ನಾನೂ ಹೋಗತೀನಿ, ಸಾವಕಾರ (ಹೋಗುವಳು.)

ಬಸವಂತ : ಅಣ್ಣಾ, ನಾವು ತ್ವಾಟಕ ಹೋಗತೀವಿ. ನಾಳಿಗಿ ಬರೂದು ತಡ ಆಗತಾದ. ನೀ ನಸಕಿನ್ಯಾಗ ಜಾಗಾ ಬಿಡಾವ, ಹೋಗಿ ಬಾ, ಹುಷಾರಿ (ಇಬ್ಬರೂ ಹೋಗುವರು).

ಈರಪ್ಪ : (ಕೂಗುತ್ತ) ಗಂಗಾ, ಪ್ರವಾಸದ ಸಜ್ಜ ಆಗ್ಯಾದ?

ಗಂಗಾ : (ಒಳಗಿನಿಂದ ಬರುತ್ತ) ಎಲ್ಲಾ ಸಜ್ಜ ಆಗ್ಯಾದ, ಚಪಾತಿ, ಸಜ್ಜಿರೊಟ್ಟಿ, ಮಾಲದಿ,

ಸೇಂಗಾಚಟ್ನಿ, ಬದನಿಕಾಯಿ ಪಲ್ಲೆ, ಜುಣಕ ಕಟ್ಟೀನಿ, ಊಟ ಆದ ಕೂಡಲೇ ಬೇಕಲ್ಲ. ಅಡಿಕಿ, ಲವಂಗ, ಯಾಲಕ್ಕಿ ಚೀಟ ಕಟ್ಟಿ ಇಟ್ಟೀನಿ. ಸಣ್ಣ ಪುಟ್ಟ ನೆಗಡಿ ಕೆಮ್ಮಿಗೆ ಔಷಧ ಹೊಂದಿಸೀನಿ. ಬಟ್ಟಿ ಬರಿ ಜೋಡಿಸಿ ಇಟ್ಟೀನಿ.

ಈರಪ್ಪ : ನೀ ಭಾಳ ಶಿಸ್ತಿನ ಹೆಂಡತಿ.

ಗಂಗಾ : ಅಲ್ರಿ, ಪ್ರವಾಸದಾಗ ಏನೂ ಕಡಿಮಿ ಆಗಬಾರದು. ಅಲ್ಲಿ ತರವ್ವು ಯಾರೂ? ಕೊಡವ್ರೂ ಯಾರು? ಇರಲಿ, ದಾರ್‍ಯಾಗ ಮೊದಲ ಚಪಾತಿ ಉಣ್ಣರಿ ಮರುದಿನದಿಂದ ಮಾಲದಿ ಉಣ್ಣರಿ. ಅದಕ ಬಿಸಿ ಹಾಲ ಕಲಿಸಿ ಉಣ್ಣೂದು ಮರಿಬ್ಯಾಡರಿ.

ಈರಪ್ಪ : ಹೂಂ

ಗಂಗಾ : ನಾಕ ದಿನ ಬಿಟ್ಟು ಸಜ್ಜಿ ರೊಟ್ಟಿ ಊಟ ಸುರು ಮಾಡರಿ. ಬಾಟಲಿ ತುಂಬಾ ತುಪ್ಪ ಇಟ್ಟೀನಿ, ಊಟದಾಗ ಮರಿಬ್ಯಾಡರಿ ಜೇನುತುಪ್ಪಾನೂ ಇಟ್ಟೀನಿ.

ಈರಪ್ಪ : ಹೂಂ.

ಗಂಗಾ : ಮುಂಜಾನೆ ನ್ಯಾರಿಗಿ ಉಂಡಿ ಇಟ್ಟೀನಿ, ಮರಿಬ್ಯಾಡರಿ.

ಈರಪ್ಪ : ಹೂಂ.

ಗಂಗಾ : ಹೊಟ್ಟಿ ತುಂಬಾ ಊಟಾ ಮಾಡ್ರಿ, ಕಣ್ ತುಂಬಾ ನಿದ್ದಿ ಮಾಡ್ರಿ.

ಈರಪ್ಪ : (ನಗುತ್ತ) ಎನ್ ಸಣ್ಣ ಹುಡಗರಿಗಿ ಹೇಳಿಧಾಂಗ ಹೇಳ್ತೆಲ್ಲ.

ಗಂಗಾ : ಅಲ್ರೀ, ಯಾಪಾರದಾಗ ನಿಮಗ ಏನೂ ನೆನಪಿರೂದಿಲ್ಲ. ನಾ ಇಲ್ಲಿ ಬಾಯಾಗ ತುತ್ತ ಇಡುವಾಗಲೆಲ್ಲ ನಿಮ್ಮ ಊಟದ್ದೇ ನೆನಪ. ಗಂಡಸರ ಜೀವನ ಸುಡಲಿ ಮನಿ ಮಾರ ಮತರು ಹೊಲದಾಗ ದುಡಿಬೇಕು, ಯಾಪಾರಕ ಊರೂರ ತಿರಗಬೇಕು.

ಈರಪ್ಪ : ಜೀವನ ಸಾಗಬೇಕಲ್ಲ? ದುಡಿದಿದ್ರ ಹ್ಯಾಂತ? ನೀ ಎರಡೂ ತಿಂಗಳ ಬಸುರಿ ನನ್ನ ಬಗ್ಗೆ ಚಿಂತಿ ಮಾಡಬ್ಯಾಡ.

ಗಂಗಾ : ಊರಿಗಿ ಹ್ವಾದವರ ಸುದ್ದಿ ದೇವರೇ ಬಲ್ಲ ಅಂತಾರಲ್ಲ. ದೀನಾ ನಿಮ್ಮದೇ ಚಿಂತಿ. ಎಲ್ಲಿದ್ದರೂ ನಗನಗತಾ ಇರಬೇಕು. ಜನರು ಹೊಗಳೂ ಹಾಂಗ ನೀವು, ನಿಮ್ಮ ಮನಿ ಬೆಳಿಬೇಕು. ಅದನ್ನು ಕೇಳಿ, ಕಂಡು ನಾ ಹಿರಿಹಿರಿ ಹಿಗ್ಗಬೇಕು. ಇದೇ ನಾ ದೇವರಲ್ಲಿ ಬೇಡಿಕೊಳ್ಳೂದು (ಮಂಗಳ ಸೂತ್ರಕ್ಕೆ ನಮಸ್ಕರಿಸಿ, ಕಣ್ಣಿರು ತರುವಳು, ಹಿಮ್ಮೇಳದ ಹಾಡು).

ಇವರಿಬ್ಬರದು ಒಂದೆ ಗುರಿ
ಒಂದು ಹಗ್ಗದ ಎರಡು ಹುರಿ।
ತುಳಿತಾರ ಪ್ರೀತಿಯ ದಾರಿ
ಕಲ್ಲು-ಮುಳ್ಳು ಕಂಟಿಯ ಸವರಿ।

ಈರಪ್ಪ : (ಕಣ್ಣೀರು ಒರೆಸುತ್ತ) ಹುಚ್ಚಿ, ಕಣ್ಣೀರ ಹಾಕಬ್ಯಾಡ, ಯಾಪಾರಕ ಹೋಗುದು ಇದೇ ಮೊದಲನೇ ಸಲ ಏನು?

ಗಂಗಾ : ಹಾಗೇನಿಲ್ಲ, ಯಾಕೋ ನನಗ ಈ ಸಲ ಕಳವಳ ಅನಸತದ.

ಈರಪ್ಪ : ಒಂದು ತಿಂಗಳ ಪ್ರವಾಸ, ಅದಕ್ಕ, ಸಮಾಧಾನ ಮಾಡಿಕೊ, ನಿನ್ನಂಥಾ ಹೆಂಡತಿ ಸಿಕ್ಕಿದ್ದು ನನ್ನ ಪುಣ್ಯ, ಏಳು, ನಡಿ ರಾತ್ರಿ ಆಯ್ತು (ಇಬ್ಬರೂ ಎದ್ದು ಒಳಗೆ ಹೋಗುವರು).

❖❖

ದೃಶ್ಯ – ೮

(ಪತ್ತಾರನ ಮನೆ. ಬಂಗಾರ ಕೆಲಸ ಮಾಡುತ್ತ ಗಂಗಾನ ಧ್ಯಾನದಲ್ಲಿ ಹಾಡು ಗುಣಗುಣಿಸುತ್ತಲಿದ್ದಾನೆ)

ಎಳಿತಾದ ನನ್ನ ಮನಸ–
ಬೀಳ್ತಾವ ನಿನ್ನ ಕನಸ
ತಾಳಬ್ಯಾಡ ಮುನಿಸ ನನ್ನದು।
ಭಾಳ ಕೆಟ್ಟ ಕುನಸ॥

ದೂರ ಸರಿದ ಹೆಣ್ಣ
ಸಾರಿ ಬಾರ ಇನ್ನ
ಹಟ ಹಿಡಿಯಬ್ಯಾಡ ಚಿನ್ನ ವೈರ
ಮಾಡಬ್ಯಾಡ ನನ್ನ

(ಪರವ್ವನ ಆಗಮನ)

ಪರವ್ವ : ಪತ್ತಾರಣ್ಣ, ಪತ್ತಾರಣ್ಣ.

ಪತ್ತಾರ : (ಗಂಗಿಯ ಭ್ರಮೆಯಲ್ಲಿ) ಬಾ, ಗಂಗಾ, ಬಾ.,

ಪರವ್ವ : ನಾ ಗಂಗಾ ಅಲ್ಲೋ ಮಂಗ.

ಪತ್ತಾರ : (ಆಕೆಯ ಸುತ್ತ ಸುಳಿದು) ಸುಳ್ಳ ಹೇಳಬ್ಯಾಡ, ಚಾಷ್ಟೀ ಮಾಡಬ್ಯಾಡ,
ನೀ ಬಂದಿ ಕುಣಿವ ಮರಿಗುದರಿ
ನಾ ಮಾಡತೀನಿ ಸವಾರಿ

ಪರವ್ವ : ಏ, ನಾ ಪರವ್ವ, ಮುದಕಿ, ಸವಾರಿ ಮಾಡ್ತಾನಂತ.

ಪತ್ತಾರ : (ಕಣ್ಣುಜ್ಜಿಕೊಳ್ಳುತ್ತ) ಮುದುಕಿ? ಪರವ್ವ! ಗಂಗಾ ಅಂತ ಮಾಡಿದ್ದೆ.

ಪರವ್ವ : ಖಬರಗೇಡಿ, ದೂರ ಸರಿ. ನೀ ಹೇಳಿದಾಂಗ ಮೊನ್ನೆ ಒಬ್ಬಾಕಿನ ಇಲ್ಲಿ ಬಿಟ್ಟು ಹೋಗಿದ್ದೆ. ಅಂದಹಾಂಗ ಏನಾಯ್ತು?

ಪತ್ತಾರ : ಆಗೂದೇನು? ನಾ ಕೇಳೀ ಬಿಟ್ಟೆ, ಆಶಾ ತೋರಿಸಿದೆ. ಅಂಜಿಕೆ ಹಾಕಿದೆ, ಒಪ್ಪಲಿಲ್ಲ. ಹಟಮಾರಿ ಹೆಣ್ಣು, ಎಂಥೆಂಥವರು ನನ್ನ ಮನ್ಯಾಗ ಎಡವ್ಯಾರ, ಇವಳ ಬಡಿವಾರ ಬಹಳ ಆತು.

ಪರವ್ವ : ಇರಲಿ, ನನ್ನ ಕೆಲಸ ನಾ ಮಾಡೀನಿ, ನನ್ನ ಇನ್ನೂ ಒಂದು ತೊಲಿ ಬಂಗಾರ?

ಪತ್ತಾರ : ನೋಡ ಪರವ್ವ, ನೀನು ಊರಾಗ ದೊಡ್ಡ ಮನಸ್ಯಾಳು, ಹತ್ತ ಮಂದಿ ನ್ಯಾಯ ಬಗಿ ಹರಿಸುವಾಕಿ, ವಿಚಾರಮಾಡು, ಕರಕೊಂಡು ಬಂದಿದ್ದಕ ಒಂದು ತೊಲಿ ಕೊಟ್ಟೀನಿ.

ಪರವ್ವ : ನೀ ಏನು ಕೊಟ್ಟೀದಿ. ಗಂಗಾನ ಹತ್ತು ತೊಲಿಯೊಳಗ ಕದ್ದು ಕೊಟ್ಟೀದಿ.

ಪತ್ತಾರ : ಹೌದು. ಅವಳು ನನಗ ವಶ ಆಗೂ ಹಾಂಗ ಮಾಡು. ಕೆಲಸ ಮುಗೀತದ. ಆಗ ನನ್ನ ಪಾಲಿನ ಇನ್ನೊಂದು ತೊಲಿ ತೋಗೋ.

ಪರವ್ವ : ಆ ಹೆಣ್ಣೀನ ಮನಸ್ಸ ಬಹಳ ಗಟ್ಟಿ, ಅರೆಮನಸ್ಸಿನ ಹೆಣ್ಣಾಗಿದ್ದರ ತಿರಗಸಬಹುದು. ಬೇಕಿದ್ದರ ಇದಕ ಸಂಬಂಧಪಟ್ಟ ಬ್ಯಾರೆ ದಾರಿ ಇದ್ದರ ಹೇಳು, ಮಾಡತೀನಿ, ಆಗಲಾದರೂ ಒಂದು ತೊಲಿ ಕೊಡಬೇಕು.

ಪತ್ತಾರ : ಅವಶ್ಯ ಕೊಡತೀನಿ. ಮೊನ್ನೆ ಘಟನೆ ಬಳಿಕ ಗಂಗಾನ ಮನಸ ಹ್ಯಾಂಗ ಅದ.

ಪರವ್ವ : ಗಂಗಾ ಬಹಳ ಮನಸಿಗಿ ಹಚಗೊಂಡಾಂಗ ಕಾಣಸತದ. ಇಂಥದರಾಗ ಅಕಿ ಗಂಡ ಬಳ್ಳಾರಿಗೆ ಮುಂಗಾರಿ ಸುಗ್ಗಿ ಯಾಪಾರಕ್ಕ ನಾಳೆ ಹೋಗತಾನ. ಇನ್ನ ಮ್ಯಾಲ ಮನ್ಯಾಗ ಹರೇದ ಹೆಣ್ಣ ಒಂದೇ ಇರತದ.

ಪತ್ತಾರ : ಏನು?

ಪರವ್ವ : ಹೌದು, ಮೈದುನದೇರು ಹೊಲಕ ಹೋಗತಾರ. ರಾತ್ರಿ ಬಂದರ ಬಂದರು, ಬಿಟ್ಟರ ಬಿಟ್ಟರು, ಒಬ್ಬಾಕಿನೇ ಗ್ವಾಡಿ ನೋಡತಾ ಕೂಡತಾಳ.

ಪತ್ತಾರ : ಪರವ್ವ, ಒಳ್ಳೇ ಸುದ್ದಿ ಹೇಳದಿ. ಹರೆದ ಹೆಣ್ಣು ಒಂದೇ ಇರಬಾರದು. ಗಂಡ ಇರಬೇಕು, ಇಲ್ಲ ಸುತ್ತ ಬಳಗ ಇರಬೇಕು. ಇರದಿದ್ದರ ಒಂಟಿ ಜೀವ ಚಂಚಲ ಆಗತದ, ಮತ್ತ ಏನ ಸುದ್ದಿ?

ಪರವ್ವ : ಮತ್ತೇನಿಲ್ಲ, ಮನಿ ಕಡಿ ಜ್ವಾಕಿ ಅಂತ ಗೆಳೆಯ ಸಂಗಣ್ಣಗ ಕರಿಸಿ ಹೇಳಿದ.

ಪತ್ತಾರ : ಆವ ಏನ್ ಅಂದ?

ಪರವ್ವ : ಅನ್ನೋದೇನು? ಇಬ್ಬರೂ ಗೆಳೆಯರು, ಒಪ್ಪಿದ ಒಂದ ಕಣ್ಣ ನಿನ್ನ ಮನಿಮ್ಯಾಲ, ಇನ್ನೊಂದ ಕಣ್ಣ ನನ್ನ ಮನಿಮ್ಯಾಲ ಅಂದ. ಪಾಪ ಒಳ್ಳೇ ಮನಶ್ಯಾ.

ಪತ್ತಾರ : ಹಾಂ, ದಾರಿ ಸಿಕ್ಕಿತು, ಪರವ್ವ, ನಾ ಹೇಳಿದ ಹಾಂಗ ನೀ ಕೇಳಬೇಕು.

ಪರವ್ವ : ಏನು?

ಪತ್ತಾರ : ಆಕೆ ಮೊನ್ನೆ ಒಪ್ಪಲಿಲ್ಲ. ಬಹುಶಃ ಮುಂದೂ ಒಪ್ಪೂದುಲ್ಲ. ಆದರೂ ಆಕಿ ಮನಿಗಿ ಹೋಗಿ ಇನ್ನೊಮ್ಮೆ ಪ್ರಯತ್ನ ಮಾಡತೀನಿ. ಮತ್ತು ಒಪ್ಪದಿದ್ದರೆ ಒಂದು ಕೆಲಸ ಮಾಡು, ನಾಳೆ ಶ್ರಾವಣ ಸೋಮಾರ. ಗಂಗಿನ ಬಸವಣ್ಣ ದೇವರ ಗುಡಿಗಿ ಕರಕೊಂಡು ಬಾ. ಏನಾರ ನೆವಮಾಡಿ, ಒಬ್ಬಾಕೀನ ಅಲ್ಲಿ ಬಿಟ್ಟು ನೀ ದೂರ ಹೋಗು. ಅಲ್ಲಿನೂ ಪ್ರಯತ್ನ ಮಾಡತೀನಿ. ಆದರೂ ಕೆಲಸ ಕೈಗೂಡಲಿಲ್ಲಂದರ ಸಂಗಣ್ಣ–ಗಂಗಿ ಹಾದರ ನಡಸ್ಯಾರ ಅಂತ ಸುಳ್ಳ ಸುದ್ದಿ ಹುಟ್ಟಸಬೇಕು. ಬೆಳಸಬೇಕು. ಈ ತಂತ್ರದಲ್ಲಿ ನೀ ಸಹಾಯ ಮಾಡಿದರೆ, ನಿನಗ ಆ ಒಂದು ತೊಲಿ ಬಂಗಾರ.

ಪರವ್ವ : ಇದೇನು ದೊಡ್ಡ ಕೆಲಸ, ನಾ ಸಹಾಯ ಮಾಡ್ತೀನಿ, ಬಂಗಾರ ಮಾತ್ರ ಮರಿಬ್ಯಾಡ.

ಪತ್ತಾರ : ನಿನ್ನ ಹತ್ತರ ಅದ ಅಂತ ತಿಳಿಕೋ, ಅಪವಾದ ಸಿದ್ದವಾದ ಕೂಡಲೇ ಬಂಗಾರ ನಿನ್ನ ಕೈಯಾಗ, ಆದರೆ ನೀ ಮತ್ತ ಮತ್ತ ನನ್ನ ಹತ್ತರ ಬರಬ್ಯಾಡ. ಮಂದೀಗಿ ಸಂಶಯ ಬಂದೀತು. ನೀ ನಡಿ ಇನ್ನ. ನಾ ಸ್ವಲ್ಪ ಪ್ಯಾಟಿಗಿ ಹೋಗಬೇಕು. (ಪರವ್ವ ಹೋಗುತ್ತಾಳೆ. ಪತ್ತಾರನೂ ಹೋಗುತ್ತಾನೆ).

❖❖

ದೃಶ್ಯ – ೯

(ಗಂಗಾ ಮನೆಯಲ್ಲಿ ಬೀಸುತ್ತಲಿದ್ದಾಳೆ)

ಸ್ವಾಮಿ ಭಿಕ್ಷಕ ಬಂದ। ಕಮಲದ್ಹೂವ ತಂದ
ಮುತ್ತ ನೀಡಿದರ ಒಲ್ಲೆನೆಂದ। ಎವ್ವ
ಮನಸ ನೋಡಾಕ ಬಂದ॥

ಮಂದಿಮಕ್ಕಳೊಳಗ ಚಂದಾಗ್ಹೊಂದಿರಬೇಕ
ನಂದೀಯ ಶಿವನು ಕರೆದಾಗ। ಮಂದಿ
ಬಾಯಾಗ ಇರಬೇಕ॥

ಸರದಾರ ನಿಮ್ಮಿಂದ ಸರುವೆಲ್ಲ ಮರೆತೀನಿ
ಬಸವಂತ ಕೂಸ ಇರಪಾಕ್ಷಿ। ನನ್ನ
ಬಳಗಂತ ತಿಳದೀನಿ॥

ಪತ್ತಾರ : ಯಾರಿದ್ದೀರಿ ಒಳಗ? (ಎನ್ನುತ್ತಲೇ ಒಳಗೆ ಬಂದು ಕುಳಿತುಕೊಳ್ಳುವನು).

ಗಂಗಾ : (ಎದ್ದು, ಸಿಟ್ಟಿನಿಂದ) ನಿವ್ಯಾಕ ಒಳಗ? ಏಳರಿ, ನಡೀರಿ ಹೊರಗ.

ಪತ್ತಾರ : ನಾ ಒಳಗ ಬಂದದ್ದು ಹೊರಗ ಹೋಗಲಿಕ್ಕಲ್ಲ.

ಗಂಗಾ : ಎದಕ ಬಂದಿದ್ದು?

ಪತ್ತಾರ : ನಿನಗ ಗೊತ್ತ ಅದಲ್ಲ, ನಿನ ಗಂಡ ಊರಾಗಿಲ್ಲ, ಅವನ ಜಾಗ ತುಂಬಲಾಕ ಬಂದೀನಿ.

ಗಂಗಾ : ನಾಲಿಗಿ ಬಿಗಿ ಹಿಡಿದು ಮಾತಾಡ್ರಿ, ಇಂಥಾ ಮಾತಾಡಿ ನಂದ ಗೋಕುಲದಂಥಾ ನನ್ನ ಮನಿ ಮೈಲಿಗಿ ಮಾಡಬ್ಯಾಡ್ರಿ.

ಪತ್ತಾರ : ನಂದ ಗೋಕುಲ? ಹೇಳತೀನಿ ಕೇಳು, ಕೃಷ್ಣ ರಾಧಿ ಕೂಡ ಸರಸ ಆಡಿದ್ದು, ಗಂಡುಳ್ಳ ಗರತಿಯರ ಕಾಡಿದ್ದು, ಗೋಪಿಯರ ಸೀರಿ ಕದ್ದದ್ದು, ಎಲ್ಲ ನಂದ ಗೋಕುಲದೊಳಗ, ನಿನ್ನ ಮನಿನೂ ಅಂಥ ನಂದ ಗೋಕುಲ ಮಾಡತೀನಿ.

ಗಂಗಾ : ಮನಿ ಅಂದರ ಅರಮನಿ ಅಲ್ಲ, ದೇವರಮನಿ ಅಂತ ನಾ ತಿಳಕೊಂಡೀನಿ, ಇದು ಮನ್ಯಾಗ ಆಡೂ ಮಾತಲ್ಲ, ಬೀದ್ಯಾಗ ಆಡೂ ಮಾತ.

ಪತ್ತಾರ : ಮಾತ ಬೀದಿಗ ಬೀಳಬಾರದು. ಬೀದ್ಯಾಗ ಬಿದ್ದರ, ನಾಳೆ ಬೀದಿಪಾಲ ಆಗುವವಳು ಇಂದೇ ಆಗತೀ, ಕೇಳ ಗಂಗಾ.

ಗಂಗಾ : ಕೇಳೂದಿಲ್ಲ, ಹೇಳೂದಿಲ್ಲ, ಏಳ್ರಿ ಇಲ್ಲಿಂದ.

ಪತ್ತಾರ : ಏಳತೀನಿ. ಒಂದ ಮಾತ ಕೇಳು (ಎದ್ದು ಮುಟ್ಟಲು ಹೋಗುವುದು, ಅವಳು ಪಾರಾಗುವುದು)

ಊರಾಗಿದ್ದ ಭಾಳೇ ಮಾಡ ಎಲೆ ರಮಣಿ
ಬಿಡುದಿಲ್ಲ ಗಂಗಿ ನಿನ್ನಾ
ನಿನ್ನ ಮ್ಯಾಲ ಹೋಗಲಿ ನನ್ನ ಪ್ರಾಣ ಪಲ್ಲ
ಸೂತರದ ಗೊಂಬೆಯಂಥಾ ಹೆಣ್ಣ ಏನ ಬಣ್ಣ
ಕಸರಿಲ್ಲ ಯಾತರಾಗೇನ
ನೆವಾ ಹೇಳಿದರ ಕೇಳಾವಲ್ಲ ಗಂಗಿ ಇನ್ನಾ
ಥೇಟ ಪಾತರದಾಕಿ ಹಾಂಗ ಕಾಣಸ್ತಿ
ಮಾತಾಡ ಒಂದ ಸರತಿ
ತೆಕ್ಕಿ ಹಾಯೋ ಹಾಂಗ ನನಗ ಆಗೇತಿ

ಖಾಲಿ ಮನ್ಯಾಗ ಒಂದ ಹೆಣ್ಣ ಇರಬಾರದು. ಮನಸ್ಸ ನಮ್ಮ ಕೈಯ್ಯಂದಲ್ಲ, ಇದು ಗೊತ್ತಿದ್ದೂನಿನ ಗಂಡ ನಿನಗ ಬಿಟ್ಟ ಹ್ವಾದ. ಅವನ ನಿನಗಿಂತ ಹಣ ಮುಖ್ಯ, ನೀನು ಹಾಸ್ಯಂಡು ಬೀಸಿ ಒಗೆಯೂ ಪತ್ರೋಳಿ ಅಂತ ತಿಳಿದಾನ.

ಗಂಗಾ : ಬಂಗಾರದಂಥವು ನನ್ನ ಯಜಮಾನರು, ನೀವು ಇಂಥ ಮಾತ ಆಡಬ್ಯಾಡರಿ.

ಪತ್ತಾರ : ನೀನೂ ಇಂಥ ಮಾತ ಆಡಬ್ಯಾಡ. ಈಗ ಯಾರೂ ಇಲ್ಲ. ವಶ ಆಗದಿದ್ದರ, ಎಲ್ಲರೂ ನಂಬು ಹಂಗ ಹಾದಾರ ಅಪವಾದ ಹೊರಸತೀನಿ. ಒಪ್ಪತ್ಯೋ ಇಲ್ಲೋ.

ಗಂಗಾ : ಇಲ್ಲ.

ಪತ್ತಾರ : ನೋಡು, ಇಷ್ಟ ಅಲ್ಲ, ಗಂಡ ಬಿಡೂ ಹಾಂಗ ಮಾಡಿ, ಗಂಡಿ ಬಿಟ್ಟ ಗಯ್ಯಾಳಿ ಅನಸತೀನಿ. ಒಪ್ಪು.

ಗಂಗಾ : ಇಲ್ಲ, ಇಲ್ಲ.

ಪತ್ತಾರ : ಕಡಿ ಮಾತ ಹೇಳತೀನಿ. ನೋಡು ಈ ಲೆಕ್ಕಣಿಕೆ (ಕಿವಿಯಿಂದ ಲೆಕ್ಕಣಿಕೆ ತೆಗೆದು) ಒಪ್ಪದಿದ್ದರ ನಿನ್ನ ಮ್ಯಾಲ ಸುಳ್ಳ ಹಾದರ ಹೋರಿಸಿ, ಆಟ ಬರಿತೀನಿ, ನೀ ಸತ್ತರೂ ಜನ ನಿನ್ನ ಮ್ಯಾಲ ಉಗಳೂ ಹಾಂಗ ಮಾಡುತೀನಿ. (ಹಿಮ್ಮೇಳದಲ್ಲಿ ಕೆಡಸಬ್ಯಾಡರಿ ಕಾಗದ ಗರತಿಯ ಹಾಡು).

ಗಂಗಾ : (ಒಮ್ಮೇಲೇ ಗಾಬರಿಯಾಗಿ) ಅಣ್ಣಾ, ಕೈ ಮುಗಿತೇನೀ, ನನ್ನ ಕೈ ಬಿಡು, ಕಾಲ ಬೀಳತೇನಿ, (ನಮಸ್ಕರಿಸುವಳು) ನಾ ನಿನ್ನ ತಂಗಿ, ಮಗಳು ಅಂತ ತಿಳಕೋ ಸೆರಗೊಡ್ಡಿ ಬೇಡ್ಕೋತೀನಿ. ಕಾಡಬ್ಯಾಡ. ಅಕ್ಷರವಿದ್ಯ ಅಪರೂಪ. ಅದನ್ನ ಹೀಂಗ ತಪ್ಪ ಬಳಸಬ್ಯಾಡ, ನನ್ನ ಮ್ಯಾಲ ಆಟ ಬರೀಬ್ಯಾಡ.

ಪತ್ತಾರ : ಬರೀತೀನಿ, ನೀ ಬೀದಿ ಪಾಲಾದ ಬಳಿಕ ಇದನ್ನ ಹಳ್ಳಿ ಹಳ್ಯಾಗ ಆಡತೀನಿ. ಆಡಸತೀನಿ, ಇದರಾಗ ಏನ ಬರೀತೀನಿ, ನೀನು ಊಹಿಸಲೂ ಸಾಧ್ಯವಿಲ್ಲ ಈಗ ಹೇಳಿದರೆ ನೀ ಎದಿ ಒಡಕೊಂಡು ಸಾಯಿತಿ.

ಗಂಗಾ : ಅಣ್ಣಾ, ನೀ ಮಾಡಿಕೊಟ್ಟ ೧೦ ತೊಲಿ ಬಂಗಾರ ನಿನಗ ಮರಳಿ ಕೊಡತೀನಿ. ಅಪವಾದ ಹೊರಸಬ್ಯಾಡ. ಸುಳ್ಳ ಸುದ್ದಿ ಹಬ್ಬಸಬ್ಯಾಡ, ಆಟಾ ಬರದು ಅಕ್ಷರದಾಗ ಸುಳ್ಳ ಶಾಶ್ವತಗೊಳಿಸಬ್ಯಾಡ.

ಪತ್ತಾರ : ಇನ್ನೂ ೧೦ ತೊಲಿ ನಾನು ಕೊಡತೀನಿ. ನೀ ವಶವಾಗು (ಮುಟ್ಟಲು ಹೋಗುವನು).

ಗಂಗಾ : ಮುಟ್ಟಾರ ಮುಟ್ಟೋ ನಿನ್ನ ದಿಟ್ಟತನ ನೋಡತೀನಿ
ಬಾಳಮಂದಿ ಹೋಗಿದಾರೋ ಹಾಳಾಗಿ
ಅಲ್ಲದ್ದು ಆಡಬ್ಯಾಡ, ಸಲ್ಲದೋ ನಮಗಿದೊ
ಬಲ್ಲವನಾಗಿ ತಿಳಿಕೋರೋ, ಸತ್ತು ಹ್ವಾದಿ

ಪತ್ತಾರ : ನೋಡು, ಗಂಗಾ ನನಗ ಶ್ರೀಮಂತಿಕಿ ಅದ, ರೂಪ ಅದ, ವಿದ್ಯೆ ಅದ, ಯೌವನ ಅದ, ನಿನ ಗಂಡಗ ಏನ ಅದ, ಇದ್ದರ ಇಷ್ಟರಾದ ಮಕ್ಕಳಾಗತಿದ್ದು..................

ಗಂಗಾ : ಶಿವ ಶಿವಾ! ಆಡಬ್ಯಾಡರಿ ಇಂಥ ಮಾತ. ನನ್ನ ಗಂಡ ಅಂದರ ಶ್ರೀರಾಮಚಂದ್ರ. ರಾವಣನಂಗ ದುಡಕಬ್ಯಾಡರಿ (ಮುಟ್ಟಲು ಬರುವುದು, ತಪ್ಪಿಸಿಕೊಳ್ಳುವುದು, ಅಷ್ಟರಲ್ಲಿ ಬಸವಂತ, ಇರಪಾಕ್ಷಿ ಬರುತ್ತಾರೆ. ಗಂಗಾ ಒಳಗ ಹೋಗುತ್ತಾಳೆ).

ಇರಪಾಕ್ಷಿ : ಏನು ರಾಯಪ್ಪಣ್ಣ ಯಾವಾಗ ಬಂದಿ?

ಪತ್ತಾರ : ಇದ ಬಂದೆ (ವ್ಯಂಗ್ಯವಾಗಿ) ಸಂಗಣ್ಣ ಬಂದಿದ್ದ, ನಾ ಬಂದ ಕೂಡಲೇ ಅವ ಎದ್ದ ಹ್ವಾದ. ಅಷ್ಟರಾಗ ನೀವು ಬಂದಿರಿ, ಏನು? ಎಲ್ಲ ಆರಾಮಾ.

ಬಸವಂತ : ಆರಾಮ ಏನ ಕೆಲಸ?

ಪತ್ತಾರ : ಏನೂ ಇಲ್ಲ, ಕೈಯಾಗ ಕೆಲಸ ಇರಲಿಲ್ಲ. ಕುಲಕರ್ಣೇರ ಮನಿಗಿ ದಾಗೀನ ಕೆಲಸ ಕೇಳಲಾಕ ಹೊಂಟಿದ್ದೆ. ಹಾದ್ಯಾಗ ಈರಪ್ಪ ಸಾವಕಾರಿಗಿ ಕೇಳಬೇಕೆನಿಸಿತು. ಬಂದೆ.

ಇರಪಾಕ್ಷಿ : ಅಣ್ಣ ಊರಾಗ ಇಲ್ಲ.

ಪತ್ತಾರ : ಇಲ್ಲ?

ಬಸವಂತ : ಇಲ್ಲ, ಅತ್ತೀಗೀಗಿ ಕೇಳಬೇಕು.

ಪತ್ತಾರ : ಕೇಳಬೇಕೆನ್ನುವಷ್ಟರಲ್ಲಿ ನೀವು ಒಳಗ ಬಂದ್ರಿ.

ಇರಪಾಕ್ಷಿ : ಅತ್ತಿಗಿ ಏನ ಹೇಳತಾಳ. ಅಣ್ಣಾಗ ಕೇಳ ಅಂತಾಳ, ಅಣ್ಣ ಬಂದ ಕೂಡಲೆ ಬಾ (ಆಗಲಿ ಎನ್ನುತ್ತ ಹೋಗುವನು).

ಬಸವಂತ : ಅತಿಗೆವ್ವ, ಕಾಲಿಗಿ ನೀರ ತಾ (ಒಳಗಿನಿಂದ ೨ ತಂಬಿಗಿ ನೀರು ತರುತ್ತಾಳೆ)

ಇರಪಾಕ್ಷಿ : (ಕಾಲಿಗೀ ನೀರ ಹಾಕಿಕೊಳ್ಳುತ್ತ) ಸಂಗಣ್ಣ ಬಂದಿದ್ದನಂತ?

ಗಂಗಾ : ಇಲ್ಲ, ಬಂದಿಲ್ಲ.

ಬಸವಂತ : (ಕಾಲಿಗಿ ನೀರ ಹಾಕಿಕೊಳ್ಳುತ್ತ) ಬಂದಿದ್ದ ಅಂತ ಈಗ ಪತ್ತಾರ ಹೇಳಿದ.

ಗಂಗಾ : ಅವ ಏನ ಹೇಳಿದನೋ, ನೀವು ಏನ ಕೇಳಿಸಿಕೊಂಡಿರೋ, ನಡೀರಿ ಊಟ ಮಾಡಿರಿ, ದುಡದ ಹಸದೀರಿ (ಒಳಗೆ ನಡೆಯುತ್ತಾರೆ. ಇರಪಾಕ್ಷಿ ಮಂಚದ ಹತ್ತಿರ ಕಪ್ಪು-ಬಸಿ ಎಡಹುತ್ತಾನೆ.)

ಇರಪಾಕ್ಷಿ : ಇದೇನು ಮಂಚದ ಹತ್ರ ಕಪ್ಪು-ಬಸಿ?

ಗಂಗಾ : ಮುಂಜಾನೆ ಪರವ್ವ ಬಂದಿದ್ದಳು. ಕುಡದ ಬಚ್ಚಲಕ ಇಡೂದ ಬಿಟ್ಟು, ಮಂಚದ ಹತ್ತಿರ ಇಟ್ಟಿದ, ಬರ್ರಿ, ಹುಗ್ಗಿ ಮಾಡೀನಿ, ಊಟ ಮಾಡ್ರಿ (ಒಳಗೆ ಹೋಗುತ್ತಾರೆ).

❖❖

ದೃಶ್ಯ - ೧೦

(ಮರಡಿ ಬಸವಣ್ಣನ ಗುಡಿ. ಬಿಳಿರೇಶಿಮೆ ಸೀರೆ ಉಟ್ಟು, ಹಣೆಗೆ ವಿಭೂತಿ ಕುಂಕುಮ, ಕೈಯಾಗ ನೈವೇದ್ಯದೊಂದಿಗೆ ಗಂಗಾ ಪರವ್ವನೊಂದಿಗೆ ಗುಡಿಗೆ ಬರುತ್ತಾಳೆ)

ಪರವ್ವ : ಗಂಗಾ, ನಾ ದೇವರಿಗಿ ಹೂವ ಪತ್ರಿ ತರತೇನಿ (ಹೋಗುವಳು).

ಗಂಗಾ : (ದೇವರಿಗೆ ಕೈಮುಗಿದು) ದೇವಾ, ನಂಬಿದವರ ಮನದಲ್ಲಿ ತುಂಬಿ ತುಳುಕುವ ನಂದೀಶಾ, ನೀನು ನಮ್ಮ ಮನಿದೇವರು, ಇಷ್ಟು ವರ್ಷ ಈ ಮನೆತನದ ಮಾನ ಕಾಯ್ದವ ನೀನು, ನಾವೆಲ್ಲ ನಮ್ಮ ಸುಖ-ದುಃಖ ನಿನ್ನ ಮುಂದ ಹೇಳಿಕೊಂಡು ಮನಸ್ಸ ಹಗರ ಮಾಡಕೊಂಡೀವಿ, ಬಂದ ಕಂಟಕ ಬಯಲ ಮಾಡಿಕೊಂಡೀವಿ, ದೇವಾ (ಬಾಗಿ ನಮಸ್ಕರಿಸುವಳು).

ನನಗ ನನ್ನ ಮರ್ಯಾದಿ ಮುಖ್ಯ, ನನ್ನ ಮನತನದ ಮರ್ಯಾದಿ ಇನ್ನೂ ಮುಖ್ಯ, ಬೈಲವಾಡದಿಂದ ಬಂದು ಬೈಲಹೊಂಗಲ ಮನೆತನದ ಮರ್ಯಾದಿ ಹಾಳು ಮಾಡಿದಳು- ಅನ್ನೋ ಆರೋಪ ಊಹಿಸಿಕೊಳ್ಳಲು ನನಗೆ ಕಷ್ಟ ಆಗ್ಯಾದ, ನನ್ನ ಪ್ರಾಣಕ್ಕಿಂತ ನನ್ನ ಮಾನ ಮುಖ್ಯ, ನಿನಗ ಕೈಮುಗಿದು ಬೇಡಿಕೊಳ್ತಿನಿ, ಕಾಪಾಡು ದೇವ್ರ (ಕೈಮುಗಿಯುವಳು).

ನಾನು ಈವರೆಗೆ ಬೆಂಕಿ ಹಂಗ ಪವಿತ್ರಳಾಗಿ ಬದಕೇನಿ. ನನಗ ಗಂಡನೇ ಆಸ್ತಿ, ಗಂಡನೇ ಬಳಗ, ಗಂಡನೇ ದೇವರು. ಈ ಪತ್ತಾರ ಯಾವ ಜಲ್ಮದ ವೈರಿಯೋ, ನನಗ ಉಗಳಲು ಬಾರದ, ನುಂಗಲು ಬಾರದ ಪರಿಸ್ಥಿತಿಗಿ ತಂದಾನ, ನಾ ನಿರಪರಾಧಿ, ಪಾಪಕ್ಕೆ ಅಂಜುವ ಹೆಣ್ಣು, ನನ್ನ ಬಾಳೆವ ಮಣ್ಣ ಮಾಡಲಿಕ್ಕೆ ಸಿದ್ಧ ಆಗ್ಯಾನ. ಗಿಡಗನ ಕೈಯ್ಯಾಗ ಸಿಕ್ಕ ಗಿಣಿಹಾಂಗ ಆಗೀನಿ. ಕುಂತರ ಸಮಾಧಾನ ಇಲ್ಲ, ನಿಂತರ ಸಮಾಧಾನ ಇಲ್ಲ, ಮಗಿದರ ನಿದ್ದಿ ಇಲ್ಲ. ಪತ್ತಾರಗ ಒಳ್ಳೇ ಬುದ್ದಿ ಕೊಟ್ಟು, ನನ್ನ ಸಂಕಟದಿಂದ ಪಾರು ಮಾಡು ನಂದೀಶ್ವರಾ (ಅಡ್ಡ ಬೀಳುವಳು).

ಪತ್ತಾರ : (ಹಿಂದಿನಿಂದ ಬಂದು, ಸ್ವಗತ) ಅಲಾ ಇವನ, ಒಬ್ಬಾಕಿನೇ ಸಿಗತಾಳಂತ ಬಂದರ ಈ ಪೂಜಾರಿನೂ ಅದಾನಲ್ಲ, ಕೆಲಸ ಕೆಟ್ಟಿತು (ಎನ್ನುತ್ತ ಕೃತ್ರಿಮವಾಗಿ ಕೆಮ್ಮುತ್ತಾನೆ).

ಗಂಗಾ : (ಎಳುತ್ತ ಹೊರಳಿ ನೋಡಿ) ಅಯ್ಯೋ (ಎಂದು ಚೀರುತ್ತ ಕುಸಿಯುವಳು, ಪತ್ತಾರ ಓಡಿ ಹೋಗುವನು).

ಪೂಜಾರಿ : (ಒಳಗಿನಿಂದ ಬಂದು) ಯಾಕ ತಂಗಿ, ಏನಾತು? ಏನಾತು?

ಗಂಗಾ : (ಸುಧಾರಿಸಿಕೊಂಡು) ಏನಿಲ್ರಿ, ಬಿಸಲ, ಕಣ್ಣಿಗಿ ಕತ್ತಲ ಬಂದಾಂಗಾತು. (ಹಿಮ್ಮೆಳದಲ್ಲಿ, ಕೆಡಸ ಬ್ಯಾಡರಿ ಕಾಗದ ಗರತಿಯ ಹಾಡು, ಪೂಜಾರಿ ಒಳಗೆ ಹೋಗುವನು). ದೇವಾ, ನಿನಗ ಬೆಳ್ಳಿ ಕಡಗ, ಬಂಗಾರ ಅಣಸ, ಮುತ್ತಿನ ಜೂಲ ಅರ್ಪಿಸತೀನಿ, ಹುಟ್ಟಿದ ಮಗನಿಗಿ ನಿನ್ನ ಹೆಸರ ಇಡತೀನಿ.

ಈ ಪತ್ತಾರ ಸತ್ತರೂ ಕಾಡೂದೂ ಬಿಡೂದಿಲ್ಲ ಅಂತಾನ ದೇವಾ. ಹಾದರ ಅಪವಾದ ಹೊರಸಿ ಆಟ ಬರದು ಆಡಸ್ತೀನಿ, ಜನ ಆಡೂಹಾಂಗ ಮಾಡತೀನಿ, ಸೂರ್ಯ-ಚಂದ್ರ ಇರೂ ತನಕ ಕಾಡತೀನಿ ಅಂತಾನ ದೇವಾ, ಇಂಥವರಿಗೆ ಅಕ್ಷರಜ್ಞಾನ ಯಾಕ ಕೊಟ್ಟೆ? ಹುಚ್ಚರ ಕೈಯ್ಯಾಗ ಹತಾರ ಕೊಡುವುದೇ?

ಆ ಪತ್ತಾರ ಮಾತ ಮಾತಿಗೆ ಲೆಕ್ಕಣಕಿ ತೋರಸತಾನ, ಅದು ನನಗ ಕಟಕನ ಕೈಯ್ಯಾನ ಕೊಡ್ಲಿಹಾಂಗ ಕಾಣಸ್ತದ. ಕನಸಿನ್ಯಾಗ ಕಾಡತದ. ನನ್ನ ಪ್ರಾಣತಗೋ, ಆದ್ರ ಮಾನ ಕಾಪಾಡು ದೇವಾ. (ಪರವ್ವ ಅಷ್ಪರಲ್ಲಿ ಹೂ ಪತ್ರಿ ತಂದು ಪೂಜಾರಿಗೆ ಕೊಡುವಲು. ಪೂಜಾರಿ ಆರತಿ ಬೆಳಗುವನು.)

ಹಿಮ್ಮೆಳ : ಜಯ ಜಯ ಮರಡಿಯ ಬಸವಣ್ಣನಿಗೆ ಆರತಿ ಎತ್ತಮ್ಮ
ಭಕ್ತಿಯ ಬೆಳಕನು ಬೆಳಗಮ್ಮ॥
ಜಯ ನಮಃ ಪಾರ್ವತಿಪತಿ ಹರ ಎನುತಲಿ ಚಪ್ಪಳಿಗ್ಹಾಕಮ್ಮ ॥೧॥

ಅಂಗವು ಮಾಟ, ಇಣಿಯು ಗುಮಟ, ಕೋಡು ಕಳಸಮ್ಮ
ಬೆನ್ನು ಬೆಟ್ಟೆ ಮಾಟಮ್ಮ।
ಜಯ ನಮಃ ಪಾರ್ವತಿಪತಿ ಹರ ಎನುತಲಿ ಚಪ್ಪಳಿಗ್ಹಾಕಮ್ಮ
ಭಕ್ತರ ರಕ್ಷಕ, ಭಕ್ತರ ಪಾಲಕ, ಪೋಷಕನಿವನಮ್ಮ ॥೨॥

ಮರಡಿಯ ಬಸವೇಶ್ವರನಮ್ಮ।
ಜಯನಮಃ ಪಾರ್ವತಿಪತಿ ಹರ ಎನುತಲಿ ಚಪ್ಪಳಿಗ್ಹಾಕಮ್ಮ ॥೩॥

(ಹೀಗೆ ಆರತಿ ಮುಗಿಯುತ್ತಲೇ ಗಂಗಾ ದಿಂಡರಕಿ ಉರುಳಿ ಏಳುವಳು. ಇಬ್ಬರು ತೆರಳುವರು).

❖❖

ದೃಶ್ಯ – ೧೧

(ಇರಪಾಕ್ಷಿ ಹೊರಟಿದ್ದಾನೆ. ದಾರಿಯಲ್ಲಿ ಪರವ್ವನ ಭೇಟಿ)

ಇರಪಾಕ್ಷಿ : ಏನ್ ಪರವ್ವ, ಈ ಕಡೆ?

ಪರವ್ವ : ಗೌಡರ ಹೊಲಕ ಕೆಲಸಕ್ಕ ಹೊಂಟಿದ್ದೇ, ನೀ ಎಲ್ಲಿಗಿ ಹೊಂಟೀದಿ?

ಇರಪಾಕ್ಷಿ : ತ್ವಾಟಕ್ಕ ಹೊಂಟೀನಿ, ನೀ ನಮ್ಮ ಮನಿಗಿ ಅಗಾಗ ಬರ್ತಾ ಇರು. ಅತಿಗೆವ್ವ ಒಬ್ಬಾಕಿ, ಬ್ಯಾಸರ.

ಪರವ್ವ : ನನ್ನ ಕೆಲಸದಾಗ ಪುರಸೊತ್ತೇ ಇಲ್ಲ, ಮತ್ತ ನಿಮ್ಮ ಅತ್ತೀಗೀಗಿ ನನ್ನ ಹರಕತ್ತ ಇಲ್ಲ.

ಇರಪಾಕ್ಷಿ : ಅಂದರ ಏನು?

ಪರವ್ವ : ಸಂಗಣ್ಣ ಅದಾನಲ್ಲ, ಒಂದ ಕಣ್ಣ ಅವನ ಮನಿಮ್ಯಾಲ, ಒಂದ ಕಣ್ಣ ನಿಮ್ಮ ಮನಿಮ್ಯಾಲ ಅಂತ ಅವನೇ ನಿಮ್ಮ ಅಣ್ಣನ ಮುಂದ ಹೇಳ್ಯಾನ.

ಇರಪಾಕ್ಷಿ : ಇರಲಿ, ನಿನ್ನೆ ಮನಿಗಿ ಹೋಗಿದ್ದಿಯೇನು?

ಪರವ್ವ : ಇಲ್ಲ.

ಇರಪಾಕ್ಷಿ : ಮನ್ಯಾಗ ಚಹಾ ಕುಡಿದೇನು?

ಪರವ್ವ : ಇಲ್ಲ ಇಂತ ಹೇಳತೇನಿ. ಚಹಾ ಎಲ್ಲಿ ಕುಡೀಲಿ? ಆಗಾಗ ಸಂಗಣ್ಣ ಬಂದು, ಹರಟಿ ಹೊಡಿತಾ, ನಿಮ್ಮ ಅಣ್ಣನ ಮಂಚದ ಮ್ಯಾಲ ಕುಂತು ಚಹಾ ಕುಡಿತಿರತಾನ, ಊರಿಗೆ ಊರ ಗುಜುಗುಜು ಮಾತಾಡತಾದ.

ಇರಪಾಕ್ಷಿ : (ಬೆಚ್ಚಿಬಿದ್ದು) ಏ, ಪರವ್ವ, ಏ ಪರವ್ವ (ಎನ್ನುತ್ತಲೇ ಆಕೆ ಕುಹಕ ನಗೆ ಬೀರುತ್ತ ಹೋಗುತ್ತಾಳೆ)

ಅತಿಗೆವ್ವ ಕಾಲ ಜಾರಿದಳು
ನಮ್। ಮನಿ ಮಾನ ಮಾರಿದಳು।
ಎನ್ ಮಾಡ್ಲಿ ನಾನು ಸಣ್ ಹುಡುಗ
ನಮ್। ಮಾನಕ್ಕ ಬಂತಣ್ಣ ಪಿಡಗ
ಬಸವಂತ್ಗ ನಾನು ಏನ್ ಹೇಳ್ಲಿ

ಅಣ್! ಈರಪ್ಪ ಬಂದ್ರ ಎನ್ ಮಾಡ್ಲಿ!
ಜನಕ್ ಹ್ಯಾಂಗ್ ಮಾರಿ ತೋರಿಸಲಿ
ಬೆಂಕ್ಯಾಗ ಹ್ಯಾಂಗ ಬದಕಲಿ।

(ದುಗುಡದ ಹೆಜ್ಜೆ ಹಾಕುತ್ತ ಹೊಲಕ್ಕೆ ಹೋಗುತ್ತಾನೆ. ಸ್ವಲ್ಪ ಸಮಯದ ಬಳಿಕ ಅವನ ಬೆನ್ನು ಹಿಂದೆಯೇ ಬಸವಂತ ಬರುತ್ತಾನೆ. ಎದುರು ಪತ್ತಾರ ಬರುತ್ತಾನೆ)

ಪತ್ತಾರ : ನಮಸ್ಕಾರ ಬಸವಂತ ಸಾವಕಾರಗಿ, ಈ ಕಡೆ?

ಬಸವಂತ : ನಮಸ್ಕಾರ ರಾಯಪ್ಪಣ್ಣಗ. ತಮ್ಮ ಇರಪಾಕ್ಷಿ ಹೊಲಕ್ಕೆ ಹ್ವಾದ. ನಾನೂ ಹೊರಟೇನಿ. ಸ್ವಲ್ಪ ತಡ ಆತು, ನೀನು ಈ ಕಡೆ?

ಪತ್ತಾರ : ಏನಿಲ್ಲ, ನಿನ್ನ ಸಾವಕಾರ ಸಂಗಣ್ಣನ ಮನಿಗಿ ಹೋಗಿದ್ದೆ, ಸಿಗಲಿಲ್ಲ, ನಿಮ್ಮ ಮನಿ ಕಡೆಗೆ ಹೋಗ್ಯಾನ ಅಂತ ಹೇಳಿದ್ರು ಇವತ್ತ ಕೇಳಿದ್ರೂ ನಿಮ್ಮ ಮನಿ ಕಡೆಗೇ ಹೋಗ್ಯಾನ ಅಂತ ಹೇಳಿದ್ರು.

ಬಡವಂತ : ನಮ್ಮ ಅಣ್ಣನ ಗೆಳೆಯ, ಅದಕ......

ಪತ್ತಾರ : ಆದ್ರೂ ಸ್ವಲ್ಪ ಎಚ್ಚರ ಇರಲಿ, ಜನಾನೋ, ದನಾನೋ, ಗಡಿಗಿ ಬಾಯಿ ಮುಚ್ಚಬಹುದು, ಜನರ ಬಾಯಿ ಮುಚ್ಚಲಿಕ್ಕೆ ಆಗೋದಿಲ್ಲ, ನಿಮ್ಮ ಅಣ್ಣ ಊರಾಗಿಲ್ಲ, ನೀವೀಬ್ರೂ ಹೊಲದಾಗ ಹಗಲ ರಾತ್ರಿ ದುಡೀತೀರಿ.

ಬಸವಂತ : ಅಂದ್ರ? ಸಂಗಣ್ಣ ಬಹಳ ದೊಡ್ಡ ಮನಶ್ಯಾ, ನಮ್ಮಣ್ಣಗ ಹೇಳ್ಯಾನ ಒಂದ ಕಣ್ಣ ನನ್ನ ಮನಿಮ್ಯಾಲ, ಒಂದ ಕಣ್ಣ ನಿನ್ನ ಮನಿಮ್ಯಾಲ ಅಂತ.

ಪತ್ತಾರ : ಅದನ್ನೇ ಊರ ಜನ ಆಡಿಕೊಳ್ಳೊದು, ಸಂಗಣ್ಣ ಈಗ ಎರಡು ಮನಿ ಯಜಮಾನ ಅಂತ, ಹಗಲ ನಿಮ್ಮ ಮನಿ, ರಾತ್ರಿ ಅವನ ಮನಿ. ಒಂದ ಕಣ್ಣ ನಿಮ್ಮ ಮನಿಮ್ಯಾಲ ಒಂದ ಕಣ್ಣ ಅವನ ಮನಿಮ್ಯಾಲ ಆಯ್ತಲ್ಲ.

ಬಸವಂತ : ನಿನ್ನ ಮಾತಿನಾಗ ಏನೋ ಒಳ ಅರ್ಥದ.

ಪತ್ತಾರ : ಏನೂ ಒಳ ಅರ್ಥ ಇಲ್ಲ. ನಿಮ್ಮ ಮನಿ ಮಾನವೂ ಅಷ್ಟೇ, ನಮ್ಮ ಮನಿ ಮಾನವೂ ಅಷ್ಟೇ, ಅಂದ್ ಹಾಗಂಗ ಮನ್ಯಾಗ ನಿಮ್ಮ ಅತಿಗಿ ಒಬ್ಬಾಕಿ ಇರತಾಳ (ಎಂದವನೇ ಹೋಗುತ್ತಾನೆ. ಬಸವಂತ ದಿಗಿಲ ಬಿದ್ದಂತಾಗಿ ಸ್ವಲ್ಪ ಮುಂದೆ ಹೋಗುವಷ್ಟರಲ್ಲಿ ಹೊಲದಿಂದ ಮನೆಗೆ ಹೊರಟ ಇರಪಾಕ್ಷಿ ಭೇಟ್ಟಿ) ಏನ್, ಇರಪಾಕ್ಷಿ, ಬೇಗ ಮನಿಗಿ ಹೊರಳದಿ?

ಇರಪಾಕ್ಷಿ : ಅಣ್ಣಾ ನನ್ನ ಮನಸ ಸಮಾಧಾನ ಇಲ್ಲ.

ಬಸವಂತ : ನನ್ನದೂ ಸಮಾಧಾನ ಇಲ್ಲ. ಅಣ್ಣ ಊರಾಗ ಇಲ್ಲ ಅಂತ ನಿನಗ ಅಸಮಾಧಾನ ಏನು?

ಇರಪಾಕ್ಷಿ : ಇಲ್ಲ, ಮುಂಜಾನೆ ಪರವ್ವ ಭೇಟ್ಟಿಯಾಗಿದ್ದಳು (ತಡೆದು) ಅತಿಗಿ ನಡತಿ ಬಗ್ಗೆ ಸಂಶಯ ಬಂದದ,

ಬಸವಂತ : ಈಗ ಪತ್ತಾರ ಭೇಟ್ಟಿಯಾಗಿದ್ದ, ನನಗೂ ಅತಿಗಿ ನಡತಿ ಬಗ್ಗೆ ಸಂಶಯ ಬಂದದ

ಇರಪಾಕ್ಷಿ : ಇದನ್ನ ಹ್ಯಾಂಗ ನಂಬಬೇಕು?

ಬಸವಂತ : ಈ ಅತಿಗಿ ಅಂದರ ನಮಗ ತಾಯಿ.

ಇರಪಾಕ್ಷಿ : ತಾಯಿ ಅಲ್ಲ ದೇವರು. ಜನಾನೋ ದನಾನೋ ಅಂತ ನಾವು ಸುಮ್ಮ ಇರಬಹದು. ಆದರ ಸಂಗಣ್ಣ ನಮ್ಮ ಮನಿಗಿ ಬಂದ ವಿಷಯ, ಮಂಚದ ಹತ್ತಿರದ ಕಪ್ಪು ಬಸಿ ಘಟನೆ ಬ್ಯಾರೆ ಅರ್ಥ ಕೊಡಲಿಕ್ಕ ಹತ್ಯಾವ.

ಬಸವಂತ : ಏನು?

ಇರಪಾಕ್ಷಿ : ನಿನ್ನ ನಮ್ಮ ಮನಿಗಿ ಪತ್ತಾರ ಬಂದಿದ್ನಲ್ಲ.

ಬಸವಂತ : ಬಂದಿದ್ದ.

ಇರಪಾಕ್ಷಿ : ಅವ ಒಳಗ ಬರೂದಕ, ಸಂಗಣ್ಣ ಹೊರಗ ಹ್ವಾದ ಅಂತ ಹೇಳಿದ.

ಬಸವಂತ : ಹೇಳದ.

ಇರಪಾಕ್ಷಿ : ಅತಿಗೆವ್ಗ ಕೇಳಿದರೆ, ಸಂಗಣ್ಣ ಬಂದೇ ಇಲ್ಲ ಅಂದ್ಳು.

ಬಸವಂತ : ಹೌದು; ಯಾಕ ಹಾಂಗ ಮಾತ ಮುಚ್ಚಿ ಹೇಳಿದ್ಳು?

ಇರಪಾಕ್ಷಿ : ನನಗೂ ಅದೇ ಪ್ರಶ್ನೆ, ಆಮ್ಯಾಲ ನಾ ಮಂಚದ ಕೆಳಗಿನ ಕಪ್ಪ-ಬಸಿ ಎಡವಿದೆ.

ಬಸವಂತ : ಎಡವಿದಿ.

ಇರಪಾಕ್ಷಿ : ಚಾ ಕುಡಿದು ಕಪ್ಪ-ಬಸಿ ಇಟ್ಟವಳು ಪರವ್ವ ಅಂದ್ಳು ಅತ್ತಿಗೆವ್ವ.

ಬಸವಂತ : ಅಂದ್ಳು.

ಇರಪಾಕ್ಷಿ : ಆದರ, ಈಗ ಪರವ್ವ ಭೇಟ್ಟಿ ಆಗಿದ್ಳು. ನಮ್ಮನಿಗಿ ಒಂದು ವಾರ ಆತು ಬಂದಿಲ್ಲ ಅಂದ್ಳು.

ಬಸವಂತ : ಆಂ!

ಇರಪಾಕ್ಷಿ : ಅಷ್ಟೇ ಅಲ್ಲ, ನಾ ಬರೂ ಅವಶ್ಯಕತೆ ನಿಮ್ಮ ಅತ್ತಿಗೆವ್ವಗ ಈಗ ಇಲ್ಲ ಅಂದ್ಳು.

ಬಸವಂತ : ಅಂದ್ರ!

ಇರಪಾಕ್ಷಿ : ಹೊತ್ತ ಕಳಿಲಾಕ ಸಂಗಣ್ಣ ಇದ್ರ ಸಾಕು. ನಾ ಯಾಕ ಬೇಕು? ಅಂದ್ಳು. ನಾ ಸಣ್ಣವ, ಎದಿ ಡವ ಡವ ಅನ್ನಲಿಕ್ಕ ಹತ್ಯಾದ.

ಬಸವಂತ : ಈಗ ಪತ್ತಾರನೂ ಒಂದಿಷ್ಟು ವಿಷಯ ಹೇಳಿದ.

ಇರಪಾಕ್ಷಿ : ಏನ ಹೇಳಿದ?

ಬಸವಂತ : ನಿನ್ನ ಸಂಗಣ್ಣನ ಮನಿಗಿ ಹೋಗಿದ್ನಂತ.

ಇರಪಾಕ್ಷಿ : ಮುಂದ ಏನಾಯ್ತು?

ಬಸವಂತ : ಸಂಗಣ್ಣ ನಮ್ಮ ಮನಿಗಿ ಹೋಗ್ಯಾನ ಅಂದ್ಭಂತ ಅವನ ಹೆಂಡತಿ.

ಇರಪಾಕ್ಷಿ : ಮುಂದ ಏನಾಯ್ತು?

ಬಸವಂತ : ಇವತ್ತ ಪತ್ತಾರ ಮತ್ತ ಸಂಗಣ್ಣನ ಮನೀಗಿ ಹೋಗಿದ್ನಂತ, ಇವತ್ತೂ ಅವ ನಮ್ಮ ಮನಿಗಿ ಹೋಗ್ಯಾನ ಅಂದ್ಭಂತ ಅವನ ಹೆಂಡತಿ.

ಇರಪಾಕ್ಷಿ : ಮುಂದ ಏನಾಯ್ತು?

ಬಸವಂತ : (ಅಳುತ್ತ) ಆಗೋದೇನು, ಊರಾಗ ಜನ ಗುಜುಗುಜು ಮಾತಾಡ್ತಾರಂತ.

ಇರಪಾಕ್ಷಿ : ಏನ ಮಾತಾಡ್ತಾರಂತ?

ಬಸವಂತ : ಈರಪ್ಪ ಊರಾಗ ಇಲ್ಲ ಸಂಗಣ್ಣಗ ಹಗಲ ನಮ್ಮ ಮನಿ, ರಾತ್ರಿ ಅವನ ಮನಿ ಅಂತ ಆಡಕೊಳ್ಳತಾರಂತ

(ಇರಪಾಕ್ಷಿ ಗೋಳೋ ಎಂದು ಅಳುತ್ತ ಅಣ್ಣನ ತೆಕ್ಕೆಗೆ ಬೀಳುತ್ತಾನೆ. ಸುಧಾರಿಸಿಕೊಂಡು ಇಬ್ಬರೂ ಮನೆಗೆ ಹೊರಡುತ್ತಲೇ)

ಒಬ್ಬ : (ದಾರಿಯಲ್ಲಿ ಎದುರಾಗಿ) ನಮಸ್ಕಾರ್ರಿ ಸಾವಕಾರ, ಇಬ್ಬರೂ ಆರಾಮ ಇದ್ದೀರಾ? ಹೊಲದಿಂದ ಹೊರಟಾಂಗ ಕಾಣಸ್ತಾದ, ಒಂದಿಷ್ಟು ದಿನ ಮನ್ಯಾಗ ಇರ್ರಿ (ಎನ್ನುತ್ತ ಹೋಗುವನು, ಇಬ್ಬರೂ ಮುಖ ಸಣ್ಣದು ಮಾಡುವರು).

ಇನ್ನೊಬ್ಬ : (ದಾರಿಯಲ್ಲಿ ಎದುರಾಗಿ) ನಮಸ್ಕಾರ ಬಸವಂತಪ್ಪ, ಒಂದು ತಿಂಗಳಾಯ್ತು ಈರಪ್ಪಣ್ಣ ಊರಾಗಿಲ್ಲಂತ, ಇಷ್ಟು ದಿನ ಮನಿ ಬಿಟ್ಟು ಹೋಗೂದ? (ಎನ್ನುತ್ತ ಹೋಗುವನು ದುಃಖಿಸುತ್ತ)

ಇರಪಾಕ್ಷಿ : ಚುಚ್ಚಮಾತ ಚುಚ್ಚಮಾತ ಕಿವಿಯಾಗ
ಬಿಚ್ಚಿ ಬಿತ್ತು ನಮ್ಮ ಮಾನ ದಾರ್‍ಯಾಗ

ಬಸವಂತ : ಕಾಳಕತ್ಲ ತುಂಬ್ಯಾದ ಕಣ್ಣಾಗ
ದಾರಿ ಕಾಣುವಲ್ದು ನನ್ಗ ಕಾಲಾಗ

ಇಬ್ಬರೂ : ಬೆಳದಿಂಗಳ ಹೋಗಿ ಬಂತು ಬಿಸಲ....
ಒಳಗ ಸಣ್ಣ ಸುಡತದ ಒಡಲ.....
ಹೆಣ್ ಅಂತಾರ ಸ್ವರ್ಗಕೆ ದಾರಿ....
ದಾರಿ ತಪ್ಪಿದ್ರ ಮನೆತನಕ್ಕೆ ಮಾರಿ....

ಬಸವಂತ : (ಅಳುತ್ತಿರುವ ಇರಪಾಕ್ಷಿಯನ್ನು ಕುರಿತು) ಸಮಾಧಾನ ಮಾಡಿಕೋ, ಮನಿಗಿ ಹೋಗೋಣ ನಡಿ (ಹೋಗುತ್ತಾರೆ).

❖❖

ದೃಶ್ಯ - ೧೨

(ಈರಪ್ಪನ ಮನೆ, ಗಂಗಾ ಊಟಕ್ಕೆ ನೀಡುತ್ತಿರಲು ಇರಪಾಕ್ಷಿ, ಬಸವಂತ ಅರೆ ಮನಸ್ಸಿನಿಂಗ ಊಟ ಮಾಡುತ್ತಲಿದ್ದಾರೆ. ಪಾರವ್ವ ಜೋಳ ಹಸನ ಮಾಡುತ್ತಲಿದ್ದಾಳೆ)

ಗಂಗಾ : ಯಾಕ ತಮ್ಮ, ಊಟ ಸರಿಯಾಗಿ ಮಾಡತಿಲ್ಲ?

ಇರಪಾಕ್ಷಿ : ಅತಿಗೆವ್ವ ನನಗ ಊಟ ರುಚಿ ಹತ್ತುವಲ್ಲದು,

ಬಸವಂತ : ನನಗೂ ಊಟ ರುಚಿ ಹತ್ತುವಲ್ಲದು,

ಗಂಗಾ : ಯಾಕ ಇಬ್ಬರಿಗೂ ರುಚಿ ಹತ್ತುವಲ್ಲದು?

ಪರವ್ವ : ಮದವಿ ಮಾಡಬೇಕು, ಅಂದರ ರುಚಿ ಹತ್ತದ (ಗಂಗಾ ನಗುತ್ತಾಳೆ, ಬಸವಂತ ಇರಪಾಕ್ಷಿ ಒಲ್ಲನ ಮನಸ್ಸಿನಿಂದ ಊಟ ಮುಂದುವರಿಸುತ್ತಾರೆ).

ಬಸವಂತ : ಸಂಗಣ್ಣ ನಮ್ಮ ಮನಿ ಬ್ಯಾರೆ ಅಲ್ಲ, ನಿಮ್ಮ ಮನಿಬ್ಯಾರೆ ಅಲ್ಲ ಅಂದಿದ್ದ, ಇತ್ತೀಚೆ ಬಂದಿದ್ದೇನು?

ಗಂಗಾ : ಅವರವರ ಸಂಸಾರ ಅವರವರಗಿ ಇರತಾದ. ಒಂದು ವಾರ ಆತು ಬಂದಿಲ್ಲ.

ಇರಪಾಕ್ಷಿ : ಇವತ್ತ ನಮ್ಮ ಮನಿ ಕಡಿಗಿ ಬಂದಿದ್ದನಂತ!

ಗಂಗಾ : ಇಲ್ಲ, ನಮ್ಮ ಮನಿಗೇನೂ ಬರಲಿಲ್ಲ (ಇರಪಾಕ್ಷಿ ಬಸವಂತ ಪರಸ್ಪರ ಮುಖ ನೋಡುತ್ತಾರೆ). ನಿಮ್ಮ ಅಣ್ಣ ಹೋಗಿ ಇಂದಿಗೆ ಒಂದ ತಿಂಗಳಾಯ್ತು.

ಬಸವಂತ : ಇಷ್ಟರಾಗ ಬರಬೇಕಾಗಿತ್ತು.

ಗಂಗಾ : ಅವರಿಗೆ ಏನು ಕೆಲಸವೋ, ಎಲ್ಲ ಮುಗಿಸಿಕೊಂಡು ಬರಲಿ, ನಮಗೇನು ಕೊರತಿ ಆಗ್ಯಾದ, ಎಲ್ಲ ಸುಸೂತ್ರ ನಡದದ.

ಬಸವಂತ : (ಗಂಭೀರವಾಗಿ) ಹೌದು. ಎಲ್ಲಾ ಸುಸೂತ್ರ ನಡೆದದ (ಊಟ ಮುಗಿಯುತ್ತದೆ. ಅಷ್ಟರಲ್ಲಿ ಸಂಗಣ್ಣ ಬರುತ್ತಾನೆ).

ಸಂಗಣ್ಣ : ಬಸವಂತ, ಇರಪಾಕ್ಷಿ ಇದ್ದೀರಾ ಮನ್ಯಾಗ?

ಬಸವಂತ : (ಸ್ವಗತ) ಇದ್ದೀರಾ ಮನ್ಯಾಗ ಅಂತಾನ, ನಾವು ಇರಬಾರದಿತ್ತು ಕಾಣಸ್ತದ.

ಸಂಗಣ್ಣ : (ಕುಳಿತುಕೊಳ್ಳುತ್ತ) ಏನು ಸುದ್ದಿ, ನಿಮ್ಮ ಅಣ್ಣನದು? ನನಗೂ ಬಹಳ ದಿನದಿಂದ ಈ ಕಡಿಗಿ ಬರೂದಾಗಿಲ್ಲ.

ಇರಪಾಕ್ಷಿ : (ಸ್ವಗತ) ನಿನ್ನೆ, ಇಂದ ಮುಂಜಾನೆ ಬಂದು, ಬಂದಿಲ್ಲಂತ ಸೋಗ ಹಾಕತಾನ, (ವ್ಯಕ್ತವಾಗಿ) ಏನು ಕೆಲಸವೋ ಏನೋ, ಅವನೂ ಬಂದಿಲ್ಲ, ಪತ್ರನೂ ಇಲ್ಲ.

ಸಂಗಣ್ಣ : ಊರಿಗಿ ಹೋದವರ ಸುದ್ದಿ ದೇವರ ಬಲ್ಲ, ಇರಲಿ ಬಿಡು, ಇನ್ನೂ ನಾಲ್ಕು ದಿನ ನಿಂತು ಎಲ್ಲ ಕೆಲಸ ಮುಗಿಸಿಕೊಂಡು ಬರಲಿ, ಇಲ್ಲೇನು ಕೆಲಸ ಅದ.

ಗಂಗಾ : ಹೌದು, ಅವಸರ ಮಾಡಿ ಲುಕ್ಸಾನದಾಗ ಬೀಳಬಾರದು (ಗಂಗಾ ಒಳಗೆ ಹೋಗುತ್ತಾಳೆ).

ಬಸವಂತ : (ಸ್ವಗತ) ಅಣ್ಣ ಬೇಗ ಬಂದರ ಇವರಿಗೆ ಲುಕ್ಸಾನ ಅದ (ಗಂಗಾ ಚಹಾ ತರುತ್ತಾಳೆ).

ಸಂಗಣ್ಣ : ಬಸವಂತ, ಇರಪಾಕ್ಷಿಗಿ ಚಹಾ?

ಗಂಗಾ : ಈಗ ಅವರು ಊಟಾ ಮಾಡ್ಯಾರ. (ಗಂಗಾ ಒಳಗೆ ಹೋಗುತ್ತಾಳೆ, ಸಂಗಣ್ಣ ಚಹಾ ಕುಡಿದು ವೀಳ್ಯ ತಿನ್ನುತ್ತಾನೆ)

ಸಂಗಣ್ಣ : ಯಾಕ? ತ್ವಾಟಕ್ಕ ಹೋಗುದು ಇಷ್ಟು ತಡ ಮಾಡೀರಿ. ಆಳ ಬಂದಿರತಾವ, ಮಾಲಕರಿದ್ದರ ಅವರು ಕೆಲಸ ಮಾಡೂದಿಲ್ಲ, ಹೋಗ್ರಿ, ನಾನೂ ಹೋಗತೀನಿ, ಆಂಥಾಂಗ, ಬಂದ ವಿಷಯನೇ ಮರತಿದ್ದೆ, ನಿಮ್ಮ ಕೆಲಸ ಮುಗದ ಬಳಿಕ ಕೂಲಿ ಆಳ ನಮ್ಮ ತ್ವಾಟಕ್ಕ ಕಳಸರಿ (ಎನ್ನುತ್ತ ಎದ್ದು ಹೋಗುತ್ತಾನೆ).

ಇರಪಾಕ್ಷಿ : ನಾವು ಮನ್ಯಾಗ ಇಲ್ಲ ಅಂತ ತಿಳಿದು ಬಂದು, ನಮ್ಮ ಮುಂದ ಶಾಜೋಗಿತನ ತೋರಸಾಕ ಮೊದಲೇ ಎದ್ದು ಹೋದ ನೋಡು, ಬಸವಂತ,

ಬಸವಂತ : ಹೌದು, ಹೌದು, ನಡಿ, ತ್ವಾಟದಾಗ ಆಳ ಏನು ಮಾಡ್ತಾರೋ ಏನೋ, ಹೋಗೋಣ (ಹೋಗುತ್ತಾರೆ. ಅಷ್ಟರಲ್ಲಿ ಜೋಳ ಹಸನು ಮುಗಿಸಿದ ಪರವ್ವ, ಸಂಗಣ್ಣ ಮರೆತು ಹೋದ ಎಲಿಚೀಲ ತೆಗೆದುಕೊಳ್ಳುತ್ತಾಳೆ).

ಪರವ್ವ : ಸಾವಕಾರ್ತಿ, ಜ್ವಾಳಾ ಹಸನ ಮಾಡೋದು ಮುಗಿತು, ನಾ ಹೋಗ್ತೀನಿ (ಕೂಗಿ ಹೊರಡುವಳು).

ನಾ ಬರತೀನಿ, ಹೋಗಿ ಗಂಗಿ
ನಿನ್ ಮಣ್ಣ ಮಾಡ್ತಿನಿ ತಂಗಿ ॥

ಈ ಚೀಲದಾಗ ನಿನ ಜೀವ
ಕೋಲ್‌ತಾನ ಪತ್ತಾರ ಮಾವ ॥

ಪಡಿತೀನಿ ತೊಲಿ ಬಂಗಾರ
ನನ್ನ ಎದಿ ಕೊರಳ ಸಿಂಗಾರ ॥

(ಹಾಡುತ್ತ ಹೋಗುವಳು)

❖❖

ದೃಶ್ಯ - ೧೩

(ಪತ್ತಾರನ ಮನೆ, ಪರವ್ವನ ಪ್ರವೇಶ)

ಪರವ್ವ : ಪತ್ತಾರಣ್ಣ, ಪತ್ತಾರಣ್ಣ (ಧಾವಿಸುತ್ತಾಳೆ).

ಪತ್ತಾರ : ಏನ ಪರವ್ವ? ಇಷ್ಟ ಅವಸರ.

ಪರವ್ವ : ನನ್ನ ತೊಲಿ ಬಂಗಾರ ಕೊಡು, ನಿನ್ನ ಕೆಲಸ ಒಂದು ಹೆಜ್ಜೆ ಮುಂದ ಸರದಾದ.

ಪತ್ತಾರ : ಆಕಿ ನನ್ನ ವಶ ಆಗಿಲ್ಲ. ಅಥವಾ ಅವಳ ಬಾಳ ಹಾಳಾಗಿಲ್ಲ, ಹೀಂಗಿದ್ದಾಗ ನನ್ನ ಕೆಲಸ ಹ್ಯಾಂಗ ಒಂದು ಹೆಜ್ಜೆ ಮುಂದ ಸರೀತು?

ಪರವ್ವ : ಆಕಿ ವಶ ಆಗೂ ಆಸೆ ಬಿಡು. ಈ ಜನ್ಮದಾಗ ಸಾಧ್ಯ ಆಗೋದಿಲ್ಲ. ನನ್ನ ಬಂಗಾರ ಕೋಡು. ಅವಳ ಭಾಳ ಹಾಳ ಮಾಡೂ ದಾರಿ ತೋರಸತೀನಿ.

ಪತ್ತಾರ : ದಾರಿ ಮೊದಲು ತೋರಸು. ಬಂಗಾರ ನಿನ್ನ ಕೈಯಾಂಗತ ತಿಳಕೋ.

ಪರವ್ವ : (ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಎಲಿ ಚೀಲ ತೋರಿಸುತ್ತ), ಇದು ಯಾರ ಎಲಿ ಚೀಲ?

ಪತ್ತಾರ : ಯಾರದು?

ಪರವ್ವ : ಸಂಗಣ್ಣನದು....

ಪತ್ತಾರ : ಹಾಂ!

ಪರವ್ವ : ಹೂಂ!!

ಪತ್ತಾರ : ಕೋಲ್ ಮಿಂಚ ಹೊಡದ್ಹಂಗ ಏಕಾಏಕಿ
ಎದಿ ಬಾಗಲ ದೂಡಿಕ್ಯಾರ ಒಳ ಹೊಕ್ಕಿ॥

ಸಿಕ್ಕಿ ಬಿದ್ದಿ ಬಲಿಯಾಗ ಪಾರಿವಾಳ
ಚೂರಿ ಹಾಕಿ ಕೊಲ್ಲತೀನಿ ಹಗಲಿರುಳ॥

ಪರವ್ವ ನೀ ಬಹಳ ದೊಡ್ಡ ಕೆಲಸ ಮಾಡಿದಿ. ಇದನ್ನ ಕಾಯ್ದಿಡು. ಈರಪ್ಪ ಬಂದ ದಿನ, ಇದನ್ನ ಗಂಗಿ ಮಂಚದ ದಿಂಬಿನ ಕೆಳಗ ಇಟ್ಟು, ಅವನ ಕಣ್ಣಿಗಿ ಬೀಳುಹಾಂಗ ಮಾಡು.

ಪರವ್ವ	:	ನನ್ನ ಬಂಗಾರ?
ಪತ್ತಾರ	:	ಕೆಲಸ ಪೂರಾ ಆದ ಮರುದಿನ, ಅಂದರ ಅವಳ್ನ ಗಂಡ ಮನಿಬಿಟ್ಟು ಹೊರಗೆ ಹಾಕಿದ ಮರುದಿನ, ಒಂದು ತೊಲಿ ಅಲ್ಲ, ಎರಡು ತೊಲಿ ಕೊಡತೀನಿ, ನೋಡು ಬಂಗಾರದ ರಾಶಿ (ಎನ್ನುತ್ತ ಕಪಾಟ ತೆಗೆದು ತೋರಿಸುತ್ತಾನೆ. ಪರವ್ವ ಕಣ್ಣುಜ್ಜಿ, ಪಿಳಿಪಿಳಿ ನೋಡುತ್ತಾಳೆ). ನೋಡು ಪರವ್ವ, ಗಂಗಿ ಮ್ಯಾಲ ನನ್ನ ವೈರ ಭುಸಗುಡತಾದ, ಬೀದಿ ಭಿಕಾರಿ ಮಾಡೂದು ಅಷ್ಟೇ ಅಲ್ಲ, ಅಕಿಮ್ಯಾಲ ಆಟ ಬರದು ಸೂರ್ಯಚಂದ್ರ ಇರೂ ತನಕ ಅವಳ ಹೆಸರ ಕೆಡಸತೀನಿ (ಕಿವಿಯ ಮೇಲಿನ ಲೆಕ್ಕಣಿಕಿ ತೆಗೆದು ತೋರಿಸ್ತಾನೆ. ಕೆಡಸಬ್ಯಾಡರಿ ಕಾಗದ ಹಾಡು ಹಿನ್ನೆಲೆಯಲ್ಲಿ ಕೇಳಿಸುತ್ತಿದೆ).
ಪರವ್ವ	:	ಆಟ ಬರೆಯುವಷ್ಟು ದೂರ ಹೋಗಬ್ಯಾಡ. ನೀ ಬರದ ಪುಂಡಲೀಕನ ಆಟ, ಬಾವಾನಾಟ ಅಂತ ಹತ್ತ ಹಳ್ಯಾಗ ಪ್ರಸಿದ್ಧ ಆಗ್ಯಾದ, ನೀ ಲಾವಣಿ ಹಾಡೂದು ಕೇಳಿ ಹೆಣ್ಣೂ-ಗಂಡೂ ಹುಚ್ಚೆದ್ದು ಹೊಗಳತಾರ. ನಿನ್ನ ನಾಲಿಗಿ ಮ್ಯಾಲ ಸರಸೋತಿ ಕುಣಿತಾಳ, ಅದರ ಗೌರಿಯಂಥ ಗಂಗಿ ಮ್ಯಾಲ, ಸುಳ್ಳ ಆಟ ಬರಿಬ್ಯಾಡ. ದೊಡ್ ಮನಶ್ಯಾ ಸಂಗಣ್ಣನ ಸಣ್‌ಮನಶ್ಯಾ ಮಾಡಬ್ಯಾಡ.
ಪತ್ತಾರ	:	ಇಲ್ಲ, ಬರದೇ ತೀರತೀನಿ, ನನ್ನ ವೈರ ಕಟಗೊಂಡರ ಆಗೋದೇ ಹೀಂಗ. ಜೀವಂತ ಪತ್ತಾರನ ಕಾಟಕ್ಕಿಂತ ಸತ್ತ ಪತ್ತಾರನ ಕಾಟ ತುಂಬಾ ಅಪಾಯಕಾರಿ. ನನ್ನ ಲೆಕ್ಕಣಕಿ ಆಟಕ ಬಳಸಿಕೊಳ್ತೀನಿ. ಗಂಗಿನ್ನ ಮಾನಗೇಡಿ ಮಾಡಿ, ಆಟದ ರೂಪದಲ್ಲಿ ನಿಲ್ಲಸ್ತೀನಿ.
ಪರವ್ವ	:	ಏನ್ ಬೇಕಾದ್ದು ಮಾಡು, ನಾ ಎಲಿ ಚೀಲದ ಕೆಲಸ ಒಂದು ಮಾಡತೀನಿ, ನನ್ನ ಬಂಗಾರ ತಗೊಂಡು ದೂರ ಆಗತೀನಿ (ಎನ್ನುತ್ತ ಹೋಗುವಳು).

❖❖

ದೃಶ್ಯ - ೧೪

(ಹೊಲದಲ್ಲಿ ಬಸವಂತ, ಇರಪಾಕ್ಷಿ ಕೆಲಸ ಮಾಡುತ್ತಲಿದ್ದಾರೆ)

ಇರಪಾಕ್ಷಿ : ಅಣ್ಣಾ ನಮ್ಮ ಮನೆತನದ ಮರ್ಯಾದೆ ಎಲ್ಲಿಗೆ ಬಂತು? ಊರಾಗ ಜನ ನನ್ನ ಕಡಿ ನೋಡೋದು ಕಂಡರ, ಊರಿಗಿ ಮಾತಾಡತಾದೇನೋ ಅನಸ್ತದ.

ಬಸವಂತ : ನನಗೂ ಹಾಂಗ ಅನಸ್ತದ. ಮುಖ ಮ್ಯಾಲ ಎತ್ತಲಾರದೆ ಹೊಲಕ್ಕ ಬರ್ತಿನಿ. ಅತಿಗೆವ್ವಗ ಈ ದುರ್ಬುದ್ದಿ ಯಾಕ ಬಂತು? ಏನ ಕಡಿಮಿ ಇತ್ತು. ಊಟಕ್ಕ ಉಡಲಿಕ್ಕ ಇತ್ತು.

ಇರಪಾಕ್ಷಿ : ಗಂಡನ ಪ್ರೀತಿ ಇತ್ತು, ಮೈದುನರ ಮಮತಾ ಇತ್ತು.

ಬಸವಂತ : ಎಲ್ಲಾ ಇತ್ತು, ನಮ್ಮ ಮನೆತನದ ನಶಿಬ ಖೊಟ್ಟಿ ಇತ್ತು (ಅಷ್ಟರಲ್ಲಿ ಈರಪ್ಪ ಬರುತ್ತಾನೆ).

ಈರಪ್ಪ : ಇರಪಾಕ್ಷಿ, ಬಸವಂತ, ಏ ಇರಪಾಕ್ಷಿ.....

ಬಸವಂತ : ಅಣ್ಣ ಬಂದ, ಅಣ್ಣ ಬಂದ.

ಇರಪಾಕ್ಷಿ : ಏನ ಅಣ್ಣಾ ಯಾವಾಗ ಬಂದಿ?

ಈರಪ್ಪ : ಇದ ಈಗ ಬಂದು ಜಳಕ ಮಾಡಿ ಊಟ ಮಾಡಿದೆ, ನಿಮ್ಮ ಮಾರಿ ನೋಡುವಂಗಾತು. ಹೊಲಕ್ಕೆ ಬಂದೆ.

ಬಸವಂತ : ಬಳ್ಳಾರ್ಯಾಗ ಹ್ಯಾಂಗ ಇದ್ದೀ?

ಈರಪ್ಪ : ಆರಾಮ ಇದ್ದೆ.

ಬಸವಂತ : ಹಾಕ ಪತ್ರ ಬರಿಯಲಾರದೆ ಬಂದಿ?

ಈರಪ್ಪ : ಏನ್ ಹೇಳೊದು, ಮೊನ್ನೆ ರಾತ್ರಿ ಕೆಟ್ಟ ಕನಸ ಬಿತ್ತು. ಗಡಬಡಸಿಕೊಂಡು ಬಂದೆ.

ಇರಪಾಕ್ಷಿ : ಏನ ಬಿತ್ತು.

ಈರಪ್ಪ : ನಾವೆಲ್ಲಾ ತಿಪ್ಪ್ಯಾಗ ಮಲಕೊಂಡಂಗ ಕನಸ ಬಿತ್ತು.

ಇರಪಾಕ್ಷಿ : ಅಣ್ಣಾ (ಅಳಲು ಆರಂಭಿಸಿಸುವನು).

ಬಸವಂತ : ನಿನ್ನ ಕನಸ ನಿಜ ಅಣ್ಣಾ, ನಾವು ಉಪ್ಪರಿಗಿಯಿಂದ ತಿಪ್ಪಿಗಿ ಬಿದ್ದೀವಿ.

ಈರಪ್ಪ	:	ಏನಾಯಿತು? ಅಂಥಾದ್ದು (ತಮ್ಮಂದಿರ ಮೌನ) ಹೇಳಿ, ಏನಾಯ್ತು ಅಂಥಾದ್ದು? (ಇರಪಾಕ್ಷಿ ಬಸವಂತ ಜೋರಾಗಿ ಅಳುವುದು)
ಇರಪಾಕ್ಷಿ	:	ಬಸವಂತ ಹೇಳಬ್ಯಾಡ ನನ್ನಾಣಿ, ನನ್ನಾಣಿ.
ಈರಪ್ಪ	:	ಹೇಳ್ರೋ, ಹೇಳ್ರಿ ಏನಾಯ್ತು?
ಬಸವಂತ	;	ಇಲ್ಲ ಅಣ್ಣಾ, ಹೇಳೂದಿಲ್ಲ.
ಈರಪ್ಪ	:	ಯಾಕ ಹೇಳೂದಿಲ್ಲ?
ಇರಪಾಕ್ಷಿ	:	ಅದು ಹೇಳೂವಂಥದಲ್ಲ. ನೀ ಕೇಳೂವಂಥದಲ್ಲ.
ಈರಪ್ಪ	:	ಹೇಳಿರಿ. ಸಾಧ್ಯವಿದ್ದರೆ ತಿದ್ದಿಕೊಳ್ಳೋಣ, ಹೇಳಿರಿ ಹೇಳಿರಿ.
ಬಸವಂತ	:	ಅ......ತಿ......ಗೆ.......ವ್ವ
ಈರಪ್ಪ	:	ಏನು ಅತಿಗೆವ್ವ?
ಇರಪಾಕ್ಷಿ	:	ಅತಿಗೆವ್ವನಿಂದಾಗಿ ನಾವು ತಲೆ ತಗ್ಗಿಸುಹಾಂಗ ಆಗ್ಯಾದ.
ಈರಪ್ಪ	:	ಏನು ಅಂಥಾದು ಆಗ್ಯಾದ.
ಬಸವಂತ	:	ಸಂ......ಗ.......ಣ್ಣ
ಈರಪ್ಪ	:	ಏನು ಸಂಗಣ್ಣ?
ಇರಪಾಕ್ಷಿ	:	ಸಂಗಣ್ಣ, ಅತಿಗೆವ್ವ.....ಜನ ಗುಜು ಗುಜು.....
ಈರಪ್ಪ	:	ಏನು? ಸಂಗಣ್ಣನ ದ್ರೋಹ.
ಬಸವಂತ	:	ಹೌದು.
ಈರಪ್ಪ	:	ನಿಮಗ ಏನ ಅನಸ್ತದ?
ಇರಪಾಕ್ಷಿ	:	ನಮಗ ನಿಜ ಅನಸ್ತದ.
ಈರಪ್ಪ	:	ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಅಂತ ಗಾದಿ ಮಾತ ಅದೆ.
ಬಸವಂತ	:	ನಮಗೆ ಖಾತ್ರಿ ಆಗ್ಯಾದ. ಎಲ್ಲ ಕೈಮೀರಿ ಹೋಗ್ಯಾದ. ಊರಾಗ ನಾವು ಒಂದ ವಾರದಿಂದ ಹಗಲ ತಿರಗಾಡಿಲ್ಲ. ನಸಕಿನ್ಯಾಗ ಹೊಲಕ ಬಂದು, ರಾತ್ರಿ ಮನೆಗೆ ಹೋಗತೀವಿ. ಏನು ಮಾಡೂದು ತೋಚತಿಲ್ಲ.
ಈರಪ್ಪ	:	ಮತ್ತೇನು ಮಾಡುವುದು, ಎಲ್ಲ ನಮ್ಮ ದುರ್ದೈದ, ಇನ್ನಷ್ಟು ಪರೀಕ್ಷಿಸಿ ನೋಡ್ರಿ ಮನಿಗಿ ನಡೀರಿ, ನಾ ಆಮ್ಯಾಲ ಬರತೇನಿ.
ಬಸವಂತ	:	ಇದ ಈಗ ಸೂರ್ಯ ಮುಳಗ್ಯಾನ, ಬೆಳಕಿನಾಗ ತಿರಗ್ಯಾಡಲಾಕ ಮನಸ ಒಪ್ಪುವಲ್ಲದು. ಸ್ವಲ್ಪ ಕತ್ತಲಾಗ್ಲಿ.
ಈರಪ್ಪ	:	ಹಾಂಗಾದರ ಸ್ವಲ್ಪ ಕೂಡ್ರಿ, (ಮೂವರು ಕುಳಿತುಕೊಳ್ಳುತ್ತಾರೆ. ಶೂನ್ಯ ದೃಷ್ಟಿಯಿಂದ ನೋಡುತ್ತ ಹೊತ್ತು ಕಳೆದು) ಕತ್ತಲಾಯ್ತು. ನೀವು ನಡೀರಿ, ನಾ ಆಮ್ಯಾಲ ಬರ್ತೀನಿ. (ತಮ್ಮಂದಿರು ಹೋಗುತ್ತಾರೆ).

ನುಚ್ಚಿನ ಗಡಗಿ ಕಾಯಲಾಕ
ನಾಯಿ ನೇಮಿಸಿಧಾಂಗಾಯ್ತು
ಕಬ್ಬ ಅಂತ ನಿನ್ನ ತಿಳದೆ ಮನದಾಗ
ಕಟಗಿ ಚುಚಿ ಹ್ವಾದ್ಯೋ ಸಂಗ್ಯಾ ಬಾಯಾಗ॥

ಕಾಗಿ ಮುಟ್ಟಿದ ಮೀಸಲ ಅಡಿಗಿ
ಹಾಂಗ ಆದಿ ಗಂಗಿ ಮಡದಿ
ಮಾಡಿದ್ದೆಲ್ಲ ಮಣ್ಣಾಯ್ತು ಅಣ್ಣಗಳೀರಾ
ಏನು ಉತ್ತರ ನಿಮಗ ಕೊಡ್ಲಿ ಜನಗಳಿರಾ॥

(ಈರಪ್ಪ ಹೋಗುತ್ತಾನೆ)

❖❖

ದೃಶ್ಯ – ೧೫

(ದಾರಿಯಲ್ಲಿ ಯೋಚಿಸುತ್ತ ಹೊರಟಿರುವ ಪತ್ತಾರ ನಿಂತು)

ಪತ್ತಾರ : ನಾನು, ಪರವ್ವ ಮಾಡಿದ ತಂತ್ರ ಒಂದಿಷ್ಟು ಫಲ ಕೊಟ್ಟಂಗ ಕಾಣಸ್ತದ, ನಾ ಹೇಳಿದಂಗ ಪರವ್ವ ಹೋದ ವಾರ ಇರಪಾಕ್ಷಿ ತಲಿ ಕೆಡಿಸ್ಯಾಳ, ನಾ ಬಸವಂತನ ತಲಿ ಕೆಡಿಸೇನಿ. ಮನಿ ಹೆಣ್ಣಿನ ಹಾದರ ಅಂದರ ಮರ್ಯಾದೆ ಪ್ರಶ್ನೆ. ಬೇಗ ಮನಸಿಗಿ ಹತ್ತತದ. ಬಸವಂತ ಇರಪಾಕ್ಷಿ ಊರಾಗ ಬರೂದು ಕಡಿಮಿ ಮಾಡ್ಯಾರ, ಬಂದರೂ ಯಾರಿಗೂ ಮುಖಕೊಟ್ಟು ಮಾತಾಡೂದೇ ಇಲ್ಲ.

ಇಂದ ಮಧ್ಯಾಹ್ನದಾಗ ಈರಪ್ಪ ಬಂದು ಹೊಲಕ ಹೋಗ್ಯಾನ, ಬಹುಶಃ ತಮ್ಮ ದೇವರಿಂದ ಈರಪ್ಪಗ ಗಂಗಿ ವಿಷಯ ತಿಳಿದಿರಬಹುದು. ಆವ ಬರೂದೂ ಇದೇ ದಾರಿ, ಸ್ವಲ್ಪ ನಿಂತು ಅವನ ಮಾರಿ ಲಕ್ಷಣ ನೋಡಬೇಕು. ಆ ಮ್ಯಾಲ ಅದಕ ತಕ್ಕಂಗ ಮಾತಾಡಬೇಕು. (ವಿಚಾರ ಮಗ್ನನಾಗುತ್ತಾನೆ. ಈರಪ್ಪ ಬರುತ್ತಿದ್ದಾನೆ. ಪತ್ತಾರ ಅನಿರೀಕ್ಷಿವೆಂಬಂತೆ ಅವನ ಎದುರು ಹೋಗಿ)

ಪತ್ತಾರ : ನಮಸ್ಕಾರ ಈರಪ್ಪ ಸಾವಕಾರಗಿ.

ಈರಪ್ಪ : ನಮಸ್ಕಾರ (ಎನ್ನುತ್ತಲೇ ತಲೆ ತಗ್ಗಿಸಿ ಹೆಜ್ಜೆ ಹಾಕುತ್ತಾನೆ.)

ಪತ್ತಾರ : ಏನ ಸಾವಕಾರ್ರ, ಬಹಳ ದುಗುಡಿನ್ಯಾಗ ಇದ್ದೀರಿ.

ಈರಪ್ಪ : ಏನಿಲ್ಲ, ಬಳ್ಳಾರಿಗಿ ಹೋಗಿದ್ದೆ. ಈಗ ಬಂದೆ, ಸ್ವಲ್ಪ ಆಯಾಸ ಆಗ್ಯಾದ.

ಪತ್ತಾರ : ಬಂಗಾರ ಕೆಲಸ ಕೇಳಲಾಕ ನಾನೂ ಎರಡೂ ಮೂರು ಸಾರೆ ನಿಮ್ಮ ಮನಿಗಿ ಹ್ವಾದೆ. ಬಾಗಲ ಹಾಕಿತ್ತು. ಗಂಗಾತಾಯಿ ಮನಿಬಿಟ್ಟು ಹೋಗಾಕಿ ಅಲ್ಲ. ಎಲ್ಲಿ ಹೋಗಿದ್ದಳೋ, ಏನೋ, ಒಂದು ತಿಂಗಳಾಯ್ತು, ನೀವು ಯಾಪಾರಕ್ಕೆ ಹೋಗಿದ್ದೀರಂತ ಜನ ಮಾತಾಡ್ತಿತ್ತು.

ಈರಪ್ಪ : ಏನ ಮಾಡೂದು, ಹಣ ಗಳಿಸ್ಬೇಕಲ್ಲ. ಇವತ್ತ, ನಾಳೆ ಅನುಕೋತ ದಿನ ಕಳಿಯಬೇಕಾಯ್ತು.

ಪತ್ತಾರ : ಹೌದ ಬಿಡಿರಿ, ಹಣ ಗಳಿಸಬೇಕು, ಆದರೆ ಇಷ್ಟು ದಿನ ಹೋಗಬಾರದು ಅಂತ ಪ್ಯಟ್ಯಾಗ ಜನ ಮಾತಾಡತಿದ್ರು. ದೇವರಿಲ್ಲದ್ದು ಗುಡಿ ಅಲ್ಲ, ಹಿರೇರಿಲ್ಲದ್ದು ಮನಿ ಅಲ್ಲ – ಅಂತ ಗಾದಿ ಮಾತೇ ಅದ ಅಲ್ಲ.

ಈರಪ್ಪ : ನೀ ಅನ್ನೋದು ನಿಜ.

ಪತ್ತಾರ : ನಾ ಹೋಗತೇನಿ (ಹೋಗುತ್ತಾನೆ).

ಈರಪ್ಪ : ಎರಡು ಮೂರು ಸಲ ಪತ್ತಾರ ಹೋದರೂ ಈಕೆ ಮನ್ಯಾಗ ಇರಲಿಲ್ಲ. ಗಂಡಸು ಕೂತು ಕೆಟ್ರು, ಹೆಂಗಸೂ ತಿರುಗಿ ಕೆಟ್ತು ಅನ್ನೋದು ಖರೇ ಅದ, ದೇವರಿಲ್ಲದ್ದು ಗುಡಿ ಅಲ್ಲ, ಹಿರೇರಿಲ್ಲದ್ದು ಮನಿ ಅಲ್ಲ – ಈ ಪತ್ತಾರ ಹೇಳೂದು ನಿಜ ಅದ.

ಒಬ್ಬ : (ದಾರಿಯಲ್ಲಿ ಎದುರಾಗಿ) ನಮಸ್ಕಾರ್ರಿ ಸಾವಕಾರ, ಬಳ್ಳಾರಿಯಿಂದ ಯಾವಾಗ ಬಂದ್ರಿ? ಏನು ಒಂದು ತಿಂಗಳ ಹೋಗೂದ? ಇರಪಾಕ್ಷಿ ಬಸವಂತ ಹೊಲದಾಗ, ನೀವು ಬಳ್ಳಾರ್ಯಾಗ, ಅವ್ವಾವ್ರು ಒಬ್ಬರೇ ಮನ್ಯಾಗ, ಹಣದ ಆಸೇನ ಹೀಂಗ (ಎನ್ನುತ್ತ ಹೋಗುವನು).

ಈರಪ್ಪ : (ಸ್ವಗತ) ಹಣದ ಆಸೆಗೆ ಹರೆದ ಹೆಂಡ್ತಿನ ಬಿಟ್ಟು ದೂರ ಹೋಗಬಾರದಿತ್ತು. ಹಣ ಮುಖ್ಯ, ಹಣಕ್ಕಿಂತ ಮಾನ ಮುಖ್ಯ, ಮರ್ಯಾದೆ ಮುಖ್ಯ, ಹೆಣ್ಣು ಇರಲಿ, ಗಂಡ ಇರಲಿ, ಒಬ್ಬರೇ ಇರಬಾರದು. ಕೆಟ್ಟ ವಿಚಾರ ಬರತಾವ. ಒಬ್ಬರೇ ಇದ್ದಾಗ ಹೆಣ್ಣ–ಗಂಡಿಗಿ ಮತ್ತ ಮತ್ತ ಸ್ವಲ್ಪ ಸಂಪರ್ಕ ಬಂದರ ಸಾಕು, ಸಲಿಗಿ ಬೆಳೆದು, ಕಣ್ಣು ಮುಚ್ಚಿ ಹಾಲು ಕುಡಿಯೂ ಬೆಕ್ಕಿನ ಪರಿಸ್ಥಿತಿ ನಿರ್ಮಾಣ ಆಗ್ತದ.

ಪರವ್ವ : (ದಾರಿಯಲ್ಲಿ ಎದುರು ಬಂದು) ಯಾವಾಗ ಬಂದಿ ಈರಪ್ಪಣ್ಣ? ಪ್ರವಾಸ ಚಲೋ ಆಯ್ತಾ? ನನಗ ಭಾಳ ಕೆಲಸ ಇದ್ದು, ಹೀಗಾಗಿ ನಿಮ್ಮ ಮನಿಗಿ ಹೋಗೂದೇ ಕಡಿಮೆ ಆಯ್ತು.

ಈರಪ್ಪ : ಇರಲಿ ಬಿಡು, ಅವರವರ ಕೆಸಲ ಅವರಿಗಿ.

ಪರವ್ವ : ಆದರ, ಸಂಗಣ್ಣ ನಿಮ್ಮ ಮನಿ ಬಗ್ಗೆ ಭಾಳ ಕಾಳಜಿ ವಹಿಸಿದ, ಮ್ಯಾಲಿಂದ ಮ್ಯಾಲ ಹೋಗಿ ನಿಮಕಿಂತ ಹೆಚ್ಚು ಕಾಳಜಿ ವಹಿಸಿದ (ಎನ್ನುತ್ತ ಹೋಗುವಳು).

ಈರಪ್ಪ : (ಸ್ವಗತ) ನಾ ತಪ್ಪ ಮಾಡಿದೆ. ಸಂಗ್ಯಾಗ ಮನಿ ಕಡಿ ಲಕ್ಷ್ಯ ಇರಲಿ ಅಂತ ಹೇಳಬಾರದಿತ್ತು. ಹೇಳಬಾರದಿತ್ತು. ಇದು ಸಲಗಿ ಬೆಳಿಲಾಕ ಕಾರಣ ಆಯ್ತು. ದೇವರಿಲ್ಲದ್ದು ಗುಡಿ ಅಲ್ಲ, ಹಿರೇರಿಲ್ಲದ್ದು ಮನಿ ಅಲ್ಲ. (ಎಂದು ಗುಣುಗಣಿಸುತ್ತ ಹೊಸ್ತಿಲ ಹತ್ತಿರ ಬರುವಷ್ಟರಲ್ಲಿ ಬೆಕ್ಕು ಅಡ್ಡ ಹೋಗುತ್ತದೆ) ಅರೇ ಇದರ ಅವ್ನ, ನನಗ ಸೂಚನೆ ತೋರಸ್ತು, ಗಂಗಿ ಕಾಲ ಜಾರಿದ್ದು ನಿಜ, ಊರಾನ ಜನ ಏನೇನ ಮಾತಾಡತಾರೋ ಏನೋ, ಜನರಿಗೆ ಹ್ಯಾಂಗ ಮುಖ ತೋರಿಸೂದು (ಎನ್ನುತ್ತ ಬರುತ್ತಾನೆ. ಮಂಚದ ಮೇಲೆ ಕುಳಿತು ಹತಾಶನಾಗಿ)

ಗಿಣಿ ಹಾಂಗ ಸಾಕಿದ್ದೆ

ಗಿಡಗಾಗಿ ಕಾಡಿದಿ

ಗೂಡನ್ನು ಕೇಡಿಸಿದಿ ಗಂಗೀ । ಗಂಗೀ । ಗಂಗೀ
ಗೆಳೆಯ ಅಂತ ನಂಬಿದ್ದೆ
ಗೋಣನ್ನು ಮುರಿದೆಯೋ
ಮುಳುಗಿಸಿದಿ ಹಡಗನ್ನು ಸಂಗ್ಯಾ । ಸಂಗ್ಯಾ । ಸಂಗ್ಯಾ

(ಹಾಡುತ್ತ ಎದ್ದು ಮನೆಯೊಳಗೆ ಹೋಗುವನು)

❖❖

ದೃಶ್ಯ - ೧೬

(ಈರಪ್ಪನ ಮನೆ. ರಾತ್ರಿ ಮಂಚದ ಮ್ಯಾಲ ಈರಪ್ಪ ಗಂಗಾ, ಈರಪ್ಪನಿಗೆ ನಿದ್ರೆ ಇಲ್ಲ)

ಗಂಗಾ : ಯಾಕ್ರಿ ನಿದ್ದಿ ಬರತಾ ಇಲ್ಲ?

ಈರಪ್ಪ : ನಿನ್ನಷ್ಟು ಸುಖಿ ನಾ ಅಲ್ಲ.

ಗಂಗಾ : ಚಾಷ್ಟಿ ಮಾಡಬ್ಯಾಡರಿ.

ಈರಪ್ಪ : ಚಾಷ್ಟಿ ಮಾಡುವಷ್ಟು ಸಂತೋಷ ಉಳಿದಿಲ್ಲ.

ಗಂಗಾ : ಯಾಕ? ಆದದ್ದಾದರಾ ಏನು?

ಈರಪ್ಪ : ಏನೂ ಇಲ್ಲ.

ಗಂಗಾ : ದಣೀವ ಆಗ್ಯಾದೇನು? ಕಾಲ ನೂಸತಾವೇನು (ಕಾಲು ಒತ್ತುವಳು).

ಈರಪ್ಪ : ಬ್ಯಾಡ, ಸುಮ್ಮ ಮಲಗು...... ನಾನೂ ಮಲಗತೀನಿ (ಮಲಗುತ್ತಾರೆ. ಕೆಲವು ಸಮಯ ಬಿಟ್ಟು ಈರಪ್ಪ ಮತ್ತೆ ಎದ್ದು ಹಿರೇರಿಲ್ಲದ್ದು ಮನಿ ಅಲ್ಲ ಎಂದು ಪದೇ ಪದೇ ನುಡಿಯುತ್ತ ಅತ್ತ ಇತ್ತ ತಿರುಗಾಡುತ್ತಾನೆ).

ಗಂಗಾ : ಯಾಕ್ರಿ ಅಡ್ಡಾಡತೀರಿ. ನಿದ್ದಿ ಯಾಕ ಬರುವಲ್ಲದು, ಆಗಿದ್ದಾದರೂ ಏನು?

ಈರಪ್ಪ : ಹೇಳಲಾರದ್ದು.

ಗಂಗಾ : ಅಂದರ?

ಈರಪ್ಪ : ಹೇಳಬಾರದ್ದು,

ಗಂಗಾ : ಬಿಡಿಸಿ ಹೇಳಬಾರದ?

ಈರಪ್ಪ : ಬಿಡಿಸಿ ಹೇಳೂದ ಅಲ್ಲ, ಬಿಡಿಸಿಕೊಳ್ಳೂದು.

ಗಂಗಾ : ಅಂದ್ರ?

ಈರಪ್ಪ : ಅಂದ್ರೇನೂ? ಇನ್ನ ಮ್ಯಾಲ ನೀ ನನ್ನ ಹೆಂಡ್ತಿ ಅಲ್ಲ,

ಗಂಗಾ : (ಬೆಚ್ಚಿ ಬಿದ್ದು) ಏನ್ರಿ? ಏನಾಯ್ತು? ಯಾಕ? ಹೀಂಗ್ಯಾಕ?

ಈರಪ್ಪ : ಹೀಂಗಿಲ್ಲ, ಹಾಂಗಿಲ್ಲ ನಾ ನಿನ್ನ ಗಂಡಲ್ಲ

ಗಂಗಾ	:	ಅಂದರ?
ಈರಪ್ಪ	:	ಸಂಗ್ಯಾಗ ನನ್ನ ಮನಿ ಕಡಿ ಲಕ್ಷ ಇರಲಿ ಅಂತ ಹೇಳಿ ಹೋಗಿದ್ದು ತಪ್ಪಾಯ್ತು.
ಗಂಗಾ	:	ಪಾಪ ಅವಂದೇನು ತಪ್ಪ. ಆಗಾಗ ಬಂದು ನಮ್ಮ ಸುಖ ದುಃಖ ಕೇಳ್ತಾನ, ಸಂಗ್ಯಾ ಅನಬಾರದು ತಗಿರಿ, ಅವ ನಿಮ್ಮ ಗೆಳೆಯ
ಈರಪ್ಪಾ	:	ನನ್ನ ಗೆಳೆಯ ಅಲ್ಲ, ನಿನ್ನ ಗೆಳೆಯ.
ಗಂಗಾ	:	ಅಯ್ಯೋ (ಚೀರಿ ಅಳುವಳು) ಶಿವಾ ಶಿವಾ ಕೇಳಲಾರೆ, ಕೇಳಲಾರೆ (ಗದ್ದಲ, ತಮ್ಮಂದಿರು ಬಂದು, ಮುಖ ತಿರುವಿ ನಿಲ್ಲುವರು).
ಈರಪ್ಪ	:	ಊರಿಗೇ ಗೊತ್ತಾದ. ಬೆಕ್ಕ ಕಣ್ಣ ಮುಚ್ಚಿ ಹಾಲ ಕುಡಿದರೆ..... ಇಬ್ಬರೂ ಕೂಡಿ ಹಾದರ ನಡೆಸಿ ತನ್ನ ಮರ್ಯಾದಿ ಹಾಳ ಮಾಡಿದ್ರಿ.
ಗಂಗಾ	:	ಅಯ್ಯೋ, ಹಿರಿಯಾ ಅನಬ್ಯಾಡ ಹೀಂಗ ನಾನೆಂದು ಮಾಡಿಲ್ಲ ಪರ ಸಂಗ ಸುದ್ದಿ ಬಿತ್ತಿದರ್ಯಾರೋ ತೆಲಿ ಕೆಡಿಸಿದರ್ಯಾರೊ ನಂಬಿಕಿ ಒಂದ ಇದಕ ಪರಿಹಾರೊ ಇರಪಾಕ್ಷಿ ಬಸವಂತ ನೀವಾರೆ ಹೇಳಿರೋ ಸಣ್ಣವಳ ಮಾಡಬ್ಯಾಡ್ರಿ ಜನರ್ ಮುಂದ ನನ್ನ ನಂಬರಿ, ಯಾರು ಹೇಳಿದರು?
ಈರಪ್ಪ	:	ಯಾರೇನು? ಊರ ಹೇಳತದ, ನನಗೆ ನಂಬಿಕೆಯೇ ಕಳದು ಹೋಗ್ಯಾದ (ಹೊಡೆಯುತ್ತಾನೆ)
ಇರಪಾಕ್ಷಿ	:	ಅತ್ತಿಗೆವ್ವ, ನೀ ನಮ್ಮ ಮನಿ ಮಾನ ಮೂರ ಕಾಸಿಗಿ ಮಾರಿದಿ.
ಈರಪ್ಪ	:	ಕಾಸಿಗಿ ಪಂಚೇರ ಮಾರಿದಿ (ಎನ್ನುತ್ತ ದಿಂಬ ಎತ್ತಿ ಹೊಡೆಯುತ್ತಾನೆ. ಎಲಿಚೀಲ ಕಾಣಿಸುತ್ತದೆ). ಈ ಎಲಿಚೀಲ ಯಾರದು?
ಗಂಗಾ	:	ನನಗ ಏನೂ ಗೊತ್ತಿಲ್ಲ.
ಈರಪ್ಪ	:	(ಹೊಡೆಯುತ್ತ) ಗೊತ್ತ ಆಗೂ ಹಾಂಗ ಮಾಡತೀನಿ. ಈ ಎಲಿಚೀಲನೇ ಸಾಕ್ಷಿ. ಹೇಳು ಯಾರದು?
ಬಸವಂತ	:	ಸಂಗಣ್ಣನದು.
ಈರಪ್ಪ	:	ಇದು ಹಾಸಿಗ್ಯಾಗ ಹ್ಯಾಂಗ ಬಂತು?
ಗಂಗಾ	:	ನನ್ನಾಣಿ, ನಿಮ್ಮಾಣಿ ನನಗ ಏನೂ ಗೊತ್ತಿಲ್ಲ ಮರಡಿ ಬಸವಣ್ಣನ ಆಣಿ, ನನಗೆ ಏನೂ ಗೊತ್ತಿಲ್ಲ.
ಈರಪ್ಪ	:	ನಿನ್ನ ಅಣಿ-ಪೀಣಿ ಬ್ಯಾಡ, ಖರೇ ಹೇಳು.

ಗಂಗಾ : ಏನ ಹೇಳಲಿ, ಅದು ಯಾರದು? ಇಲ್ಯಾಕ ಬಂತು ಒಂದೂ ನನಗ ಗೊತ್ತಿಲ್ಲ.

ಈರಪ್ಪ : ಗೊತ್ತಾಗೂ ಹಾಂಗ ಮಾಡತೀನಿ, ಇರಪಾಕ್ಷಿ ಹಗ್ಗ ತಗೊಂಡ ಬಾ, ಬಾರಕೋಲ್ ತಾ, ಕಂಬಕ್ಕ ಕಟ್ಟಿ ನಾಲ್ಕು ಥಳಸ್ಬೇಕು. ಕುಡ್ಗೋಲ ತಾ, ಇವಳ ಮಲಿ ಮೂಗ ತುರಬ ಕೊಯ್ಯಬೇಕು.

ಗಂಗಾ : ಅಯ್ಯೋ ನಾ, ನಿರಪರಾಧಿ, ನನ್ನನ್ನು ಕೊಲ್ಲಿರಿ. ಹಿಂಗ ಅಪಮಾನ ಮಾಡಬ್ಯಾಡ್ರಿ, (ಎನ್ನುವಷ್ಟರಲ್ಲಿ ಇರಪಾಕ್ಷಿ ಬಾರಕೋಲ, ಕುಡುಗೋಲ, ಹಗ್ಗ ತರುತ್ತಾನೆ).

ಬಸವಂತ : ಅಣ್ಣಾ, ಹೀಂಗ ಹೊಡೆಯುವುದರಿಂದ, ಮಲಿ ಮೂಗ ಕೊಯ್ಯುವುದರಿಂದ ಏನು ಪ್ರಯೋಜನವಿಲ್ಲ. ಊರಾಗ ನಾವೇ ಸುದ್ದಿ ಮಾಡಿದಾಂಗ ಆಗತದ, ಬ್ಯಾರೇ ವಿಚಾರ ಮಾಡು.

ಈರಪ್ಪ : ಮಾಡೋದೇನು, ಸೂರ್ಯ ಮೂಡೂದರೊಳಗೆ ಇಕಿನ್ನ ತವರಮನಿ ಬೈಲವಾಡಕ್ಕೆ ಬಿಟ್ಟು ಸೀದಾ ತ್ವಾಟಕ್ಕ ಬರ್ರಿ. ಅಲ್ಲಿ ಮುಂದಿನ ವಿಚಾರ ಮಾಡೂನು (ಎನ್ನುತ್ತ, ಈರಪ್ಪ ತಾಳಿಗೆ ಕೈ ಹಾಕುತ್ತಾನೆ. ಗಂಗಾ ಕೈಮುಗದು ಬ್ಯಾಡರಿ ಎಂದು ಚೀರುತ್ತಾಳೆ).

ಗಂಗಾ : ಮೈದುನ ಬಸವಂತ ನಿನಗ ಕೈಮುಗಿತೀನಿ, ನನ್ನನ್ನು ಅರ್ಥ ಮಾಡಿಕೋ,

ಈರಪ್ಪ : ಏ, ಹಾದರಗಿತ್ತಿ ಹಲಬಬ್ಯಾಡ.

ಗಂಗಾ : ಸಣ್ಣಮಗ ಇರಪಾಕ್ಷಿ, ನಿನ್ನ ಕಾಲ ಹಿಡಿತೀನಿ (ಕಾಲಿಗೆ ಬೀಳುತ್ತಾಳೆ), ನಾನು ತಪ್ಪ ಮಾಡಿಲ್ಲ, ನನ್ನನ್ನು ಉಳಿಸ್ಕೋಳ್ಳೋ, ಮಾಡಲಾರದ ತಪ್ಪಿಗಿ ಮಾಡಬಾರದ ಶಿಕ್ಷೆ ಮಾಡಬ್ಯಾಡರಿ.

ಈರಪ್ಪ : ಏನ ನೋಡ್ತೀರಿ, ಚಕ್ಕಡಿ ತಯಾರ ಮಾಡರಿ, ನಡಿರಿ (ಇಬ್ಬರೂ ಹೋಗುತ್ತಾರೆ).

ಗಂಗಾ : ಬ್ಯಾಡರಿ (ಗಂಡನ ಎರಡೂ ಕೈ ಹಿಡಿದು, ಸಮೀಪ ಮುಖ ಒಯ್ದು) ನನ್ನ ಮಾತಿನಾಗ ನಿಮಗ ನಂಬಿಗಿ ಇಲ್ಲ. ನನ್ನ ಮಾರಿ ನೋಡ್ರಿ, ಪಾಪ ಕಾಣಸತಾದ? ನನ್ನ ಕಣ್ಣ ನೋಡ್ರಿ, ಕಲಂಕ ಕಾಣಸತಾದ?

ಈರಪ್ಪ : ಕಾಣಸತಾದ, ಕಾಣಸತಾದ, ಕಲಂಕ ಕಾಣಸತಾದ, ತವರ ಮನಿಗಿ ಅಟ್ಟಿ ಕಲಂಕ ಕಳಕೋತೀನಿ.

ಗಂಗಾ : ನಿಮಗ ಕೈ ಮುಗಿತೀನಿ. ಕಾಲ ಹಿಡಿತೀನಿ, ಹೊರಗ ಹಾಕಬ್ಯಾಡ್ರಿ. ನಾಕ ಮಂದ್ಯಾಗ ನನ್ನ ಮಾನಾ ಹಾಳ ಮಾಡಬ್ಯಾಡರಿ, ನಿಮ್ಮ ಮನ್ಯಾಗ ಹೆಂನ್ತಿ ಆಗಿ ಅಲ್ಲ, ಆಳ ಆಗಿ ದುಡಿತೀನಿ, ಕಸಬರಿಗಿ ಆತಿ ಬದಕತೀನಿ, ಕಾಲ ಒರಸು ಅರಿವಿಯಾಗಿ ಬಿದ್ದಿರತೀನಿ.

ಈರಪ್ಪ : ಹಾದರಗಿತ್ತಿ, ಆ ಸಂಗ್ಯಾ ಮನ್ಯಾಗ ಬಿದ್ದಿರು, ಮನಿ ಮರ್ಯಾದಿ ಹಾಳ ಮಾಡದಿ (ಎಂದು ಬಯ್ಯುತ್ತ, ಅಡ್ಡಿಯ ನಡುವೆ ತಾಳಿ ಹರಿದುಕೊಳ್ಳುತ್ತಾನೆ).

ಗಂಗಾ : ಅಯ್ಯೋ, ನನ್ನ ತಾಳಿ ಕೊಡ್ರಿ, ತಾಳಿ ಕೊಡ್ರಿ, ನಿಮ್ಮ ಹೆಸರಿನ ಮ್ಯಾಲ ಅದನ್ನ ಕಟಗೊಂಡು ಮಂದಿಮನ್ಯಾಗ ಕಸ ಮುಸರಿ ಮಾಡಿ ಬದಕತೀನಿ, ಕೊಡ್ರಿ,

ಕೊಡ್ರಿ (ಇರಪಾಕ್ಷಿ, ಬಸವಂತ ಸಜ್ಜಾಗಿ ಹೆಗಲ ಮೇಲೆ ಬಾರಕೋಲ ಹಾಕಿಕೊಂಡು ಬರುತ್ತಾರೆ. ಈರಪ್ಪ ಅವಳನ್ನು ಹೊಸ್ತಿಲ ಹೊರಗೆ ಎಳೆಯುತ್ತಾನೆ).

ಗಂಗಾ : (ಮನೆಗೆ ಕೈಮುಗಿದು)

ಮೇಲ ಮಹಡಿಯ ಮನಿಯೇ
ಬೆಳ್ಳಿ ಬಂಗಾರ ಗಣಿಯೇ
ತೂಗು ಮಂಚದ ಗಾಳಿ
ಪಂಜರ ಅರಗಿಳಿ ಮನಿ ಮನಿಯೇ ನನ್ನ ಮನಿಯೇ॥

ಹಾಲ ಸಾಗರದಾಗ
ಹಂಸ ನಾನಾಗಿದ್ದೆ
ಹಾಡ ಹಗಲ ಮನಿ ಮನಿಯೇ ನನ್ನ ಮನಿಯೇ॥

ಹೋಗತೀನಿ ಏಳೆ ಕರುವೆ
ಹೋಗತೀನಿ ಗಿಣಿಮರಿಯೆ
ಹೋಗತೀನಿ ಹೊಸ್ತಿಲೆ
ಏಳಿಗಿ ಇರಲಿ ನಿನಗೆ ಮನಿ ಮನಿಯೆ ನನ್ನ ಮನಿಯೇ

(ಹೊಸ್ತಲಕ್ಕೆ ಹಣೆ ಹಚ್ಚುತ್ತಾಳೆ. ಈರಪ್ಪ ಎಳೆದುಕೊಂಡೇ ಹೋಗುತ್ತಾನೆ. ತಮ್ಮಂದಿರೂ ಹಿಂಬಾಲಿಸುತ್ತಾರೆ).

❖❖

ದೃಶ್ಯ - ೧೭

(ತೋಟ, ಈರಪ್ಪ ಕುಳಿತಿದ್ದಾನೆ. ಇರಪಾಕ್ಷಿ, ಬಸವಂತ ಬರುತ್ತಾರೆ).

ಈರಪ್ಪ : (ಎದ್ದು) ಬಸವಂತ, ಇರಪಾಕ್ಷಿ, ಯಾಕ ತಡ ಆಯ್ತು? ಏನು ಮಾಡಿದಿರಿ?

ಬಸವಂತ : ಮತ್ತೇನು ಮಾಡುದು? ಬಯಲವಾಡದ ಬೀಗರ ಮನಿ ಮುಂದ ಅತ್ತಿಗೆವ್ವನ ಇಳಿಸಿ ಬಂದೆವು.

ಇರಪಾಕ್ಷಿ : ಈಗ ನಮ್ಮ ಮನಿ ಕಳಂಕ ಹೋಯಿತು.

ಈರಪ್ಪ : ಏನು ಕಳಂಕ ಹೋಯಿತೋ, ಮರ್ಯಾದೆ ಹೋಯಿತೋ. ನಾ ಊರಾಗ ಮಾರಿ ತೋರಿಸಲಾರದೆ, ನಸಕಿನ್ಯಾಗೆ ಮನಿ ಬಿಟ್ಟು ತ್ವಾಟಕ್ಕ ಬಂದೀನಿ. ಮುಂದ ಏನ ಮಾಡೂದು?

ಬಸವಂತ : ಮಾಡೋದೇನು? ನಮ್ಮ ಮನಿ ಮರ್ಯಾದೆ ಎತ್ತಿ ಹಿಡಿಯೂದಂದ್ರ, ಸಂಗ್ಯಾನ ಕಡದು ಚರಗ ಚೆಲ್ಲೂದು.

ಈರಪ್ಪ : ವಿಶ್ವಸದ್ರೋಹಕ್ಕೆ ಇದೊಂದೇ ಉತ್ತರ. ಈ ಕೆಲಸ ಹ್ಯಾಂಗ ಪೂರೈಸೂದು?

ಇರಪಾಕ್ಷಿ : ಇದರಾಗ ಸಂಗ್ಯಾನ ಗೆಳೆಯ ಬಾಳಣ್ಣನ ಸಹಾಯ ಪಡೆಯಬೇಕು.

ಈರಪ್ಪ : ಹೌದು, ಅವನ ಕರಕೊಂಡು ಬಾ ಇರಪಾಕ್ಷಿ (ಹೋಗುತ್ತಾನೆ).

ಬಸವಂತ : ಅಣ್ಣಾ, ಬಾಳಣ್ಣ ನಮ್ಮ ಮಾತ ಕೇಳತಾನ?

ಈರಪ್ಪ : ಬಾಳಣ್ಣ ನನಗೂ ಗೆಳೆಯ, ನನ್ನ ಮಾತ ನಡೆಸಿ ಕೊಡತಾನ ಅಂತ ವಿಶ್ವಾಸ ಅದ.

ಬಸವಂತ : ಅಂದ ಹಾಂಗ ಏನು ಮಸಲತ್ತ ಮಾಡೋಣ?

ಈರಪ್ಪ : ಸಂಗ್ಯಾನ ಮರಡಿ ಬಸವಣ್ಣನ ಗುಡಿ ಹತ್ತ ಕರಕೊಂಡ ಬಾ ಅಂತ ಬಾಳಣ್ಣಗ ಹೇಳಬೇಕು. ಅಲ್ಲಿಗೆ ಬಂದ ಕೂಡಲೇ ಬಸವಣ್ಣನ ಸಾಕ್ಷಿಯಾಗಿ ಅವನ ತುಂಡ ಮಾಡಬೇಕು.

ಬಸವಂತ : ಆಮ್ಯಾಲ?

ಈರಪ್ಪ : ಅಮ್ಯಾಲೇನು? ಹೇಡಿಹಾಂಗ ಓಡಿಹೋಗಿ ಅಡಗಿಕೊಳ್ಳಬಾರದು. ಮೂವರು ಕೂಗಹಾಕುತ್ತ ಹೋಗಿ, ಸರಕಾರಕ್ಕೆ ಶರಣಾಗಬೇಕು. (ಅಷ್ಟರಲ್ಲಿ ಬಾಳಣ್ಣ, ಇರಪಾಕ್ಷಿ ಬರುತ್ತಾರೆ).

ಬಸವಂತ : ಬಾ ಬಾಳಣ್ಣ, ನಮ್ಮ ಮನಿ ಎಲ್ಲ ಮುರುದು ಹೋಯಿತು.

ಬಾಳಣ್ಣ : ಹೌದು, ನಾನೂ ಎಲ್ಲಾ ಕತಿ ಕೇಳಿದೆ. ಊರು ತುಂಬಾ ಸುದ್ದಿ ಆಗ್ಯಾದ. ಎಂಥಾ ಮನಿ ಹ್ಯಾಂಗ ಆಯಿತು. ಸಂಗಣ್ಣ ವಿಶ್ವಾಸದ್ರೋಹ ಮಾಡಬಾರದಿತ್ತು.

ಈರಪ್ಪ : ನಮ್ಮ ನಸೀಬ್ ಕೆಟ್ಟ ಅದ. ಏನ ಮಾಡೂದು? ಈಗ ಮನಿ ಮರ್ಯಾದಿ ಉಳಿಸಿಕೊಳ್ಳಲು ನೀನು ನಮಗೆ ನೆರವಾಗಬೇಕು.

ಬಾಳಣ್ಣ : ಏನು?

ಬಸವಂತ : ನೀನು, ಇಂದು ಸಂಜೆ, ಸಂಗ್ಯಾನ ಮರಡಿ ಬಸವಣ್ಣನ ಗುಡಿ ಕಡೆ ಕರಕೊಂಡು ಬರಬೇಕು.

ಬಾಳಣ್ಣ : ಏನು? ದೇವರ ಸಾಕ್ಷಿಯಾಗಿ ಚರ್ಚಿಸಿ, ಸತ್ಯ ಒರಿಗಿ ಹಚ್ಚತೀರೇನ?

ಇರಪಾಕ್ಷಿ : ಇಲ್ಲ ಅವನ ಕಡದು ಹೆಡಗಿ ತುಂಬತೀವಿ.

ಬಾಳಣ್ಣ : ದುಡಕಬ್ಯಾಡ್ರಿ, ವಿಚಾರ ಮಾಡಿರಿ.

ಈರಪ್ಪ : ತಾಳಿ ಹರಕೊಂಡ ಬಳಿಕ ವಿಚಾರ ಮಾಡೂದೇನು? (ಕಿಸೆಯಿಂದ ತೆಗೆದು ತೊರಿಸುತ್ತಾನೆ.)

ಬಾಳಣ್ಣ : ತಪ್ಪು ಮಾಡಿದಿರಿ. ತಪ್ಪ ಮಾಡಿದಿರಿ.

ಈರಪ್ಪ : ತಪ್ಪ ಮಾಡಿಲ್ಲ, ಮಾತ ಸಾಕು, ನೀನು ಅವನ್ನ ಕರಕೊಂಡ ಬರಬೇಕು.

ಬಾಳಣ್ಣ : ನಾನು ಗೆಳೆಯನಿಗೆ ವಿಶ್ವಾಸದ್ರೋಹ ಹ್ಯಾಂಗ ಮಾಡಲಿ?

ಈರಪ್ಪ : ನೋಡು, ಗೆಳೆಯನಾದ ನನಗೆ ನೀನ ಗತಿ, ಅವಮಾನ ನಿವಾರಿಸಿಕೊಳ್ಳಲು ನನಗ ನೆರವಾಗು, ಕೈಮುಗಿತೀನಿ (ಅಳುತ್ತ ಕೈಮುಗಿಯುತ್ತಾನೆ).

ಬಾಳಣ್ಣ : ಅಣ್ಣಾ, ನೀವು ಹೀರೇರು, ಕೈಮುಗಿಬಾರದು (ಎನ್ನುತ್ತ ಮುಗಿದ ಕೈ ಬಿಡಿಸುತ್ತಾನೆ).

ಬಸವಂತ : ನೀ ಕೊಲೆಯಂತೂ ಮಾಡೂದಿಲ್ಲ, ದೇವರ ಗುಡಿಗಿ ಕರಕೊಂಡು ಬರಬೇಕು, ಅಷ್ಟೇ,

ಬಾಳಣ್ಣ : (ಸ್ವಲ್ಪ ಯೋಚಿಸಿ) ಇದು ನನ್ನಿಂದ ಸಾಧ್ಯವಿಲ್ಲ.

ಈರಪ್ಪ : ನೀ ಸಹಾಯ ಮಾಡದಿದ್ದರೂ ನಾವು ಸಂಗ್ಯಾನ ಕೊಲ್ಲೂದು ನಿಶ್ಚಯ. ದ್ರೌಪದಿ ತುರಬ ಮುಟ್ಟಿದ ಮಾತ್ರಕ್ಕೆ ಭೀಮಸೇನ ದುಶ್ಯಾಸನ ಕೊಂದ, ನನ್ನ ಹೆಂಡ್ತಿ ಮೈ ಮೈಲಿಗಿಮಾಡಿದ ಸಂಗ್ಯಾನ ಕೊಲ್ಲದಿದ್ರ ನಾ ಬದುಕಿ ಏನ್ ಸಾರ್ಥಕ?

ಬಾಳಣ್ಣ : ನಾ ಬಡವ ನನ್ನ ಕೈಬಿಡಿರಿ.

ಈರಪ್ಪ : ನೀ ಬಡವ. ಈವರೆಗೆ ನಿನಗ ಬಹಳ ಸಹಾಯ ಮಾಡೀನಿ, ಮುಂದೂ ನನ್ನ ಸಹಾಯ ಕೇಳೂದು ನಿನಗ ಅನಿವಾರ್ಯ ಅದ. ಆಗ ನಾನು ದೂರ ಸರಿಯದಂತೆ ವಿಚಾರಿಸು.

ಬಾಳಣ್ಣ : ಬಡತನದಿಂದ ಸತ್ತರೂ ಚಿಂತೆಯಿಲ್ಲ. ವಿಸ್ವಾಸದ್ರೋಹ ಮಾಡಲಾರೆ.

ಈರಪ್ಪ : ನೀ ಮಾಡೂದು ವಿಶ್ವಾಸದ್ರೋಹ ಅಲ್ಲ, ವಿಶ್ವಾದ್ರೋಹಿಯನ್ನು ಶಿಕ್ಷಿಸಲು ನೆರವಾಗೂದು, ಸತ್ಯಕ್ಕೆ ಸಹಾಯ ಮಾಡೂದು. ಒಲ್ಲೆ ಅನಬ್ಯಾಡ, ಸತ್ಯ ಗೆದೆಯಲು ನೆರವಾಗೂದು ಮನುಷ್ಯನ ಕರ್ತವ್ಯ.

ಬಾಳಣ್ಣ : (ಮಂಡೆಯೂರಿ ಕುಳಿತು ಅಸಹಾಯಕತನದಿಂದ)

ಬಿಸಿ ತುಪ್ಪ ಗಂಟಲ ಒಳಗ ಒಳಗ
ನುಂಗಲಿ ಉಗಳಲಿ ಹ್ಯಾಂಗ?
ನುಂಗಲಿ ಉಗಳಲಿ ಹ್ಯಾಂಗ?॥

ಇಬ್ಬರ ಹಂಗಿನಾಗ ನನ್ನ ನನ್ನ
ಹುಟ್ಟಿಸಿದೆ ಯಾಕ ಬಡವನ್ನ?
ಹುಟ್ಟಿಸಿದೆ ಯಾಕ ಬಡವನ್ನ?॥

(ಮೌನ)

ಬಸವಂತ : ಮಾತಾಡು, ನೀನು ನಿರಪರಾಧಿಯ ಕೊಲೆಗೆ ಸಹಾಯ ಮಾಡುವುದಿಲ್ಲ. ಅಪರಾಧಿಗಿ, ದೊಡ್ಡ ಅಪರಾಧಿಗಿ ಶಿಕ್ಷಿಸಲು ನೆರವಾಗುತ್ತೀ.

ಇರಪಾಕ್ಷಿ : ನೀನೇನು ಕೈಮುಟ್ಟಿ ಕೊಲ್ಲುವುದಿಲ್ಲ. ಕೊಲ್ಲುವವರು ನಾವು. ಹೂಂ ಅನ್ನ, ಅನ್ನದಿದ್ದರೆ, ಸಂಗ್ಯಾ ಸತ್ತು, ನಮ್ಮ ಕೈಯಾಗ ನಿನ್ನ ಬದಕ ನರಕ ಆಗ್ತದ, ಹೂ. ಅನ್ನು,

ಈರಪ್ಪ : ಐದು ಏಕರೆ ತ್ವಾಟ ನಿನ್ನ ಹೆಸರಿಗಿ ಹಚ್ಚತೀನಿ.

ಬಾಳಣ್ಣ : (ತಡೆದು) ಯಾಕಾಗಲೊಲ್ಲದು, ಸಂಜಿಗಿ ಕರಕೊಂಡು ಬರತೀನಿ, (ಎಂದು ಹೇಳಿ, ಎದ್ದು ಬಾಳಣ್ಣ ಹೋಗುತ್ತಾನೆ).

ಈರಪ್ಪ : ಇರಪಾಕ್ಷಿ, ಗುಡಸಲದಾಗಿನ ಕೊಡ್ಲಿ ಕುಡ್ಗೋಲ ಬಡಿಗಿ ತಾ (ಇರಪಾಕ್ಷಿ ಹೋಗುವನು), ಬಸವಂತ, ಈ ಕೆಲಸದಾಗ ನಾವು ಹಿಂದ ಸರಿಬಾರದು, ಜನಾ ನಮ್ಮನ್ನ ನೋಡಿ ನಗತಾರ (ಅಷ್ಟರಲ್ಲಿ ಇರಪಾಕ್ಷಿ ಕೊಡ್ಲಿ, ಕುಡ್ಗೋಲ ಬಡಿಗಿ ತಂದು, ಅಣ್ಣನ ಮುಂದಿಡುವನು), ಇರಪಾಕ್ಷಿ ನೀ ಕುಡಗೋಲ ತೊಗೋ, ಬಸವಂತ ನೀ ಬಡಗಿ ತೊಗೋ, ನನಗೆ ಕೊಡಲಿ ಇರಲಿ, ನಡೀರಿ ಬಸವಣ್ಣನ ಗುಡಿ ಹತ್ತಿರ ಅಡಗೋಣ (ಹೋಗುವರು).

❖❖

ದೃಶ್ಯ - ೧೮

(ಮರಡಿ ಬಸವಣ್ಣನ ಗುಡಿ ಹಾದಿ ಹಿಡಿದು ಸಂಗಣ್ಣ ಬಾಳಣ್ಣ ನಡೆದಿದ್ದಾರೆ).

ಬಾಳಣ್ಣ : ಸಂಗಣ್ಣ ಇದೇನ ಮಾಡಿದಿ. ಇಡೀ ಊರ ಉಗುಳೋ ಕೆಲಸ ಮಾಡಿದಿ. ಸಾವಕಾರತಿ ಬಾಳೇವ ಹಾಳ ಮಾಡಿದಿ.

ಸಂಗಣ್ಣ : ಏನು ಬಾಳಣ್ಣ, ನಾ ಅಂಥ ಮನಸ್ಯಾ ಅಂತ ನಿನಗ ಅನಸ್ತದ.

ಬಾಳಣ್ಣ : ಅನಸೂದಿಲ್ಲ, ಇಷ್ಟ ವರ್ಷ ನಿನ್ನ ನಡತಿ ನೋಡೀನಿ. ಆದರ ನೀ ದಾರಿ ಬಿಟ್ಟಿ ಅಂತ ಅವರಿಗಿ ಖಾತ್ರಿ ಆಗ್ಯಾದ. ಊರಿಗಿ ಊರೇ ಇವತ್ತ ಮಾತಾಡ್ತದ.

ಸಂಗಣ್ಣ : ಮರಡಿ ಬಸವಣ್ಣನ ಪಾದ ಮುಟ್ಟಿ ಹೇಳತೀನಿ. ನಾನು ನಿರಪರಾಧಿ. ಗಂಗಾ ನನಗೆ ತಂಗಿ ಸಮಾನ.

ಬಾಳಣ್ಣ : ತಂಗಿ ಯಾಕ, ತಾಯಿ ಸಮಾನ ಅಂತ ನಡಕೊಂಡವ ನೀನಿ, ಆದರ ಇದೆಲ್ಲ ಹ್ಯಾಂಗ ಹುಟ್ಟಿತು? ಹ್ಯಾಂಗ ಬೆಳೀತು? ಯಾರು ಹುಟ್ಟಿಸಿದರು? ಯಾರು ಬೆಳೆಸಿದರು?

ಸಂಗಣ್ಣ : ನನಗೂ ಒಂದೂ ತಿಳೀತಿಲ್ಲ, ಸತ್ಯ ಒರೆಗೆ ಹಚ್ಚಲಿಕ್ಕೂ ಅವಕಾಶ ಸಿಗದಂಗ ಈರಪ್ಪ ದುಡುಕಿಬಿಟ್ಟ. ಆಕಿನ ತವರಿಗಿ ಅಟ್ಟಿದ. ಒಂದ ದಿನದಾಗ ಎಲ್ಲಾ ಮೂರಾಬಟ್ಟಿ ಮಾಡದ. ಸತ್ಯ ಸುಮ್ಮನಾಗು ಹಾಂಗ ಮಾಡದ.

ಈರಪ್ಪ : (ಓಡಿ ಬಂದು) ಬಸವಂತ, ಇರಪಾಕ್ಷಿ ಬರ್‍ರೋ, ಸಂಗ್ಯಾ ಹೋಂಟಾನ, ಬರ್‍ರೋ,

(ಬಸವಂತ, ಇರಪಾಕ್ಷಿ ದೀವಟಗಿ ಹಿಡಿದು, ಕುಡಗೋಲ ಬಡಿಗಿಯೊಂದಿಗೆ ಓಡಿ ಬರುತ್ತಾರೆ.)

ಗಡಾನ ಬರ್ಯೊ ತಮ್ಮ ಗಳೀರಾ ಸಂಗ್ಯಾ ಪೋಗುವ।
ಕತ್ತಲಯಾಳೆ ತಪ್ಪಿಸಿಕೊಂಡು ಊರ ಸೇರುವ॥
ತಡವು ಯಾಕ ಮುಂಡೀ ಮಗನ ಚಂಡಕೊಯ್ಯುವಾ
ಕಾಲ ಮೀಟಿ ಸೀಳಿ ಅವನ ಚೆಲ್ಲಿ ಪೋಗುವಾ॥

(ಎಂದು ಹಾಡುತ್ತ ಸಂಗಣ್ಣನ್ನು ಹಿಡಿಯುತ್ತಾರೆ. ಬಾಳಣ್ಣ ಓಡಿ ಹೋಗುತ್ತಾನೆ)

ಸಂಗಣ್ಣ : ಈರಪ್ಪಣ್ಣ ಕೇಳ್ರಿ ನನ್ ಮಾತಾ
ಯಾರೋ ಮಾಡ್ಯಾರೊ ಮಸಲತ್ತು॥

ಸುಳ್ಳ ಸುದ್ದಿ ಹುಟ್ಟಿಸ್ಯಾರ ನನ್ನ ಸುತ್ತ
ಗಂಗಾ ನನ್ನ ತಂಗಿ ದೇವರ್ಗಿ ಗೊತ್ತು॥
ನಿಮ್ಮ ಮೂವರೊಳಗ ನಾನೊಬ್ಬ ಸಣ್ಣ ತಮ್ಮ
ಕೊಲ್ಲಬ್ಯಾಡೋ ಈರಪ್ಪಣ್ಣ ಕೇಳಿರಿ ಮಾತಾ॥

ಈರಪ್ಪಣ್ಣ ನಾ ನಿರಪರಾಧಿ. ಗಂಗಾ ನನಗ ತಂಗಿ, ಸಮಾನ, ತಾಯಿ ಸಮಾನ, ನೀವು ತಪ್ಪ ತಿಳಿದೀರಿ.

ಈರಪ್ಪ : ವಿಶ್ವಾಸದ್ರೋಹಿ, ನಿನ್ನ ಬಣ್ಣದ ಮಾತ ನಾವ್ ಕೇಳೂದಿಲ್ಲ, ತಂಗಿ ಅಂತ, ತಾಯಿ ಅಂತ, ನಿನ್ನ ರುಂಡ ಕಡಿಯದ ಹೊರ್ತು ನನಗ ಸಮಾಧಾನ ಇಲ್ಲ.

ಬಸವಂತ : ನಿನ್ನ ಕಾಲ ಕಡಿಯದ ಹೊರ್ತು ನನಗ ಸಮಾಧಾನ ಇಲ್ಲ.

ಇರಪಾಕ್ಷಿ : ನಿನ್ನ ಕೈ ಕಡಿಯದ ಹೊರ್ತು ನನಗ ಸಮಾಧಾನ ಇಲ್ಲ.

ಸಂಗಣ್ಣ : ಸಣ್ಣ ತಂಗಿ ಗಂಗಾಗ ಅನ್ಯಾಯ ಮಾಡಿದಿರಿ. ನನ್ನನ್ನು ಸಮಾಜದಲ್ಲಿ ಅಪರಾಧಿಯೆಂದು ಸಿದ್ದಮಾಡಲಿಕ್ಕೆ ಹೊರಟಿರುವಿರಿ.

ಈರಪ್ಪ : ನಿನ್ನ ಪುರಾಣ ಬಿಚ್ಚಾಬ್ಯಾಡ (ಕೆಳಗೆ ನೂಕಿ, ಕೊಡಲಿ ಎತ್ತುತ್ತಾನೆ).

ಸಂಗಣ್ಣ : (ಬಿದ್ದು, ಕೊಡಲಿ ನೋಡುತ್ತ) ನನ್ನನ್ನು ಕೊಲ್ಲರಿ, ಆದರ ಗಂಗಾನ್ನ ದಿಕ್ಕೇಡಿ ಮಾಡಬ್ಯಾಡರಿ. ಕೈ ಮುಗೀತೀನಿ, ಗಂಗಾನ್ನ ದಿಕ್ಕೇಡಿ ಮಾಡಬ್ಯಾಡರಿ, ಮರಡಿ ಬಸವಣ್ಣನ ಮುಟ್ಟಿ ಆಣಿ ಮಾಡಿ ಹೇಳ್ತಿನಿ ಅಲ್ಲಿಗೆ ಬರ್ರಿ, (ಎನ್ನತ್ತ ಕೊಸರಿಕೊಂಡು ಓಡುವನು, ಅಣ್ಣತಮ್ಮಂದಿರು ಬೆನ್ನುಹತ್ತುವರು, ದೇವರನ್ನು ಮುಟ್ಟಿ) ಬಸವಣ್ಣಾ, ನಿನ್ನ ಆಣಿಮಾಡಿ ಹೇಳ್ತೀನಿ, ನಾ ತಪ್ಪು ಮಾಡಿಲ್ಲ...

ಮೂವರೂ : (ಸಂಗ್ಯಾನ ಎಳೆದು) ಈ ನಾಟಕ ಮಾಡಿದರ ಬಿಡತಾರಂತ ಮಾಡಿಯೇನು?
ಸಂಗ್ಯಾ ಗಂಗಿ
ಕರದಾಳೋ ಹೀಂಗ ನಡೀ ನಡೀ।
ಕಾಲ ಹಿಡದ
ಕಂಟ್ಯಾಗ ಇವನ ಎಳೀ ಎಳೀ।
ಒತ್ತಿ ಹಿಡದ
ಇವರ ಶಿರ ಹರೀ ಹರೀ।

(ಎನ್ನುತ್ತ ಕೈ ಕಾಲು ರುಂಡ ಕಡಿಯುತ್ತಾರೆ. ಗದ್ದಲ, ಕೂಗುತ್ತ ಹೋಗುತ್ತಾರೆ).

❖❖

ದೃಶ್ಯ – ೧೯

(ಪತ್ತಾರನ ಮನೆ, ಪತ್ತಾರನಿಂದ ಗಣಪತಿ ಪೂಜೆ, ಪರವ್ವ ಬರುತ್ತಾಳೆ)

ಪರವ್ವ : ಪತ್ತಾರಣ್ಣಾ, ಪತ್ತಾರಣ್ಣಾ.

ಪತ್ತಾರ : ಏನ ಪಾರವ್ವ?

ಪಾರವ್ವ : ಕೊನೆಗೂ ನೀನ ಗೆದ್ದಿ. ೧೫ ದಿನಾ ಆಯ್ತು. ಹುಡಕೇ ಹುಡುಕಿದೆ. ನೀ ಸಿಗಲಿಲ್ಲ. ಎಲ್ಲಿಗಿ ಹೋಗಿದ್ದಿ? ಸುದ್ದಿ ಗೊತ್ತಾಯ್ತು? ಈರಪ್ಪ, ಸಾವಕಾರ್ತಿನ್ನ ತವರಮನಿಗಿ ಅಟ್ಟಿದ. ಮೂವರು ಅಣ್ಣತಮ್ಮಂದಿರು ಸಂಗಣ್ಣನು ಕೊಂದ್ರು. ಕೂಗ ಹಾಕ್ತಾ ಕಛೇರಿಗೆ ಹೋಗಿ, ಸಂಗಣ್ಣನ ಕೊಂದೀವಿ ಅಂತ ಸಾರಿ ಹೇಳಿದರು. ಇಂಗ್ರೇಜಿ ಸಾಹೇಬರು ಕ್ರಿಸ್ತಿ ಜಾತಿಗಿ ಸೇರಿದರ ಕ್ಷಮಿಸತೀವಿ ಅಂದ್ರು, ಜೀವಕ್ಕೆ ಅಂಜಿ ಬಸವಂತ ಇರಪಾಕ್ಷಿ ಕ್ರಿಸ್ತ ಜಾತಿಗೆ ಸೇರಿದರು. ಈರಪ್ಪ ಒಪ್ಪಲಿಲ್ಲ. ಅವಗ ಗಲ್ಲಿಗೇರಿಸಿದರು.

ಪತ್ತಾರ : ಕೇಳೀನಿ. ಕೇಳೀನಿ (ಕಿವಿ ಮುಚ್ಚಿಗೊಂಡು) ಎಲ್ಲ ಕತಿ ಕೇಳಿನಿ. ಗಂಗಿನ್ನ ತವರಮನಿಗಿ ಅಟ್ಟಿದ ದಿನಾನೇ ನನ್ನ ಮ್ಯಾಲ ಸಂಶಯ ಬರಬಾರದು ಅಂತ ಊರ ಬಿಟ್ಟಿದ್ದೆ. ಎಲ್ಲ ಮುಗದು ಊರ ಶಾಂತ ಆದ ಸುದ್ದಿ ಕೇಳಿ ಇವತ್ತ ಮುಂಜಾನೆ ಇಲ್ಲಿಗಿ ಬಂದೆ. ನಮ್ಮಿಬ್ಬರ ಈ ತಂತ್ರ ಬಯಲು ಮಾಡಬ್ಯಾಡ. ಹಿಡಿ ನಿನ್ನ ಬಂಗಾರ, (ಬಂಗಾರ ತೆಗೆದುಕೊಂಡು ಪರವ್ವ ಹೋಗುತ್ತಾಳೆ. ಪತ್ತಾರ ಗಣಪತಿಮೋಟೋ ಇತ್ಯಾದಿ ಸಜ್ಜು ಮಾಡಿಕೊಳ್ಳುತ್ತಾನೆ).

ನಾ ಅಂದ್ರ, ನನ್ನ ತಂತ್ರ ಅಂದ್ರ, ಶಕುನಿಗಿಂತ ಮಿಗಿಲು, ನನ್ನ ಛಲ ಅಂದ್ರ ದುರ್ಯೋಧನನಿಗಿಂತ ದೊಡ್ಡದು, ಗಂಗಿ, ಗಂಗಿ ಪಾಲಾದಳೂ. ಇವಳ ಮ್ಯಾಲ ಸೇಡ ಇನ್ನೂ ಆರಿಲ್ಲ. ಗಣಪತಿ ನನಗ ಒಲಿದಾನ. ಅವನ ಬಲದಿಂದ ಸಂಗ್ಯಾ–ಗಂಗಿ ಸುಳ್ಳ ಹಾದರ ಕಲ್ಪಿಸಿ, ಇವಳ ಮ್ಯಾಲ ಬೇನಾಮಿ ಸಂಗ್ಯಾ–ಬಾಳ್ಯಾ ಆಟಾ ಬರೀತೀನಿ. ಸೂರ್ಯ ಚಂದ್ರ ಇರೂ ತನಕ ಗಂಗಿ ಮಾನ ಕಳೀತೀನಿ. ಆಮ್ಯಾಲ ಈ ಊರ ಬಿಟ್ಟು ಬನ್ನಿಕೊಪ್ಪಕ್ಕ ಹೋಗತೀನಿ. ಈಗ ಅಂತೂ ಆಟ ಬರೀತೀನಿ. ...... (ಕಿವಿಯ ಮೇಲಿನ ಲೆಕ್ಕಣಿಕೆ ಕೈಯಲ್ಲಿ ಹಿಡಿದು ಬರೆಯತೊಡಗುವನು).

ಗಣಾಧಿಪತಯೇ ನಮಃ ನಿರ್ವಿಘ್ನಮಸ್ತು ಸಂಗ್ಯಾ ಬಾಳ್ಯಾ ಸಣ್ಣಾಟ ಬರುವುದಕ್ಕೆ ಶುಭಮಸ್ತು ಸಂತೋಷಮಸ್ತು.

ಗಜವದನಾ ನಿಮ್ಮ ಧ್ಯಾನ ಮಾಡುವೆ ನಾವಾ

ಕೂಡಿದ ಜನ ಗಲ್ ಗಲ್ ಮಾಡಬ್ಯಾಡ್ರಿ ಗುಲ್ಲ

ಸಾಹಸ ಮಾಡಿ ಒಪ್ಪಿಸೋ ಬಾಳ್ಯಾ ಆಕಿ ಮನಸ

ಏನ ಮಾಡತಿದ್ದಾಳಪ್ಪ ಗಂಗಿ ಒಳಗ

ಇರಪಾಕ್ಷಿ ಬಸವಂತ ಕಡಿಯಿರಿ ಬೇಗ ಸಂಗ್ಯಾ ಸಿಕ್ಕಾನ ಕೈಯಾಗ

(ಹೀಗೆ ಗುಣಗುಣಿಸುತ್ತ ಬರೆಯುತ್ತ– ಪುಟ ತಿರುವುತ್ತ ಸಂಗ್ಯಾ ಬಾಳ್ಯಾ ಸಣ್ಣಾಟ ಸಮಾಪ್ತಂ ಎಂದು ನುಡಿದು ವಹಿ ಕಟ್ಟುತ್ತಲಿರುವಾಗಲೇ ಕೆಡಸಬ್ಯಾಡರಿ ಕಾಗದ ಗರತಿಯ ಹಾಡು ಜೋರಾಗಿ ಕೇಳಿಸುತ್ತದೆ. ಮುದುಕ ಬರುತ್ತಾನೆ).

ಮುದುಕ : ಏ, ಭಾಗವತ ಏ, ಭಾಗವತ.

ಭಾಗವತ : ಏನ ಮುದುಕಪ್ಪ?

ಮುದುಕ : ನೋಡು, ಗಂಗಾ ದಕ್ಕಲಿಲ್ಲ ಅಂತ ಅಕಿ ಮ್ಯಾಲ ಹಾದರ ಹರಲಿ ಹೊರಿಸಿ, ಪತ್ತಾರ ಮಾಸ್ತರ ಈ ಸುಳ್ಳ ಆಡ ಬರದ, ಇದನ್ನು ಜನ ನಂಬಿ ಈ ವರೆಗೆ ಆಡತ ಬಂತು. ಇನ್ನ ಮ್ಯಾಲ ಈ ಸುಳ್ಳ ಸಂಗ್ಯಾ-ಬಾಳ್ಯಾ ಆಟ ಬಂದ ಮಾಡ್ರಿ, ನಾ ಹೇಳಿದ ಖರೇ ಖರೇ ಸಂಗ್ಯಾ ಬಾಳ್ಯಾ ಆಟ ಆಡ್ತಾ ಹೋಗಿರ (ಎನ್ನುತ್ತಲೇ ಕೆಡಸ ಬ್ಯಾಡರಿ ಕಾಗದ ಗರತಿಯ ಹಾಡಿನೊಂದಿಗೆ ಆಟ ಮುಕ್ತಾಯವಾಗುತ್ತವೆ).

❖❖

ಖರೇ ಖರೇ ಕಿತ್ತೂರು ಬಂಡಾಯ

[ನಾಟಕ]

ಡಾ. ಎಂ. ಎಂ. ಕಲಬುರ್ಗಿ

೨೦೧೬

ಸಂವಹನ
೧೨/ಎ. ಈವ್ನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು-೫೭೦೦೦೧

*

ಅರಿಕೆ

ಡಾ. ಎಂ. ಎಂ. ಕಲಬುರ್ಗಿ

ಕನ್ನಡಿಗರಲ್ಲಿ ಇತಿಹಾಸಪ್ರಜ್ಞೆಗಿಂತ ಪುರಾಣಪ್ರಜ್ಞೆ ಅಧಿಕ. ಈ ಕಾರಣದಿಂದಾಗಿ ಇವರ ಬರವಣಿಗೆ ಕಥಾನಾಯಕನನ್ನು ಉತ್ಪ್ರೇಕ್ಷಿಸುವ, ಪ್ರತಿನಾಯಕನನ್ನು ಉಪೇಕ್ಷಿಸುವ ಹಾದಿ ಹಿಡಿಯಿತು. ಇದಕ್ಕೆ ಕಿತ್ತೂರು ಮೊದಲಾದ ಸಂಸ್ಥಾನಗಳ ಚರಿತ್ರೆ ಅಪವಾದವೇನಲ್ಲ.

ಕಿತ್ತೂರು ಕಾಳಗ ನಮ್ಮ ನಾಡಿನಲ್ಲಿ ಜರುಗಿದ ಒಂದು ದೊಡ್ಡ ದುರಂತ. ಇದರ ನಿಜಚರಿತ್ರೆಗೆ ಆಕರಗಳೆಂದರೆ ಆ ಸಂದರ್ಭದಲ್ಲಿ ಸಂಸ್ಥಾನ-ಸರಕಾರಗಳ ನಡುವೆ ಜರುಗಿದ ಪತ್ರೋತ್ತರಗಳು. ಇವು ದೂರದ ಪುಣೆ-ಮುಂಬೈ-ಲಂಡನ್ ನಗರಗಳಲ್ಲಿವೆ; ಅಪರಿಚಿತ ಮೋಡಿಲಿಪಿ-ಇಂಗ್ಲಿಷ್ ಭಾಷೆಗಳಲ್ಲಿವೆ. ಈ ಎರಡು ತೊಂದರೆಗಳಿಂದಾಗಿ ಇತಿಹಾಸಕಾರರು ಈ ಆಕರಗಳನ್ನು ಭಾಗಶಃ ಬಳಸಿಕೊಂಡರು. ಇದರಿಂದಾಗಿ ಈ ಕಾಳಗದ ಬಗ್ಗೆ ಇವರು ಬರೆದುದು ಅಸ್ಪಷ್ಟ ಇತಿಹಾಸವೆನಿಸಿದೆ.

ಈ ಸಂಸ್ಥಾನದ ಆಸ್ಥಾನಕವಿಗಳ ಶಿಷ್ಟ ಬರವಣಿಗೆಯಲ್ಲಿ ಪ್ರಶಂಸೆಯ ಪಾಲು ಅಧಿಕವಾಗಿದೆ. ಇದೇ ರೀತಿ ತಮ್ಮ ಸಂಸ್ಥಾನದ ಅಭಿವ್ಯಕ್ತಿ ಕಾರಣವಾಗಿ, ಸಹಜವಾಗಿಯೇ ಆಂಗ್ಲರ, ಕಿತ್ತೂರಿನವರ ಕಪ್ಪು-ಬಿಳುಪಿನ ಚಿತ್ರ ಆ ಪ್ರದೇಶದ ಜನಪದ ಸಾಹಿತ್ಯದಲ್ಲಿ ಮೂಡಿರುವ ಸಾಧ್ಯತೆಯಿದೆ. ಆದುದರಿಂದ ಸ್ಥಳೀಯ ಈ ಶಿಷ್ಟ ಮತ್ತು ಜಾನಪದ ಆಕರಗಳನ್ನು ಬದಿಗಿಟ್ಟು, ಇಂಗ್ಲಿಷ್ ವಿದ್ವಾಂಸ ಎಲಿಯಟ್ ಬರೆದ "The insurrection of kittur 1824" ಹೆಸರಿನ ಪತ್ಯವನ್ನು ಇಲ್ಲಿ ಆಧರಿಸಲಾಗಿದೆ. 'Miscellaneous Notes of Walter Ellito'ಕೃತಿಯ (ಪು. ೬೩-೭೭) ಎರಡನೆಯ ಪ್ರಕರಣವಿದು. ಲಂಡನ್ನಿನ ಬ್ರಿಟಿಷ್ ಮ್ಯೂಜಿಯಂದಲ್ಲಿರುವ ಇದನ್ನು ಬಹಳ ದಿನಗಳ ಪ್ರಯತ್ನದ ಬಳಿಕ ದೊರಕಿಸಿಕೊಂಡು, ಇಲ್ಲಿ ಬಳಸಿಕೊಂಡಿದ್ದೇವೆ.

ಧಾರವಾಡ ಜಿಲ್ಲೆಯ ಕಲೆಕ್ಟರ್ ಥ್ಯಾಕರೆನ ಕೈಕೆಳಗೆ ಅಧಿಕಾರಿಯಾಗಿದ್ದ ಸರ್ ವಾಲ್ಟರ್ ಎಲಿಯಟ್ ಯುದ್ಧಪೂರ್ವಕಾಲದಿಂದಲೂ ಕಿತ್ತೂರು ಸಂಸ್ಥಾನದ ಸಂಪರ್ಕ ಹೊಂದಿದ್ದನು. ಶಿವಲಿಂಗರುದ್ರ ಸರ್ಜನ ಮರಣದ ಬಳಿಕ ಕಿತ್ತೂರ ಗ್ರಾಮದಲ್ಲಿಯೇ ಉಳಿದು ಈ ಸಂಸ್ಥಾನದ ಆಡಳಿತವನ್ನು ನಿರ್ವಹಿಸಿದವನಾಗಿದ್ದನು. ಆಮೇಲೆ ಜರುಗಿದ ದಿವಾನ ಮಲ್ಲಪ್ಪನನ್ನು ಈ ಪತ್ಯ "Kunur Mallappa, the person most trusted and favoured by the late Desai"ಎನ್ನುತ್ತ, ಇಂದು ಚಿತ್ರತನಾಗಿರುವಂತೆ ಇವನು ಪಿತೂರಿಗಾರನಲ್ಲ; ಪ್ರಭುವಿನ ಪರಮವಿಶ್ವಾಸಿ ಮತ್ತು ಪ್ರೀತಿಪಾತ್ರನೆಂದು ಸೂಚಿಸಿದೆ. ದಿವಾನನಾಗಿದ್ದ ಇವನು ಯಾವುದೋ ಕಾರಣಕ್ಕಾಗಿ ಅವರಾದಿ ವೀರಪ್ಪನ ಗ್ರಾಮೀಣ

ಸೈನ್ಯಾಧಿಕಾರಿ ಹುದ್ದೆಯನ್ನು ಮೊಟಕುಗೊಳಿಸಿದ್ದನು. ಈ ಅತೃಪ್ತಿ ಕಾರಣವಾಗಿ ಅವರಾದಿ ವೀರಪ್ಪನು "came secretly to Dharwar and informed Mr. Theckery, that the Desai had died the day before the visit of the sardars, that the letter, adoption etc were inventions of Kunur Mallappa"ಅಂದರೆ ರಹಸ್ಯವಾಗಿ ಧಾರವಾಡಕ್ಕೆ ಬಂದು, ದತ್ತಕಪತ್ರ ಕೃತಕವಾದುದೆಂದೂ ಇದನ್ನು ಸಿದ್ಧಪಡಿಸಿದವನು ದಿವಾನ ಕುನ್ನೂರ ಮಲ್ಲಪ್ಪನೆಂದೂ ಥ್ಯಾಕರೆಗೆ ಹೇಳಿದ ಪಿತೂರಿಗಾರ ಅವರಾದಿ ವೀರಪ್ಪನೆಂದು ಎಲಿಯಟ್ ದಾಖಲಿಸಿದ್ದಾನೆ. ಥ್ಯಾಕರೆನನ್ನು ಕೊಂದದಿವಸ ಮಧ್ಯಾಹ್ನ"Auradi Virappa, the chif of the katak or shetsanadi militia, had caused kunur mallappa, the late Diwan, to be murdered" ಎಂದು ಹೇಳುತ್ತ, ಕುನ್ನೂರು ಮಲ್ಲಪ್ಪನನ್ನು ಈಗ ಪ್ರಚಲಿತವಿರುವಂತೆ ಬ್ರಿಟಿಶ್ ಸರಕಾರ ಪಿತೂರಿಗಾಗಿ ಮರಣಶಿಕ್ಷೆ ವಿಧಿಸಿಲ್ಲ. (ವೈಯಕ್ತಿಕ ದ್ವೇಷದಿಂದ) ಅವರಾದಿ ವೀರಪ್ಪ ಕೊಲ್ಲಿಸಿದನೆಂದು ಬರೆದಿದ್ದಾನೆ.

ಎರಡನೆಯ ಯುದ್ಧದಲ್ಲಿ ಸೋತ ಕಿತ್ತೂರಿನವರ ವಿಷಯವಾಗಿ ಬ್ರಿಟಿಷ್ ಸರಕಾರವು "Liberal terms were granted to all except Auradi Virappa, who was tried and sentenced to transportation for life" ಎಂದು ಹೇಳುವ ಮೂಲಕ ಕಿತ್ತೂರಿನ ಮಿಕ್ಕ ಸೆರೆಯಾಳುಗಳ ಬಗ್ಗೆ ಔದಾರ್ಯದಿಂದ ನಡೆದುಕೊಂಡ ಬ್ರಿಟಿಷರು ಅವರಾದಿ ವೀರಪ್ಪನನ್ನು ಮಾತ್ರ ವಿಚಾರಣೆಗೆ ಗುರಿಪಡಿಸಿ, ಅಜೀವಪರ್ಯಂತ ಗಡಿಪಾರು ಮಾಡಿದರೆಂದು ಎಲಿಯಟ್ ತಿಳಿಸಿದ್ದಾನೆ. ಅಷ್ಟೇ ಏಕೆ ಈ ಬಂಡಾಯದಲ್ಲಿ ಭಾಗವಹಿಸಿದ ಮುಖ್ಯರಲ್ಲೊಬ್ಬನಾದ "This Virappa was a rough violent man" ಅಂದರೆ ಇವನು ಒರಟ ಕ್ರೂರ ಮನುಷ್ಯನೆಂದು ಹೇಳಿದ್ದಾನೆ.

ಒಟ್ಟಾರೆ, ಶಿವಲಿಂಗರುದ್ರಸರ್ಜನ ದತ್ತಕಪತ್ರ ಕೃತಕವೆಂದು ಬ್ರಿಟಿಷರಿಗೆ ರಹಸ್ಯವಾಗಿ ತಿಳಿಸಿದವನೀತ. ಮೊದಲನೆಯ ಯುದ್ಧದ ಕೊನೆಯ ದಿನ ದಿವಾನ ಮಲ್ಲಪ್ಪನ ಮರಣಕ್ಕೆ ಕಾರಣನಾದವನೀತ. ಎರಡನೆಯ ಯುದ್ಧದಲ್ಲಿ ಸೋತ ಕಿತ್ತೂರಿನ ಅಧಿಕಾರಿಗಳನ್ನು ಔದಾರ್ಯದಿಂದ ನೋಡಿದ ಬ್ರಿಟಿಷರಿಂದ ಆಜೀವ ಗಡಿಪಾರು ಶಿಕ್ಷೆಗೆ ಗುರಿಯಾದವನೀತ. ಈ ಎಲ್ಲ ವಿವರಗಳು, ಅವರಾದಿ ವೀರಪ್ಪನೇ ಈ ಸಂದರ್ಭದ ಪಿತೂರಿಗಾರನಾಗಿರಬಹುದೆಂದು ಧ್ವನಿಸುತ್ತವೆ. ಈ ಧ್ವನಿಯ ದೃಶ್ಯರೂಪಕವಾಗಿದೆ ಈ ನಾಟಕ.

ಕಿತ್ತೂರು ಸಂಸ್ಥಾನವನ್ನು ಕುರಿತು ಶ್ರೀ ವೀರಭದ್ರಯ್ಯ ಗದಿಗಯ್ಯ ಪಾಟೀಲರು ೧೯೫೪ ರಲ್ಲಿ ಬರೆದ 'ಕಿತ್ತೂರು ಚೆನ್ನಮ್ಮ' ಪುಸ್ತಕದ ಆಧಾರದಿಂದ ಈ ನಾಟಕದ ಕೊನೆಯ 'ಪುಣೆಯ ಪ್ರಸಂಗ' ದೃಶ್ಯವನ್ನು ಇಲ್ಲಿ ರೂಪಿಸಲಾಗಿದೆ.

ಘಟಿತ ಇತಿಹಾಸವು ಕಲ್ಪಿತ ಸೃಜನಕ್ಕೆ ಹೊರಳುವಾಗ ಮೂಲಸತ್ಯಕ್ಕೆ ಚ್ಯುತಿ ಬರದಂತೆ ಎಚ್ಚರವಹಿಸಬೇಕಾಗುತ್ತದೆ. ಈ ಎಚ್ಚರಿಕೆಯಿಂದ ನಾಟಕದಲ್ಲಿ ಕೆಲವು ಹೊಸ ದೃಶ್ಯಗಳನ್ನು ಕಲ್ಪಿಸಲಾಗಿದೆ. ಹೀಗಿದ್ದೂ ಇದು ಸುಳ್ಳು ಇತಿಹಾಸಕ್ಕೆ ಬದಲು, ಸತ್ಯ ಇತಿಹಾಸವನ್ನು ಸ್ಪಷ್ಟಪಡಿಸುವ ಸಂಶೋಧನನಿಷ್ಠ ನಾಟಕವಾಗಿ ಬೆಳೆದಿದೆ.

* * *

–ಡಾ. ಎಂ. ಎಂ. ಕಲಬುರ್ಗಿ

ಈ ನಾಟಕದ ಕರಡು ತಿದ್ದುವಲ್ಲಿ ಸಹಾಯ ನೀಡಿದ ಡಾ. ಬಾಳಣ್ಣ ಶೀಗೀಹಳ್ಳಿ ಅವರಿಗೆ ವಂದನೆಗಳು.

ಈ ಪುಸ್ತಕವನ್ನು ಪ್ರಕಟಿಸಿದ ಶ್ರೀ ಡಿ.ಎನ್. ಲೋಕಪ್ಪ ಹಾಗೂ ಸಂವಹನ ಪ್ರಕಾಶಕರು, ಮೈಸೂರು ಅವರಿಗೆ, ಅಂದವಾಗಿ ಮುಖಪುಟ ವಿನ್ಯಾಸಗೊಳಿಸಿದ ಶ್ರೀಮತಿ ಭಾರತಿ, ಮುದ್ರಣ ಮಾಡಿದ ಶ್ರೀ ರಾಜೇಶ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಮಾಲೀಕರಾದ ಶ್ರೀ ಡಿ.ಎನ್. ಲೋಕಪ್ಪ, ಮೈಸೂರು ಅವರಿಗೆ, ಅಕ್ಷರ ಜೋಡಣೆ ಮಾಡಿದ ಎಚ್.ಎಸ್. ಮೇಲಿನಮನಿ ಅವರಿಗೂ ವಂದನೆಗಳು.

–ಶ್ರೀಮತಿ ಉಮಾದೇವಿ ಎಂ. ಕಲಬುರ್ಗಿ

❖❖

ಪಾತ್ರಗಳು

ಚೆನ್ನಮ್ಮ

ವೀರಮ್ಮ

ಶಿವಲಿಂಗರುದ್ರಸರ್ಜ

ಕುನ್ನೂರ ಮಲ್ಲಪ್ಪ

ಗುರುಸಿದ್ಧಪ್ಪ

ಅವರಾದಿ ವೀರಪ್ಪ

ವೈದ್ಯ

ಥ್ಯಾಕರೆ

ಚಾಪ್ಲಿನ್

ಎಲಿಯಟ್

ಸ್ಟೀವನ್‌ಸನ್

ಕುನ್ನೂರ ವೀರಪ್ಪ

ವೆಂಕಟರಾವ

ಬ್ಲ್ಯಾಕ್

ಸೇವಕ

ಸಂಸ್ಥಾನದವರು-೧

ಸಂಸ್ಥಾನದವರು-೨

ಸೈನಿಕರು

ಜನರು

I

(ಶಿವಲಿಂಗರುದ್ರಸರ್ಜ ಅನಾರೋಗ್ಯದಿಂದ ಹಾಸಿಗೆಯಲ್ಲಿ ನರಳುತ್ತಿದ್ದಾನೆ. ಸುತ್ತಲೂ ಚೆನ್ನಮ್ಮ, ವೀರಮ್ಮ, ದಿವಾನ ಕುನ್ನೂರು ಮಲ್ಲಪ್ಪ ಕುಳಿತಿದ್ದಾರೆ. ಗುರುಸಿದ್ಧಪ್ಪ, ಅವರಾದಿ ವೀರಪ್ಪ ನಿಂತಿದ್ದಾರೆ).

ಶಿವಲಿಂಗರುದ್ರಸರ್ಜ : ದಿವಾನರೇ, ಈ ರೋಗ ದಿನೇ ದಿನೇ ಉಲ್ಬಣಿಸುತ್ತಿದೆ. ಯಾವ ಔಷಧೋಪಚಾರಗಳಿಂದಲೂ ಶಮನವಾಗುವ ಲಕ್ಷಣ ಕಾಣುತ್ತಿಲ್ಲ.

ಮಲ್ಲಪ್ಪ : ಹಾಗೆನ್ನಬೇಡಿ ಪ್ರಭುಗಳೇ. ಜೀವವನ್ನಾದರೂ ಒತ್ತೆಯಿಟ್ಟು ನಿಮ್ಮನ್ನು ಉಳಿಸಿಕೊಳ್ಳಲು ನಾವೆಲ್ಲ ಸಿದ್ಧರಿದ್ದೇವೆ. ಈ ದೇಶಗತಿಯ ಮೇಲೆ ದೇವರ ಕೃಪೆಯಿದೆ.

ಶಿವಲಿಂಗರುದ್ರಸರ್ಜ: ನೀವು ಹೇಳುವುದು ನಿಜ. ಆದರೆ ಇತ್ತೀಚೆ ನನಗೆ ಈ ಮಾತಿನಲ್ಲಿ ವಿಶ್ವಾಸ ಉಳಿಯುತ್ತಿಲ್ಲ. ನಮ್ಮ ಹಿರಿಯರು ಸಗರ ನಾಡಿನಿಂದ ಸೈನ್ಯದ ಅವಶ್ಯಕತೆ ಪೂರೈಸುವ ವ್ಯಾಪಾರಕ್ಕಾಗಿ ಬಂದು, ಆದಿಲ್ ಶಾಹಿಗಳ ಅನುಮತಿಯಂತೆ ಇಲ್ಲಿ ರಾಜ್ಯ ಕಟ್ಟಿದರು. ಸುತ್ತಲಿನ ರಾಜರ-ಪ್ರಜೆಗಳ ವಿಶ್ವಾಸವನ್ನೇ ಮೂಲಧನವನ್ನಾಗಿ ಮಾಡಿಕೊಂಡು, ೨೫೦ ವರ್ಷ ಈ ದೇಶಗತಿಯನ್ನು ವೈಭವದಿಂದ ಆಳಿದರು.೮ ವರ್ಷಗಳಿಂದ ಆಳುತ್ತಿರುವ ನಾನು. ಈ ವೈಭವವನ್ನು ಉಳಿಸಿಕೊಳ್ಳಲು ಅಸಮರ್ಥನಾದೆನೆಂದೇ ಕಾಣುತ್ತದೆ. ನನ್ನಿಂದ ಈ ರಾಜ್ಯಕ್ಕೆ ಅನ್ಯಾಯವಾಯಿತು.

ಗುರುಸಿದ್ಧಪ್ಪ : ಹಾಗೆನ್ನಬೇಡಿ ಪ್ರಭು. ನಿಮ್ಮ ವಿದ್ವತ್ತು, ರಾಜಕೀಯ ಚಾತುರ್ಯ ಎಲ್ಲರಿಗೂ ಗೊತ್ತು. ಪೇಶ್ವೆಯವರನ್ನು ಸೋಲಿಸಲು ಬ್ರಿಟಿಷರಿಗೆ ನೆರವಾದ ನಿಮ್ಮ ರಾಜನೀತಿಯನ್ನು ಜನ ಇಂದಿಗೂ ಹೊಗಳುತ್ತಾರೆ.

ಶಿವಲಿಂಗರುದ್ರಸರ್ಜ : ಅದೆಲ್ಲ ಈಗ ವ್ಯರ್ಥವಾಗುವಂತೆ ತೋರುತ್ತದೆ.

ಮಲ್ಲಪ್ಪ : ನೀವು ಹೀಗೆಲ್ಲ ಮಾತನಾಡಬಾರದು. ತಾಯಿ ಚೆನ್ನಮ್ಮ, ತಂಗಿ ವೀರಮ್ಮ ಧೈರ್ಯಗೆಡುವಂತೆ ವರ್ತಿಸಬಾರದು.

ಶಿವಲಿಂಗರುದ್ರಸರ್ಜ : ಅನಾರೋಗ್ಯದ ತೀವ್ರತೆ ನನ್ನಿಂದ ಹೀಗೆ ಮಾತನಾಡಿಸುತ್ತಿದೆ. ದಿವಾನರೆ. ಈ ದೊಡ್ಡ ವೈಭವದ ರಾಜ್ಯ, (ವೀರಮ್ಮನತ್ತ ನೋಡಿ) ಈ ಸಣ್ಣ ವಯಸ್ಸಿನ ಹೆಂಡತಿ-ಇವರನ್ನು ಬಿಟ್ಟು ಹೋಗುವ ಸಮಯ ಸಮೀಪಿಸುತ್ತಿದೆ. ದೇಶ ವಿದೇಶಗಳ ಔಷಧಿಯಿಂದಲೂ ಪ್ರಯೋಜನವಾಗುತ್ತಿಲ್ಲ.

ಮಲ್ಲಪ್ಪ : ಪ್ರಭೂ, ಪುಣೆಯಿಂದ ಪೇಶ್ವೆಸಂಸ್ಥಾನದ ರಾಜವೈದ್ಯರನ್ನು ಕರೆಕಳಿಸಿದ್ದೇವೆ. ಇನ್ನೆರಡು ದಿನಗಳಲ್ಲಿ ಬರಬಹುದು. ನೀವು ನಿರಾಶರಾಗಬಾರದು.

ಚೆನ್ನಮ್ಮ : ಮಗು, ನೀನು ನಮ್ಮ ವಂಶದ ಕುಡಿ. ನಿನ್ನಿಂದ ಇದು ಹೆಮ್ಮರವಾಗಿ ಬೆಳೆಯಬೇಕೆಂದು ನಾವು ಬಯಸಿದ್ದೇವೆ. ಅದು ಈಡೇರುವ ವಿಸ್ವಾಸ ನನಗಿದೆ. ಈಗ ನಿನ್ನ ತಾಯಿ, ಅಕ್ಕ ರುದ್ರಮ್ಮನ ನೆನಪಾಗುತ್ತಿದೆ (ದುಃಖಿಸುವಳು).

ಶಿವಲಿಂಗರುದ್ರಸರ್ಜ : ಅವ್ವಾ, ಈಗ ನೀವೇ ನನ್ನ ತಾಯಿ. ಒಂದೆರಡು ಸಲ ನಾನು ನಿಮ್ಮ ವಿರುದ್ಧ ನಡೆದುಕೊಂಡರೂ ಅದೆಲ್ಲವನ್ನು ಮರೆತ ನಿನ್ನ ಕ್ಷಮಾಗುಣ ಬಹಳ ದೊಡ್ಡದು. ಈ ರಾಜ್ಯಲಕ್ಷ್ಮಿಯೇ ನಿಮ್ಮ ರೂಪದಲ್ಲಿ ಅವತರಿಸಿರುವಳೆಂದು ನಾನು ಭಾವಿಸಿದ್ದೇನೆ.

ಚೆನ್ನಮ್ಮ: ಮಗು, ಅದೆಲ್ಲ ಹಳೆಯ ಮಾತು ಸಾಕು. ನೀನು-ವೀರಮ್ಮ ಚೆನ್ನಾಗಿ ಬಾಳಬೇಕು. ಇವಳು ರಾಜ್ಯಲಕ್ಷ್ಮಿಯಾಗಿ ಬೆಳಗಬೇಕು.

ವೀರಮ್ಮ: ಅಮ್ಮಾ, ನಾನು ಅತ್ತೆ ರುದ್ರಮ್ಮನವರನ್ನು ನೋಡಲಿಲ್ಲ. ತವರುಮನೆ ಹುಮನಾಬಾದದಿಂದ ನಾನು ಸೊಸೆಯಾಗಿ ಬರುವಷ್ಟರಲ್ಲಿ ಅವರು ಅಗಲಿದ್ದರು. ಅಂದಿನಿಂದ ನೀವು ಅವರ ಸ್ಥಾನದಲ್ಲಿ ನಿಂತು ನನಗೆ ಅತ್ತೆಯೂ, ತಾಯಿಯೂ ಆಗಿ ನೋಡಿಕೊಳ್ಳುತ್ತಿರುವಿರಿ. ನನ್ನ ಪತಿಯ ಆರೋಗ್ಯ ಸುಧಾರಿಸಲಿ. ನಾವಿಬ್ಬರೂ ನಿಮ್ಮ ನೆರಳಿನಲ್ಲಿ ಬಾಳುತ್ತೇವೆ. ಈ ರಾಜ್ಯದ ಬಗ್ಗೆ ನಿಮಗಿರುವ ಪ್ರೀತಿ ದೊಡ್ಡದು.

ಚೆನ್ನಮ್ಮ : ನನಗಿಂತ ಈ ರಾಜ್ಯದ ಬಗ್ಗೆ, ಈ ಶಿವಲಿಂಗರುದ್ರಸರ್ಜ ಪ್ರಭುವಿನ ಬಗ್ಗೆ ದಿವಾನರಾದ ಮಲ್ಲಪ್ಪನವರ ಪ್ರೀತಿ ದೊಡ್ಡದು. ನಮ್ಮ ಯಜಮಾನರ ಕಾಲದಿಂದಲೂ ಇವರು ಈ ರಾಜ್ಯವನ್ನು ಹೊರಗಿನ ವೈರಿಗಳಿಂದ ರಕ್ಷಿಸಿದ್ದು, ಒಳಗಿನ ಪ್ರಜೆಗಳ ಪ್ರೀತಿಯಿಂದ ಬೆಳೆಸಿದ್ದು ಸಣ್ಣ ಸಾಧನೆಯೇನಲ್ಲ.

ಶಿವಲಿಂಗರುದ್ರಸರ್ಜ: ಹೌದು ತಾಯಿ, ಇಂತಹ ದಿವಾನರಿಂದಾಗಿ ನಮ್ಮ ರಾಜ್ಯವಲ್ಲ, ಯಾವುದೇ ರಾಜ್ಯ ಬೆಳೆಯುತ್ತದ, ಬೆಳಗುತ್ತದೆ.

ಮಲ್ಲಪ್ಪ: ದೊರೆಗಳೇ ಮಾತು ಸಾಕು, ವಿಶ್ರಾಂತಿ ಪಡೆಯಿರಿ. ಈ ರಾಜ್ಯವನ್ನು ನಿಷ್ಕಂಟಕವಾಗಿಸುವ ದಿಕ್ಕಿನಲ್ಲಿ ನಾವೆಲ್ಲ ಕಾರ್ಯ ಯೋಜಿಸಬೇಕಿದೆ. ಎಲ್ಲರೂ ನಡೆಯಿರಿ, ಪ್ರಭುಗಳು ವಿಶ್ರಾಂತಿ ಪಡೆಯಲಿ (ವೀರಮ್ಮನನ್ನು ಉಳಿದು ಎಲ್ಲರೂ ಹೋಗುತ್ತಾರೆ. ವೀರಮ್ಮ ಆರೈಕೆ ಮಾಡುತ್ತಾಳೆ).

❖❖

II

(ದಿವಾನ ಮಲ್ಲಪ್ಪನ ಕಾರ್ಯಾಲಯ, ಮಲ್ಲಪ್ಪ, ಗುರುಸಿದ್ಧಪ್ಪ ಮಾತನಾಡುತ್ತಿದ್ದಾರೆ).

ಮಲ್ಲಪ್ಪ : ಗುರುಸಿದ್ದಪ್ಪನವರೇ, ನಾವಿಂದು ತುಂಬ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ನಾವಿಬ್ಬರೂ ಮೊದಲು ಪ್ರಭುಗಳನ್ನು ರೋಗದಿಂದ ಉಳಿಸಿಕೊಳ್ಳಬೇಕು, ಜೊತೆಗೆ ಬ್ರಿಟಿಷರಿಂದ ರಾಜ್ಯವನ್ನು ಉಳಿಸಿಕೊಳ್ಳಬೇಕು. ಮೊದಲಿನಿಂದಲೂ ನಿಮ್ಮನ್ನು ನಾನು ಪ್ರೀತಿಸುತ್ತ ಬಂದವನು. ಈಗ ಅಶ್ವದಳಪತಿಯಾಗಿರುವ ನೀವು ಮುಂದೆ ನನ್ನ ಸ್ಥಾನವನ್ನು ತುಂಬಬೇಕೆಂದು ನನ್ನ ಆಸೆ.

ಗುರುಸಿದ್ಧಪ್ಪ : ದಿವಾನರೇ, ನಿಮ್ಮ ಮನಸ್ಸು ದೊಡ್ಡದು. ನನ್ನ ಬಗೆಗಿನ ನಿಮ್ಮ ಪ್ರೀತಿಗೆ ಕೃತಜ್ಞ. ಈವರೆಗೆ ಈ ರಾಜ್ಯದ ಸ್ಥಾನಕ್ಕೆ, ಅದಕ್ಕಿಂತ ಮಾನಕ್ಕೆ ಚ್ಯುತಿ ಬರದಂತೆ ನಡೆದುಬಂದ ನಿಮ್ಮ ದಾರಿಯಲ್ಲಿಯೇ ನಾನು ಮುನ್ನಡೆಯುತ್ತೇನೆ.

ಮಲ್ಲಪ್ಪ: ಇನ್ನು ಮುಂದೆ ರಾಜ್ಯವನ್ನು ಮುನ್ನಡೆಸುವ ದಾರಿ ತುಂಬ ದುರ್ಗಮವಾಗಿದೆ. ಶಿವಲಿಂಗರುದ್ರಸರ್ಜ ಪ್ರಭುಗಳು ಇನ್ನೂ ಸಣ್ಣವರು. ಬದುಕಿದರೂ ಆರೋಗ್ಯ ದೃಷ್ಟಿಯಿಂದ ದುರ್ಬಲರು. ಇಂತಹ ಪ್ರಭುಗಳ, ತಾಯಿ ಚೆನ್ನಮ್ಮ–ರಾಣಿ ವೀರಮ್ಮರ ಮಾರ್ಗದರ್ಶನದಲ್ಲಿ ರಾಜ್ಯವನ್ನು ಮುನ್ನಡೆಸುವ ಹೊಣೆ ನಿಮ್ಮದಾಗುತ್ತದೆ.

ಗುರುಸಿದ್ದಪ್ಪ: ಹೌದು ದಿವಾನರೆ, ನೀವು ಹೇಳುವಂತೆ ಮುಂದಿನ ದಾರಿ ದುರ್ಗಮವಾಗಿದೆ. ಅಶ್ವದಳಪತಿಯಾದ ನಾನು ಈ ಹೊಣೆಯನ್ನು ಸರಿಯಾಗಿ ನಿರ್ವಹಿಸುತ್ತಿದ್ದೇನೆ. ಆದರೆ ಹಳ್ಳಿಗಳಲ್ಲಿರುವ, ಯುದ್ಧಸಂದರ್ಭದಲ್ಲಿ ನೆರವಾಗಲು ಬರುವ ಗ್ರಾಮೀಣಸೈನ್ಯ ನಮ್ಮೊಂದಿಗೆ ಇತ್ತೀಚೆ ಸಹಕರಿಸುತ್ತಿಲ್ಲ.

ಮಲ್ಲಪ್ಪ: ಇದನ್ನು ನಾನೂ ಗಮನಿಸಿದ್ದೇನೆ. ಇದಕ್ಕೆ ಏನು ಕಾರಣ? ಹುಡುಕಿ ಹೇಳಿರಿ, ಸರಿಪಡಿಸೋಣ.

ಗುರುಸಿದ್ದಪ್ಪ: ಹೇಗೆ ಹೇಳಬೇಕೋ ತೋರುತ್ತಿಲ್ಲ. ಗ್ರಾಮೀಣ ಸೈನಿಕರ ದಳಪತಿಯಾಗಿರುವ ಅವರಾದಿ ವೀರಪ್ಪನವರು ಆ ಸೈನಿಕರ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ.

ಮಲ್ಲಪ್ಪ: ಹೌದು, ಕಳೆದ ವಾರ ಗೂಢಚಾರರು ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಪ್ರತ್ಯಕ್ಷ ಕಂಡರೂ, ಪ್ರಮಾಣಿಸಿ ನೋಡಬೇಕೆಂದು ನಾನು ಮೌನ ವಹಿಸಿದ್ದೇನೆ.

ಗುರುಸಿದ್ದಪ್ಪ: ಪ್ರಮಾಣಿಸಿ ನೋಡುವುದೇನು? ಆ ಸೈನಿಕರಿಗೆ ನಾವು ಕೊಡುವ ಸಂಬಳದಲ್ಲಿ ಅರ್ಧದಷ್ಟು ಕೆಲವೊಮ್ಮೆ ವೀರಪ್ಪನವರ ಕೈಸೇರುತ್ತದೆ. ಬರುಬರುತ್ತ ಇದು ಒಂದು

ಒಪ್ಪಿತ ವ್ಯವಸ್ಥೆಯಾಗುವ ಸಾಧ್ಯತೆ ಇದೆ. ಹಾಗಾಗುವ ಮೊದಲೇ ಇದನ್ನು ಚಿವುಟಿ ಹಾಕಬೇಕು.

ಮಲ್ಲಪ್ಪ: ಈ ಬಗ್ಗೆ ವೀರಪ್ಪನವರೊಂದಿಗೆ ಮಾತನಾಡಿ ನೋಡಿರಿ.

ಗುರುಸಿದ್ದಪ್ಪ: ಈಗಾಗಲೇ ಎರಡು ಸಲ ಮಾತನಾಡಿದ್ದೇನೆ. ನಾಯಿಯ ಬಾಲ ಡೊಂಕು ಎಂಬಂತಾಗಿದೆ. ಶಿವಲಿಂಗರುದ್ರಸರ್ಜ ಪ್ರಭುಗಳು ಇವರನ್ನು ಇಷ್ಟು ದೂರ ಬೆಳೆಸಬಾರದಿತ್ತು.

ಮಲ್ಲಪ್ಪ: ಏನು ಮಾಡುವುದು? ಗುರುಗಳು ಇವನಿಗೆ ಈ ಸ್ಥಾನ ಕೊಡಬೇಕೆಂದು ಪ್ರಭುಗಳ ಮೇಲೆ ಪದೇ ಪದೇ ಒತ್ತಡ ತಂದರೆಂದು ಕಾಣುತ್ತದೆ.

ಗುರುಸಿದ್ದಪ್ಪ: ನಿಮಗೆ ಗೊತ್ತಿದೆಯೋ ಇಲ್ಲವೋ, ಅರಮನೆಯಿಂದ ಹೊರಹಾಕಿಸಿಕೊಂಡ ಮಹಾಂತವ್ವ ಈಗ ಮಠದ ಸಂಪರ್ಕದಲ್ಲಿದ್ದಾಳೆ.

ಮಲ್ಲಪ್ಪ: ಏನು!

ಗುರುಸಿದ್ದಪ್ಪ: ಹೌದು, ವೀರಪ್ಪ ಅವಳ ಮೂಲಕ ಸ್ವಾಮಿಗಳ ಮೇಲೆ ಒತ್ತಡತಂದನು. ಅವಳ ಮಾತು ಕೇಳಿ ಸ್ವಾಮಿಗಳು ಪ್ರಭುಗಳ ಮೇಲೆ ಒತ್ತಡ ತಂದರು.

ಮಲ್ಲಪ್ಪ: ಇದು ನಿಜವೇ?

ಗುರುಸಿದ್ದಪ್ಪ: ನೀವು ದೊಡ್ಡ ದಿವಾನರು. ಸಾಮಾನ್ಯರ ಮಟ್ಟದಲ್ಲಿಯ ಸಣ್ಣಪುಟ್ಟ ವಿಷಯಗಳು ನಿಮ್ಮ ಗಮನಕ್ಕೆ ಬರುವುದಿಲ್ಲ.

ಮಲ್ಲಪ್ಪ: ಮಠಗಳು ಹೀಗಾದರೆ ಹೇಗೆ?

ಗುರುಸಿದ್ದಪ್ಪ: ಇದೊಂದೇ ಮಠವಲ್ಲ. ಇಂದು ಎಲ್ಲ ಮಠಗಳೂ ಬಸವಣ್ಣನನ್ನು ಪ್ರಚಾರದ ಮಾಧ್ಯಮ ಮಾಡಿಕೊಂಡು ಅಡ್ಡ ಬೆಳೆಯುತ್ತಲಿವೆ.

ಮಲ್ಲಪ್ಪ: ಅಂದರೆ, ನಮ್ಮ ಸ್ವಾಮಿಗಳು ತಾವು ಮಾಡಬೇಕಾದ ಕೆಲಸವನ್ನು ಬಿಟ್ಟು ಬೇರೆ ಕೆಲಸಗಳನ್ನು ತುಂಬಾ ಚೆನ್ನಾಗಿ ಮಾಡುತ್ತಲಿರುವರೆಂದು ಅರ್ಥ.

ಗುರುಸಿದ್ದಪ್ಪ: (ನಗುತ್ತ). ಇರಲಿ ಬಿಡಿ ದಿವಾನರೇ, ಈಗ ಈ ವೀರಪ್ಪನ ಬಗ್ಗೆ ವಿಚಾರಿಸಿರಿ.

ಮಲ್ಲಪ್ಪ: ಈ ಬಗ್ಗೆ ನಿಮ್ಮ ವಿಚಾರವೇನು?

ಗುರುಸಿದ್ದಪ್ಪ: ವೀರಪ್ಪ ಅವರನ್ನು ಈಗಿರುವ ಹುದ್ದೆಯಿಂದ ಕೆಳಗಿನ ಸ್ಥಾನಕ್ಕೆ ಇಳಿಸುವುದೇ ಉಳಿದಿರುವ ದಾರಿ. ಇದು ನನ್ನ ಪ್ರಾಮಾಣಿಕ ಅಭಿಪ್ರಾಯ. ನಿರ್ಣಯ ದಿವಾನರಿಗೆ ಬಿಟ್ಟಿದ್ದು.

ಮಲ್ಲಪ್ಪ: ಹಾಗಾದರೆ ಇವರ ಸ್ಥಾನದಲ್ಲಿ ಸಮರ್ಥರು ಯಾರಿದ್ದಾರೆ?

ಗುರುಸಿದ್ದಪ್ಪ: ನನ್ನ ಅಭಿಪ್ರಾಯದಲ್ಲಿ ಹುರಕಡ್ಲಿ ಮಲ್ಲಪ್ಪನವರು ಈ ಹುದ್ದೆಗೆ ಯೋಗ್ಯ ಮನುಷ್ಯ ಮತ್ತು ವಿಶ್ವಾಸಾರ್ಹ ವ್ಯಕ್ತಿ. ಆಡಳಿತಕ್ಕೆ ತಕ್ಕ ಸಾಮರ್ಥ್ಯವೂ ಅವರಿಗಿದೆ.

ಮಲ್ಲಪ್ಪ: ಹಾಗಾದರೆ, ಇಬ್ಬರಿಗೂ ಇಂದೇ ಆಜ್ಞೆ ಹೊರಡಿಸುತ್ತೇನೆ. ನಿಮಗೂ ಕಚೇರಿ ಹೊತ್ತಾಯಿತು, ನಡಿಯಿರಿ(ಗುರುಸಿದ್ದಪ್ಪ ಹೋಗುತ್ತಾನೆ).

❖❖

III

(ಶಿವಲಿಂಗರುದ್ರಸರ್ಜ ಅನಾರೋಗ್ಯದಿಂದ ಹಾಸಿಗೆಯಲ್ಲಿ ನರಳುತ್ತಿದ್ದಾನೆ. ಸುತ್ತಲೂ ಚೆನ್ನಮ್ಮ, ವೀರಮ್ಮ, ದಿವಾನ ಮಲ್ಲಪ್ಪ ಕುಳಿತಿದ್ದಾರೆ. ಗುರುಸಿದ್ದಪ್ಪ, ಅವರಾದಿ ವೀರಪ್ಪ ನಿಂತಿದ್ದಾರೆ. ಪುಣೆಯಿಂದ ಬಂದ ರಾಜವೈದ್ಯರು ಶಿವಲಿಂಗರುದ್ರಸರ್ಜನ ಅನಾರೋಗ್ಯವನ್ನು ಪರೀಕ್ಷಿಸುತ್ತಿದ್ದಾರೆ).

ವೈದ್ಯ: ಈ ಅನಾರೋಗ್ಯ ಆರಂಭವಾಗಿ ಎಷ್ಟು ದಿನಗಳಾದವು?

ವೀರಮ್ಮ: ಒಂದು ವರ್ಷ.

ವೈದ್ಯ: ತುಂಬ ವಿಳಂಬವಾಯಿತು. ಈ ರೋಗಕ್ಕೆ ಮೂರು ತಿಂಗಳೊಳಗಾಗಿ ಔಷಧೋಪಚಾರ ನಡೆಸಬೇಕಾಗಿತ್ತು.

ಚೆನ್ನಮ್ಮ: ಆರಂಭದಿಂದಲೂ ನಡೆಸುತ್ತ ಬಂದಿದ್ದೇವೆ.

ವೈದ್ಯ: ರೋಗವನ್ನು ಗುರುತಿಸದೆ ವೈದ್ಯರು ಯಾವುಯಾವುದೋ ಔಷಧ ಕೊಟ್ಟಿದ್ದಾರೆ. ಹೀಗಾಗಿ ರೋಗ ಉಲ್ಬಣಿಸುತ್ತ ಬಂದಿದೆ.

ಮಲ್ಲಪ್ಪ: ಈಗ ಏನು ಮಾಡುವುದು?

ವೈದ್ಯ: ಔಷಧೋಪಚಾರ ವ್ಯರ್ಥ ಪ್ರಯತ್ನ. ಹೀಗಿದ್ದೂ ಸರ್ವರೋಗಗಳಿಗೆ ರಾಮಬಾಣ ವಾಗಿರುವ ಔಷಧ'ರತ್ನಗುಟಿಕೆ' ಕೊಡುವುದೊಂದೇ ಬಾಕಿ. ಒಂದಿಷ್ಟು ನೀರು ತನ್ನಿರಿ (ವೀರಮ್ಮ ನೀರು ತರಲು ಹೋಗುತ್ತಾಳೆ).

ಗುರುಸಿದ್ದಪ್ಪ: ವೈದ್ಯರೇ, ಪ್ರಭುಗಳ ಈ ರೋಗ ನಿವಾರಣೆಗಾಗಿ ನಾವೆಲ್ಲ ಎಂಥ ಪ್ರಯತ್ನಕ್ಕೂ ಸಿದ್ಧ.

ಮಲ್ಲಪ್ಪ: ಎಂಥ ತ್ಯಾಗಕ್ಕೂ ಸಿದ್ಧ (ವೀರಮ್ಮ ನೀರು ತರುತ್ತಾಳೆ. ವೈದ್ಯರು ಗುಟಿಕೆ ಕರಗಿಸಿ ಔಷಧ ಕುಡಿಸುತ್ತಾರೆ.)

ಚೆನ್ನಮ್ಮ: ವೈದ್ಯರೇ, ಈಗ ನೀವೇ ನಮ್ಮ ದೇವರು, ನಮ್ಮ ರಾಜ್ಯದ ದೇವರು. ಇಷ್ಟುದಿನ ದತ್ತಕ ಬೇಡವೆನ್ನುತ್ತಿದ್ದ ಶಿವಲಿಂಗರುದ್ರಸರ್ಜರು ಒಂದು ವಾರದಿಂದ ಅದನ್ನು ಪೂರೈಸಲು ಒತ್ತಾಯ ಮಾಡುತ್ತಲಿದ್ದಾರೆ. ಮಾಸ್ತಮರಡಿ ಗೌಡರ ಮಗನನ್ನು ಕರೆಸಲು ಹೇಳುತ್ತಿದ್ದಾರೆ. ಇದು ನಮ್ಮ ಶಕ್ತಿಯನ್ನೇ ಉಡುಗಿಸಿದೆ.

ವೈದ್ಯ: (ಯೋಚಿಸಿ) ಪ್ರಭುಗಳ ವಿಚಾರ ಸೂಕ್ತವಾದುದು. ಹುಡುಗನನ್ನು ಬೇಗ ಕರೆಯಿಸಿರಿ. ಔಷಧ ಪರಿಣಾಮ ಬೀರುತ್ತಿಲ್ಲ.

ವೀರಮ್ಮ: ಅಯ್ಯೋ ದೇವರೆ..... (ಚೆನ್ನಮ್ಮ ಸಮಾಧಾನ ಪಡಿಸುತ್ತಾಳೆ. ವೈದ್ಯರು ಹೋಗುತ್ತಾರೆ).

ಶಿವಲಿಂಗರುದ್ರಸರ್ಜ: ದಿವಾನರೇ, ಮಾಸ್ತಮರಡಿ ಗೌಡರ ಮಗ ಬಂದನೇ?

ಮಲ್ಲಪ್ಪ: ಪ್ರಭುಗಳೆ, ಅವನನ್ನು ಕರೆಯಿಸುವ ವ್ಯವಸ್ಥೆ ಮಾಡಿದ್ದೇವೆ. ಇಂದು ಸಂಜೆ ಬರಬಹುದು. (ವೀರಮ್ಮ ಶಿವಲಿಂಗರುದ್ರಸರ್ಜನ ಆರೈಕೆಯಲ್ಲಿ ತೊಡುತ್ತಾಳೆ).

ಶಿವಲಿಂಗರುದ್ರಸರ್ಜ: (ಸ್ವಲ್ಪ ಕಣ್ಣುತೆರೆದು ಕ್ಷೀಣಧ್ವನಿಯಲ್ಲಿ)ದಿವಾನರೆ, ಮಾಸ್ತಮರಡಿ ಗೌಡರ ಮಗ ಬಂದನೇ?

ಮಲ್ಲಪ್ಪ: ಪ್ರಭು, ಗುರುಸಿದ್ದಪ್ಪ ಕರೆಯಿಸುವ ವ್ಯವಸ್ಥೆ ಮಾಡಿದ್ದಾರೆ (ಮಲ್ಲಪ್ಪನು ಚೆನ್ನಮ್ಮ, ವೀರಮ್ಮನವರನ್ನು ಪ್ರತ್ಯೇಕ ಕರೆದು ಸಮಾಲೋಚನೆ ನಡೆಸುತ್ತಾನೆ. ಹೊರಳಿ) ವೀರಪ್ಪನವರೆ,ದತ್ತಕ ಪಡೆಯಲು ಅನುಮತಿ ಕೋರಿ ಥ್ಯಾಕರೆಯವರಿಗೆ ಪತ್ರ ಬರೆಯಬೇಕು. ಬೇಗ ಕಾಗದ, ಲೆಕ್ಕಣಿಕೆ, ಮಸಿ ತನ್ನಿರಿ.

ವೀರಪ್ಪ: ದಿವಾನರೇ, ತಮ್ಮ ನಿರ್ಣಯ ಸರಿಯಾಗಿದೆ(ಎನ್ನುತ್ತ ವೀರಪ್ಪ ಹೋಗುತ್ತಾನೆ)

ಶಿವಲಿಗರುದ್ರಸರ್ಜ: (ಸ್ವಲ್ಪ ಕಣ್ಣುತೆರೆದು) ದಿವಾನರೇ, ಕೈಕಾಲು ತಣ್ಣಗಾಗುತ್ತಿವೆ. ಈ ರಾಜ್ಯವನ್ನು ನಿಮ್ಮ ಕೈಗಿಡುತ್ತಿದ್ದೇನೆ. ಅವ್ವ ಚೆನ್ನವ್ವ, ರಾಣಿ ವೀರಮ್ಮ ಮತ್ತು ನೀವು ಸೇರಿ ಮುಂದಿನ ದಿನಗಳಲ್ಲಿ ಈ ರಾಜ್ಯದ ಯೋಗಕ್ಷೇಮ ನೋಡಿಕೊಳ್ಳಿರಿ(ಹರಹರ ಮಹಾದೇವ ....ಎನ್ನುತ್ತ ಕೊನೆಯುಸಿರೆಳೆಯುತ್ತಾನೆ. ಎಲ್ಲರೂ ದುಃಖಿಸುತ್ತಾರೆ. ಚೆನ್ನಮ್ಮ, ವೀರಮ್ಮನನ್ನು ಸಮಾಧಾನಪಡಿಸುತ್ತಾಳೆ).

ವೀರಮ್ಮ: ಐಶ್ವರ್ಯದಿಂದ ತುಂಬಿದ ತವರುಮನೆಯಿಂದ ಅರಮನೆಗೆಬಂದೆನೆಂಬ ನನ್ನ ಸಂತೋಷವನ್ನು ಶಿವ ಕಿತ್ತುಕೊಂಡ (ದುಃಖಿಸುವಳು).

ಮಲ್ಲಪ್ಪ: ತಾಯಿ, ಇಬ್ಬರು ಹೆಂಡಿರನ್ನು ಕಳೆದುಕೊಂಡಿದ್ದ ಪ್ರಭುಗಳಿಗೆ ಮೂರನೆಯ ಹೆಂಡತಿಯಾಗಿ ಬಂದು, ನೀವು ಅರಮನೆಯನ್ನು ಬೆಳಗಬಹುದೆಂದು ಭಾವಿಸಿದ್ದೆವು. ವಿಧಿಗೆ ಕರುಣೆಯಿಲ್ಲ. ಸಮಾಧಾನ ಮಾಡಿಕೊಳ್ಳಿ ತಾಯಿ.

ವೀರಮ್ಮ: ಅಪ್ಪ, ನಾನು ಹೇಗೆ ಸಮಾಧಾನ ಮಾಡಿಕೊಳ್ಳಲಿ. ನನ್ನ ಬದುಕಿನ ಬೆಳಗು ಮುಂಜಾನೆಯಲ್ಲಿಯೇ ನನ್ನ ಸೂರ್ಯ ಮುಳುಗಿದ (ಚೆನ್ನಮ್ಮ ಸಮಾಧಾನ ಪಡಿಸುತ್ತಾಳೆ. ಅಷ್ಟರಲ್ಲಿ ವೀರಪ್ಪ ಕಾಗದ, ಲೆಕ್ಕಣಿಕೆ, ಮಸಿ ತರುತ್ತಾನೆ.)

ಮಲ್ಲಪ್ಪ: ಶಾಂತರಾಗಿರಿ, ಪ್ರಭುಗಳು ನಿಧನರಾದ ಸುದ್ದಿ ಕೆಲಹೊತ್ತು ಯಾರಿಗೂ ಗೊತ್ತಾಗಬಾರದು.

ವೀರಪ್ಪ:	ಮುಂದೆ ಏನು ಮಾಡುವುದು?
ಮಲ್ಲಪ್ಪ:	ಪ್ರಭುಗಳು ಜೀವಂತವಾಗಿರುವಾಗಲೇ ದತ್ತಕ ಪಡೆಯಲು ಬ್ರಿಟಿಷ್ ಸರಕಾರದ ಅನುಮತಿ ಕೇಳಿ ಪತ್ರ ಸಿದ್ಧಪಡಿಸಿದ್ದರೆಂಬ ಅರ್ಥದ ಪತ್ರವನ್ನು ನಾವು ಸಿದ್ಧಪಡಿಸಿ, ಥ್ಯಾಕರೆಯವರಿಗೆ ಕಳುಹಿಸೋಣ (ಎನ್ನುತ್ತ ಬರೆಯ ತೊಡಗುವನು. ಮುಗಿಯುತ್ತಲೇ ಶವದ ಕೈಗೆ ಲೆಕ್ಕಣಿಕೆಯನ್ನು ಮುಟ್ಟಿಸಿ ಪ್ರಭುವಿನ ಸಹಿ ಮಾಡುವನು).
ಗುರುಸಿದ್ಧಪ್ಪ:	ಎಲ್ಲ ಸರಿಯಾಗಿ ಮುಗಿದಂತಾಯಿತು. ಈಗ ಒಂದಿಷ್ಟು ಸಮಾಧಾನವೆನಿಸಿತು.
ಮಲ್ಲಪ್ಪ:	ಕೇವಲ ಸಹಿ ಮಾಡಿದರೆ ಸಾಲದು. ಬ್ರಿಟಿಷ್ ಸರಕಾರದ ನೇಮದ ಪ್ರಕಾರ ಸಹಿಯ ಮಗ್ಗಲು ಪ್ರಭುಗಳ ಎಡಗೈ ಹೆಬ್ಬೆಟ್ಟಿನ ಗುರುತು ಬೇಕು (ಎನ್ನುತ್ತ ಮಲ್ಲಪ್ಪನು ಶವದ ಎಡಗೈ ಹೆಬ್ಬೆರಳಿಗೆ ಮಸಿಹಚ್ಚಿ, ಕಾಗದದ ಮೇಲೆ ಒತ್ತಿ, ಬೆರಳು ತೊಳೆಯುವನು).

❖❖

IV

(ತೇಗೂರು ಅರಣ್ಯದಲ್ಲಿ ಥ್ಯಾಕರೆ ಕೆಲವರೊಡನೆ ಬೇಟೆಯಾಡಿ ವಿಶ್ರಮಿಸುವ ದೃಶ್ಯ ಬೇಟೆ ವೇಷ ಧರಿಸಿದ ಎಲ್ಲರ ಕೈಯಲ್ಲಿ ಬಂದೂಕು ಇತ್ಯಾದಿ ಉಪಕರಣಗಳಿವೆ).

ಥ್ಯಾಕರೆ: ಇಂದು ನನ್ನ ನಿರೀಕ್ಷೆಮೀರಿ ಬೇಟೆಗಳು ಸಿಕ್ಕವು.

ಎಲಿಯಟ್: ಹೌದು, ಈ ತೇಗೂರ ಅಡವಿ ಕಾಡುಪ್ರಾಣಿಗಳಿಂದ ತುಂಬಿ ಹೋಗಿದೆ.

ಸ್ಟೀವನ್‌ಸನ್: ಇಲ್ಲಿ ಬೇಟೆ ಹುಡುಕುವುದೇ ಬೇಡ, ಪ್ರಾಣಿಗಳು ತಾವಾಗಿಯೇ ಕಣ್ಣಿಗೆ ಬೀಳುತ್ತವೆ. (ದೂರದಲ್ಲಿ ಇಬ್ಬರು ಕಿತ್ತೂರು ಸಂಸ್ಥಾನದ ಪರಿವಾರದವರು ಬರುತ್ತಾರೆ).

ಎಲಿಯಟ್: ಯಾರೋ ಇಬ್ಬರು ಬರುವಂತಿದೆ.

ಸ್ಟೀವನ್‌ಸನ್: ಇವರು ಕಿತ್ತೂರು ಸಂಸ್ಥಾನದವರೆಂದು ಕಾಣುತ್ತದೆ.

ಥ್ಯಾಕರೆ: ಆಡಳಿತವೇ ಹೀಗೆ, ಕಚೇರಿಬಿಟ್ಟು ಕಾಡಿಗೆ ಬಂದರೂ ಜನ ಕಾಡುವುದನ್ನು ಬಿಡುವುದಿಲ್ಲ.

ಸ್ಟೀವನ್‌ಸನ್: ಅಧಿಕಾರವೆನ್ನುವುದು ಹಣ್ಣುಗಳಿಂದ ತುಂಬಿದ ಮರದಂತೆ. ಎಲ್ಲ ಜನರು ಎಲ್ಲ ವೇಳೆಯಲ್ಲಿ ಕೈ ಹಾಕುವವರೆ.

ಎಲಿಯಟ್: ನಮ್ಮ ಬ್ರಿಟಿಷ್ ಜನರಿಗೆ ರಾಜ್ಯ ವಿಸ್ತಾರದ ದುರಾಸೆ ಬಹಳ. ಇದಕ್ಕೆ ತಮ್ಮಂಥವರನ್ನು ಮಾಧ್ಯಮ ಮಾಡಿಕೊಳ್ಳುತ್ತಾರೆ. ಜನರಿಗೆ ಹಗಲೇನು–ಇರುಳೇನು, ಕಚೇರಿಯೇನು–ಕಾಡೇನು, ಬಂದು ಕಾಡುವವರೆ. ಇದೋ ಬಂದೇ ಬಿಟ್ಟರು.

ಸಂಸ್ಥಾನದವರು: (ಸಮೀಪ ಬಂದು ಥ್ಯಾಕರೆಯವರನ್ನು ಕುರಿತು) ಸಾಹೇಬರಿಗೆ ನಮಸ್ಕಾರ, ನಾವು ಕಿತ್ತೂರು ಸಂಸ್ಥಾನದವರು.

ಥ್ಯಾಕರೆ: ನಮಸ್ಕಾರ, ಏನು ಸಮಾಚಾರ? ಈಗ ಬಂದಿದ್ದು?

ಸಂಸ್ಥಾನದವರು–೧: ನಮ್ಮ ಪ್ರಭುಗಳ ಆರೋಗ್ಯ ಉಲ್ಬಣಿಸುತ್ತ ನಡೆದಿದೆ. ಬಹಳ ದಿನ ಅವರು ಬದುಕಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ಅವರಸದಲ್ಲಿ ಒಂದು ಕಾರ್ಯಮಾಡಿ ಮುಗಿಸುವುದು ಅವರಿಗೆ ಅನಿವಾರ್ಯವಾಗಿದೆ.

ಥ್ಯಾಕರೆ: ಯಾವ ಕಾರ್ಯ?

ಸಂಸ್ಥಾನದವರು–೨: ದತ್ತಕ ಕಾರ್ಯ. ಇದಕ್ಕೆ ವಿಳಂಬ ಮಾಡುವುದು ಬೇಡವೆನ್ನುತ್ತ ಹಾಸಿಗೆಯಲ್ಲಿರುವ ಪ್ರಭುಗಳೇ ತಮ್ಮ ಅನುಮತಿ ಕೇಳಿ ಪತ್ರ ಸಿದ್ಧಪಡಿಸಿ, ಸಹಿ ಮಾಡಿ ಕಳುಹಿಸಿದ್ದಾರೆ. ದಯವಿಟ್ಟು ಇದಕ್ಕೆ ಒಪ್ಪಿಗೆಯ ಸಹಿಹಾಕಿ ಕೊಡಿರಿ.

ಥ್ಯಾಕರೆ: ಕಳೆದ ತಿಂಗಳು ನಾವಿಬ್ಬರೂ ಕೂಡಿದ್ದೆವು. ಅನೇಕ ವಿಷಯಗಳ ಬಗ್ಗೆ ಚರ್ಚಿಸಿದ್ದೆವು. ಆಗ ಅವರು ಅನಾರೋಗ್ಯದ ತೀವ್ರತೆಯ ಬಗ್ಗೆ ಮಾತನಾಡಲಿಲ್ಲ.

ಸಂಸ್ಥಾನದವರು–೧: ನಿಮಗೆ ಗೊತ್ತಿರುವಂತೆ ಅವರು ಬಹಳ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ನಿಮ್ಮ ಭೆಟ್ಟಿಯ ಸಮಯದಲ್ಲಿ ರೋಗ ನಿಯಂತ್ರಣಕ್ಕೆ ಬರಬಹುದೆಂಬ ವಿಶ್ವಾಸವಿದ್ದಿತೆಂದು ಕಾಣುತ್ತದೆ. ಅದಕ್ಕಾಗಿಯೇ ಈ ಬಗ್ಗೆ ಮಾತನಾಡಿರಲಿಕ್ಕಿಲ್ಲ. ಆದರೆ ಒಂದು ವಾರದಿಂದ ಅದು ವಿಪರೀತ ಬೆಳೆಯುತ್ತಲಿದೆ. ಆದುದರಿಂದ ದತ್ತಕ ವಿಚಾರಮಾಡಿ ತಮ್ಮಿಂದ ಒಪ್ಪಿಗೆ ಪಡೆಯಲು ಈ ಪತ್ರ ಕಳಿಸಿದ್ದಾರೆ.

ಥ್ಯಾಕರೆ: (ಪತ್ರ ಇಸಿದುಕೊಂಡು ಮನಸ್ಸಿನಲ್ಲಿ ಓದುತ್ತಾನೆ). ಇಷ್ಟು ಅವಸರದಲ್ಲಿ ಒಪ್ಪಿಗೆಯ ಸಹಿ ಮಾಡುವುದು ಸರಿಯಲ್ಲ. ಒಂದಿಷ್ಟು ಕಾನೂನುಗಳನ್ನು ಗಮನಿಸಬೇಕಾಗುತ್ತದೆ.

ಸಂಸ್ಥಾನದವರು–೧: ಕಾನೂನು! ಏನು ಸಾಹೇಬರೆ? ನಮ್ಮ ಪ್ರಭುಗಳು ಜೀವನ್ಮರಣ ಮಧ್ಯ ಬಳಲುತ್ತಿದ್ದಾರೆ. ಬೇಗ ದತ್ತಕಕಾರ್ಯ ಮಾಡಿ ಮುಗಿಸಬೇಕಾಗಿದೆ.

ಥ್ಯಾಕರೆ: ನಿಮ್ಮ ಪ್ರಭುಗಳ ಆರೋಗ್ಯ ಕಾಪಾಡುವುದು ನಮ್ಮ ಕರ್ತವ್ಯವೂ ಆಗಿದೆ. ಈಗ ನಮ್ಮ ಜೊತೆ ಇರುವ ಈ ಸರಕಾರಿ ವೈದ್ಯ ಮಿಸ್ಟರ್ ಬೆಲ್ ಅವರನ್ನು ಕಿತ್ತೂರಿಗೆ ಕಳುಹಿಸಿಕೊಟ್ಟು, ನಿಜಸ್ಥಿತಿ ತಿಳಿದುಕೊಂಡು, ಸಹಿ ಬಗ್ಗೆ ಆಮೇಲೆ ವಿಚಾರ ಮಾಡುತ್ತೇನೆ. ಹೊರಡಿರಿ.

ಸಂಸ್ಥಾನದವರು–೨: ನಿಮ್ಮ ಸರಕಾರಿ ವೈದ್ಯರ ಅವಶ್ಯಕತೆ ಇಲ್ಲ ಸಾಹೇಬರೆ. ಮೊದಲಿನಿಂದಲೂ ಅರಮನೆಯ ವೈದ್ಯರಿಂದ ಔಷಧೋಪಚಾರ ನಡೆದಿದೆ. ನಿನ್ನೆ ಪುಣೆಯಿಂದ ಪೇಶ್ವೆಗಳ ರಾಜವೈದ್ಯರೂ ಬಂದಿದ್ದಾರೆ. ಗುಣಮುಖರಾಗುವ ಲಕ್ಷಣಗಳಿವೆ.

ಥ್ಯಾಕರೆ: ಒಳ್ಳೆಯದು, ಗುಣಮುಖರಾಗಲಿ, ನಿಮ್ಮ ಪ್ರಭುಗಳಿಗೆ ಆರೋಗ್ಯವನ್ನು ಹಾರೈಸುತ್ತೇನೆ. ನೀವು ಹೊರಡಿರಿ. ನಮ್ಮ ವೈದ್ಯರು ಇಷ್ಟರಲ್ಲಿ ಕಿತ್ತೂರಿಗೆ ಬರುತ್ತಾರೆ. (ಕಿತ್ತೂರಿನಿಂದ ಬಂದವರು ಅನಿವಾರ್ಯವಾಗಿ ಮರಳುತ್ತಾರೆ).

❖❖

V

(ಕಿತ್ತೂರು, ಬ್ರಿಟಿಷ್ ಕಛೇರಿ, ಥ್ಯಾಕರೆ, ಹಾವೇರಿ ವೆಂಕಟರಾವ ಮಾತುಕತೆ)

ಥ್ಯಾಕರೆ: ವೆಂಕಟರಾವ್, ನಿನ್ನೆ ಕಿತ್ತೂರು ಪ್ರಭುಗಳ ಅಂತ್ಯಕ್ರಿಯೆ ಜರುಗಿತು. ಪ್ರಭುಗಳು ಇರಲಿ. ಇಲ್ಲದಿರಲಿ, ಈ ಸಂಸ್ಥಾನದ ಮೇಲಧಿಕಾರ ನಮ್ಮದು. ಇದರ ಪಾಲನೆ, ಪ್ರಗತಿ ನಮ್ಮ ಹೊಣೆ.

ವೆಂಕಟರಾವ: ಇರಬಹುದು ಸಾಹೇಬರೆ, ನಿಮ್ಮ ಮಾತಿಗೆ ಪ್ರಭುಗಳು ಇರುವಾಗ ಒಂದು ಅರ್ಥ, ಇಲ್ಲದಿರುವಾಗ ಇನ್ನೊಂದು ಅರ್ಥ ಹೊರಡುತ್ತದೆ.ಕಾರಣ, ಈಗ ನಾವು ತುಂಬ ಎಚ್ಚರದಿಂದ ವರ್ತಿಸಬೇಕು.

ಥ್ಯಾಕರೆ: ಹೌದು, ನೀವು ಹೇಳುವುದು ಸರಿ. ಚೆನ್ನಮ್ಮ, ವೀರಮ್ಮ ರಾಜಕೀಯದ ಆಳ ಗೊತ್ತಿರದ ಮಹಿಳೆಯರು. ದತ್ತಕ ಇತ್ಯರ್ಥವಾಗುವುದು ಒಂದಿಷ್ಟು ವಿಳಂಬ ವಾಗಬಹುದು. ಈ ವಿಳಂಬ ಕಾರಣವಾಗಿ ಕೆಲವರು ಖಜಾನೆಯನ್ನು ಕ್ರಮೇಣ ಬರಿದು ಮಾಡಬಹುದೆಂಬ ಚಿಂತೆ ನನ್ನನ್ನು ಕಾಡುತ್ತಿದೆ.

ವೆಂಕಟರಾವ: ನಿಜ ಸಾಹೇಬರೆ, ರಾಜ್ಯವೆಂದರೆ ಖಜಾನೆ, ರಾಜ್ಯ ಕಾಯುವುದೆಂದರೆ ಖಜಾನೆ ಕಾಯುವುದು.

ಥ್ಯಾಕರೆ: ಈ ಕಾಯುವ ಕೆಲಸಕ್ಕಾಗಿಯೇ ಆಡಳಿತದ ಅನುಭವವಿರುವ ನಿಮ್ಮನ್ನು ಧಾರವಾಡದ ಕಛೇರಿಯಿಂದ ಇಲ್ಲಿಗೆ ಕರೆದುಕೊಂಡು ಬಂದಿದ್ದೇನೆ.

ವೆಂಕಟರಾವ: ಸಾಹೇಬರೆ, ನೀವು ವಹಿಸಿಕೊಟ್ಟ ಯಾವುದೇ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು ನನ್ನ ಕರ್ತವ್ಯ.

ಥ್ಯಾಕರೆ: ಹಾಗಾದರೆ, ಈ ಸಂಸ್ಥಾನದ ದಿವಾನ ಮಲ್ಲಪ್ಪನವರನ್ನು ಕರೆಯಿಸಿ ಚರ್ಚಿಸೋಣವೇ?

ವೆಂಕಟರಾವ: ಆಗಲಿ ಸಾಹೇಬರೆ,

ಥ್ಯಾಕರೆ: ಯಾರಿಲ್ಲಿ?

ಸೇವಕ: ಅಪ್ಪಣೆ ಸರ್.

ಥ್ಯಾಕರೆ: ದಿವಾನ ಮಲ್ಲಪ್ಪನವರನ್ನು ಬರಹೇಳು.

ಸೇವಕ: ಆಗಲಿ ಸರ್ (ಹೋಗುವನು).

ಥ್ಯಾಕರೆ: ವೆಂಕಟರಾವ, ಉತ್ತರಕರ್ನಾಟಕದ ಸಂಸ್ಥಾನಗಳಲ್ಲಿಯೇ ಕಿತ್ತೂರು ತುಂಬ ವಿಶಿಷ್ಟವಾದುದು. ಶಿವಲಿಂಗರುದ್ರಸರ್ಜರ ಕಾಲದಲ್ಲಿ ಈ ಸಂಸ್ಥಾನದ ಸಹಾಯದಿಂದಲೇ ೧೮೧೮ರಲ್ಲಿ ನಾವು ಪೇಶ್ವೆರನ್ನು ಸೋಲಿಸಿದೆವು. ಆಗಲೂ ದಿವಾನರಾಗಿದ್ದ ಈ ಮಲ್ಲಪ್ಪನವರೇ ಬಹುಮುಖ್ಯ ಪಾತ್ರವಹಿಸಿದರು. ಅಂದಿನ ಕಲೆಕ್ಟರ್ ಮನ್ರೋ ಇವರ ರಾಜನಿಷ್ಠೆಯ ಬಗ್ಗೆ ಪದೇ ಪದೇ ಹೊಗಳುತ್ತಿದ್ದರು (ದಿವಾನ ಮಲ್ಲಪ್ಪ ಬರುತ್ತಾರೆ).

ಮಲ್ಲಪ್ಪ: ನಮಸ್ಕಾರ ಸಾಹೇಬರೆ.

ಥ್ಯಾಕರೆ: ನಮಸ್ಕಾರ ದಿವಾನರೆ, ಕುಳಿತುಕೊಳ್ಳಿ, ನಿಮ್ಮ ಸಂಸ್ಥಾನದ ಇಂದಿನ ಸ್ಥಿತಿ-ಗತಿ, ನಮಗೂ-ಕಿತ್ತೂರಿನವರಿಗೂ ಇರುವ ಪರಸ್ಪರ ವಿಶ್ವಾಸ ನಿಮಗೆ ಗೊತ್ತೇ ಇದೆ.

ಮಲ್ಲಪ್ಪ: ಹೌದು ಸಾಹೇಬರೆ, ಕಿತ್ತೂರಿನವರು ತುಂಬ ವಿಶ್ವಾಸಾರ್ಹ ರಾಜಕಾರಣಿಗಳೆಂದು ನೀವು ಒಂದೆರಡು ಸಲ ಹೇಳಿದ್ದು ನನಗೆ ನೆನಪಿದೆ.

ಥ್ಯಾಕರೆ: ಈಗಲೂ ನಾನು ಆ ಅಭಿಪ್ರಾಯದವನಾಗಿದ್ದೇನೆ. ಆದರೆ ಈಗ ಸಂದರ್ಭ ಬದಲಾಗಿದೆ. ರಾಜ್ಯವೆಂದರೆ ಖಜಾನೆ, ಈಗ ಅದರ ರಕ್ಷಣೆ ನಿಮ್ಮಂತೆ ನಮ್ಮದೂ ಹೊಣೆಯಾಗಿದೆ. ಆದುದರಿಂದ ದತ್ತಕ ಇತ್ಯರ್ಥವಾಗುವವರೆಗೆ ಇದನ್ನು ಶೀಲ್ ಮಾಡಲು ಬಂದಿದ್ದೇನೆ.

ಮಲ್ಲಪ್ಪ: ಸಾಹೇಬರೆ, ಇದು ಅವಸರದ ನಿರ್ಣಯವಾಗುವುದಿಲ್ಲವೇ?

ಥ್ಯಾಕರೆ: ಅವಸರ ಮಾಡದಿದ್ದರೆ 'ಒಡಯನಿಲ್ಲದ ಮನೆಯ ತುಡುಗುಣಿ ನಾಯಿ ಹೋಗುವಂತೆ' ಕಂಡ ಕಂಡವರು ಖಜಾನೆಯಲ್ಲಿ ಕೈಹಾಕಬಹುದು.

ಮಲ್ಲಪ್ಪ: ಹಾಗೇನಿಲ್ಲ ಸಾಹೇಬರೆ. ಮೊದಲಿನಿಂದಲೂ ಪ್ರಾಮಾಣಿಕ ಅಧಿಕಾರಿಗಳೇ ಅದನ್ನು ನೋಡಿಕೊಳ್ಳುತ್ತಲಿದ್ದಾರೆ.

ಥ್ಯಾಕರೆ: ಮೊದಲಿನ ಕಾಲ ಬೇರೆ, ಪ್ರಭುಗಳಿಲ್ಲದ ಈಗಿನ ಕಾಲ ಬೇರೆ.

ಮಲ್ಲಪ್ಪ: ಹಾಗಿದ್ದರೆ, ತಾಯಿ ಚೆನ್ನಮ್ಮನವರನ್ನು ಒಂದು ಮಾತು ಕೇಳೋಣ.

ಥ್ಯಾಕರೆ: ಬೇಡ, ಅವರು ಈಗ ದುಃಖದಲ್ಲಿದ್ದಾರೆ. ಮೇಲಾಗಿ ಅವರಿಗೂ ಖಜಾನೆಗೂ ನೇರ ಸಂಬಂಧವಿಲ್ಲ. ಬಹಳೆಂದರೆ ಶಿವಲಿಂಗರುದ್ರಸರ್ಜನ ಹೆಂಡತಿ ವೀರಮ್ಮನವರಿಗೆ ಒಂದು ಮಾತು ಕೇಳಬಹುದು. ಆದರೆ ಅವಳು ಕೇವಲ ೧೧ ವರ್ಷದ ಹಸುಳೆ. ೧೮ ವರ್ಷ ಮುಟ್ಟಲು ಇನ್ನೂ ೭ ವರ್ಷ ಬೇಕು. ಹೀಗಾಗಿ ಈಗ ಖಜಾನೆ ಅನಾಥವೆಂದೇ ಹೇಳಬೇಕು.

ಮಲ್ಲಪ್ಪ:	ಇದು ನಿಮ್ಮ ಅಭಿಪ್ರಯ ಸಾಹೇಬರೆ. ಈಗ ಖಜಾನೆ ಅನಾಥವಲ್ಲ. ಪ್ರಭುಗಳಿರಲಿ ಇಲ್ಲದಿರಲಿ, ಪ್ರಜೆಗಳೇ ಇದರ ಒಡೆಯರು. ನೀವು ಖಜಾನೆ ಹತ್ತಿರ ಬಂದರೆ ಕಿತ್ತೂರಿನ ಪ್ರಜೆಗಳು ಉರಿದೇಳಬಹುದು.
ಥ್ಯಾಕರೆ:	ನಾವು ಖಜಾನೆ ರಕ್ಷಿಸುವುದಾದರೂ ಪ್ರಜೆಗಳ ಹಣ ಹಾಳಾಗಬಾರದೆಂಬ ಉದ್ದೇಶದಿಂದ ತಾನೇ?
ಮಲ್ಲಪ್ಪ:	ನಿಮ್ಮ ಈ ಮಾತು ಒಂದು ವಾದವಾಗಬಹುದೇ ಹೊರತು, ವ್ಯವಹಾರ ದೃಷ್ಟಿಯಿಂದ ಸರಿಯಲ್ಲ ಸಾಹೇಬರೆ.
ಥ್ಯಾಕರೆ:	ನೀವು ಹೀಗೆ ಲೌಕಿಕ ದೃಷ್ಟಿಯಿಂದ ಹೇಳಿದರೆ, ನಾವು ಕೇಳುವುದಿಲ್ಲ. ನಮ್ಮದು ಕಾನೂನು ದೃಷ್ಟಿ.
ಮಲ್ಲಪ್ಪ:	ಸಾಹೇಬರೇ, ಇದು ಕಾಲಕ್ರಮೇಣ ಅವಿಶ್ವಾಸಕ್ಕೆ ದಾರಿ ಮಾಡಿಕೊಟ್ಟು ಈವರೆಗಿನ ನಮ್ಮ ನಿಮ್ಮ ಸಂಬಂಧಕ್ಕೆ ಧಕ್ಕೆ ತರಬಹುದು.
ಥ್ಯಾಕರೆ:	ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ, ಯಾವುದೂ ದೊಡ್ಡದಲ್ಲ.
ಮಲ್ಲಪ್ಪ:	ಪ್ರಭುಗಳ ನಿಧನದಿಂದಾಗಿ ಈಗ ರಾಜ್ಯದಲ್ಲಿ, ರಾಜಧಾನಿಯಲ್ಲಿ, ಅರಮನೆಯಲ್ಲಿ ಶೂನ್ಯವಾತಾವರಣ ತುಂಬಿದೆ.....
ಥ್ಯಾಕರೆ:	ದುಷ್ಟರು ದುರ್ಲಾಭ ಪಡೆಯಲು ಇಂತಹ ವಾತಾವರಣ ತುಂಬ ಅನುಕೂಲ. ಅದಕ್ಕಾಗಿಯೇ ನಾವು ಅವಸರ ಮಾಡುತ್ತಿರುವುದು. ನೀವು ಮಾತ್ರ ಈ ಖಜಾನೆಯ ಹಕ್ಕುದಾರರಲ್ಲ, ನಾವೂ ಹಕ್ಕುದಾರರು.ಇಬ್ಬರೂ ಸೇರಿ ಇದನ್ನು ರಕ್ಷಿಸಬೇಕು. ಅದಕ್ಕಾಗಿಯೇ ಸಹಿಯೊಂದಿಗೆ ಖಜಾನೆ ಶೀಲ್ ಮಾಡುತ್ತೇವೆ. ಇಂದಿನಿಂದ ಸಂಸ್ಥಾನದ ಸಣ್ಣಪುಟ್ಟ ವ್ಯವಹಾರಗಳಿಗೆ ವೆಂಕಟ ಮತ್ತು ನೀವಿಬ್ಬರೂ ಜವಾಬ್ದಾರರಾಗಿರುತ್ತೀರಿ.ಏಳಿರಿ ಹೊತ್ತಾಯಿತು. ಖಜಾನೆ ಶೀಲ್ ಮಾಡೋಣ. ನಿಮ್ಮ ಸೈನಿಕರ ಜೊತೆ ನಮ್ಮ ಸೈನಿಕರೂ ಅದಕ್ಕೆ ಕಾವಲಿರಲಿ (ಎಲ್ಲರೂ ಎದ್ದುಹೋಗುವರು.)

❖❖

VI

(ಧಾರವಾಡದ ಕಛೇರಿ. ಸ್ಟೀವನ್‌ಸನ್, ಎಲಿಯಟ್ ಬರವಣಿಗೆಯಲ್ಲಿ ಮಗ್ನರಾಗಿದ್ದಾರೆ. ಅವರಾದಿ ವೀರಪ್ಪ ಬರುತ್ತಾನೆ).

ವೀರಪ್ಪ : ನಮಸ್ಕಾರ ಸಾಹೇಬರೆ,

ಎಲಿಯಟ್: ನಮಸ್ಕಾರ, ಏನು ಅನಿರೀಕ್ಷಿತ ಆಗಮನ? ಒಬ್ಬರೇ ಬಂದಿರುವಿರಿ?

ವೀರಪ್ಪ: ಒಂದು ಮಹತ್ವದ ವಿಷಯ ಹೇಳುವುದಿತ್ತು. ಕಾರಣ, ರಹಸ್ಯವಾಗಿ ನಾನೊಬ್ಬನೇ ಬಂದಿದ್ದೇನೆ. ಥ್ಯಾಕರೆ ಸಾಹೇಬರನ್ನು ಕಾಣಬಹುದೆ?

ಸ್ಟೀವನ್‌ಸನ್: ಅವಶ್ಯ ಕಾಣಬಹುದು. ಏನು ವಿಷಯ? ನಮ್ಮ ಮುಂದೆ ಹೇಳಿರಿ. ನಾವು ಅದೆಲ್ಲವನ್ನು ಸಾಹೇಬರಿಗೆ ವಿವರಿಸಿ, ಅವರು ಒಪ್ಪಿದರೆ ನಿಮ್ಮನ್ನು ಒಳಗೆ ಕರೆದುಕೊಂಡು ಹೋಗುತ್ತೇವೆ. (ಮೂವರೂ ಮಾತನಾಡುತ್ತಾರೆ, ಬಳಿಕ ಎಲಿಯಟ್ ಒಳಗೆ ಹೋಗುತ್ತಾನೆ).

ಸ್ಟೀವನ್‌ಸನ್: ವೀರಪ್ಪನವರೆ, ಕಿತ್ತೂರಿನ ದೂತರು ದತ್ತಕ ಪತ್ರದೊಂದಿಗೆ ತೇಗೂರಿಗೆ ಬಂದ ಸಂದರ್ಭದಲ್ಲಿಯೇ ನಮಗೆ ದತ್ತಕಪತ್ರದ ಬಗ್ಗೆ ಸಂಶಯ ಬಂದಿದ್ದಿತು. ಮೊನ್ನೆ ನಮ್ಮ ಸರಕಾರಿ ವೈದ್ಯರೂ ಅದನ್ನು ಸ್ಪಷ್ಟಪಡಿಸಿದ್ದರು. ಈಗ ನಿಮ್ಮಿಂದ ಇನ್ನೂ ಸ್ಪಷ್ಟವಾಯಿತು(ಮಾತು ಮುಗಿಯುತ್ತಲೇ ಎಲಿಯಟ್ ಬರುತ್ತಾನೆ).

ಎಲಿಯಟ್: ವೀರಪ್ಪನವರೆ, ಸಾಹೇಬರಿಗೆ ಎಲ್ಲ ವಿವರಿಸಿದ್ದೇನೆ. ಅವರು ಸಂತೋಷ ಪಟ್ಟಿದ್ದಾರೆ. ಈ ರಹಸ್ಯ ತಿಳಿಸಿದ್ದಕ್ಕಾಗಿ ನೀವು ಅಪೇಕ್ಷಿಸಿದ ಹುದ್ದೆ ನೀಡಲು ಒಲವು ತೋರಿದ್ದಾರೆ. ಬನ್ನಿರಿ, ಒಳಗೆ ಹೋಗೋಣ(ಮೂವರೂ ಒಳಗೆ ಹೋಗುತ್ತಾರೆ).

ವೀರಪ್ಪ: ನಮಸ್ಕಾರ ಸಾಹೇಬರೆ,

ಥ್ಯಾಕರೆ: ನಮಸ್ಕಾರ ವೀರಪ್ಪನವರೆ, ಬನ್ನಿ ಕುಳಿತುಕೊಳ್ಳಿ. ಎಲಿಯಟ್ ಎಲ್ಲ ಹೇಳಿದ್ದಾರೆ. ನಿಮ್ಮಿಂದಲೂ ಕೇಳಬೇಕಾಗಿದೆ, ಹೇಳಿ.

ವೀರಪ್ಪ: ಸಾಹೇಬರೆ, ಶಿವಲಿಂಗರುದ್ರಸರ್ಜ ಪ್ರಭುಗಳು ತೀರಿಕೊಂಡದ್ದು ಸಪ್ಟೆಂಬರ್ ೧೧ರ ರಾತ್ರಿ, ಆದರೆ ಈ ಮೊದಲು ೧೦ರಂದು ಅವರೇ ಬರೆದು ಸಹಿಹಾಕಿರುವರು ಎಂಬರ್ಥದ ಪತ್ರವನ್ನು ದಿವಾನರೇ ಸಿದ್ಧಪಡಿಸಿ ತೇಗೂರಿನಲ್ಲಿದ್ದ ತಮಗೆ ಕಳುಹಿಸಿದ್ದಾರೆ.

ಥ್ಯಾಕರೆ: ಇದೆಲ್ಲವನ್ನು ಮಾಡಲು ಮಲ್ಲಪ್ಪನವರ ಉದ್ದೇಶವೇನು?

ವೀರಪ್ಪ: ಮಾಸ್ತಮರಡಿ ಹುಡುಗ ಇನ್ನೂ ಸಣ್ಣವ. ಮಹಿಳೆಯರಾದ ಚೆನ್ನಮ್ಮ, ವೀರಮ್ಮನವರ ರಾಜಕೀಯ ಜ್ಞಾನ ಅಷ್ಟಕ್ಕಷ್ಟೇ. ಈ ಸಂದರ್ಭವನ್ನು ಬಳಸಿಕೊಂಡು ತಾನು ಅಧಿಕಾರ ನಡೆಸುವುದು ಮಲ್ಲಪ್ಪನ ಲೆಕ್ಕಾಚಾರ.

ಥ್ಯಾಕರೆ: ನನಗೇನೋ ಮಲ್ಲಪ್ಪ ಅಂತಹ ಮನುಷ್ಯನಲ್ಲ ಅನಿಸುತ್ತದೆ.

ವೀರಪ್ಪ: ಸಾಹೇಬರೆ, ಅವನ ಮಾತು ಬೇರೆ, ಮನಸ್ಸು ಬೇರೆ, ಅವನ ಇಂತಹ ಅನೇಕ ಹುನ್ನಾರಗಳಿಗೆ ನಾನು ಆಗಾಗ ಅಡ್ಡಿ ಮಾಡಿದೆ. ಹೀಗಾಗಿ ನನ್ನ ಮೇಲೆ ಇಲ್ಲದ ಆರೋಪ ಹೊರಿಸಿ ಅಧಿಕಾರವನ್ನು ಮೊಟಕುಗೊಳಿಸಿದ.

ಥ್ಯಾಕರೆ: ಅನ್ಯಾಯ, ಅನ್ಯಾಯ. ನಿಮ್ಮಂಥ ಉಕ್ಕಿನ ಮನುಷ್ಯರಿಗೆ ಈ ರೀತಿ ಅಪಮಾನ ಮಾಡುವುದೆಂದರೇನು?

ಸ್ಟೀವನ್‌ಸನ್: ಹೌದು ಸಾಹೇಬರೆ, ಇಂದು ಸಮಾಜದಲ್ಲಿ ಸಜ್ಜನರಿಗೆ ಗೌರವವಿಲ್ಲ. ವೀರಪ್ಪನಂತಹ ಸಜ್ಜನರ ಅಧಿಕಾರವನ್ನು ಹಾಡುಹಗಲೇ ಮೊಟಕು ಗೊಳಿಸುವುದೆಂದರೆ ಸತ್ಯಕ್ಕೆ ಮಾಡುವ ಅಪಮಾನ.

ಥ್ಯಾಕರೆ: ಹೌದು ವೀರಪ್ಪನವರೆ. ಈ ಸುದ್ದಿ ತಂದುದಕ್ಕಾಗಿ ನಿಮ್ಮ ಹುದ್ದೆಯನ್ನು ಸಮಯ ನೋಡಿ ಮೊದಲಿನಂತೆ ಊರ್ಜಿತಗೊಳಿಸುತ್ತೇವೆ.

ಎಲಿಯಟ್: ನೀವು ಆಗಾಗ ಅವಶ್ಯವೆನಿಸಿದಲ್ಲಿ ಇಲ್ಲಿಗೆ ಬರಬಹುದು. ನಿಮಗೆ ಈ ಕಛೇರಿ ಬಾಗಿಲು ಯಾವಾಗಲೂ ತೆರೆದಿರುತ್ತದೆ.

ವೀರಪ್ಪ: ಆಗಲಿ, ಹೋಗಿ ಬರುತ್ತೇನೆ.

ಥ್ಯಾಕರೆ: (ಸ್ಟೀವನ್‌ಸನ್‌ನನ್ನು ಉದ್ದೇಶಿಸಿ) ಸ್ಟೀವನ್‌ಸನ್, ವೀರಪ್ಪನವರಿಗೆ ಸರಕಾರದ ಘನತೆಗೆ ತಕ್ಕಂತೆ ಸನ್ಮಾನಿಸಿ ಕಳುಹಿಸಿರಿ.

ವೀರಪ್ಪ: ಈ ಸನ್ಮಾನವು ನೀವು ಮುಂದೆ ನೀಡಲಿರುವ ಹುದ್ದೆಯ ಮುನ್ಸೂಚನೆ ಎಂದು ಭಾವಿಸುತ್ತೇನೆ.

ಥ್ಯಾಕರೆ: ಖಂಡಿತವಾಗಿಯೂ ಮುನ್ಸೂಚನೆಯಾಗಿದೆ; ಹೋಗಿ ಬನ್ನಿ (ಮೂವರೂ ಹೋಗುತ್ತಾರೆ).

❖❖

VII

(ಸಚಿವಾಲಯ. ದಿವಾನ ಮಲ್ಲಪ್ಪ ಮತ್ತು ವೆಂಕಟರಾವ ಮಾತನಾಡುತ್ತಿದ್ದಾರೆ).

ಮಲ್ಲಪ್ಪ: ವೆಂಕಟರಾವ, ನೀವು ಈ ಹುದ್ದೆ ನಿರ್ವಹಿಸಲು ತೊಡಗಿ ಒಂದು ವಾರ ಗತಿಸಿತಲ್ಲವೇ?

ವೆಂಕಟರಾವ: ಧಾರವಾಡದ ಸರ್ವೀಸ್ ಹಿಡಿದು ಹೇಳುವುದಾರೆ ಇಪ್ಪತ್ತು ವರ್ಷದ ಮೇಲೆ ಒಂದು ವಾರ ಗತಿಸಿತು.

ಮಲ್ಲಪ್ಪ: ನಾನು ಹಾಗೆ ಕೇಳಲಿಲ್ಲ.

ವೆಂಕಟರಾವ: (ಚಾಳೀಸ್ ಎತ್ತಿ) ಹೇಗೆ ಕೇಳಿದಿರಿ?

ಮಲ್ಲಪ್ಪ: ನಾವಿಬ್ಬರೂ ಸೇರಿ ದಿನನಿತ್ಯದ ವ್ಯವಹಾರ ನಡೆಸಲು ಥ್ಯಾಕರೆ ಸಾಹೇಬರು ಹೇಳಿ ಒಂದುವಾರ ಗತಿಸಿತು. ಆದರೆ ಕೆಲವು ಕಾಗದಗಳಿಗೆ ನೀವು ರುಜು ಹಾಕಲೇ ಇಲ್ಲ.

ವೆಂಕಟರಾವ: ಹೌದು, ಅವು ಇಂಗ್ಲಿಷ್‌ರ ನಿಯಮಗಳಿಗೆ ಬಾಹಿರವಾಗಿವೆ.

ಮಲ್ಲಪ್ಪ: ಈಗ ನೀವು ಕೆಲಸ ಮಾಡುತ್ತಲಿರುವುದು ಇಂಗ್ಲಿಷ್‌ರ ಕಛೇರಿಯಲ್ಲಲ್ಲ, ಸಂಸ್ಥಾನಿಕರ ಕಛೇರಿಯಲ್ಲಿ. ಇಲ್ಲಿ ರಾಜ್ಯದ ಆಡಳಿತ ಒಂದು ಕುಟುಂಬದ ಆಡಳಿತವೆಂದೇ ಈವರೆಗೆ ಆಪ್ತವಾಗಿ ಸಾಗಿ ಬಂದಿದೆ. ಇದಕ್ಕೆ ಅನುಗುಣವಾಗಿ ಕಾಗದಗಳಿವೆ.

ವೆಂಕಟರಾವ: ದಿವಾನರೇ, ಕುಟುಂಬದ ಆಡಳಿತವೇ ಬೇರೆ, ಕಛೇರಿಯ ಆಡಳಿತವೇ ಬೇರೆ.

ಮಲ್ಲಪ್ಪ: ಇಲ್ಲಿ ನಾನು ಮನೆಯವನಂತೆ ವರ್ತಿಸುತ್ತಿದ್ದೇನೆ. ನೀವು ನೆರೆಮನೆಯವರಂತೆ ವರ್ತಿಸುತ್ತಿರುವಿರಿ. ನಾನು ಹೃದಯವಂತನಂತೆ, ನೀವು ಬುದ್ಧಿವಂತರಂತೆ ನಡೆದುಕೊಳ್ಳುತ್ತಲಿದ್ದೇವೆ. ಹೀಗಾದರೆ ಹೇಗೆ?

ವೆಂಕಟರಾವ: ನಮ್ಮಿಬ್ಬರ ಆಡಳಿತ ತರಬೇತಿ ಭಿನ್ನವಾಗಿರುವುದರಿಂದ ಈ ಅಭಿಪ್ರಾಯ ಭೇದ ಸಹಜವಾಗಿದೆ.

ಮಲ್ಲಪ್ಪ: ಈಗ ರಾಜಕುಟುಂಬ ಪ್ರಭುಗಳನ್ನು ಕಳೆದುಕೊಂಡು ದುಃಖದಲ್ಲಿ ಮುಳುಗಿದೆ. ಈ ಸಂದರ್ಭದಲ್ಲಿ ಒಂದಿಷ್ಟು ಹೃದಯವಂತಿಕೆ ತೋರಿಸುವುದು ನಮ್ಮ ಧರ್ಮ. ನಿಮ್ಮ ಈ ತಕ್ಷಣದ ಆಡಳಿತದ ತಿರುವು ರಾಜಕುಟುಂಬದವರಿಗೆ ಆಘಾತವನ್ನುಂಟು ಮಾಡಬಹುದು.

ವೆಂಕಟರಾವ: ಅದು ನನಗೆ ಮುಖ್ಯವಲ್ಲ.

ಮಲ್ಲಪ್ಪ: ಹಾಗಾದರೆ, ಥ್ಯಾಕರೆ ಸಾಹೇಬರು ಹೇಳಿದಂತೆ ಇಬ್ಬರೂ ಸಮನ್ವಯದಿಂದ ಆಡಳಿತ ನಡೆಸುವುದು ಕಠಿಣವಾಗುತ್ತದೆ. ವಿಚಾರಮಾಡಿರಿ. ನನಗೆ ಬೇರೆ ಕೆಲಸವಿದೆ, ಹೋಗುತ್ತೇನೆ (ಹೋಗುವನು. ವೆಂಕಟರಾವ ಬರವಣಿಗೆಯಲ್ಲಿ ತೊಡಗುವನು, ವೀರಪ್ಪ ಬರುತ್ತಾನೆ).

ವೀರಪ್ಪ: ನಮಸ್ಕಾರ ರಾಯರೆ,

ವೆಂಕಟರಾವ: ಬನ್ನಿ ವೀರಪ್ಪನವರೆ, ಏನು ಈ ಕಡೆ ಸವಾರಿ.

ವೀರಪ್ಪ: ಏನಿಲ್ಲ. ಈಗ ಸಂಸ್ಥಾನದ ಆಡಳಿತದೊಂದಿಗೆ ಸರಕಾರದ ಆಡಳಿತ ಸೇರಿಕೊಂಡಿದೆ. ಹೇಗಿದೆ ನಿಮ್ಮ ಅನುಭವ?

ವೆಂಕಟರಾವ: ಇದೀಗ ಹೊಸ ಆಡಳಿತ ಆರಂಭವಾಗಿದೆ. ಒಂದಿಷ್ಟು ಸಮಸ್ಯೆಗಳು ಎದುರಾಗಿವೆ. ಮುಂದೆ ಹೊಂದಿಕೆಯಾಗಬಹುದು.

ವೀರಪ್ಪ: ನೀವು ತುಂಬಾ ಆಶಾವಾದಿಗಳು. ನಮ್ಮ ದಿವಾನರೊಂದಿಗೆ ನೀವು ಹೊಂದಿಕೊಳ್ಳುವುದು ಒಂದಿಷ್ಟು ಕಷ್ಟವೇ ಸರಿ.

ವೆಂಕಟರಾವ: ನಾನೇಕೆ ಅವರೊಂದಿಗೆ ಹೊಂದಿಕೊಳ್ಳಬೇಕು. ನಾನು ಸರಕಾರದ ಅಧಿಕಾರಿ. ನನ್ನೊಂದಿಗೆ ಅವರೇ ಹೊಂದಿಕೊಳ್ಳಬೇಕು.

ವೀರಪ್ಪ: ರಾಯರೇ, ಇಲ್ಲಿಯವರೆಗೆ ದಿವಾನರು ಆಡಿದ್ದೇ ಆಟ, ಮಾಡಿದ್ದೇ ಮಾಟ. ಈಗ ನೀವು ಅವರಿಗೆ ತೊಡಕಾಗಿ ಪರಿಣಮಿಸಿರುವಿರಿ. ಮೊದಲಿನಿಂದಲೂ ಅವರು ಅರಮನೆಯ ಸಂಪತ್ತನ್ನು ತಮ್ಮ ಮನೆಗೆ ಸಾಗಿಸುತ್ತ ಬಂದಿದ್ದಾರೆ. ಬೆಲೆಯುಳ್ಳ ವಜ್ರದ ಪೆಟ್ಟಿಗೆ ಮೊನ್ನೆ ಮಾಯವಾಗಿದೆ.

ವೆಂಕಟರಾವ: ಇದಕ್ಕೆ ನಿಮ್ಮಲ್ಲಿ ಆಧಾರವಿದೆಯಾ?

ವೀರಪ್ಪ: ಆಧಾರವೇನಿಲ್ಲ ಅಂಗೈ ಹುಣ್ಣಿಗೆ ಕನ್ನಡಿ ಅವಶ್ಯವೇ? ಹಾದಿಬೀದಿ ಜನರಿಗೂ ಇದು ಗೊತ್ತಿದೆ. ನೀವು ಈಗ ಅವರ ಇಂತಹ ಕೆಲಸಗಳಿಗೆ ಅಡ್ಡಿಯಾಗಿರುವಿರಿ.

ವೆಂಕಟರಾವ: ಅದಕ್ಕೆಂದೇ ಕಾಣುತ್ತದೆ. ಇಂದು ಒಂದಿಷ್ಟು ವಾದ ಮಾಡಿದರು.

ವೀರಪ್ಪ: ಇನ್ನೂ ನೋಡಿರಿ, ವಾದ ಬೆಳೆಯುತ್ತಲೇ ಹೋಗುತ್ತದೆ. ಆದುದರಿಂದ ಈಗಿನಿಂದಲೇ ಇವನನ್ನು ನಿಯಂತ್ರಣದಲ್ಲಿಡಿರಿ. ನಿಮ್ಮ ಸಾಹೇಬರಿಗೆ ಇವನ ಅಧಿಕಾರ ಮೋಹ, ಹಣದ ಭೋಜಗಳ ವಿವರ ತಿಳಿಸುತ್ತ ಹೋಗಿರಿ. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗದು. ಹೋಗಿಬರುತ್ತೇನೆ, ನಮಸ್ಕಾರ (ಹೋಗುವನು).

❖❖

VIII

(ಕಿತ್ತೂರು ಅರಮನೆ. ಚನ್ನಮ್ಮ, ವೀರಮ್ಮ ಬರುತ್ತಲೇ ದಿವಾನ ಮಲ್ಲಪ್ಪ, ಗುರುಸಿದ್ದಪ್ಪ, ವೀರಪ್ಪ ಎದ್ದುನಿಂತು ಗೌರವ ಸೂಚಿಸುತ್ತಾರೆ).

ಚೆನ್ನಮ್ಮ: ದಿವಾನರೇ, ಪ್ರಭುಗಳು ನಿಧನರಾಗಿ ಇಂದಿಗೆ ೧೫ ದಿನ ಗತಿಸಿದವು. ಇಷ್ಟು ದಿನ ನಾವು ಆ ದುಃಖದಲ್ಲಿ ಮುಳುಗಿದ್ದೆವು. ಬಂಧು ಬಳಗದವರು ಸಾಂತ್ವನ ಹೇಳಲು ಬರುವುದು-ಹೋಗುವುದರ ಮಧ್ಯೆ ಬಿಡುವೇ ಇರಲಿಲ್ಲ. ಹೀಗಿರುವಾಗ ಗಾಯದ ಮೇಲೆ ಬರೆ ಎನ್ನುವಂತೆ ಥ್ಯಾಕರೆ ದತ್ತಕಕ್ಕೆ ಇನ್ನೂ ಸಮ್ಮತಿ ನೀಡಿಲ್ಲ. ಇದು ಸಾಲದೆಂಬಂತೆ ಮೊನ್ನೆ ಇಲ್ಲಿಗೆ ಬಂದು ಖಜಾನೆ ಮುದ್ರಿಸಿದರು, ವೆಂಕಟರಾಯರನ್ನು ಇಲ್ಲಿ ನೇಮಿಸಿದರು. ಈ ಎಲ್ಲ ತೊಡಕುಗಳ ಬಗ್ಗೆ ಚರ್ಚಿಸಲು ನಿಮ್ಮನ್ನು ಕರೆಸಿದ್ದೇನೆ.

ಮಲ್ಲಪ್ಪ: ತಾಯೀ, 'ಗೂಳಿ ಬಿದ್ದರೆ ಆಳಿಗೊಂದು ಕಲ್ಲು' ಎಂಬಂತಾಗಿದೆ, ನಮ್ಮ ಸ್ಥಿತಿ. ಈಗ ಈ ಎಲ್ಲ ತೊಡಕುಗಳಲ್ಲಿ ಮೊದಲು ಬಿಡಿಸಿಕೊಳ್ಳಬೇಕಾದುದು ದತ್ತಕ ಸಮಸ್ಯೆ. ಇದು ಪರಿಹಾರವಾದರೆ ಏನೆಲ್ಲ ತಾನೇ ಪರಿಹಾರವಾಗುತ್ತವೆ.

ಚೆನ್ನಮ್ಮ: ಇಂದು ಭೆಟ್ಟಿಗೆ ಬರುವುದಾಗಿ ಥ್ಯಾಕರೆ ಹೇಳಿ ಕುಳುಹಿಸಿದ್ದಾರೆ. ನಾವು ಇಂದೇ ಅವರೊಂದಿಗೆ ಚರ್ಚಿಸಿ ಈ ಎಲ್ಲ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿಕೊಳ್ಳಬೇಕು (ಸೇವಕ ಬರುತ್ತಾನೆ).

ಸೇವಕ: ತಾಯೀ, ಥ್ಯಾಕರೆಯವರು ಬಂದಿದ್ದಾರೆ.

ಚೆನ್ನಮ್ಮ: ಒಳಗೆ ಬರಹೇಳು (ಸೇವಕ ಹೋಗುತ್ತಾನೆ. ಥ್ಯಾಕರೆ ಸ್ಟೀವನ್‌ಸನ್, ಎಲಿಯಟ್ ಬರುತ್ತಾರೆ).

ಥ್ಯಾಕರೆ: ನಮಸ್ಕಾರ ಚೆನ್ನಮ್ಮನವರೇ, ವೀರಮ್ಮನವರೇ.

ಚೆನ್ನಮ್ಮ: ನಮಸ್ಕಾರ, ಯಾವಾಗ ಬಂದಿರಿ?

ಥ್ಯಾಕರೆ: ಮೊನ್ನೆ ೧೩ರಂದು ಸ್ಟೀವನ್‌ಸನ್ ಮತ್ತು ಫ್ರೀಜ್‌ರೊಂದಿಗೆ ಬಂದು ೧೫ರ ವರೆಗೆ ಇಲ್ಲಿಯೇ ಇದ್ದು, ತಮ್ಮನ್ನು ಭೇಟ್ಟಿಯಾಗದೆ ಅವಸರದಲ್ಲಿಯೇ ಮರಳಿದೆನು. ಆಗ ನಿಮ್ಮ ದಿವಾನರಿಗೆ ನೆರವಾಗುವ ಸಲುವಾಗಿ ನನ್ನ ಧಾರವಾಡ ಕಛೇರಿಯ ಕಾರಕೂನ ಹಾವೇರಿ ವೆಂಕಟರಾವ ಅವರನ್ನು ನೇಮಿಸಿ ಹೋದೆನು. ಇಂದು ಸಪ್ಟೆಂಬರ್ ೨೫. ನಿಮ್ಮೊಂದಿಗೆ ಕೆಲವು ಮಹತ್ವದ ಮಾತುಗಳನ್ನಾಡಲು, ನಿಮಗೆ ಸಾಂತ್ವನ ಹೇಳಲು ಬಂದಿದ್ದೇನೆ.

ಚೆನ್ನಮ್ಮ: ಸಾಹೇಬರೆ ಯಾರು, ಏನೇ ಸಾಂತ್ವನ ಹೇಳಿದರೂ ನಮ್ಮ ಕಿಚ್ಚನ್ನು ಯಾರೂ ನಂದಿಸಲಾರರು.

ಥ್ಯಾಕರೆ: ಹೌದು, ಶಿವಲಿಂಗರುದ್ರಸರ್ಜರ ಮರಣ ನನಗೂ ನೋವನ್ನುಂಟು ಮಾಡಿದೆ. ಸಣ್ಣ ವಯಸ್ಸು, ಬೇಗ ತೀರಿಕೊಂಡರು. ಅವರ ಆತ್ಮಕ್ಕೆ ಶಾಂತಿ ಇರಲಿ. ಸಂಸ್ಥಾನದ ಮುಂದಿನ ವ್ಯವಸ್ಥೆ ಏನು?

ಮಲ್ಲಪ್ಪ: ಏನಿಲ್ಲ ಸಾಹೇಬರೆ, ಶಿವಲಿಂಗರುದ್ರಸರ್ಜರು ಪತ್ರದಲ್ಲಿ ದಾಖಲಿಸಿರುವಂತೆ ಆದಷ್ಟು ಬೇಗ ಮಾಸ್ತಮರಡಿಯ ಬಾಳಪ್ಪಗೌಡರ ಮಗನಿಗೆ 'ಸವಾಯಿ ಮಲ್ಲಸರ್ಜ' ಹೆಸರಿನಿಂದ ಪಟ್ಟಕಟ್ಟುವ ವಿಚಾರ ಮಾಡಿದ್ದೇವೆ. ನಮ್ಮ ಪ್ರಭುಗಳು ಈ ಬಗ್ಗೆ ನಿಮಗೆ ಬರೆದಿದ್ದ ಪತ್ರಕ್ಕೆ ನಿಮ್ಮ ಉತ್ತರದ ದಾರಿ ಕಾಯುತ್ತಲಿದ್ದೇವೆ.

ಥ್ಯಾಕರೆ: ಅವಸರ ಮಾಡಬೇಡಿ, ಪ್ರಭುಗಳ ಅಕಾಲಿಕ ಮರಣ, ದತ್ತಕ ಬಗೆಗಿನ ಅವರ ಪತ್ರ ಇತ್ಯಾದಿಗಳ ಬಗ್ಗೆ ನಾನು ವಿಶೇಷ ಮಾಹಿತಿ ಸಂಗ್ರಹಿಸಿದ್ದೇನೆ. ಮುಂಬೈ ಗವರ್ನರ ಕೇಳಿದ ಪ್ರಶ್ನೆಗಳಿಗೆ ಉತ್ತರ ಕಳಿಸಿದ್ದೇನೆ. ಅವರಿಂದ ಉತ್ತರ ಬರುವವರೆಗೆ ದತ್ತಕ ಕಾರ್ಯ-ಪಟ್ಟಬಂಧೋತ್ಸವ ಇತ್ಯಾದಿ ವಿಚಾರ ಮಾಡಬೇಡಿರಿ. ಕೆಲವು ದಿನ ಮುಂದೂಡಿರಿ

ಗುರುಸಿದ್ದಪ್ಪ: ಮುಂದೂಡುವುದೇಕೆ ಸಾಹೇಬರೆ, ಮಾಸ್ತಮರಡಿ ಗೌಡರ ಮಗನನ್ನು ದತ್ತಕ ತೆಗೆದುಕೊಳ್ಳುವುದಾಗಿ ಪ್ರಭುಗಳೇ ನಿಮಗೆ ಪತ್ರ ಬರೆದಿರುವಾಗ......

ಚೆನ್ನಮ್ಮ: ಹೌದು, ನೀವು ಒಪ್ಪಿಗೆ ಕೊಡುವುದು ಮಾತ್ರ ಬಾಕಿ ಉಳಿದಿದೆ.

ಥ್ಯಾಕರೆ: ಹಾಗಲ್ಲ ರಾಣಿಯವರೆ, ಯಾವುದೇ ಕಾರ್ಯ ಕಾಯ್ದೆ ಪ್ರಕಾರ ಜರುಗಬೇಕು. ನಮ್ಮ-ನಿಮ್ಮ ಮೇಲೆ ಅಧಿಕಾರಿಗಳಿದ್ದಾರೆ.

ಮಲ್ಲಪ್ಪ: ಸಾಹೇಬರೆ, ನಮ್ಮದು ಸ್ವತಂತ್ರ ಸಂಸ್ಥಾನ. ಇದರ ಮೇಲೆ ನಿಮ್ಮದು ಸಾಂಕೇತಿಕ ಅಧಿಕಾರ. ಹೀಗಿರುವಾಗ....

ಚೆನ್ನಮ್ಮ: ಹೌದು, ಹೀಗಿರುವಾಗ ಎಲ್ಲದಕ್ಕೂ ನಿಮ್ಮನ್ನು ಕೇಳುವುದು ಅವಶ್ಯವೆನಿಸುವುದಿಲ್ಲ. ನೀವು ಇಲ್ಲಿ ನೇಮಿಸಿದ ವೆಂಕಟರಾಯರು ಸುಳ್ಳು ವರದಿ ನೀಡಿ ನಮ್ಮ ರಾಜ್ಯದ ವಿಷಯವಾಗಿ, ನಮ್ಮ ದಿವಾನರ ವಿಷಯವಾಗಿ ನಿಮ್ಮ ತಲೆ ಕೆಡಿಸುತ್ತಲಿದ್ದಾರೆ.

ಥ್ಯಾಕರೆ: ನಿಮ್ಮೊಂದಿಗೆ ವೆಂಕಟರಾವ ಬಗ್ಗೆ, ದತ್ತಕದ ಬಗ್ಗೆ ಚರ್ಚಿಸುವುದರಿಂದ ಪ್ರಯೋಜನವಿಲ್ಲ. ನಾನು ದತ್ತಕಕಾರ್ಯ ಸದ್ಯ ತಡೆಯುತ್ತೇನೆ. ಈ ಸಂಸ್ಥಾನವನ್ನು ರಕ್ಷಿಸುವ ಬಗ್ಗೆ ನಿಮ್ಮಂತೆ ನಮಗೂ ಅಧಿಕಾರವಿದೆ. ಕಾರಣ, ಮುಂಬೈಯಿಂದ ಆಜ್ಞೆ ಬರುವವರೆಗೆ ಖಜಾನೆ ಸುಸ್ಥಿತಿಯಲ್ಲಿ ಉಳಿಯಲೆಂದೇ ಅದನ್ನು ಮುದ್ರಿಸಿದ್ದೇನೆ.

ಚೆನ್ನಮ್ಮ: ಖಜಾನೆಯ ಸುಸ್ಥಿತಿಯ ಬಗ್ಗೆ ನೀವು ಚಿಂತಿಸುವ ಕಾರಣವಿರಲಿಲ್ಲ.

ಥ್ಯಾಕರೆ: ರಾಣಿಯವರೇ, ಅರಸನಿಲ್ಲದ ರಾಜ್ಯವೆಂದರೆ ಅರಾಜಕತೆ. ಎಲ್ಲ ಕಡೆಯಂತೆ ಹಿತಶತ್ರುಗಳು ನಿಮ್ಮಲ್ಲಿಯೂ ಇರಬಹುದು. ಸ್ವಲ್ಪ ಮೈಮರೆತರೆ ಇವರೆಲ್ಲ ಖಜಾನೆಯನ್ನು ಹರಿದು ಹಂಚಿಕೊಂಡಾರು.

ಮಲ್ಲಪ್ಪ: ಸಾಹೇಬರೆ, ನಮ್ಮ ಖಜಾನೆಯ ಅಧಿಕಾರಿಗಳೆಲ್ಲ ವಿಶ್ವಾಸಿಕರು–ರಾಜ್ಯಹಿತಚಿಂತಕರು.

ಥ್ಯಾಕರೆ: ದಿವಾನರೆ, ನಿಮಗಿಂತ ನಮಗೆ ನಿಮ್ಮ ಅಧಿಕಾರಗಳ ಬಗ್ಗೆ ಹೆಚ್ಚು ಗೊತ್ತಿದೆ. ಗುಪ್ತಚರರಿಂದ ಎಲ್ಲ ಮಾಹಿತಿ ಸಂಗ್ರಹಿಸಿದ್ದೇವೆ. ಅದೆಲ್ಲವನ್ನು ಇಲ್ಲಿ ಬಿಡಿಸಿ ಹೇಳುವುದು ಸೂಕ್ತವಲ್ಲ. ಖಜಾನೆ ಮುದ್ರಿಸಿದ ಬಗ್ಗೆ ಸುಮ್ಮನೇ ಪ್ರಶ್ನಿಸಬೇಡಿ.

ಮಲ್ಲಪ್ಪ: ಸಾಹೇಬರೆ ಕ್ಷಮಿಸಿ, ಈ ದಬ್ಬಾಳಿಕೆಯನ್ನು ಪ್ರಶ್ನಿಸುವುದು ನನಗೆ ಅನಿವಾರ್ಯವಾಗಿದೆ.

ಥ್ಯಾಕರೆ: ಇದು ದಬ್ಬಾಳಿಕೆಯಲ್ಲ. ರಾಜ್ಯ ಅರಾಜಕತೆಗೆ ಹೊರಳಬಾರದೆಂದು ತೆಗೆದುಕೊಂಡ ಮುಂಜಾಗ್ರತೆ.

ಮಲ್ಲಪ್ಪ: ಸಾಹೇಬರೇ, ನಾವು ಈ ವಿಷಯದ ಬಗ್ಗೆ ಮೊದಲಿನಿಂದಲೂ ಜಾಗೃತರಾಗಿಯೇ ಇದ್ದೇವೆ. ನೀವು ಮೊದಲು ಖಜಾನೆಯ ಕೀಲಿಯನ್ನು ತಾಯಿಯವರಿಗೆ ಒಪ್ಪಿಸಿರಿ.

ಥ್ಯಾಕರೆ: ಗವರ್ನರ್‌ರಿಂದ ಆದೇಶ ಬರುವವರೆಗೂ ಇದು ಸಾಧ್ಯವಿಲ್ಲ.

ಮಲ್ಲಪ್ಪ: ಸಾಹೇಬರೇ, ನಿಮ್ಮ ನಿಲುವು ಸರಿಯಾದುದಲ್ಲ. ಕೀಲಿ ಒಪ್ಪಿಸಿರಿ.

ಥ್ಯಾಕರೆ: ದಿವಾನರೇ, ಹಟಹಿಡಿಯಬೇಡಿ. ಕೊನೆಗೆ ನೀವೇ ಅಪರಾಧಿ ಎಂದು ನಮ್ಮ ಸರಕಾರ ಸಿದ್ಧಪಡಿಸಬಹುದು.

ಮಲ್ಲಪ್ಪ: ನಾನೇಕೆ ಅಪರಾಧಿ?

ಥ್ಯಾಕರೆ: ಕೇಳಿ, ಪ್ರಭುಗಳು ಸಪ್ಟೆಂಬರ್ ೧೧ರಂದೇ ತೀರಿಕೊಂಡಿದ್ದಾರೆ. ಇಲ್ಲಿಗೆ ೧೨ ರಂದು ಬಂದಿದ್ದ ನಮ್ಮ ಸರಕಾರಿ ವೈದ್ಯರು ಇದನ್ನು ದೃಢಪಡಿಸಿದ್ದಾರೆ. ನೀವು ಹೇಳುವಂತೆ ಪ್ರಭುಗಳು ೧೦ ರಂದು ದತ್ತಕಪತ್ರ ಬರೆದುದು ಸುಳ್ಳು. ರಾಜ್ಯದ ಹಿತದೃಷ್ಟಿಯಿಂದ, ದಿವಾನರಾದ ನೀವೇ ಇದನ್ನು ಸಿದ್ದಪಡಿಸಿ, ಅವರ ಸಹಿಯನ್ನೂ ನೀವೇ ಮಾಡಿರುವಿರಿ. ಶವದ ಹೆಬ್ಬಟ್ಟಿನ ಗುರುತು ಮೂಡಿಸಿರುವಿರಿ. ನಮ್ಮ ಹತ್ತಿರ ಈ ಬಗ್ಗೆ ಅಧಿಕೃತ ಸಾಕ್ಷಿಗಳಿವೆ. ಹೆಚ್ಚು ವಾದಮಾಡಿದರೆ ಈ ಅಪರಾಧಕ್ಕಾಗಿ ನಿಮ್ಮ ಮೇಲೆ ಕ್ರಮ ಕೈಕೊಳ್ಳಬೇಕಾಗುವುದು.

ಚೆನ್ನಮ್ಮ: ಇದೆಲ್ಲ ಸುಳ್ಳು, ಪ್ರಭುಗಳು ೧೦ರಂದು ದತ್ತಕಪತ್ರ ಬರೆದು ಮರುದಿನ ತೀರಿಕೊಂಡಿದ್ದಾರೆ.

ಥ್ಯಾಕರೆ: ಇದೆಲ್ಲ ಸುಳ್ಳು, ಸುಳ್ಳು, ಸುಳ್ಳು.

ಮಲ್ಲಪ್ಪ: ನಿಜ, ನಿಜ, ನಿಜ.

ಥ್ಯಾಕರೆ: (ಸಿಟ್ಟಿನಿಂದ) ಮಲ್ಲಪ್ಪನವರನ್ನು ದಿವಾನ ಹುದ್ದೆಯಿಂದ ತೆಗೆದುಹಾಕಿ, ಅವರ ಸ್ಥಾನದಲ್ಲಿ ಗುರುಸಿದ್ದಪ್ಪನವರನ್ನು ನೇಮಿಸಲಾಗಿದೆ. ವೀರಪ್ಪನವರನ್ನು ಮೊದಲಿನ ಗ್ರಾಮೀಣ ಸೈನ್ಯದ ಅಧಿಕಾರಿಯೆಂದು ನೇಮಿಸಲಾಗಿದೆ. (ಹೀಗೆ ಹೇಳುತ್ತ ಮೊದಲೇ ಸಿದ್ಧಪಡಿಸಿ ತಂದಿದ್ದ ಪತ್ರವನ್ನು ಫೈಲನಿಂದ ತೆಗೆದು ಅವರವರಿಗೆ ನೀಡುತ್ತಾನೆ). ಗುರುಸಿದ್ದಪ್ಪ, ವೀರಪ್ಪನವರೇ, ನೀವು ಇಂದೇ ಅಧಿಕಾರವನ್ನು ವಹಿಸಿಕೊಳ್ಳಿರಿ. ಈ ಎಲಿಯಟ್, ಸ್ಟೀವನ್‌ಸನ್ ಇನ್ನು ಮುಂದೆ ಕಿತ್ತೂರಿನಲ್ಲಿಯೇ ಇರುತ್ತಾರೆ. ಖಜಾನೆ ಕಾವಲು ಮೊದಲಿನಂತೆ ಮುಂದುವರಿಯಲಿ. (ಹೀಗೆ ಹೇಳುತ್ತ ಎಲಿಯಟ್, ಸ್ಟೀವನ್‌ಸನ್ ಜೊತೆ ಥ್ಯಾಕರೆ ಹೊರಡುತ್ತಾನೆ).

❖❖

IX

(ಕಿತ್ತೂರು ಸೈನ್ಯದ ಬಿಡಾರ. ಶಸ್ತ್ರಧಾರಿ ಸೈನಿಕರು ಹತ್ತೂ ದಿಕ್ಕುಗಳಿಂದ 'ಕಿತ್ತೂರು ಸಂಸ್ಥಾನಕ್ಕೆ ನ್ಯಾಯಸಿಗಲಿ, ದಿವಾನ ಮಲ್ಲಪ್ಪನವರಿಗೆ ಜಯವಾಗಲಿ, ಥ್ಯಾಕರೆಗೆ ಧಿಕ್ಕಾರವಿರಲಿ') ಎಂದು ಕೂಗುತ್ತ ಬೇರೆ ಬೇರೆ ದಿಕ್ಕುಗಳಿಂದ ಓಡಿಬಂದು ಒಂದೆಡೆ ಸೇರುತ್ತಾರೆ.

ಸೈನಿಕ–೧: ಗೆಳೆಯರೆ, ಇಂದು ನಮ್ಮ ಸಂಸ್ಥಾನಕ್ಕೆ ಪ್ರಭುಗಳಿಲ್ಲ. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳಲು ಬ್ರಿಟಿಷರು ಹೊಂಚುಹಾಕಿದ್ದಾರೆ.

ಸೈನಿಕ–೨: ಇದಕ್ಕೆ ನಾವು ಅವಕಾಶ ಕೊಡಬಾರದು. ದತ್ತಕದ ಮೂಲಕ ಸಂಸ್ಥಾನವನ್ನು ಮುನ್ನಡೆಸಬೇಕು.

ಸೈನಿಕ–೧: ಈ ದತ್ತಕಕ್ಕೆ ತಮ್ಮ ಒಪ್ಪಿಗೆ ಬೇಕೆಂದು ಬ್ರಿಟಿಷ್ ಸರಕಾರ ಹೇಳುತ್ತದೆ. ಈ ಹಿಂದೆ ವೀರಪ್ಪ ದೇಸಾಯಿಗಳು ಮಲ್ಲಸರ್ಜರನ್ನು ದತ್ತಕ ಪಡೆಯುವ ಸಂದರ್ಭದಲ್ಲಿ ಆಗ ಮೇಲಧಿಕಾರಗಳಾಗಿದ್ದ ಪೇಶ್ವೆಯವರ ಒಪ್ಪಿಗೆ ಪಡೆಯಲಿಲ್ಲ. ಒಪ್ಪಿಗೆ ಪಡೆಯಬೇಕೆಂದು ಪೇಶ್ವೆಯವರೂ ಹೇಳಲಿಲ್ಲ.

ಸೈನಿಕ–೨: ಪೇಶ್ವೆ ಸರಕಾರದ ಕಾನೂನು ಬೇರೆ, ಬ್ರಿಟಿಷ ಸರಕಾರದ ಕಾನೂನು ಬೇರೆ ಎಂಬುದು ಇವರ ವಾದ.

ಸೈನಿಕ–೧: ದತ್ತಕ ವಿಚಾರ ಹೋಗಲಿ, ಹಿಂದೆ ಟಿಪ್ಪುಸುಲ್ತಾನ, ಮಲ್ಲಸರ್ಜನನ್ನು ಕಬ್ಬಾಳ ದುರ್ಗದಲ್ಲಿ ಸೆರೆಯಲ್ಲಿ ಇಟ್ಟಾಗ ರಾಣಿ ರುದ್ರಮ್ಮನವರು ಸಂಸ್ಥಾನವನ್ನು ತುಂಬ ಚೆನ್ನಾಗಿ ಆಳಿದರು. ಈಗ ಅದೇ ರೀತಿ ತಾಯಿ ಚೆನ್ನಮ್ಮನವರು ಆಳಬಹುದಲ್ಲ?

ಸೈನಿಕ–೨: ಚೆನ್ನಮ್ಮನವರು ಖಂಡಿತ ಚೆನ್ನಾಗಿ ಆಳುತ್ತಾರೆ. ಮಲ್ಲಸರ್ಜ ದೊರೆಗಳು ಪೇಶ್ವೆಯವರ ಸೆರೆಯಾಳಾಗಿ ಮೂರುವರ್ಷ ಪುಣೆಯಲ್ಲಿರುವಾಗ ಈ ಸಂಸ್ಥಾನವನ್ನು ಸಮರ್ಥವಾಗಿ ಆಳಿದ ಅನುಭವ ಚೆನ್ನಮ್ಮನವರಿಗೆ ಇದೆ.

ಸೈನಿಕ–೧: ಅವರಿಗೆ ತವರುಮನೆ ಕಾಗತಿ ಸಂಸ್ಥಾನದಲ್ಲಿ ತಂದೆಯ ಜೊತೆ ಆಡಳಿತ ನಡೆಸಿದ ಅನುಭವವಿದೆ. ನಮ್ಮ ಸಮಾಜದಲ್ಲಿ ಮಹಿಳೆಯರು ಆಳಿದ ಹತ್ತಾರು ಉದಾಹರಣೆಗಳೂ ಇವೆ.

ಸೈನಿಕ–೨: ಬ್ರಿಟಿಷರಿಗೆ ಮಹಿಳೆ ಚೆನ್ನಮ್ಮನವರು ಆಳುವುದು ಬೇಡವಾಗಿದ್ದರೆ ಪ್ರಭುಗಳಿಲ್ಲದ ಸಂದರ್ಭದಲ್ಲಿ ಸಂಸ್ಥಾನದ ಆಡಳಿತ ನೋಡಿಕೊಳ್ಳಲು ನಮ್ಮ ಸಚಿವರಿದ್ದರು.

ಇಂದು ಥ್ಯಾಕರೆ ಆ ಸಚಿವರನ್ನೂ ಪದಚ್ಯುತ ಗೊಳಿಸುವುದೆಂದರೆ ಪರ್ಯಾಯವಾಗಿ ಸಂಸ್ಥಾನದ ಪ್ರಭುಶಕ್ತಿಯ ಬೇರನ್ನೇ ಶಿಥಿಲಗೊಳಿಸಲು ಪ್ರಯತ್ನಿಸಿದಂತೆ.

ಸೈನಿಕ–೧: ಇಂದು ಶಿಥಿಲಗೊಳಿಸಿ, ಮುಂದೆ ಆ ಬೇರನ್ನೇ ಕಿತ್ತಿಹಾಕುವ ಹುನ್ನಾರವಾಗಿದೆ ಇದು.

ಸೈನಿಕ–೨: ಹೌದು, ಸಂಸ್ಥಾನದ ಸಂರಕ್ಷಕರೆಂದರೆ ಸೈನಿಕರು. ಹೀಗಾಗಿ ಈ ಸಂದರ್ಭದಲ್ಲಿ ಸೈನಿಕರಾದ ನಾವು ಸುಮ್ಮನಿರಬಾರದು. (ಎಲ್ಲ ಸೈನಿಕರು 'ದಿವಾನರಿಗೆ ಜಯವಾಗಲಿ, ಥ್ಯಾಕರೆಗೆ ಧಿಕ್ಕಾರವಿರಲಿ.' ಎಂದು ಕೂಗುತ್ತಾರೆ).

ಸೈನಿಕ–೧: ಶಾಂತಿ, ಶಾಂತಿ, ಶಾಂತಿ. ಗೆಳೆಯರೆ, ನಮ್ಮ ಸಂಸ್ಥಾನದಲ್ಲಿ ಇಷ್ಟು ದೂರ ಕೈಹಾಕಲು ಇವರು ಯಾರು? ಸುಮ್ಮನಿದ್ದರೆ ಇದು ಇನ್ನೂ ದೀರ್ಘಕ್ಕೆ ಹೋಗುತ್ತದೆ. ನಾವು ಈ ಅನ್ಯಾಯದ ವಿರುದ್ಧ ದನಿಯೆತ್ತಬೇಕು, ಎತ್ತಲೇಬೇಕು. ಇಂದು ಸೈನಿಕಕ್ರಾಂತಿಯ ಮೂಲಕ ಸಂಸ್ಥಾನವನ್ನು ಉಳಿಸಲೇಬೇಕು.

ಸೈನಿಕ–೨: ನಡೆಯಿರಿ, ದಿವಾನರ ಮನೆಗೆ ಹೋಗೋಣ.(ಸೈನ್ಯ ಸಮೂಹ 'ನಡೆಯಿರಿ. ನಡೆಯಿರಿ. ದಿವಾನರಿಗೆ ಜಯವಾಗಲಿ, ಥ್ಯಾಕರೆಗೆ ಧಿಕ್ಕಾರವಿರಲಿ'ಎಂದು ಕೂಗುತ್ತ ಓಡುತ್ತಾರೆ).

ಜನ–೧: ಏನು? ಯಾಕೀ ಗದ್ದಲ?

ಸೈನಿಕ–೧: ಥ್ಯಾಕರೆ ನಮ್ಮ ದಿವಾನರನ್ನು ಪದಚ್ಯುತಗೊಳಿಸಿದ್ದಾನೆ. ಈಗ ಅವರ ಮನೆಗೆ ಹೊರಟಿದ್ದೇವೆ.

ಜನ–೨: ಇದು ಅನ್ಯಾಯ, ಪರಮಾನ್ಯಾಯ. ಇದನ್ನು ನಾವೂ ಪ್ರತಿಭಟಿಸುತ್ತೇವೆ. ನಡೆಯಿರಿ (ಜನ ಒಬ್ಬೊಬ್ಬರಾಗಿ ಸೇರಿಕೊಳ್ಳುತ್ತ ಸೈನ್ಯದೊಂದಿಗೆ 'ದಿವಾನರಿಗೆ ಜಯವಾಗಲಿ' ಎಂದು ಕೂಗುತ್ತ ಗುಂಪು ಓಡುತ್ತದೆ).

ಸೈನಿಕ–೨: ಬ್ರಿಟಿಷ್ ಸರ್ಕಾರ ಉಂಡಮನೆಯ ಗಳ ಹಿರಿಯುವ ಕೆಲಸ ಮಾಡಿತು. ಪೇಶ್ವೆಯೊಡನೆ ಜರುಗಿದ ಯುದ್ಧದಲ್ಲಿ ನಮ್ಮ ಸಂಸ್ಥಾನ ನೀಡಿದ ಸಹಾಯ ಮರೆಯಿತು.

ಸೈನಿಕ–೧: ಹೌದು, ನಮ್ಮ ಸಹಾಯವಿರದಿದ್ದರೆ ಬ್ರಿಟಿಷರು ಗೆದೆಯುತ್ತಿರಲಿಲ್ಲ. ನಡೆಯಿರಿ, ದಿವಾನರಿಗೆ ಭೆಟ್ಟಿಯಾಗೋಣ, ಬ್ರಿಟಿಷರಿಗೆ ಬುದ್ಧಿ ಕಲಿಸೋಣ (ಜಯಕಾರ ಹೇಳುತ್ತ ಓಡುತ್ತಾ ಎರಡನೆಯ ಸುತ್ತು ಮುಗಿಯುತ್ತದೆ.)

❖❖

X

(ಸೈನಿಕರು, ಜನರು ಓಡಿ ಬಂದು ದಿವಾನರ ಮನೆ ಮುಂದೆ ಗುಂಪುಗೂಡಿದ್ದಾರೆ. 'ದಿವಾನರಿಗೆ ಜಯವಾಗಲಿ, ಥ್ಯಾಕರೆಗೆ ಧಿಕ್ಕಾರವಿರಲಿ' ಎಂದು ಕೂಗುತ್ತಿದ್ದಾರೆ. ದಿವಾನ ಮಲ್ಲಪ್ಪ ಹೊರಗೆ ಬರುತ್ತಾರೆ. ಅವರನ್ನು ನೋಡುತ್ತಲೇ ಕೂಗು ಇನ್ನೂ ವರ್ಧಿಸುತ್ತದೆ).

ಮಲ್ಲಪ್ಪ: ಬಂಧುಗಳೇ, ಶಾಂತರಾಗಿರಿ, ಶಾಂತರಾಗಿರಿ.

ಸೈನಿಕ–೧: ಶಾಂತಿ ಸಾಧ್ಯವಿಲ್ಲ. ತಮ್ಮನ್ನು ಪದಚ್ಯುತಗೊಳಿಸಲು ಕಾರಣವೇನು?

ಮಲ್ಲಪ್ಪ: ಕಾರಣವಿದೆ.

ಸೈನಿಕ–೧: ಏನು ಕಾರಣ?

ಮಲ್ಲಪ್ಪ: ನಾನು ಕೃತಕ ದತ್ತಕ ಪತ್ರ ಸಿದ್ಧಪಡಿಸಿದೆ.

ಸೈನಿಕ–೨: ಅದು ನಮಗೆ ಗೊತ್ತು. ಪ್ರಭುಗಳು ಅನಿರೀಕ್ಷಿತವಾಗಿ ಕೊನೆಯುಸಿರೆಳೆದರು. ಹೀಗಾಗಿ ಅವರ ಮನಸ್ಸಿನಲ್ಲಿದ್ದುದನ್ನು ನೀವು ಬರೆದಿರಿ.

ಸೈನಿಕ–೧: ನೀವು ಒಬ್ಬರೆ ಅಲ್ಲ, ತಾಯಿ ಚೆನ್ನಮ್ಮ, ರಾಣಿ ವೀರಮ್ಮ ಮಿಕ್ಕ ಅಧಿಕಾರಿಗಳು ಸೇರಿ ಬರೆದಿರುದಿರಿ.

ಸೈನಿಕ–೨: ಹೀಗಿರುವಾಗ ನಿಮ್ಮೊಬ್ಬರನ್ನೇ ಏಕೆ? ಎಲ್ಲರನ್ನು ಪದಚ್ಯುತ ಗೊಳಿಸಬೇಕಿತ್ತು.

ಸೈನಿಕ–೧: ತಮ್ಮನ್ನು ಪದಚ್ಯುತಗೊಳಿಸುವುದೆಂದರೆ ಸಂಸ್ಥಾನವನ್ನು ಕೈವಶ ಮಾಡಿಕೊಳ್ಳಲು ಒಂದು ಹೆಜ್ಜೆ ಮುಂದೆ ಇಟ್ಟಂತೆ.

ಜನ–೧: ಕೇವಲ ಒಂದು ಹೆಜ್ಜೆ ಅಲ್ಲ, ನಮ್ಮನ್ನು ಗುಲಾಮಗಿರಿಗೆ ತಳ್ಳಲು ಎರಡು ಹೆಜ್ಜೆ ಮುಂದೆ ಇಟ್ಟಂತೆ.

ಮಲ್ಲಪ್ಪ: ನೀವು ಹೇಳುವುದು ಸರಿ. ಆದರೆ ಈಗ ಸಂದರ್ಭ ಸೂಕ್ಷ್ಮವಿದೆ. ನನ್ನನ್ನು ಪದಚ್ಯುತಗೊಳಿಸಿದ್ದಕ್ಕಿಂತ ದತ್ತಕ ತಡೆಹಿಡಿದಿರುವುದು ಬಹಳ ದೊಡ್ಡ ಅನ್ಯಾಯ. ಇದರ ಬಗ್ಗೆ ಮೊದಲು ವಿಚಾರ ಮಾಡೋಣ. ನಾನು ಮುಖ್ಯವಲ್ಲ, ಸಂಸ್ಥಾನ ಮುಖ್ಯ.

ಸೈನಿಕ–೧: ಸಂಸ್ಥಾನವೂ ಮುಖ್ಯ, ನೀವೂ ಮುಖ್ಯ.

ಮಲ್ಲಪ್ಪ: ಹಾಗಲ್ಲ. ನನಗಿಂತ ಸಂಸ್ಥಾನ ಮುಖ್ಯ. ಅದು ಉಳಿದರೆ ನಾವೆಲ್ಲ ಉಳಿಯುತ್ತೇವೆ. ಆ ದಿಕ್ಕಿನಲ್ಲಿ ನೀವೆಲ್ಲ ಮೊದಲು ವಿಚಾರ ಮಾಡಿರಿ. ಆ ಮೇಲೆ ನನ್ನ ಬಗ್ಗೆ ವಿಚಾರ ಮಾಡಬಹುದು.

ಜನ–೨: ಮೊದಲು ನಮ್ಮ ಬಗ್ಗೆ ವಿಚಾರ ಮಾಡಬೇಕಾಗಿದೆ. ಪ್ರಭುಗಳಿಲ್ಲದ ಸಂದರ್ಭದಲ್ಲಿ ಪ್ರಜೆಗಳಾದ ನಾವೇ ಪ್ರಭುಗಳು. ಹೀಗಾಗಿ ಇದು ನಮಗೆ ಮಾಡಿದ ಅನ್ಯಾಯವಾಗಿದೆ.

ಮಲ್ಲಪ್ಪ: ನಿಮ್ಮ ತರ್ಕ ಸರಿಯಾಗಿದೆ. ಆದರೆ, ಅದು ಬ್ರಿಟಿಷ್ ಕಾನೂನಿನ ಎದುರು ನಿಲ್ಲುವುದಿಲ್ಲ.

ಜನ–೧: ನಾವು ಈ ಕಾನೂನು ಭಂಗ ಮಾಡುತ್ತೇವೆ.

ಮಲ್ಲಪ್ಪ: ನಿಮ್ಮ ಭಾವನೆ ಅರ್ಥಮಾಡಿಕೊಂಡಿದ್ದೇನೆ. ಕೆಲವು ದಿನ ತಡೆಯಿರಿ.

ಸೈನಿಕ–೧: ತಡೆಯುವುದಿಲ್ಲ. ನೀವು ಈ ಬಗ್ಗೆ ವಿಳಂಬ ಮಾಡಿದರೆ ನಾವು ಥ್ಯಾಕರೆ ಅವರಿಗೆ ಮುತ್ತಿಗೆ ಹಾಕಿ ನ್ಯಾಯ ಕೇಳುತ್ತೇವೆ. (ನಡೆಯಿರಿ, ಹೋಗೋಣ).

ಮಲ್ಲಪ್ಪ: (ತಡೆದು), ಥ್ಯಾಕರೆಗೆ ಮುತ್ತಿಗೆ ಹಾಕಿ ಏನು ಪ್ರಯೋಜನ? ಅವನ ಹಿಂದೆ ನಮ್ಮವರೇ ಯಾರೋ ಇದ್ದಾರೆ. ನನ್ನನ್ನು ಪದಚ್ಯುತಗೊಳಿಸುವ ಪಿತೂರಿ ಮಾಡಿದ್ದಾರೆ.

ಜನ–೨: ಯಾರು ಹೇಳಿರಿ, ಒಂದು ಕೈ ನೋಡುತ್ತೇವೆ.

ಮಲ್ಲಪ್ಪ: ಈಗ ನಾನು ಹೇಳಿ ಪ್ರಯೋಜನವಿಲ್ಲ. ಸರಿಯಾದ ಸಮಯದಲ್ಲಿ ಹೇಳುತ್ತೇನೆ. ಥ್ಯಾಕರೆ ಹತ್ತಿರ ಮಾತ್ರ ಹೋಗಬೇಡಿರಿ. ನೀವು ಅಲ್ಲಿಗೆ ಹೋದರೆ ನಾನೇ ನಿಮ್ಮನ್ನು ಪ್ರಚೋದಿಸಿ ಕಳಿಸಿರುವೆನೆಂದು ಪ್ರಚಾರವಾಗಬಹುದು.

ಜನ–೧: ಪ್ರಚಾರವಾದರೇನಂತೆ?

ಮಲ್ಲಪ್ಪ: ಹಾಗಲ್ಲ, ಇದರಿಂದ ಥ್ಯಾಕರೆ ಇನ್ನಷ್ಟು ಸಿಟ್ಟಿಗೇಳುತ್ತಾನೆ. ಸಂಸ್ಥಾನದ ವಿರುದ್ಧ ಇನ್ನೂ ಬಿಗುವಿನ ಕ್ರಮ ತೆಗೆದುಕೊಳ್ಳುತ್ತಾನೆ. ಇದು ನಮ್ಮ ದತ್ತಕ ಪ್ರಕರಣವನ್ನೇ ಹದಗೆಡಿಸಬಹುದು. ಕಾರಣ, ನೀವೆಲ್ಲ ಶಾಂತರಾಗಿರಿ, ಮರಳಿ ಹೋಗಿರಿ. ನಾನು ಸಂಸ್ಥಾನದ ದೇಸಾಯಿ–ದೇಶಮುಖರೊಂದಿಗೆ ಮಾತನಾಡುತ್ತೇನೆ. ದಿವಾನ ಗುರುಸಿದ್ಧಪ್ಪನವರೊಂದಿಗೂ ಚರ್ಚಿಸುತ್ತೇನೆ.

ಸೈನಿಕ–೧: ಅವರೆಲ್ಲರೊಂದಿಗೆ ಮಾತನಾಡುವುದೇನಿದೆ?

ಮಲ್ಲಪ್ಪ: ದಯವಿಟ್ಟು ಭಾವಾವೇಶಕ್ಕೆ ಒಳಗಾಗಬೇಡಿರಿ. ತಾಯಿ ಚೆನ್ನಮ್ಮನವರೊಂದಿಗಾದರೂ ಚರ್ಚಿಸುತ್ತೇನೆ. (ಸೈನಿಕರು ಪರಸ್ಪರ ಮುಖ ನೋಡಿಕೊಳ್ಳುತ್ತಾರೆ).

ಸೈನಿಕ–೧: ತಾಯಿಯೊಂದಿಗೆ ಚರ್ಚಿಸುವುದಾದರೆ ನಮ್ಮ ಒಪ್ಪಿಗೆ ಇದೆ. ಇಂದೇ ಚರ್ಚಿಸಿರಿ.

ಮಲ್ಲಪ್ಪ: ಖಂಡಿತ ಚರ್ಚಿಸಿ, ನಿಮಗೆ ಸಮಾಧಾನವಾಗುವಂತೆ ನಿರ್ಣಯ ಸ್ವೀಕರಿಸುತ್ತೇವೆ. ಮರಳಿರಿ(ಕೈಮುಗಿದು ಹೋಗುತ್ತಾರೆ).

❖❖

XI

(ಚೆನ್ನಮ್ಮನ ಅರಮನೆ, ಹೊಸ ಅಧಿಕಾರಿಗಳಾದ ಗುರುಸಿದ್ಧಪ್ಪ, ವೀರಪ್ಪನವರನ್ನು ಕರೆಯಿಸಿ ಚರ್ಚಿಸುತ್ತಿದ್ದಾಳೆ)

ಚೆನ್ನಮ್ಮ: ದಿವಾನ ಗುರುಸಿದ್ಧಪ್ಪನವರೇ, ಮಲ್ಲಪ್ಪನವರ ಪದಚ್ಯುತಿ ಇತ್ಯಾದಿ ಈ ಅನಿರೀಕ್ಷಿತ ರಾಜಕೀಯ ಬೆಳವಣಿಗೆಯನ್ನು ನಾನು ನಿರೀಕ್ಷಿಸಿರಲಿಲ್ಲ.

ವೀರಪ್ಪ: ತಾಯೀ, ನಿಮಗೆ ಮಲ್ಲಪ್ಪನವರ ತಂತ್ರ ಅರ್ಥವಾಗುತ್ತಿಲ್ಲ. ಸವಾಯಿ ಮಲ್ಲಸರ್ಜ ಬಾಲಕ, ನೀವಿಬ್ಬರೂ ಮಹಿಳೆಯರು. ನಿಮ್ಮೆಲ್ಲರನ್ನು ಮುಂದಿಟ್ಟುಕೊಂಡು ತಾನು ರಾಜ್ಯವಾಳುವ ತಂತ್ರ ಹೆಣೆದಿದ್ದರು. ಇದು ಹೇಗೊ ಥ್ಯಾಕರೆಯವರಿಗೆ ಗೊತ್ತಾಗಿ, ಅವರ ಸ್ಥಾನದಲ್ಲಿ ಗುರುಸಿದ್ಧಪ್ಪನವರನ್ನು ದಿವಾನರನ್ನಾಗಿ ಮಾಡಿ, ಸರಿಯಾದ ನಿರ್ಣಯ ತೆಗೆದುಕೊಂಡರು.

ಚೆನ್ನಮ್ಮ: ಗುರುಸಿದ್ಧಪ್ಪನವರೂ ಸಮರ್ಥರೇ. ಆದರೆ ನಾವೆಲ್ಲ ದತ್ತಕ ಸಮಸ್ಯೆಯಲ್ಲಿ ಸಿಕ್ಕು ಸಂಕಟ ಪಡುತ್ತಿರುವಾಗ ಇದು ಘಟಿಸಬಾರದಿತ್ತು. ಪ್ರಭುಗಳು ಸಪ್ಟೆಂಬರ್ ೧೧ರಂದು ನಿಧನರಾದ ಬಳಿಕ ಅವರ ಹೆಸರಿನಲ್ಲಿ ದತ್ತಕಪತ್ರ ಸಿದ್ಧಪಡಿಸಲಾಗಿದೆ ಎಂದು ಥ್ಯಾಕರೆ ಕಡ್ಡಿಮುರಿದಂತೆ ಹೇಳಿದ. ಅವರಿಗೆ ಈ ಗುಟ್ಟನ್ನು ಯಾರು ರಟ್ಟು ಮಾಡಿರಬಹುದು?

ವೀರಪ್ಪ: ನನಗೂ ಇದು ಸಮಸ್ಯೆಯಾಗಿದೆ. ಅರಮನೆಗೆ ಅರುವತ್ತು ಕಿವಿಗಳು, ಯಾವ ಸಮಯಸಾಧಕ ಈ ಕೆಲಸ ಮಾಡಿದನೋ!

ಗುರುಸಿದ್ಧಪ್ಪ: ಸಾಮಾನ್ಯರು ಹೇಳಿದರೆ ಬ್ರಿಟಿಷರು ನಂಬುವವರಲ್ಲ. ಯಾರೋ ಮುಖ್ಯ ವ್ಯಕ್ತಿಯೇ ಈ ಪಿತೂರಿ ಮಾಡಿರಬಹುದು.

ವೀರಪ್ಪ: ಹೌದು ದಿವಾನರೇ, ಯಾರೋ ಮುಖ್ಯ ವ್ಯಕ್ತಿಯೇ ಇದರ ಹಿಂದಿರಬೇಕು.

ಚೆನ್ನಮ್ಮ: ವೀರಪ್ಪನವರೇ, ನೀವು ಈ ರಹಸ್ಯ ಭೇದಿಸುವ ಪ್ರಯತ್ನ ಮಾಡಿರಿ.

ವೀರಪ್ಪ: ಆಗಲಿ ತಾಯಿ.

ಚೆನ್ನಮ್ಮ: ಒಂದು ಮಾತು ಪ್ರಭುಗಳಿರುವಾಗ ನಮ್ಮ ಅಧಿಕಾರಿಗಳ ಮನಸ್ಸು ಒಂದು ರೀತಿ, ಇಲ್ಲದಾಗ ಇನ್ನೊಂದು ರೀತಿ. ಅಂದರೆ ಇಲ್ಲದಾಗ ಅವರಲ್ಲಿ ಏನೇನೊ ದುರಾಸೆ ಚಿಗುರುತ್ತವೆ. ಆದುದರಿಂದ ಇನ್ನು ಮೇಲೆ ಎಲ್ಲ ಅಧಿಕಾರಿಗಳನ್ನು ಒಟ್ಟುಗೂಡಿಸಿ ರಾಜಕಾರ್ಯ ಚರ್ಚಿಸುವುದು ಬೇಡ. ಸಂಬಂಧಪಟ್ಟ ಒಬ್ಬರನ್ನೋ, ಇಬ್ಬರನ್ನೋ

ಕರೆದು ಚರ್ಚಿಸೋಣ. ನಮ್ಮ ನಿರ್ಣಯಗಳು ರಹಸ್ಯವಾಗಿರುವುದು ಇನ್ನು ಮೇಲೆ ಹೆಚ್ಚು ಅವಶ್ಯವಿದೆ. ಈಗ ಮೊದಲು ಥ್ಯಾಕರೆಯವರಿಗೆ ದತ್ತಕಪತ್ರ ಕೃತಕವೆಂದು ಹೇಳಿದವರಾರೆಂಬ ರಹಸ್ಯ ಭೇದಿಸಿರಿ.

ಗುರುಸಿದ್ಧಪ್ಪ: ರಹಸ್ಯ ಭೇದಿಸುವುದರಿಂದಾಗುವ ಲಾಭವೇನು? ಸದ್ಯ ನಾವು ಕೈಕೊಳ್ಳಬೇಕಾದ ಕಾರ್ಯ, ಇಡಬೇಕಾದ ಹೆಜ್ಜೆ ಯಾವುದು? ಇದನ್ನು ಯೋಚಿಸಬೇಕಾಗಿದೆ. ಬ್ರಿಟಿಶರನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಚೆನ್ನಮ್ಮ: ಬ್ರಿಟಿಷರು ಎಲ್ಲಿಯವರೊ? ಯಾವ ದೇಶದವರೊ? ಇವರಿಂದಾಗಿ ನಮ್ಮ ನಾಡಿನಲ್ಲಿ ನಾವೇ ಪರತಂತ್ರರಾಗುವ ಪರಿಸ್ಥಿತಿ ನಮ್ಮ ಎಲ್ಲ ಸಂಸ್ಥಾನಗಳಿಗೆ ಘಟಿಸಿದೆ. ನಾವೆಲ್ಲ ಸಂಸ್ಥಾನಿಕರು ಎಲ್ಲಿಯೋ ತಪ್ಪಿದ್ದೇವೆ.

ಗುರುಸಿದ್ಧಪ್ಪ: ಸಂಸ್ಥಾನಗಳು ಬೇರೆ ಬೇರೆಯಾದರೂ ನಮ್ಮದು ಒಂದು ಅಖಂಡ ದೇಶ, ನಾವೆಲ್ಲ ಒಂದು–ಎಂಬ ಭಾವನೆ ನಮ್ಮ ಸಂಸ್ಥಾನಿಕರಲ್ಲಿ ಬೆಳೆದು ಬರಲಿಲ್ಲ. ಈ ದೌರ್ಬಲ್ಯವನ್ನು ಅರ್ಥ ಮಾಡಿಕೊಂಡ ಬ್ರಿಟಿಷರು ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಿ, ನಮ್ಮನ್ನು ಒಡೆದು ಆಳುತ್ತ ಬಂದರು.

ಚೆನ್ನಮ್ಮ: ಇಷ್ಟೇ ಏಕೆ? ಒಂದೊಂದು ಸಂಸ್ಥಾನದಲ್ಲಿಯೇ ಒಳಶತ್ರುಗಳಿದ್ದಾರೆ. ನಮ್ಮ ರಾಜ್ಯ, ನಮ್ಮ ಜನರೆಂಬ ಅಭಿಮಾನವಿಲ್ಲದ ಇಂಥ ಒಳಶತ್ರುಗಳ ದೇಶವನ್ನು ಅನ್ಯರು ಗೆದೆಯುವುದು, ಆಳುವುದು ತೀರ ಸುಲಭ.ನಮ್ಮ ಸಂಸ್ಥಾನಗಳು ಮೊದಲಿನಿಂದಲೂ ಮಾಡುತ್ತ ಬಂದ ಇಂತಹ ತಪ್ಪನ್ನು ತಿದ್ದಿಕೊಳ್ಳಬೇಕಾಗಿದೆ. ಇರಲಿ, ನಾಳೆ ಮಾಸ್ತಮರಡಿ ಗೌಡರು ಬರುತ್ತಾರೆ. ದತ್ತಕದ ವಿಷಯ ಅವರೆದುರೇ ಮಾತನಾಡೋಣ. ಆಸ್ಥಾನಕ್ಕೆ ಹೋಗುವ ಹೊತ್ತಾಯಿತು. ನಡೆಯಿರಿ (ಗುರುಸಿದ್ಧಪ್ಪ, ವೀರಪ್ಪ ತಮ್ಮ ತಮ್ಮ ಕಾರ್ಯಾಲಯಗಳಿಗೆ ಹೊರಡುತ್ತಾರೆ. ದಾರಿಯಲ್ಲಿ ಹೊರಟ ವೀರಪ್ಪನ ಸ್ವಗತ).

ವೀರಪ್ಪ: ನಾನು ಪಿತೂರಿಗಾರರನ್ನು ಶೋಧಿಸಬೇಕಂತೆ. ಕಳ್ಳನನ್ನು ಹುಡುಕಲು ಕಳ್ಳನನ್ನೇ ನೇಮಿಸಿದಂತಾಯಿತು, ದಿವಾನ ಮಲ್ಲಪ್ಪನವರೇ, ನನ್ನನ್ನು ಪದಚ್ಯುತಿಗೊಳಿಸಿದ ಪ್ರತಿಫಲ ಅನುಭವಿಸಿರಿ. ನೀವು ಕೈತಪ್ಪಿಸಿದ್ದ ನನ್ನ ಹಳೆಯ ಹುದ್ದೆಯನ್ನು ಮತ್ತೆ ಗಳಿಸಿಕೊಂಡೆ. ಇನ್ನೂ ನೋಡಿರಿ, ನೀವೇ ಪಿತೂರಿಗಾರರೆಂದು ಬ್ರಿಟಿಷರು ನಿರ್ಣಯಿಸಿ, ನಿಮ್ಮನ್ನು ಈಗ ಪದಚ್ಯುತಗೊಳಿಸಿದರೆಂದು ಪ್ರಚಾರ ಮಾಡುತ್ತೇನೆ. ಸಮಯ ನೋಡಿ ನಿಮ್ಮನ್ನು ಸಾರ್ವಜನಿಕವಾಗಿ ಕೊಲ್ಲಿಸುತ್ತೇನೆ.(ಎನ್ನುತ್ತ ಹೋಗುತ್ತಾನೆ).

❖❖

XII

(ಚೆನ್ನಮ್ಮನ ಅರಮನೆ. ಚೆನ್ನಮ್ಮ ಕುಳಿತಿದ್ದಾಳೆ. ದಿವಾನ ಮಲ್ಲಪ್ಪ ಬರುತ್ತಾನೆ)

ಮಲ್ಲಪ್ಪ: ನಮಸ್ಕಾರ ತಾಯೀ, ಕರೆಸಿರುವ ಉದ್ದೇಶವೇನು?

ಚೆನ್ನಮ್ಮ: ನಮಸ್ಕಾರ, ಬನ್ನಿ ಕುಳಿತುಕೊಳ್ಳಿ. ಮಲ್ಲಪ್ಪನವರೆ ನಿಮಗೆ ಅನ್ಯಾಯವಾಯಿತು. ಸಂಸ್ಥಾನಕ್ಕೆ ಒಳ್ಳೆಯದನ್ನು ಮಾಡಲು ಹೋಗಿ ಅಧಿಕಾರ ಕಳೆದುಕೊಂಡಿರಿ. ಸಭ್ಯರೂ,ಸಂಸ್ಥಾನದ ಹಿತೈಷಿಗಳೂ ಆಗಿರುವ ನಿಮಗೆ ಈ ಸ್ಥಿತಿ ಒದಗಿರುವುದು ನನಗೆ ನೋವು ತಂದಿದೆ.

ಮಲ್ಲಪ್ಪ: ತಾಯೀ, ನನಗೆ ಹುದ್ದೆ ಕೈಜಾರಿರುವುದಕ್ಕೆ ಬೇಸರವಿಲ್ಲ. ನೀವು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವಿರಿ. ಇದು ಆ ಹುದ್ದೆಗಿಂತ ದೊಡ್ಡದೆಂದು ಭಾವಿಸುತ್ತೇನೆ.

ಚೆನ್ನಮ್ಮ: ನಿಮ್ಮನ್ನು ನಾನು ಮಾತ್ರವಲ್ಲ. ಈ ಸಂಸ್ಥಾನದ ಎಲ್ಲ ಪ್ರಜೆಗಳೂ ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ.

ಮಲ್ಲಪ್ಪ: ನಿಜ ತಾಯಿ, ನನ್ನನ್ನು ಪದಚ್ಯುತಗೊಳಿಸಿದ ಥ್ಯಾಕರೆಯವರಿಗೆ ಧಿಕ್ಕಾರ ಹೇಳುತ್ತ ನಿನ್ನೆ ಸೈನಿಕರು–ಪ್ರಜೆಗಳು ನನ್ನ ಹತ್ತಿರ ಬಂದಿದ್ದರು.

ಚೆನ್ನಮ್ಮ: ಹೌದು, ಆ ಸುದ್ದಿ ಕೇಳಿದ್ದೇನೆ. ಏನು ಹೇಳಿದಿರಿ?

ಮಲ್ಲಪ್ಪ: ಮತ್ತೇನು ಹೇಳಲಿ ತಾಯಿ, ಈ ವಿಷಯವನ್ನು ತಾಯಿ ಚೆನ್ನಮ್ಮನವರೊಂದಿಗೆ ಚರ್ಚಿಸುತ್ತೇನೆ. ಗದ್ದಲ ಮಾಡಬೇಡಿರೆಂದು ವಿನಂತಿಸಿಕೊಂಡೆ.

ಚೆನ್ನಮ್ಮ: ಅಷ್ಟಕ್ಕೇ ಸುಮ್ಮನಾದರೇ?

ಮಲ್ಲಪ್ಪ: ಆಗದೇನು ತಾಯಿ, ನಿಮ್ಮ ಹೆಸರು ಅವರಿಗೆ ದಿವ್ಯಮಂತ್ರ. ಹಾವು ರೋಷದಿಂದ ಎತ್ತಿದ ಹೆಡೆಯನ್ನು ಗರುಡಮಂತ್ರಕ್ಕೆ ಇಳಿಸುವಂತೆ ನಿಮ್ಮ ಹೆಸರು ಕೇಳಿದ ತಕ್ಷಣ ಬೆಂಕಿಯಂತಹ ಅವರ ಸಿಟ್ಟು ಬೂದಿಯಂತೆ ತಣ್ಣಗಾಯಿತು.

ಚೆನ್ನಮ್ಮ: ನನ್ನ ಸಂಸ್ಥಾನದ ಮಕ್ಕಳ ವಿಶ್ವಾಸಕ್ಕೆ ನಾನು ಕೃತಜ್ಞ, ದಿವಾನರೇ.

ಮಲ್ಲಪ್ಪ: ತಾಯಿ ದಿವಾನ ಶಬ್ದ ಬಳಸಬೇಡಿರಿ. ಈಗ ನಾನು ದಿವಾನನಲ್ಲ, ಒಬ್ಬ ಸಾಮಾನ್ಯ ಪ್ರಜೆ.

ಚೆನ್ನಮ್ಮ: ಮಲ್ಲಪ್ಪನವರೆ, ನೀವು ಈಗ ದಿವಾನ ಹುದ್ದೆಯಲ್ಲಿರಲಿಕ್ಕಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ನೀವೇ ದಿವಾನರು. ನಿಮ್ಮಂತೆ ಈ ರಾಜ್ಯಕ್ಕಾಗಿ ನಿಸ್ವಾರ್ಥದಿಂದ ಸೇವೆಸಲ್ಲಿಸಿದವರನ್ನು ಈವರೆಗೂ ನಾನು ನೋಡಿಲ್ಲ. ದಿವಾನರಾಗಿ ನೀವು ಆಗ ಪೇಶ್ವೆಯವರೊಂದಿಗೆ, ಈಗ ಬ್ರಿಟಿಷ್‌ರೊಂದಿಗೆ ಘನತೆಯಿಂದ ನಡೆದುಕೊಂಡಿರಿ. ರಾಜ್ಯದ ಘನತೆಯನ್ನು ಎತ್ತಿಹಿಡಿಯುತ್ತ ಬಂದಿರಿ. ಇದನ್ನು ಎಲ್ಲ ಪ್ರಜೆಗಳು ಬಲ್ಲರು.

ಮಲ್ಲಪ್ಪ: ತಾಯಿ, ಕೆಲವೊಮ್ಮೆ ಒಬ್ಬನ ನಿಜವ್ಯಕ್ತಿತ್ವಕ್ಕೆ ಸುದ್ದಿವ್ಯಕ್ತಿತ್ವವೆಂಬ ಇನ್ನೊಂದು ಮುಖ ಸೃಷ್ಟಿಯಾಗುತ್ತದೆ. ಸಜ್ಜನರು ದುರ್ಜನರೆಂದು, ದುರ್ಜನರು ಸಜ್ಜನರೆಂದು ಚಿತ್ರಿತರಾಗಿ ಮುಂದಿನ ಜನಾಂಗ ನಂಬುವಂತಾಗುತ್ತದೆ. ಈಗ ನಿರಪರಾಧಿಯಾದ ನಾನು ಸ್ಥಾನಚ್ಯುತನಾಗಿದ್ದೇನೆ. ಆದರೆ ಈ ಸ್ಥಾನಚ್ಯುತಿಗೆ ಭವಿಷ್ಯದಲ್ಲಿ ಏನೇನು ಅರ್ಥ–ಅಪಾರ್ಥ ಹಚ್ಚುತ್ತಾರೋ ದೇವರೇ ಬಲ್ಲ. ಅಪಾರ್ಥ ಹಚ್ಚುವ ಪ್ರಸಂಗಗಳೇ ಬಹಳ ಜರುಗಬಹುದು.

ಚೆನ್ನಮ್ಮ: ಹಾಗಾಗದಿರಲೆಂದು ಹಾರೈಸುತ್ತೇನೆ.

ಮಲ್ಲಪ್ಪ: ಇಲ್ಲ ತಾಯಿ, ನಾನು ದತ್ತಕಪತ್ರ ಸಿದ್ಧಪಡಿಸಿದುದರ ಹಿಂದೆ ನನ್ನ ಸ್ವಾರ್ಥಅಡಗಿದೆ ಎಂದು ಈಗ ಪ್ರಚಾರ ಮಾಡುತ್ತಲಿದ್ದಾರೆ. ಮುಂದಿನ ದಿನಗಳಲ್ಲಿ ಜನರು ಇದಕ್ಕೆ ಹೆಚ್ಚಿನದಾಗಿ ರೆಕ್ಕೆ–ಪುಕ್ಕ ಹಚ್ಚಿ, ನನ್ನ ಶುದ್ಧವ್ಯಕ್ತಿತ್ವಕ್ಕೆ ಮಸಿ ಬಳಿಯದಿರಲೆಂದು ಆಶಿಸುತ್ತೇನೆ. ಹಾವೇರಿ ವೆಂಕಟರಾವ ಅವರಿಗೆ ಮೊದಲಿನಿಂದಲೂ ನಮ್ಮ ಸಮಾಜದ ಬಗ್ಗೆ ದ್ವೇಷ. ಬ್ರಿಟಿಷರ ಮತ್ತು ಈ ಸಂಸ್ಥಾನಿಕರ ನಡುವೆ ದ್ವೇಷ ವರ್ಧಿಸಲು ಅವನು ಬೇಕಾದ್ದನ್ನು ಮಾಡಬಲ್ಲ. ನನ್ನ ವಿಷಯವಾಗಿಯೂ ಬ್ರಿಟಿಷರಿಗೆ ಸುಳ್ಳುವರದಿ ಕಳಿಸಿರುವನೆಂದು ಕೇಳಿದ್ದೇನೆ. ನನ್ನ ವಿಚಾರ ಬಿಡಿ ತಾಯಿ, ರಾಣಿ ವೀರಮ್ಮನವರನ್ನು ನಿಮ್ಮ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನಗಳು ನಡೆಯುತ್ತಿವೆ ಎಂದು ಇತ್ತೀಚೆ ಕೇಳುತ್ತಿದ್ದೇನೆ.

ಚೆನ್ನಮ್ಮ: ಸಾಧ್ಯವಿಲ್ಲ. ಅವಳನ್ನು ನಾನು ಮಗಳೆಂದೇ ಭಾವಿಸಿದ್ದೇನೆ. ಮತ್ತು ಹಾಗೆ ಪಾಲಿಸುತ್ತಿದ್ದೇನೆ.

ಮಲ್ಲಪ್ಪ: ನಿಜ ತಾಯಿ, ಈ ಹಿಂದೆ ಕೆಲವರು ಶಿವಲಿಂಗರುದ್ರಸರ್ಜನ ಮನಸ್ಸು ಕೆಡಿಸಿ, ಅವರಿಗೂ ನಿಮಗೂ ವಿರೋಧ ಸೃಷ್ಟಿಸಿದ್ದರು. ವೀರಮ್ಮ ಇನ್ನೂ ಹಸುಳೆ. ಅವಳು ಅಂಥ ದುಷ್ಟರ ಮಾತನ್ನು ನಂಬಿದರೆ ಅರಮನೆಯಲ್ಲಿ ಎರಡು ಪಕ್ಷಗಳು ಸೃಷ್ಟಿಯಾಗಬಹುದು. ಹಾಗಾಗದಂತೆ ಎಚ್ಚರವಹಿಸಿ ತಾಯಿ.

ಚೆನ್ನಮ್ಮ: ಶಿವ ಶಿವಾ, ದತ್ತಕ ಪ್ರಕರಣ ಸರಿಪಡಿಸುವುದೇ ಒಂದು ಸಮಸ್ಯೆಯಾಗಿರುವಾಗ, ಈ ಇನ್ನೊಂದು ಸಮಸ್ಯೆ ಬೆಳೆದು ನಿಂತರೆ ರಾಜ್ಯದ ಗತಿ ಏನು? ಹೊರಗಿನ ಅದಕ್ಕಿಂತ ಒಳಗಿನ ಸಮಸ್ಯೆ ಇನ್ನೂ ದೊಡ್ಡದಾಗಿ ಕಾಡಬಹುದು.

ಮಲ್ಲಪ್ಪ: ತಾಯಿ, ಗುರುಸಿದ್ದಪ್ಪ ಸಜ್ಜನವ್ಯಕ್ತಿ, ವೀರಪ್ಪ ದುಷ್ಟವ್ಯಕ್ತಿ. ಇವನ ಮಾತಿಗೆ ಕಿವಿಗೊಡದೆ ಗುರುಸಿದ್ದಪ್ಪ ನಿಮ್ಮ ಸಲಹೆಯಂತೆ ನಡೆಯಬೇಕು ಅಷ್ಟೇ. ನನಗೆ ಯಾವ ಹುದ್ದೆಯೂ ಬೇಡ, ಪ್ರಸಿದ್ಧಿಯೂ ಬೇಡ. ರಾಜ್ಯಪ್ರಸಿದ್ಧಿಯು ಮಾತ್ರ ಕುಂದದಿರಲಿ. ಮಲ್ಲಸರ್ಜ ದೊರೆಗಳು ತೀರಿಕೊಳ್ಳಲು ಅರಮನೆ–ಆಸ್ಥಾನಗಳಲ್ಲಿ ನಿರ್ಮಾಣವಾಗಿದ್ದ ನಿರಾಶೆಯ ವಾತಾವರಣದಲ್ಲಿ ಆಶೆಯ ಚಿಗುರು ಹುಟ್ಟಿಸಿದವರು ನೀವು. ಶಿವಲಿಂಗರುದ್ರಸರ್ಜ ದೊರೆಗಳು ತೀರಿಕೊಂಡ ಇಂದಿನ ನಿರಾಶೆಯ ಸಂದರ್ಭದಲ್ಲಿ ನಿಮ್ಮಿಂದ ಇನ್ನೂ ಹೆಚ್ಚಿನ ಆಶೆ ಚಿಗುರಲೆಂದು ಹಾರೈಸುತ್ತೇನೆ. ಹೋಗಿಬರುತ್ತೇನೆ ತಾಯಿ (ಏಳುವನು).

ಚೆನ್ನಮ್ಮ: ಹೋಗಿಬನ್ನಿ. ಎಲ್ಲದಕ್ಕೂ ದೇವರಿದ್ದಾನೆ.(ಎನ್ನುತ್ತ ಎದೆಯ ಮೇಲಿನ ಲಿಂಗಕರಡಿಗೆಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ).

❖❖

XIII

(ಕಿತ್ತೂರಿನಲ್ಲಿ ಎಲಿಯಟ್, ಸ್ಟೀವನ್‌ಸನ್ ಕಛೇರಿ)

ವೀರಪ್ಪ: (ಒಳಗೆ ಬರುತ್ತ, ಸ್ವಗತ)ಕಿತ್ತೂರು ಸಂಸ್ಥಾನಕ್ಕೆ ಈಗ ರಾಜನಿಲ್ಲ. ದತ್ತಕ ಸಮಸ್ಯೆ ಇನ್ನೂ ಬಗೆಹರಿಯಲಿಲ್ಲ. ಹೀಗಾಗಿ ಈ ವರ್ಷದ ದಸರಾ ಕಾಣಿಕೆ ಯಾರು ಸ್ವೀಕರಿಸಬೇಕೆಂಬ ಬಗ್ಗೆ ಮೊನ್ನೆ ಅತ್ತೆಯೊಂದಿಗೆ ಅತ್ತೆ ಹಾಗೆ, ನಿನ್ನೆ ಸೊಸೆಯೊಂದಿಗೆ ಸೊಸೆಹಾಗೆ ಮಾತನಾಡಿದೆ. ಇಬ್ಬರಲ್ಲಿಯೂ ಈ ಬಗ್ಗೆ ಮತಬೇಧ ಬೆಳೆಯುವ ಲಕ್ಷಣ ತೋರುತ್ತದೆ. ಇಂದು ಈ ವಿಷಯವಾಗಿ ಸ್ಟೀವನ್‌ಸನ್ ಎಲಿಯಟ್‌ರೊಂದಿಗೆ ಇವರಂತೆಯೇ ಮಾತನಾಡುತ್ತೇನೆ(ಎನ್ನುತ್ತ ಕಛೇರಿಯೊಳಗೆ ಬರುತ್ತಾನೆ).

ಎಲಿಯಟ್ : ಬನ್ನಿ ವೀರಪ್ಪನವರೇ, ಏನೂ ತಿಳಿಸದೇ ಬಂದುಬಿಟ್ಟಿರಿ, ಕಾರಣವೇನು?

ವೀರಪ್ಪ: (ಕುಳಿತುಕೊಳ್ಳುತ್ತ) ಕಾರಣವಿದೆ. ಪ್ರತಿವರ್ಷದಂತೆ ಈ ವರ್ಷವೂ ದಸರಾ ಸಮಾರಂಭಕ್ಕೆ ಬರುವ ದೇಶಮುಖರು, ಗೌಡರು ನೀಡಲಿರುವ ಕಪ್ಪ-ಕಾಣಿಕೆಯನ್ನು ಯಾರು ಸ್ವೀಕರಿಸಬೇಕು? ಅವರಿಗೆ ಯಾರು ಗೌರವಿಸಬೇಕು. ಈ ವಿಷಯವಾಗಿ ಪ್ರಜೆಗಳಲ್ಲಿ ಕೆಲವರು ಚೆನ್ನಮ್ಮನವರ, ಇನ್ನು ಕೆಲವರು ವೀರಮ್ಮನವರ ಹೆಸರು ಹೇಳುತ್ತಿದ್ದಾರೆ.

ಸ್ಟೀವನ್‌ಸನ್: ಈ ಸುದ್ದಿ ನಮ್ಮ ಕಿವಿಗೂ ಬಿದ್ದಿದೆ. ನಿಮ್ಮ ಅಭಿಪ್ರಾಯವೇನು?

ವೀರಪ್ಪ: ಇಬ್ಬರೂ ಬೇಡ. ದತ್ತಕ ಸಮಸ್ಯೆ ಬಗೆಹರಿಯುವವರೆಗೆ ಸಂಸ್ಥಾನದ ಮೇಲಾಧಿಕಾರಿಗಳಾದ ಬ್ರಿಟಿಷ್ ಸರಕಾರವೇ ಸ್ವೀಕರಿಸಲಿ.

ಎಲಿಯಟ್ : ಹೌದು, ಪ್ರಭುಗಳಿಲ್ಲದ ಈ ಸಂಸ್ಥಾನಕ್ಕೆ ಈಗ ಬ್ರಿಟಿಷ್ ಸರಕಾರವೇ ಪ್ರಭು. ಸಂಸ್ಥಾನದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವುದು ನಮ್ಮ ಸರಕಾರದ ಹೊಣೆ. ಈ ಮತ್ತು ಇಂತಹ ಹೊಣೆಗಳನ್ನು ನಿರ್ವಹಿಸುವ ಅಧಿಕಾರವನ್ನು ಥ್ಯಾಕರೆಯವರು ನಮಗೆ ವಹಿಸಿಕೊಟ್ಟಿದ್ದಾರೆ.

ವೀರಪ್ಪ: ಹೌದು, ದತ್ತಕ ಸಮಸ್ಯೆ ಬಗೆ ಹರಿಯುವವರೆಗೆ ನೀವೇ ಸಂಸ್ಥಾನದ ಎಲ್ಲ ಕೆಲಸಕಾರ್ಯ ಪೂರೈಸಬೇಕಾಗುತ್ತದೆ. ದಸರಾ ಕಾಣಿಕೆ ಸ್ವೀಕರಿಸಬೇಕಾಗುತ್ತದೆ. ಕಾರಣ ಗುರುಸಿದ್ದಪ್ಪನವರನ್ನು ಬೇಗ ಕರೆಯಿಸಿ ಈ ವಿಷಯವನ್ನು ಅವರಿಗೆ ತಿಳಿಸಿರಿ. ದಿನ ಸಮೀಪಿಸುತ್ತಿದೆ. ನಾನು ಹೋಗುತ್ತೇನೆ(ಹೋಗುತ್ತಾನೆ).

ಎಲಿಯಟ್: ಯಾರಿದ್ದೀರಿ?

ಸೇವಕ: ಅಪ್ಪಣೆ ಸಾಹೇಬರೆ.

ಸ್ಟೀವನ್‌ಸನ್ : ದತ್ತಕ ಕಾನೂನಿನ ಮೂಲಕ ಈ ರಾಜ್ಯವನ್ನು ವಶಪಡಿಸಿಕೊಳ್ಳಲು ಉತ್ಸುಕರಾಗಿದ್ದ ಥ್ಯಾಕರೆಯವರು, ಇತ್ತೀಚೆ ಆ ಯೋಚನೆ ಕೈಬಿಡುತ್ತಿರುವಂತೆ ತೋರುತ್ತದೆ.

ಎಲಿಯಟ್ : ನನಗೂ ಹಾಗೆಯೇ ಅನಿಸುತ್ತಿದೆ. ಈ ರೀತಿ ರಾಜ್ಯ ಕಿತ್ತಿಕೊಳ್ಳುವುದು ತಪ್ಪು ಎಂಬ ಪಾಪಪ್ರಜ್ಞೆ ಅವರನ್ನು ಕಾಡತೊಡಗಿದಂತಿದೆ.

ಸ್ಟೀವನ್‌ಸನ್ : ಇವರ ಜೊತೆ ಕಿತ್ತೂರಿನವರು ಸ್ವಾಭಿಮಾನದ ಮೂಲಕ ಇವರ ಮನ ಗೆದ್ದಿರುವಂತಿದೆ.

ಎಲಿಯಟ್ : ಇನ್ನೂ ಒಂದು ಮುಖ್ಯ ವಿಷಯ. ಈ ಸ್ವಾಭಿಮಾನದ ತಾಯಿಬೇರಾಗಿರುವ ತಾಯಿ ಚೆನ್ನಮ್ಮನವರದು ಕುಸುಮಕೋಮಲ, ವಜ್ರಕಠೋರ ವ್ಯಕ್ತಿತ್ವ. ಅವರ ಈ ದರ್ಪ-ದಯೆಗಳಿಂದಲೂ ಅವರು ಪ್ರಭಾವಿತರಾದಂತಿದೆ.

ಎಲಿಯಟ್: ಗುರುಸಿದ್ದಪ್ಪನವರಿಗೆ ಬರಹೇಳು(ಸೇವಕ ಹೋಗುತ್ತಾನೆ).

ಸ್ಟೀವನ್‌ಸನ್: ಹೀಗಾಗಿ ಈ ದತ್ತಕ ಸಮಸ್ಯೆಯನ್ನು ನ್ಯಾಯಯುತವಾಗಿ ಬಗೆಹರಿಸಲು ಥ್ಯಾಕರೆ ಸಾಹೇಬರು ಇತ್ತೀಚೆ ಆಸಕ್ತರಾಗಿದ್ದಾರೆ. ಆದರೆ ಕಿತ್ತೂರು ಸಂಸ್ಥಾನದವರು ಅವರ ಈ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ. ಪರಸ್ಪರ ವಿಶ್ವಾಸ ಹಾಳಾದರೆ ಆಗುವುದೇ ಹೀಗೆ.

ಎಲಿಯಟ್: ಥ್ಯಾಕರೆ ಸಾಹೇಬರು ವಾರಕ್ಕೆ ಒಮ್ಮೆಯಾದರೂ ಗವರ್ನರ ಎಲ್ಫಿನ್‌ಸ್ಟನ್‌ರವರಿಗೆ ತಮ್ಮ ಪತ್ರಕ್ಕೆ ಉತ್ತರ ಕಳುಹಿಸಲು ಒತ್ತಾಯಿಸುತ್ತಿದ್ದಾರೆ. ಅವರು ಮಾತ್ರ ಮುಂಬೈಯಲ್ಲಿ ಮೌನವಹಿಸಿದ್ದಾರೆ. ಇದರಿಂದಾಗಿ ಥ್ಯಾಕರೆ ಸಾಹೇಬರ ವಿಷಯವಾಗಿ ಕಿತ್ತೂರಿನವರಲ್ಲಿ ಅವಿಶ್ವಾಸ ಬೆಳೆಯುತ್ತ ನಡೆದಿದೆ(ಗುರುಸಿದ್ಧಪ್ಪ ಬರುತ್ತಾನೆ).

ಗುರುಸಿದ್ಧಪ್ಪ : ನಮಸ್ಕಾರ ಸಾಹೇಬರೆ.

ಎಲಿಯಟ್ : ನಮಸ್ಕಾರ, ಕುಳಿತುಕೊಳ್ಳಿ, ಈಗ ಮುಖ್ಯ ವಿಷಯ. ಮಹಾನವಮಿ ಸಮಾರಂಭ ಸಮೀಪಿಸುತ್ತಿದೆ. ಪ್ರತಿವರ್ಷ ಪ್ರಭುಗಳು ಈ ಹಬ್ಬವನ್ನು ವೈಭವದಿಂದ ಆಚರಿಸುತ್ತಿದ್ದರು. ಈಗ ಪ್ರಭುಗಳಿಲ್ಲ. ಹೀಗಾಗಿ ದತ್ತಕಸಮಸ್ಯೆ ಬಗೆಹರಿಯುವವರೆಗೆ ಸಮಾರಂಭವನ್ನು ಆಚರಿಸುವುದು ನಮ್ಮ ಹೊಣೆಯಾಗಿದೆ. ಆಚರಿಸದಿದ್ದರೆ ಜನ ನಮ್ಮ ಬಗ್ಗೆ ಬೇಸರಪಟ್ಟುಕೊಳ್ಳಬಹುದು.

ಗುರುಸಿದ್ದಪ್ಪ: ನೀವು ಹೇಳುವುದು ನಿಜ. ಆದರೂ ಈ ವಿಷಯವನ್ನು ಚೆನ್ನಮ್ಮ, ವೀರಮ್ಮನವರಿಗೆ ಬಿಡುವುದು ಸೂಕ್ತ.

ಎಲಿಯಟ್: ಅವರಿಗೆ ಬಿಟ್ಟುಕೊಡುವುದರಿಂದ ಇನ್ನೊಂದು ಸಮಸ್ಯೆ ಉದ್ಭವಿಸುತ್ತದೆ. ಕಾಣಿಕೆಯನ್ನು ಅತ್ತೆ-ಸೊಸೆಯರಲ್ಲಿ ಯಾರು ಸ್ವೀಕರಿಸಬೇಕು? ಈಗಾಗಲೇ ಪ್ರಜೆಗಳಲ್ಲಿ, ಸೈನಿಕರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯ ಭುಗಿಲೆದ್ದಿದೆ. ಇದಕ್ಕೆ ಅವಕಾಶ ಕೊಡದಂತೆ ಸಂಸ್ಥಾನದ ಪರವಾಗಿ ನಾವೇ ಈ ಸಮಾರಂಭ ಆಚರಿಸುತ್ತೇವೆ.

ಗುರುಸಿದ್ದಪ್ಪ: ಒಂದು ದೃಷ್ಟಿಯಿಂದ ನಿಮ್ಮ ಅಭಿಪ್ರಾಯ ಸರಿ. ಆದರೆ ಈ ನಿರ್ಣಯದ ಮೂಲಕ ತಮ್ಮ ಪ್ರತಿಷ್ಠೆಯನ್ನು ನೀವು ಮೊಟಕು ಗೊಳಿಸುತ್ತೀರಿ ಎಂದು ಅರಮನೆಯವರು ಭಾವಿಸಬಹುದು.

ಸ್ಟೀವನ್‌ಸನ್ : ನೀವು ಅವರಿಗೆ ತಿಳಿಸಿ ಹೇಳಿರಿ. ಈ ಸಮಾರಂಭವನ್ನು ನಾವೇ ನೆರವೇರಿಸಲು ನಿರ್ಧರಿಸಿದ್ದೇವೆ. ನೀವು ಹೋಗಬಹುದು (ಹೋಗುವನು).

❖❖

XIV

(ಚೆನ್ನಮ್ಮನ ಅರಮನೆ ಗುರುಸಿದ್ದಪ್ಪ., ವೀರಪ್ಪ ಕುಳಿತಿದ್ದಾರೆ. ಚೆನ್ನಮ್ಮ, ವೀರಮ್ಮ ಬರುತ್ತಲೇ ಎದ್ದುನಿಂತು ಅವರು ಆಸೀನರಾದ ಬಳಿಕ ತಾವೂ ಆಸೀನರಾಗುತ್ತಾರೆ).

ಚೆನ್ನಮ್ಮ: ದಿವಾನರೇ, ಪ್ರಭುಗಳಿದ್ದಾಗ ಎಲ್ಲ ಕಾರ್ಯಗಳು ಸಹಜ-ಸರಳವಾಗಿ ಜರುಗುತ್ತಲಿದ್ದವು. ಇಂದು ಸಣ್ಣಕಾರ್ಯವೂ ಸಮಸ್ಯೆಯಾಗಿ ನಿಲ್ಲುತ್ತಿದೆ.

ಗುರುಸಿದ್ಧಪ್ಪ: ಹೌದು ತಾಯಿ, ಸೂರ್ಯನಿರುವಾಗ ದಾರಿ ನಡೆಯುವುದು ಸರಳ. ಇಲ್ಲದಾಗ ಪರಿಚಿತ ದಾರಿಯೂ ಅಡ್ಡಿಯನ್ನೊಡ್ಡುತ್ತದೆ, ಇರಲಿ. ಈಗ ಎದುರಾದ ಅಂಥ ಸಮಸ್ಯೆ ಏನು?

ಚೆನ್ನಮ್ಮ: ದಸರಾ ಉತ್ಸವದ ಬಗ್ಗೆ ಸಮಾಲೋಚಿಸಬೇಕಾಗಿದೆ. ದಿವಾನರೇ ನಿಮ್ಮ ಅಭಿಪ್ರಾಯವೇನು?

ಗುರುಸಿದ್ಧಪ್ಪ: ಇದೀಗ ಎಲಿಯಟ್ ನನ್ನನ್ನು ಕರೆಯಿಸಿ ಈ ವರ್ಷದ ದಸರಾ ಉತ್ಸವವನ್ನು ಯಾರು ಆಚರಿಸಬೇಕು? ಎಂದು ಕೇಳಿದರು.

ವೀರಪ್ಪ: ಯಾರು ಆಚರಿಸಬೇಕು? ಅರಮನೆಯವರು ಆಚರಿಸಬೇಕು.

ಚೆನ್ನಮ್ಮ: ಇರಲಿ, ಅವರು ಏನು ಹೇಳಿದರು?

ಗುರುಸಿದ್ಧಪ್ಪ: ಅವಸರ ಮಾಡಬೇಡಿ, ಸಮಯ ಸೂಕ್ಷ್ಮವಿದೆ. ಈಗ ರಾಜರಿಲ್ಲ. ಯಾರು ಕಾಣಿಕೆ ಸ್ವೀಕರಿಸಬೇಕು? ಇತ್ಯಾದಿ ಸಮಸ್ಯೆಗಳು ಉದ್ಭವಿಸುತ್ತವೆ. ಕಾರಣ, ಮೇಲಧಿಕಾರಿಗಳಾದ ನಾವೇ ಈ ವರ್ಷ ಆಚರಿಸುವುದು, ನಾವೇ ಕಾಣಿಕೆ ಸ್ವೀಕರಿಸುವುದು ಸಂಸ್ಥಾನದ ಹಿತದೃಷ್ಟಿಯಿಂದ ಇದು ಯೋಗ್ಯವೆಂದು ಎಲಿಯಟ್ ಹೇಳಿದರು.

ವೀರಮ್ಮ: (ಸಿಟ್ಟಿನಿಂದ) ನಮಗೆ ದತ್ತಕ ಅಧಿಕಾರವಿಲ್ಲ, ಸಮಾರಂಭ ಆಚರಣೆಯ ಅಧಿಕಾರವೂ ಇಲ್ಲ. ಹಾಗಿದ್ದರೆ ಅರಮನೆಯ ಪರಿವಾರದವರಾದ ನಮ್ಮ ಮಹತ್ವವಾದರೂ ಏನು?

ವೀರಪ್ಪ: ಹೌದು, ಹಿಂದೆ ಪೇಶ್ವೆಯವರು ನಮ್ಮ ಅಧಿಕಾರಿಗಳಾಗಿದ್ದರೂ ದಸರಾ ಉತ್ಸವ ನಾವೇ ಆಚರಿಸುತ್ತಿದ್ದೆವು.

ವೀರಮ್ಮ: ಅದೇ ರೀತಿ ಈಗ ಬ್ರಿಟಿಷ್‌ರು ನಮ್ಮ ಅಧಿಕಾರಿಗಳಾಗಿದ್ದರೂ ನಾವೇ ಆಚರಿಸಬೇಕು.

ಚೆನ್ನಮ್ಮ: ಮಗಳೇ, ನೀನು ಹೇಳುವುದು ಸರಿ. ಆಗ ಪ್ರಭುಗಳಿದ್ದರು. ಈಗ ಪ್ರಭುಗಳಿಲ್ಲ ಎಂಬ ನೆವ ಒಡ್ಡುತ್ತಾರೆ. ನಾವು ಈಗ ಅಸಹಾಯಕ ಸ್ಥಿತಿಯಲ್ಲಿದ್ದೇವೆ. ಕೇವಲ ಈ ವರ್ಷದ ಸಮಾರಂಭದ ವಿಷಯವನ್ನೇ ದೊಡ್ಡದು ಮಾಡಬಾರದು. ಸಂಸ್ಥಾನದ ಭವಿಷ್ಯಕ್ಕೆ ಸಂಬಂಧಿಸಿದ ದತ್ತಕವಿಷಯ ಕುರಿತು ಚಿಂತಿಸಬೇಕು.

ಗುರುಸಿದ್ಧಪ್ಪ: ಪ್ರಭುಗಳಿಲ್ಲದ ಕಾರಣ ಮೇಲಧಿಕಾರಿಗಳು ಆಚರಿಸುತ್ತಿದ್ದಾರೆಂದು ಸಮಾಧಾನ ಪಟ್ಟುಕೊಳ್ಳುವುದು ಸೂಕ್ತ. ಈಗ ದಸರಾ ಸಮಾರಂಭದ ಆಚರಣೆ ಅವರಂತೆ ಆಚರಿಸಿಕೊಳ್ಳಲು ಒಪ್ಪಿ, ದತ್ತಕ ಸಮಸ್ಯೆಯನ್ನು ನಮ್ಮಂತೆ ಬಿಡಿಸಿಕೊಳ್ಳಬೇಕು.

ವೀರಪ್ಪ: ದಿವಾನರು ಹೇಳುವುದು ಒಂದು ದೃಷ್ಟಿಯಿಂದ ಸರಿ, ಇದಕ್ಕಿಂತ ಮುಖ್ಯವಾದುದು ದತ್ತಕದ ಬಗ್ಗೆ ಗವರ್ನರರಿಂದ ಇನ್ನೂ ಉತ್ತರ ಬರಲಿಲ್ಲ. ಹೀಗೆ ಬಿಟ್ಟರೆ ಇದು ಇನ್ನೂ ವಿಳಂಬವಾಗಬಹುದು. ಕಾರಣ, ತಾಯಿ ಚೆನ್ನಮ್ಮನವರು ಮತ್ತು ಗುರುಸಿದ್ಧಪ್ಪನವರು ಮುಂಬೈಗೆ ಹೋಗಿ ಈ ಸಮಸ್ಯೆಯನ್ನು ಬೇಗ ನಮ್ಮಂತೆ ಇತ್ಯರ್ಥ ಮಾಡಿಕೊಂಡು ಬಂದು, ಪಟ್ಟಬಂಧೋತ್ಸವ ಆಚರಿಸಿದರೆ ಹೇಗೆ?

ಗುರುಸಿದ್ಧಪ್ಪ: ಇದು ಸರಿಯಾದ ಸಲಹೆ. ಆದರೆ ಗವರ್ನರ್ ಹತ್ತಿರ ನಾವು ನೇರವಾಗಿ ಹೋಗಲು ಬರುವುದಿಲ್ಲ. ಥ್ಯಾಕರೆ ಮೂಲಕ ಒಪ್ಪಿಗೆ ಪಡೆಯಬೇಕು.

ವೀರಮ್ಮ: ಅವರನ್ನು ಕಾಣುವ ಮೊದಲು ಇವರಿಂದ ಒಪ್ಪಿಗೆ ಪಡೆಯಬೇಕು! ಬ್ರಿಟಿಷರ ನಿಯಮಗಳೇ ವಿಚಿತ್ರ.

ಚೆನ್ನಮ್ಮ: ವಿಚಿತ್ರವಲ್ಲ ಮಗಳೇ ಇದು ಆಡಳಿತದ ಶಿಸ್ತು.

ಗುರುಸಿದ್ಧಪ್ಪ: ಈ ಶಿಸ್ತು ಕಾರಣವಾಗಿಯೇ ಅವರು ಜಗತ್ತನ್ನು ಗೆದ್ದಿದ್ದಾರೆ. ಅಚ್ಚುಕಟ್ಟಾಗಿ ಆಡಳಿತ ನಡೆಸುತ್ತಿದ್ದಾರೆ.

ಚೆನ್ನಮ್ಮ: ನಮ್ಮವರಿಗೆ ಸಣ್ಣ ಸಂಸ್ಥಾನದ ಆಡಳಿತ ನಿರ್ವಹಿಸುವುದೇ ಅಸಾಧ್ಯವಾಗಿರುವಾಗ, ಅವರು ದೊಡ್ಡ ದೊಡ್ಡ ದೇಶಗಳನ್ನಾಳುತ್ತಿರುವುದು ಈ ಶಿಸ್ತಿನ ಮೂಲಕ.

ವೀರಪ್ಪ: ನೀವು ಹೇಳುವುದು ಸರಿ ತಾಯಿ, ಈಗ ಆದಷ್ಟು ಬೇಗ ಪ್ರಯಾಣದ ವ್ಯವಸ್ಥೆ ಮಾಡಿಕೊಳ್ಳಿರಿ. ಜೊತೆಗೆ ದೊಡ್ಡ ಮೊತ್ತದ ಹಣ ಒಯ್ಯಬೇಕಾಗುತ್ತದೆ.

ಗುರುಸಿದ್ಧಪ್ಪ: ಹೌದು, ಹಣದ ಮೊತ್ತದೊಂದಿಗೆ ಪ್ರಯಾಣ ಮಾಡಲು ಥ್ಯಾಕರೆಯವರಿಗೆ ಬೇಗ ಮನವಿ ಪತ್ರ ಬರೆದು, ಒಪ್ಪಿಗೆ ಪಡೆಯೋಣ.

❖❖

XV

(ಧಾರವಾಡದ ಥ್ಯಾಕರೆ ಕಾರ್ಯಾಲಯ, ಎಲಿಯಟ್ ಮತ್ತು ವೀರಪ್ಪ ಅವರ ಪ್ರವೇಶ)

ಥ್ಯಾಕರೆ: ಏನು ವೀರಪ್ಪನವರೆ, ಇದೀಗ ಬಂದಿರಾ? ಕುಳಿತುಕೊಳ್ಳಿ. (ಎಲಿಯಟ್‌ನನ್ನು ಉದ್ದೇಶಿಸಿ) ಎಲಿಯಟ್, ಗ್ರಾಮೀಣ ಸೇನಾಪತಿಗಳ ಊಟೋಪಚಾರದ ವ್ಯವಸ್ಥೆ ಮಾಡಿದ್ದೀರಾ?

ವೀರಪ್ಪ: ಸಾಹೇಬರೆ, ನಿಮ್ಮ ಆಡಳಿತದಲ್ಲಿ ಸಮಯಕ್ಕೆ ಸರಿಯಾಗಿ ಸರಿಯಾದ ಕಾರ್ಯ ಜರುಗುತ್ತಲಿರುವಾಗ ಊಟದ ವ್ಯವಸ್ಥೆಗೆ ಚ್ಯುತಿಯೇ?

ಎಲಿಯಟ್: ನಾವೆಲ್ಲ ಇದೀಗ ಭೂರಿಭೋಜನ ಮುಗಿಸಿದ್ದೇವೆ.

ಥ್ಯಾಕರೆ: ಏನು ವೀರಪ್ಪನವರೆ, ನೀವು ಬಂದಾಗಲೆಲ್ಲ ಹೊಸ ಸುದ್ದಿ ಹೊತ್ತು ತರುವಿರಿ, ಇವತ್ತು ಯಾವ ಸುದ್ದಿ?

ವೀರಪ್ಪ: ಗಂಭೀರ ಸುದ್ದಿಯನ್ನು ಹೇಳಬೇಕಿದೆ.

ಥ್ಯಾಕರೆ: ಹೇಳಿರಿ.

ವೀರಪ್ಪ: ಈಗ ಸಂಸ್ಥಾನಕ್ಕೆ ಪ್ರಭುಗಳಿಲ್ಲ. ದತ್ತಕ ಇತ್ಯರ್ಥವಾಗುವವರೆಗೆ ಮೇಲಧಿಕಾರಿಗಳಾದ ತಾವೇ ಪ್ರಭುಗಳು.

ಥ್ಯಾಕರೆ: ಹೌದು, ತಮ್ಮದು ಸರಿಯಾದ ಅಭಿಪ್ರಾಯ. ಮುಂದೆ?

ವೀರಪ್ಪ: ಮುಂಬೈಯಿಂದ ಉತ್ತರ ತರಿಸಬೇಕಾದುದು ನಿಮ್ಮ ಅಧಿಕಾರ.

ಥ್ಯಾಕರೆ: ಹೌದು.

ವೀರಪ್ಪ: ದುರ್ದೈವದ ಸಂಗತಿಯೆಂದರೆ, ನಿಮ್ಮ ಅಧಿಕಾರವನ್ನು ಧಿಕ್ಕರಿಸಿ, ಚೆನ್ನಮ್ಮ ಗುರುಸಿದ್ದಪ್ಪ ಗವರ್ನರರಿಂದ ಉತ್ತರ ಪಡೆದುಕೊಂಡು ಬರುವುದಕ್ಕಾಗಿ ಮುಂಬೈಗೆ ಹೊರಡಲು ಸಿದ್ಧರಾಗಿದ್ದಾರೆ.

ಥ್ಯಾಕರೆ: ಅದು ಸಾಧ್ಯವಿಲ್ಲ. ನಾನು ಒಪ್ಪಿಗೆ ಕೊಡದ ಹೊರತು, ಯಾರೂ ಗವರ್ನರ ಅವರನ್ನು ಕಾಣುವಂತಿಲ್ಲ.

ವೀರಪ್ಪ: ಇಷ್ಟೇ ಅಲ್ಲ ಸಾಹೇಬರೆ, ಜೊತೆಗೆ ಲಕ್ಷಗಟ್ಟಲೆ ರೂಪಾಯಿ ಒಯ್ಯಲು ನಿರ್ಧರಿಸಿದ್ದಾರೆ.

ಥ್ಯಾಕರೆ: ಇದು ಇನ್ನೂ ಅಸಾಧ್ಯ. ಖಜಾನೆ ಕಾಯುವುದು ನನ್ನ ಹೊಣೆ. ಇಷ್ಟು ದೊಡ್ಡ ಮೊತ್ತದ ಹಣ ಹೊರಗೆ ಬಿಡುವುದಿಲ್ಲ.

ಎಲಿಯಟ್ : ನಾವು ದಸರೆ ಸಮಾರಂಭಕ್ಕೂ ಇಷ್ಟು ಹಣ ವ್ಯಯಿಸಲಿಲ್ಲ.

ಥ್ಯಾಕರೆ: ಸಂಸ್ಥಾನದ ಆರ್ಥಿಕ ಸ್ಥಿತಿ ಕುಸಿಯಬಾರದೆಂದು ನಾನು ಅಕ್ಟೋಬರ್ ೨ ರಂದು ಕಿತ್ತೂರಿಗೆ ಬಂದು, ಅಲ್ಲಲ್ಲಿಯ ತಹಶೀಲ್ದಾರರ ಮೂಲಕ ಗ್ರಾಮೀಣ ಮೂಲದಿಂದ ಆದಾಯ ಸಂಗ್ರಹಿಸುವ ಕೆಲಸ ಮಾಡಿದರೆ, ಇವರು ವ್ಯಯಿಸುವ ಕೆಲಸಕ್ಕೆ ಕೈಹಾಕಿದ್ದಾರೆ. (ಅಷ್ಟರಲ್ಲಿ ಸ್ಟೀವನ್‌ಸನ್ ಪತ್ರದೊಂದಿಗೆ ಬರುತ್ತಾನೆ.)

ಸ್ಟೀವನ್‌ಸನ್: ಸಾಹೇಬರೆ, ಕಲಾದಗಿಯಲ್ಲಿರುವ ನಮ್ಮ ಕಾಲ್ದಳ ಮತ್ತು ಅಶ್ವದಳಗಳಿಗೆ ಬರಗಾಲ ಕಾರಣವಾಗಿ ಆಹಾರದ ಕೊರತೆ ಉಂಟಾಗಿದೆ. ಕಾರಣ, ಅಲ್ಲಿಂದ ಸೈನ್ಯವನ್ನು ಸೂಕ್ತಪ್ರದೇಶಗಳಿಗೆ ಸ್ಥಳಾಂತರಿಸಲು ಗವರ್ನರ್ ಅವರು ತಮಗೆ ಆದೇಶ ಕಳುಹಿಸಿದ್ದಾರೆ.

ಥ್ಯಾಕರೆ: ಹಾಗಿದ್ದರೆ ಅರ್ಧಸೈನ್ಯ ಸೊಲ್ಲಾಪುರ ಪ್ರದೇಶಕ್ಕೆ ಹೋಗಲಿ, ಇನ್ನರ್ಧ.....

ವೀರಪ್ಪ: ಹುಲ್ಲುಗಾವಲು ಪ್ರದೇಶವಾಗಿರುವ ಕಿತ್ತೂರು ಪ್ರದೇಶಕ್ಕೆ ಬರುವುದು ಯೋಗ್ಯ.

ಥ್ಯಾಕರೆ: ಒಳ್ಳೆಯ ವಿಚಾರ, ತಕ್ಷಣ ಕಲಾದಗಿಗೆ ಈ ಸುದ್ದಿ ತಿಳಿಸಿರಿ (ಸ್ಟೀವನ್‌ಸನ್ ಹೋಗುತ್ತಾನೆ). ವೀರಪ್ಪನವರೇ, ಕಿತ್ತೂರಿನವರು ವಿನಾಕಾರಣ ಹೊಸ ಹೊಸ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಸಮಯ ನೋಡಿ ನೀವೇ ಅವರಿಗೆ ಬುದ್ಧಿ ಹೇಳಿರಿ.

ವೀರಪ್ಪ: ಆಗಲಿ ಸಾಹೇಬರೆ, ನಮಸ್ಕಾರ(ಹೋಗುತ್ತಾನೆ).

ಥ್ಯಾಕರೆ: ಎಲಿಯಟ್, ಸಂಸ್ಥಾನದ ಅಧಿಕಾರಿಗಳಲ್ಲಿ ಈ ಅವರಾದಿ ವೀರಪ್ಪ ಮಹಾ ಪಿತೂರಿಗಾರ. ಈ ಸಂಸ್ಥಾನವನ್ನು ದುರ್ಬಲಗೊಳಿಸಲು ತೆರೆಮರೆಯಲ್ಲಿ ಓಡಾಡುವ ಈತ ಒಂದು ಕಾಲದಲ್ಲಿ ನಮ್ಮ ಸರಕಾರವನ್ನೂ ದುರ್ಬಲಗೊಳಿಸುವ ಪಿತೂರಿ ನಡೆಸಬಹುದು. ಹಿಂದೆ ಇವನು ಮಾಡಿದ ಯಾವುದೇ ತಪ್ಪನ್ನು ಮುಂದುಮಾಡಿ ಇವನನ್ನು ನಿಗ್ರಹಿಸಬೇಕು.

ಎಲಿಯಟ್ : ನನ್ನದೂ ಇದೇ ಅಭಿಪ್ರಾಯ(ಎನ್ನುತ್ತ ಎದ್ದು ಹೋಗುವರು).

❖❖

XVI

(ಚೆನ್ನಮ್ಮನ ಅರಮನೆ. ಚೆನ್ನಮ್ಮ, ವೀರಮ್ಮ, ಗುರುಸಿದ್ಧಪ್ಪ, ವೀರಪ್ಪ ಕುಳಿತಿದ್ದಾರೆ)

ಚೆನ್ನಮ್ಮ: ಇದೀಗ ವೀರಪ್ಪನವರ ಗುಪ್ತಚರರು ಒಂದು ಮಹತ್ವದ ಸುದ್ದಿ ತಂದಿದ್ದಾರೆ. ವೀರಪ್ಪನವರೇ, ನೀವೇ ಹೇಳಿರಿ.

ವೀರಪ್ಪ: ಮುಂಬೈಗೆ ಹೋಗಲು ಯಾರಿಗೂ ಒಪ್ಪಿಗೆ ನೀಡುವುದಿಲ್ಲ. ಖಜಾನೆಯನ್ನು ಯಾರೂ ಬಳಸುವಂತಿಲ್ಲ, ಖಜಾನೆ ರಕ್ಷಿಸುವುದು ನಮ್ಮ ಹೊಣೆ. ಒಂದು ವೇಳೆ ನಮ್ಮ ಹೊಣೆಯನ್ನು ಸಂಸ್ಥಾನ ಪ್ರತಿಭಟಿಸಿದರೆ, ಕಲಾದಗಿಯಿಂದ ಕ್ಯಾಪ್ಟನ್ ಬ್ಲ್ಯಾಕ್-ಲೆಫ್ಟಿನೆಂಟ್ ಸಿವೆಲ್-ಲೆಫ್ಟಿನೆಂಟ ಡಿಟನ್ ನೇತೃತ್ವದಲ್ಲಿ ಸೈನ್ಯ ತರಿಸಿ ಯುದ್ಧ ಕೈಕೊಳ್ಳುತ್ತೇವೆ-ಎಂದು ಥ್ಯಾಕರೆ ನಿರ್ಧರಿಸಿದ್ದಾರೆ.

ಚೆನ್ನಮ್ಮ: ಇದು ಅತಿಯಾಯಿತು. ನಾವು ಸೈನ್ಯ-ಯುದ್ಧಗಳ ವಿಚಾರವನ್ನೇ ಮಾಡಿಲ್ಲ. ಹೀಗಿರುವಾಗ ಯುದ್ಧ ಮಾಡಲು ಸೈನ್ಯ ಕರೆಯಿಸುವುದು ದಬ್ಬಾಳಿಕೆ.

ಗುರುಸಿದ್ಧಪ್ಪ: ಸೈನ್ಯ ಕರೆಸುವುದು-ಯುದ್ಧ ಸಾರುವುದು ನಿಜವೇ? ಎಂದು ಥ್ಯಾಕರೆಯವರಿಗೆ ಕೇಳೋಣವೇ?

ಚೆನ್ನಮ್ಮ: ಬೇಡ. ಪದೇ ಪದೇ ಅವರಿಗೆ ಜೀ-ಹುಜೂರ ಅನ್ನುವುದು ನನಗೆ ಸೇರುವುದಿಲ್ಲ. 'ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ, ಕರುಣಿ ಕಲ್ಯಾಣ ಬಸವಣ್ಣ' ಎಂಬ ನಿಲುವು ನಮ್ಮದು.

ಗುರುಸಿದ್ಧಪ್ಪ: ಹೌದು, ಸ್ವಾಭಿಮಾನದಿಂದ ಬದುಕಿದ ಸಂಸ್ಥಾನ ನಮ್ಮದು. ಮುಂದೆಯೂ ಇದನ್ನೇ ಮೂಲಧನವನ್ನಾಗಿ ಮಾಡಿಕೊಂಡು ನಾವು ಆಡಳಿತ ನಡೆಸೋಣ.

ವೀರಮ್ಮ: ಅತ್ತೆಯವರು ಹೇಳಿದುದು ಸರಿ. ಸ್ವಾಭಿಮಾನವನ್ನೇ ಶಸ್ತ್ರಮಾಡಿಕೊಂಡು ನಾವು ಬಾಳಬೇಕು.

ಚೆನ್ನಮ್ಮ: ಮಗಳೇ, ನೀನು ನಿಜವಾದ ರಾಣಿ.

ಗುರುಸಿದ್ಧಪ್ಪ: ಇಂಥ ಮಾತು ಕೇಳಿ ನನಗೆ ಸಂತೋಷವೆನಿಸುತ್ತದೆ. ನಮ್ಮ ಕೇಂದ್ರೀಯ ಸೈನ್ಯವನ್ನು ಸಜ್ಜುಗೊಳಿಸಬೇಕು, ತಡಮಾಡಬಾರದು.

ವೀರಪ್ಪ: ಹಳ್ಳಿಗಳಿಂದ ನನ್ನ ಗ್ರಾಮೀಣ ಸೈನ್ಯಕ್ಕೂ ಸಿದ್ಧವಾಗಲು ತಿಳಿಸುತ್ತೇನೆ (ಅಷ್ಟರಲ್ಲಿ ಸೇವಕ ಒಳಗೆ ಬರುತ್ತಾನೆ).

ಸೇವಕ: ತಾಯಿ, ತಮ್ಮನ್ನು ಕಾಣಲು ಸ್ಟೀವನ್‌ಸನ್, ಎಲಿಯಟ್ ಬಂದಿದ್ದಾರೆ.

ಚೆನ್ನಮ್ಮ: ಸ್ವಲ್ಪ ಕಾಯಲು ಹೇಳು (ಸೇವಕ ಹೋಗುತ್ತಾನೆ, ಗುರುಸಿದ್ದಪ್ಪನನ್ನು ಕುರಿತು). ದಿವಾನರೇ ಇವರಿಗೆ ಭೆಟ್ಟಿ ಅವಕಾಶ ಕೊಡುವುದು ಬೇಡ. ರಾಣಿಯವರು ಸಮಾಲೋಚನ ಸಭೆಯಲ್ಲಿದ್ದಾರೆ. ನಾಳೆ ಈ ಹೊತ್ತಿಗೆ ಕಾಣಿರಿ–ಎಂದು ಹೇಳೋಣವೇ.

ಗುರುಸಿದ್ಧಪ್ಪ: ಥ್ಯಾಕರೆಯವರನ್ನು ಬಿಟ್ಟರೆ ಇವರೇ ಮುಖ್ಯ ಅಧಿಕಾರಿಗಳು. ಹಾಗೆ ಹಿಂದಿರುಗಿಸಿದರೆ ಪರಸ್ಪರ ಸಂಬಂಧ ಇನ್ನಷ್ಟು ಕೆಡಬಹುದು. ಒಳಗೆ ಬರಲು ಅಪ್ಪಣೆ ಕೊಡುವುದು ಸರಿ.

ಚೆನ್ನಮ್ಮ: ಯಾರಲ್ಲಿ?(ಸೇವಕ ಬರುವನು, ಬರಹೇಳು, ಸೇವಕ ಹೋಗುವನು)

ಇಬ್ಬರೂ: ನಮಸ್ಕಾರ ಚೆನ್ನಮ್ಮ, ವೀರಮ್ಮನವರೇ.

ಚೆನ್ನಮ್ಮ: ನಮಸ್ಕಾರ ಕುಳಿತುಕೊಳ್ಳಿ (ಕುಳಿತುಕೊಳ್ಳುವರು).

ಎಲಿಯಟ್: ಚೆನ್ನಮ್ಮನವರೆ, ನಿನ್ನೆ ಥ್ಯಾಕರೆಯವರು ಇಲ್ಲಿಗೆ ಬಂದಿದ್ದಾರೆ. ನೀವು ಮತ್ತು ಗುರುಸಿದ್ಧಪ್ಪನವರು ದತ್ತಕಪ್ರಶ್ನೆ ಇತ್ಯರ್ಥಗೊಳಿಸಿಕೊಂಡು ಬರುವುದಕ್ಕಾಗಿ ಮುಂಬೈಗೆ ಹೋಗಲು, ಜೊತೆಗೆ ಲಕ್ಷಗಟ್ಟಲೆ ರೂಪಾಯಿ ಒಯ್ಯಲು ಒಪ್ಪಿಗೆ ಕೊಡಬೇಕೆಂದು ಥ್ಯಾಕರೆಯವರಿಗೆ ಬರೆದ ಪತ್ರವನ್ನು ಅವರು ಅಮಾನ್ಯ ಮಾಡಿದ್ದಾರೆ.

ಚೆನ್ನಮ್ಮ: ಇದನ್ನು ನಾನು ಸ್ಪಷ್ಟವಾಗಿ ತಿರಸ್ಕರಿಸುತ್ತೇನೆ. ನಿಮ್ಮ ಸಾಹೇಬರಿಗೆ ತಿಳಿಸಿರಿ, ಇನ್ನು ನೀವು ಇಲ್ಲಿಂದ ಹೋಗಬಹುದು(ಇಬ್ಬರೂ ಹೋಗುತ್ತಾರೆ).

ಗುರುಸಿದ್ಧಪ್ಪ: ಈಗ ನಾವು ವೈರಿಗಳನ್ನು ನೇರವಾಗಿ ಎದುರಿಸುವುದು ಅನಿವಾರ್ಯವಾಗಿದೆ. ಇದೀಗ ಕಲಾದಗಿಯಿಂದ ಬಂದ ಸೈನ್ಯ ಕೋಟೆಯ ಹೊರಗೆ ಬೀಡುಬಿಟ್ಟಿದೆ.

ಚೆನ್ನಮ್ಮ: ಹೌದು, ನಮ್ಮ ಕೇಂದ್ರೀಯ ಮತ್ತು ಗ್ರಾಮೀಣ ಸೈನಿಕರನ್ನು ಒಗ್ಗೂಡಿಸಲು ಆರಂಭ ಮಾಡಿರಿ. ಆಯುಧಗಳನ್ನು ಸಜ್ಜುಗೊಳಿಸಿರಿ.

ಗುರುಸಿದ್ಧಪ್ಪ: ಆಗಲಿ ತಾಯಿ (ಗುರುಸಿದ್ದಪ್ಪ, ವೀರಪ್ಪ ಹೋಗುವರು).

❖❖

XVII

(ಕಿತ್ತೂರು. ಥ್ಯಾಕರೆ ಬಿಡಾರ)

ಥ್ಯಾಕರೆ: ನಿನ್ನೆ ಚೆನ್ನಮ್ಮ ಅನಾರೋಗ್ಯದ ನೆವ ಹೇಳಿ, ಭೆಟಿಯಾಗಲು ನನಗೆ ಅವಕಾಶ ಕೊಡಲಿಲ್ಲ. ಇಂದು ಅಕ್ಟೋಬರ ೨೨ ಮತ್ತೆ ನಾನಾಗಿಯೇ ಭೆಟ್ಟಿಯಾಗ ಬಯಸಿ ಕೋಟೆಯ ಒಳಗೆ ಹೋದರೆ ಭೆಟ್ಟಿ ಮಾಡಿಸುವ ವಿಷಯದಲ್ಲಿ ನನಗೆ ಯಾರೂ ಸಹಕರಿಸಲಿಲ್ಲ. ಹೋಗಲಿ, ಯಾರೂ ಮಾತನಾಡಿಸಲಿಲ್ಲ.

ಎಲಿಯಟ್ : ಚೆನ್ನಮ್ಮ ತುಂಬ ಸ್ವಾಭಿಮಾನಿ, ಹೀಗಾಗಿ ಆಕೆ ಸಂದರ್ಶನ ನಿರಾಕರಿಸಿದಳೆಂದು ತೋರುತ್ತದೆ. ಅವಳ ವಿಷಯದಲ್ಲಿ ಸಂಸ್ಥಾನದ ಸರ್ವಪ್ರಜೆಗಳಿಗೆ ಅಪಾರ ಭಕ್ತಿ. ಕಾರಣ, ಪ್ರಜೆಗಳೂ ನಮ್ಮೊಂದಿಗೆ ಸಹಕರಿಸಲಿಲ್ಲ.

ಥ್ಯಾಕರೆ: ಈ ಅಸಹಕಾರವನ್ನು ನೋಡಿದರೆ ಈ ಸಂಸ್ಥಾನದ ಹಣೆಯಲ್ಲಿ ಈಗ ಯುದ್ಧವನ್ನೇ ಬರೆದಂತಿದೆ. ನನಗಂತೂ ಎರಡು ದಶಕಗಳಿಂದ ರಕ್ತ ನೋಡಿ ನೋಡಿ ಸಾಕಾಗಿದೆ. ಇದಕ್ಕೆ ಕೊನೆಯೇ ಇಲ್ಲವೇ?

ಸ್ಟೀವನ್‌ಸನ್: ಹಾಗೆಂದರೆ ಹೇಗೆ ಸರ್. ನಿಮ್ಮ ಹುದ್ದೆ ಆಗಾಗ ರಕ್ತವನ್ನು ಅಪೇಕ್ಷಿಸುವುದಾಗಿದೆ.

ಥ್ಯಾಕರೆ: ನನ್ನ ರಕ್ತವನ್ನು?

ಎಲಿಯಟ್ : ಹಾಗೆನ್ನಬೇಡಿ ಸರ್.

ಥ್ಯಾಕರೆ: ನನಗೆ ಯಾವುದೇ ಯುದ್ಧ ಬೇಡ, ಕಿತ್ತೂರಿನ ಯುದ್ಧವೂ ಬೇಡ. ಖಜಾನೆ ಕಾಯುವುದು ಮುಖ್ಯ. ಅರಮನೆಯ ಅಪಾರ ಸಂಪತ್ತು ಅನ್ಯರ ಪಾಲಾಗಬಾರದೆಂದೇ ಕಾವಲುಸೈನ್ಯವನ್ನು ಒಳಗೆ ಪಹರೆಗೆ ನಿಲ್ಲಿಸಿದ್ದು.

ಸ್ಟೀವನ್‌ಸನ್ : ಹೊರಗಿನ ನಮ್ಮ ಸೈನ್ಯ ನೋಡಿ, ನಾವು ಯುದ್ಧಕ್ಕೆ ಬಂದಿದ್ದೇವೆ ಎಂದು ಅವರು ಭಾವಿಸಿದ್ದಾರೆ.

ಥ್ಯಾಕರೆ: ಈ ತಪ್ಪು ಭಾವನೆ ನಿವಾರಿಸಲು ಚೆನ್ನಮ್ಮನವರ ಸಂದರ್ಶನ ಕೇಳಿದ್ದೆ.

ಎಲಿಯಟ್: ನಿಮಗೆ ಅಪಮಾನಕರ ರೀತಿಯಲ್ಲಿ ಎಲ್ಲರು ಇಂದೂ ನಡೆದುಕೊಂಡರು. ಮೇಲಾಗಿ ನಿನ್ನೆಯಿಂದ ಕೋಟೆಯೊಳಗೆ ನೂರು, ನೂರು ಸಂಖ್ಯೆಯಲ್ಲಿ ಗ್ರಾಮೀಣಸೈನ್ಯ ಬಂದು ಸೇರುತ್ತಲಿದೆ.

ಥ್ಯಾಕರೆ: ಗ್ರಾಮೀಣ ಸೈನಿಕರ ಹೆಸರಿನಲ್ಲಿ ಕುಖ್ಯಾತ ಕಳ್ಳರು–ದರೋಡೆಕೋರರು ಕೋಟೆಯೊಳಗೆ

ಸೇರಿಕೊಂಡಿದ್ದಾರೆಂಬ ವದಂತಿ ದಟ್ಟವಾಗಿದೆ. ಖಜಾನೆ ಇಂಥವರಿಂದ ಬರಿದಾಗಬಹುದು. ಇವರಾಗಲೀ, ಮುಂಬೈಗೆ ಹೊರಟು ನಿಂತ ಚೆನ್ನಮ್ಮ, ಗುರುಸಿದ್ಧಪ್ಪನವರಾಗಲೀ ಹಣದೊಂದಿಗೆ ಹೊರಗೆ ಹೋಗದಂತೆ ತಡೆಯಲು ಕೋಟೆಯ ಬಾಗಿಲುಗಳ ಮುಂದೆ ಕೆಲವು ಸೈನಿಕರನ್ನು, ಫಿರಂಗಿಗಳನ್ನು ನಿಲ್ಲಿಸುವುದು ಅವಶ್ಯವಿದೆ. ಯಾರಿಲ್ಲಿ?

ಸೇವಕ: ಅಪ್ಪಣೆ ಸರ್.

ಥ್ಯಾಕರೆ: ಕ್ಯಾಪ್ಟನ್ ಬ್ಲ್ಯಾಕನಿಗೆ ಬರಹೇಳು.

ಸೇವಕ: ಅಪ್ಪಣೆ, ಸರ್ (ಹೋಗುವನು)

ಸ್ಟೀವನ್‌ಸನ್: ಬಿಡಿಸಿದಷ್ಟು ತೊಡಕು ಹೆಚ್ಚುತ್ತಲಿದೆ.

ಥ್ಯಾಕರೆ: ಮಾತಿನ ಕಂದರ ದೊಡ್ಡದಾಗುತ್ತ ನಡೆದು ಪರಸ್ಪರ ವಿಶ್ವಾಸ ಹಾಳಾಗಿ ಬಿಟ್ಟಿದೆ. ಅತ್ತ ಗವರ್ನರ್‌ರಿಂದ ಉತ್ತರ ವಿಳಂಬವಾಗುತ್ತಿದೆ, ಇತ್ತ ಬರಗಾಲದಿಂದ ಬಚಾವ್ ಆಗಲು ಕಲಾದಗಿಯಿಂದ ಸೈನ್ಯ ಇಲ್ಲಿಗೆ ಬಂದಿದೆ. ಇದೆಲ್ಲ ಕಿತ್ತೂರಿನವರು ಅಪಾರ್ಥ ಮಾಡಿಕೊಳ್ಳಲು ಕಾರಣವಾಗಿದೆ.(ಬ್ಲ್ಯಾಕ್ ಬರುವನು).

ಬ್ಲ್ಯಾಕ್: ಗುಡ್‌ನೈಟ್ ಸರ್.

ಥ್ಯಾಕರೆ: ಗುಡ್‌ನೈಟ್, ಕಿತ್ತೂರಿನವರು ಒಳಗೆ ಸೈನ್ಯ ಜಮೇ ಮಾಡುತ್ತಲಿದ್ದಾರೆ. ನಾವೂ ಎಚ್ಚರದಿಂದಿರಬೇಕು. ಕೊನೆಯ ಪಕ್ಷ ಅವರನ್ನು ಅಂಜಿಸುವದಕ್ಕಾದರೂ ನಾವು ಕೋಟೆ ಬಾಗಿಲಮುಂದೆ ಎರಡು ಫಿರಂಗಿ ನಿಲ್ಲಿಸಬೇಕು. ಬೇಗ ನಿಲ್ಲಿಸಿರಿ.

ಬ್ಲ್ಯಾಕ್ : ಆಗಲಿ, ಸರ್ (ಹೋಗುವನು).

ಥ್ಯಾಕರೆ: ರಾತ್ರಿ ಬಹಳವಾಯಿತು ಹೊರಡಿರಿ(ಸ್ಟೀವನ್‌ಸನ್, ಎಲಿಯಟ್ ಹೊರಡುವರು).

❖❖

XVIII

(ಕೋಟೆ ಹತ್ತಿರ ಬ್ರಿಟಿಷ್ ಸೈನ್ಯ, ಬಾಗಿಲ ಮುಂದೆ ಎರಡು ಫಿರಂಗಿ ಸಿದ್ಧವಾಗಿ ನಿಂತಿವೆ. ಜೊತೆಗೆ ಬ್ಲ್ಯಾಕ್ ಇದ್ದಾನೆ, ಥ್ಯಾಕರೆ ಬರುತ್ತಿದ್ದಾನೆ).

ಬ್ಲ್ಯಾಕ್ : ಗುಡ್ ಮಾರ್ನಿಂಗ್ ಸರ್.

ಥ್ಯಾಕರೆ: ಗುಡ್ ಮಾರ್ನಿಂಗ್.

ಬ್ಲ್ಯಾಕ್ : ನಿನ್ನೆ ನೀವು ಆರ್ಡರ್ ಮಾಡಿದ ಮೇರೆಗೆ ಕೋಟೆ ಬಾಗಿಲಿಗೆ ಎರಡು ಫಿರಂಗಿ ನಿಲ್ಲಿಸಲಾಗಿದೆ. ಆದರೆ ಇಂದು ಈ ಬಾಗಿಲುಗಳಿಗೆ ಒಳಗಿನಿಂದ ಕೀಲಿ ಹಾಕಿದ್ದಾರೆ. ಖಜಾನೆ ಕಾಯಲು ಒಳಗಿರುವ ನಮ್ಮ ಕಾವಲುಗಾರರ ಸರದಿ ಬದಲಿಸಲು ಹೊಸ ತಂಡವನ್ನು ಒಳಗೆ ಕಳುಹಿಸಬೇಕಾಗಿದೆ. ಇದಕ್ಕೆ ಅನುವು ಮಾಡಿಕೊಡಲು ಎಷ್ಟು ವಿನಂತಿಸಿಕೊಂಡರೂ ಬಾಗಿಲು ತೆರೆಯುತ್ತಿಲ್ಲ.

ಥ್ಯಾಕರೆ: ಇದು ಅತಿಯಾಯಿತು. ಮೊನ್ನೆ, ನಿನ್ನೆ ನಾನು ಎರಡುಸಲ ಪ್ರಯತ್ನಿಸಿದರೂ ಚೆನ್ನಮ್ಮ ತನ್ನ ಭೆಟ್ಟಿ ನೀಡಲಿಲ್ಲ. ಇಂದು ಖಜಾನೆಯ ಸರದಿ ಬದಲಿಸಲು ಕಾವಲುಗಾರರಿಗೆ ಒಳಗೆ ಬಿಡುತ್ತಿಲ್ಲ. ಹಾಗಿದ್ದರೆ ಭಯ ಹುಟ್ಟಿಸುವ ಸಲುವಾಗಿ ಉಳಿದಿರುವ ಇನ್ನೆರಡು ಫಿರಂಗಿ ತಂದು ಬಾಗಿಲಿಗೆ ನಿಲ್ಲಿಸಿರಿ.

ಬ್ಲ್ಯಾಕ್ : ಆಗಲಿ, ಸರ್ (ಹೋಗುವನು).

ಥ್ಯಾಕರೆ: (ಸ್ವಗತ) ಜಗತ್ತನ್ನೇ ಆಳುವ ನಮ್ಮ ಶಕ್ತಿಯ ಮುಂದೆ ಕಿತ್ತೂರಿನವರ ಸ್ವಾಭಿಮಾನ ಪ್ರದರ್ಶನ ಅತಿಯಾಯಿತು. ಯುದ್ಧ ಗೆದೆಯಲು ಕೇವಲ ಸ್ವಾಭಿಮಾನ ಮಾತ್ರ ಸಾಲದು, ಸೈನ್ಯಬಲ, ಶಸ್ತ್ರಬಲವೂ ಬೇಕು. ಕಿತ್ತೂರಿನವರಲ್ಲಿ ಸೈನ್ಯವಿದೆ, ಶಿಸ್ತು ಇಲ್ಲ. ಶಸ್ತ್ರಗಳಿವೆ, ಆಧುನಿಕತೆ ಇಲ್ಲ. ಇವರಿಗೆ ತಮ್ಮ ಮಿತಿ, ನಮ್ಮ ಸಾಮರ್ಥ್ಯ ಅರ್ಥವಾಗುತ್ತಿಲ್ಲ.

ಬ್ಲ್ಯಾಕ್ : (ಥ್ಯಾಕರೆ ಹತ್ತಿರ ಬಂದು) ಸರ್ ಉಳಿದೆರಡು ಫಿರಂಗಿ ಬಾಗಿಲಿಗೆ ನಿಲ್ಲಿಸಿದ್ದೇನೆ. ಹಾರಿಸಲು ನಿಮ್ಮ ಆದೇಶದ ದಾರಿ ಕಾಯುತ್ತಿದ್ದೇನೆ, ಅಷ್ಟೇ. ಇದಕ್ಕೂ ಮೊದಲು ಒಂದು ವಿಚಾರ...........

ಥ್ಯಾಕರೆ: ಏನದು?

ಬ್ಲ್ಯಾಕ್ : ಕೋಟೆಯೊಳಗೆ ಕಿತ್ತೂರಿನ ಅಪಾರ ಸೈನ್ಯ ಯುದ್ಧಕ್ಕೆ ಸಜ್ಜಾಗುತ್ತಲಿದೆ. ಈಗ ನಾವು ಅರಮನೆಯವರಲ್ಲಿ ಬಿರುಕು ಹುಟ್ಟಿಸುವ, ಅಧಿಕಾರಿಗಳಲ್ಲಿ ಅಧೈರ್ಯ ಹುಟ್ಟಿಸುವ ಭೇದೋಪಾಯದ ಕೆಲಸ ಮಾಡಬೇಕು.

ಥ್ಯಾಕರೆ: ಏನದು?

ಬ್ಲ್ಯಾಕ್ : ಗುರುಸಿದ್ಧಪ್ಪನನ್ನು ದಿವಾನ ಹುದ್ದೆಯಿಂದ ಕಿತ್ತಿಹಾಕಿ, ಅಲ್ಲಿ ವೀರಮ್ಮನ ತಂದೆಯನ್ನು ನೇಮಿಸಬೇಕು. ಇದರಿಂದ ಚೆನ್ನಮ್ಮ-ವೀರಮ್ಮರ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಯಾಗುತ್ತದೆ. ಅಧಿಕಾರ ಕಳೆದುಕೊಂಡ ಗುರುಸಿದ್ಧಪ್ಪ ಅಧೀರನಾಗುತ್ತಾನೆ. ಮತ್ತು.......

ಥ್ಯಾಕರೆ: ಮತ್ತೇನು?

ಬ್ಲ್ಯಾಕ್ : ಇನ್ನೊಂದು ವಿಚಾರ. ವೀರಪ್ಪನನ್ನು ಪದಚ್ಯುತಗೊಳಿಸಿ ಅವನ ಹುದ್ದೆಯಲ್ಲಿ ಕುನ್ನೂರು ಮಲ್ಲಪ್ಪನನನ್ನು ನೇಮಿಸಿದರೆ ಇವರೆಲ್ಲ ಗಲಿಬಿಲಿಗೊಂಡು, ಕೋಟೆಬಾಗಿಲು ತೆರೆದು ಶರಣಾಗಬಹುದು.

ಥ್ಯಾಕರೆ: (ಒಂದು ಕ್ಷಣ ಯೋಚಿಸಿ) ಕೊನೆ ಗಳಿಗೆಯಲ್ಲಿ ವೈರಿಗಳ ಮನಸ್ಸಿನೊಳಗೆ ಗೊಂದಲ ಹುಟ್ಟಿಸುವ ಈ ವಿಚಾರ ತುಂಬ ಸಮಯೋಚಿತ. ಆದರೆ ವೀರಮ್ಮನ ತಂದೆ ಮತ್ತು ಮಲ್ಲಪ್ಪನವರಿಗೆ ಮೊದಲೇ ಒಂದು ಮಾತು ಕೇಳುವುದು ಯೋಗ್ಯವಲ್ಲವೇ?

ಬ್ಲ್ಯಾಕ್ : ಸಮಯದ ಒತ್ತಡ ಕಾರಣವಾಗಿ ಮೊದಲೇ ತಿಳಿಸುವುದು ಸಾಧ್ಯವಾಗಲಿಲ್ಲವೆಂದು ಅವರಿಗೆ ಆಮೇಲೆ ಸಮಜಾಯಿಸಿದರಾಯಿತು. ಈಗ ಬೀಸುವ ದೊಣ್ಣೆ ತಪ್ಪಿಸಿಕೊಳ್ಳುವುದೇ ಜಾಣತನವಲ್ಲವೇ?

ಥ್ಯಾಕರೆ: ಹೌದು, ಈ ಆದೇಶ ಒಳಗಿನವರಿಗೆ ಕೇಳಿಸುವ ಹಾಗೆ ಸಾರಿ ಹೇಳಿರಿ.

ಬ್ಲ್ಯಾಕ್ : ಕಿತ್ತೂರು ಸಂಸ್ಥಾನದ ದಿವಾನರಾಗಿರುವ ಗುರುಸಿದ್ಧಪ್ಪನವರನ್ನು ಪದಚ್ಯುತಗೊಳಿಸಿ ಅವರ ಹುದ್ದೆಗೆ ವೀರಮ್ಮನವರ ತಂದೆಯವರನ್ನು ಮತ್ತು ಅವರಾದಿ ವೀರಪ್ಪನವರನ್ನು ಪದಚ್ಯುತಗೊಳಿಸಿ ಅವರ ಹುದ್ದೆಗೆ ಕುನ್ನೂರು ಮಲ್ಲಪ್ಪನವರನ್ನು ಬ್ರಿಟಿಷ್ ಸರಕಾರ ನೇಮಿಸಿದೆ. ಈ ಆದೇಶ ತಕ್ಷಣ ಜಾರಿಗೆ ಬಂದಿದೆ(ಒಳಗಿನಿಂದ, ಇದನ್ನು ನಾವು ಮನ್ನಿಸುವುದಿಲ್ಲ. ಯುದ್ಧಕ್ಕೆ ಸಿದ್ಧರಾಗಿದ್ದೇವೆ. ಕೋಟೆ ಬಾಗಿಲು ತೆರೆಯುವುದಿಲ್ಲ. ಹರಹರ ಮಹಾದೇವ ಎಂಬ ಧ್ವನಿ ಮತ್ತೆ ಮತ್ತೆ ಕೇಳಿಸುತ್ತದೆ).

ಬ್ಲ್ಯಾಕ್ : ಸರ್, ಇದಕ್ಕೂ ಇವರು ಮಣಿಯುತ್ತಿಲ್ಲ. ಏನು ಮಾಡುವುದು?

ಥ್ಯಾಕರೆ: ಹಾಗಿದ್ದರೆ ೨೪ ನಿಮಿಷದೊಳಗಾಗಿ ಬಾಗಿಲು ತೆರೆದು ಶರಣಾಗದಿದ್ದರೆ ಫಿರಂಗಿ ಬಳಸಿ ಬಾಗಿಲು ಮುರಿಯಲಾಗುವುದಾಗಿ ಘೋಷಿಸಿರಿ.

ಬ್ಲ್ಯಾಕ್ : ಕೇಳಿರಿ, ಕೇಳಿರಿ, ಶರಣಾಗಲು ನಿಮಗೆ ೨೪ ನಿಮಿಷ ಅವಕಾಶ ನೀಡಲಾಗಿದೆ. ಅಷ್ಟರೊಳಗೆ ಕೋಟೆಯ ಬಾಗಿಲು ತೆರೆದು ಶರಣಾಗದಿದ್ದರೆ ಫಿರಂಗಿಯಿಂದ ಬಾಗಿಲು ಮುರಿಯಲಾಗುವುದು (ಬಾಗಿಲು ತೆರೆಯುವುದಿಲ್ಲ. ಶರಣಾಗುವುದಿಲ್ಲ. ಹರ ಹರ ಮಹಾದೇವ ಎಂಬ ಧ್ವನಿ ಒಳಗಿನಿಂದ ಕೇಳಿಸುತ್ತದೆ. ಬಾಗಿಲು ತೆರೆಯದಿದ್ದರೆ ಫಿರಂಗಿ ಹಾರಿಸಿ ಮುರಿಯುತ್ತೇವೆ ಎಂದು ಹೊರಗಿನಿಂದ ಬ್ಲ್ಯಾಕ್ ಮೊದಲಾದವರು ಸಾರುತ್ತಿದ್ದಾರೆ. ಹೀಗೆ ಎರಡೂ ಕಡೆ ಗದ್ದಲ ಕೇಳಿಸುತ್ತದೆ).

ಥ್ಯಾಕರೆ: ಈಗ ೨೦ ನಿಮಿಷ ಗತಿಸಿತು. ೨೧, ೨೨, ೨೩ (ಎನ್ನುವಷ್ಟರಲ್ಲಿ ಕಿತ್ತೂರು ಸೈನಿಕರು 'ಹರಹರ ಮಹಾದೇವ' ಎನ್ನುತ್ತ ಬಾಗಿಲು ತೆರೆದು ಒಳಗಿನಿಂದ ಹೊರಗೆ ನುಗ್ಗಿ, ಬ್ರಿಟಿಷ್ ಸೈನ್ಯದ ಮೇಲೆ ಅನಿರೀಕ್ಷಿತ ದಾಳಿ ಮಾಡುತ್ತಾರೆ. ಅಪಾರ ಸೈನ್ಯವನ್ನು ಎದುರಿಸಲಾರದೆ ಈ ಧಾಳಿಗೆ ಹೆದರಿ ಬ್ರಿಟಿಷ್ ಸೈನ್ಯ ಓಡಿಹೋಗುತ್ತದೆ).

ಥ್ಯಾಕರೆ: ಓಡಿ ಹೋಗಬೇಡಿರಿ, ಫಿರಂಗಿ ಹಾರಿಸಿರಿ, ಹಾರಿಸಿರಿ(ಎನ್ನುವಷ್ಟರಲ್ಲಿ, ಅಮಟೂರು ಬಾಳಪ್ಪನ ಗುಂಡು ತಗುಲಿ ಥ್ಯಾಕರೆ ನೆಲಕ್ಕೆ ಉರುಳುತ್ತಾನೆ. 'ಹರ ಹರ ಮಹಾದೇವ' ಎನ್ನುತ್ತ ಕಿತ್ತೂರು ಸೈನ್ಯ ಜಯಘೋಷ ಮಾಡುತ್ತದೆ).

ವೀರಪ್ಪ: (ಈ ಗುಂಪನ್ನು ಭೇದಿಸಿ 'ಹರ ಹರ ಮಹಾದೇವ' ಎನ್ನುತ್ತ, ತಾನೇ ಈ ಗೆಲುವಿನ ರೂವಾರಿ ಎಂದು ಬಿಂಬಿಸುವಂತೆ ವೀರಪ್ಪ ತನ್ನ ಬಂಟನೊಬ್ಬನ ಕೈ ಹಿಡಿದುಕೊಂಡು ಹೊರಗೆ ಧುಮುಕುತ್ತಾನೆ). ಥ್ಯಾಕರೆನನ್ನು ಮುಗಿಸಿದೆವು. ಫಿರಂಗಿ ವಶಪಡಿಸಿಕೊಳ್ಳಿರಿ, ಸೈನಿಕರನ್ನು ಸೆರೆ ಹಿಡಿಯಿರಿ, ಅಗೋ, ಓಡುತ್ತಲಿರುವ ಎಲಿಯಟ್, ಸ್ಟೀವನ್‌ಸನ್, ವೆಂಕಟರಾವರನ್ನು ಬಂಧಿಸಿರಿ. ನನ್ನ ಗ್ರಾಮೀಣ ಸೈನಿಕರೇ ನಡೆಯಿರಿ, ನಡೆಯಿರಿ ಹೊರಗಿನದ್ರೋಹಿ ಥ್ಯಾಕರೆನನ್ನು ಮುಗಿಸಿದೆವು. ಬ್ರಿಟಿಷರೊಂದಿಗೆ ಒಳಒಪ್ಪಂದ ಮಾಡಿಕೊಂಡಿದ್ದ ಒಳಗಿನದ್ರೋಹಿಯನ್ನು ಮುಗಿಸೋಣ ನಡೆಯಿರಿ, ನಡೆಯಿರಿ.

ಸೈನಿಕ: ಯಾರು ಈ ಹೊರಗಿನ ದ್ರೋಹಿ?

ವೀರಪ್ಪ: ಮೊದಲು ನನ್ನನ್ನು ಹಿಂಬಾಲಿಸಿರಿ, ಯಾರೆಂದು ಅಲ್ಲಿ ತಿಳಿಯುತ್ತದೆ (ವೀರಪ್ಪ ಓಡುತ್ತಾನೆ, ಸೈನ್ಯ ಬೆನ್ನ ಹಿಂದೆ ಓಡುತ್ತದೆ).

ಜನ : ಏನದು?

ಸೈನಿಕ : ಹೊರಗಿನ ದ್ರೋಹಿ ಥ್ಯಾಕರೆನನ್ನು ಕೊಂದಿದ್ದೇವೆ. ಈಗ ಒಳಗಿನ ದ್ರೋಹಿಯನ್ನು ಕೊಲ್ಲಲು ಧಾವಿಸುತ್ತಿದ್ದೇವೆ. ನೀವೂ ಬನ್ನಿರಿ.

ಜನ : ನಡೆಯಿರಿ, ನಡೆಯಿರಿ. ನಾವೂ ಬರುತ್ತೇವೆ(ಜೊತೆಗೂಡಿ ಓಡುವರು).

ವೀರಪ್ಪ : (ಸ್ವಗತ) ಯುದ್ಧವಿಜಯದ ಸೊಕ್ಕು ತಲೆಗೇರಿದ ಈ ಗ್ರಾಮೀಣ ಸೈನಿಕರನ್ನು ನಾನು ಬಳಸಿಕೊಂಡು ದಿವಾನ ಮಲ್ಲಪ್ಪನನ್ನು ಮುಗಿಸಬೇಕು. (ವ್ಯಕ್ತವಾಗಿ) ಧಾವಿಸಿರಿ, ಧಾವಿಸಿರಿ. ನನ್ನ ಹಿಂದೆ ಓಡಿ ಬನ್ನಿರಿ. (ಸೈನ್ಯ, ಜನ ಬೆನ್ನಹಿಂದೆ ಓಡುತ್ತದೆ).

ವೀರಪ್ಪ: (ರಂಗಭೂಮಿಯಲ್ಲಿ ಎರಡನೇ ಸುತ್ತು) ಜನ ಮರುಳೋ ಜಾತ್ರೆ ಮರುಳೋ....... ಹುಸಿನಗುತ್ತ) ಧಾವಿಸಿರಿ, ಧಾವಿಸಿರಿ, ನನ್‌ಹಿಂದೆ ಓಡಿ ಬನ್ನಿರಿ. (ಸೈನ್ಯ ಬೆನ್ನಹಿಂದೆ ಓಡುತ್ತದೆ. ಮಲ್ಲಪ್ಪನ ಮನೆ ಮುಂದೆ.)

ಮಲ್ಲಪ್ಪ: (ತನ್ನ ಮನೆಯ ಮುಂದಿನ ಗದ್ದಲ ಕೇಳಿ, ಹೊರಗೆ ಬಂದು) ಏನಿದು ಗದ್ದಲ? (ಎನ್ನುತ್ತ ಬಾಗಿಲ ಹೊರಗೆ ಬರುತ್ತಲೇ ವೀರಪ್ಪನ ಬಂಟನ ಇರಿತದಿಂದ ಸಾಯುತ್ತಾನೆ).

ವೀರಪ್ಪ: ಬ್ರಿಟಿಷ್‌ರೊಂದಿಗೆ ಒಳಒಪ್ಪಂದ ಮಾಡಿಕೊಂಡು, ಗ್ರಾಮೀಣ ಸೈನ್ಯದ ಅಧಿಕಾರಿಯಾಗಲು ಹೊಂಚು ಹಾಕಿದ್ದ ಈ ಒಳಗಿನದ್ರೋಹಿಗೆ ಧಿಕ್ಕಾರ, ಧಿಕ್ಕಾರ (ಎನ್ನುತ್ತ ಮರಳಿ ಓಡುತ್ತಾನೆ. ಸೈನ್ಯವು "ಒಳಗಿನದ್ರೋಹಿಗೆ ಧಿಕ್ಕಾರ, ಧಿಕ್ಕಾರ" ಎನ್ನುತ್ತ ಅವನ ಹಿಂದೆ ಓಡುತ್ತದೆ).

❖❖

XIX

(ಪುಣೆ. ಚಾಪ್ಲಿನ್‌ನ ವಿಶ್ರಾಂತಿ ಕೋಣೆ. ಒರಗಿಕೊಂಡು ಪತ್ರಿಕೆ ಓದುತ್ತಲಿದ್ದಾನೆ).

ಸೇವಕ : (ಒಳಗೆ ಬಂದು) ಸರ್, ಕಿತ್ತೂರಿನಿಂದ ದಿವಾನ ಮಲ್ಲಪ್ಪನವರ ಮಗ ವೀರಪ್ಪ ಬಂದಿದ್ದಾನೆ.

ಚಾಪ್ಲಿನ್ : ಒಳಗೆ ಬರಹೇಳು. (ಸೇವಕ ಹೋಗುತ್ತಾನೆ, ವೀರಪ್ಪ ಬರುತ್ತಾನೆ).

ವೀರಪ್ಪ: ನಮಸ್ಕಾರ ಸಾಹೇಬರೆ.

ಚಾಪ್ಲಿನ್ : ನಮಸ್ಕಾರ ಕುಳಿತುಕೊಳ್ಳಿ, ಏನು? ಪುಣೆಗೆ ಯಾವಾಗ ಬಂದಿರಿ?

ವೀರಪ್ಪ: ಇದೀಗ ಬಂದಿದ್ದೇನೆ ಸಾಹೇಬರೆ. ಬರುವುದನ್ನು ಮುಂಗಡ ತಿಳಿಸಲು ಸಾಧ್ಯವಾಗದ ಒತ್ತಡ. ನೇರವಾಗಿ ಬಂದೆ. ಮಹತ್ವದ ವಿಷಯವಿರುವ ಕಾರಣ ಮನೆಗೇ ಬಂದೆ. ಕ್ಷಮಿಸಿರಿ.

ಚಾಪ್ಲಿನ್ : ಕ್ಷಮೆ ಏಕೆ? ಮಲ್ಲಪ್ಪನವರ ಕುಟುಂಬದವರಿಗೆ ನನ್ನ ಮನೆಯ, ಏಕೆ ನನ್ನ ವಿಶ್ರಾಂತಿ ಕೋಣೆಯ ಬಾಗಿಲು ಸಹ ಸದಾ ತೆರೆದಿರುತ್ತದೆ. ನಿಮ್ಮ ತಂದೆ ಕ್ಷೇಮವೇ?

ವೀರಪ್ಪ: ಎಲ್ಲಿಯ ಕ್ಷೇಮ ಸಾಹೇಬರೇ, ನಿಮಗೆ ಗೊತ್ತೇ ಇದೆ. ಅವರಿಗೆ ತಮ್ಮ ಕ್ಷೇಮಕ್ಕಿಂತ ಸಂಸ್ಥಾನದ ಕ್ಷೇಮವೇ ಮುಖ್ಯ.

ಚಾಪ್ಲಿನ್ : ಹೌದು, ನಾವು ಮೊದಲಿನಿಂದಲೂ ನೋಡುತ್ತ ಬಂದಿದ್ದೇವೆ. ಕಿತ್ತೂರಿನ ಅಧಿಕಾರಿಗಳಲ್ಲಿ ಎಲ್ಲರದೂ ಒಂದು ರೀತಿಯಾದರೆ ನಿಮ್ಮ ತಂದೆಯವವದೇ ಒಂದು ರೀತಿ.

ವೀರಪ್ಪ: ಆ ಕಾರಣಕ್ಕಾಗಿಯೇ ಅವರು ಅನ್ಯಾಯಕ್ಕೆ ಗುರಿಯಾದರು.

ಚಾಪ್ಲಿನ್ : ಕೇಳಿದ್ದೇನೆ. ಸಂಸ್ಥಾನದ ಹಿತಕ್ಕಾಗಿ ಮಾಡಿದ್ದ ಒಂದು ಸಣ್ಣ ತಪ್ಪಿನಿಂದಾಗಿ ಅವರು ದೊಡ್ಡಹುದ್ದೆ ಕಳೆದುಕೊಂಡರು.

ವೀರಪ್ಪ: ಅವರಿಗೆ ಹುದ್ದೆ ಕಳೆದುಕೊಂಡುದಕ್ಕೆ ನೋವಿಲ್ಲ, ದತ್ತಕಮಗ ಪಟ್ಟಕ್ಕೆಬಂದು ಸಂಸ್ಥಾನ ಮೊದಲಿನಂತೆ ಮುಂದುವರಿಯಬೇಕೆಂಬ ಚಿಂತೆ ಅವರನ್ನು ಹಗಲಿರುಳು ಬಾಧಿಸುತ್ತಿದೆ. ಅದಕ್ಕಾಗಿ ತಮಗೆ ಈ ಪತ್ರ ಕಳುಹಿಸಿದ್ದಾರೆ (ಪತ್ರ ಕೈಗೆ ಕೊಡುವನು. ಚಾಪ್ಲಿನ ಓದುವನು).

ಮಾನ್ಯ ಶ್ರೀ ಚಾಪ್ಲಿನ್ ಸಾಹೇಬರಿಗೆ

ವಿಶ್ವಾಸಪೂರ್ವಕ ನಮಸ್ಕಾರಗಳು,

ಕಿತ್ತೂರು ಸಂಸ್ಥಾನದ ಬಗೆಗಿನ ಪ್ರೀತಿ ನನ್ನಿಂದ ಈ ಪತ್ರ ಬರೆಯಿಸುತ್ತಿದೆ. ಮಲ್ಲಸರ್ಜಪ್ರಭುಗಳು ಶಿವಲಿಂಗರುದ್ರಸರ್ಜರನ್ನು ನನ್ನಕೈಗೆ ಕೊಟ್ಟು ಕಣ್ಣು ಮುಚ್ಚಿದರು. ಶಿವಲಿಂಗರುದ್ರಸರ್ಜಪ್ರಭುಗಳು ನನ್ನಿಂದ ಕಿತ್ತೂರು ಸಂಸ್ಥಾನವನ್ನು ಮುಂದುವರೆಸುವ ವಚನ ತೆಗೆದುಕೊಂಡು ಕಣ್ಣು ಮುಚ್ಚಿದರು. ನಾನು ಕಣ್ಣುಮುಚ್ಚುವ ಮೊದಲು ಈ ವಚನ ಪೂರೈಸಬೇಕು.

ಶಿವಲಿಂಗರುದ್ರಸರ್ಜರ ಮರಣಾನಂತರ ತಿಳಿದೋ, ತಿಳಿಯದೆಯೋ ನನ್ನಿಂದ, ನಮ್ಮ ಸಂಸ್ಥಾನದಿಂದ ಕೆಲವು ತಪ್ಪುಗಳಾಗಿವೆ. ಅವೆಲ್ಲವನ್ನು ಕ್ಷಮಿಸಿ, ಸಂಸ್ಥಾನಕ್ಕೆ ಮೊದಲಿನ ಸ್ಥಾನ-ಮಾನ ನೀಡಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಸರಕಾರ-ಸಂಸ್ಥಾನಗಳಲ್ಲಿ ಮೊದಲಿನಂತೆ ಬಾಂಧವ್ಯ ಮುಂದುವರಿಯಲೆಂದು ಹಾರೈಸುತ್ತೇನೆ.

ಕಿತ್ತೂರು — ವಿಶ್ವಾಸದ

೧೫-೧೦-೧೮೨೪ — **ಕುನ್ನೂರು ಮಲ್ಲಪ್ಪ**

(ಓದಿ, ಕೈಮುಗಿದು ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತಾನೆ)

ವೀರಪ್ಪ: ಏಕೆ ಸಾಹೇಬರೆ ಮೌನವಾದಿರಿ?

ಚಾಪ್ಲಿನ್ : (ಕಣ್ಣು ತೆರೆದು) ೬ ವರ್ಷದ ಹಿಂದಿನ ಘಟನೆ. ಪೇಶ್ವೆಯವರೊಂದಿಗಿನ ಯುದ್ಧದಲ್ಲಿ ನಿಮ್ಮ ತಂದೆ ತನ್ನ ಪ್ರಾಣವನ್ನೂ ಲೆಕ್ಕಿಸದೆ, ನನ್ನನ್ನು ರಕ್ಷಿಸಿದರು. ಆಗ ನಾನು ಕೈಮುಗಿದು ಅವರಿಗೆ ಕೃತಜ್ಞತೆ ಹೇಳಿದುದು ನೆನಪಾಯಿತು. ದಿವಾನ ಹುದ್ದೆಯಿಂದ ವಜಾ ಮಾಡಿದರೂ, ಆ ಸಂಸ್ಥಾನಕ್ಕೆ ಮೊದಲಿನ ಸ್ಥಾನಮಾನ ಒದಗಿಸಿಕೊಡಲು "ಕೈಮುಗಿದು ಕೇಳಿಕೊಳ್ಳುತ್ತೇನೆ" ಎಂದು ಬರೆದುದು ನನ್ನನ್ನು ಭಾವಪರವಶನನ್ನಾಗಿಸಿತು. ಇರಲಿ, ಈ ಪತ್ರದ ವಿಷಯ ಚೆನ್ನಮ್ಮನವರಿಗೆ ಗೊತ್ತಿದೆಯೆ?

ವೀರಪ್ಪ: ಇಲ್ಲ ಸರ್, ನಮ್ಮ ತಂದೆ "ಆಡದೇ ಮಾಡುವನು ರೂಢಿಯೊಳಗುತ್ತಮನು" ಎಂಬ ಭಾವದವರು. ಹೀಗಾಗಿ ನನ್ನನ್ನು ರಹಸ್ಯವಾಗಿ ಇಲ್ಲಿಗೆ ಕಳುಹಿಸಿದ್ದಾರೆ. ನನ್ನ ತಂದೆ ಉಳಿದರೆ ತಮ್ಮ ಬೇಳೆ ಬೇಯದೆಂದು ಅವರಾದಿ ವೀರಪ್ಪನ ಗುಂಪು ಅವರನ್ನು ದ್ರೋಹಿ ಎಂದು ಪ್ರಚಾರಮಾಡಿ, ಕೊಲ್ಲುವ ಪ್ರಯತ್ನದಲ್ಲಿದೆ. ಹೀಗಾಗಿ ಸಾಯುವ ಮುನ್ನ ಶಿವಲಿಂಗ ರುದ್ರಸರ್ಜರಿಗೆ ತಾವು ಕೊಟ್ಟ ವಚನ ಪೂರೈಸಬೇಕೆಂದು ಈ ಪತ್ರ ಕಳಿಸಿದ್ದಾರೆ.

ಚಾಪ್ಲಿನ್ : ಈಗ ದತ್ತಕ ತೆಗೆದುಕೊಳ್ಳಲು ನಾನು ಒಪ್ಪಿಗೆ ನೀಡಬೇಕಷ್ಟೇ.

ವೀರಪ್ಪ: ಹೌದು ಸರ್.

ಚಾಪ್ಲಿನ್ : ಆಗಲಿ, ಮೊನ್ನೆ ಗವರ್ನರ್ ಈ ವಿಷಯವಾಗಿ ನನ್ನೊಡನೆ ಮಾತನಾಡಿ ಬರೆದಿರುವ ದತ್ತಕದ ಒಪ್ಪಿಗೆಪತ್ರ ಇದೀಗ ಬಂದಿದೆ. ಹಿಡಿಯಿರಿ (ಫೈಲ್ ತೆಗೆದು ಪತ್ರ ಕೊಡುತ್ತಾನೆ).

ವೀರಪ್ಪ: ಸರ್, ತಮಗೆ ಕೃತಜ್ಞನಾಗಿದ್ದೇನೆ. ನನ್ನ ತಂದೆಯ ಪರವಾಗಿಯೂ ಕೃತಜ್ಞನಾಗಿದ್ದೇನೆ (ಎನ್ನುತ್ತ ಕೈ ಮುಗಿದು, ಪತ್ರ ತೆಗೆದುಕೊಂಡು ಹೋಗುವನು. ಚಾಪ್ಲಿನ್ ಒರಗಿಕೊಂಡು ಪತ್ರಿಕೆ ಓದುತ್ತಾ ಮಲಗುವನು, ನಿದ್ದೆ ಹತ್ತುತ್ತದೆ).

ಅಧಿಕಾರಿ : (ಅವಸರದಿಂದ ಕೂಗುತ್ತ ಬರುತ್ತಾನೆ). ಸರ್, ಸರ್ ಕಿತ್ತೂರಿನಿಂದ ಇದೀಗ ಸುದ್ದಿ ಬಂದಿದೆ. ಕಿತ್ತೂರು ಯುದ್ಧದಲ್ಲಿ ಥ್ಯಾಕರೆ ವೈರಿಗಳ ಗುಂಡಿನೇಟಿಗೆ ಬಲಿಯಾದ, ದಿವಾನ ಮಲ್ಲಪ್ಪನವರನ್ನು ಅವರಾದಿ ವೀರಪ್ಪನ ಗ್ರಾಮೀಣ ಸೈನಿಕರು ಕೊಂದುಬಿಟ್ಟರು.

ಚಾಪ್ಲಿನ್ : ಅನ್ಯಾಯ, (ಸ್ವಗತ) ವೀರಪ್ಪನಿಗೆ ಕೊಟ್ಟ ಪತ್ರವನ್ನು ಈಗಿಂದೀಗ ಮರಳಿ ಪಡೆಯಬೇಕು. (ವ್ಯಕ್ತವಾಗಿ) ಮಧ್ಯಾಹ್ನ ಬಂದಿದ್ದ ವೀರಪ್ಪನಿಗೆ ಬರಹೇಳಿ (ಅಧಿಕಾರಿ ಹೋಗುವನು). ನಾವು ಯುದ್ಧವನ್ನೇ ಸಾರಿಲ್ಲ. ಹೀಗೇಕಾಯಿತು? ಇದರಲ್ಲಿ ತಪ್ಪು ಯಾರದು? ಥ್ಯಾಕರೆ ದುಡುಕಿದನೇ? ಕಿತ್ತೂರಿನವರು ದುಡುಕಿದರೇ? ಮಿಂಚಿದ ಮಾತಿಗೆ ಚಿಂತಿಸಿ ಫಲವಿಲ್ಲ. ಥ್ಯಾಕರೆನನ್ನುಕೊಂದ ಸೇಡನ್ನು ಯುದ್ಧದ ಮೂಲಕ ನಾವು ತೀರಿಸಿಕೊಳ್ಳಬೇಕು. ಎಲ್ಲ ಕೇಂದ್ರಗಳಿಂದ ಕಲೆಹಾಕಿದ ನಮ್ಮ ದೊಡ್ಡ ಸೈನ್ಯದ ಎದುರು ಕಿತ್ತೂರಿನ ಸಣ್ಣಸೈನ್ಯದ ಸೋಲು ಖಚಿತ. ಆಗಸಣ್ಣ ಕಿತ್ತೂರು ಸಂಸ್ಥಾನದ ಸ್ವಾಭಿಮಾನವನ್ನು ಗೌರವಿಸಿದ ದ್ಯೋತಕವೆಂಬಂತೆ ಸೋತ ಎಲ್ಲ ಅಧಿಕಾರಿಗಳನ್ನು ಔದಾರ್ಯದಿಂದ ನಡೆಸಿಕೊಳ್ಳಬೇಕು. ಆದರೆ ಪಿತೂರಿಗಾರ ಅವರಾಧಿ ವೀರಪ್ಪನನ್ನು ಅಜೀವ ಗಡಿಪಾರು ಮಾಡಬೇಕು.......(ಎನ್ನುವಷ್ಟರಲ್ಲಿ ಕುನ್ನೂರ ವೀರಪ್ಪ ಬರುವನು).

ವೀರಪ್ಪ : ಏನು ಸಾಹೇಬರೆ, ಮತ್ತೆ ಕರೆಕಳುಹಿದಿರಿ.

ಚಾಪ್ಲಿನ್ : ನಾನು ಕೊಟ್ಟ ಪತ್ರಕ್ಕೆ ಒಂದು ಸಾಲು ಸೇರಿಸಬೇಕಿದೆ. ಎಲ್ಲಿ? ಕೊಡಿ.

ವೀರಪ್ಪ : (ಸ್ವಗತ) ಈ ಪತ್ರ ಸಾಹೇಬರ ಕೈಗೆ ಹೋದರೆ ಬಹುಶಃ ನನ್ನ ಕೈಗೆ ತಿರುಗಿ ಬರಲಿಕ್ಕಿಲ್ಲ (ವ್ಯಕ್ತವಾಗಿ)ಸಾಹೇಬರೆ, ಮಧ್ಯಾಹ್ನವೇ ಅದನ್ನು ಸವಾರನ ಮೂಲಕ ಕಿತ್ತೂರಿಗೆ ಕಳುಹಿಸಿದೆ.

ಚಾಪ್ಲಿನ್ : ಅವಸರ ಮಾಡಿದಿರಿ. ಕಿತ್ತೂರಿನಲ್ಲಿ ಅನಿರೀಕ್ಷಿತ ಬಂಡಾಯ ಎದ್ದು, ಥ್ಯಾಕರೆ ಗುಂಡಿಗೆ ಬಲಿಯಾಗಿದ್ದಾನೆ, ನಿಮ್ಮ ತಂದೆಯ ಕೊಲೆಯಾಗಿದೆ.

ವೀರಪ್ಪ: ಬೆಚ್ಚಿಬಿದ್ದು (ಸ್ವಗತ) ಸಂಸ್ಥಾನಕ್ಕೆ ಉಪಕಾರ ಮಾಡಬಯಸಿದ ನನ್ನ ತಂದೆಯ ಪ್ರಯತ್ನವೇನು? ಅದಕ್ಕೆ ಸಿಕ್ಕ ಪ್ರತಿಫಲವೇನು? ಅವನನ್ನು ಕೊಂದಬಳಿಕ ಈ ಪತ್ರವಾದರೂ ಏಕೆಬೇಕು (ಮೌನ).

ಚಾಪ್ಲಿನ್ : ಏಕೆ ಮೌನವಾದಿರಿ?

ವೀರಪ್ಪ: ಸಾಹೇಬರೆ, "ನಿನ್ನನ್ನು ಕ್ಷಮಿಸಿದ್ದೇನೆ" ಎಂದು ನೀವು ನುಡಿದರೆ ಮಾತ್ರ ನಾನು ಮಾತು ಮುಂದುವರಿಸುತ್ತೇನೆ (ಕೈಮುಗಿದು ನಿಲ್ಲುವನು).

ಚಾಪ್ಲಿನ್ : ನಿನ್ನನ್ನು ಕ್ಷಮಿಸಿದ್ದೇನೆ.

ವೀರಪ್ಪ : ತೆಗೆದುಕೊಳ್ಳಿ. ನಿಮ್ಮಪತ್ರ (ಎಂದು ಕಿಸೆಯಿಂದ ತೆಗೆದು ಅದನ್ನು ಚಾಪ್ಲಿನ್ ಮುಂದೆ ಇಟ್ಟು, ದುಃಖಿಸುತ್ತ ಹೋಗುತ್ತಾನೆ. ಚಾಪ್ಲಿನ್ ಹರಿದು ಹಾಕುತ್ತಾನೆ. ರಂಗಭೂಮಿಯಲ್ಲಿ ಕತ್ತಲು ಆವರಿಸುತ್ತದೆ).

❖❖

ಅನುಬಂಧ

ಲಾವಣಿಗಳು

೧. ಕಾದಂಬರಿ ಖಡ್ಗದ ಚರಿತೆ

ಕೇಳಿರಿ ಕೇಳಿರಿ ಕಟ್ಟೀಮನಿ ಕಥೆ
ಕಾದಂಬರಿ ಖಡ್ಗದ ಚರಿತೆ।
ಕೇಳಿರಿ ಕುಂದರನಾಡ ಮಣ್ಣಮಗ
ಹೊತ್ತು ನಡೆದ ಸಾಹಿತ್ಯ ನೊಗ ॥೧॥

ಕನ್ನಡ ನಾಡಿನ ಹಳ್ಳಿ ಪಟ್ಟಣದಿ
ಹಳ್ಳಿ ಚೆಲುವು ಮಲ್ಲಾಮರಡಿ।
ಊರ ನಟ್ಟುನಡು ಇರುವ ಕಟ್ಟೀಮನಿ
ಕುಟುಂಬ ಬಾಳಿತು ಬಡತನದಿ ॥೨॥

ಅಪ್ಪಣ್ಣ ತಂದೆ ಪೋಲೀಸ
ಬಾಳವ್ವ ತಾಯಿ ಬಲು ಬಿರಸ।
ಹತ್ತೊಂಬತ್ತು ನೂರಾ ಹತ್ತೊಂಬತ್ತರಲಿ
ಬಸವ ಜನಿಸೆ ಸುತ್ತಲು ಹರುಷ ॥೩॥

ಊಟಕ್ಕೆ ನುಚ್ಚು ಮಜ್ಜೀಗಿ
ಮಲಗಲಿಕೆ ತಟ್ಟು ಹಾಸೀಗಿ।
ಸ್ವಾಭಿಮಾನಿ ಮಗ ಬೆಳೆದ ಸಾಲೆಯಲಿ
ಬಸವರಾಜ ಹೊಸ ಹೆಸರಿನಲಿ ॥೪॥

ಕೈಯ್ಯಲ್ಲಿ ಕಾಸು ಇರಲಿಲ್ಲ
ಕಲಿಯುವುದ ಬಿಟ್ಟ ಬಾಲ್ಯದಲಿ।
ಸುದ್ದಿ ಪತ್ರಿಕೆಯ ಮುದ್ರಣಾಲಯದಿ
ಕಸವ ಹೊಡೆದ ಆರಂಭದಲಿ ॥೫॥

ಬೆಳಗಾವಿ, ಶಾರ ಹುಬ್ಬಳ್ಳಿ
ಗದುಗಿನಲಿ ಬೆಂಗಳೂರಿನಲಿ।
ದಾವಣಗೇರಿಯೊ ಧಾರವಾಡವೋ
ತಿರುಗಿದ ಅವ ಉಪವಾಸದಲಿ ॥೬॥

ಧೈರ್ಯವೆಂಬುದು ದೈವದ ಗಂಡ
ನಂಬಿಯೆ ನಡೆದನು ಭೇರುಂಡ।
ಹೆಜ್ಜೆ ಇಟ್ಟಲ್ಲಿ ಹೆಜ್ಜೆ ಮೂಡಿಸಿದ
ಪತ್ರಿಕೆ ಸಂಪಾದನೆಯಿಂದ ॥೭॥

ಸುದ್ದಿ ಪತ್ರಿಕೆಗೆ ದುಡಿದs
ಸಾಹಿತ್ಯ ಪತ್ರಿಕೆಗೆ ಮಿಡಿದ।
ಸಣ್ಣ ಕಥೆಯ ಬರೆಯುತ್ತ ಬರೆಯುತ್ತ
ಗಾಂಧಿ ಚಳುವಳಿಗು ಅವ ನಡೆದ ॥೮॥

ಹತ್ತೊಂಬತ್ತ ನೂರ ನಾಲ್ವತ್ತೆರಡರ
ಚಳುವಳಿ ಕರೆಯಿತು ಅವನನ್ನು।
ಜೇಲುವಾಸ ಅನುಭವಿಸಿ ಗಳಿಸಿದನು
ಹೊಸ ಹೊಸ ಅನುಭವ ರಾಶಿಯನು ॥೯॥

ಊರೂರು ಅಲೆದು ಸಾಕಾಯ್ತು
ಹುಟ್ಟೂರು ಕೂಗಿ ಕರೆಯಿತ್ತು।
ಹಳೆಯ ಮನೆಯೊಳಗೆ ಹೊಸ ಸಾಹಿತ್ಯದ
ಕಾದಂಬರಿ ಕಥೆ ತೆರೆಯಿತ್ತು ॥೧೦॥

ಆದರ್ಶ ಸಾಕು ಕೈಬಿಡಿರಿ
ವಾಸ್ತವದ ಬದುಕು ಚಿತ್ರಿಸಿರಿ।

ಪ್ರಗತಿಶೀಲ ಸಾಹಿತ್ಯ ಮುನ್ನಡೆಗೆ
ಬನ್ನಿರಿಯೆಂದನು ತನ್ನೆಡೆಗೆ ॥೧೧॥

ಪುರುಷರು ಸ್ತ್ರೀಯರ ಪ್ರಭುಗಳು ಪ್ರಜೆಗಳ
ಧನಿಕರು ದೀನರ ಸುಲಿವುದನು
ಬರೆದನು ಸ್ವಾಮಿಯು ಭಕ್ತರ ನಂಬಿಸಿ
ರಕ್ತಹೀರುತಿಹ ಬಗೆಯನ್ನು ॥೧೨॥

ಖಡ್ಗವ ಝಳಪಿಸಿದಂತೆ ಲೆಕ್ಕಣಿಕೆ
ಝಳಪಿಸಿದನು ಈ ಕಟ್ಟೀಮನಿ।
ಕಟ್ಟಿಮನಿಯ ಲೆಕ್ಕಣಕೆ ಕತ್ತಿಮೊನೆ
ಎಂದು ಹೊಗಳೆ ಕರುನಾಡ ಜನ ॥೧೩॥

ರಶಿಯದೇಶದ ನೆಹರು ಪ್ರಶಸ್ತಿಯು
ಸಂದಿತು ಜ್ವಾಲಾಮುಖಿ ಕೃತಿಗೆ।
ಬಂದಿತು ಕನ್ನಡ ಸಮ್ಮೇಳನದ
ಅಧ್ಯಕ್ಷತೆಯೂ ಜತೆ ಜತೆಗೆ ॥೧೪॥

ಬದುಕು ಬೇರೆ ಬರವಣಿಗೆಯು ಬೇರೆ
ಎಂಬ ವಾದವನು ಒಪ್ಪನಿವ।
ಬದುಕಿದಂತೆ ಬರವಣಿಗೆಯ ಮಾಡಿದ
ಬಸವರಾಜ ಬಹದ್ದೂರನಿವ ॥೧೫॥

❖❖

೨. ಬಸವರಾಜ ಕಟ್ಟೀಮನಿ ಸ್ವಾತಂತ್ರ್ಯ ಚಳುವಳಿ

ಬಸವರಾಜ ಕಟ್ಟೀಮನಿ ಚಳುವಳಿ ಕೇಳ್ರಿ ಕುಂತ ಜನರಾ
ಭಾರತ ಸ್ವಾತಂತ್ರ ಸಮರದಿ ಧುಮುಕಿದ ಹೊಟ್ಟಿಗಿಲ್ಲ ಖಬರಾ ॥೧॥

ಮಲ್ಲಮರಡಿಯಲಿ ಹುಟ್ಟಿ ಬಡತನದಿ ಹಗಲು ರಾತ್ರಿ ಕುದಿದ
ಕೂಲಿ–ನೌಕರಿ ಹುಡುಕುವೆನೆಂದು ಊರು ಬಿಟ್ಟು ನಡೆದ ॥೨॥

'ನಿನಗ ಉಣಿಸಿ ನಾ ಊಟ ಮಾಡತಿನಿ ಹೊಗ ಬ್ಯಾಡ ಬಸವ'
ತಾಯಿ ಹಲುಬಿದರು ಸ್ವಾಭಿಮಾನಿ ಮಗ ಕೇಳಲಿಲ್ಲ ತುಸುವ ॥೩॥

'ನಾನು ಯಾರಿಗೂ ಭಾರವಾಗೆನು' ಎಂದು ಬಸವ ನುಡಿದ
ತಾಯಿ ಪಾದಕ ಶರಣು ಮಾಡಿ ರಾತ್ರಿಯಲಿ ಹೊರಗ ನಡೆದ ॥೪॥
ಹಸಿದು ಹಸಿದು ಹತ್ತೂರ ಅಲೆದ ಹದಿನಾಲ್ಕರ ಹಸುಗೂಸ
ಕೂಲಿ-ನೌಕರಿ ಮಾಡಿ ಪಡೆದನೊ ಪಗಾರ ಪುಡಿಕಾಸ ॥೫॥

ಬೆಳಗಾವಿ ಹುಬ್ಬಳ್ಳಿ ಗದುಗಿನ ಪತ್ರಿಕೆಯಲಿ ದುಡಿದ
ಸಹಸಂಪಾದಕನಾಗಿ ಪತ್ರಿಕೆಗೆ ಬಿಸಿ ಸುದ್ದಿಯ ಜಡಿದ ॥೬॥

ಧಾರವಾಡದ 'ಸಮಾಜ' ಹೆಸರಿನ ಪತ್ರಿಕೆಗೆs ಬಂದ
ವರ್ಷ ಇಪ್ಪತ್ತು ಮೂರರ ಹುಡುಗ 'ಜೈ ಭಾರತಿ' ಎಂದ ॥೭॥

ಹತ್ತೊಂಬತ್ತು ನೂರಾ ನಾಲ್ವತ್ತೆರಡರಲಿ ಕಾಂಗ್ರೆಸ್ ಸೇರಿತ್ತು
'ಚಲೇಜಾವು' ಗಾಂಧಿಜೀ ಘೋಷಣೆ ದೇಶ ವ್ಯಾಪಿಸಿತ್ತು ॥೮॥

ಧಾರವಾಡದಲಿ ಸೇರಿತು ಸಭೆ ಗಾಂಧಿಜೀಗೆ ಜೈಕಾರ
ಹೆಣ್ಣು-ಗಂಡು ಸಾರಿತ್ತು ಆಂಗ್ಲ ಸರಕಾರಕೆ ಧಿಕ್ಕಾರ ॥೯॥

ಸತ್ಯಾಗ್ರಹಿಗಳ ಭಾಷಣ ಕೇಳಿ ಬಸವರಾಜ ಉರಿದ
ಬಾಣದಂತೆ ವೇದಿಕೆಗೆ ಬಂದ, ಲಾಠಿ ಏಟು ತಿಂದ ॥೧೦॥

ಎಳೆದು ಒಯ್ದರೊ ಎಳೆಯ ಹುಡುಗನ ಪೋಲಿಸ್ ಸ್ಟೇಷನ್‌ಗೆ
ಒಂದು ರಾತ್ರಿ ಕುಳ್ಳಿರಿಸಿ ಕತ್ತಲಲಿ ದಬ್ಬಿದರೊ ಹೊರಗೆ ॥೧೧॥

ಹುಚ್ಚು ಹಿಡಿದ ಹುಲಿಯಂತೆ ಗರ್ಜಿಸುತ ರಾತ್ರಿಯಲಿ ಎದ್ದ
ಸಿದ್ಧಪಡಿಸಿ 'ರಣಭೇರಿ' ಪತ್ರಿಕೆಯ ಗೋಡೆಗಂಟಿಸಿದ್ದ ॥೧೨॥

'ಮಾಡು ಇಲ್ಲವೆ ಮಡಿ' ಎನ್ನುತ ಚಳುವಳಿ ನಡೆಸಿದರು
ಧಾರವಾಡದ ಶಾಲೆ ಕಚೇರಿಯ ಬಂದ ಮಾಡಿಸಿದರು ॥೧೩॥

ಅಗಷ್ಟ ತಿಂಗಳ ಹತ್ತೊಂಬತ್ತರ ಸಭೆಯಲಿ ಕಟ್ಟಿಮನಿ
ಖಂಡಿಸಿ ಆಂಗ್ಲರ ಮಾಡಿದ ಭಾಷಣ, ಸೇರಿದ ಸೆರೆಮನಿ ॥೧೪॥

ಉಡದಾರ ಹರಿದು ತೊಡಿಸಿ ಬಿಟ್ಟರು ಕೈದಿಗಳಾ ವೇಷ
ಹಿಂಡಲಗಾ ಜೈಲಿನಲಿ ಕಳೆದನು ಕಡು ಕಷ್ಟದ ದಿವಸ ॥೧೫॥

ಒಂದನೂರ ನಾಲ್ವತ್ತು ಒಂದನೆಯ ನಂಬರಿನ ಕೈದಿ
ಹಿಂಡಲಾಗಾದಿಂ ಕೋಟಿ ಜೈಲಿಗೆ ಒಯ್ದರು ಕೆಲದಿನದಿ ॥೧೬॥

ಓದಿದ ಪುಸ್ತಕ, ಬರೆದ ಕಥೆಗಳ ಕೋಟೆ ಜೈಲಿನಲ್ಲಿ
ಆರುತಿಂಗಳ ಕಳೆದ, ಭಾರತ ಬಿಡುಗಡೆ ಚಿಂತೆಯಲಿ ॥೧೭॥

ಹತ್ತೊಂಬತ್ತು ನೂರ ನಾಲ್ವತ್ಮೂರು ಜನೆವಾರಿ ಇಪ್ಪತ್ತೇಳು
ಜೈಲಿನಿಂದ ಹೊರಬಂದರು ಬಸವಗ ಇಲ್ಲ ತುತ್ತು ಕೂಳು ॥೧೮॥

ಲಲಿತ ಸಾಹಿತ್ಯ ಸಲ್ಲಾಪದಲಿರೆ ಸಾಹಿತಿ ಜನರೆಲ್ಲ
ಚಳುವಳಿ ಕುರಿತೇ ಬರೆದ ಬಸವನಾಂಗ್ಲರಿಗೆ ಅಂಜಲಿಲ್ಲ ॥೧೯॥

ಎಲ್ಲರಂತೆ ಮನೆಯಲ್ಲಿಯೆ ಕುಳಿತು ಬರೆಯಲಿಲ್ಲ ಬಸವ
ಮನೆಯೊಳಗೂ ಸೆರೆಮನೆಯೊಳಗೂ ಬದುಕನ್ನೆ ಬರೆದ ಬಸವ ॥೨೦॥

❖❖

೩. ರೈತ ಚಳುವಳಿ

ಭಾರತದೇಶಕೆ ರೈತ ಬೆನ್ನಲುಬು
ಅವನ ಹಿತವೆ ದೇಶದ ಹಿತವು।
ಬಸವರಾಜ ಈ ಸತ್ಯವ ಕಂಡನು
ರೈತರ ಪ್ರಗತಿಗೆ ಶ್ರಮಿಸಿದನು ॥೧॥

ಮಲ್ಲ ಮರಡಿಯ ಮಣ್ಣಿನ ಮಗನು
ಬಸವರಾಜ ರೈತರ ಕರುಳು।

ಅವರ ಕಷ್ಟ ಪರಿಹರಿಸಲು ಇವನು
ಚಿಂತಿಸುತ್ತಿದ್ದನು ಹಗಲಿರುಳು ॥೨॥

ಕಾಂಗ್ರಸ್ ಆಳಿಕೆ ಶೋಷಣೆ ನಡೆಸಿತು
ಜನ ಬೇಸತ್ತಿತು ದಿನದಿನವು।
ಹಕ್ಕು ಕೇಳಲು ಹಳ್ಳಿ ಜನರನು
ಬಸವರಾಜ ಎಚ್ಚರಿಸಿದನು ॥೩॥

ನೆರೆಯ ಹಳ್ಳಿ ಗುಜನಾಳ ಗ್ರಾಮದ
ನಾವಲಗಟ್ಟಿಯ ಅಡಿವೆಪ್ಪ।
ಇಬ್ಬರು ಸೇರಿ "ರೈತ ಕೂಲಿಜನ
ಪಕ್ಷ" ಕಟ್ಟಲು ಬಯಸಿದರು ॥೪॥

ನಾಗಲ್ಲಗಟ್ಟಿ ಅಡಿವೆಪ್ಪನ ಮನೆಯಲಿ
ರಾಯನಗೌಡ ಚಿನ್ಮಯಿಸ್ವಾಮಿ।
ಮಾದೇವಪ್ಪ ಪಟ್ಟಣದ ಗಟ್ಟಿಗರು
ಕಟ್ಟಲು ಪಕ್ಷವ ಒಪ್ಪಿದರು ॥೫॥

ಹೂಲಿಯ ಕಾಂಗ್ರೆಸ್ ಪಕ್ಷ ಎದುರಿಸುವ
ವಾಲಿಲ ಪಕ್ಷ ಬೆಂಬಲಿಸಿದರು।
ಕೆ.ಎಸ್. ಪಾಟೀಲ್ ಅಂಗಡಿ ಎಸ್.ಎನ್.
ಮುಖ್ಯರ ಹುರಿದುಂಬಿಸಿದರು ॥೬॥

ಬೈಲಹೊಂಗಲದಿ ಸೇರಿ ಧುರೀಣರು
ಕಾಂಗ್ರೆಸ್‌ನ್ನು ತ್ಯಜಿಸಿದರು।
ಕಟ್ಟಿದ ರೈತರ ಪಕ್ಷಕೆ ಪಟ್ಟವ
ಅಂಗಡಿಯವರಿಗೆ ಕಟ್ಟಿದರು ॥೭॥


ದಿನಗಳೆದಂತೆ ರೈತರಲ್ಲದವ
ರೆಲ್ಲ ಸೇರಿದರು ಪಕ್ಷದಲಿ।
ನಾವಲಗಟ್ಟಿ ಕಟ್ಟಿಮನಿ ಕನಸು
ಭಗ್ನವಾಯ್ತು ಕೆಲಸ ತಿಂಗಳಲಿ ॥೮॥

ಹತ್ತೊಂಬತ್ತನೂರ ಅಯಿವತ್ತರಿಂದಲು
ರೈತ ಸಂಘಟನೆಗೆ ಜಿಲ್ಲೆಯಲಿ।
ಶ್ರಮಿಸುತಲಿದ್ದ ಕಟ್ಟೀಮನಿ ಇವ
ರೈತ ಪರಿಷತ್ ಸಭೆ ಯೋಜಿಸಿದ ॥೯॥

ಬಸಪ್ಪಣ್ಣ ಅರಗಾವಿ ಸಹಾಯದಿ
ಸಂಘಟಿಸಿದ ಸುಲಧಾಳದಲಿ।
ದೇವರಾಜ ಶ್ರೀ ನಿಜಲಿಂಗಪ್ಪ
ಆಗಮಿಸಿದ್ದರು ಹರ್ಷದಲಿ ॥೧೦॥

ಹತ್ತೊಂಬತ್ತ ನೂರಾ ಐವತ್ತೊಂಬತ್ತರ
ಈ ಪರಿಷತ್ತಿಗೆ ಕಟ್ಟೀಮನಿ।
ದುಡಿದ ಸ್ವಾಗತಾಧ್ಯಕ್ಷನೆ ಆಗಿ
ತೊಡೆದ ರೈತ ಕಣ್ಣೀರನ್ನು ॥೧೧॥

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359